# ಗುಬ್ಬಿವೀರಣ್ಣ ಪ್ರಶಸ್ತಿ

## ವಿಜೇತ



## ಎಲ್.ಬಿ.ಕೆ.ಅಲ್ದಾಳ

# ಹೃದಯತುಂಬಿ ಸಮರ್ಪಣೆ




"ಸಂಪತ್ತು ಅಸ್ಥಿರ, ಅದು ಯಾವಾಗಬೇಕಾದರೂ ಕೈಬಿಟ್ಟು ಹೋಗಬಹುದು,

ವಿದ್ಯೆ, ಶಿಕ್ಷಣ ಉಸಿರಿರುವ ತನಕ ನಿನ್ನೊಂದಿಗೆ ಸ್ಥಿರವಾಗಿ ಇರುತ್ತೆ"

ಎಂದು ಅಮೃತದಂತಹ ಹಿತ ವಚನ ನೀಡಿ

ಉನ್ನತ ಶಿಕ್ಷಣಕ್ಕೆ ಪ್ರೇರೇಪಿಸಿದ ನನ್ನ ಕರುಣಾಮಯಿ

ಅತ್ತೆ ದಿಂ.ಶ್ರೀಮತಿ ಸೌ॥ ಶಾರದಾದೇವಿ, ವೀರಭದ್ರಪ್ಪ ಜಮದರಖಾನಿ

ಇವರಿಗೆ ಈ ಮಹಾ ಪ್ರಬಂಧ ಹೃದಯ ತುಂಬಿ ಸಮರ್ಪಿಸುತ್ತೇನೆ.



ಸದಾ ಅಂತರಾಳದಲ್ಲಿ ನೆನಪಿಸುವಸಿ ನಿಮ್ಮ

ಶ್ರೀಮತಿ ಕರುಣಾ ತಂದೆ ಕಾಶಿನಾಥ ಕೇರಿ ಹಾಗೂ
ನನ್ನ ಪೂಜ್ಯಪತಿ ಶ್ರೀ ಅರವಿಂದ ಕುಮಾರ
ಜಮಧರಖಾನಿ

# "ಎಲ್.ಬಿ.ಕೆ. ಆಲ್ದಾಳರ ಬದುಕು – ಬರಹ"

(ಪಿ.ಎಚ್‌ಡಿ. ಪದವಿಗಾಗಿ ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಲಿರುವ ಸಂಶೋಧನಾಧ್ಯಯನದ ಮಹಾಪ್ರಬಂಧ)


ಸಂಶೋಧಕಿ

**ಶ್ರೀಮತಿ ಕರುಣಾ ಕಾಶಿನಾಥ**

ಮಾರ್ಗದರ್ಶಕರು

**ಡಾ.ನೀಲಾಂಬಿಕಾ ಪೋಲಿಸ ಪಾಟೀಲ**

ಎಂ.ಎ.,ಪಿಎಚ್.ಡಿ

ಸಹಪ್ರಾಧ್ಯಾಪಕರು, ಕನ್ನಡ ವಿಭಾಗ

ಶರಣಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯ

ಕಲಬುರಗಿ



**ಕನ್ನಡ ಅಧ್ಯಯನ ಸಂಸ್ಥೆ**

**ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ**

**2015–2016**

# ಕೃತಜ್ಞತಾಂಜಲಿ

**ವ್ಯಾಸಂಗವೊಂದು ಜ್ಞಾನಾರ್ಜನೆಗೆ**
**ದಾರಿದೀಪ ನೋಡಾ।**
**ಸಂಭಾಷಣೆಯೊಂದು ಬುದ್ಧಿವಿಕಾಸಕ್ಕೆ**
**ಮಾರ್ಗದರ್ಶಿ ನೋಡಾ।**
**ಲೇಖನವೊಂದು ವಿಶ್ವ ವಿಸ್ತಾರಕ್ಕೆ**
**ಪರಾಕಶಕ್ತಿ ನೋಡಾ।**
**ಪುಸ್ತಕವೊಂದು ಬದುಕಿನ ಬಂಡಿಗೆ**
**ಜೀವನ ಸಂಗಾತಿ ನೋಡಾ।**
**ತಪೋವನ ಮಠಾಧೀಶ (ಆಲ್ದಾಳ)**

"ನಾಟಕ"ಯಾವಾಗ ಪ್ರಾರಂಭವಾಯಿತು? ಅದರ ಕಥಾವಸ್ತುವೇನು? ಅದರ ಗುಣಲಕ್ಷಣಗಳೇನು? ಎಂಬುದು ಈಗ ಅಪ್ರಸ್ತುತ ಮಾನವನು ಯಾವಾಗ ಸಂಘಜೀವಿಯಾದನೋ, ಯಾವಾಗ ನೋವಿನಲ್ಲಿ ಅಳುವನ್ನೂ, ಗೆಲುವಿನಲ್ಲಿ ನಗುವನ್ನೂ, ಪ್ರಕೃತಿಯಲ್ಲಿ ವಿಸ್ಮಯವನ್ನೂ, ಶೃಂಗಾರದಲ್ಲಿ ರಸಿಕತೆಯನ್ನೂ, ರೌದ್ರದಲ್ಲಿ ಕೋಪವನ್ನೂ ಕಂಡುಕೊಂಡನೋ ಆಗಲೇ ನಾಟಕಕ್ಕೆ ಬೀಜಾಂಕುರವಾಯಿತೆನ್ನಬಹುದು. ನಾಟಕದಲ್ಲಿ ಜ್ಞಾನ, ಶಿಲ್ಪ, ವಿದ್ಯೆ, ಕಲೆ, ಯೋಗ, ಕ್ರಿಯೆ ಮುಂತಾದ ಜ್ಞಾನಭಂಡಾರವೇ ಅಡಕವಾಗಿದೆ.

"ರಂಗಭೂಮಿ" ನಮ್ಮ ಹೆಮ್ಮೆಯ ಕನ್ನಡನಾಡಿನ ಸಾಂಸ್ಕೃತಿಕ ಬದುಕಿನ ಅವಿಭಾಜ್ಯ ಅಂಗ, ವಿಭಿನ್ನ ರುಚಿಯ ಪ್ರೇಕ್ಷಕರನ್ನು ಏಕಕಾಲದಲ್ಲಿ ಸಂತೋಷಗೊಳಿಸುವ ಏಕೈಕ ಸಾಧನ. ನಮ್ಮರಂಗಭೂಮಿ ಕನ್ನಡ ನಾಡಿನ ಮೂಲೆ ಮೂಲೆಗಳಲ್ಲಿ ಚಲಿಸಿ ವೈಭವದಿಂದ ಮೆರೆದ ರಂಗಭೂಮಿ ಚಲಿಸುವ ವಿಶ್ವವಿದ್ಯಾಲಯವೆಂದೇ ಹೇಳಬಹುದು.

ಮೇಲೆ ಕಾಣಿಸಿದ 'ನಾಟಕ' ಮತ್ತು 'ರಂಗಭೂಮಿ'ಗೆ ಸಂಬಂಧಿಸಿದ ವಿಷಯಗಳು ಒಂದಕ್ಕೊಂದು ಜೋಡಿಯಾಗಿ ಚಲಿಸಬೇಕಾದವುಗಳು. ಒಂದನ್ನು ಬಿಟ್ಟು ಮತ್ತೊಂದು ಇರಲು ಸಾಧ್ಯವಿಲ್ಲ. ಉತ್ತಮ ನಾಟಕಗಳು ರಂಗಭೂಮಿಯ ಮೇಲೆ ಪ್ರದರ್ಶನಗೊಂಡು ಪ್ರೇಕ್ಷಕರಿಂದ 'ಭಲೇ' ಅನ್ನಿಸಿ ಕೊಂಡಾಗ ಎರಡಕ್ಕೂ ಅಂದರೆ ನಾಟಕ ಮತ್ತು ರಂಗಭೂಮಿಯ ಗೌರವ, ಕೀರ್ತಿ ಶಿಖರಕ್ಕೇರುತ್ತದೆ.

ನಾನು ಚಿಕ್ಕವಳಿದ್ದಾಗ ಮಾತಾ-ಪಿತರೊಂದಿಗೆ ನಾಟಕ ನೋಡಲು ಹೋಗುತ್ತಿದ್ದೆ. ಮನರಂಜನೆ ಬಿಟ್ಟರೆ ಉಳಿದೆಲ್ಲ ನಾಟಕದ ಉದ್ದೇಶ, ಪ್ರದರ್ಶನ, ನಟನೆ, ಸಂಗೀತ, ಹಾಸ್ಯಗಳ ಬಗ್ಗೆ ಯಾವೊಂದು ವಿಚಾರ ಮಾಡುತ್ತಿರಲಿಲ್ಲ. ನಾನು ಹೈಸ್ಕೂಲು ಅಭ್ಯಾಸ ಮುಗಿಸಿ, ಕಾಲೇಜು ಮೆಟ್ಟಿಲು ತುಳಿಯುತ್ತಿದ್ದಾಗ ಅಂದರೆ ಬಿ.ಎ. ತರಗತಿಯಲ್ಲಿ ಅಭ್ಯಾಸದಲ್ಲಿ ತೊಡಗಿದ್ದಾಗ, ಕಾಲೇಜಿನ

ಗೆಳತಿಯೋರ್ವಳು ಗುಬ್ಬಿವೀರಣ್ಣ, ಪ್ರಶಸ್ತಿ ವಿಜೇತ ಎಲ್.ಬಿ.ಕೆ.ಆಲ್ದಾಳರು ರಚಿಸಿರುವ 'ಪತಿಭಕ್ತಿ' ನಾಟಕದ ಕೃತಿಯನ್ನು ನನ್ನ ಕೈಗಿಟ್ಟು ಇದನ್ನು ಓದಿನೋಡು ಎಂದಳು. ನಾಟಕದ ಪುಸ್ತಕವನ್ನು ಮನೆಯಲ್ಲಿ ಒಂದೆಡೆ ಇಟ್ಟುಬಿಟ್ಟೆ ನನ್ನ ಬಿ.ಎ. ಅಂತಿಮ ಪರೀಕ್ಷೆ ಮುಗಿದು ಮನೆಯಲ್ಲಿ ಕಾಲಕಳೆಯುತ್ತಿದ್ದಾಗ, ಗೆಳತಿಕೊಟ್ಟ ಪುಸ್ತಕ ನೆನಪಾಗಿ, ಸಮಯ ಕಳೆಯಲು ಕೈಗೆತ್ತಿ ಓದುತ್ತಕುಳಿತೆ, ಆಗ ನಾಟಕಕಾರರ ಬಗ್ಗೆ ನನಗೆ ಗೌರವ ಹೆಚ್ಚಾಯಿತು. ಆಲ್ದಾಳ ಅವರು ಮಹಿಳೆಯರ ಕುರಿತು ಹೊಂದಿರುವ ಕಳಕಳಿ ನನಗೆ ತುಂಬಾ ಸಂತೋಷ ಅನಿಸಿತು ಮುಂದೆ ನಾನು ಮದುವೆಯಾಗಿ ಅತ್ತೆಯ ಮನೆ ಸೇರಿದಾಗ ನನ್ನ ಅಭ್ಯಾಸದ ಬಗ್ಗೆ ಪ್ರಶ್ನೆಚಿಹ್ನೆಯಾಗಿ ಉಳಿಯಿತು, ಆದರೆ ನನ್ನಲ್ಲಿದ್ದ ಶಿಕ್ಷಣದ ಬಗೆಗಿನ ಉತ್ಸಾಹಕ್ಕೆ ನನ್ನ ಅತ್ತೆ ನೀರೆರೆದು ಹಸಿರಾಗಿಸಿದರು. ಓದು ಮುಂದುವರಿಯಿತು. ಬಿ.ಇಡಿ ಮುಗಿಸಿದೆ, ನಂತರ ಎಂ.ಎ.(ಕನ್ನಡ), ಎಂ.ಎ.(ಶಿಕ್ಷಣ) ಎರಡು ವಿಷಯಗಳಲ್ಲೂ ಅಧಿಕ ಅಂಕ (ಡಿಸ್ಟಿಂಕ್ಷನ್) ಪಡೆದು ಉತ್ತೀರ್ಣಳಾದೆ. ಈ ನಡುವೆ ನನಗೆರಡು ಮುದ್ದಾದ ಕು.ಪರಮಾನಂದ ಮತ್ತು ಕುಮಾರಿ ಲಕ್ಷ್ಮಿ ಜನಿಸಿದರು. ಇನ್ನು ಓದುವ ಹಂಬಲ ಕಡಿಮೆಯಾಗಲಿಲ್ಲ, ಡಾಕ್ಟರೇಟ ಪದವಿ ಏಕೆ ಮಾಡಬಾರದೆಂದು ಯೋಚನೆಯಲ್ಲಿದ್ದಾಗ ನನ್ನ ಪತಿ ಅರವಿಂದ ಜಮದರಖಾನಿ ಅವರು ಮುಂದುವರಿದು ಯಶಸ್ವಿಯಾಗು ಎಂದು ಒಪ್ಪಿಗೆ ಇತ್ತಾಗ ನನ್ನ ಆನಂದಕ್ಕೆ ಪಾರವೇ ಇರಲಿಲ್ಲ.

ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಸಂಶೋಧನ ಅಭ್ಯಾಸಕ್ಕಾಗಿ ಅರ್ಜಿಸಲ್ಲಿಸಿದೆ, ಪರೀಕ್ಷೆ ಬರೆದು ಸ್ಥಾನವನ್ನು ಪಡೆದುಕೊಂಡು ಮುಂದಿನ ನಡೆ ಮಾರ್ಗದರ್ಶಕರಿಗಾಗಿ ಹುಡುಕಾಟದಲ್ಲಿದ್ದಾಗ ಡಾ.ಜಯಶ್ರೀ ದಂಡೆ ಅವರು ತಮ್ಮಲ್ಲಿ ಅವಕಾಶವಿಲ್ಲದಿದ್ದರೂ, ನೀನು ಶ್ರೀಶರಣ ಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯ ಕನ್ನಡ ವಿಭಾಗದ ಸಹ ಪ್ರಾಧ್ಯಾಪಕರಾಗಿರುವ ಡಾ.ನೀಲಾಂಬಿಕಾ ಪೋಲೀಸ ಪಾಟೀಲರನ್ನು ಸಂದರ್ಶಿಸಿ ಅಲ್ಲಿ ಅವರಲ್ಲಿ ಭಿನ್ನವಿಸಿಕೊಳ್ಳಿ ಎಂದು ನನಗೆ ಮುಂದಿನ ಹಾದಿ ತೋರಿಸಿದರು. ಡಾ. ನೀಲಾಂಬಿಕಾರನ್ನು ಕಂಡು ಪ್ರಾರ್ಥಿಸಿದಾಗ ಅನುಮತಿ ನೀಡಿ ಸಂಶೋಧನೆಗೆ ಸಹಕರಿಸಿದ್ದು ನಾನು ನನ್ನ ಜೀವನ ಪರ್ಯಂತ ಸ್ಮರಿಸುತ್ತೇನೆ.

ಈಗ ನನ್ನ ಮುಂದೆ ಧುತ್ತೆಂದು ಕಾಡಿದ್ದು ಮಹಾಪ್ರಬಂಧ ಯಾವ ವಿಷಯದ ಬಗ್ಗೆ, ಯಾರಬಗ್ಗೆ ಸಂಶೋಧನೆ ಕೈಕೊಳ್ಳಬೇಕು? ನಾನು ಬಿ.ಎ.ಅಂತಿಮ ವರ್ಷದಲ್ಲಿದ್ದಾಗ ನನ್ನ ಗೆಳತಿ ಕೊಟ್ಟಿದ್ದ 'ಪತಿಭಕ್ತಿ' ನಾಟಕ ಕೃತಿ ನೆನಪಿಗೆ ಬಂತು. ಅದನ್ನು ನನ್ನ ತವರು ಮನೆಯಿಂದ ತರಿಸಿಕೊಂಡು ನೋಡಿದೆ. ಏಕೆ ಮಹಾನ ನಾಟಕಕಾರ ಎಲ್.ಬಿ.ಕೆ.ಆಲ್ದಾಳ ಜೀವನ, ಅವರ ನಾಟಕಗಳು, ಅವರ ಸಾಹಿತ್ಯ ಕುರಿತು ಪ್ರಬಂಧ ಬರೆದು ಮಂಡಿಸಬಾರದು ಎಂದು ಯೋಚಿಸಿ ನಮ್ಮ ಮಾವನವರಾದ ವೀರಭದ್ರಪ್ಪ ಜಮದರಖಾನಿ ಅವರ ಮುಂದೆ ವಿಷಯ ಪ್ರಸ್ತಾಪಿಸಿದಾಗ ನೀನು ನಾಟಕ ಮತ್ತು ರಂಗಭೂಮಿಯ ವಿಷಯದಲ್ಲಿ ಆಸಕ್ತಿ ಬೆಳೆಸಿಕೊಂಡಿದ್ದಲ್ಲಿ ನಾನು ರಂಗಕರ್ಮಿ ಆಲ್ದಾಳರ ಮನವೊಲಿಸಿ ನಿನಗೆ ಅನುಕೂಲವಾಗುವಂತೆ ಪ್ರಯತ್ನಿಸುವುದಾಗಿ ಹೇಳಿದಂತೆ, ಆಲ್ದಾಳರನ್ನು ಭೇಟಿಮಾಡಿಸಿದಾಗ ಎಲ್ಲವೂ ನನ್ನ ಯೋಚನೆಯಂತೆ ಸಂಶೋಧನೆಯ ಕಾರ್ಯಮುಂದುವರಿಯಿತು. ಮಾನವೀಯತೆಯ ಮೂರ್ತಸ್ವರೂಪರಾದ ಆಲ್ದಾಳರು ತಮ್ಮ ಮಗಳಂತೆ ನೋಡಿಕೊಂಡು ನನಗೆ ಬೆಂಬಲಿಸಿ, ಯಶಸ್ವಿಯಾಗುವಂತೆ ಆಶೀರ್ವದಿಸಿದರು. ಆಲ್ದಾಳ ಅವರು ನನ್ನ ಮನದಿಚ್ಛೆಯಂತೆ ಮಹಾಪ್ರಬಂಧ ಬರೆಯಲು ಪ್ರೋತ್ಸಾಹಿಸಿದರಲ್ಲದೆ ಹೆಚ್ಚಿನ ಓದಿನ ಮುನ್ನುಡಿಗೆ ನೆರವಾದರು. ಅವರ ಋಣ ಮರೆಯಲಾಗದು.

ನನಗೆ ರಂಗಭೂಮಿಯು ಆಸಕ್ತಿಯ ವಿಷಯವಾಗಿತ್ತು. 'ರೋಗಿ ಬಯಸಿದ್ದು ಅನ್ನ, ಹಾಲು ವೈದ್ಯಹೇಳಿದ್ದು ಅನ್ನಹಾಲು" ಎನ್ನುವಂತೆ ನನಗಿಷ್ಟ ಇರುವ ವಿಷಯವೇ ನನ್ನ ಮುಂದೆ ಇರುವಾಗ ನಾನು ಅದಕ್ಕೆ ಹೆಚ್ಚಿನ ಕಾಳಜಿವಹಿಸಿದೆ. ನಾನೀಗ ಕಲಬುರುಗಿ ನಿವಾಸಿಯಾಗಿರುವುದು, ನಾಟಕಕಾರ ಆಲ್ದಾಳರು ಆಗಾಗ ಕಲಬುರ್ಗಿಯಲ್ಲಿರುವ ರಂಗಭೂಮಿ ಸಂಪರ್ಕ ಇಟ್ಟುಕೊಂಡು ಬರ–ಹೋಗುತ್ತಿರುವುದರಿಂದ ನಾನು ಮುಕ್ತವಾಗಿ ಅವರ ನಾಟಕ ಕೃತಿಗಳ ಬಗ್ಗೆ ಹೆಚ್ಚಿನ ಮಾಹಿತಿ ಪಡೆಯುತ್ತಿದೆ. ಎಲ್ಲಕ್ಕೂ ಮಿಗಿಲಾಗಿ ನನ್ನ ಮಾರ್ಗದರ್ಶಕಿಯವರ ಮುಂದೆ ವಿಷಯ ಚರ್ಚಿಸಿ, ಅವರ ಮಾರ್ಗದರ್ಶನದಲ್ಲಿ ನಾನು ಹೆಜ್ಜೆ ಇರಿಸುತ್ತಿದೆ. ಅವರು ತಮ್ಮ ವಿದ್ಯಾರ್ಥಿನಿಯರೂ ತಮ್ಮಂತೆಯೇ ಅಧ್ಯಯನಶೀಲರಾಗಬೇಕೆಂದು ಉದ್ದೇಶಿಸಿ ನನ್ನನ್ನು ಆಳವಾದ ಅಧ್ಯಯನ ಮತ್ತು ಚಿಂತನೆಗೆ ತೊಡಗಿಸಿದ್ದಾರೆ. ನಾನು ಬರೆದ ಪ್ರಬಂಧವನ್ನು ಅಮೂಲಾಗ್ರವಾಗಿ ಪರಿಶೀಲಿಸಿ ತಪ್ಪಿದಲ್ಲಿ ತಿದ್ದಿ ಸೂಕ್ತ ಸಲಹೆ ಸೂಚನೆ ಇತ್ತಿದ್ದಾರೆ. ಅವರ ವಿಶಾಲ ಹೃದಯದ ಮಾರ್ಗದರ್ಶನಕ್ಕೆ ಚಿರಋಣಿಯಾಗಿದ್ದೇನೆ.

ಕುಂಭಿನಿ, ಕಾಂಚಣ, ಕಾಮಿನಿಗಳು ನನ್ನದೆಂದು ನಂಬಿ ನೆಚ್ಚಿಕೊಂಡು ಒದ್ದಾಡುವುದನ್ನು ನಿಲ್ಲಿಸಿ, ನನ್ನದೆನ್ನುವ ಜ್ಞಾನವೆಂಬ ದಿವ್ಯರತ್ನವನ್ನು ನಾವು ಗಳಿಸಿಕೊಂಡಾಗ ಮಾತ್ರ ನಮ್ಮ ಮನುಷ್ಯ ಜನ್ಮ ಸಾರ್ಥಕವಾಗುತ್ತದೆ ಎಂದು ನುಡಿಯುವ ಆಲ್ದಾಳರದು ಶರಣ ಜೀವನ, ನುಡಿದಂತೆ ನಡೆದು ತೋರಿಸಿದವರು. ಅವರದು ಸಾದಾಜೀವನ, ಉಚ್ಚವಿಚಾರ, ಶರಣರ ಬದುಕಿನಿಂದ, ಅವರ ಸಂದೇಶಗಳಿಂದ ಪ್ರಭಾವಗೊಂಡು, ಪ್ರೇರಣೆಗೊಂಡು ತಾವು ಶರಣರಂತೆ ಬದುಕುತ್ತಿದ್ದಾರೆ. ಅವರ ಜೀವನ–ಬದುಕು ಕುರಿತು ಪ್ರಬಂಧ ಬರೆಯಲು ನನಗೆ ಅವಕಾಶಸಿಕ್ಕಿದ್ದು ನನ್ನ ಭಾಗ್ಯ. ಅದಕ್ಕಾಗಿ ಅನಂತ ಪ್ರಣಾಮಗಳು.

ನಮ್ಮದು ಕರುನಾಡು, ಸುಗಂಧದಬೀಡು, ಇಲ್ಲಿ ಕನ್ನಡದ ಕಹಳೆಯೇ ಮೊಳಗಲಿ, ಯಾವುದೇ ಪರಿಸ್ಥಿತಿಯಲ್ಲೂ ಕನ್ನಡವನ್ನು ಕಡೆಗಣಿಸದಿರು. ಕನ್ನಡದಲ್ಲಿಯೇ ಉನ್ನತ ಶಿಕ್ಷಣಪಡೆದು ಕನ್ನಡಾಂಬೆಯ ಆರಾಧನೆಗೈಯಿ ಎಂದು ಮನಸಾರೆ ಹಾರೈಸಿದ ನನ್ನ ಅತ್ತೆ ದಿಂ.ಶಾರದಾದೇವಿ, ವೀರಭದ್ರಪ್ಪ ಜಮದರಖಾನಿ ಅವರ ಮುತ್ತಿನಂತಹ ಮಾತುಗಳನ್ನು ನಾನು ಜೀವನದುದ್ದಕ್ಕೂ ಅಂತರಾಳದಲ್ಲಿರಿಸುತ್ತೇನೆ. ದೇವರು ಅವರ ಆತ್ಮಕ್ಕೆ ಶಾಂತಿ ನೀಡಲಿ.

ನಾನು ನಾಟಕಕಾರ ಎಲ್.ಬಿ.ಕೆ.ಆಲ್ದಾಳರ ಮೇಲೆ ಬರವಣಿಗೆಗೆ ತೊಡಗಿದಾಗಿನಿಂದ ನನ್ನ ಪ್ರಾಥಮಿಕ ಶಾಲೆಯ ವಿದ್ಯಾಗುರುಗಳಾದ ಶ್ರೀ ರಘುನಾಥರಾವ ಪಟವಾರಿ,ಮತ್ತು ಎಂ.ಎ. ಗುರುಗಳಾದ ಡಾ.ಜಗನ್ನಾಥ ಹೆಬ್ಬಾಳೆ, ಡಾ.ಬಸವರಾಜ ಬಲ್ಲೂರ, ಡಾ.ಬಸವರಾಜ ಸಬರದ, ಡಾ.ಬಂಡಯ್ಯಸ್ವಾಮಿ, ಮಹಾಪ್ರಬಂಧ ಯಶಸ್ವಿಯಾಗಿ ಪೂರ್ಣಗೊಳಿಸುವಂತೆ ಸಲಹೆ ಇತ್ತುದಕ್ಕೆ ಅನಂತಾನಂತ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ನನ್ನ ಅಜ್ಜ ದಿವಂಗತ ಬಸವರಾಜ ತಂಬಾಕೆ ಅವರ ಪ್ರೇರಣೆ ಹಾಗೂ ಕಾಳಜಿಯಿಂದಾಗಿ ನನಗೆ ಮಹಾಪ್ರಬಂಧ ಬರೆಯಲು ಆಸಕ್ತಿ ಹೆಚ್ಚಿಸಿತು. ಭಗವಂತನು ಅವರ ಆತ್ಮಕ್ಕೆ ಶಾಂತಿ ನೀಡಲಿ.

ನಮ್ಮ ಕುಟುಂಬದ ಹಿರಿಯಜೀವಿ ದಿಂ.ಅಣೆಪ್ಪ ಜಮದರಖಾನಿ ಅವರು ನಾನು ಬೇಗನೆ ಪಿಎಚ್‌ಡಿ ಮುಗಿಸಿ ಮನೆತನದ ಗೌರವ ಹೆಚ್ಚಿಸಲು ಕೇಳಿಸಿಕೊಂಡ ಆ ಮಾತುಗಳನ್ನು ಮರೆಯಲೆಂತು, ಭಗವಂತನು ಅವರ ಆತ್ಮಕ್ಕೂ ಶಾಂತಿ ನೀಡಲಿ.

ಶ್ರೀಮತಿ ಈರೇಶ್ವರಿ, ಬಸವರಾಜ ಜಮದರಖಾನಿ ದಂಪತಿಗಳು ಪಿಎಚ್‌ಡಿ ಬರೆದು ಜಯಶಾಲಿಯಾಗು ಎಂದು ಮುಕ್ತಕಂಠದಿಂದ ಹೊಗಳಿ ಆಶೀರ್ವಾದ ಮಾಡಿರುವುದಕ್ಕೆ ಅನಂತಾನಂತ ನಮಸ್ಕಾರಗಳು.

ಅದೇರೀತಿಯಾಗಿ ಪದೇ ಪದೇ ಸಂಚಾರಿ ದೂರವಾಣಿಮಾಡಿ ಮಹಾಪ್ರಬಂಧದ ಬರವಣಿಗೆಯ ಹಂತ ಎಲ್ಲಿಗೆ ಬಂದಿತು ಎಂದು ಕೇಳುತ್ತ ಪ್ರೋತ್ಸಾಯಿಸಿದ ನನ್ನ ನಾದಿನಿಯರಾದ ಡಾಕ್ಟರ ನಾಗರತ್ನ ಮತ್ತು ಚಂದ್ರಕಾಂತ ಏರಿ, ಪ್ರೊ.ಸಿದ್ಧಮ್ಮ ಪ್ರಭಾಕರ ಗೊಬ್ಬುರು, ಸಹಾಯಕಿ ಗೀತಾ ಹಾಗೂ ಭಾವನವರಾದ ನಾಗರಾಜ ಜಮದರಖಾನಿ ಅವರಿಗೂ ಕೃತಜ್ಞತೆ ಸಲ್ಲಿಸುತ್ತೇನೆ.

ನನ್ನ ತವರು ಮನೆಯವರು ನನ್ನ ಪ್ರಬಂಧ ಬರೆಯುವಾಗಿನ ಅವರ ಸಂಭ್ರಮ ಹೇಳತೀರದು. ನನ್ನ ಚಿಕ್ಕಪ್ಪನಾದ ಶ್ರೀಮಾನ ಗುಂಡಪ್ಪಕೇರಿ, ನನ್ನ ಮಾತೋಶ್ರೀ ವಿದ್ಯಾವತಿ ದಿಂ.ಕಾಶೀನಾಥಕೇರಿ, ಸೋದರಮಾವ ಶ್ರೀ ಗುರುಬಸ್ಸಪ್ಪ, ಗಂಗಶೆಟ್ಟಿ ಅವರ ಪತ್ನಿ ರೇಣುಕಾ ಗಂಗಶೆಟ್ಟಿ, ತಮ್ಮಂದಿರು ಸಂತೋಷ, ಸತೀಶ ಹಾಗೂ ಸೋಮಶೇಖರ ಮಣ್ಣೂರ, ಶ್ರೀಮತಿ ಜ್ಯೋತಿ ಮಣ್ಣೂರ ಇವರೆಲ್ಲರು ನನಗೆ ಪ್ರೋತ್ಸಾಹಿಸಿದ್ದಕ್ಕೆ ಕೃತಜ್ಞತೆ ಅರ್ಪಿಸುತ್ತೇನೆ. ಇದರ ಜೊತೆಗೆ ನನ್ನ ತಂದೆಯವರ ಕನಸು ನನಸು ಮಾಡಿದ್ದೇನೆ ಎನ್ನುವ ಸಂಪೂರ್ಣ ಭರವಸೆಯೊಂದಿಗೆ ನನ್ನ ತಂದೆಯವರ ಆತ್ಮಕ್ಕೆ ಶಾಂತಿ ಸಿಗಲೆಂದು ಆ ದೇವರಲ್ಲಿ ಪ್ರಾರ್ಥಿಸುತ್ತೇನೆ.

ನಾನು ಬರೆದಿರುವುದನ್ನು ಆಗಾಗ ಮನೆಗೆ ಬಂದು ಓದಿ ಪ್ರೋತ್ಸಾಹಿಸಿದ ಶ್ರೀ ಕಿರಣ ಪಾಟೀಲ್, ಶ್ರೀ ಎಸ್.ಕೆ.ಬಿರಾದಾರ, ಹಾಗೂ ನನ್ನ ಸಂಶೋಧಮೆಗೆ ಸರಿಯಾದ ಸಮಕ್ಕೆ ಸರಿಯಾದ ಸಲಹೆ ಸೂಚನೆ ಕೊಟ್ಟಂತಹ ಇವರೆಲ್ಲರನ್ನೂ ಈ ಸಂದರ್ಭದಲ್ಲಿ ನೆನಪಿಸಿಕೊಳುತ್ತೇನೆ ಶ್ರೀ ಚಂದ್ರಕಾಂತ, ಅಂಬಿಕಾ, ಗಾಯತ್ರಿ, ಮಂಗಲಾ, ಶ್ರೀಮತಿ ಶಿಲ್ಪಾ ರವಿ ಜಮದರಖಾನಿಯವರಿಗೆ ವಂದನೆಗಳು.

ಮಹಾಪ್ರಬಂಧ ರಚನೆಯಲ್ಲಿ ತೊಡಗಿದ ಸಂದರ್ಭದಲ್ಲಿ ಅವಶ್ಯಕವೆನ್ನಿಸಿದ ಕಡೆಗಳಲ್ಲಿ ಅನೇಕ ವಿಮರ್ಶಕರ, ಸಾಹಿತಿಗಳ, ಸಹಪಾಠಿಗಳ, ವಿದ್ವಾಂಸರ ಕೃತಿ, ಲೇಖನಗಳ ಭಾಗಗಳನ್ನು ಉದ್ದರಿಸಿದ್ದೇನೆ. ಅಲ್ಲದೆ ಆಲ್ದಾಳ ಅವರ ಬಗ್ಗೆ ಸಂದರ್ಶನ, ದೂರವಾಣಿಯ ಮೂಲಕ ಮಾಹಿತಿ, ಅಭಿಪ್ರಾಯ, ನೀಡಿರುವ ಎಲ್ಲ ಮಹನಿಯರನ್ನು ವಿಶೇಷವಾಗಿ ಕಲಬುರಗಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶ್ರೀಮಹಿಪಾಲರೆಡ್ಡಿ ಮುನ್ನೂರ ಅವರನ್ನು ನಾನಿಲ್ಲಿ ಸ್ಮರಿಸಿಕೊಳ್ಳುತ್ತ ವಂದನೆ ಹೇಳುತ್ತೇನೆ.

ನನ್ನೀ ಕಾರ್ಯದಲ್ಲಿ ನೆರವಾದ ಆತ್ಮೀಯರಿಗೆ ಕೃತಜ್ಞತೆ ಹೇಳಬೇಕೆಂದರೆ ಯಾರಿಗೆಂದು ಹೇಳಬೇಕೋ ತಿಳಿಯುತ್ತಿಲ್ಲ. “ಊರೆಲ್ಲ ನೆಂಟರು, ಕೇರಿಯಲ್ಲ ಬಳಗ ಯಾರನ್ನು ಬಿಡಲೋ ಸರ್ವಜ್ಞ” ಎನ್ನುವಂತಾಗಿದೆ ನನ್ನ ಸ್ಥಿತಿ.

ನನ್ನ ಈ ಪ್ರಬಂಧ ಪೂರ್ಣಗೊಳ್ಳಲು ಪ್ರಾರಂಭದಿಂದ ಹಿಡಿದು ಕೊನೆಯ ಹಂತದವರೆಗೂ ನೆರವು, ಸಹಕಾರ, ಉಪಯುಕ್ತಸಲಹೆ, ಹೆಚ್ಚಿನ ಕಾಳಜಿವಹಿಸಿರುವ ನನ್ನ ಮಾವನವರಾದ ವೀರಭದ್ರಪ್ಪ ಜಮದರಖಾನಿ ಅವರು ನನ್ನ ಪಾಲಿನ ಪ್ರಾತಃಸ್ಮರಣೀಯರು.

ತ್ವರಿತ, ಅಂದವಾಗಿ ಡಿ.ಟಿ.ಪಿ.ಮಾಡಿ ಸಕಾಲಕ್ಕೆ ಒಪ್ಪಿಸಿರುವ ಕು. ಅಶ್ವಿನಿ. ಸಿ. ಚಂದನಕೇರಿ ಯವರಿಗೆ ನನ್ನ ಹೃದಯಪೂರ್ವಕವಂದನೆಗಳು.


**ತಮ್ಮ ವಿಶ್ವಾಸಿ**

**(ಶ್ರೀಮತಿ ಕರುಣಾ ಕಾಶಿನಾಥ)**

**ಸಂಶೋಧನಾ ವಿದ್ಯಾರ್ಥಿನಿ**
**ಕನ್ನಡ ಅಧ್ಯಯನ ಸಂಸ್ಥೆ**
**ಗುಲಬರ್ಗಾ ವಿಶ್ವವಿದ್ಯಾಲಯ**
**ಕಲಬುರಗಿ**

# ಪರಿವಿಡಿ

ಪು.ಸಂಖ್ಯೆ


| | | |
|---|---|---|
| ೧ | ಅಧ್ಯಯನದ ಉದ್ದೇಶ ಮತ್ತು ಮಹತ್ವ | ೧ – ೫ |
| ೨ | ಕನ್ನಡ ರಂಗಭೂಮಿ ನಡೆದು ಬಂದ ದಾರಿ | ೦೬ – ೧೭ |
| ೩ | ಎಲ್.ಬಿ.ಕೆ.ಆಲ್ದಾಳರ ಜೀವನ | ೧೮ – ೫೬ |
| ೪ | ಎಲ್.ಬಿ.ಕೆ ಆಲ್ದಾಳರ ಸಾಹಿತ್ಯಿಕ ಸಾಧನೆ<br>ಅ . ನಾಟಕಗಳು<br>ಆ . ಪುರಾಣ ಹಾಗೂ ಚರಿತ್ರೆಗಳು<br>ಇ . ತತ್ವಗೀತೆಗಳ ಸಂಕಲನ ಹಾಗೂ ನಾಮಾವಳಿಗಳು | ೫೭ – ೨೬೫ |
| ೫ | ರಂಗಭೂಮಿಗೆ ಆಲ್ದಾಳರ ಕೊಡುಗೆ | ೨೬೬ – ೨೮೭ |
| ೬ | ಆಲ್ದಾಳರ ಸಾಹಿತ್ಯ ಭಾಷಾಶೈಲಿ | ೨೮೮ – ೩೦೯ |
| • | ಸಮಾರೋಪ | ೩೧೦ – ೩೩೦ |
| | ಅನುಬಂಧ | |
| • | ಭಾವಚಿತ್ರಗಳು | |
| • | ಗ್ರಂಥಋಣ | |

# ಅಧ್ಯಾಯ – ೧
## ಅಧ್ಯಯನದ ಉದ್ದೇಶ ಮತ್ತು ಮಹತ್ವ

**'ಕರೆ, ಓ ಗೊಡುತ್ತದೆ, ಹುಡುಕು ಸಿಗುತ್ತದೆ ತಟ್ಟು ಬಾಗಿಲುತೆರೆಯುತ್ತದೆ,**
**ಇದು ಸಂಶೋಧಕ ನಿತ್ಯ ಜಪಿಸಬೇಕಾದ**
**ಮಂತ್ರ. ಸಂಶೋಧಕ**
**ಸುಮ್ಮನಿದ್ದರೆ ಆತ ಈ ದಡದಲ್ಲಿ,**
**ಸಮಸ್ಯೆ ಆ ದಡದಲ್ಲಿ, ಮಧ್ಯೆ ಅಪಾರ**
**ಅಜ್ಞಾನದ ಕತ್ತಲೆಯ ಕಂದರ'.**

**–ಡಾ.ಎಂ.ಚಿದಾನಂದಮೂರ್ತಿ.**

ಭವ್ಯವಾದ ಭಾರತೀಯ ಸಂಸ್ಕೃತಿಯಲ್ಲಿ ಸುಮಧುರವಾಗಿ ಅರಳಿರುವ ಸುಸಂಸ್ಕೃತಿಯ ನಾಡು ಕನ್ನಡ ನಾಡು. ಡಾ. ಅರಳುಮಲ್ಲಿಗೆ ಪಾರ್ಥಸಾರಥಿಯವರು ಹೇಳುವಂತೆ, "ಕರ್ನಾಟಕ ಹೆಸರೇ ಮರೆಯಲಾರದ ಮಹಾನ್ ಸಾಮ್ರಾಜ್ಯ. ಧರ್ಮ, ಸಂಸ್ಕೃತಿ, ಸಾಹಿತ್ಯ ಹಾಗೂ ಕಲೆಗಳ ತವನಿಧಿ. ಹಿಂದೂ, ಜೈನ, ಬೌದ್ಧ, ಕ್ರೈಸ್ತ ಹಾಗೂ ಇಸ್ಲಾಂ ಧರ್ಮಗಳ ಸಮನ್ವಯ ಕ್ಷೇತ್ರ. ಬೆಟ್ಟಗುಡ್ಡಗಳ ನೆಲಸಂಪತ್ತು, ಹಿತಕರ ಹವೆ, ನಿತ್ಯ ಹರಿದ್ವರ್ಣದ ಕಾಡುಗಳು, ಸಂಭ್ರಮದ ಜನ, ಸಡಗರದ ಕಡಲತೀರ, ಅಗೆದು ತೆಗೆದಷ್ಟು ಸಿಗುವ ಖನಿಜ ಸಂಪತ್ತು, ಪ್ರಜ್ಞಾವಂತ ಜನಾಂಗ, ಇವೆಲ್ಲವುಗಳ ಆಗರ ಕರ್ನಾಟಕ. ಈ ನಾಡಿಗೆ ಸಮೃದ್ಧವಾದ ಇತಿಹಾಸವಿದೆ. ಭವ್ಯವಾದ ಪರಂಪರೆಯಿದೆ, ಉಜ್ವಲವಾದ ಸಂಸ್ಕೃತಿ, ಕರ್ನಾಟಕ ಇತಿಹಾಸದುದ್ದಕ್ಕೂ ವಿಕಾಸಶೀಲವಾಗಿಯೇ ನಡೆದು ಬಂದಿದೆ".

"ಕನ್ನಡ ನಾಡಿನ ಭಾಷೆ ಹಾಗೂ ಸಾಹಿತ್ಯ ಚರಿತ್ರೆಗೆ ಸುದೀರ್ಘವಾದ ಇತಿಹಾಸವಿದೆ. ನಾಡು–ನುಡಿಯ ಸಲುವಾಗಿ ಅನೇಕ ಜನ ಮಹನೀಯರು ಅವಿರತವಾಗಿ ದುಡಿದು ಪ್ರಾಣ ತ್ಯಜಿಸಿದ್ದಾರೆ. ಕನ್ನಡ ಸಾಹಿತ್ಯ ಅನೇಕ ವಿದ್ವಾಂಸರಿಂದ ರಚಿತಗೊಂಡು ಸಾಕಷ್ಟು ಹುಲುಸಾಗಿ ಬೆಳೆದು ಬಂದಿತು. ಆದರೆ ಒಂದು ಕೊರತೆಯನ್ನು ಅನುಭವಿಸಬೇಕಾಯಿತು. ಜನತೆಯ ವಿಶ್ವವಿದ್ಯಾಲಯವೆಂದೇ ಹೇಳಲಾದ ಮನೋರಂಜನೆಯ ಸಾಧನವಾದ ಹಲವಾರು ಲಲಿತಕಲೆಗಳ ಸಮ್ಮಿಲನವಾದ ರಂಗಭೂಮಿ ನಾಟಕಸಾಹಿತ್ಯದಿಂದ ವಂಚಿತವಾಗಬೇಕಾಯಿತು.

"೮ನೇ ಶತಮಾನದ ಪಟ್ಟದಕಲ್ಲಿನ ಶಾಸನದಿಂದ ಕನ್ನಡ ನಾಟ್ಯಕಲೆಗೆ, ನಟ–ನಟಿಯರಿಗೆ ಅರಸರ ಪ್ರೋತ್ಸಾಹವಿದ್ದುದು ತಿಳಿದು ಬರುತ್ತದೆ. ಶಾಸನಗಳನ್ನು ಬಿಟ್ಟರೆ ಕನ್ನಡ ಸಾಹಿತ್ಯದ ಕೆಲಕೃತಿಗಳಲ್ಲಿ ನಾಟಕ–ನಾಟಕಕಾರರ ಉಲ್ಲೇಖ ಸಿಕ್ಕುತ್ತದೆ. 'ಕವಿರಾಜಮಾರ್ಗ' ಕೃತಿಯಲ್ಲಿ, ಪಂಪನ 'ಆದಿಪುರಾಣ'ದಲ್ಲಿ, ರನ್ನನ 'ಗದಾಯುದ್ಧ'ದಲ್ಲಿ, ಪೊನ್ನನ್ನ 'ಶಾಂತಿನಾಥ ಪುರಾಣ'ದಲ್ಲಿ, ರಾಘವಾಂಕನ 'ಹರಿಶ್ಚಂದ್ರ ಕಾವ್ಯ'ದಲ್ಲಿ ನಾಟಕೀಯ ಅಂಶಗಳು ಸಾಕಷ್ಟು ಪ್ರಮಾಣದಲ್ಲಿ ದೊರೆಯುತ್ತವೆ."

ಬ್ರಿಟಿಷರು ಭಾರತದ ಆಗಮನದೊಂದಿಗೆ ಸಾಹಿತ್ಯಿಕ, ಸಾಂಸ್ಕೃತಿಕ ಹಾಗೂ ಮನೋರಂಜನೆಯ ಸಾಧನವಾದ ನಾಟಕವನ್ನು ಜೊತೆಗೆ ತೆಗೆದುಕೊಂಡು ಬಂದರು. ಇವರಿಂದ

ಸ್ಫೂರ್ತಿ ಪಡೆದ ಬಂಗಾಲಿ, ರಂಗಭೂಮಿ ಪುನರ್ಜನ್ಮ ಪಡೆದು ಪಾರ್ಸಿಗಳ ಮೂಲಕ ಉತ್ತರ ಕರ್ನಾಟಕವನ್ನು ಪ್ರವೇಶಿಸಿ, ರಂಗಚಟುವಟಿಕೆಗಳು ಈ ಭಾಗದಲ್ಲಿ ಗರಿಗೆದರಲು ಕಾರಣವಾದವು ಅಂದು ಮರಾಠಿ ನಾಟಕ ಮಂಡಳಿಗಳು ಕನ್ನಡಿಗರ ಮೇಲೆ ಮಾಡಿದ ಸಾಂಸ್ಕೃತಿಕ, ಸಾಹಿತ್ಯಿಕ ದಾಳಿಯಿಂದ ಕನ್ನಡ ಭಾಷೆ, ಸಂಸ್ಕೃತಿ ತತ್ತರಿಸಿ ಹೋಗಬೇಕಾಯಿತು. ಇಂತಹ ಸಂದರ್ಭದಲ್ಲಿ ಪುಣ್ಯಪುರುಷರೋಪಾದಿಯಲ್ಲಿ ಉದಯಿಸಿ ಬಂದ ಶಾಂತಕವಿಗಳು, ಶ್ರೀನಿವಾಸ ಅಗಳಗಟ್ಟಿ, ಕೆರೂರು ವಾಸುದೇವಾಚಾರ್ಯರು, ಸಕ್ಕರೆ ಬಾಳಾಚಾರ್ಯರು. ಶಿವಮೂರ್ತಿಸ್ವಾಮಿ ಕಣಬರಗಿಮಠ. ಚಿಕ್ಕೋಡಿ ಶಿವಲಿಂಗ ಶಾಸ್ತ್ರಿಗಳು, ಗರುಡ ಸದಾಶಿವರಾಯರು ಮೊದಲಾದವರು ಕನ್ನಡ ವೃತ್ತಿರಂಗಭೂಮಿಗೆ ಭದ್ರಪಾಯ ಹಾಕಿ ಅದನ್ನು ಪೋಷಿಸಿ, ಬೆಳೆಸಿ, ಸಂರಕ್ಷಿಸಲು ಟೊಂಕಕಟ್ಟಿ ನಿಂತರು ಇಂತಹ ಮಹನೀಯರ ಅವಿರತ ಪ್ರಯತ್ನದ ಫಲವಾಗಿ ಕನ್ನಡ ವೃತ್ತಿರಂಗಭೂಮಿ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಸಶಕ್ತವಾಗಿ ಬೆಳೆದು ಬಂದಿತು. ನಾಡು-ನುಡಿಯ ಸಂರಕ್ಷಣೆಗಾಗಿ ಜೀವನದುದ್ದಕ್ಕೂ ಹೋರಾಟಮಾಡಿ ಮಡಿದವರ ಸ್ಮರಣೆ ಮಾಡಿದ್ದು ಅತ್ಯಲ್ಪ."

ವೃತ್ತಿರಂಗಭೂಮಿಯ ಕಲಾವಿದರು ನೋವಿನ ಬದುಕನ್ನು ಮರೆಮಾಡಿ ವೇದಿಕೆ ಮೇಲೆ ರಂಗು-ರಂಗಾದ ಬದುಕಿಗೆ ಜೊತೆಯಾಗುವರು ನಿರ್ಜೀವ ಪರದೆ, ರಂಗಸಜ್ಜಿಕೆಗಳ ನಡುವೆ ಜೀವತುಂಬಿ, ಅಭಿನಯಿಸಿ ನೋಡಲು ಬಂದ ಪ್ರೇಕ್ಷಕರನ್ನು ನಕ್ಕು ನಗಿಸಿ, ಹಾಸ್ಯದ ಜೊತೆಗೆ ಕೌಟುಂಬಿಕ ಭಕ್ತಿಯ ಹಾಡುಗಳೊಂದಿಗೆ ಪ್ರೇಕ್ಷಕರನ್ನು ಮನಸೂರೆಗೊಳ್ಳುವ ಹಾಗೆ ಮಾಡಿ ಅವರಿವರಿಂದ ಸಿಳ್ಳೆ, ಚಪ್ಪಾಳೆ ಗಿಟ್ಟಿಸಿ ಮೆಚ್ಚುಗೆಗೆ ಪಾತ್ರರಾದ ಅವರು ಯೌವ್ವನಕ್ಕೆ ವಿದಾಯ ಹೇಳಿ ಮುಪ್ಪಿಗೆ ಕಾಲು ಚಾಚಿದಾಗ ಅವರಿಗೆ ಎದುರಾಗುವ ದುರಂತಗಳಂತೂ ಯಾರಿಗೂ ಬೇಡ. ರಂಗಭೂಮಿಯ ಕಲಾವಿದರ ಬದುಕು ಎಷ್ಟುಕಷ್ಟ ಬಲ್ಲವರೇ ಬಲ್ಲರು."

೧೯ನೇಯ ಶತಮಾನದ ಅಂತ್ಯಕಾಲದಲ್ಲಿ ರಾಜಕೀಯ, ಸಾಮಾಜಿಕ, ಸಾಹಿತ್ಯಿಕ ರಂಗಗಳಲ್ಲಿ ಹೊಸಬದಲಾವಣೆ ಮೂಡಿತು. "ಹಿಂದಿನ ಸಹಸ್ರಾರು ವರ್ಷಗಳ ಚರಿತ್ರೆಯಲ್ಲಿ ಕಂಡುಬಂದ ಕ್ರಿಯೆ, ಪ್ರಕ್ರಿಯೆಗಳು ಈ ಕಾಲದಲ್ಲಿ ತೋರಿಸಿಕೊಂಡವು" ಕನ್ನಡ ಸಾಹಿತ್ಯವೃಕ್ಷದಲ್ಲಿ ನೂತನ ಕವಲುಗಳಾಗಿ ಗದ್ಯಕ್ಕೆ ಮುದ್ದಣ್ಣ, ಕಾದಂಬರಿಗೆ ಗಳಗನಾಥ, ನಾಟಕಕ್ಕೆ ಶಾಂತಕವಿಗಳು ಮೂಡಿ ಕನ್ನಡ ಸಾಹಿತ್ಯದಲ್ಲಿ ಹೊಸ ಮನ್ವಂತರ ತೆರೆಯಲು ಪ್ರಯತ್ನಿಸಿದರು. ಸಾಹಿತ್ಯ ನಿರಂತರವಾಗಿ ಹರಿಯುವ ಪ್ರವಾಹವಾಗಿ ಇಪ್ಪತ್ತನೇಯ ಶತಮಾನಕ್ಕೂ ಹರಿದುಬಂದಿತು. ಈ ಕಾಲದಲ್ಲಿಯೇ 'ಕರ್ನಾಟಕ ರಂಗಭೂಮಿ'ಯ ಅಂಕಪರದೆ ಸರೆದು 'ನಾಟಕರಂಗ' ಪ್ರಾರಂಭವಾಯಿತು. ಉತ್ತರಕರ್ನಾಟಕದಲ್ಲಿ ವೃತ್ತಿರಂಗಕ್ಕೆ ಅಸ್ತಿವಾರಹಾಕಿ ರಂಗಭೂಮಿಯ ಘನತೆಯನ್ನು ಕಾಪಾಡಿಕೊಂಡು ಬರಲು ಪ್ರಯತ್ನಿಸಿದವರಲ್ಲಿ ಎಲ್.ಬಿ.ಕೆ.ಆಲ್ದಾಳ ಅವರನ್ನು ರಂಗಭೂಮಿ ಮರೆಯುವುದಿಲ್ಲ, ಇವರ ಜೀವನ ರಂಗಚಟುವಟಿಕೆ ಮತ್ತು ಕೃತಿಗಳ ಬಗ್ಗೆ, ಬರವಣಿಗೆಗಳ ಬಗೆಗೆ ನಡೆದ ಅಧ್ಯಯನ ತೀರ ಕಡಿಮೆ, ಅದಕ್ಕೆ ರಂಗಭೂಮಿಯ ಮೇಲಿನ ಅಸಡ್ಡೆ ಹಾಗೂ ನಿರ್ಲಕ್ಷವೇ ಕಾರಣ, ಇಂದು ಚಾರಿತ್ರಿಕ ದೃಷ್ಟಿಯಿಂದ ಆ ಕಾರ್ಯ ತೀರ ಅಗತ್ಯವಾಗಿದೆ. ನಿಸ್ವಾರ್ಥಬುದ್ಧಿಯಿಂದ ಕನ್ನಡ ರಂಗಭೂಮಿಗೋಸ್ಕರ ತಮ್ಮ ಇಡೀ ಜೀವನವನ್ನೇ ಮುಡಿಪಾಗಿಟ್ಟಿರುವ ಇಂಥ ಮಹಾ ವ್ಯಕ್ತಿತ್ವದ ಆಲ್ದಾಳರ ಬದುಕು-ಬರಹ, ಸಾಧನೆ ಸಿದ್ಧಿಗಳನ್ನು ಮತ್ತೆ ಸಾರಸ್ವತ ಲೋಕಕ್ಕೆ ನೆನಪಿಸಿಕೊಡಬೇಕೆಂಬ ಉದ್ದೇಶದಿಂದ ಈ ಅಧ್ಯಯನವನ್ನು ಕೈಕೊಳ್ಳಲಾಗಿದೆ. ಅನಂತ ಕಷ್ಟ, ನೋವುಗಳು ಉಂಡು ಬೆಂಕಿಯಲ್ಲಿ ಅರಳಿದ ಹೂವಿನ ಹಾಗೆ ೭೭ರ ಸಂವತ್ಸರದಲ್ಲಿ ದಾಪುಗಾಲಿಡುತ್ತಿರುವ ಲಾಲ ಮಹಮ್ಮದ್ ಬಂದೇನವಾಜ್ ಖಲೀಫ್ ಆಲ್ದಾಳರವರು ಒಬ್ಬರು. ರಂಗಭೂಮಿಯೇ ತನ್ನ ಆರಾಧ್ಯದೈವ ಎಂದು ನಂಬಿ ನಡೆದಿರುವ, ನಡೆಯುತ್ತಿರುವ, ಆಲ್ದಾಳರು ಬರೆದಿರುವಂಥ ಕೃತಿಗಳನ್ನು ನೋಡಿದರೆ ಇಂತಹ ಧೀಮಂತ ವ್ಯಕ್ತಿ ನಮ್ಮ ನಡುವೆ ಇದ್ದಾರೆ ಎನ್ನುವದೇ ಆಶ್ಚರ್ಯದ ಸಂಗತಿ. ಕೇವಲ ಪ್ರಾಥಮಿಕ ಶಿಕ್ಷಣದವರೆಗೆ

ಅಭ್ಯಾಸ ಮಾಡಿ ಯಾವ ಪಿ.ಎಚ್.ಡಿ. ಪಡೆದವರಿಗಿಂತಲೂ ಕಡಿಮೆ ಇಲ್ಲವೆನ್ನುವಷ್ಟು ಅಕ್ಷರಜ್ಞಾನ ಹೊಂದಿದ್ದಾರೆ.

"ಸಾಹಿತ್ಯ ಹೃದಯಗಮ್ಯವಾದರೂ ಸಾಹಿತ್ಯ ಸಂಶೋಧನೆಯ ಬುದ್ಧಿಗಮ್ಯವಾಗಿದೆ. ಸಾಹಿತ್ಯ ಸುಲಭವಾಗಿ ಆಹ್ಲಾದ ನೀಡಿದರೆ ಸಾಹಿತ್ಯ ಸಂಶೋಧನೆ ಪರಿಶ್ರಮದ ಮೂಲಕ ಆಹ್ಲಾದವನ್ನು ನೀಡುತ್ತದೆ. ಸಾಹಿತ್ಯ ಸುಲಿದ ಬಾಳೆಯ ಹಣ್ಣಾದರೆ, ಸಾಹಿತ್ಯ ಸಂಶೋಧನೆ ತೊಗಟಿ-ಚಿಪ್ಪುಗಳಿಂದ ಕೂಡಿದ ತೆಂಗಿನಕಾಯಿ. ಸಾಹಿತ್ಯ ಅನುಭವ ಪ್ರಧಾನವಾದರೆ, ಸಾಹಿತ್ಯ ಸಂಶೋಧನೆ ಬುದ್ಧಿ ಪ್ರಧಾನ, ಬೌದ್ಧಿಕ ಕಾಳಜಿ ತಾತ್ವಿಕ ಚಿಂತನೆಯ ಮೂಲಕ ವಾಸ್ತವಿಕತೆಯ ಮೂಸೆಯಲ್ಲಿ ಘಟನೆಗಳನ್ನಿಟ್ಟು ಸಂಶೋಧಕನು ಅವುಗಳನ್ನು ಅವತಾರಗಳನ್ನಾಗಿ ತೋರಿಸುತ್ತಾನೆ. ಸಾಹಿತಿಯ ಪ್ರಜ್ಞಾಪಾತಳಿಯಲ್ಲಿ ಬದುಕಿನ ನಿಗೂಢಗಳನ್ನು ಕಲಾತ್ಮಕವಾಗಿ ಪುನರಸೃಷ್ಟಿ ಮಾಡುವ ಮೂಲಕ ತಾನು ಕಾಣುವ, ಕಂಡದ್ದನ್ನು ಉಳಿದವರಿಗೂ ಕಾಣಿಸುವುದೇ ಸಾಹಿತ್ಯ ಸೃಷ್ಟಿಯ ಕಾರ್ಯ. ವಿವಿಧ ಪ್ರಕಾರಗಳಲ್ಲಿ ಮಾನವನ ಗತಿ ಬಿಂಬಿತ ಅನುಭವವೇ ಸಾಹಿತ್ಯದ ವೈಶಿಷ್ಟ್ಯ, ಪ್ರಿಯ ಅಥವಾ ಅಪ್ರಿಯ ಸತ್ಯವನ್ನಾಗಿಸುತ್ತಾ, ಹಿಂದಿನ, ಮುಂದಿನ, ಹೊರಗಿನ ಒಳಗಿನ ಎಲ್ಲ ಅಂಶಗಳನ್ನು ಕೆದಕಿ-ನಿಶ್ಚಿತ ನಿರ್ಣಯಗಳನ್ನು ಸುಂದರಶೈಲಿಯಲ್ಲಿ ಎದುರಿಗಿಡುವ ಕಷ್ಟಸಾಧ್ಯವಾದ ಪ್ರಯತ್ನವೇ ಸಂಶೋಧನೆಯ ವೈಶಿಷ್ಟ್ಯ".

ಮಾನವ ಜನ್ಮದ ಆದರ್ಶಗಳಿಂದ ಕೂಡಿದ ಎಲ್‌ಬಿಕೆ ಅವರು ಅಗ್ನಿಕುಂಡದಲ್ಲಿ ಹಾಯ್ದು ಬಂದವರು, ಶರಣರಾಗಿ, ಬಸವ ಪ್ರೇಮಿಯಾಗಿ, ನಿಷ್ಠಾವಂತರಾಗಿ ಬದುಕು-ಬರಹದಲ್ಲಿ ಮಿಂದೆದ್ದಿದ್ದಾರೆ. ಇಂದು ಇಂತಹ ಅದ್ಭುತ ವ್ಯಕ್ತಿಗಳ ಸಾಹಿತ್ಯ ಅಧ್ಯಯನದ ಅಗತ್ಯವಿದೆ. ಸತ್ಯವನ್ನು ಪ್ರಕಟಿಸುವುದು ಸಂಶೋಧಕನ ಆದ್ಯಕರ್ತವ್ಯ. ಇಲ್ಲಿ ಸಂಶೋಧಕನ ವೈಯಕ್ತಿಕ ಅನಿಸಿಕೆಗೆ, ಕಲ್ಪನೆಗೆ ಆಸ್ಪದವೇ ಇಲ್ಲ ಎಂಬುದು ನೆನಪಿಡಬೇಕು.

ಎಲ್‌ಬಿಕೆ ಅವರ ನಾಟಕಗಳನ್ನು ಓದಿದ, ರಂಗಭೂಮಿಯ ಮೇಲೆ ನೋಡಿರುವ ಹಿರಿಯ ಕಲಾಭಿಮಾನಿಗಳನ್ನು, ಒಡನಾಡಿಗಳನ್ನು, ಶಿಷ್ಯಂಧಿರರನ್ನು, ಸಂಬಂಧಿಕರನ್ನು, ಕಂಪನಿಯ ಮಾಲಿಕರನ್ನು, ನಿರ್ದೇಕರುಗಳನ್ನು ನಟ-ನಟಿಯರನ್ನು ಸಂಬಂಧಪಟ್ಟ ಕಲಾವಿದರನ್ನು ಸಂದರ್ಶಿಸಿ, ವಿಷಯ ಸಂಗ್ರಹಿಸಿ ಈ ಮಹಾಪ್ರಬಂಧವನ್ನು ಸಿದ್ಧಗೊಳಿಸುವುದು ಉದ್ದೇಶವಾಗಿದೆ. "ಒಟ್ಟಾರೆ ಈ ಸಂಶೋಧನೆಯಿಂದ, ಜ್ಞಾನಭಂಡಾರ, ಶಕ್ತಿಭಂಡಾರ, ಸೌಲಭ್ಯಭಂಡಾರ ತುಂಬುತ್ತದೆ, ಮತ್ತು ಪ್ರಗತಿಗೆ ಸಾಧನೆಯಾಗಲಿದೆ".

ಕಲಬುರ್ಗಿ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಸರ್ವಾನುಮತದಿಂದ ಎಲ್.ಬಿ.ಕೆ. ಆಲ್ದಾಳ ಅವರು ಆಯ್ಕೆಗೊಂಡ ಸಂತೋಷದ ಕ್ಷಣ, ಸಮ್ಮೇಳನದಲ್ಲಿ ನಡೆದ ಸಂವಾದ, ಭಾಷಣ ಇತರ ಸಾಹಿತ್ಯ ಚಟುವಟಿಕೆಗಳ ಅಧ್ಯಯನವನ್ನು ಕುರಿತು ವಿಶ್ಲೇಷಿಸುವದು.

ಸಾಹಿತ್ಯ ಸೃಷ್ಟಿಗಿಂತ ಮಾನವೀಯ ಬದುಕನ್ನು ಸಾಫಲ್ಯಗೊಳಿಸುವ ತಮ್ಮ ಸಾಧನೆಯೊಂದಿಗೆ ತಮ್ಮ ಸುತ್ತಲಿನ ಸಮಾಜವನ್ನು ಮೇಲೆತ್ತುವ ಕಾರ್ಯದಲ್ಲಿ ತಮ್ಮ ಸಮಗ್ರ ಜೀವನವನ್ನೇ ಧಾರೆಯೆರೆಯುತ್ತಿರುವ ಎಲ್‌ಬಿಕೆ ಆಲ್ದಾಳರವರ ವ್ಯಕ್ತಿತ್ವವನ್ನು ಪರಿಚಯಿಸುವದು ಅಗತ್ಯವಾಗಿದೆ.

ಹಲವಾರು ಬಗೆಯಲ್ಲಿ ವಿಷಯ ಸಂಗ್ರಹಿಸುವುದು. ಹಸುವು ಹುಲ್ಲುಗಾವಲಿಗೆ ಮೇಯಲು ಹೋದಾಗ ಹುಲ್ಲನ್ನು ಪರಪರನೆ ಹರಿದುಕೊಂಡು ತನ್ನ ಗಂಟಲಿನ ಒಂದು ಭಾಗದಲ್ಲಿ

ಕೂಡಿಹಾಕಿಕೊಂಡು ನಂತರ ಮನೆಗೆ ಬಂದು ನಿಧಾನವಾಗಿ ಒಂದೊಂದು ತುತ್ತು ಹುಲ್ಲನ್ನು ಬಾಯಿಗೆ ಬರಿಸಿಕೊಂಡು ಮೆಲ್ಲುವಂತೆ, ಸಂಶೋಧಕ ಎಲ್ಲಮೂಲಗಳಿಂದ ವಿಷಯ ಸಂಗ್ರಹಿಸಿ, ನಿಧಾನಕ್ಕೆ ಮಹತ್ವದ್ದನ್ನು ಆಯ್ಕೆ ಮಾಡಬೇಕು. ಇವುಗಳಲ್ಲದೆ, ಆಕಾಶವಾಣಿ, ದೂರದರ್ಶನ, ಮಾಸಿಕ, ಪಾಕ್ಷಿಕ, ದಿನಪತ್ರಿಕೆ, ವಾರಪತ್ರಿಕೆ, ನಿಯತಕಾಲಿಕೆಗಳು, ಸ್ಥಳೀಯರ ಸಂದರ್ಶನಗಳು, ಫೋಟೋಗಳು ಮುಖ್ಯ ಆಕರಗಳಾಗಿವೆ. ಇನ್ನೂ ಅಪ್ರಕಟಿತ ಕೃತಿಗಳೂ ಸಹ ಆಕರಗಳಾಗಿವೆ. ಮಾಹಿತಿಗಳ ಆಗರ ಎಂದರೆ ಗ್ರಂಥಾಲಯಗಳು ಮನುಷ್ಯನ ಜ್ಞಾನ ಕ್ಷೇತ್ರದ ಯಾವುದೇ ಮಾಹಿತಿ ಆಗಲಿ ಗ್ರಂಥಗಳಲ್ಲಿ ದಾಖಲೆಗೊಳ್ಳುತ್ತದೆ. ಅಂಥ ಜ್ಞಾನ ಭಂಡಾರ ಸಂಶೋಧಕರಿಗೆ ಅಗತ್ಯವಾಗಿದೆ.

ಈ ಮಹಾಪ್ರಬಂಧ ಆರು ಅಧ್ಯಾಯಗಳಲ್ಲಿ ವಿಸ್ತೃತಗೊಂಡಿದೆ ಮೊದಲ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ–ಸ್ವರೂಪ ಮತ್ತು ಮಹತ್ವ ಸ್ಪಷ್ಟಪಡಿಸಿದೆ. ಇದು ಮುಂದಿನ ಅಧ್ಯಾಯಗಳಿಗೆ ದಿಕ್ಸೂಚಿಯೂ, ನಿಶ್ಚಿತ ನೆಲೆಗಟ್ಟು ಆಗಲಿದೆ.

ಎರಡನೇ ಅಧ್ಯಾಯದಲ್ಲಿ ಕನ್ನಡ ರಂಗಭೂಮಿ ನಡೆದು ಬಂದದಾರಿ, ರಂಗ–ಭೂಮಿಯ ಹಿನ್ನಲೆಯನ್ನು ತಿಳಿಸಿಕೊಡುತ್ತದೆ. ಹಾಗೂ ಕನ್ನಡ ನಾಟಕ ಸಾಹಿತ್ಯದ ಉಗಮ, ವಿಕಾಸದ ಮಜಲುಗಳನ್ನು ಸಮೀಕ್ಷೆ ಮಾಡಲಾಗಿದೆ. ರಂಗಭೂಮಿಯ ಇತಿಹಾಸ ಕುರಿತು ವ್ಯವಸ್ಥಿತ ಭೂಮಿಕೆಯನ್ನು ಒದಗಿಸಿದೆ.

ಮೂರನೇ ಅಧ್ಯಾಯ ಮಹತ್ವದ ಘಟ್ಟದ್ದಾಗಿದ್ದು ಎಲ್.ಬಿ.ಕೆ. ಆಲ್ದಾಳರ ಜೀವನದ ಏಳು–ಬೀಳುಗಳದ್ದು ಇಲ್ಲಿ ಆಲ್ದಾಳರ ಪೂರ್ವಿಕರ ಹಿನ್ನೆಲೆ, ಜನನ, ಬಾಲ್ಯ, ವಿದ್ಯಾಭ್ಯಾಸ, ಕೌಟುಂಬಿಕ ಜೀವನ, ನಟನೆ, ಉದ್ಯೋಗ, ನಾಟಕಕಾರರಾದದ್ದು, ಮಠಗಳ ದಾಸರಾದದ್ದು ನಂತರ ನಾಟಕಕಾರರಾಗಿ ಹೊರಹೊಮ್ಮಿದರು. ಅನೇಕ ಪ್ರಶಸ್ತಿ, ಗೌರವಗಳನ್ನು ಪಡೆದದ್ದು, ಕಲಬುರ್ಗಿ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಸೇವೆಸಲ್ಲಿಸಿದ್ದು, ಹಲವಾರು ಪತ್ರಕರ್ತರ ಜೊತೆ ಬುದ್ಧಿ ಜೀವಿಗಳೊಂದಿಗೆ ಸಂವಾದ, ಸಂಶೋಧಕಿ ಜೊತೆ ಮುಖಾ–ಮುಖಿ, ಸಾಹಿತ್ಯದ ಕುರಿತು ಸಂವಾದ, ಜೇವರ್ಗಿ ತಾಲೂಕಿನ ಸಾರ್ವಜನಿಕರಿಂದ 'ರಂಗ–ಸಂತ–ಜಂಗಮ' ಅಭಿನಂದನ ಗ್ರಂಥಸಮರ್ಪಣೆ, ಅಭಿನಂದನ ಗ್ರಂಥದ ಅಂತರಾಳ, ಹಲವು ವಿದ್ವಾಂಸರ ಲೇಖನಗಳ ಅಭಿಪ್ರಾಯ, ರಂಗಪ್ರೇಮಿಗಳ ಮೆಚ್ಚುಗೆನುಡಿ, ಆಲ್ದಾಳರ ರಂಗೋತ್ಸವ, ಆಲ್ದಾಳರ ಕವಿವಾಣಿ, ವಿಮರ್ಶೆ, ಆಲ್ದಾಳರಿಂದ ತಮ್ಮ ನೆಚ್ಚಿನ ಆತ್ಮೀಯರ ಬದುಕಿನ ಎಲ್ಲ ಘಟನಾವಳಿಗಳನ್ನು ಎಳೆಎಳೆಯಾಗಿ ಬಿಡಿಸಿ ಮಹಾ ಪ್ರಬಂಧ ರೂಪಿಸಲಾಗಿದೆ. ಇಲ್ಲಿ ಕಲೆ ಹಾಕಿದ ವಿವರಗಳು, ನಿರೂಪಿಸಿದ ರೀತಿ ಆಲ್ದಾಳರ ಬದುಕನ್ನು ಕಣ್ಣಿಗೆ ಕಟ್ಟುವಂತೆ ಮಾಡಿವೆ.

ನಾಲ್ಕನೇ ಅಧ್ಯಾಯ ಈ ಮಹಾಪ್ರಬಂಧದ ಮಹತ್ವದ್ದೆನ್ನಿಸಿದ ಹೃದಯ ಭಾಗವೆಂದರು ಸರಿ. ಆಲ್ದಾಳ ಅವರು ನಾಟಕಕಾರರಾಗಿ ರಚಿಸಲ್ಪಟ್ಟ ಒಟ್ಟು ಬರಹಗಳ ಪರಿಚಯ–ವಿಮರ್ಶೆ–ಮೌಲ್ಯಮಾಪನ ಕೊಡಲಾಗಿದೆ. ಆಲ್ದಾಳ ಅವರ ನಾಟಕಗಳಲ್ಲಿ, ಭಕ್ತಿ ಪ್ರಧಾನ ನಾಟಕಗಳು, ಸಾಮಾಜಿಕ ನಾಟಕಗಳು, ಕ್ರಾಂತಿಕಾರಕ ನಾಟಕ, ಐತಿಹಾಸಿಕ ನಾಟಕ, ಪತ್ತೆದಾರಿ ನಾಟಕಗಳು ಒಳಗೊಂಡಿದ್ದು, ನಾಟಕಗಳ ವಸ್ತು, ಪಾತ್ರ, ಸನ್ನಿವೇಶ–ಸಂಭಾಷಣೆ, ತಂತ್ರ, ಭಾಷೆ ಹಾಗೂ ಉದ್ದೇಶಗಳ ಹಿನ್ನಲೆಯಲ್ಲಿ ವಿವೇಚನೆಗೆ ಒಳಪಡಿಸಲಾಗಿದೆ. ಇದೇ ಅಧ್ಯಾಯದಲ್ಲಿ ಆಲ್ದಾಳರು ರಚಿಸಿರುವ, ಚರಿತ್ರೆಗಳು, ಪುರಾಣಗಳು, ವಚನಗ್ರಂಥ, ತ್ರಿಪದಿಗಳು, ತತ್ವಪದಗಳ ಸಂಕಲನ,

ನಾಮಾವಳಿಗಳ ಬಗ್ಗೆಯೂ ಬೆಳಕು ಹರಿಸಲಾಗಿದೆ. ಇಲ್ಲಿ ಅವರ ಸಾಹಿತ್ಯದ ಎಲ್ಲ ವೈಶಿಷ್ಟ್ಯಗಳನ್ನು ತಲಸ್ಪರ್ಶಿಯಾಗಿ ಗುರುತಿಸಲು ಪ್ರಯತ್ನಿಸಿರುವುದು ಅಪೇಕ್ಷಣೀಯವೆನಿಸಲಿದೆ.

ಐದನೆಯ ಅಧ್ಯಾಯದಲ್ಲಿ ಕನ್ನಡ ರಂಗಭೂಮಿಗೆ ಎಲ್.ಬಿ.ಕೆ.ಆಲ್ದಾಳರು ನೀಡಿರುವ ಒಟ್ಟು ಕೊಡುಗೆ ಶ್ರೇಷ್ಠತೆಯಿಂದ ಕೂಡಿದ್ದಾಗಿದೆ. ಒಟ್ಟು ಬರಹದ ರೂಪು–ರೇಷೆ ಅಡಕವಾಗಿದೆ. ಉತ್ತಮಸಾಹಿತಿಯಾಗಿ, ರಂಗಭೂಮಿಯ ನಟರಾಗಿ, ನಾಟಕಕಾರರಾಗಿ, ನಿರ್ದೇಶಕರಾಗಿ, ಜಾತಿ–ಮತ–ಪಂಥ, ಪ್ರದೇಶ, ವಯಸ್ಸು, ಲಿಂಗ ಭೇದಗಳೆಂದು ಎಣಿಸದೆ ಇರುವುದೇ ವಿಶೇಷ, ಬಡತನದ ಭೂತ ಬೆನ್ನಿಗೆ ಅಂಟಿದ್ದರೂ ಬದಿಗಿರಿಸಿ ಶರಣರ ಜೀವನ ಅವರ ಮಹಾತ್ಮೆಯನ್ನು ನಾಟಕದ ರೂಪದಲ್ಲಿಳಿಸಿ ಅದರಂತೆ ನಡೆದ, ನಡೆಯುತ್ತಿರುವ ಆಲ್ದಾಳರು 'ಸಾಹೇಬ' ಸಂಸ್ಕೃತಿಯಿಂದ 'ಶರಣ' ಸಂಸ್ಕೃತಿಗೆ ಹೆಜ್ಜೆ ಇರಿಸಿದ್ದಾರೆ. ರಂಗಭೂಮಿಯೇ ತಮ್ಮ ಆರಾಧ್ಯದೈವ ಎಂದಿದ್ದಾರೆ. ಇಳಿ ವಯಸ್ಸಿನಲ್ಲೂ ದೇಶದ, ನಾಡಿನ ಸಂಸ್ಕೃತಿಯನ್ನು ತಮ್ಮ ನಾಟಕಗಳಲ್ಲಿ ಮನಮಿಡಿಯುವಂತೆ ವಿವರಿಸಿದ್ದಾರೆ. ಇದರಿಂದಾಗಿ ನಾಟಕಗಳಿಗೆ ಜೀವ–ಭಾವ ತುಂಬಿದಂತಾಗಿದೆ. ಆಲ್ದಾಳರು ಬರೆಯದೇ ಬಿಟ್ಟ ಮಠವಿಲ್ಲ ಎನ್ನುವ ಮಾತು ನೂರಕ್ಕೆ ನೂರು ಸತ್ಯ. ಮಠಗಳೇ ಆಲ್ದಾಳರಿಗೆ ನಾಟಕ ಬರೆಯುವ ಆಶ್ರಯತಾಣಗಳಾದವು. ಅವರು ನಾಟಕರಂಗಕ್ಕೆ ಸಲ್ಲಿಸಿದ ಸೇವೆ, ನೀಡಿದ ಕೊಡುಗೆ ಮರೆಯುವಂತಿಲ್ಲ ಹೈದ್ರಾಬಾದ ಕರ್ನಾಟಕದ ಏಕಮೇವ ಅದ್ವಿತೀಯ ನಾಟಕಕಾರರೆಂದು ಕೀರ್ತಿಗಳಿಸಿದ್ದಾರೆ. ನಾಟಕಗಳ ಮೂಲಕ ಸಮಾಜದಲ್ಲಿ ತಂದ ಪರಿವರ್ತನೆ, ಬೀರಿದ ಪ್ರಭಾವ, ಜನಮನ್ನಣೆಗೆ ಪಾತ್ರವಾಗಿದೆ.

ಆರನೆಯ ಅಧ್ಯಾಯದಲ್ಲಿ ನಾಟಕದ ಸರ್ವಾಂಗೀಣ ವ್ಯಕ್ತಿತ್ವ ಮತ್ತು ಸಾಹಿತ್ಯದ ಮೌಲ್ಯಮಾಪನ ಮಾಡಲಾಗಿದೆ. ನಾಟಕಕ್ಕೆ ಭಾಷೆ ಮುಖ್ಯ. ನಾಟಕ ವೀಕ್ಷಕರಿಗೆ ಬೇಕಾಗಿದ್ದುದು ನಾಟಕದಲ್ಲಿನ ಪಾತ್ರಗಳ ಮಾತುಗಾರಿಕೆ, ಅವರುಗಳ ಅಭಿನಯ ಮುಖ್ಯವಾಗಿ ನಟನಾ ಶೈಲಿ ಎಂಬುದು ಮರೆಯಲಾಗದು.

ಬದುಕಿನಬವಣೆ, ಅಲ್ಲಿನ ಒಳ–ಹೊರಗನ್ನು ತಿಳಿಸಿಕೊಡುವಲ್ಲಿ ಆಲ್ದಾಳರು ನಾಟಕಗಳಲ್ಲಿ ಅಳವಡಿಸಿರುವ, ಅಧ್ಯಾತ್ಮ, ಹಾಸ್ಯ ಮಹತ್ವಪಡೆದಿವೆ. ಗ್ರಾಮೀಣ ವಾಸಿಗಳಿಗೂ ನಾಟಕ ಮನರಂಜನೆ ಜೊತೆಗೆ ಬದುಕುವ ಕಲೆಯನ್ನು ಬಿಂಬಿಸಿದೆ. ವಿವಿಧ ಪಾತ್ರಗಳ ಮೂಲಕ ಕನ್ನಡ, ಹಿಂದಿ, ಉರ್ದು, ಮರಾಠಿ, ಇಂಗ್ಲಿಷ, ತೆಲಗು, ಪದಗಳ ಬಳಕೆ ತಕ್ಕಹಾಗೆ ಮಾತಿನ ಶೈಲಿ ಮೆಚ್ಚುವಂತೆ ಮಾಡಿದ್ದಾರೆ. ಇನ್ನು ಮುಂದುವರಿದು ಪ್ರಬಂಧದ ಒಟ್ಟು ಫಲಿತಗಳನ್ನು ಕ್ರೋಢಿಕರಿಸಿ ಕೊಡಲಾಗಿದೆ. ಇದು ಆಲ್ದಾಳರ ಒಟ್ಟು ಬದುಕು ಮತ್ತು ಬರಹಗಳನ್ನು ಸಾರರೂಪದಲ್ಲಿ ಸಮಾರೋಪದಲ್ಲಿ ಭಟ್ಟಿ ಇಳಿಸಲಾಗಿದೆ. ಅನುಬಂಧದಲ್ಲಿ ಕೊಟ್ಟಿರುವ ನಾಟಕಗಳ ಪಟ್ಟಿ, ಆಲ್ದಾಳರ ಕೈಬರಹ, ಭಾವಚಿತ್ರಗಳು ಮಹಾಪ್ರಬಂಧದಲ್ಲಿ ಶೋಭಿಸುತ್ತಲಿವೆ. ಪರಾಮರ್ಶನ ಗ್ರಂಥ ಸೂಚಿ ಇದೆ. ಒಟ್ಟಾರೆ ಕನ್ನಡಭಾಷೆಗೆ, ಸಾಹಿತ್ಯಕ್ಕೆ, ಸಂಸ್ಕೃತಿಗೆ, ಇತರ ಭಾಷಾ ಸಂಸ್ಕೃತಿಗೆ ಸರಿತೂಗುವ ಸಾಮರ್ಥ್ಯವಿದೆ ಎಂದು ಉರ್ದು ಭಾಷಿಕ (ಮುಸ್ಲಿಂ)ರಾಗಿರುವ ಆಲ್ದಾಳರು ತೋರಿಸಿಕೊಟ್ಟವರಲ್ಲಿ ಒಬ್ಬರು.

# ಅಧ್ಯಾಯ – ೨
## ಕನ್ನಡ ರಂಗಭೂಮಿ ನಡೆದು ಬಂದದಾರಿ

**ನಾಟಕವನೋಡು ಬ್ರಹ್ಮಾಂಡ ರಂಗಸ್ಥಲದಿ**
**ಕೋಟಿ ನಟರಾಂತಿಹರು ಚಿತ್ರಪಾತ್ರಗಳ**
**ಆಟಕ್ಕೆ ಕಥೆಯಿಲ್ಲ ಮೊದಲಿಲ್ಲ ಕೊನೆಯಿಲ್ಲ**
**ನೋಟಕರು ಮಾಟಕರೆ – ಮಂಕುತಿಮ್ಮ**

ರಂಗಭೂಮಿಯು ಜನತಾ ಜನಾರ್ಧನರ ವಿಶ್ವವಿದ್ಯಾನಿಲಯವೆಂದರೆ ಉತ್ಪ್ರೇಕ್ಷೆಯ ಮಾತಲ್ಲ, ಕನ್ನಡದಲ್ಲಿ ರಂಗಭೂಮಿ ಎಂಬ ಪದವನ್ನು ಇಂಗ್ಲಿಷನಲ್ಲಿ 'ಥೇಟರ್' ಎಂಬ ಪದಕ್ಕೆ ಸಂವಾದಿಯಾಗಿ ಬಳಸಲಾಗುತ್ತದೆ. ಥೇಟರ್–ಎಂದರೆ, ನಾಟಕ ಗೃಹ, ರಂಗಭೂಮಿ, ಪ್ರದರ್ಶನಶಾಲೆ ಇತ್ಯಾದಿ. ಸಂಕ್ಷಿಪ್ತದಲ್ಲಿ ಹೇಳುವುದಾದರೆ, ಅಭಿನಯ ಕಲೆಯನ್ನು ಪ್ರದರ್ಶಿಸುವ ವೇದಿಕೆಯೇ ರಂಗಭೂಮಿ ಎಂದು ಕರೆಯಲಾಗುತ್ತದೆ.

ನಾಟಕವು ಧರ್ಮಕ್ಕಿಂತ ಪ್ರಾಚೀನವಾದುದು. ಮನುಷ್ಯನಿಗೆ ಧರ್ಮಾಚರಣೆಗಳ ವಿಚಾರ ಹೊಳೆಯುವುದಕ್ಕಿಂತ ಪೂರ್ವದಲ್ಲಿಯೇ ನಾಟಕದ ಉದಯವಾಗಿತ್ತೆಂದು ಹೇಳಲಾಗಿದೆ.

ನಾಟಕ–ಎಂಬ ಪದವು ಸಂಸ್ಕೃತದ 'ನೃತ್' ಎಂಬ ಧಾತುವಿನಿಂದ ಬಂದಿದೆ.

ನೃತ್ಯ–ನಟ್ –ಅಂದರೆ 'ಕುಣಿ' ಎಂದರ್ಥ. ಆದ್ದರಿಂದ ನೃತ್ಯ–ನಾಟಕ ಎಂಬ ಶಬ್ದಗಳಿಗೆ ಮೂಲತಃ ಕುಣಿತ ಎಂದರ್ಥ.

ಹೀಗೆ 'ಕುಣಿತ' ಪ್ರಧಾನವಾಗಿದ್ದ ನಾಟ್ಯ ಕ್ರಮೇಣ ಸಂಭಾಷಣೆ ಹಾಗೂ ಸಂಗೀತ ಪರಿಕರಗಳೊಂದಿಗೆ ನಾಟಕ ಎಂದೆನ್ನಿಸುತ್ತದೆ. ಒಟ್ಟಾರೆ ಹೇಳಬೇಕೆಂದರೆ, ನಾಟಕ ಮತ್ತು ರಂಗಭೂಮಿ ಹೂವು ಮತ್ತು ಸುವಾಸನೆ, ಹಾಲು ಮತ್ತು ರುಚಿ, ಸಂಗೀತ ಮತ್ತು ಸುಖ, ಬೆಳದಿಂಗಳು ಮತ್ತು ತಂಪು, ಮಂದ ಮಾರುತ ಮತ್ತು ಆನಂದ – ಇವುಗಳು ಹೇಗೆ ಪರಸ್ಪರ ಅವಿನಾಭಾವದಿಂದ ಕೂಡಿವೆಯೋ ಹಾಗೆಯೇ ಇವು ಮೆಳೈಸಿವೆ.

**ಕನ್ನಡ ರಂಗಭೂಮಿಯ ಇತಿಹಾಸ :**

ಕನ್ನಡ ರಂಗಭೂಮಿ ಇವತ್ತು ನಿನ್ನೆಯದಲ್ಲ. ರಂಗಭೂಮಿಯ ಇತಿಹಾಸವು ಅತಿಪುರಾತನವಾದುದ್ದು ಕ್ರಿ . ಶ. ೭–೮ ನೇ ಶತಮಾನದಿಂದ ರಂಗಭೂಮಿ ಪ್ರಾರಂಭವಾಗಿದೆ ಎಂದು ಶಾಸನಗಳ ಆಧಾರದಿಂದ ತಿಳಿದು ಬರುತ್ತದೆ. ಕನ್ನಡ ರಂಗಭೂಮಿಯ ವಿಕಾಸವಾದದ್ದು ಜನಪದ ರಂಗಭೂಮಿಯ ಪರಂಪರೆಯ ಮೂಲಕವೆ. ಜನಪದ, ನೃತ್ಯ, ಕುಣಿತ, ಗೊಂಬೆಯಾಟ, ಬಯಲಾಟ, ದೊಡ್ಡಾಟ, ಯಕ್ಷಗಾನಗಳ ಮೂಲಕ ನಾಟಕ ಕಲೆಯು ಬೆಳೆದು ಬಂದಿತು. ಅರಿಸ್ಟಾಟಲನ ಪ್ರಕಾರ, "ನಾಟಕ ಎನ್ನುವುದು ಒಂದು ಕ್ರಿಯೆಯ ಅನುಕರುಣೇ" ಎಂದು ಅಭಿಪ್ರಾಯ ಪಡುತ್ತಾರೆ. ಮಾನವಯಾವಾಗ "ಅನುಕರುಣ ಮತ್ತು ರಂಜನೆಗಳಿಗೆ ಒಂದು ಬುದ್ಧಿ ಪೂರ್ವಕ ನಿರ್ಧಿಷ್ಟ ಸ್ವರೂಪವನ್ನು ಕೊಡುವನೊ, ಆ ಸ್ವರೂಪವನ್ನು ಕೊಡಲು ಕಲ್ಪನಾ ಶಕ್ತಿಯೂ ಪ್ರೇರಕವಾಗುವುದು ಬುದ್ಧಿಶಕ್ತಿ ಮತ್ತು ಕಲ್ಪನಾಶಕ್ತಿ ಬೆಳೆದಂತೆ ಕಾಲಕಾಲಕ್ಕೆ ರಂಗ ಭೂಮಿಯೂ ಬೆಳೆಯುವುದು" [೧]

ಕನ್ನಡ ರಂಗಭೂಮಿಯ ಇತಿಹಾಸವನ್ನು ಅವಲೋಕಿಸಿದಾಗ ಈ ಕೆಳಗಿನ ಅಂಶಗಳು ಗಮನಕ್ಕೆ ಬರುತ್ತವೆ.

* ಕ್ರಿ.ಶ.ಪೂರ್ವ ೧೫೦ ಸುಮಾರಿನಲ್ಲಿ ರಚನೆಯಾದ ಪತಂಜಲಿಯ ಮಹಾಭಾಷ್ಯದಲ್ಲಿ ಕಂಸವಧೆ ಮುಂತಾದ ನಾಟಕಗಳ ಉಲ್ಲೇಖವಿದೆ" [೨]
* ಕರ್ನಾಟಕದಲ್ಲಿ ನಾಟಕದ ಹಳಮೆಯನ್ನು ವಿವೇಚಿಸುವಾಗ "ಕನ್ನಡದಲ್ಲಿ ಮೊದಲು 'ನಾಟಕ'ಎಂಬ ಪದ ಕ್ರಿ.ಶ.೯೩ ರಲ್ಲಿ ರಚಿತವಾದ ರನ್ನನ ಅಜೀತನಾಥ ಪುರಾಣದಲ್ಲಿ ಕಂಡುಬರುತ್ತದೆ". [೩]
* "ಸಾವಿರಾರು ವರ್ಷಗಳ ಕರ್ನಾಟಕ ಇತಿಹಾಸದಲ್ಲಿ ನೃತ್ಯ ನಾಟಕ ಪ್ರಧಾನವಾದ ರಂಗ ಭೂಮಿಯಿತ್ತೆಂದು ತಿಳಿಯಲು ಆಧಾರಗಳಿವೆ". [೪]
* ಕ್ರಿ.ಶ. ೫೫೦ ಪ್ರನ್ನಾಳ ಶಾಸನದಲ್ಲಿ; ನಟ ಮತ್ತು ನಟನೆ ಶಬ್ದಗಳ ಬಳಕೆಯಾಗಿದೆ.
* ಕ್ರಿ.ಶ. ೭ನೇಯ ಶತಮಾನದಲ್ಲಿ ಪಲ್ಲವರ ಮಹೇಂದ್ರವರ್ಮನು ಪ್ರಹಸನದ ಬಗ್ಗೆ ಹೇಳಿದ್ದಾನೆ.
* ಐಹೊಳೆ ಶಾಸನದಲ್ಲಿ 'ಕಾಳಿದಾಸನ' ಹೆಸರು ಮೂಡಿದೆ.
* ಕ್ರಿ.ಶ. ೮ನೇಯ ಶತಮಾನದಲ್ಲಿ ಪಟ್ಟದಕಲ್ಲಿನ ಶಾಸನದಲ್ಲಿ ಕೆಲವು ನಟರ ಹೆಸರು ಬಂದಿದೆ.
* ಕ್ರಿ.ಶ. ೧೦೭೦ ರಲ್ಲಿ ನಟನಾ ಶಾಲೆಗಳಿದ್ದವು ಆಗ ಕಲೆ ಎಂಬುದು ಸಾಂಘಿಕ ನೆಲೆ ಪಡೆದುಕೊಂಡು ಸಾಂಘಿಕರೂಪ ಪಡೆಯಿತು. ಕಲೆ ಎಂಬುದು ಶಾಲೆಯಾಗಿ ಪರಿಣಮಿಸಿತು.
* ೧೩ನೆಯ ಶತಮಾನಕ್ಕೆ ನಾಟಕವು ರಾಜಾಶ್ರಯ ಪಡೆಯಿತು. ೧೨೨೫ರಲ್ಲಿ ರಂಗಭೂಮಿಗೆ ಒಂದು ಚೌಕಟ್ಟು ಸಿಕ್ಕಿತು.
* ಕನ್ನಡ ರಂಗಭೂಮಿಗೆ ಸಂಸ್ಕೃತ ನಾಟಕಗಳು ಪ್ರಭಾವ ಬೀರಿದವು. ಈ ನಾಟಕದಿಂದಾಗಿ ಕನ್ನಡದಲ್ಲಿಯೂ ಒಂದು ರಂಗಭೂಮಿಯ ನಿರ್ಮಾಣ ಸಾಧ್ಯವಾಯಿತು.
* "ಕನ್ನಡದಲ್ಲಿ ಸುಮಾರು ೮–೯ ನೇಯ ಶತಮಾನದಿಂದ ನಾಟಕ ಪ್ರದರ್ಶನಗಳು ನಡೆಯುತ್ತಿದ್ದಿರಬೇಕು" [೫] ಎನ್ನುವ ಅಭಿಪ್ರಾಯಗಳು ಎಂ.ಗೋವಿಂದಪೈ ಅವರವಾದಗಳಿಗೆ ಆಧಾರ ಒದಗಿಸುತ್ತವೆ.
* ರಾಮಚಂದ್ರರಾಯರು, ಚುರುಮುರಿ ಶೇಷಗಿರಿರಾಯರು ರಂಗಭೂಮಿಯ ಮೂಲಕ ಮನುಷ್ಯನ ಮೇಲೆ ದೈವ, ಸುದೈವ, ದುರ್ದೈವ ಇವುಗಳನ್ನು ಪ್ರಯೋಗ ಮಾಡಿದರು.
* ೧೬೮೦ ರಲ್ಲಿ ನಾಟಕ ರಂಗಭೂಮಿಯ ಮೇಲೆ ಇಂಗ್ಲೀಷರು ಮತ್ತು ಗ್ರೀಕರ ದುರಂತ ನಾಟಕಗಳು ಪ್ರಭಾವ ಬೀರಿದವು.
* ೧೭ನೆಯ ಶತಮಾನದಲ್ಲಿ ಸಿಂಗರಾರ್ಯನಿಂದ ರಚಿತವಾದ 'ಮಿತ್ರವಿಂದ ಗೋವಿಂದ' ನಾಟಕವೊಂದನ್ನು ಹೊರತುಪಡಿಸಿದರೆ, ಬಹುಶಃ ಆಧುನಿಕ ಕಾಲಘಟ್ಟವನ್ನು ತಲುಪುವವರಿಗಿನ ರಂಗಭೂಮಿಯ ಇತಿಹಾಸವು ಕಾರ್ಗತ್ತಲೆಯಿಂದ ತುಂಬಿ ಹೋದಂತೆ ಭಾಷವಾಗುತ್ತದೆ.

"ಕ್ರಿ.ಶ.೧೫ನೇ ಶತಮಾನದ ಕುಮಾರವ್ಯಾಸ, ೧೬ ನೇ ಶತಮಾನದ ರತ್ನಾಕರವರ್ಣಿ ಜನಸಾಮಾನ್ಯರ ರಂಜನೆಗಾಗಿ ಅಭಿನಯಿಸಲಾಗುತ್ತಿದ್ದ ನಾಟಕ ವಿಶೇಷಗಳನ್ನು ಕುರಿತು ಪ್ರಸ್ತಾಪಿಸಿದ್ದಾರೆ. ಬಹುಶಃ ೧೫ನೇ ಶತಮಾನದಲ್ಲಿದ್ದಿರಬಹುದಾದ ನಿಜಗುಣ ಶಿವಯೋಗಿಗಳು 'ಶುದ್ಧದೇಶಿ' ಎನ್ನಬಹುದಾದ ಶೈಲಿಯಲ್ಲಿ ರಚಿತವಾದ ಜನಪದರೂಪಗಳನ್ನು ಸೂಚಿಸಿದ್ದಾರೆ.

ಇವೆಲ್ಲ ಸೂಚನೆಗಳಿಂದ ಯಕ್ಷಗಾನ ಅಥವಾ ಅದನ್ನು ಹೋಲುವಂಥ ನಾಟ್ಯ ಭೇದವೊಂದು ಅಸ್ತಿತ್ವದಲ್ಲಿತ್ತೆಂದು ಖಚಿತವಾಗುತ್ತದೆ".[೬]

"ಪೌರಾಣಿಕರು ಹಿಂದಿನಿಂದಲೂ ಪುರಾಣಗಳನ್ನು ಹೇಳುತ್ತಿದ್ದರು. ಪಾಠಕರು ಪ್ರಾಯಶಃ ಓದುತ್ತಿದ್ದರು. ಧಾರಕರು ಅವರು ಓದಿದ್ದನ್ನು ವಿವರಿಸುತ್ತಿದ್ದರು ಕಥಕರು, ಅಭಿನಯ ನೃತ್ಯ, ಗೀತವಾದ್ಯಗಳೊಡನೆ ಅದನ್ನು ರಸವತ್ತಾಗಿ ಮಾಡಿ ಪ್ರತಿಪಾದಿಸುತ್ತಿದ್ದರು. ಸಂಭಾಷಣೆ ಸೇರಿದರೆ ಸಾಕು ಅದು ನಾಟಕವಾಗುವುದಕ್ಕೆ ಸಿದ್ಧವಾಗುತ್ತಿತ್ತು".[೭] ಪೌರಾಣಿಕ ಗ್ರಂಥದಲ್ಲಿ ಬರುವ ಹಲವಾರು ಪ್ರಸಂಗಳನ್ನಾಯ್ದುಕೊಂಡು ವಿವಿಧ ರೂಪಗಳಲ್ಲಿ ಎರಕ ಹೊಯ್ದು ಪ್ರದರ್ಶಿಸುವ ಪರಂಪರೆ ಆರಂಭವಾಗಿರಬೇಕು.

೧೫೧೪ರ ಕರ್ನೂಲಿನ ಚೆರವು ಬೆಳಗಲ್ಲ ಶಾಸನವು ಪ್ರಸ್ತಾಪಿಸಿದ ವಿಜಯನಗರ ಆಸ್ಥಾನದಲ್ಲಿ ಪ್ರದರ್ಶನಗೊಂಡ 'ತಾಯಿಕುಂದ ನಾಟಕ'ದ ವಿಷಯವು ಸಾಕ್ಷಿ ನುಡಿಯುತ್ತದೆ".[೮]

**ಹವ್ಯಾಸಿ ರಂಗಭೂಮಿ:**

'ಆಧುನಿಕ ಕನ್ನಡನಾಟಕ' ಮತ್ತು 'ಹವ್ಯಾಸಿ ರಂಗಭೂಮಿ' ಎರಡು ಒಂದೇ ನಾಣ್ಯದ ಎರಡು ಮುಖಗಳು ಅವುಗಳಿಗೆ ಪ್ರತ್ಯೇಕ ಅಸ್ತಿತ್ವಇಲ್ಲ ಜೀವ-ದೇಹದಂತೆ ಎರಡೂ ಅಭಿನ್ನವಾದವು, ಆಧುನಿಕ ಕನ್ನಡ ನಾಟಕಕ್ಕೆ ಪ್ರಯೋಗದ ಮೂಲಕ ಸಾರ್ಥಕವಾಗಲು ಅವಕಾಶ ಕಲ್ಪಿಸಿದ ರಂಗ ಭೂಮಿಯೇ ಹವ್ಯಾಸಿ ರಂಗಭೂಮಿ. ವೃತ್ತಿರಂಗಭೂಮಿಯನ್ನು ಕುರಿತ ವಿದ್ಯಾವಂತ ಮಧ್ಯಮ ವರ್ಗದ ಅತೃಪ್ತಿಯೇ ಹವ್ಯಾಸಿ ರಂಗಭೂಮಿಯ ಉದಯಕ್ಕೆ ಮುಖ್ಯಕಾರಣ".[೯]

೧೯೧೦ರ ಸುಮಾರಿಗೆ ಕನ್ನಡದ ಆಧುನಿಕ ನಾಟಕಗಳ ಕಾಲ ಆರಂಭದ ಲಕ್ಷಣವು ಕಂಡು ಬಂದಿತ್ತು. ಪಾಶ್ಚಾತ್ಯ ಮತ್ತು ವೃತ್ತಿ ರಂಗಭೂಮಿಯಿಂದ ನಾಟಕವು 'ಹವ್ಯಾಸ'ದತ್ತ ಹೊರಳಿತು. ಧಾರವಾಡದ 'ಭರತ ಕಲೋತ್ತೇಜಕ ಸಂಗೀತ ಸಮಾಜ' (೧೯೦೫) ಹಾಗೂ ಬೆಂಗಳೂರಿನ 'ಅಮೆಚೂರ ಡ್ರಾಮಾಟಿಕ್' ಅಸೋಸಿಯೇಶನ್' (೧೯೦೯) ಈ ಎರಡು ಸಾಂಸ್ಕೃತಿಕ ಸಂಸ್ಥೆಗಳು ಹವ್ಯಾಸಿ ನಾಟಕ ಪರಂಪರೆಯನ್ನು ಪ್ರಾರಂಭಿಸಿದವು.

ಹವ್ಯಾಸಿ ರಂಗಭೂಮಿಗೆ ವಿಶಿಷ್ಟ ಕಾಣಿಕೆ ನೀಡಿದ ಕೀರ್ತಿಯು ಹೆಗ್ಗೋಡದ 'ನೀನಾಸಂ' ಸಂಸ್ಥೆಯ ಕೆ.ವಿ. ಸುಬ್ಬಣ್ಣನವರಿಗೆ ಸಲ್ಲುತ್ತದೆ. ಕರ್ನಾಟಕ ಸರ್ಕಾರ ಆರಂಭಿಸಿದ 'ಮೈಸೂರಿನ ರಂಗಾಯಣ'ದ ಕಾರ್ಯವೂ ಸ್ಮರಣಾರ್ಹ, ಎನ್ಕೆ, ಪರ್ವತವಾಣಿ, ಕ್ಷೀರಸಾಗರ, ಕೈವಾರ ರಾಜಾರಾವ, ಎ.ಎಸ್.ಮೂರ್ತಿ, ಬೀಚಿ, ಬೇಂದ್ರೆ, ಕೆ.ಗುಂಡಣ್ಣಾ, ದಶರಥ ದೀಕ್ಷಿತ-ಇವರೆಲ್ಲ ಏಕಾಂಕ ನಾಟಕ ರಚನೆಯ ಮೂಲಕ ನಾಟಕ ಕ್ಷೇತ್ರವನ್ನು ಸಮೃದ್ಧಗೊಳಿಸಿದವರು.

ವೃತ್ತ ಪತ್ರಿಕೆಗಳು, ವಿಶೇಷವಾಗಿ 'ರಂಗತೋರಣ', 'ನಟನ', 'ಸೂತ್ರಧಾರ', 'ಸಾಕ್ಷಿ', 'ಶೂದ್ರ', ರಂಗಮಂಟಪ' ಮೊದಲಾದ ಪತ್ರಿಕೆಗಳ ವರದಿ ಮಾಡುವುದರೊಂದಿಗೆ ನಾಟಕದ ಉತ್ಕರ್ಷೆಗೆ ಕಾರಣವಾದವು.

**ವೃತ್ತಿ ರಂಗಭೂಮಿ :** 'ವೃತ್ತಿ' ಎಂಬ ಪದವು ಉದ್ಯೋಗ. ಕೆಲಸ, ಕಸಬು, ಜೀವನೋಪಾಯ ಎಂಬ ಅರ್ಥಗಳನ್ನು ಸ್ಫುರಿಸುತ್ತದೆ. ಈ ದೃಷ್ಟಿಯಿಂದ ವೃತ್ತಿ ರಂಗಭೂಮಿಯ ಚರಿತ್ರೆಯನ್ನು ಅವಲೋಕಿಸಿದರೆ ಅನೇಕ ರಂಗ ಮಂಡಳಿಯ ಮಾಲೀಕರು ಕಂಪನಿಗಳನ್ನು ಹುಟ್ಟುಹಾಕಿ ನಾಟಕ

ಪ್ರದರ್ಶಿಸುವುದನ್ನು ವೃತ್ತಿಯನ್ನಾಗಿ ಮಾಡಿಕೊಂಡಿದ್ದರಿಂದ ಇದನ್ನು, 'ವೃತ್ತಿರಂಗಭೂಮಿ' ಎಂದು ಕರೆಯಲಾಗಿದೆ. ರಂಗಭೂಮಿಯ ವ್ಯಾಪಾರಿ ಮನೋಭಾವನೆಯನ್ನು ಅನುಸರಿಸುತ್ತಿದ್ದುದರಿಂದ ಇದನ್ನು 'ಕಮರ್ಶಿಯಲ್ ಥೇಟರ್' ಜೊತೆಗೆ ಹೊಸ-ಹೊಸರಂಗ ಪ್ರಯೋಗಗಳನ್ನು ಬಳಕೆಗೆ ತಂದು ಪ್ರದರ್ಶನಗೊಳ್ಳುತ್ತಿದ್ದುದರಿಂದ 'ಮಾಡರ್ನ್‌ಥೇಟರ್' ಎಂದು ಕರೆದಿದ್ದಾರೆ. ಪಾಶ್ಚಿಮಾತ್ಯ ದೇಶಗಳಲ್ಲಿ ಪ್ರಪಚಲಿತವಿದ್ದ ಈ ವ್ಯವಸ್ಥೆ ಭಾರತಕ್ಕೆ ನವೀನವಾದುದು.

"ಅಭಿಜಾತ ರಂಗಭೂಮಿಗೆ ಸಂಸ್ಕೃತ ರಂಗಭೂಮಿ ಪ್ರೇರಕವಾದರೆ, ಜನಪದರಂಗಭೂಮಿ ದೇಶಿ ಪರಂಪರೆಯಲ್ಲಿಯೇ ಮೈದಾಳಿ ನಮ್ಮ ನೆಲದ ಸಾರಸ್ವತವನ್ನು ಹೀರಿ ಬೆಳೆದದ್ದು, ಇವೆರಡರ ಬೆರಕೆಯಿಂದ ಅನಾವರಣಗೊಂಡದ್ದು ವೃತ್ತಿರಂಗಭೂಮಿ".[೯] ಕನ್ನಡ ನಾಟಕ ಸಾಹಿತ್ಯ ಇತರ ಕಾವ್ಯ ಪ್ರಕಾರಗಳಂತೆ ಅತಿ ಪ್ರಾಚೀನವಾದುದು. ಆದ್ದರಿಂದಲೇ ಪ್ರಸಿದ್ಧ ಸಂಶೋಧಕರಾದ ಗೋವಿಂದ ಪೈಯವರು "ಕ್ರಿ.ಶ.೯-೧೦ ನೇ ಶತಮಾನಗಳಲ್ಲೇ ಸಾಹಿತ್ಯೋಚಿತ ಕನ್ನಡ ನಾಟಕಗಳು, ವೈಭವ ಜೀವನ ತಾಳಿದ ರಂಗಭೂಮಿಯು ಕನ್ನಡ ಸೀಮೆಯಲ್ಲಿ ರಾರಾಜಿಸುತ್ತಿದ್ದವು".[೧೦] ಎಂದು ಹೇಳಿದ್ದು ಈ ಮಾತಿಗೆ ಸಾಕ್ಷಿಯಾಗಿದೆ. ಮಧ್ಯಮ ವರ್ಗದ ಜನತೆಗಂತೂ ಈ ವೃತ್ತಿರಂಗವು ಅತ್ಯಂತ ಸಂತೋಷವನ್ನುಂಟುಮಾಡಿತು.

ರಂಗಭೂಮಿಯ ಕಲ್ಪನೆ ಭಾರತೀಯರಿಗೆ ಮತ್ತು ಕನ್ನಡಿಗರಿಗೆ ಹೊಸತೇನು ಅಲ್ಲ. ಕಲಾರಾಧನೆಯ ಹೊಸ ಪ್ರಯೋಗಗಳಿಗೆ ಜನ್ಮಭೂಮಿ ಎನ್ನಿಸಿದ ಬಂಗಾಳ ಭಾರತದ ವೃತ್ತಿರಂಗಭೂಮಿಯ ಜನನಿ ಎನಿಸಿದೆ. ಈ ಹಿನ್ನಲೆಯಲ್ಲಿ, "ಬಂಗಾಲಿಯ ಮತ್ತು ಭಾರತೀಯ ಆಧುನಿಕ ಭಾಷೆಗಳ ರಂಗಭೂಮಿಯ ಜನ್ಮದಿನವೆಂದರೆ ೨೭.೧೧.೧೭೯೫ ಎನ್ನಬಹುದು".[೧೧] ಕಲಕತ್ತೆಯ ಲಾಲಬಜಾರ ಬೀದಿಯಲ್ಲಿ 'ದಿ ಪ್ಲೇ ಹೌಸ್' ರಂಗ ಮಂದಿರ ಆರಂಭವಾಯಿತು. ಇದು ಭಾರತದಲ್ಲಿ ಅಂಕುರಗೊಂಡ ಮೊಟ್ಟಮೊದಲ ರಂಗ ಮಂದಿರವಾಯಿತು.

ಮರಾಠಿ ರಂಗಭೂಮಿಯ ಪಿತಾಮಹನೆಂದೇ ಹೆಸರುಪಡೆದ ವಿಷ್ಣುದಾಸ ಭಾವೆಯವರು "ಮರಾಠಿ ರಂಗಭೂಮಿಯ, ಕನ್ನಡ ನಾಟಕ ಕಲೆಯ ನಿರ್ದೇಶನದಿಂದ ನಿರ್ಮಾಣವಾಯಿತು"[೧೨] ಎಂದು ಉದ್ಗರಿಸಿರುವುದು ಗಮನಿಸಬೇಕಾದ ಸಂಗತಿ. ಮರಾಠಿ ರಂಗಭೂಮಿಯ ಮೇಲೆ ಕನ್ನಡ ರಂಗಭೂಮಿಯು ಪರಿಣಾಮ ಬೀರಿದರೂ ಸಹ ನಮ್ಮ ರಂಗಭೂಮಿ ಬೆಳೆಯಲಿಲ್ಲ ಆದಿಯಲ್ಲಿ ಕನ್ನಡಿಗರು ಮರಾಠಿ ನಾಟಕಗಳ ಹಾವಳಿಗೆ ತುತ್ತಾದರು. ಅನಿವಾರ್ಯವಾಗಿ ಕನ್ನಡ ನಾಟಕಗಳು ಮರೆಯಾಗುವ ಸ್ಥಿತಿಗೆ ತಲುಪಿತು. "ಕನ್ನಡದ ನೆಲದಲ್ಲಿ ಮರಾಠಿ ರಂಗಭೂಮಿಯ ಅಭ್ಯುದಯ ಕರ್ನಾಟಕದ ಸಾಂಸ್ಕೃತಿಕ ದಾರಿದ್ರ್ಯವನ್ನು ಮೂದಲಿಸುವಂತಿದ್ದು ಕನ್ನಡದ ಹಿತಚಿಂತಕರಿಗೆ ಕಳವಳ ಉಂಟಾಯಿತು. ಎಲ್ಲಿ ನೋಡಲು ಮರಾಠಿಯ ನಾಟಕ ಮಯಂ ತಾನಾಯ್ತು ಕರ್ನಾಟಕಂ"[೧೩] ಎಂದು ಶಾಂತಕವಿಗಳು ತಮ್ಮ ಅಂತರಂಗದ ಅಳಲನ್ನು ಹೊರಗೆಡಹಿದ್ದಾರೆ.

ಕನ್ನಡ ರಂಗಭೂಮಿಯ ದುರವಸ್ಥೆಯನ್ನು ಕಂಡು ಕನ್ನಡಾಭಿಮಾನಿಗಳಾದ ಕೆಲ ಮಹನೀಯರು ಇದನ್ನು ತಡೆಗಟ್ಟಲು ಕಂಕಣಬದ್ಧರಾಗಿ ನಿಂತುಕೊಂಡರು. 'ಕರ್ನಾಟಕ ನಾಟಕ ಪ್ರಥಮಗುರು' ಎಂಬ ಕೀರ್ತಿಗೆ ಭಾಜನರಾದ ಶಾಂತಕವಿಗಳು ಇದರ ಮುಂದಾಳತ್ವ ವಹಿಸಿದರು. ಈ ಎಲ್ಲ ಕಾರಣಗಳಿಂದಾಗಿ ಉತ್ತರ ಕರ್ನಾಟಕದಲ್ಲಿ ವೃತ್ತಿರಂಗಭೂಮಿಯು ಜನ್ಮ ತಾಳಲು ಸಾಧ್ಯವಾಯಿತು. ಸಕ್ಕರಿ ಬಾಳುಚಾರ್ಯರು ನಮ್ಮ ಸಂಸ್ಕೃತಿ ಮತ್ತು ಭಾಷೆಯ ಮೇಲಾಗುತ್ತಿರುವ ಶೋಷಣೆಯನ್ನು ಕಂಡು ಕಿಡಿಕಾರಿದರು. ವರಕವಿ ದ.ರಾ.ಬೇಂದ್ರೆಯವರು ತಮ್ಮ ಸಾಹಿತ್ಯ ಸಂಶೋಧನೆ ಎಂಬ ಗ್ರಂಥದಲ್ಲಿ "ಬಂಡಾಯವೆಂದು ಕರೆಯಲ್ಪುಡುವ ಸ್ವಾತಂತ್ರ್ಯ ಯುದ್ಧವೆಂಬ ನೇಗಿಲಿನಿಂದ ಭಾರತ ಭಾಗ್ಯ ವಿಧಾತನು ಹಿಂದುಸ್ಥಾನದ ಕ್ಷೇತ್ರ ಶುದ್ಧಿಯನ್ನು ನಡೆಸಿದ್ದನು. ಇಂಥ

ಸಂಧಿಕಾಲಕ್ಕೆ ೧೫ನೇ ಜನೆವರಿ ೧೮೫೭ ರ ಪಿಂಗಳನಾಮ ಸಂವತ್ಸರದಲ್ಲಿ ಶಾಂತ ಕವಿಗಳು ಜನ್ಮವೆತ್ತಿದರು. ಅಲ್ಲಿಂದ ಮುಂದೆ ಹತ್ತು ಹದಿನೈದು ವರ್ಷಗಳೊಳಗಾಗಿಯೇ ಭಾರತಕ್ಕೆ ಭೂಷಣವನ್ನು ತಂದಿರುವ ಎಲ್ಲ ಮಹಾತ್ಮರು ಬೇರೆ, ಬೇರೆ ಪ್ರಾಂತಗಳಲ್ಲಿ ಅವತರಿಸಿರುವರು".[೧೪] ಈ ಕಾಲಘಟ್ಟದಲ್ಲಿ ಭಾರತಕ್ಕೆ ಸ್ವಾತಂತ್ರ್ಯ ತಂದು ಕೊಡಲು ಹೆಣಗಿದ ವ್ಯಕ್ತಿಗಳು ಮತ್ತು ಕರ್ನಾಟಕದಲ್ಲಿ ಕನ್ನಡಕ್ಕಾಗಿ ಮನಮಿಡಿಯುವ ವ್ಯಕ್ತಿಗಳ ಜನನವಾದುದ್ದು ವಿಶೇಷ.

ಶಿವಮೂರ್ತಿಸ್ವಾಮಿ ಕಣಬರ್ಗಿ ಮಠ ಅವರ ಕೊಣ್ಣೂರು ಕಾಡಸಿದ್ಧೇಶ್ವರ ಕಂಪನಿಯು ರಂಗಭೂಮಿಯಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ತಂದಿತು. ಸ್ತ್ರೀಪಾತ್ರಗಳಿಗೆ ಮೊದಲ ಬಾರಿಗೆ ರಂಗದ ಮೇಲೆ ತಂದಿದ್ದು ಪ್ರಥಮ ಬಾರಿಗೆ ವಿದ್ಯುತ್ ದೀಪಗಳನ್ನು ಅಳವಡಿಸಿದ್ದು ಪ್ರೇಕ್ಷಕರಿಗೆ ನಾಟಕ ಮನಸ್ಸಿಗೆ ಹಿತಕಾರಿಯಾಗಿ ಪರಿಣಮಿಸುತ್ತಿತ್ತು. ಈ ಕಂಪನಿಯ ಕುರಿತು ಮುದವೀಡು ಕೃಷ್ಣರಾಯರು, "ಕನ್ನಡ ನಾಡಿನ ರಂಗಭೂಮಿಯ ಕಡೆಗೆ ಯಾರೂ ನೋಡಲಾಗದಿದ್ದ ಕಾಲದಲ್ಲಿಯೂ ಶ್ರೀ ಶಿವಮೂರ್ತಿ ಸ್ವಾಮಿಗಳು ಮಿತಿ ಮೀರಿ ಮಾಡಿದ ಈ ಪ್ರಯತ್ನವು ಕನ್ನಡ ರಂಗಭೂಮಿಯ ಈ ಭಾಗದ ಇತಿಹಾಸದಲ್ಲಿ ಚಿರಸ್ಮರಣೀಯವಾಗಿ ಉಳಿಯುವಂತಹದ್ದು".[೧೫] ಎಂಬ ಮಾತುಗಳು ಮನನೀಯವಾಗಿವೆ.

೧೯೧೨ರಲ್ಲಿ ಹಲಗೇರಿ ಗ್ರಾಮದ 'ಶ್ರೀ ಹಾಲಸಿದ್ಧೇಶ್ವರ ನಾಟಕ ಮಂಡಳಿ' ತನ್ನ ನಾಟಕ ಪ್ರಯೋಗಗಳ ಮೂಲಕ ತನ್ನ ಅಸ್ತಿತ್ವವನ್ನು ಉಳಿಸಿತು. ಇದು ಸಾಮಾಜಿಕ ನಾಟಕಗಳ ಪ್ರಯೋಗದಲ್ಲಿ ಹೆಸರುಗಳಿಸಿತು.

೧೯೨೧ ರಲ್ಲಿ ಚಿಕ್ಕೋಡಿ ಶಿವಲಿಂಗ ಶಾಸ್ತ್ರಿಗಳು 'ಶಿವಲಿಂಗೇಶ್ವರ ನಾಟಕ ಮಂಡಳಿಯನ್ನು ಹುಟ್ಟುಹಾಕಿದರು. ಶಾಸ್ತ್ರಿಗಳು ಸ್ವತಃ ನಟರಾಗಿ ಸೌಭದ್ರ, ಗುಂಡಮಾರಯ್ಯ ಎಂಬ ನಾಟಕಗಳನ್ನಾಡಿ ಯಶಸ್ವಿ ಪಡೆದರೂ ಮುಂದೆ ಅನೇಕ ಅಡೆ–ತಡೆಗಳನ್ನು ಎದುರಿಸುವಂತಾಯಿತು. ೧೯೩೧ ರಲ್ಲಿ ಮತ್ತೇ 'ಶ್ರೀ ಮಾರಿಕಾಂಬಾ ಪ್ರಾಸಾದಿಕ ನಾಟಕ ಮಂಡಳಿ'ಗೆ ಜನ್ಮ ನೀಡಿ, ಕಿತ್ತೂರ ಚೆನ್ನಮ್ಮ', ಕಿತ್ತೂರು ರುದ್ರಮ್ಮ' ನಾಟಕಗಳನ್ನು ಪ್ರದರ್ಶಿಸಿದರು ಬಸವರಾಜ ಮನ್ಸೂರ, ಏಣಗಿಬಾಳಪ್ಪ, ಬೇವೂರ, ಮುರಗೋಡ ಗಂಗಾಧರಪ್ಪ, ಪ್ಯಾರಾಬಾಯಿ, ವಜೀರಾಬಾಯಿ ಮೊದಲಾದ ಶ್ರೇಷ್ಠ ನಟ–ನಟಿಯರು ನಟಿಸುತ್ತಿದ್ದರಿಂದ ಕಂಪನಿ ಏಳ್ಗೆಯಲ್ಲಿತ್ತು, ಮುಂದೆ ಸಂಕಟ ಎದುರಾಯಿತು. ಮೊತ್ತೊಮ್ಮೆ ಕಂಪನಿಗೆ ಬೀಗ ಬಿದ್ದಿತಾದರೂ ಹಲವು ಕಂಪನಿಗಳು ಹುಟ್ಟಲು ಮತ್ತು ಏಣಗಿ ಬಾಳಪ್ಪ ನವರಂತಹ ಶ್ರೇಷ್ಠ ಕಲಾವಿದರನ್ನು ಬೆಳೆಸಿದ್ದು ಇತಿಹಾಸ!

ಶ್ರೀಮತಿ ಗಂಗೂಬಾಯಿ ಗುಳೇದಗುಡ್ಡ ಅವರು 'ಶ್ರೀಕೃಷ್ಣ ನಾಟಕ ಮಂಡಳಿಯನ್ನು ಆರಂಭಿಸಿದರು. ಬಾಗಲಕೋಟೆಯಲ್ಲಿ ಈ ಮಂಡಳಿ 'ಭಾಮಿನಿ', 'ಸಾಧ್ವಿ ಸಕ್ಕೂಬಾಯಿ', 'ಭಕ್ತ ಪುಂಡಲೀಕ' ಮುಂತಾದ ನಾಟಕಗಳನ್ನು ಪ್ರಯೋಗಿಸಿ ಯಶಸ್ವಿಯಾಯಿತು. ಸ್ತ್ರೀಯರು ಯಾವುದರಲ್ಲೂ ಹಿಂದೆ ಬಿದ್ದಿಲ್ಲ ಎಂದು ಗಂಗೂಬಾಯಿ ಸಾರಿದರು.

ಕನ್ನಡನಾಟಕದ ಪರಮೋತ್ಕೃಷ್ಟ ಕಾಲವೆಂದು (೧೯೪೨ ರಿಂದ ೧೯೭೭ರವರೆಗೆ) ಕರೆಯಿಸಿಕೊಂಡಿತು. ನಾಟಕರಂಗದಲ್ಲಿ ಅನೇಕ ಬದಲಾವಣೆಗಳು ಕಂಡು ಬಂದವು. ಸಾಮಾಜಿಕ, ಕೌಟುಂಬಿಕ, ಭಕ್ತಿಪ್ರಧಾನ, ಪತ್ತೆದಾರಿ ನಾಟಕಗಳು ಪ್ರಯೋಗಕ್ಕೆ ಬಂದವು. ನಲವಡಿ ಶ್ರೀ ಕಂಠಶಾಸ್ತ್ರಿ, ಕಂದಗಲ ಹಣಮಂತರಾಯ, ಎಚ್.ಟಿ.ಮಹಾಂತೇಶಶಾಸ್ತ್ರಿ, ಎಚ್.ಎನ್.ಹೂಗಾರ, ಪಿ.ಬಿ.ಧುತ್ತರಗಿ, ಮಾರುತೇಶಮಾಂಡ್ರೆ. ಇನ್ನಿತರ ನಾಟಕಕಾರರು ಉತ್ತಮ ನಾಟಕಗಳನ್ನು ಸಮಾಜಕ್ಕೆ ನೀಡಿದರು. "ವೃತ್ತಿರಂಗಭೂಮಿಯ ಹುಟ್ಟಿನಿಂದ ಹಿಡಿದು ೨೦ನೇ ಶತಮಾನದ

ಮೂರನೆಯ ದಶಕದವರೆಗೂ ನಮ್ಮ ನಾಟಕ ಮಂಡಳಿಗಳು ಹೆಚ್ಚಾಗಿ ಪೌರಾಣಿಕ ನಾಟಕಗಳನ್ನೇ ಪ್ರದರ್ಶಿಸುತ್ತಿದ್ದರೂ ಬರುಬರುತ್ತ ಸಾಮಾಜಿಕ ನಾಟಕಗಳು ಬೆಳೆದು ಬಂದುದು ಪ್ರೇಕ್ಷಕರ ಅಭಿರುಚಿಯಲ್ಲಿನ ಪರಿವರ್ತನೆಗೆ ಸಾಕ್ಷಿಯಾಗಿದೆ".[೧೬] ಬದಲಾಗುತ್ತಿರುವ ವೃತ್ತಿರಂಗಭೂಮಿಯ ಒಳಹೊರಗನ್ನು ತೀಕ್ಷ್ಣಮತಿಗಳಾದ ನಾಟಕಕಾರರು ತಿಳಿದುಕೊಂಡು ರಂಗಭೂಮಿಗೆ ಹೊಸ ಕಳೆ ಕಟ್ಟುವುದಕ್ಕೆ ಪ್ರಯತ್ನಿಸಿದರು.

ಸುಪ್ರಸಿದ್ಧ ನಾಟಕಕಾರ ಮಹಾಂತೇಶಶಾಸ್ತ್ರಿ ಅವರು ನಾಟಕ ಪ್ರಪಂಚದಲ್ಲಿ ಪ್ರೇಕ್ಷಕರ ಅಭಿರುಚಿಗೆ ತಕ್ಕಂತೆ ನಾಟಕಗಳನ್ನು ನೀಡಿ ಏಕ–ಮೇವಾದ್ವೀತಿಯರಾಗಿ ಕಾಣಿಸಿಕೊಂಡರು. ೧೯೪೨ ರಿಂದ ೧೯೭೭ ರವರೆಗೆ ವೃತ್ತಿರಂಗಭೂಮಿಗೆ ಅನೇಕ ಕೊಡುಗೆಗಳನ್ನು ನೀಡಿದ್ದಲ್ಲದೆ ನಾಟಕರಂಗದ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸಿದರು. ಉನ್ನತಿಯ ಕಾಲದಲ್ಲಿ ವೃತ್ತಿರಂಗಭೂಮಿ ಜನಮನ ಸೆಳೆಯಿತು. ಗ್ರಾಮಾಂತರ ಪ್ರದೇಶಗಳನ್ನು ರಂಗಭೂಮಿ ನಿದ್ದೆಗೆಡಿಸಿದವು. ನಾಟಕ ಕಂಪನಿಗಳು ಸಂಘಗಳು ಅಸ್ತಿತ್ವತಳೆದು ಅಮೋಘ ಪ್ರದರ್ಶನ ನೀಡಿದವು.

**ಹಳೇ ಮೈಸೂರಿನಲ್ಲಿ ವೃತ್ತಿರಂಗಭೂಮಿಯ ಉಗಮ :** ಹಳೆಯ ಮೈಸೂರಿನಲ್ಲಿ ಆಧುನಿಕ ರಂಗಭೂಮಿಯ ಉಗಮಕ್ಕೆ ನಾಂದಿಹಾಡಿದ ವೃತ್ತಿ ರಂಗಭೂಮಿಯು ರಾಜಾಶ್ರಯದ ನೆರವಿನಿಂದ ಆವಿರ್ಭವಿಸಿತು. ಅರಮನೆಯಲ್ಲಿ ಕಂಪನಿನಾಟಕಗಳು ಹುಟ್ಟಿಕೊಂಡವು. "ಮೈಸೂರು ಒಡೆಯರು ಕನ್ನಡ ಜನತೆಗೆ ನಾಟಕಲೆಯಲ್ಲಿರುವ ಉತ್ಸುಕತೆಯನ್ನು ಮನಗಂಡು ಕ್ರಿ.ಶ.೧೮೮೦ರಲ್ಲಿ "ಶ್ರೀ ಚಾಮರಾಜೇಂದ್ರ ಕರ್ನಾಟಕ ನಾಟಕ ಸಭಾ" ಹೆಸರಿನ ನಾಟಕ ಮಂಡಳಿ ಸ್ಥಾಪಿಸಿದರು. ಇದು ಹಳೆ ಮೈಸೂರು ಭಾಗದ ರಂಗಮಂದಿರದ ನವೋದಯಕ್ಕೆ ನಾಂದಿಯಾಯಿತು. ಮಹಾರಾಜರ ನಿರ್ದೇಶನದ ಮೇರೆಗೆ ಆಸ್ಥಾನದ ಸಂಗೀತ–ಸಾಹಿತ್ಯ ಪಂಡಿತರು ನಾಟಕ ಸಾಹಿತ್ಯ ರಚನೆ ಮಾಡುವಂತಾಯಿತು. ಈ ನಾಟಕ ಮಂಡಳಿಗೋಸ್ಕರ ಬಸವಪ್ಪಶಾಸ್ತ್ರಿಗಳು, ಸೋಸಲೆ ಅಯ್ಯಪ್ಪಶಾಸ್ತ್ರಿಗಳು, ನಂಜನಗೂಡು ಸುಬ್ಬಾಶಾಸ್ತ್ರಿಗಳು ಸಂಸ್ಕೃತದ ಹಲವು ಉತ್ತಮ ನಾಟಕಗಳನ್ನು ಅನುವಾದಿಸಿದರು. ತಜ್ಞರಲ್ಲಿ ಕೆಲವರು ಬೊಂಬಾಯಿಗೆ ಹೋಗಿ ಅಲ್ಲಿಯ ರಂಗಮಂದಿರದ ವಾಸ್ತುಶಿಲ್ಪ, ರಂಗ ಪರಿಕರಗಳು, ವೇಷಭೂಷಣಗಳು ಇತ್ಯಾದಿಗಳನ್ನು ಪರಿಶೀಲಿಸಿಕೊಂಡು ಬಂದು ಅದೇ ಮಾದರಿಯಲ್ಲಿ ರಂಗ ಮಂದಿರವನ್ನು ಸಿದ್ಧಪಡಿಸಿದರು. ಪ್ರಖ್ಯಾತ ಕಲಾವಿದರು. ವಿದ್ವನ್ಮಣಿಗಳು ನೆರವಾದರು. ಕನ್ನಡ ರಂಗಭೂಮಿಗೆ ಅಭಿನಯಯೋಗ್ಯವೂ, ಸಾಹಿತ್ಯೋಚಿತವೂ ಆದ ಉತ್ತಮ ನಾಟಕಗಳು ದೊರೆತವು. ಕನ್ನಡ ಕಲಾವಿದರು ತಮ್ಮ ಕಲಾ ಕೌಶಲ್ಯವನ್ನು ಸುವ್ಯವಸ್ಥಿತ ಹಾಗೂ ಸುಸಜ್ಜಿತ ರಂಗ ಮಂದಿರದಲ್ಲಿ ಪ್ರದರ್ಶಿಸಲು ದಾರಿಯಾಯಿತು".[೧೭] ಹಳೇ ಮೈಸೂರು ಭಾಗದಲ್ಲಿ "'ಕನ್ನಡ ರಂಗಭೂಮಿ'ಯ ಪುನರಜ್ಜೀವನಕ್ಕೆ ಮತ್ತು ವೃತ್ತಿರಂಗಭೂಮಿಯ ಆರಂಭಕ್ಕೆ ಈ ನಾಟಕ ಮಂಡಳಿನಾಂದಿಯಾಗಿ ಪರಿಣಮಿಸಿತು ಎಂಬ ಐತಿಹಾಸಿಕ ಸಂಗತಿ ಮಾತ್ರ ಇಲ್ಲಿ ಮಹತ್ವದ್ದು".[೧೮]

'ಗುಬ್ಬಿ ಶ್ರೀ ಚನ್ನಬಸವೇಶ್ವರ ಕೃಪಾ ಪೋಷಿತ ನಾಟಕ ಮಂಡಳಿ' ಶತಮಾನ ಕಾಲ ಬಾಳಿರುವ ಗುಬ್ಬಿ ಕಂಪನಿಯು ಕನ್ನಡ ರಂಗಭೂಮಿಯಲ್ಲಿ ಅಷ್ಟೇ ಅಲ್ಲ, ಜಾಗತಿಕ ರಂಗಭೂಮಿಯ ಇತಿಹಾಸದಲ್ಲೇ ಅದ್ವಿತೀಯವಾದುದು. ಚಂದಣ್ಣ, ಅಬ್ದುಲ್ ಅಜೀಜ್ ಹಾಗೂ ಸಾಹುಕಾರ ನೀಲಕಂಠಪ್ಪನವರು ಕ್ರಿ.ಶ.೧೮೮೪ ರಲ್ಲಿ ಈ ನಾಟಕ ಮಂಡಳಿಯನ್ನು ಸ್ಥಾಪಿಸಿದರು. ಮೊದಲ ಈ ನಾಟಕ ಮಂಡಳಿಯಲ್ಲಿ "ಸಾಸುವೆಯ ಕಾಳಿನಂತೆ ಕಾಣಿಸಿಕೊಂಡ ವೀರಣ್ಣನೆಂಬ ಬಾಲಕ ಕಾಲಕ್ರಮದಲ್ಲಿ ಮಹಾವಟ ವೃಕ್ಷವಾಗಿ ಬೆಳೆದು ಗುಬ್ಬಿ ವೀರಣ್ಣನೆಂದು ಜಗದ್ವಿಖ್ಯಾತನಾದ".[೪೨] ಎಂಬುದು ಮರೆಯುವಂತಿಲ್ಲ.

ಶಾಂತಕವಿಗಳು ಅಂದು ನೆಟ್ಟ ರಂಗಭೂಮಿ ಎಂಬ ವೃಕ್ಷವು ಬೆಳೆಯುತ್ತ ಬೆಳೆಯುತ್ತಬಂದು, ಕೊಣ್ಣೂರಕರ್ ಕಂಪನಿಯ ಮುಖಾಂತರ ತನ್ನ ಬಾಹುಗಳನ್ನು ಚಾಚಿಕೊಂಡು ಹಲವಾರು ಕಂಪನಿಗಳಿಗೆ ನೆರಳು ನೀಡುವ ನಿಟ್ಟಿನಲ್ಲಿ ಹೆಮ್ಮರವಾಗಿ ನಿಂತಿದೆ. ಈ ನೆರಳಿನಲ್ಲಿ ಅನೇಕ ನಾಟಕ ಮಂಡಳಿಗಳು ಹುಟ್ಟಿಕೊಂಡವು. ಅವುಗಳಿಗೆ ಲೆಕ್ಕವಿಲ್ಲ ಎನ್ನುವಂತೆ ಹೊರಬಂದಿವೆ. ಈ ಅವಧಿಯನ್ನು ಉತ್ತರ ಕರ್ನಾಟಕ ರಂಗಭೂಮಿಯ ಸುವರ್ಣಯುಗ ಎಂದೇ ಕರೆಯಬಹುದು.

**ಹೈದ್ರಾಬಾದ ಕರ್ನಾಟಕದಲ್ಲಿ ನಾಟಕರಂಗ ನಾಟಕಕಾರರು :** "ರಂಗಭೂಮಿ ಒಂದು ಪ್ರದೇಶದ ಜನತೆಯ ಸಂಸ್ಕೃತಿಯ ಅಭಿವ್ಯಕ್ತಿ ಹಲವಾರು ಕಲೆಗಳು ಇಲ್ಲಿ ಮೇಳವಿಸಿಕೊಂಡಿವೆ ಬದುಕಿನ ನೋವು-ನಲಿವು ಹಾಗೂ ಏಕತಾನತೆಗೆ ಬೇಸತ್ತ, ಲೋಕೋಭಿರುಚಿಯುಳ್ಳ ಜನವರ್ಗದ ಮನಸ್ಸನ್ನು ಮುದಗೊಳಿಸುವ, ಹದ ಗೊಳಿಸುವ ವಿಶಿಷ್ಠತೆ ಪಡೆದ ಕಲೆಯಾಗಿದೆ. ಮನೋರಂಜನೆ ಅದರ ಮೂಲ ಗುರಿಯಾಗಿದ್ದರೂ, ಸಮಾಜ ಅದರ ಜೀವನಾಡಿ ಮನುಷ್ಯನ ಕುಂದು ಕೊರತೆ, ಮನಸ್ಸಿನ ದ್ವಂದ್ವಗಳು, ಪಕ್ವತೆ-ಅಪಕ್ವತೆ ಎತ್ತಿ ತೋರಿಸಿ ಬದುಕಿಗೆ ಕನ್ನಡಿ ಹಿಡಿಯುತ್ತದೆ. ಜೀವನದ ಮೌಲ್ಯಗಳನ್ನು ಉದಾತ್ತಗೊಳಿಸುತ್ತ, ಉತ್ತಮ ಅಭಿರುಚಿ ಎತ್ತಿ ಹಿಡಿಯುತ್ತ ಸಮಾಜ ಮುಖಿಯೊಗಿದೆ".[೧೯] ವೃತ್ತಿ ರಂಗಭೂಮಿ ಹಾಗೂ ಹವ್ಯಾಸ ರಂಗಭೂಮಿಯೆಂಬ ಪ್ರಭೇದ ಕರ್ನಾಟಕ ಒಂದನ್ನು ಬಿಟ್ಟು ಬೇರೆರಾಜ್ಯಗಳಲಿಲ್ಲವೆಂದು ಬಲ್ಲವರು ಹೇಳುತ್ತಾರೆ. ವೃತ್ತಿರಂಗಭೂಮಿಯ ತವರು ಮನೆ ಉತ್ತರ ಕರ್ನಾಟಕವಾಗಿದೆ. ಇದಕ್ಕೆ ಹೊಂದಿಕೊಂಡ ಹೈದ್ರಾಬಾದ ಕರ್ನಾಟಕದಲ್ಲಿ ರಂಗಭೂಮಿಗೆ ತಕ್ಕಂತೆ ನಾಟಕಗಳು ಸಮೃದ್ಧಿಯಾಗಿ ಬಂದವು. ಇವುಗಳ ಪ್ರಯೋಗ ಹಾಗೂ ಸಾಹಿತ್ಯಿಕ ದೃಷ್ಟಿಯಿಂದ ತನ್ನದೇ ಆದ ಕೊಡುಗೆ ಹೈದ್ರಾಬಾದ ಕರ್ನಾಟಕ ನೀಡಿದೆ. ಅನೇಕ ನಾಟಕಕಾರರು ಈ ಭಾಗಕ್ಕೆ ಕೀರ್ತಿ ತಂದಿದ್ದಾರೆ. ವಿಶಿಷ್ಟವಾದ, ಮಿಶ್ರ ಸಂಸ್ಕೃತಿಯನ್ನು ಹೊಂದಿರುವ ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ಅತ್ಯಂತ ಪ್ರಾಚೀನ ಮತ್ತು ಭವ್ಯ ಇತಿಹಾಸವುಳ್ಳ ಸಾಹಿತ್ಯ ರಂಗ ಪರಂಪರೆ ಬೆಳೆದುಬಂದಿದೆ.

ಹೈದ್ರಾಬಾದ ಕರ್ನಾಟಕದ ಪ್ರಮುಖ ಜಿಲ್ಲೆಗಳಾದ ಕಲಬುರ್ಗಿ, ಬೀದರ, ರಾಯಚೂರು, ಬಳ್ಳಾರಿ, ಕೊಪ್ಪಳ ಹಾಗೂ ಇತ್ತೀಚೆಗೆ ಹೊಸದಾಗಿ ಜಿಲ್ಲೆಯಾಗಿ ಮೂಡಿಬಂದ ಯಾದಗೀರ ಜಿಲ್ಲೆಗಳ ರಂಗಭೂಮಿಯ ಇತಿಹಾಸವನ್ನು ವೀಕ್ಷಿಸಿದಾಗ, ಇಲ್ಲಿ ರಂಗ, ಸಾಹಿತ್ಯ, ಸಂಸ್ಕೃತಿಯ ಖಜಾನೆ ಇದ್ದದ್ದು ಕಂಡು ಬರುತ್ತದೆ".[೨೦]

ಹೈದ್ರಾಬಾದ ಕರ್ನಾಟಕ ನಿಜಾಮರ ಆಡಳಿತಕ್ಕೊಳಪಟ್ಟು ಉರ್ದು-ತೆಲುಗು-ಮರಾಠಿ ಭಾಷೆಗಳ ತುಳಿತಕ್ಕೊಳಗಾಯಿತು. ಅಂದಿನ ದಿನನಿತ್ಯದ ಮಾತು ಉರ್ದುವಾಗಿತ್ತು. ಕಲಿಕೆ ಉರ್ದು, ಆಡಳಿತ ಉರ್ದು, ಎಲ್ಲಿ ನೋಡಿದರಲ್ಲಿ ಉರ್ದುಮಯ ವಾತಾವರಣ, ಇದನ್ನು ಬಿಟ್ಟರೆ ಮರಾಠಿಮಯ ಜೊತೆಗೆ ಸಂಸ್ಕೃತ ಪಂಡಿತರ ಮಾನ್ಯರ ದಾಳಿಯನ್ನು ಈ ಭಾಗ ಕಂಡಿತು. ಈ ಪ್ರದೇಶಯಾವಾಗಲೂ ಭಾಷಿಕ, ಧಾರ್ಮಿಕ ರಾಜಕೀಯ ಹೋರಾಟದ ಸಂಘರ್ಷದಲ್ಲಿಯೇ ಹೋಯಿತು. ಹೀಗಾಗಿ ಸ್ವಾತಂತ್ರ್ಯ ವಿಮೋಚನೆಯ ತರುವಾಯ ಆ ಕಂದಕವನ್ನು ತುಂಬಿಕೊಳ್ಳಲು ಸಾಕಷ್ಟು ಸಮಯ ಬೇಕಾಯಿತು.

ಇಲ್ಲಿನ ಮರಾಠಿ-ಉರ್ದು-ಆಂಗ್ಲಭಾಷೆಗಳ ಒತ್ತಡದಿಂದ 'ಕನ್ನಡ' ಮುಗಿಲ ಮಲ್ಲಿಗೆಯಾಗಿತ್ತು. ನಿಜಾಮಶಾಹಿಯಲ್ಲಿ ಕನ್ನಡ ಮಾತನಾಡುವುದೇ ಕಷ್ಟವಾಗಿದ್ದಾಗ ಕನ್ನಡ ಓದು ಬರಹ ಕನಸಿನ ಮಾತಾಗಿತ್ತು. ಆದರೂ ಬದಲಾದ ಸಮಯದಲ್ಲಿ ಕನ್ನಡಾಭಿಮಾನಿಗಳು, ಸಾಹಿತಿಗಳು ರಂಗಭೂಮಿಯ ಪ್ರಕಾರ ನಾಟಕ ಸಾಹಿತ್ಯ ರಚನೆಯಲ್ಲಿ ಗಂಭೀರ ಹೆಜ್ಜೆ

ಇರಿಸಿದ್ದರಿಂದಲೇ ಇಂದು ಹೈದ್ರಾಬಾದ ಕರ್ನಾಟಕದಲ್ಲಿ ನಾಟಕಗಳು, ನಾಟಕಕಾರರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ.

ಜಿಲ್ಲೆಯ ವೃತ್ತಿ ನಾಟಕರಂಗದಲ್ಲಿ ಅಗ್ರಸ್ಥಾನದಲ್ಲಿ ವಿರಾಜ ಮಾನರಾಗಿರುವವರು ನಾಟಕರತ್ನ ಗುಬ್ಬಿ ವೀರಣ್ಣ ಅವರ ಪ್ರಶಸ್ತಿಯನ್ನು ಪಡೆದುಕೊಂಡಿರುವ ಲಾಲ ಅಹ್ಮದ ಬಂದೇ ನವಾಜ ಖಲೀಫ್(ಎಲ್.ಬಿ.ಕೆ.ಆಲ್ದಾಳ)ರು ಆಲ್ದಾಳ ಅವರು ಕಲಬುರ್ಗಿ ಜಿಲ್ಲೆ ಜೇವರ್ಗಿ ತಾಲೂಕಿನ ಮಳ್ಳಿ ಗ್ರಾಮದವರು–ಆಲ್ದಾಳರ ನಾಟಕಗಳೆಂದರೆ ರಂಗಭೂಮಿಯಲ್ಲಿ ರಂಗೇರಿಸುವಂತಿರುತ್ತವೆ. ನಾಟಕ ಸಾಮಾಜಿಕ ಪೌರಾಣಿಕ, ಐತಿಹಾಸಿಕ ಯಾವುದೇ ಇರಲಿ ಆಲ್ದಾಳ ಅವರು ಅದನ್ನು ಯಶಸ್ವಿ ಗೊಳಿಸುವುದರಲ್ಲಿ ಚತುರರು. ನೂರಾರು ಕೃತಿಗಳನ್ನು ರಚಿಸಿರುವ ಆಲ್ದಾಳರು ಗ್ರಾಮೀಣ ಭಾಗದಲ್ಲೂ, ನಗರ ಪ್ರದೇಶದಲ್ಲೂ ತಮ್ಮ ಛಾಪು ಹಾಕಿರುವವರಲ್ಲಿ ಒಬ್ಬರು. ಇನ್ನೋರ್ವ ನಾಟಕಕಾರ ಮಳ್ಳಿ ಗ್ರಾಮದ ಪ್ರಸಿದ್ಧ ನಟರು ಆಗಿರುವ ಮೋಹನಚಂದ ಕಿರಣಗಿ ಅವರು ಆದರ್ಶಪ್ರೇಮ, ಅಣ್ಣ ತಂಗಿ ನಾಟಕಗಳನ್ನು ತಂದು, ಜನಮನ ರಂಜಿಸುವಲ್ಲಿ ಮುಂದಾದರು.

ಚಿಂಚೋಳಿ ತಾಲೂಕಿನ ಕೋಡ್ಲಿ ಕಂಟೆಪ್ಪ ಮಾಸ್ಟರ ಅತ್ಯಂತ ಭಾವಪೂರ್ಣ ನಾಟಕರಚಿಸಿದ್ದರು ಇವರು ರಚಿಸಿದ ಸಕಲ ನಾಟಕಗಳು ಪ್ರದರ್ಶನಗೊಂಡು ನಾಟಕ ಪ್ರಿಯರನ್ನು ರಂಜಿಸಿದ್ದು ಮಹತ್ವದ ಸಂಗತಿ, ಆದರೆ ಇವರ ನಾಟಕ ಕೃತಿಗಳು ಪ್ರಕಟವಾಗದೇ ಇರುವುದರಿಂದ ಅಭಿಮಾನಿಗಳಿಗೆ, ಓದುಗರಿಗೆ ನಾಟಕದ ಬಗ್ಗೆ ತಿಳಿದುಕೊಳ್ಳಲು ಸಾಧ್ಯವಾಗುತ್ತಿಲ್ಲ, ಇದು ದುರ್ದೈವ ಇದಕ್ಕೆ ನಾಟಕಕಾರನ ಆರ್ಥಿಕ ಪರಿಸ್ಥಿತಿಯೇ ಕಾರಣ. ಕೋಡ್ಲಿ ಕಂಟೆಪ್ಪರ ಮಹತ್ವದ ನಾಟಕಕೃತಿಗಳಿವು, ಧರ್ಮಚಕ್ರ, ತೊಟ್ಟಿಲುಬಟ್ಟಲು, ಸತ್ಯಸತ್ತಿಲ್ಲ, ತಾಯಿಕೊಟ್ಟಶಾಪ, ತವರು ಮನೆತಣ್ಣಗಿರಲಿ, ರಕ್ತತರ್ಪಣ, ಬಾಳ ಬೇಕಿದ್ದರೆ ತಾಳ ಬೇಕು ತಂಗಿ ಹಾಗೂ ಹಾರ ಕೂಡ ಚೆನ್ನಬಸವೇಶ್ವರ ನಾಟಕಗಳು ಪ್ರಯೋಗಿಸಿ ಶ್ರೇಷ್ಠ ನಾಟಕಕಾರರಲ್ಲಿ ಒಬ್ಬರಾಗಿದ್ದರು.

ಯಾದಗಿರಿಯ ಡಿ.ಎಸ್.ಕುಮಾರ ಅವರು ಸುಮಾರು ೨೫ಕ್ಕೂ ಹೆಚ್ಚು ನಾಟಕ ಬರೆದಿದ್ದು ಹಳ್ಳಿಯ ಹುಲಿ, ಕುಡುಕರ ಗಡ್ಲ, ಬಂಗಾರದಲಿಂಗ, ಹೆಣ್ಣು ಜಗದ ಕಣ್ಣು, ತಾಳಿಕೊಟ್ಟತಾಯಿ ಸಾಮಾಜಿಕ ನಾಟಕದೊಂದಿಗೆ, ಗೋಲಗೇರಿ ಗೊಲ್ಲಾಳೇಶ್ವರ ಮಹಾತ್ಮೆ, ಹೊನ್ನೇಶ್ವರ ಮಹಾತ್ಮೆ ಮಹಾಶರಣರ ಕುರಿತ ನಾಟಕದೊಂದಿಗೆ ಜನಮನಗೆದ್ದರು. ರಾಜಾವೆಂಕಟಪ್ಪ ನಾಯಕ. ಬ್ರಿಟಿಷರ ವಿರುದ್ಧ ಹೋರಾಡಿ ಸ್ವಾತಂತ್ರ್ಯದ ಕಹಳೆಯನ್ನು ಬಾರಿಸಿದ ಮಹಾನ ಶೂರ. ಡಿ.ಎಸ್.ಕುಮಾರರ ಈ ಐತಿಹಾಸಿಕ ನಾಟಕ ನೋಡುಗರ ಹೃದಯದಲ್ಲಿ ಬ್ರಿಟಿಷರ ವಿರುದ್ಧ ಹೋರಾಡುವಂತೆ ಕಿಚ್ಚು ಹೆಚ್ಚುತ್ತಿತ್ತು.

ಅಫ್‌ಜಲಪೂರ ತಾಲೂಕಿನ ಹಿರೇ ಜೇವರ್ಗಿಯ ಪ್ರಸಿದ್ಧ ನಾಟಕಕಾರ ರೇವಣಸಿದ್ದಪ್ಪ ಪಾಟೀಲ್, ರಮಾನಂದ ಎಂದೇ ಖ್ಯಾತಿ ಪಡೆದವರು. ಇವರ ನಾಟಕಗಳು ನೋಡುಗರ ಮನಸ್ಸಿನ ಮೇಲೆ ಒಳ್ಳೆಯ ಪರಿಣಾಮ ಬೀರುತ್ತಿದ್ದವು. ನೈತಿಕದ ನೆಲೆಯ ಮೇಲೆ ನಾಟಕಗಳನ್ನು ರಚಿಸುತ್ತಿದ್ದರು. ಇದರಲ್ಲಿ ಅವರು ಯಶಸ್ವಿಯೂ ಆಗಿರುವರು. ಸುಮಾರು ಎಪ್ಪತ್ತಕ್ಕೂ ಹೆಚ್ಚು ನಾಟಕಗಳನ್ನು ಬರೆದು ಹೈದ್ರಾಬಾದ ಕರ್ನಾಟಕದಲ್ಲಿ ಹೆಚ್ಚಿನ ಗಮನ ಸೆಳೆದಿದ್ದಾರೆ. ಗೌಡರಗದ್ದಲ, ಸೇಡಿನರಂಗ, ನರಕಾಸುರ ವಧೆ, ದೌರ್ಭಾಗ್ಯ ಕಳಂಕಪ್ರಾಯ, ಪ್ರೀತಿ ಇಲ್ಲದ ಸುಮತಿ ಪ್ರಮುಖ ನಾಟಕಗಳು. ಆದರೆ ಸಂಸಾರ ನಡೆಸಿಕೊಂಡು ಹೋಗುವುದೇ ಕಷ್ಟವಾಗಿರುವಾಗ ಇವರು ನಾಟಕಗಳನ್ನು ಮುದ್ರಣಕ್ಕೆ ಕೊಡುವುದು ಎಲ್ಲಿಂದ ಸಾಧ್ಯ ನಾಟಕಗಳನ್ನು ರಂಗಭೂಮಿಯ ಮೇಲೆ ನೋಡಿದವರು ಭಲೇ! ಭಲೇ! ಎಂದು ಹೊಗಳಿ ಬೆನ್ನು ಚಪ್ಪರಿಸಿ ಹೋದವರೆ ಹೆಚ್ಚು ಜನ

ನಾಟಕಗಳ ಮುದ್ರಣದ ನೆರವಿಗೆ ಯಾವ ಕೊಡುಗೈ ದೊರೆಗಳು ಮುಂದೆ ಬರಲಿಲ್ಲ. ಇದು ಬರ ಪ್ರದೇಶವಲ್ಲವೆ?.

ಮಲ್ಲೇಶಯಾಳಗಿ ಹದಿನೈದುನಾಟಕ, ಸೋಮನಾಥ ಹಳಿಸಗರ ಹೊಸಮನಿ ೧೧ಕ್ಕೂ ಹೆಚ್ಚು ನಾಟಕಗಳನ್ನು ಪ್ರಯೋಗಿಸಿದ್ದಾರೆ. ಶರಣಪ್ಪ ಹಾಲಭಾವಿ ಮತ್ತು ಎಸ್.ಎನ್.ದಂಡಿನ ಕುಮಾರ ಅವರ ವೃತ್ತಿ ನಾಟಕ ಪ್ರಯೋಗ ಕಂಡಿವೆ. ಸಿದ್ದಣ್ಣ ಡಿಗ್ಗಿ ಹರಸೂರು, ಮಗನಸೇಡು, ಬಡವಬಂಡೆದ್ದಾಗ ಅಲ್ಲದೆ ಎಚ್.ಬಿ.ರುದನೂರು ಅವರ ಸಾಮಾಜಿಕ ಹಾಗೂ ಮಹಾತ್ಮರ ನಾಟಕಗಳು ಪ್ರಯೋಗಿಸಲ್ಪಟ್ಟಿವೆ.

ಜಂಗಮಶ್ರೀ ಎಂದೇ ಖ್ಯಾತಿ ಪಡೆದಿರುವ ಶ್ರೀ ರೇವಣಸಿದ್ದಯ್ಯ ರುದ್ರಸ್ವಾಮಿ ಮಠರು ಸುರಪುರ ತಾಲೂಕಿನ ರಂಗಂಪೇಟೆಯಲ್ಲಿ ವಾಸಿಸುವವರು ಉತ್ತಮ ಬರಹಗಾರರಾಗಿರುವ ಇವರು ಕನ್ನಡ–ಹಿಂದಿ–ಉರ್ದು–ಇಂಗ್ಲಿಷ ಭಾಷೆಗಳಲ್ಲಿ ಪ್ರಾವಿಣ್ಯ ಪಡೆದವರಾಗಿದ್ದರು. ಇವರ ನಾಟಕಗಳು ರಂಗಭೂಮಿಯಲ್ಲಿ ಜನಾಕರ್ಷಣೆ ಪಡೆದಿದ್ದವು. ಹೊಸತನ ಎದ್ದುಕಾಣುತ್ತಿತ್ತು. ಮಾತನಾಡುವ ಟೊಂಗೆಗಳು ರಕ್ತಾಭೀಷೇಕ, ಸುರಪುರದ ರಾಜಾವೆಂಕಟಪ್ಪ ನಾಯಕ, ಬೀದರಕೋಟೆ ದುರಂತ, ಹಾಲಾಹಲ ನಾಟಕಗಳು ಜನಪ್ರಿಯತೆ ತಂದವು. 'ಸುರುಪುರದ ಸಿಂಹ' ಪ್ರಥಮ ನಾಟಕವೇ ಜಂಗಮಶ್ರೀ'ಯವರನ್ನು ಶಿಖರಕ್ಕೇರಿಸಿತು.

ಡಾ.ಸಿದ್ದಯ್ಯ ಪುರಾಣಿಕರು 'ಕಾವ್ಯಾನಂದ' ಕಾವ್ಯನಾಮದಿಂದ ಕರ್ನಾಟಕದಲ್ಲಿ ದಕ್ಷ ಆಡಳಿತಗಾರರು ಹಾಗೂ ಖ್ಯಾತ ಸಾಹಿತಿಗಳೆಂದು ಹೆಸರು ಪಡೆದವರು. ೧೯೪೨ರಲ್ಲಿಯೇ 'ಆತ್ಮಾರ್ಪಣೆ' ನಾಟಕ ರಚಿಸಿ ಪ್ರದರ್ಶಿಸಿದರು ೧೯೬೨ರಲ್ಲಿ 'ಭಾರತವೀರ' ನಾಟಕ 'ಚೀನಾ ಭಾರತ ಮಧ್ಯೆ ಸಂಭವಿಸಿದ ಹಿನ್ನಲೆಯೇ ಈ ನಾಟಕ, ಆ ಮೇಲೆ 'ರಜತ ರೇಖೆ' ಎಂಬ ಗೀತ ನಾಟಕ ರಚಿಸಿದ ಕಾವ್ಯಾನಂದರು, ಕಾಶ್ಮೀರದ ಹಬ್ಬಾಖಾತೂನ, ಅಕ್ಕ ಮಹಾದೇವಿ, ಕನ್ನಡಿಗರು, ಮೂವರು ಸ್ತ್ರೀಯರ ಕುರಿತ ನಾಟಕ ರಚನೆಗಳು ಜನಪ್ರಿಯತೆ ಪಡೆದವು.

ಶಾಂತರಸರು ಈ ನೆಲದ ಬಗ್ಗೆ "ಜಿಗಿದು ಹೋದವು ತಾರೆ ಎಂದೋ ನಿಲಾಂಬರದ ಅಂಗಳಕೆ" ಎಂದು ಗಜಲ ಕಟ್ಟಿ ರಚಿಸಿದ ನಾಟಕ ಜನಮನಸೂರೆ ಗೊಂಡಿತು, ಶರಣ ಬಸವ, ನಂಜುನೊರೆವಾಲು, ಮರೆಯದ ಮಾರಮ್ಮ ಪ್ರಮುಖ ನಾಟಕಗಳು ಇವರ ನಾಟಕಗಳು ಪ್ರೇಕ್ಷಕರು ಯಾವಾಗ ನೋಡುತ್ತೇವೆ ಎಂಬ ಕುತೂಹಲದಿಂದ ಕಾಯ್ದು ಕುಳಿತುಕೊಂಡಿರುತ್ತಿದ್ದರು. ಅಷ್ಟೊಂದು ಆಕರ್ಷಣೆ ಇವರ ನಾಟಕಗಳಲ್ಲಿ ಕಾಣಬಹುದು.

ಡಾ. ದೇವೇಂದ್ರ ಕುಮಾರ ಹಕಾರಿ ಅವರು ಕಲಬುರ್ಗಿಯಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದಾರೆ. ಅವರು ಜಾನಪದ ವಿದ್ವಾಂಸರು. ಅಮೃತಮತಿ, ಶಕುಂತಲಾ, ಕ್ಷಿತಿಜ, 'ನಾಟಕ ತ್ರಿದಳ' ಎಂಬ ಅತ್ಯಂತ ಮನರಂಜನೆ ಭರಿತ ನಾಟಕ ರಚಿಸಿದ್ದಾರೆ.

ಚಂದ್ರಕಾಂತ ಕುಸನೂರ ಹೈದ್ರಾಬಾದ ಕರ್ನಾಟಕದಲ್ಲಿ ಅಸಂಗತ ನಾಟಕಗಳನ್ನು ರಚಿಸಿ ಹೊಸ ಪರಂಪರೆಗೆ ಮಾರ್ಗ ತೋರಿದರು – ಹಳ್ಳಕೊಳ್ಳ, ದಿಂಡಿ, ನೀರು, ರಿಹರ್ಸಲ್, ರತ್ತೊ ರತ್ತೋ, ರಾಮನ ಮಗಳು, ಆನಿಬಂತಾನಿ, ರೆಕ್ಕೆ, ಅಂಟಿ–ಮಿಂಟಿ, ಚಾವಲ ಮಿಂಟಿ, ವಿದೂಷಕ ನಾಟಕಗಳಲ್ಲಿ ಹೊಸತನ ಎದ್ದು ಕಾಣುತ್ತದೆ. ಕಲಬುರ್ಗಿಯಲ್ಲಿ ಚಂದ್ರಕಾಂತ ಕುಸನೂರವರ ನಾಟಕ ಪ್ರದರ್ಶನದ ಸಮಯದಲ್ಲಿ ನಾಟಕ ಪ್ರಿಯರು ನೋಡುವುದಕ್ಕೆ ಸ್ಪರ್ಧೆಯೆ ಏರ್ಪಡುತ್ತಿದ್ದವು.

ಡಾ.ಕೆ.ಮುದ್ದಣ್ಣ ಅವರು ಸುರಪುರ ತಾಲೂಕಿನವರು. ವೈದ್ಯರಾಗಿ ಅಪಾರ ಕೀರ್ತಿಗಳಿಸಿದವರು. ಚತುರ್ಭಾಷೆ ಬಲ್ಲವರೂ ಆಗಿದ್ದರು. ಕವಿ, ಸಾಹಿತಿ, ಲೇಖಕ, ನಾಟಕಕಾರರು ಆಗಿದ್ದರು. 'ಪಂಚಾಂಗ' ಮತ್ತು 'ಮೀರಾ' ನಾಟಕ ಇವರು ಬರೆದ ಕೃತಿಗಳು.

ಕಲಬುರ್ಗಿಯಲ್ಲಿ ಕನ್ನಡ ಭಾಷೆ ಸಂಕಟ ಎದುರಾದಾಗ ದತ್ತಾತ್ರೇಯರಾವ ಹೇರೂರ ಕನ್ನಡಕಟ್ಟಿ, ಕನ್ನಡ ಭಾಷೆಯನ್ನು ಬೆಳೆಸಿದವರು. ಹೆಂಡದಭಂಟ್, ಮಾಟದ ಮಚ್ಚು, ಅನಾಹುತ, ರಾಮನಾಥ, ನೂರಾಕಾಕಾ ಇವರ ಪ್ರಸಿದ್ಧ ನಾಟಕಗಳು.

ಶಹಾಪೂರ ತಾಲೂಕಿನ ಗೋಗಿ ಗ್ರಾಮದ ಖ್ಯಾತ ನಾಟಕಕಾರರಾಗಿರುವ ಡಿ.ಎನ್.ಅಕ್ಕಿ ಅವರು ರಂಗಭೂಮಿಗೆ ಸಲ್ಲಿಸಿದ ಸೇವೆ ಅಗಾಧವಾದುದು, ಸರ್ಕಾರಿ ಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರಾಗಿ ಅನೇಕ ಪ್ರಶಸ್ತಿ ಪಡೆದಿರುವ ಇವರು ಜೈನವಸ್ತು ಇಟ್ಟುಕೊಂಡು ಅನೇಕ ನಾಟಕಗಳನ್ನು ಹೊರ ತಂದಿದ್ದಾರೆ.

ಡಾ. ಚೆನ್ನಣ್ಣ ವಾಲಿಕಾರ ಅಪ್ರತಿಮ ಬರಹಗಾರರು ದಲಿತ–ಬಂಡಾಯ ಕವಿಗಳಾಗಿದ್ದರು. ನಾಟಕದ ಗೀಳು ಹಚ್ಚಿಕೊಂಡವರು. ಸೋಮರಾಯ, ಭೀಮರಾಯ, ಡಪ್ಪಿನಾಟ, ಅಗ್ನಿರಾಜ, ಸೂರ್ಯ, ಟೊಂಕದ ಕೆಳಗಿನಜನ, ತಲೆಹಾಕುವವರು ಎಂಬನಾಟಕಗಳು ಹೊರಬಂದಿವೆ. ಇವರ ಪ್ರಸಿದ್ಧ ನಾಟಕ 'ಜೋಗತಿ' ರಾಜ್ಯಾದ್ಯಂತ ಹೆಸರುಗಳಿಸಿದೆ. ಗೀತನಾಟಕ, ನವ್ಯನಾಟಕ, ಕ್ರಾಂತಿನಾಟಕ, ಬೀದಿನಾಟಕ, ಜನಪದ ನಾಟಕ ರಚಿಸಿದ ಅದ್ಭುತ ನಾಟಕಕಾರ.

ಕಲಬುರ್ಗಿಯಲ್ಲಿ ಅನೇಕ ನಾಟಕಕಾರರು, ಸಾಹಿತಿಗಳು ತಮ್ಮ ಪ್ರತಿಭೆಯನ್ನು ಮೆರೆದಿದ್ದಾರೆ. ಅವರುಗಳಲ್ಲಿ ಶಂಕರಯ್ಯ ಘಂಟಿ, ಪ್ರಭಾಕರಜೋಷಿ, ಚಿತ್ರಶೇಖರ ಕಂಠಿ, ಡಾ.ವಿಜಯಶ್ರೀ ಸಬರದ, ಡಾ.ಸರಸ್ವತಿ ಚಿಮ್ಮಲಗಿ, ಮಹಿಪಾಲರೆಡ್ಡಿ ಮುನ್ನೂರ, ಡಾ.ಸ್ವಾಮಿರಾವ ಕುಲಕರ್ಣಿ ಅವರುಗಳು ಪ್ರಮುಖರು. ಗವೀಶ್ ಹಿರೇಮಠ ಅವರು ಚುಟುಕು ಸಾಹಿತಿ ಎಂದೇ ಪ್ರಸಿದ್ಧ ರಾದವರು. ಗುಲಬರ್ಗಾ ವಿ.ವಿ.ಯಲ್ಲಿ ಸೇವೆಯಲ್ಲಿರುವಾಗಲೇ ಅನೇಕ ಪ್ರಕಾರದ ಸಾಹಿತ್ಯ ರಚಿಸಿದ್ದಾರೆ. ಅವರು ವೃತ್ತಿರಂಗ ಭೂಮಿಗೆ ನೀಡಿದ ಕೊಡುಗೆ ಅಪಾರ. 'ಪೋಷ್ಟರ್' ನಾಟಕ ಲಕ್ಕವ್ವನ ಮಂದಿ, ಅಮೀನ ಪುರದ ಸಂತೆ, ಇವರ ಕೃತಿಗಳು, ನಾಟಕ ಅಕಾಡೆಮಿಯ ಸದಸ್ಯರಾಗಿ ಒಳ್ಳೆಯ ಕೆಲಸ ಮಾಡಿದ್ದಾರೆ.

**ಕಲ್ಬುರ್ಗಿ ಜಿಲ್ಲೆಯ ರಂಗಮಾಧ್ಯಮ :** ಕಲ್ಬುರ್ಗಿ ಜಿಲ್ಲೆಯಲ್ಲಿ ೧೯೭೩ರಲ್ಲಿ ರಂಗ ಮಾಧ್ಯಮ ಹುಟ್ಟುಹಾಕಲಾಯಿತು. ಹೊಸಗಾಳಿ, ಹೊಸ ಅಲೆಗೆ ಸ್ಫೂರ್ತಿ ತಂದಿತು. ಪ್ರಸಿದ್ಧ ಸಾಹಿತಿಗಳಾದ ಪ್ರೊ.ಗಿರಡ್ಡಿ ಗೋವಿಂದರಾಜ, ಚಂದ್ರಕಾಂತ, ಕುಸನೂರ ಅವರು ಜೊತೆಯಾಗಿ ಈ ತಂಡ ಕಟ್ಟಿ ಬೆಳೆಸುವಲ್ಲಿ ಪ್ರಯತ್ನಿಸಿದವರಲ್ಲಿ ಮೊದಲಿಗರು 'ಏವಂ ಇಂದ್ರಜಿತ್' ಎಂಬ ನಾಟಕವನ್ನು ಪ್ರಥಮ ಬಾರಿಗೆ ರಂಗಭೂಮಿಯಲ್ಲಿ ನಟಿಸಿದಾಗ ನಿರೀಕ್ಷೆಗೂ ಮೀರಿ ಜನರಿಂದ ಮೆಚ್ಚಲ್ಪಟ್ಟಿತು ಇದರಿಂದಾಗಿ ಈ ರಂಗ ಮಾಧ್ಯಮ ಕಳೆ ಕಟ್ಟಿತು. ಯುವಕರು ಹೆಚ್ಚು–ಹೆಚ್ಚು ಆಕರ್ಷಿತರಾದರು. ಮೂವತ್ತಕ್ಕಿಂತ ಹೆಚ್ಚು ನಾಟಕಗಳನ್ನು ನೂರಾರು ಪ್ರಯೋಗಗಳನ್ನು ಮಾಡುತ್ತ ಜನ–ಮನರಂಜಿಸಿದೆ. ಕದಡಿದನೀರು, ಕೇಳು ಜನಮೇಜಯ, ಆಮನಿ, ಬಾಕಿ ಇತಿಹಾಸ, ಜೈಸಿದ್ಧ ನಾಯಕ, ಹಕ್ಕಿ ಹಾರುತಿದೆ ನೋಡಿದಿರಾ, ನಾಯಿಕಥೆ, ಖರೋಖರ, ಹರಕೆಯಕುರಿ ನಾಟಕಗಳನ್ನು ರಂಗಭೂಮಿಯಲ್ಲಿ ಪ್ರದರ್ಶಿಸಿ ನೋಡುಗರನ್ನು ಸಂತೋಷ ಪಡುವಂತೆ ಮಾಡಿದ್ದಾರೆ.

ಕಲಬುರ್ಗಿಯಲ್ಲಿ ೧೯೭೫ರಲ್ಲಿ ನೃಪತುಂಗ ಬರಹಗಾರರ ಹಾಗೂ ಕಲಾವಿದರ

ಸಂಘಸ್ಥಾಪನೆಗೊಂಡು ಉತ್ಸಾಹಿ ಯುವ ಕಲಾವಿದರ ತಂಡ ಇದರಲ್ಲಿ ಭಾಗಿಯಾಗಿತು. ಶ್ರೀ ಗವೀಶ ಹಿರೇಮಠರು ಈ ಸಂಘದ ಅಧ್ಯಕ್ಷರಾಗಿದ್ದುಕೊಂಡು ಹೊರನಾಡಿನಲ್ಲಿಯೂ ಸಂಘದವತಿಯಿಂದ ನಾಟಕ ಏರ್ಪಡಿಸಿ ಅವುಗಳ ಪ್ರಯೋಗದಿಂದ ಜನ ಮೆಚ್ಚುಗೆ ಪಡೆದುದಲ್ಲದೆ ಪ್ರಶಸ್ತಿಗಳು ಮುಡಿಗೇರಿದವು. ಆರಂಭದಲ್ಲಿ ಶಾಂತಿ ಕ್ರಾಂತಿ, ಸಮಸ್ಯೆ ತಿರುಕ ನಾಟಕಗಳು ಪ್ರಯೋಗಿಸಲಾಯಿತು.

ಕಲಬುರ್ಗಿ ಕನ್ನಡ ಸಾಹಿತ್ಯ ಸಂಘ ನಾಟಕಕ್ಕೆ ಆಯಾಮ ನೀಡಲು ಸಜ್ಜಾಯಿತು. ಚಂದ್ರಕಾಂತ ಕುಸುನೂರರ 'ಆನಿಬಂತಾನೆ', ಕಂಬಾರರ ಖರೋಖರ ನಾಟಕ ಮತ್ತು ಶ್ರೀರಂಗರ ಉತ್ತಮ ಪ್ರಭುತ್ವ ನಾಟಕಗಳು ಇಲ್ಲಿಯ ಜನರ ಆಸಕ್ತಿಯನ್ನು ಕೆರಳಿಸಿ ಯಶಸ್ವಿಯಾದವು. ರಂಗಮಾಧ್ಯಮದ ಪ್ರಭಾಕರ ಸಾತಖೇಡ ನಿರ್ದೇಶನದಲ್ಲಿ ಎಲ್ಲ ನಾಟಕಗಳು ಮೂಡಿಬಂದವು.

೧೯೭೭ರಲ್ಲಿ ನಿವೇದಿತಾ ಮಹಿಳಾ ಸಂಘದಿಂದ 'ಎಲ್ಲರ ಮನೆ ದೋಸೆ ತೂತು' ನೆರೆಹೊರೆ, ಅಧರ್ಮಶಾಲೆ, ಹೊಸದಾರಿ, ಬೀದಿನಾಟಕ ಪ್ರಯೋಗಿಸಲ್ಪಟ್ಟಿತು. ಮಹಿಳೆಯರೆ ಕೂಡಿ ಮಾಡಿದ 'ನಾಟಕ' ನಾಟಕ ಇವರ ಕೊಡುಗೆ ಯಾಗಿದೆ.

೧೯೯೩ರಲ್ಲಿ ಕಲಬುರ್ಗಿ ನಗರದಲ್ಲಿ ಜನಸೇವೆ, ಸಮಾಜಸೇವೆಯಲ್ಲಿ ತೊಡಗಿಸಿಕೊಂಡಿರುವ ಸಂಗಮೇಶ್ವರ ಮಹಿಳಾ ತಂಡ ಹೊಸದಾಗಿ, ಹೊಸ ಉತ್ಸಾಹದಿಂದ ನಾಟಕ ಪ್ರಯೋಗಕ್ಕೆ ಒಂದು ಹೆಜ್ಜೆ ಮುಂದಿರಿಸಿತು. ಪ್ರಸಿದ್ಧ ರಂಗ ಹಾಗೂ ಧಾರಾವಾಯಿ ನಟಿ ಮೈಸೂರಿನ ಎಸ್.ಮಾಲತಿ ಅವರು ನಿರ್ದೇಶಿಸಿದರು. 'ಕಾಡುಕುದರೆ' ನಾಟಕ ಪ್ರದರ್ಶಿಸಿತು ಮುಂದೆ ಹೈದ್ರಾಬಾದ, ಬೆಳಗಾವದಲ್ಲೂ ಕೂಡಾಯಶಸ್ವಿ ಪ್ರಯೋಗವಾಯಿತು. ಬಸವದಳದ ಆಶ್ರಯಹೊಂದಿ ಈ ಮಹಿಳಾ ತಂಡ ನಾಟಕ 'ಶರಣು-ಶರಣಾರ್ಥಿ' ಪ್ರಯೋಗಿಸಲಾಯಿತು ಇದನ್ನು ಅಮರ ಹಿರೇಮಠ ನಿರ್ದೇಶನ ಮಾಡಿದರು.

## ಅಡಿಟಿಪ್ಪಣಿ

೧) ಕನ್ನಡ ರಂಗಭೂಮಿಯ ಪ್ರರೋಭಿವೃದ್ಧಿ – ಆದ್ಯರಂಗಾಚಾರ್ಯ ಪು.ಸಂಖ್ಯೆ – ೨

೨) ಆತ್ಮಾರಾಮಾಶಾಸ್ತ್ರಿ : ನಾಟಕ ಕಲೆ : ೧೯೨೪ – ಪು.ಸಂಖ್ಯೆ – ೪೪

೩) ಕನ್ನಡ ಸಾಹಿತ್ಯ ಪರಿಷತ್ತು ಪತ್ರಿಕೆ : ಕನ್ನಡ ನಾಟಕದ ಹಳಮೆ ಎಂ.ಗೋವಿಂದ ಪೈ ಪು.ಸಂಖ್ಯೆ – ೫೨

೪) ಕನ್ನಡ ಸಾಹಿತ್ಯ ಇತಿಹಾಸ : ೧೯೬೩ – ಪು.ಸಂಖ್ಯೆ – ೧೯೧

೫) ಕನ್ನಡ ನಾಟಕ ಪ್ರಪಂಚ ವಿವಿದ ಲೇಖಕರು – ಪು.ಸಂಖ್ಯೆ – ೩೦

೬) ಜ್ಞಾನ ಗಂಗೋತ್ರಿ – ಪು.ಸಂಖ್ಯೆ – ೩೨೯

೭) ಆಧುನಿಕ ಕನ್ನಡ ನಾಟಕ : ಕೆ.ಮರುಳಸಿದ್ದಪ್ಪ – ಪು.ಸಂಖ್ಯೆ – ೭

೮) ಕರ್ನಾಟಕ ರಂಗಭೂಮಿ : ಡಾ.ಎಚ್.ಕೆ.ರಂಗನಾಥ – ಪು.ಸಂಖ್ಯೆ – ೪೩

೯) ಉತ್ತರ ಕರ್ನಾಟಕದ ವೃತ್ತಿ ರಂಗಭೂಮಿ : ಡಾ.ರಾಮಕೃಷ್ಣ ಮರಾಠೆ – ಮುನ್ನುಡಿ

೧೦) ಭಾರತೀಯ ಕಲಾದರ್ಶನ – ಸಂ. ಅ.ನ.ಕೃಷ್ಣರಾಯ – ಪು.ಸಂಖ್ಯೆ – ೨೮೮

೧೧) ಕನ್ನಡ ರಂಗಭೂಮಿಯ ಪ್ರರೋಭಿವೃದ್ಧಿ : ಆದ್ಯರಂಗಾಚಾರ್ಯ – ಪು.ಸಂಖ್ಯೆ – ೩೦

೧೨) ಮರಾಠಿ ರಂಗಭೂಮೀಚಾ ಇತಿಹಾಸ : ನಾ.ಕಡೆಪಟ್ಟಿ – ಪು.ಸಂಖ್ಯೆ – ೩

೧೩) ಆಧುನಿಕ ಕನ್ನಡ ನಾಟಕ : ಕೆ.ಮರುಳಸಿದ್ದಪ್ಪ – ಪು.ಸಂಖ್ಯೆ – 44

೧೪) ಕರ್ನಾಟಕ ರಂಗಭೂಮಿ : ಡಾ.ಎಚ್.ಕೆ.ರಂಗನಾಥ – ಪು.ಸಂಖ್ಯೆ – ೧೧೯

೧೫) ಮುದವೀಡು ಕೃಷ್ಣರಾಯರು : ಕ. ರಂಗಭೂಮಿಯ ಶತಮಾನೋತ್ಸವ ಸ್ಮಾರಕ ಗ್ರಂಥ ಪು.ಸಂಖ್ಯೆ ೬೫

೧೬) ಡಾ. ಬಸವರಾಜ ಜಗಜಂಪಿ : ಗರೂಡ ಸದಾಶಿವರಾಯರು ನಾಟಕ ಸಾಹಿತ್ಯ ಹಾಗೂ ವೃತ್ತಿ ರಂಗಭೂಮಿಯ ಅಧ್ಯಯನ – ಪು.ಸಂಖ್ಯೆ – ೧೮

೧೭) ಭಾರತೀಯ ಕಲಾದರ್ಶನ (ಸಂ) ಅ.ನ.ಕೃಷ್ಣರಾಯರು – ಪು.ಸಂಖ್ಯೆ – ೨೯೪

೧೮) ಆಧುನಿಕ ಕನ್ನಡ ನಾಟಕ : ಕೆ.ಮರುಳಸಿದ್ದಪ್ಪ – ಪು.ಸಂಖ್ಯೆ – ೫೩ (ಪ್ರಥಮ ಮುದ್ರಣ)

೧೯) ಡಾ. ವೀರಣ್ಣ ರಾಜೂರ

# ಅಧ್ಯಾಯ – ೩
# ಎಲ್.ಬಿ.ಕೆ. ಆಲ್ದಾಳರ ಜೀವನ

ಒಂದು ದೇಶದ ಆಸ್ತಿ ಎಂದರೆ ಸಾಹಿತ್ಯ, ಅಂತಹ ಸಾಹಿತ್ಯದ ಒಂದು ಭಾಗವೆಂದರೆ ನಾಟಕ. ನಾಟಕ ಮತ್ತು ನಾಟಕಕಾರರಿಲ್ಲದ ದೇಶವನ್ನು ಊಹಿಸಲು ಅಸಾಧ್ಯ. ಅಂತೆಯೇ, ಇಂಗ್ಲೆಂಡಿನ ಆಸ್ತಿ ಎಂದರೆ ಅದರ ಸಾಹಿತ್ಯ ; ಆ ಸಾಹಿತ್ಯದ ಶಿಖರವೆಂದರೆ ನಾಟಕ ಎಂಬ ಉಕ್ತಿಯೊಂದಿದೆ. ಈ ಉಕ್ತಿಯು ನಮ್ಮ ದೇಶಕ್ಕೂ ಅನ್ವಯಿಸುತ್ತದೆ. ಭಾರತೀಯ ರಂಗಭೂಮಿಗೆ ಸಾವಿರಾರು ವರ್ಷಗಳ ಚರಿತ್ರೆಯಿರುವಂತೆ ಕನ್ನಡ ರಂಗಭೂಮಿಗೆ ನೂರಾರು ವರ್ಷಗಳ ಚರಿತ್ರೆಯಿದೆ. ಚರಿತ್ರೆಯ ಒಂದು ಭಾಗವಾಗಿ ನಾಟಕಕಾರ ಲಾಲ ಮಹಮ್ಮದ ಬಂದೇ ನವಾಜ್ ಖಲೀಫ್ (ಎಲ್.ಬಿ.ಕೆ. ಆಲ್ದಾಳ) ಅವರ ಕುರಿತು ಇಲ್ಲಿ ಜೀವನ ಚಕ್ರ ಸಾಗಲಿದೆ. "ಸಾಹಿತಿಗಳ ಜೀವನ ಚರಿತ್ರೆ ಅರಿಯುವುದು, ಲೇಖನ ರೂಪದಲ್ಲಿ ಪ್ರಕಟಿಸುವುದು ಸಾಮಾನ್ಯ ಸಂಗತಿ, ಇತ್ತೀಚಿನ ಕಾಲ ಘಟ್ಟದಲ್ಲಿ ಸಾಹಿತ್ಯದ ವ್ಯಾಪ್ತಿಯೊಳಗೆ ನುಸುಳಿ ಜೀವನ ಚರಿತ್ರೆಯು ಕೂಡ ಒಂದು ಪ್ರಬುದ್ಧ ಬರಹವಾಗಿದೆ.

ಸರಳವಾಗಿ ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಓದುಗರಿಗೆ , ಸಹೃದಯರಿಗೆ, ತಿಳಿಸಲೇ ಬೇಕಾದ ಮಾಹಿತಿಯನ್ನು ಮುಚ್ಚುಮರೆ ಮಾಡದೇ ಜೀವನ ಚರಿತ್ರೆಯಲ್ಲಿ ಅಡಕವಾಗುವ ವ್ಯಕ್ತಿಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಸಾಧ್ಯಾಂತವಾಗಿ ಹೇಳುವುದೇ ಜೀವನ ಚರಿತ್ರೆಯೆಂಬ ಸಾಹಿತ್ಯಪ್ರಕಾರದ ಲಕ್ಷಣವಾಗಿದೆ. ಇದನ್ನೇ ಗಮನದಲ್ಲಿರಿಸಿಕೊಂಡು ಹಿರಿಯ ರಂಗಕರ್ಮಿ ಎಲ್.ಬಿ.ಕೆ ಯವರ "ಬದುಕು–ಬರಹ"ದ ಮೂಲಕ ಓದುಗರಿಗೆ, ಸಾಹಿತ್ಯಾಸಕ್ತರಿಗೆ ಈ ಮಹಾಪ್ರಬಂಧವನ್ನು ಅರ್ಪಿಸಲಾಗುತ್ತದೆ.

"ವೃತ್ತಿರಂಗಭೂಮಿಯ ನಾಟಕಗಳನ್ನು ನೋಡುತ್ತಿರುವ ಅಭಿಮಾನಿಗಳಿಗೆ ಚಿರಪರಿಚಿತ ಹೆಸರು ಎಲ್.ಬಿ.ಕೆ ಅವರದು ನಾಟಕರಂಗದ ಹೃದಯವಂತ ಎನಿಸಿ ಎಲ್.ಬಿ.ಕೆ. ಅವರು ಸಾಹೇಬ (ಮುಸ್ಲಿಂ) ರಾಗಿದ್ದರೂ ವೀರಶೈವರಾಗಿಯೇ ಬೆಳೆದವರು. ಒಂದು ದೃಷ್ಟಿಯಲ್ಲಿ ಅವರು ವೀರಶೈವ ಸಮಾಜದ ಅನರ್ಘ್ಯ ರತ್ನವೇ ಸರಿ. ಕವಿ, ಅಶುಕವಿ, ಪಂಡಿತ, ನಟ, ನಾಟಕಕಾರ, ಹಾಗೂ ದಿಗ್ದರ್ಶಕರಾಗಿದ್ದ ಎಲ್ ಬಿ ಕೆ ಅವರಿಂದ ಕನ್ನಡ ರಂಗಭೂಮಿಗೆ, ಸಾಹಿತ್ಯಕ್ಕೆ, ನಾಡಿನ ಸಾಂಸ್ಕೃತಿಕ ಪರಂಪರೆಗೆ ಸಾಕಷ್ಟು ಸೇವೆ ಸಂದಿದೆ. ಅಂಥವರನ್ನು ಸ್ಮರಿಸುವುದರ ಜೊತೆಗೆ ಅವರ ಆದರ್ಶಗಳನ್ನು ಉಳಿಸಿ ಬೆಳೆಸುವುದು ನಮ್ಮೆಲ್ಲರ ಅಗತ್ಯ ಕರ್ತವ್ಯವಾಗಿದೆ.

**ಆಲ್ದಾಳರ ಜನನ :** ಆಲ್ದಾಳ ಗ್ರಾಮದಲ್ಲಿ ಝುಳು–ಝುಳು ಹರಿಯುವ ಹಳ್ಳಗಳು, ಮಳೆಗಾಲದಲ್ಲಿ ಕಣ್ಣುಗಳಿಗೆ ನೀಡುವ ಆನಂದ, ಸೊಗಸು ಅಪ್ರತಿಮ, ಊರ ಮುಂದಿನ ಹನುಮಪ್ಪನ, ದ್ಯಾವಮ್ಮನ ಗುಡಿಗಳು ಭಕ್ತರಿಗೆ ಅಭಯ ನೀಡಿ, ಮನಸ್ಸಿಗೆ ಶಾಂತಿ–ನೆಮ್ಮದಿ ನೀಡುವಂತಾಗಿವೆ. ಭೈರಪ್ಪನ ಕಟ್ಟೆ, ದರ್ಗಾಗಳು, ಆ ಊರಿನ ಅನ್ಯೋನ್ಯತೆಗೆ, ಕೀರ್ತಿಗೆ ಸಾಕಾರ ಎನ್ನಿಸಿವೆ. ಇಂಥ ಪರಿಸರ ಕಂಡಾಗ, ಡಾ.ಪಂಚಾಕ್ಷರಿ ಹಿರೇಮಠ ಅವರ ಈ ಸಾಲುಗಳು ಎಷ್ಟೊಂದು ಪ್ರಸ್ತುತ ಃ–

"ಮಂದಿರ–ಮಸೀದಿಯಲಿರುವಾತ
ಒಬ್ಬನೆ ಪರಮಾತ್ಮನೆಂದರಿತು
ವಂದಿಸುತ, ಸಕಲರಿಗೂ ಪ್ರಾಣಪ್ರಿಯ
ನಾದಾತ ನೀತ".

ಇಂಥ ಸುಮಧುರ ಬಾಂಧವ್ಯದ ಊರಿನಲ್ಲಿ ಮುರ್ತಜಾ ಗೌಡರದು ಮಾಲಿಪಾಟೀಲಕಿ. ಇವರು ಪೂರ್ವಜರಿಂದ ಶರಣ ಸಂಪ್ರದಾಯದವರು ಇವರ ತಮ್ಮ ನಬೀಗೌಡರು ಅಧ್ಯಾತ್ಮಜೀವಿಗಳು, ಅನುಭಾವಿಗಳು, ತತ್ವಪದಕಾರರು. ಮುರ್ತುಜಾ ಗೌಡರ ಮಗಳು ಹುಸೇನಬಿ ಅವರನ್ನು ವಿಜಾಪೂರ ಜಿಲ್ಲೆಯ ಸಿಂದಗಿ ತಾಲೂಕಿನ ಬನಹಟ್ಟಿಯ ಪ್ರಸಿದ್ಧ ಖಲೀಫ್ ಮನೆತನದ ನಬೀಸಾಬರ ಮಗ ಬಂದೇನವಾಜರ ಜೊತೆ ಮದುವೆ ಮಾಡಿಕೊಡಲಾಗಿತ್ತು. ಬಂದೇನವಾಜ ಕಟ್ಟುಮಸ್ತಾದ ಜಗಜಟ್ಟಿ (ಪೈಲ್ವಾನ) ಆಳು ತುಂಬಿದ ಜೋಳದ ಚೀಲವನ್ನು ಬೆನ್ನಮೇಲೆ ಹೊತ್ತು, ಚೀಲದ ಮೇಲೆ ದಷ್ಟ–ಪುಷ್ಟ, ಧೃಡ ಶರೀರ ಹೊಂದಿದವನನ್ನು ಕೂಡಿಸಿಕೊಂಡು ವಿಜಾಪುರದ ಐತಿಹಾಸಿಕ ಪ್ರಸಿದ್ಧ ಉಪಲಿಬುರುಜ ಏರಿದ ಸಾಹಸಿ!!!. [೧]

ಈ ಮಹಾಪ್ರಬಂಧದ ಕೇಂದ್ರ ಬಿಂದುವಾಗಿರುವ, ಸ್ನೇಹ ಜೀವಿ, ಚತುರ ಮಾತುಗಾರರು ಆಗಿರುವ ಲಾಲಮಹ್ಮದ ಬಂದಾನವಾಜ ವಿಜಾಪುರ ಜಿಲ್ಲೆಯ ಸಿಂದಗಿತಾಲೂಕಿನ ಬನಹಟ್ಟಿಯಲ್ಲಿ ೧೫.೧೧.೧೯೩೮ರಲ್ಲಿ ಜನಿಸಿದರು.

ಎಲ್.ಬಿ.ಕೆ. ಜನ್ಮ ತಳೆದಾಗ ಅವರ ತಾಯಿ ಹುಸೇನಬೀ, ಬಡತನದ ಭೂತ ಬೆನ್ನಿಗೆ ಅಂಟಿಸಿಕೊಂಡು ಜೀವನ ಜೋಕಾಲಿ ಜೀಕುತ್ತಿರುವಾಗಲೇ ಬರಸಿಡಿಲು ಬಂದು ಎರಗಿತು ಬಾಲಕ ಲಾಲಮಹ್ಮದ ಮೂರು ವರ್ಷದವನಿದ್ದಾಗಲೇ ಪ್ರೀತಿಯ ತಂದೆಯನ್ನು ಕಳೆದುಕೊಂಡು ಅನಾಥ ಭಾವನೆ ಎದುರಿಸಬೇಕಾಯಿತು ತಾಯಿ–ಹುಸೇನಬಿ ವೈಧವ್ಯದ ವೈತರಣಿಯಲ್ಲಿ ಮಿಂದು ಮಡಿಯಾದಳು. ವಿಧಿ ಬರಹವನ್ನು ಯಾರು ತಾನೆ ತಪ್ಪಿಸಲು ಸಾಧ್ಯ. ಲಾಲಮಹ್ಮದ್‌ನಿಗೆ ತಾಯಿಯ ಆರೈಕೆ, ಮಮತೆ, ವಾತ್ಸಲ್ಯಗಳು ಮರೀಚಿಕೆಯಾದವು.

**ಬಾಲ್ಯ ಮತ್ತು ಶಿಕ್ಷಣ ಃ–** ಆಲ್ದಾಳ ಗ್ರಾಮದಲ್ಲಿ ಬಾಲಕ ಎಲ್.ಬಿ.ಕೆ.ಆಲ್ದಾಳ ಬಾಲ್ಯದ ದಿನಗಳನ್ನು ಕಳೆಯುತ್ತ, ಜೊತೆ–ಜೊತೆಗೆ ಪಾಠಶಾಲೆಯಲ್ಲಿ ವಿದ್ಯಾಭ್ಯಾಸ ನಿರತನಾದ. ಇದೇ ಸಮಯ ಮೂವರು ಮಾವನವರು ಬೇರೆ–ಬೇರೆ ಮನೆಗಳನ್ನು ಮಾಡಿ ಸಂಸಾರದಲ್ಲಿ ತೊಡಗಿಸಿಕೊಂಡರು. ಇದರ ಪರಿಣಾಮ ಎಲ್.ಬಿ.ಕೆ ಅವರ ಮೇಲೂ ಆಯಿತು. ಓದು ಕುಂಠಿತಗೊಂಡಿತು ಇದೊಂದು ಅವರ ಜೀವನದಲ್ಲಿ ದುರಂತ ಎಂದರೆ ತಪ್ಪಾಗಲಾರದು ಆರಂಭದಿಂದಲೂ ಕಹಿಯನ್ನು ಉಂಡು ಅರಗಿಸಿಕೊಳ್ಳುವ ಮನೋಭಾವ ಅವರದು. ಬಡತನ ಕಾಡಿದರೂ ಸಾಹಿತ್ಯ ಮಾತ್ರ ಶ್ರೀಮಂತವಾಗಿದೆ. ದೇಶ, ಭಾಷೆ, ಧರ್ಮಗಳ ಮೀರಿರುವುದರಲ್ಲೇ ಅವರು ದೊಡ್ಡ ವ್ಯಕ್ತಿಗಳಾದರು ಎಂಬುದಕ್ಕೆ ಸಾಕ್ಷಿಬೇಕೆ?.

**ಚಿಗೊರೊಡೆದ ರಂಗಾಶಕ್ತಿ :–** ಆಶ್ಚರ್ಯವೆಂದರೆ; ರಂಗಾಶಕ್ತಿ ಚಿಗುರೊಡೆದದ್ದು ಆಲ್ದಾಳ ಗ್ರಾಮದಲ್ಲಿ, ಊರಿನ ಹಿರಿಯ ನಾಗರಿಕರಾದ ಕೃಷ್ಣಪ್ಪ ದೊರಿಯವರ ಮುಂದಾಳತ್ವದಲ್ಲಿ ಸಂಜೀವಣ್ಣ ದೊರಿ ಹಾಲ್ಗಡ್ಲಿಯವರು "ಕನಕಾಂಗಿ" ಎಂಬ ಬಯಲಾಟವನ್ನು ಏರ್ಪಡಿಸಿದ್ದರು 'ಕೃಷ್ಣ'ನ ಪಾತ್ರವನ್ನು ಬಾಲಕ ಎಲ್.ಬಿ.ಕೆ ಆಲ್ದಾಳ ಅವರಿಗೆ ನಟಿಸುವಂತೆ ಪ್ರೇರೆಪಿಸಲಾಯಿತು. ಅದನ್ನು ತಾವು ನಿರ್ವಹಿಸುವ ಜವಾಬ್ದಾರಿಯನ್ನು ಸಂತೋಷದಿಂದ ಒಪ್ಪಿಗೆ ಕೊಟ್ಟರು. ನಾಟಕದ ದೃಶ್ಯ ಕಣ್ಣಿಗೆ ಕಟ್ಟಿದಂತಿತ್ತು, ಕೃಷ್ಣ ಗೋಕುಲ ನಿರ್ಗಮನ, ಗೋಪಿಯರು ಅವನನ್ನು ಸುತ್ತುಗಟ್ಟಿ ಹೋಗಬೇಡ ಎಂದು ಅಂಗಲಾಚುತ್ತಿದ್ದಾರೆ ಇಲ್ಲಿ ಭಕ್ತಿ–ಪ್ರೇಮಗಳನ್ನು ನಿರ್ವಾಜ್ಯ ರೀತಿಯಲ್ಲಿ ಒಪ್ಪಿಸುವ ರೀತಿ, ಎಲ್‌ಬಿಕೆ ಅಭಿನಯದ ರಸಸಿದ್ಧಿಯು ಎದ್ದು ಸಂಭ್ರಮಿಸುತ್ತಿತ್ತು. ಆಗ ೧೨ ವರ್ಷಕ್ಕೆ ಪಾತ್ರ, ಅರಳುವ ಪ್ರತಿಭೆಯ ಹುಡುಗನ ಅಭಿನಯ ಪ್ರೇಕ್ಷಕರ ಮನಸ್ಸು ಸೂರೆಗೊಂಡಿತು. ಇದಕ್ಕೆ ಸಾಕ್ಷಿ ಎಂಬಂತೆ ಪ್ರೇಕ್ಷಕರ ಕಡೆಯಿಂದ ಬಂದ ಚಪ್ಪಾಳೆ, ಸಿಳ್ಳೆ, ಒನ್ಸಮೋರ್, ಭಲೆ, ವಾಹವ್ವಾಗಳ ಮಹಾಪೂರ! ಅದು ಬರೀ ಮೆಚ್ಚುಗೆ ಅಲ್ಲ ಮುಂದೆ–ಮುಂದೆ ದಾಪುಗಾಲು ಹಾಕಲು ಹಾಸಿದ ನಡೆಮುಡಿ. ಈ ರೀತಿ ಅಮೋಘ ನಟನೆಯನ್ನು ಪ್ರದರ್ಶಿಸಿದ ಬಾಲಕ ಎಲ್.ಬಿ.ಕೆ ಮುಂದೆ ನಾಟಕಕಾರ, ಶ್ರೇಷ್ಠ ರಂಗನಟರಾಗುತ್ತಾರೆಂದು ಯಾರೂ ಊಹಿಸಿರಲಿಕ್ಕಿಲ್ಲ 'ಬೆಳೆಯ ಸಿರಿಯನ್ನು ಅದರ ಮೊಳಕೆಯಲ್ಲಿ ನೋಡುವಂತೆ; ಎಲ್.ಬಿ.ಕೆ ಅವರು ತಮ್ಮ ಸಾಮರ್ಥ್ಯವನ್ನು ಚಿಕ್ಕಂದಿನಲ್ಲಿಯೇ ಅಚ್ಚೊತ್ತುವಂತೆ ಮಾಡಿದರು. ಲಾಲ ಮಹ್ಮದ ಅವರ ಕೀರ್ತಿಯ ಜೊತೆಗೆ ಅವರು ಬೆಳೆದು, ನಟನೆಗೆ ದಾರಿ ತೋರಿದ 'ಆಲ್ದಾಳ' ಗ್ರಾಮದ, ಹೆಸರು ಜೀವನದ ಸಂಗಾತಿಯಾಯಿತು. ಲಾಲ ಮಹಮ್ಮದ್ ಬಂದೇ ನವಾಜ್ ಖಲೀಫ್ ಅವರು ಮುಂದೆ 'ಎಲ್.ಬಿ.ಕೆ.ಆಲ್ದಾಳ' ಎಂದೇ ಕರೆಯಿಸಿಕೊಳ್ಳುವಂತಾಯಿತು. ಒಬ್ಬ ಕವಿ ಕಲಾವಿದ, ನಾಟಕಕಾರ ಅಥವಾ ಸಾಹಿತಿಯ ಹೆಸರಿನಿಂದ ಊರಿನ ಹೆಸರು ಶಾಶ್ವತವಾಗಿ ಎಲ್ಲರ ನಾಲಿಗೆಯ ಮೇಲೆ ಉಳಿದ ಉದಾಹರಣೆಗಳಿಗೇನೂ ಕಡಿಮೆ ಇಲ್ಲ.

ಪ್ರಪಂಚದಲ್ಲಿ ಯಾವುದೇ ಒಬ್ಬ ವ್ಯಕ್ತಿ ತನ್ನ ಸಾಧನೆ ಸಿದ್ಧಿಗಳ ಮೂಲಕ ಹುಟ್ಟಿ ಬೆಳೆದು ನೆಲೆಸಿದ ಊರಿನ ಹೆಸರನ್ನು ಬೆಳಗಿಸುತ್ತಾನೆ ಕೆಲವೊಮ್ಮೆ ಊರ ಹೆಸರಿನಿಂದಲೇ ಆತ ಪ್ರಸಿದ್ಧಿಗೆ ಬರುತ್ತಾನೆ. ವ್ಯಕ್ತಿಯ ವ್ಯಕ್ತಿತ್ವ ಅರಳ ಬೇಕಾದರೆ ಆ ಗ್ರಾಮದ ಐತಿಹಾಸಿಕ, ಧಾರ್ಮಿಕ, ಸಾಂಸ್ಕೃತಿಕ ಪರಿಸರಗಳು ಮಹತ್ವದ ಪಾತ್ರವನ್ನುವಹಿಸುತ್ತವೆ.

ಸಾಹಿತಿ ವೆಂಕಟೇಶ ಅಯ್ಯಂಗಾರರಿಂದ ಮಾಸ್ತಿ, ರಾಮಸ್ವಾಮಿ ಅಯ್ಯಂಗಾರರಿಂದ ಗೊರುರು, ವೆಂಕಣಯ್ಯ ಅವರಿಂದ ತಳಕು, ಚಂದ್ರಶೇಖರರಿಂದ ನಾಗತಿಹಳ್ಳಿ, ನಾರಾಯಣರಾಯರಿಂದ ಹುಯಿಲು ಗೋಳು, ನಾಟಕಕಾರ ಹನಮಂತರಾಯರಿಂದ ಕಂದಗಲ್, ಶ್ರೀಕಂಠಶಾಸ್ತ್ರಿ ಅವರಿಂದ ನಲವಡಿ ಹೇಗೆ ಚರಿತ್ರೆಯಲ್ಲಿ ದಾಖಲಾದವೋ ಹಾಗೆಯೇ ಲಾಲ್ ಮಹ್ಮದರಿಂದ (ಎಲ್‌ಬಿಕೆ) ಆಲ್ದಾಳ ಗ್ರಾಮಕ್ಕೂ ನೆಲೆ,ಬೆಲೆ ಬಂದಿತು.

ಕಲಬುರ್ಗಿ ಜಿಲ್ಲೆಯ ಜೇವರ್ಗಿ ತಾಲೂಕಿನ ಮಳ್ಳಿ ಗ್ರಾಮಕ್ಕೂ ಮತ್ತು ಆಲ್ದಾಳ ಗ್ರಾಮಕ್ಕೂ ಎಲ್‌ಬಿಕೆ ಅವರು ತಮಗೂ ತಮ್ಮ ನಿಂತ ನೆಲಕ್ಕೂ ಕೀರ್ತಿಯನ್ನು ಹೆಚ್ಚಿಸಿದ ಮಹಾನುಭಾವರು. ಎಷ್ಟಾದರೂ, ಎಂತಾದರೂ ಆಲ್ದಾಳ ಎಂದರೆ ವಿಶಾಲವಾದ ತಂಪು ನೀಡುವ ಆಲದ ಮರ

ಇದ್ದಂತೆ ಅಲ್ಲವೆ?

"ಆಲ್ದಾಳ ಅವರ ರಂಗಾಶಕ್ತಿಗೆ ನೀರೆರೆದು ಪೋಷಿಸಿದವರಲ್ಲಿ ಇವರ ಮೂವರು ಸೋದರಮಾವನವರು ಎಂಬುದು ಜೀವನ ಪರ್ಯಂತ ಮರೆಯಲಾಗದ ನೆನಪು, ಹಿರಿಯಮಾವ ಹುಸೇನಪಟೇಲರು ಕೊಂಕಣಿ ಭಾಷೆಯಲ್ಲಿ ಬರೆದಿರುವಂಥ "ಅವ್ಯಕ್ತ ಬೋಧಾಮೃತ" ಎಂಬ ಗ್ರಂಥವನ್ನು ಕನ್ನಡಕ್ಕೆ ಭಾಷಾಂತರಿಸಿದವರು, ಮಧ್ಯಮಮಾವನವರಾದ ಲಾಡ್ಲೆ ಪಟೇಲರು ಕನ್ನಡದ ಮೇರುಪರ್ವತವೇ ಅವರಾಗಿದ್ದರು. ರಂಗಕಲಾಸಕ್ತರಾಗಿ ಬಾಳಿದವರು. ಬಯಲಾಟ ಕಲಿಸುವಲ್ಲಿ ಹಾಡುವಲ್ಲಿ ಪರಿಣಿತರು. ಇನ್ನು ಮೂರನೆಯ ಮಾವನವರಾದ ಸುಲ್ತಾನ ಪಟೇಲರು ಒಕ್ಕಲುತನ ಮಾಡುತ್ತಲೇ ಆಟ-ನಾಟಕಗಳಲ್ಲಿ ಪಾತ್ರವಹಿಸಿ ಜನಮುನ್ನಣೆಗಿಟ್ಟಿಸಿದವರು. ಸೋದರಮಾವನವರ ಮನೆತನ ಶರಣ ಸಂಸ್ಕೃತಿಯ ಪಡಿಯಚ್ಚು "ಸಾಹಿತ್ಯ ಮತ್ತು ಸಂಸ್ಕೃತಿಗಳು ಮಾನವನ ಅಂತರಂಗದ ವಿಶ್ವಾಸಕ್ಕೆ ದಾರಿ ಮಾಡಿಕೊಡುತ್ತವೆ ಹಾಗಾಗಿ, ಎಲ್‌ಬಿಕೆ ಅವರ ಸೋದರ ಮಾವನವರು ಏಕಾಗ್ರಚಿತ್ತರಾಗಿ ಸಾಹಿತ್ಯ ಮತ್ತು ಸಂಸ್ಕೃತಿಗಳನ್ನು ಉಳಿಸಿ, ಬೆಳೆಸುವಲ್ಲೂ ಮಹತ್ತರವಾದ ಯೋಗದಾನ ಮಾಡಿರುವದು ಪ್ರಶಂಸನಾರ್ಹ ತ್ರಿಮೂರ್ತಿಗಳಂತಿರುವ ಇಂತಹ ಹಿರಿಯ ಕಲಾವಿದರಾಗಿರುವ ಸೋದರ ಮಾವನವರ ಸಂಗ, ಅವಕಾಶ ಸಿಕ್ಕಿದ್ದು ಎಲ್‌ಬಿಕೆ ಅವರ ಸುಯೋಗ.

**ಆಲ್ದಾಳರ ಜೀವನ ರೂಪಿಸಿದ ಗುರುಗಳುಃ-** ಆಲ್ದಾಳರು ಪ್ರಾಥಮಿಕ ಶಿಕ್ಷಣಕ್ಕೆ ಪ್ರಸಿದ್ಧಿ ಹೊಂದಿದ ಸುರಪುರದ ಕಬಾಡಗೇರಿ ಸರ್ಕಾರಿ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಮುಂದುವರೆಸಿದರು. ಆ ಶಾಲೆಯಲ್ಲಿ ಪ್ರತಿಭಾವಂತ ಶಿಕ್ಷಕರ ಸಮೂಹವೇ ಇದ್ದಿತು. ಆಗಿನ ಕಾಲದಲ್ಲಿ ಶ್ರೀ ದೌಲತರಾಮ ಮಾಸ್ತರರು, ಯಂಕಯ್ಯ ಮಾಸ್ತರರು, ಅಂದರೆ ಅಕ್ಷರಗಳ ಖಣಿಯೇ ಆಗಿದ್ದರು. ಅವರು ಪಾಠ ಹೇಳುವ, ಮಕ್ಕಳ ಮನಸ್ಸಿನಲ್ಲಿ ಪಠ್ಯಪುಸ್ತಕಗಳ ವಿಷಯವನ್ನು ತಿಳಿಸಿಕೊಡುವ ಕಲಿಸುವ ಪದ್ಧತಿ ಅಲ್ಲಿನ ಮನೆ ಮಾತಾಗಿತ್ತು. ಶಿಕ್ಷಕರ ನಡೆ-ನುಡಿ ಗಾಂಭಿರ್ಯ ಮಕ್ಕಳ ಕಲಿಕೆಗೆ ಪ್ರೋತ್ಸಹ ನೀಡುವಂತಿತ್ತು ಎಲ್‌ಬಿಕೆ ಅವರಲ್ಲಿ ಈ ಗುರುಗಳ ಪ್ರಭಾವ ಎಷ್ಟು ಬೀರಿತ್ತು ಎಂದರೆ, ಈಗಲೂ ಕೂಡ ಅವರನ್ನು ತುಂಬ ಗೌರವದಿಂದ ಸ್ಮರಿಸಿಕೊಳ್ಳುತ್ತಾರೆ. ಗುರು-ಶಿಷ್ಯರ ಸಂಬಂಧ ಆದರ್ಶಮಯವಾಗಿರಬೇಕು. ಗುರು ಶಿಷ್ಯರವಂಶ ಬಳ್ಳಿಯು, ಬಹು ಸುಗಂಧ ಬೀರುವ ಕ್ಯಾದಿಗೆ ಗಿಡಕ್ಕೆ, ಸೂಜಿ ಮಲ್ಲಿಗೆಯ ಬಳ್ಳಿ ಸುತ್ತಿದಂತಿರಬೇಕು. ಬಳ್ಳಿ ಹೂ ಪರಿಮಳ ಬೀರುವುದೇ ಆಗಿದೆ. ನಾಲ್ಕನೆಯ ತರಗತಿ ಉತ್ತೀರರ್ಣರಾದ ಬಾಲಕ ಎಲ್‌ಬಿಕೆ ತಮ್ಮಲ್ಲಿಯ ನಯ-ವಿನಯತೆ ಹೆಚ್ಚಿಸಿಕೊಂಡು ಐದನೇ ತರಗತಿಗೆ ಪಾದಾರ್ಪಣೆ ಮಾಡಿದರು. ನಿರ್ದಿಷ್ಟವಾದ ಪಠ್ಯಪುಸ್ತಕ ಪಾಠದ ಸಂಗಡವೇ ಕೆಲವು ಅತ್ಯುತ್ತಮ ಕನ್ನಡ ಕಾವ್ಯಗಳನ್ನು ಅಭ್ಯಾಸ ಮಾಡುತ್ತಿದ್ದರು. ದೈವಭಕ್ತಿ ಹಾಗೂ ನೀತಿಬೋಧಕ ಗ್ರಂಥಗಳನ್ನು ಹೇಳಿಕೊಡುತ್ತಿದ್ದರು. ಹರಿಭಕ್ತಸಾರ, ಸೋಮೇಶ್ವರ ಶತಕ, ಹರಿಶ್ಚಂದ್ರ ಚರಿತ್ರೆ, ಜೈಮಿನಿ ಭಾರತ ಮುಂತಾದ ಶ್ರೇಷ್ಠ ಕಾವ್ಯಗಳ ಅಭ್ಯಾಸ ಸಾಗುತ್ತಿತ್ತು. ಕಾಪಿ ಬರೆಯಿಸುವುದು, ಹೇಳಿ ಬರೆಯಿಸುವುದು ಮುಂತಾದವುಗಳಿಂದ ಭಾಷಾಜ್ಞಾನವನ್ನು ಕುದುರಿಸುವುದರ ಜೊತೆಗೆ ಹಸ್ತಾಕ್ಷರವೂ ಚೆನ್ನಾಗಿರುವಂತೆ ನೋಡಿಕೊಳ್ಳುತ್ತಿದ್ದರು.

**ಎಲ್.ಬಿ.ಕೆ.ಆಲ್ದಾಳರ ವಿವಾಹ :–** ಆಲ್ದಾಳರ ಮಾತಿನಲ್ಲಿಯೇ ಕೇಳಿರಿ. " ಅಂತಗಂತ ಕೂಡಿದ್ರ ಸಂತಿ–ಭಾಳ ಛಲೋ ಆಗತ್ತಂತ" ನನ್ನ ಕಿರಿಯಮಾವನ ಮಗಳೊಡನೆ ನನ್ನ ಮದುವೆ ಮಾಡಿದರು. ಆಕೆ ಹುಟ್ಟಿದ ಮೂರು ತಿಂಗಳಲ್ಲಿಯೇ ಆಕೆಯ ತಾಯಿ ತೀರಿಕೊಂಡ ಪ್ರಯುಕ್ತ ನನ್ನ ತಾಯಿಯೇ ಜೋಪಾನ ಮಾಡಿದ್ದಳು. ಆಕೆ ಬೆಳೆದು ದೊಡ್ಡವಳಾದಾಗ, ಬೇರೆಡೆಗೆ ಎಲ್ಲಿಯೂ ಮದುವೆ ಮಾಡಿಕೊಡಲಿಲ್ಲ ನನ್ನತಾಯಿ, ಯಾಕಂದರೆ ಪರದೇಶಿ ಹುಡುಗಿಗೆ ಯಾರು ಕರೆದುಕೊಂಡು ಬರವ್ರು. ಆಕೆಯ ತಂದೆ ಇನ್ನೊಂದು ಮದುವೆ ಮಾಡಿಕೊಂಡಾನ; ಹೊರಗೆ ಎಲ್ಲಿ ಕೊಡೋದಿಲ್ಲ. ನನ್ನ ಮಗನಿಗೆ ತೆಗೆದುಕೊಳ್ಳತ್ತೇನೆ ಅಂತ ಹಠ ಮಾಡಿದಳು. ಆಕೆ (ನನ್ನ ಹೆಂಡತಿ) ಗಂಡನ ಮನಿ ನೋಡಿಲ್ಲ, ನಾನು (ಎಲ್‌ಬಿಕೆ) ಹೆಂಡತಿ ಮನಿ ನೋಡಿಲ್ಲ; ಅದೇನೇ ಇರಲಿ ಎಲ್‌ಬಿಕೆ ಅವರ ಸತಿ ಅಮೀನಾಬಿ ಅವರು

"**ಕಾರ್ಯೇಸು ದಾಸಿ ಕರುಣೇಸು ಮಂತ್ರಿ**
**ರೂಪೇಚ–ಲಕ್ಷ್ಮಿ! ಕ್ಷಮಯಾ ಧರಿತ್ರಿ**
**ಸ್ನೇಹೇಚ ಮಾತಾ ! ಶಯನೇಷು ರಂಭಾ**
**ಷಡ್ಗುಣಾ ಯುಕ್ತಾ ಕುಲಧರ್ಮ ಪತ್ನಿ**"

**"**ತಮ್ಮ ದಾಂಪತ್ಯ ಜೀವನದ ಬಗ್ಗೆ ಎಲ್.ಬಿ.ಕೆ ಹೀಗೆ ಹೇಳುತ್ತಾರೆ "ನನ್ನ ಕಷ್ಟ–ಸುಖಗಳಲ್ಲಿ ಸಮಭಾಗಿಯಾದ ನನ್ನ ಹೆಂಡತಿ ಅಮೀನಾ, ನಾನೆಲ್ಲಿಗೆ ಹೋಗಲಿ ಯಾಕೆ? ಎಂದು ಕೇಳಿದವಳಲ್ಲ, ಊರಿಂದ ಬಂದ ಬಳಿಕ ಎಲ್ಲಿಂದ ಬಂದಿರಿ, ಏನು ತಂದಿರಿ ಎಂದು ಕೇಳಿದವಳಲ್ಲ, ನನಗೆ ಸೀರೆಬೇಕು, ರವಿಕೆಬೇಕು, ಬಂಗಾರ, ಬೆಳ್ಳಿ ಬೇಕು ಎಂದು ಹಟ ಹಿಡಿದವಳಲ್ಲ, ಇದ್ದುದರಲ್ಲಿಯೇ ಸಂತೃಪ್ತಿ ಜೀವನ ಸಾಗಿಸಿದ ಸಾಧಕಿ.[3]

"ಸಹನಾ ಧರಿತ್ರಿ"ಯಾಗಿದ್ದ ಸತಿ ಅಮಿನಾ ಎಲ್‌ಬಿಕೆ ಅವರ ಜೊತೆ ಸಂಯಮದ ಸಂಸಾರ ನಡೆಸಿದರು ತಿಂಗಳುಗಟ್ಟಲೆ ಪತಿರಾಯ ನಾಟಕದ ಗೀಳು ತಲೆಗೇರಿಸಿಕೊಂಡು ಊರಿಂದೂರಿಗೆ ಅಲೆಮಾರಿಯಂತೆ ಅಲೆಯುತ್ತಿದ್ದರೂ ಅವರು ತಮ್ಮ ಮಕ್ಕಳನ್ನು ಸಂತೈಸಿಕೊಂಡು ಇದ್ದುದರಲ್ಲಿಯೇ ಕಾಲ ಕಳೆಯುತ್ತಿದ್ದರು. ತಾಳಿಕಟ್ಟಿಸಿಕೊಂಡು ಬಂದಾಗಿನಿಂದ ಎಲ್ಲವನ್ನು ತಾಳಿಕೊಂಡು ಬಂದ ಎಲ್‌ಬಿಕೆ ಅವರ ಹೆಂಡತಿ ಅಮೀನಾ ತಾಳಿಗೆ ಮೇಳವಾಗುವಂಥ ಇನ್ನೊಂದು ಆಭರಣಕ್ಕೆ ಎಂದು ಆಸೆ ವ್ಯಕ್ತಪಡಿಸಿರಲಿಲ್ಲ. ಇಂತಹ ಸತಿ ಶಿರೋಮಣಿಯ ಸಹಕಾರಕ್ಕಾಗಿಯೇ ಎನೆಲ್ಲವನ್ನು ಸಾಧಿಸಿದರು. ಕನ್ನಡ ರಂಗಭೂಮಿಯಲ್ಲಿ ಉತ್ತುಂಗಕ್ಕೆ ಏರಿದರು.

ಸುಖೀ ದಾಂಪತ್ಯದ ಫಲವಾಗಿ ಸುಪುತ್ರಿ ಮುಮ್ತಾಜಬೇಗಂ, ಸುಪುತ್ರರಾದ ಮಹ್ಮದ ರಫಿ ಮತ್ತು ಮಹ್ಮದ ಶಫಿ ಜನ್ಮ ತಾಳಿದರು. ಮೂರು ಮಕ್ಕಳು ಕೂಡಾ ತಾಯಿಯ ಸಂಸ್ಕಾರವನ್ನೇ ಅಳವಡಿಸಿಕೊಂಡವರು.

**ಇದ್ಯಾವ ಸಂಸ್ಕೃತಿ :** ಎಲ್‌ಬಿಕೆ ಅವರು ತಮ್ಮ ಜೀವನದಲ್ಲಿ ಅನುಭವಿಸಿದ ಸಂಕಟಗಳು ಹಲವಾರು. ಆದರೆ ಅವರ ತಾಯಿ ಹುಸೇನಬೀ ಸಾವು ಕಂಡಾಗ, ಸತ್ತ ಮೇಲೂ ಆ ತಾಯಿಗೆ ಸಂಕಟ ಬಿಡಲಿಲ್ಲ

ಎಂದು ಕೇಳಿದರೆ ಎಂಥ ಕಟುಕನ ಕಣ್ಣಲ್ಲೂ ನೀರು ಬಾರದೆ ಇರದು, ಸಾವು ಎದುರಾದಾಗ ಅದನ್ನು ಗೌರವದಿಂದ ಕಾಣಬೇಕಾದವರೇ ಅವರ ಸಮಾಜದ ಬಾಂಧವರು ಹೊಟ್ಟೆ ಉರಿಸಿಕೊಂಡದ್ದು ದೈವಿ ದುರ್ವಿಪಾಕವೇ ಸರಿ. "ಮುಸ್ಲಿಂ ಸಮಾಜದವರು (ಜಮಾತ್) ಆಲ್ದಾಳರು ಮಸೀದಿಗೆ, ಇನ್ಯಾವುದೇ ಧಾರ್ಮಿಕ ಕಾರ್ಯಗಳಿಗೆ ಚಂದಾ ನೀಡಿಲ್ಲವೆಂದು ಖಬರಸ್ಥಾನದಲ್ಲಿ ಅಂತ್ಯಸಂಸ್ಕಾರ ಮಾಡುವುದಕ್ಕೆ ಅಡ್ಡಿಪಡಿಸಲು, ಡೋಲಿ ಕೊಡುವುದಿಲ್ಲ, ಎಂದು ಖಡಾಖಂಡಿತವಾಗಿ ಹೇಳಿದ್ದು ಆಘಾತಕಾರಿ ಸಂಗತಿಯಾಗಿತ್ತು. ಇದನ್ನು ಅರಿತ ಇಡೀ ಊರಿನ ಗಣ್ಯರು, ಮಾನ್ಯರು, ಸ್ಥಳಕ್ಕೆ ಬಂದು "ನೀವೇನೂ ಚಿಂತೆಮಾಬ್ಯಾಡ್ರಿ ಸರ್, ನಾವು ನಿಂತು ಮಾಡ್ತೀವಿ ಎಂದು ತೋಳೇರಿಸಿ ನಿಂತರಲ್ಲದೆ, ಡೋಲಿ ನೀವು ಕೊಡದೇ ಇದ್ದಲ್ಲಿ ನಮ್ಮ ಸಂಪ್ರದಾಯದಂತೆ ನಾವು ಮಣ್ಣು ಮಾಡುತ್ತೇವೆ ಎಂದು ಬೆದರಿಕೆ ಹಾಕಿದಾಗ, ಸಮಾಜದವರು ತಲೆ ತಗ್ಗಿಸಿ ತಮ್ಮ ತಪ್ಪಿನ ಅರಿವು ತಿಳಿದು ಅಂತಿಮ ಸಂಸ್ಕಾರ ನೆರವೇರಿಸಿದರು. ನಿಜವಾಗಿಯೂ ಇಂಥ ಸಂದರ್ಭದಲ್ಲಿ ಈ ಗುಣಗಳು ಸಾರ್ವಜನಿಕವಾಗಿಯೂ ಗ್ರಾಮದ ಜನತೆಯಮುಂದೆ ಪ್ರಕಟವಾಗಬಾರದಿತ್ತು. "ಐದು ಹೊತ್ತು ನಮಾಜು ಮಾಡಿದರೇನು ಒಳಗಿನ ಗಲೀಜು ತೊಳೆಯದಿದ್ದರೆ?" [೩] ತಮ್ಮ ಬಾಂಧವರ ಬಾಲಿಷ ಬುದ್ಧಿಯನ್ನು ಕಂಡು ಎಲ್.ಬಿ.ಕೆ ಅವರ ಹೃದಯಾಂತರಾಳದಿಂದ ಬಂದ ಮಾತುಗಳಿವು". ಇದು ಒಬ್ಬ ಜಾತ್ಯಾತೀತ ನಿಲುವಿನ ಲೇಖಕನಿಗಾದ ಆಘಾತ, ಆಲ್ದಾಳರನ್ನು ನೋಡಿದ ಯಾರಿಗಾದರೂ ಇವರು ಮುಸ್ಲಿಂ ಸಮುದಾಯಕ್ಕೆ ಸೇರಿದವರಷ್ಟೇ ಎನ್ನಲಾಗುವದಿಲ್ಲ. ಅವರ ಹೆಸರೇನೋ 'ಲಾಲ ಮಹ್ಮದ ಬಂದೇನವಾಜ ಖಲೀಫ್ ಆಲ್ದಾಳ' ಎಂದಿದೆ, ಆದರೆ ಇವರು ಕುಳಿತರೂ, ನಿಂತರೂ 'ಬಸವ' 'ಬಸವ' ಎನ್ನುವ ಭಕ್ತಿವಂತರು. ಮಹಾತ್ಮ ತಿಂಥಣಿಯ ಮೌನೇಶ್ವರರ ಮಾತು ಇಲ್ಲಿ ನೆನಪಿಸಿಕೊಳ್ಳೋಣ.

**"ಹಿಂದು–ತುರುಕರಿಗೆ ಚಂದ್ರನೊಬ್ಬನೆ**
**ನಿಂದಿಸಿದವನೆ ಅಧಮನು, ಕಾಮದ**
**ಅಂಧರಿಗೇಕೆ ದರ್ಪಣವು, ಸಕಲವು**
**ಒಂದೇ ಎಂದು ಕಂಡ ಗುರು ಬೇರೆ ಬಸವಣ್ಣ".**

ಜಾತಿ–ಜಾತಿಗಳ ನಡುವೆ ಭೇದವೇಕೆ? ಮಾನವ ಜಾತಿ ಒಂದೇ ಎಂದು ಸಾರಿದ ಪುಣ್ಯಭೂಮಿಯಿದು.

**ಭಾವೈಕ್ಯತೆಯ ರೂವಾರಿ :** ಕೋಮು ದಳ್ಳುರಿಯನ್ನು ಹೊತ್ತಿಸಿ ಸ್ವಾರ್ಥವನ್ನು ಈಡೇರಿಸಿಕೊಳ್ಳುವ ಇಂದಿನ ಸಮಾಜದಲ್ಲಿ ಎಲ್‌ಬಿಕೆ ಆಲ್ದಾಳರು ಅಪರೂಪದ ಶಕ್ತಿ. ತಾನು ಅಲ್ಪಸಂಖ್ಯಾತ ಮುಸ್ಲಿಂ ಸಮಾಜಕ್ಕೆ ಸೇರಿದರೂ ಪರಧರ್ಮೀಯರೊಂದಿಗೆ ಬೆರೆಯುವ ಸಕ್ಕರೆ ಗುಣ ವಿಶೇಷವಾದುದು, ತನ್ನಷ್ಟಕ್ಕೆ ತಾನು ರಂಗ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿರುವ ಚೇತನ, ಅವರ ಅಂತರಾತ್ಮ ಸೂಫಿ ಸಂಸ್ಕೃತಿಯ ಫಲವತ್ತತೆಯಿಂದ ಸಂಸ್ಕಾರಗೊಂಡಿದೆ. ಉದಾತ್ತ ಮೌಲ್ಯಗಳ ಅನುಸಂಧಾನಕ್ಕೆ ಯಾವುದೇ ಜಾತಿ–ಮತ, ಪಂಥ, ಪಂಗಡ, ಪರಂಪರೆ, ಭಾಷೆ ಅಡ್ಡ ಬರುವುದಿಲ್ಲ ಅದಕ್ಕಾಗಿಯೇ ಆಲ್ದಾಳ 'ಕುರಾನ್' ಸಂಸ್ಕೃತಿಯ ಒಡಲಿನಲ್ಲಿಯೇ 'ಪುರಾಣ' ಸಂಸ್ಕೃತಿಯ ಬೀಜಗಳನ್ನು ಬಿತ್ತಿದರು. ಪ್ರವಾದಿ ಮಹಮ್ಮದರ ದೈವವಾಣಿ ಧ್ವನಿಯಲ್ಲಿಯೇ ಸಂತ, ಮಹಾಂತರ ಸಂವಾದಗಳನ್ನು ಆಲಿಸಿದ

ಬೃಹತ್ ಆಲದ ಮರವಿದು.

**ಮರೆಯಲಾಗದ ಬಾಲ್ಯದ ನೋವು :** "ಸೋದರ ಮಾವಂದಿರ ಹೆಂಡರು ಮಕ್ಕಳು ನನ್ನವರಾಗಿರಲಿಲ್ಲ. ಅವರು ಕೊಡುವ ಕಷ್ಟಗಳು ನನ್ನ ಜೀವನದಲ್ಲಿ ತುಂಬಾ ನೋವುಂಟು ಮಾಡುತ್ತಿದ್ದವು. ಮನೆಯ ಕೆಲಸಗಳನ್ನು ನಾನೇ ಮಾಡಬೇಕು, ಅವರೆಲ್ಲರ ಬಟ್ಟೆಗಳನ್ನು ನಾನೇ ಒಗೆಯಬೇಕು. ಒಲೆ ಹೊತ್ತಿಸಿಕೊಡಬೇಕು, ಕಸ ಗುಡಿಸಬೇಕು, ದೂರದ ಬಾವಿಯಿಂದ ನೀರು ತರಬೇಕು. ಮಳೆ ಬರಲಿ, ಚಳಿ ಇರಲಿ ಬೇನೆ, ಬೇಸರಿಕೆ ಏನೇ ತೊಂದರೆ ಇರಲಿ ಅವುಗಳನ್ನು ತೋರಿಸಿಕೊಳ್ಳದೆ, ಎಲ್ಲವನ್ನು ನುಂಗಿಕೊಂಡು ನಿರ್ವಹಿಸಬೇಕು. ಇಷ್ಟಾಗುವುದರಲ್ಲಿ ಶಾಲೆಗೆ ಹೊತ್ತಾಗುತ್ತದೆ ಎಂದು ಉಪವಾಸವಿದ್ದು ಓಡುತ್ತ, ತೇಕುತ್ತ, ಭಯದಿಂದ ಹೋಗಬೇಕು. ಪ್ರಾರ್ಥನೆ ನಡೆಯುತ್ತಿದ್ದರೆ ಶಾಲೆಯ ಹೊರಗಡೆ ಮುಂದೇನು, ಶಾಲೆಯಲ್ಲಿ ಶಿಕ್ಷೆ ಕಾಯ್ದಿದೆ ಎಂದು ಕಣ್ಣುಬಿಟ್ಟ ನಿಲ್ಲಬೇಕು. ಶಾಲೆಯ ಹೆಡ್ಮಸ್ತರ್ ನಾರಾಯಣಸಿಂಗ್ ಅವರು ಶಿಸ್ತಿನ ಸಿಪಾಯಿ, ಅಶಿಸ್ತು ಸರ್ವಥಾ ಒಪ್ಪುತ್ತಿರಲಿಲ್ಲ, ಶಾಲೆಯ ಶಿಕ್ಷಕರು ಶಾಲೆಯ ಸಮಯಕ್ಕೆ ಮುಂಚಿತವಾಗಿ ಕಡ್ಡಾಯವಾಗಿ ಪ್ರಾರ್ಥನೆಯಲ್ಲಿ ಭಾಗವಹಿಸಬೇಕು ಮೈಗಳ್ಳತನಕ್ಕೆ ಚುರುಕು ಮುಟ್ಟಿಸುತ್ತಿದ್ದರು. ಅದೇ ರೀತಿ ಶಾಲೆಗೆ ಮಕ್ಕಳು ಸಕಾಲಕ್ಕೆ ಬಾರದೇ ಹೋದವರು ಶಿಕ್ಷೆಗೆ ಗುರಿಯಾಗುತ್ತಿದ್ದರು ಬ್ರಿಟಿಷರ ತರಹದ ಹೆಡ್ ಮಾಸ್ತರ್ ನಾರಾಯಣಸಿಂಗರು. ಕೆಂಪು ಬಣ್ಣದ ಅವರ ಮುಖ, ಕೆಂಗಣ್ಣು ಕಂಡರೆ ಶಾಲಾ ಮಕ್ಕಳು ಚೊಣ್ಣಗಳಲ್ಲಿಯೇ ವಿಸರ್ಜಿಸುತ್ತಿದ್ದರು" ಎಂದು ಎಲ್‌ಬಿಕೆ ಅವರು ತಮ್ಮ ಮುಖ್ಯಗುರುಗಳನ್ನು ಈಗಲೂ ಸ್ಮರಿಸಿಕೊಳ್ಳುತ್ತಾರೆ. ಎಲ್‌ಬಿಕೆ ಅವರು ನಿತ್ಯವೂ ಏಟು ತಿಂದು-ತಿಂದು ಒಂದು ರೀತಿಯಲ್ಲಿ ಹೆಡ್ಮಾಸ್ತರ ಶಿಷ್ಯನ ಸಂಬಂಧ ಗಾಢವಾಗಿ ಪರಿಣಮಿಸಿತು. ಬೇಸರಪಟ್ಟು ಹೆಡ್ಮಾಸ್ತರ ಕೊನೆಗೂ, "ನಾಳೆ ನೀನು ಶಾಲೆಗೆ ಬರುವಾಗ ನಿಮ್ಮ ಪಾಲಕರನ್ನು ಕರೆದುಕೊಂಡು ಬರಬೇಕು" ಎಂದು ಕಟ್ಟಪ್ಪಣೆ ಮಾಡಿದರು. ಎಲ್‌ಬಿಕೆ ಸೋದರ ಮಾವನನ್ನು ಕಂಡು ಮುಖ್ಯ ಗುರುಗಳು ಏನು ಹೇಳಿದರೆಂಬುದು ಗೊತ್ತಾಗದಿದ್ದರೂ, ಮನೆಗೆ ಬಂದು ತಮ್ಮ ತೊಡೆಯ ಮೇಲೆ ಕುಳ್ಳಿರಿಸಿಕೊಂಡು, "ನಿಮ್ಮ ತಂದೆ ಬದುಕಿದ್ದರೆ ಹೀಗಾಗುತ್ತಿರಲಿಲ್ಲ" ಎಂದು ಆಲ್ದಾಳರ ತಲೆಯ ಮೇಲೆ ಕೈಯಿಟ್ಟು ಕೂದಲನ್ನು ಬೆರಳುಗಳಿಂದ ನೇವರಿಸುತ್ತ, ಕಣ್ಣಲ್ಲಿ ನೀರು ತುಂಬಿಕೊಂಡರು.

ಮಾವನವರು ತಮ್ಮ, ಹೆಂಡಿರು-ಮಕ್ಕಳಿಗೆ ತಾಕೀಜು ಮಾಡಿ ಇನ್ನು ಮುಂದೆ ಶಾಲೆಗೆ ಬೇಗನೆ ಕಳುಹಿಸಿಕೊಡಿ, ಪರದೇಶಿ ಮಗುವಿಗೆ ವಿನಾಕಾರಣ ತೊಂದರೆಕೊಡಬಾರದೆಂದು ಎಚ್ಚರಿಸಿದರು".[೪] ಪುಣ್ಯದ ಬೆಳಸು ಕಡಿಮೆಯಾದಾಗ ಪಾಪದ ಬೆಳೆಸು ಹೆಚ್ಚುತ್ತದೆ!. ಚಿಕ್ಕಂದಿನಲ್ಲಿ ಆಲ್ದಾಳರ ಬದುಕು ಬವಣೆಯಗಾಣಕ್ಕೆ ಸಿಲುಕಿ ರಸಹೀರಿದ ಕಬ್ಬಿನ ಸಿಪ್ಪೆಯಾಗಿದ್ದರೂ ಅದನ್ನು ಮನಸ್ಸಿನಲ್ಲಿಟ್ಟುಕೊಳ್ಳದೆ ಎಲ್ಲರಿಗೂ ತಮ್ಮ ನಡತೆಯ ಮೂಲಕ ಎಲ್ಲರಿಗೂ ಸಿಹಿಯಾದ ರಸದೌತಣವನ್ನೇ ನೀಡಿದ್ದಾರೆ.

**ಪುಟಕ್ಕಿಟ ಚಿನ್ನ :** ಈ ಜಗದಲ್ಲಿ ಮನುಷ್ಯ-ಮನುಷ್ಯರಲ್ಲಿ ಪ್ರೇಮ, ಸಹಕಾರ, ಸೌಜನ್ಯ ಸಹಾಯ ನೀಡಿ ಬದಲಾವಣೆ ತರಬೇಕು. ಅಸಹಕಾರ, ಅಸಹನೆಯ ಮೂಲಕ ಲೋಕದ ಡೊಂಕು ತಿದ್ದವುದು ಸಾಧ್ಯವಿಲ್ಲ, ನಮ್ಮ ತನು, ಮನ ಸಂತೈಸಿಕೊಳ್ಳುವ ಬಹುದೊಡ್ಡ ಜವಾಬ್ದಾರಿ ನಮ್ಮ ಮೇಲಿದೆ ಎಂಬ ಧೋರಣೆ ಹೊಂದಿರುವ ಎಲ್‌ಬಿಕೆ ಅವರು, ಮಾವಂದಿರರ ಹೆಂಡಿರು, ಒಂದು

ವೇಳೆ ಅವರೇ ಕಷ್ಟ ಕೊಡದಿದ್ದರೆ? ತಾಪತ್ರಯ ನೀಡದಿದ್ದಲ್ಲಿ ? ಮಾವನ ಮನೆ ಬಿಟ್ಟು ಬರುತ್ತಿರಲಿಲ್ಲವೇನೋ? ಭವಿಷ್ಯದ ಸಾಹಿತ್ಯದ ತೇರನ್ನು ಎಳೆಯುತ್ತಿರಲಿಲ್ಲವೇನೊ? ಬೆಂಕಿಯಲ್ಲಿ ಬೆಂದ ಚಿನ್ನ ತನ್ನ ಹೊಳಪು ದ್ವಿಗುಣ ಗೊಳಿಸುವಂತೆ ಆಲ್ದಾಳ ಅವರು ಪಟ್ಟ ಕಷ್ಟಗಳಿಂದಾಗಿ ಪುಟ್ಟಕ್ಕಿಟ್ಟ ಚಿನ್ನದಂತಾದರು. ಅವರೇ ಹೇಳುವಂತೆ; "ಕಷ್ಟ ಕೊಡದಿದ್ದರೆ ತಾಪತ್ರಯ ನೀಡದಿದಲ್ಲಿ ಇಷ್ಟೊಂದು ಗಟ್ಟಿಯಾಗುತ್ತಿರಲಿಲ್ಲ – ಸಾಹಿತ್ಯ ಸಿರಿಗಿರಿ ಏರುವ ಪ್ರಮೇಯವೂ ಬರುತ್ತಿರಲಿಲ್ಲ, ಒಂದು ರೀತಿಯಲ್ಲಿ ಹಿಂಸೆಕೊಡುವ ಮೂಲಕ ಗುರುಗಳಾಗಿ ಮುಮ್ಮಾರ್ಗ ತೋರಿಸಿದರು ಅನ್ನಿಸುತ್ತದೆ".[೫] ತಾಳ್ಮೆ, ಸಹನೆ, ಬದುಕಿಗೆ ನಂದಾದೀಪ ಎಂಬ ಜಾಣ ನಡೆಯನ್ನು ಆಲ್ದಾಳರು ಯೋಚಿಸುತ್ತಿರುವುದು ಉತ್ತಮ ಸಂಗವಲ್ಲವೆ? ಹೀಗೆ ಆಲ್ದಾಳರು ಪುಟಕ್ಕಿಟ್ಟ ಚಿನ್ನದಂತಾದರು.

**ನೆನಪುಗಳು ಸಾಯಿವುದಿಲ್ಲ :** ಎಲ್‌ಬಿಕೆ ಅವರು ಜೀವನದಲ್ಲಿ ಅನೇಕ ಕಹಿ ಘಟನೆಗಳು ಎದುರಿಸಿಯೂ ಮತ್ತೊಬ್ಬರ ಬಗ್ಗೆ ಎಂದೂ ಅಸಹನೆ ತೋರಿಸಿಕೊಂಡವರಲ್ಲ, ಅವರ ಮಾತಿನಲ್ಲಿಯೇ ಆಲಿಸೋಣ, "ನೆನಪುಗಳು ಸಾಯುವುದಿಲ್ಲ, ಮತ್ತೆ ನಿಮ್ಮನ್ನು ಹಿಂದಕ್ಕೆ ಕರೆದುಕೊಂಡು ಹೋಗುತ್ತೇನೆ. "ನಾನು ಚಿಕ್ಕವನಿದ್ದಾಗ ನನ್ನ ತಂದೆಯ ತಾಯಿ, ಅಜ್ಜಿ, ನನಗೆ ಮಾತನಾಡಿಸಲು ಆಲ್ದಾಳ ಗ್ರಾಮಕ್ಕೆ ಬಂದಾಗ, ಅಜ್ಜಿಯ ಬೆನ್ನು ಹತ್ತಿ ತಿನ್ನುವ ಬಡತನ ನನ್ನ ಅಜ್ಜಿ ಯಾರದೋ ತೋಟಕ್ಕೆ ಹೋಗಿ ಕಾಯಿಪಲ್ಲೆ ತಂದು ಪರ ಊರಿಗೆ ಹೋಗಿ ಮಾರಿಕೊಂಡು ಬಂದಾಗಲೇ ಅಜ್ಜಿಯ ಮನೆ ಒಲೆ ಹೊತ್ತಬೇಕು! ಒಂದು ಸಲ ನನ್ನಜ್ಜಿಯ ಬೆನ್ನು ಹಿಂದೆ ಬಾಡ(ಹಲ್ಲು) ಮಾರಲು ಹೋಗಿದ್ದೆ. ಶ್ರೀಮಂತರ ಮನೆಯಲ್ಲಿ ನವಣಿ ಕುಟ್ಟಿ ತೂರಿದ ಹೊಟ್ಟು ನನ್ನಜ್ಜಿ ಕಟ್ಟಿಕೊಂಡಳು. ಆ ಮನೆಯವರು ಯಾಕೆ ಅಂತ ಕೇಳಿದಾಗ "ಮನ್ಯಾಗ ಆಡಿನ ಮರಿ ಐತ್ರಿಯವ್ವ" ಅಂತ ಹೇಳಿ, ಬಿಕ್ಕಿಬಂದ ದುಃಖವನ್ನು ನುಂಗಿದರು.[೬] ನನ್ನಜ್ಜಿ ತೋಟದ ಮಾಲೀಕರಿಗೆ ಕೊಡುವುದನ್ನು ಕೊಟ್ಟು ಉಳಿದ ಗಿದ್ದನ ಜೋಳದಲ್ಲಿ ತಾವು ತಂದ ನವಣಿ ತೌಡು ಕಲಿಸಿ, ಬೀಸಿದ ಹಿಟ್ಟಿನಿಂದ ರೊಟ್ಟಿ ಉಣಿಸಿದ್ದು ನನಗಿನ್ನು ಊಟಕ್ಕೆ ಕುಳಿತಾಗ ತುತ್ತುತುತ್ತಿಗೆ ಬರುತ್ತದೆ. ನೆನಪುಗಳು ಸಾಯುವುದಿಲ್ಲ, ತಾನಿರುವವರೆಗೆ ಅವು ಹಚ್ಚ ಹಸಿರು", ಹೌದು, ಇದು ಜೀವ, ಇದುವೇ ಜೀವನ. ಇದನ್ನು ನಗು–ನಗುತ್ತ ಪಾರು ಮಾಡಿಕೊಳ್ಳಬೇಕು.

ಎಲ್‌ಬಿಕೆ ಅವರನ್ನು ಬೆಂಕಿಯಲ್ಲಿ ಅರಳಿದ ಹೂ ಎನ್ನುವದು ಸಮಂಜಸ, ಹಲವಾರು ಪ್ರಸಂಗಗಳಲ್ಲಿ ಹಲವಾರು ಘಟನೆಗಳಾಗಿವೆ. ಕುಳಿತ ಸ್ಥಳದಿಂದ ಅವರನ್ನು ಎಬ್ಬಿಸಿ ಕಳುಹಿಸಿದ್ದು, ಕರೆದುಕೊಂಡು ಹೋಗುತ್ತೇವೆಂದು ಹೇಳಿ ಬಿಟ್ಟು ಹೋಗಿದ್ದು, ನಿನ್ನ ಮಗನ ಮದುವೆಗೆ ಸಹಾಯ ಮಾಡುತ್ತೇವೆ ಎಂದು ಆಶ್ವಾಸನೆ ಕೊಟ್ಟವರು. ನಿನಗೆ ಯಾತರ ಸಲುವಾಗಿ ಕೊಡಬೇಕು ನಿನ್ನಿಂದ ನಮಗೇನು ಲಾಭ ಎಂದು ಹೇಳಿದ್ದು, ಒಂದು ದಿವಸಕ್ಕೆ ೩೫ ಕಿ.ಮೀ ನಡೆದಿದ್ದು, ಊಟವಿಲ್ಲದೆ ಉಪವಾಸ ತಿರುಗಿದ್ದು ಅಲೆಮಾರಿ ತರಹ ಬಸ್‌ಸ್ಟ್ಯಾಂಡಿನಲ್ಲಿ, ರೈಲ್ವೆ ಸ್ಟೇಷನಲ್ಲಿ ಮಳೆ, ಚಳಿಸಹಿಸಿ ಮಲಗಿದ್ದು, ಅವೆಲ್ಲ ಇವತ್ತಿನ ನನ್ನ ಸುಖದ ಸೋಪಾನಕ್ಕೆ ನಂದಾದೀಪವಾಗಿವೆ. ಎಂದು ಹೆಮ್ಮೆ ಪಡುತ್ತಾರೆ".[೭] ಆಲ್ದಾಳರ ದೊಡ್ಡ ಗುಣ ಎಲ್ಲರಿಗೂ ಬರಲಾರದು. ಅದಕ್ಕಾಗಿಯೇ ವೈರಿಗೆ ಕರಜೋಡಿಸಿರಿ, ನಿಂದಕರಿಗೆವಂದಿಸಿರಿ.

"ಇನ್ನೊಂದು ಪ್ರಸಂಗವನ್ನು ಸಂಶೋಧಕಿಯ ಮುಂದೆ ಹೊರಗೆಡಹಿದ್ದು ಸಹ ನೋವುಂಟು ಮಾಡುವಂಥದ್ದು" ಬನಹಟ್ಟಿಯಲ್ಲಿದ್ದಾಗ ಆಲ್ದಾಳರು ಚಿಕ್ಕವರಾಗಿದ್ದರು. ಊರಿನಲ್ಲಿರುವ ಜೋಳ ಬೀಸುವ ಗಿರಣಿಗೆ ಅಜ್ಜಿಯೊಂದಿಗೆ ತೆರಳಿದ ಬಾಲಕ ಆಲ್ದಾಳ. ಅಲ್ಲಿ ಜೋಳ ಬೀಸಿಕೊಂಡು ಹೋಗುತ್ತಿದ್ದವರು ಆಕೆಯ ಕೈಯಲ್ಲಿದ್ದ ಬಟ್ಟಲಿನಲ್ಲಿ ಸ್ವಲ್ಪ ಹಿಟ್ಟುಹಾಕುತ್ತಿದ್ದರಂತೆ ಅಜ್ಜಿ ಮೊಮ್ಮಗ ಆಲ್ದಾಳರ ಕೈಯಲ್ಲೂ ಬಟ್ಟಲುಕೊಟ್ಟು ಕುಳ್ಳಿರಿಸಿದ್ದರಂತೆ, ಚಿಕ್ಕಮಗುವನ್ನು ಕಂಡು ಅಜ್ಜಿಯೊಂದಿಗೆ ಮಗುವಿಗೂ ಜೋಳದ ಹಿಟ್ಟು ಹೆಚ್ಚಿನ ಪ್ರಮಾಣದಲ್ಲಿ ಹಾಕುತ್ತಿದ್ದರಂತೆ. ಈ ಮಗು ಯಾರದು ಎಂದು ಅಜ್ಜಿಗೆ ಕೇಳಿದಾಗ ನನ್ನ ಮೊಮ್ಮಗ ಎಂದು ಹೇಳುವಾಗ, ಮೊಮ್ಮಗನ ನಿರಾಳ ಮುಖ ನೋಡಿ ಮುದ್ದುಕೊಟ್ಟರೂ ದುಃಖ ತಡೆಯದೇ ಹರಕು ಸೀರೆಯ ಅಂಚಿನಿಂದ ಕಣ್ಣೀರು ತಡೆದಳಂತೆ. ಈ ಮಾತನ್ನು ಇತ್ತೀಚೆ ಮಾತಾಡುತ್ತ ಭೇಟಿಯವೇಳೆ ಬಿಚ್ಚಿಟ್ಟಾಗ ಹಿಂದಿನ ನೆನಪು ಆಲ್ದಾಳರನ್ನು ಗದ್ಗತಿಸಿತು.

ಆಲ್ದಾಳರ ಒಡಲಾಳದಲ್ಲಿ ಇಂತಹ ಭೀಕರ, ಮನನೋಯಿಸುವ ಘಟನೆಗಳು ಮಹಾಪೂರವಾಗಿ ಶೇಖರವಾಗಿರಲೂಬಹುದು ಅವುಗಳನ್ನು ಹೊರಗೆಡಹಲಾರದೇ ತಮ್ಮಲ್ಲಿಯೇ ತಾವು ಮುಚ್ಚಿಕೊಂಡು ಬೇಯುತ್ತಿರಲೂಬಹುದು. ದೀಪದ ಎಣ್ಣೆಯಲ್ಲಿರುವ ಬತ್ತಿ ತಾನು ಸುಟ್ಟುಕೊಂಡು ಪರರಿಗೆ ಪ್ರಕಾಶಮಾನ ಬೆಳಕು ನೀಡುವಂತೆ ಆಲ್ದಾಳರ ಪರಿ ಇದು, ಅದ್ಭುತ!.

ಮತ್ತೊಮ್ಮೆ ಆಲ್ದಾಳರು ಸ್ವತಃ ಚಿಕ್ಕದಾದ ರೆಡಿಮೇಡ್ ಬಟ್ಟೆ ಅಂಗಡಿ ಇಟ್ಟುಕೊಂಡು ವ್ಯವಹಾರದಲ್ಲಿ ತೊಡಗಿಸಿಕೊಂಡರು. ದುರ್ದೈವ ಎನ್ನುವಂತೆ ಅಲ್ಲೂ ಅವರಿಗೆ ಲಾಭ ದಕ್ಕಲಿಲ್ಲ ಬಟ್ಟೆ ಅಂಗಡಿ ಇಟ್ಟು ಕೈಸುಟ್ಟುಕೊಂಡರು- ನಂಬಿಸಿದರೇ ಕೈಕೊಟ್ಟರು, ಹೀಗಾಗಿ "ವೃತ್ತಿಯೇ ಬೇರೆ ಪ್ರವೃತ್ತಿಯೇ ಬೇರೆ" ಎಂಬ ಅರಿವು ಸಕಾಲಕ್ಕೆ ಮನದಲ್ಲಿ ನೆಲೆಯೂರಿತು. ಅದೊಂದುದಿನ ಎಲ್‌ಬಿಕೆ ಅವರಿಗೆ "ನನ್ನ ಪ್ರವೃತ್ತಿ ರಂಗಭೂಮಿ" ಎಂದು ಧೃಢ ಮನಸ್ಸು ಮಾಡಿದವರು ಮತ್ತೆ ಹಿಂದುರುಗಿ ನೋಡಲಿಲ್ಲ.

**ನಾಟಕ ಕಲೆ ರಕ್ತಗತ :** ಎಲ್‌ಬಿಕೆ ಅವರಿಗೆ ತಾಯಿಯ ರಕ್ತದಿಂದಲೇ ನಾಟಕ ಕಲೆ ಹರಿದು ಬಂದಿತ್ತು. ಮೂವರು ಮಾವಂದಿರು ಆಟ, ಬಯಲಾಟ, ನಾಟಕಗಳನ್ನು ಕಲಿಸಲು, ಹಾಡಕ್ಕಿ ಹಾಡಲು ಹಳ್ಳಿ-ಹಳ್ಳಿಗೆ ಹೋಗುತ್ತಿದ್ದರು. ಅಲ್ಲಿ ಅವಶ್ಯವಿದ್ದಾಗ. ಬಾಲಕರಾಗಿದ್ದ ಆಲ್ದಾಳರು ಸಣ್ಣ-ಸಣ್ಣ ಪಾತ್ರಗಳನ್ನು ಬಹು ಅಚ್ಚು-ಕಟ್ಟಾಗಿ ನಿರ್ವಹಿಸುತ್ತ ಜನರ ಮನವನ್ನು ರಂಜಿಸುತ್ತಿದ್ದರು. ಹೀಗಾಗಿ ಸೋದರ ಮಾವಂದಿರರ ಸಂಪೂರ್ಣ ಪ್ರಭಾವ ಆಲ್ದಾಳರ ಮೇಲೆ ಗಾಢವಾಗಿ ಬಿದ್ದುದಲ್ಲದೆ, ರಂಗಶಿಕ್ಷಣದ ದೀಕ್ಷೆ ಮಾವಂದಿರರಿಂದಲೇ ಎಂಬುದು ನೆನಪಿಸುತ್ತದೆ.

ಹಿರಿಯರು, ನಾಡೋಜ ಪಾಟೀಲ ಪುಟ್ಟಪ್ಪನವರು ಹೇಳಿದಂತೆ: "ಅನುಭವ ಇರುವಲ್ಲಿ ಅಮೃತ" ಇರುವಂತೆ ಮಾವಂದಿರ ಸಂಸ್ಕಾರ ತರಬೇತಿಯಿಂದಾಗಿ ಎಲ್‌ಬಿಕೆ ಅವರಲ್ಲಿ ಸಾಹಿತ್ಯಾಸಕ್ತಿ ಚಿಗುರೊಡೆಯಿತು. ಅನುವಂಶಿಕವಾಗಿ ತಾಯಿಯಿಂದ ಬಂದ ಕಲೆ ಪುಟಿದೇಳುವಂತಾಯಿತು. ಊರೂರು ತಿರುಗಿ ಬಣ್ಣಹಚ್ಚಿ ಪಾತ್ರಾಭಿನಯ ಮಾಡುವುದು ಸಾಧ್ಯವಾಯಿತು.

**ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು!!**
**ಕಲ್ಲಾಗು ಕಷ್ಟಗಳ ಮಳೆಯ ವಿಧಿಸುರಿಯೆ!!**
**ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಗೆ!!**
**ಎಲ್ಲರೊಳಗೊಂದಾಗು ಮಂಕುತಿಮ್ಮ!!**

ಎಂಬ ಡಿ.ವಿ.ಜಿ ಮಾತಿನಂತೆ ಎಲ್.ಬಿ.ಕೆ ಆಲ್ದಾಳರು ಸರ್ವರೊಂದಿಗೆ ಕೂಡಿ ಪ್ರೀತಿ ಹೆಚ್ಚಿಸಿಕೊಂಡವರು, 'ಬಾಗಿದ ಶಿರ, ಮುಗಿದ ಕರ' ಅವರ ಆದರ್ಶ ಬದುಕು, ಇವರು ಹುಟ್ಟಿದ್ದು ಗ್ರಾಮ ಬನ್ನಿಹಟ್ಟಿ, ಬೆಳೆದದ್ದು ಆಲ್ದಾಳ ಗ್ರಾಮ, ಈಗ ನೆಲೆ ನಿಂತದ್ದು ಜೇವರ್ಗಿ ತಾಲೂಕಿನ ಸುಂದರ ಗ್ರಾಮ "ಮಳ್ಳಿ".

'ಮಳ್ಳಿ' ಎಂಬುದು ಶುದ್ದವಾದ ಬೆಳಕು ಕೊಡುವ ಬೆಳ್ಳಿ" ಎಂದು ಕೆಲವರು ವರ್ಣಿಸಿದರೆ, ಇದನ್ನೇ "ಲಾಲ ಮಹ್ಮದ್ ಬಂದೇನವಾಜ್ ಖಲೀಫ್ ಆಲ್ದಾಳ ಒಂದು ಹಳ್ಳಿಯ ಬಳ್ಳಿ. ಈ ಬಳ್ಳಿ ಬಿಟ್ಟ ಮಲ್ಲಿಗೆಯ ಹೂಗಳ ಸುಗಂಧ ಕನ್ನಡ ಸಾರಸ್ವತ ಕಣಕ್ಕೆಲ್ಲ ಹಬ್ಬಿದೆ" ಎಂದು ಅಖಿಲಭಾರತ ಶರಣ ಸಾಹಿತ್ಯ ಪರಿಷತ್ತು ಅಧ್ಯಕ್ಷ ಗೊ.ರು. ಚನ್ನಬಸಪ್ಪ ಅವರು ಹೃದಯ ತುಂಬಿ ತಮ್ಮ ಒಂದು ಸಂದೇಶದಲ್ಲಿ ಎಲ್.ಬಿ.ಕೆ ಅವರನ್ನು ಕುರಿತ್ತು ಮನಸಾರೆ ಹೊಗಳಿದ್ದಾರೆ". [೮]

ಮಳ್ಳಿ ಗ್ರಾಮದ ತೀರಹತ್ತಿರದ ಕುಗ್ರಾಮ 'ನಾಗರಹಳ್ಳಿ' ಎಲ್.ಬಿ.ಕೆ.ಆಲ್ದಾಳರ ವಾಸ. ಆದರೆ 'ಮಳ್ಳಿ' ಗ್ರಾಮವೇ ಅವರ ಕರ್ಮಭೂಮಿ. ಇಲ್ಲಿಯ ಸುತ್ತಲ ವಾತಾವರಣ ಕವಿಗಳಿಗೆ ಸಾಹಿತಿಗಳಿಗೆ, ಬರಹಗಾರರಿಗೆ ಹೇಳಿಮಾಡಿಸಿದಂತಿದೆ. ರೈತನೋರ್ವ ತನ್ನ ಮಧುರ ಕಂಠದಿಂದ ಹಳ್ಳದ ಬಳಿ ಜೋಡೆತ್ತುಗಳಿಗೆ ನೀರು ಕುಡಿಸುತ್ತ :

"**ಬೆಳ್ಳಾನ ಎರಡೆತ್ತು ಬೆಳ್ಳಿಯ ಬಾರಕೋಲು**
**ಹಳ್ಳದ ಹೊಲ ಹರಗ್ಯಾವ-ನಮ್ಮೆತ್ತು**
**ತೆಳ್ಳಾನ ಹೊಟ್ಟೆ ಹಸಿದಾವ**".

ಅಲೆ-ಅಲೆಯಾಗಿ ತೇಲಿ ಬರುತ್ತಿದ್ದ ಗ್ರಾಮೀಣ ಸೊಗಡಿನ ಈ ಹಾಡು ಕೇಳುವುದೇ ಸೊಗಸು.

"**ಏಳ್ಕೊತ ನೆನೆದೇನ ಏಳೆಂಟು ದೇವರನ**
**ಎಳ್ಳು ಜೀರಗಿ ಬೆಳೆದಾವ-ಭೂಮಿತಾಯಿ**
**ಎದ್ದೊಂದುಗಳಿಗಿ ನೆನದೇವ** " -

ಬೆಳೆಯುವ, ಭೂಮಿಯ ಒಡಲಲ್ಲಿ ಎಲ್ಲವೂ ಇದೆ. ಆದರೆ ನಮಗೆ ಎಳ್ಳು-ಜೀರಿಗೆ ದೊರೆತರೆ ಸಾಕು. ಅದರಲ್ಲಿಯೇ ತೃಪ್ತಿಪಡುತ್ತೇವೆ. ಎಂದು ಮಣ್ಣಿನ ಮಗ ಹೇಳುವ, ಹಾಡುವ ನುಡಿ ಎಷ್ಟೊಂದು ಮಾರ್ಮಿಕವಾದುದು. ಹೀಗೆ ಕೇಳುತ್ತ, ಮನಸ್ಸಿಗೆ ಮುದ ಕೊಡುತ್ತಲಿದ್ದ

ಹಾಡುಗಳು, ಸುತ್ತಲ ಮರ-ಗಿಡಗಳಲ್ಲಿ ಹಕ್ಕಿಗಳ ಕಲರವ ಆಲಿಸುತ್ತ ನಾಗರಾಳ ಗ್ರಾಮಕ್ಕೆ ಹತ್ತಿರವಾಗುತ್ತಿದ್ದಂತೆ.

**"ಆಚಾರಕ್ಕರಸಾಗು ನೀತಿಗೆ ಪ್ರಭುವಾಗು**
**ಮಾತಿನಲ್ಲಿ ಚೂಡಾಮಣಿಯಾಗು ನನ ಕಂದ**
**ಜ್ಯೋತಿಯಾಗು ಜಗಕ್ಕೆಲ್ಲ"**

ಗ್ರಾಮೀಣ ಮಹಿಳೆಯರು ಬೀಸುವ ಕಾಯಕದೊಂದಿಗೆ ಶಿವಸ್ವರೂಪಿ ಮಕ್ಕಳನ್ನು ನೆನೆದು ಅವರ ಯಶಸ್ಸಿಗಾಗಿ ದೇವರಲ್ಲಿ ಮೊರೆ ಹೋಗುವ ಈ ಹಾಡುಗಳು (ತ್ರಿಪದಿಗಳು) ಯಾರಿಗೆ ಬೇಡ, ಕಲ್ಯಾಣ ನಾಡಿನಲ್ಲಿನ ಮಳ್ಳಿ ಗ್ರಾಮದ ಸುತ್ತಲ ಪರಿಸರವೇ ಎಲ್.ಬಿ.ಕೆ ಅವರನ್ನು ಸಾಹಿತ್ಯ ಹಾಗೂ ನಾಟಕ ರಂಗದಲ್ಲಿ ವಿಜೃಂಭಿಸುವಂತೆ ಮಾಡಿದೆ ಎಂದು ಎದೆತಟ್ಟಿ ಹೇಳಬಹುದು.

**ಮರೆಮಾಚಿದ ಪ್ರಸಂಗ : ಎಲ್.ಬಿ.ಕೆ ಚಿರಾಯುವಾಗಲಿ:** ಅದೊಂದು ದಿನ ಅಮಾವಾಸ್ಯೆಯ ಕರಾಳಕತ್ತಲು ಆವರಿಸಿದ ರಾತ್ರಿ. ಮೈನಡುಗಿಸುವ ಚಳಿಗಾಳಿ ಹೊರಗೆ ದೂರದಲ್ಲಿ ನಾಯಿಗಳ ಕರ್ಕಸವಾದ ಶೋಕದ ಧ್ವನಿ, ಮನೆಬಿಟ್ಟು ಯಾರನ್ನು ಹೊರಬರಲು ಸಾಧ್ಯವಾಗದ ಭಯ ಹುಟ್ಟಿಸುವ ಸನ್ನಿವೇಶ। ಇದ್ಯಾವುದಕ್ಕೂ ಗಮನ ಹರಿಸದೆ ಗಂಡು ಗಚ್ಚೆಹಾಕಿದ ಮಹಿಳೆಯೋರ್ವಳು ತನ್ನ ಹೆಗಲ ಮೇಲೆ ಗಾಢ ನಿದ್ರೆಯಲ್ಲಿದ್ದ ಗಂಡು ಹಸುಳೆಯನ್ನು ಹೊತ್ತುಕೊಂಡು ಮನೆಬಿಟ್ಟು ಊರಿನ ಮುಂದೆ ಇದ್ದ ಬಾವಿಯ ಕಡೆಗೆ ಹೆಜ್ಜೆ ಹಾಕುತ್ತಲಿದ್ದಳು, ಭೂಮಿಯ ಋಣವನ್ನೇ ತೀರಿಸುವ ಛಲ ಹೊತ್ತವರಂತೆ ದಾಪುಗಾಲು ಹಾಕುತ್ತಿದ್ದಳು. ಸಾಕು ಈ ಸಂಸಾರದ ಜಗ್ಗಾಟ ಎಂದು ಗಟ್ಟಿ ಮನಸ್ಸು ಮಾಡಿ ಇನ್ನೇನು ಬಾವಿಯ ನೀರಿಗೆ ಮಗುವಿನೊಂದಿಗೆ ಹಾರಬೇಕು, ಜೀವಕ್ಕೆ ಅಂತಿಮ ವಿಧಾಯ ಹೇಳಬೇಕೆಂದು ಆತುರದಲ್ಲಿದ್ದಾಗಲೆ, ಮತ್ತೋರ್ವ ಮಹಿಳೆ 'ಯಾರಲ್ಲಿ ನಿಲ್ಲು'! ಎನ್ನುವ ಕೂಗು ಜೋರಾಗಿ ಕಿವಿಗೆ ಅಪ್ಪಳಿಸಿತು. ಆ ಕೂಗು ಆಪ್ತ ಗೆಳತಿಯದ್ದಾಗಿತ್ತು. ಅದೇ ಸಮಯಕ್ಕೆ ಗೆಳತಿ ನಿಸರ್ಗದ ಕರೆಗೆ ಹೊರ ಬಂದಿದ್ದಳು. ದಯಾಮಯನಾದ ದೇವರು ಅವರಿರ್ವರನ್ನು ರಕ್ಷಿಸಲೆಂದೇ ಅವಳ ಆಪ್ತ ಗೆಳತಿಯನ್ನು ಎಚ್ಚರಿಸಿ ಮನೆಯಿಂದ ಹೊರಗೆ ಬರುವಂತೆ ಮಾಡಿ ಪ್ರಾಣ ಉಳಿಸಿದ! ಇದು ಯಾವುದೇ ಸಿನೇಮಾದಲ್ಲಿಯಾಗಲಿ, ಧಾರಾವಾಯಿಯಲ್ಲಾಗಲಿ ಬರುವ ಕಥೆಯಲ್ಲ, ಇದು ನಾನು ನನ್ನ ಸಂಶೋಧನೆಗೆ ಆಯ್ಕೆ ಮಾಡಿಕೊಂಡಿರುವ ಮಹಾನ ನಾಟಕಕಾರ ಲಾಲಮಹ್ಮದ ಬಂದೇನವಾಜ ಖಲೀಫ್ ಆಲ್ದಾಳ(ಎಲ್.ಬಿ.ಕೆ. ಆಲ್ದಾಳ) ಅವರ ಬದುಕು ಬಿಚ್ಚಿಟ್ಟ ಕಥೆ ಇದನ್ನು ಅವರು ಇಲ್ಲಿಯವರೆಗೂ ನಿಗೂಢವಾಗಿರಿಸಿದ್ದರು. ನಿಜವಾಗಿಯು ಆಲ್ದಾಳರ ಹೆತ್ತ ಮಾತೆ ಅಂದು ಆ ಸಾವಿನ ಮನೆಯಲ್ಲಿ ಒಳ ಸೇರಿದ್ದರೆ, ಈ ಲೋಕ, ರಂಗಲೋಕ, ಸಮಾಜಕೂಡ ಇಂದು ಶ್ರೇಷ್ಠ ನಾಟಕಕಾರರನ್ನು ಮೇಲಾಗಿ ಓರ್ವ ಮಾನವತಾವಾದಿಯನ್ನು ಕಳೆದು ಕೊಂಡಂತಾಗುತ್ತಿತ್ತು. ಅಂದಿನ ದುರ್ಘಟನೆಯನ್ನು ತಪ್ಪಿಸಿರುವ ಆಲ್ದಾಳ ಅವರ ತಾಯಿಯ ಗೆಳತಿಗೆ ಈ ಸಮಾಜ ಅನಂತಕಾಲ ಅವಳನ್ನು ನೆನಪಿನಂಗಳದಲ್ಲಿರುಸುತ್ತದೆ.

ಆಲ್ದಾಳರು ಹುಟ್ಟಿದ ನಂತರ ಅವರ ತಂದೆ ಮರಣ ಹೊಂದಿದರು. ಇದರಿಂದಾಗಿ ವಿಧವೆ

ಪಟ್ಟ ಅನುಭವಿಸಬೇಕಾದ ಆಲ್ದಾಳರ ತಾಯಿ, ಕಡು ಬಡತನ ಹಾಗೂ ಸಮಾಜದಲ್ಲಿನ ಕೆಲವು ದುಷ್ಟರ ಕುಹಕ ನುಡಿಗಳಿಗೆ ಆಹಾರವಾಗಬೇಕಾಯಿತು. ಸಾಧ್ವಿಯ ಅಂತರಂಗದಲ್ಲಿ ಘೋರ ತುಮುಲ ಸಮುದ್ರದ ಅಲೆಯಂತೆ ಅಪ್ಪಳಿಸ ಹತ್ತಿದವು.

ಶರಣರ ವಚನದಂತೆ ಸಂಸಾರ ನಡೆಸಿದ ಗರತಿ ಮಹಾತಾಯಿಯಾಗಿದ್ದ ಆಲ್ದಾಳರ ತಾಯಿ;

**"ನಂಬಿದ ಹೆಂಡತಿಗೆ ಗಂಡನೊಬ್ಬನೆ ಕಾಣಿರೋ**
**ನಂಬಬಲ್ಲ ಭಕ್ತರಿಗೆ ದೇವನೊಬ್ಬನೆ ಕಾಣಿರೋ,**
**ಬೇಡ, ಬೇಡ ಪರದೈವದ ಸಂಗಸಲ್ಲ,**
**ಬೇಡ, ಬೇಡ ಅನ್ಯದೈವವೆಂಬುದು ಹಾದರ ಕಾಣಿರೋ**
**ಕೂಡಲಸಂಗಮ ದೇವರ ಕಂಡಡೆ**
**ಮೂಗ ಕೊಯ್ವ ಕಾಣಿರೋ**

ದೇವಕೊಟ್ಟ ಬದುಕನ್ನು ಪವಿತ್ರವಾಗಿರಿಸಿದವರು.

ಆಳ್ದಾಳ ಅವರು ಏಕೆ ಈ ರೀತಿಯ ಗಂಭೀರ ಮತ್ತು ಅನುಕಂಪದ ವಿಷಯವನ್ನು ಮರೆಮಾಚಿಸಿ ಬಿಟ್ಟಿದ್ದು; ನನಗೆ ಆಶ್ಚರ್ಯ ತಂದಿತು. "ಇಂದು ಏಕೋ, ಏನೋ ನನ್ನ ಹೆತ್ತಮ್ಮನ ನೆನಪು ಬಂದಿತು. ನಿಮ್ಮ ಮಾತುಗಳು ನನ್ನನ್ನು ಹಾಗೆಯೇ ಮಾಡಿದ್ದರೆ ನಾನು ಇಷ್ಟೆಲ್ಲ ಸಾಧನೆ ಮಾಡಲು ಎಲ್ಲಿರುತ್ತಿದ್ದೆ" ಎಂದು ನುಡಿಯುವಾಗ ಆಲ್ದಾಳರ ಎರಡು ಕಣ್ಣುಗಳಲ್ಲಿ ನೀರು ತುಂಬಿದ್ದು ಕನ್ನಡಕ ಮರೆಮಾಚಿಸಿದ್ದಿತು.

ಎಲ್.ಬಿ.ಕೆ ಆಲ್ದಾಳ ಅವರು ಭಕ್ತಿ–ಜ್ಞಾನ ಅನುಭವಗಳ ತ್ರಿವೇಣಿ ಸಂಗಮವಾಗಿದ್ದು ಧರ್ಮಪಿತ ಬಸವಣ್ಣ ಅವರ ಕಾರುಣ್ಯ ಅವರ ಮೇಲಿದೆ.

ಕನ್ನಡ ಸಾಹಿತ್ಯ ಸರಸ್ವತಿಯು ಅವರ ಜಿಹ್ವೆಯ ಮೇಲೆ ನಾಟ್ಯವನ್ನು ಆಡುತ್ತಿದ್ದಾಳೇನೋ ಅವರ ವಾಗ್ಮಿತ್ವವು ಅಪೂರ್ವವೂ, ಅನುಪಮವೂ ಆಗಿದೆ. ಭೋರ್ಗರೆವ ಜಲಪಾತದಂತೆ ಅವರಿಂದ ಹೊರ ಹೊಮ್ಮುವ ಅಮೃತಮಯ ನುಡಿಗಳಲ್ಲಿ ಭಕ್ತಿಯ ಹೊನಲು, ತತ್ವನಿಷ್ಠೆ, ಗಣಾಚಾರವು ಕೂಡಿದೆ. ಜಾತಿ–ಮತಗಳ ಎಲ್ಲೆ ಮೀರಿ ಆಲ್ದಾಳರು ಹರಿಸುವ ಜ್ಞಾನ ಗಂಗೆಯಲ್ಲಿ ಎಲ್ಲರೂ ಮಿಂದು ಪುಳಕಿತರಾಗಿ ಪುನೀತರಾಗಿದ್ದಾರೆ. ಬಸವಾದಿ ಪ್ರಮಥರ ಬಗ್ಗೆ, ದೇವರ ಬಗ್ಗೆ ಸಾಧು–ಸಂತರು, ಶರಣರ ಬಗ್ಗೆ, ಧರ್ಮಸೂತ್ರಗಳ ಬಗ್ಗೆ ಅನೇಕ ನಾಟಕಗಳನ್ನು ಬರೆದುದಲ್ಲದೇ ಅವುಗಳನ್ನು ರಂಗಭೂಮಿಯ ಮೇಲೆ ಪ್ರಯೋಗಿಸಿ ಪ್ರೇಕ್ಷಕರಿಗೆ, ಓದುಗರಿಗೆ ಧರ್ಮ, ಸತ್ಯಗಳ ಬಗ್ಗೆ ಸ್ಪಷ್ಟ ಚಿತ್ರಣ ನೀಡಿದ್ದಾರೆ ಇದಕ್ಕಾಗಿ ಆಲ್ದಾಳ ಅವರೇ ನಾವು ನಿಮಗೆ ಎಷ್ಟು ಕೃತಜ್ಞತೆ ಸಲ್ಲಿಸಿದರೂ ಸಾಲದು–ನೀವು ಜೀವಿಸಿದ್ದೀರಿ ಎಂದೇ ಎಲ್ಲವೂ ನಮಗೆ ದೊರಕಿದೆ. ಇದು ನಮ್ಮ ಭಾಗ್ಯ ಎಂದು ವಿನಯದಿಂದ ಹೇಳಿಕೊಳ್ಳುತ್ತೇವೆ. ನಿಮ್ಮ ಪೂಜ್ಯ ಮಾತೆಯನ್ನು ಈ ಸಂದರ್ಭದಲ್ಲಿ ಸ್ಮರಿಸುತ್ತ ದೇವರು ಅವರ ಆತ್ಮಕೆ ಚಿರಶಾಂತಿಯನ್ನು ನೀಡಲಿ ಹಾಗೂ ತಮಗೆ ಆಯುರಾರೋಗ್ಯ

ಭಾಗ್ಯ ಕರುಣಿಸಿ ನೂರು ವರ್ಷಕಾಲ ಬಾಳಿಸಲಿ ಎಂದು ಪ್ರಾರ್ಥಿಸುತ್ತೇನೆ – (ಸಂಶೋಧಕಿ)

**ಅಭಿನಂದನ ಗ್ರಂಥಗಳು ಕನ್ನಡಕ್ಕೆ ದೊರಕಿದ ಭಾಗ್ಯ**

**ಹಿನ್ನಲೆ :** ನಾಡು–ನುಡಿ, ನೆಲ–ಜಲ, ಶಿಕ್ಷಣ–ಸಾಹಿತ್ಯ, ಸಂಸ್ಕೃತಿ–ಸಮಾಜದ ಏಳಿಗೆ ಬಯಸಿ ಅಹರ್ನಿಶ ದುಡಿದ ಮಹನೀಯರನ್ನು, ಅವರು ಕೈಕೊಂಡ ಕಾರ್ಯವನ್ನು ಮೆಲಕು ಹಾಕುವುದಕ್ಕೆ ಅವರಿಗಾಗಿ ಒಂದು ಸಮಾರಂಭ ಏರ್ಪಡಿಸಿ ಅವರು ಮಾಡಿದ ಮಹತ್ತರಕಾರ್ಯ ಕಲಾಪಗಳನ್ನು ಹಂಚಿಕೊಳ್ಳುತ್ತ, ಆ ಎಲ್ಲ ಕಾರ್ಯ ಕಲಾಪಗಳನ್ನು ದಾಖಲೀಕರಿಸಿ ಅವರ ಸಾಧನೆಯ ದ್ಯೋತಕವಾಗಿ ಅಭಿನಂದನೆಯೊಂದಿಗೆ ಅಭಿನಂದನಾ ಗ್ರಂಥವನ್ನು ಪ್ರಕಟಿಸಿ ವಿಶ್ವಾಸ ಪೂರ್ವಕವಾಗಿ ಅರ್ಪಿಸಲಾಗುತ್ತದೆ. ಇಂತಹ ಒಂದು ಅಪರೂಪದ ಕಾರ್ಯ ಅಭಿನಂದನಾ ಸಮಾರಂಭವು ಅಭಿನಂದನೆಗೆ ಅರ್ಹರಾದವರ ಬದುಕು ಸಾರ್ಥಕವೆನ್ನಿಸುತ್ತದೆ. ಇವರುಗಳಲ್ಲಿ ಎಲ್‌ಬಿಕೆ ಆಲ್ದಾಳ ಅವರು ಪ್ರಮುಖರಾಗಿರುವರು.

**ವ್ಯಕ್ತಿತ್ವದರ್ಶನರಂಗ :** ಕಲಬುರ್ಗಿ ತಾಲೂಕಿನ ಸುಕ್ಷೇತ್ರ ಪಾಳಾದ ಕಟ್ಟಿಮನಿ ಹಿರೇಮಠ ಮಹಾಸ್ವಾಮಿ ಶ್ರೀ ಮ.ಚ.ಗುರುಮೂರ್ತಿ ಶಿವಾಚಾರ್ಯ ಅವರು, 'ಆಲ್ದಾಳರ ಕುರಿತು ಮನದಾಳದ ಮಾತು' ಎಂಬ ಲೇಖನದಲ್ಲಿ ಹೀಗೆ ಬರೆಯುತ್ತಾರೆ. "೧೯೩೮ರಲ್ಲಿ ಬನಹಟ್ಟಿಯಲ್ಲಿ ಜನ್ಮತಾಳಿದ ಆಲ್ದಾಳವರಿಗೆ ಯಾವ ಮೂಹೂರ್ತದಲ್ಲಿ ಅವರ ತಾಯಿ ಜನ್ಮ ನೀಡಿದ್ದಾಳೆ. ಅಂತ ವಿಚಾರಮಾಡಿದರೆ ಅದು ನಿಲುಕದ ಮಾತು, ಏಕೆಂದರೆ ಮಾತೃ ಪುಣ್ಯೇನ ಸುಶೀಲತಾಹ, ಪಿತೃ ಪುಣ್ಯೇನ ಚತುರತಹಾ ವಂಶಪುಣ್ಯೇನ ಉದಾರ ತಹಾ" ಎನ್ನುವ ಸತ್ಯದ ಮೂರು ಮುತ್ತಿನಂತಹ ಮಾತುಗಳು ಆಲ್ದಾಳರಿಗೆ ಸಲ್ಲುತ್ತದೆ. ಹುಟ್ಟಿದ ಐದಾರು ವರ್ಷ ಬಾಲ್ಯ ಕಳೆದು, ಆರೇಳು ವರ್ಷ ಅಭ್ಯಾಸ ಮಾಡಿದ್ದಾರೆ ಹೊರತು ಯಾವ ಡಿಗ್ರಿಯವರೆಗೂ ಓದಿಲ್ಲ. ಮೂರು ಪುಣ್ಯಗಳನ್ನು ಪಡೆದುಕೊಂಡು ಬಂದಿರುವ ಆಲ್ದಾಳರು ಸುಮಾರು ಇಪ್ಪತ್ತನಾಲ್ಕು ವರ್ಷ ಏನು ಮಾಡಿದ್ದಾರೋ ಯಾರಿಗೂ ತಿಳಿಯದ ಸಂಗತಿ. ಆಲ್ದಾಳರ ಬದುಕು ಮುಂದೆ ೧೯೬೨ರಲ್ಲಿ ಇವರಿಗೆ ಸಾಕ್ಷಾತ ಸರಸ್ವತಿಯ ದಿವ್ಯದರ್ಶನವಾಯಿತೆ? ಏನು ತಿಳಿಯದು. ಬರೆಯಲು ಪ್ರಾರಂಭಿಸಿದ್ದಾರೆ, ಬರವಣಿಗೆಯ ಶೈಲಿಯನ್ನು ಪ್ರಾಸಬದ್ಧತೆಯ ಶಬ್ಧಗಳನ್ನು ಕೇಳಿಸಿಕೊಂಡರೆ ಎಂತಹ ಮೂಢನೂ ತಲೆತೂಗಬೇಕು. ಆಲ್ದಾಳ ಕವಿಗಳು ಷಟ್ಪದಿಯಲ್ಲಿ ಬರೆದಿರುವ ಅವರ ಪುಸ್ತಕಗಳನ್ನು ಓದಿದರೆ ಎಂತಹ ಪಂಡಿತನೂ ದಿಗ್ಭ್ರಾಂತನಾಗುತ್ತಾನೆ. ಕವಿತೆಯನ್ನು ಬರೆಯಬೇಕಾದರೆ, ರಚಿಸಬೇಕಾದರೆ ಸಮಗ್ರವಾಗಿ ಓದಿದರೆ ಮಾತ್ರ ಕಾಲದ ಸಾಧ್ಯವೆಂದು ತಿಳಿದುಕೊಳ್ಳುವವರಿಗೆ ಪ್ರಸ್ತುತ ಆಲ್ದಾಳ ಕವಿಗಳು ನಿದರ್ಶನವಾಗುತ್ತಾರೆ. ಪೂರ್ವ ಕವಿಗಳ ಹೆಸರುಗಳನ್ನು ಕೇಳಿದ್ದೇವೆ. ಅವರು ಬರೆದ ರಗಳೆಗಳನ್ನೂ ಓದಿದ್ದೇವೆ. ಅಂಥವರನ್ನು ಕಾಣಲು ಸಿಗುವುದಿಲ್ಲ, ಆದರೆ ಅವರ ಬದುಕು–ಬರಹ ಮಾತ್ರ ಸಿಗುತ್ತವೆ. ವರ್ತಮಾನ ಕಾಲದ ಆಲ್ದಾಳರನ್ನು ನೋಡಿಕೊಂಡಾಗ ನಿಜವಾಗಿಯೂ ಸರಸ್ವತಿ ಪುತ್ರನೆ ಆಗಿರಬೇಕೆಂದು ಭಾಸವಾಗುತ್ತದೆ. ಪೂರ್ವದಲ್ಲಿ ಆಗಿ ಹೋದ ಹರಿಹರ, ರಾಘವಾಂಕ, ಕಾಳಿದಾಸ ಇವರೆಲ್ಲರ ದಿವ್ಯ ಆಶೀರ್ವಾದ ಕವಿಗಳಿಗಿರಬೇಕೇನೋ ಎಂದು ಮನಸ್ಸು ತವಕಿಸುತ್ತದೆ".

ಕವಿಯತ್ರಿ ಶ್ರೀಮತಿ ಸವಿತಾ ಸಿರಗೋಜಿ ಅವರು "ಸಂತ ಆಲ್ದಾಳಜ್ಜ" ಕವಿತೆಯಲ್ಲಿ ಆಲ್ದಾಳರ ಬಗ್ಗೆ ಅವರು ಹೊಂದಿರುವ ಭಾವನೆಗಳಿಗೆ ಅಂತ್ಯವೇ ಇಲ್ಲ – ಓದಿ ಕೆಳಗಿನ ಸಾಲುಗಳನ್ನು,

**"....ಏನೆಂದು ಹಾಡಲಿ ನಿನ್ನ**
**ನಾಲ್ಕು ವೇದಗಳ ಸಾರಪಂಚಮ ವೇದ**
**ನಿಗಮ ನೀನಾಗಿ ಪಂಚಮುಖಬ್ರಹ್ಮ**
**ನಿನ್ನ ನೇನ್ನಲಿ – ಇದೆಲ್ಲ ಸಾಲದು ;**

**ಹಾಗೆಂದರೆ ಏನೆಂದು ಹಾಡಲಿ ನಿನ್ನ**
**ನಿನ್ನತೆರೆದಾ ಬಗೆ**
**ಯಶೋಧೆಗೆ ಬಾಯಿ ತೆರೆದು**
**ತೋರಿದ ವಿಶ್ವ ಕಾರುಣ್ಯ!**
**ಇಂತಿ ಆಲ್ದಾಳಜ್ಜನ ಕಾಲ ಘಟ್ಟದಲ್ಲಿ**
**ನಾನಿದ್ದೇನಲ್ಲ ಎಂಬುದೇ**
**ನನ್ನ**
**ತೀರದ ಭಾಗ್ಯ!"** [೧೦]

ಬಸವಕಲ್ಯಾಣದ ರಾಜೇಶ್ವರ ಗ್ರಾಮದವರಾದ ಡಾ. ಶ್ರೀಮತಿ ಜಯದೇವಿ ಎಂ.ಗಾಯಕವಾಡ ಅವರು ಆಲ್ದಾಳ ಕುರಿತು "ನಲೆದಾಡುವ ದಿವ್ಯ ಜ್ಯೋತಿ" ಕವನದಲ್ಲಿ ಬಿಂಬಿಸಿರುವ ಪಂಕ್ತಿಗಳು ಮನಮಿಡಿಯುತ್ತವೆ.

**"ಸೌಮ್ಯತೆಯ ಸಾಕಾರ ಮೂರ್ತಿ**
**ಶರಣರ ಸಂತರ ಸಂಗವ**
**ವೃತ್ತಿರಂಗಕ್ಕೆ ಕಾಯಕಲ್ಪ ನೀಡಿದ**
**ಶರಣ ಸಾಹಿತ್ಯ ಶಿರೋಮಣಿ**
**ಹಿಂದು–ಮುಸ್ಲಿಂ ಸೌಹಾರ್ದದ ಹರಿಕಾರ**
**ಮನುಕುಲವೆಲ್ಲ ಒಂದೇ ಎಂದು ಹೇಳಿದಾತ**
**ತತ್ವಪದ ಹಾಡುಗಳಿಗೆ ಕೊರಳಾದ**
**ಶಬ್ಧಗಾರುಡಿಗರವರೇ!**
**ಊರೂರು ತಿರುಗಿ ಹಳ್ಳಿ–ಹಳ್ಳಿ ಮುಟ್ಟಿ**
**ಮಠ ಮಾನ್ಯಗಳ ಹೊಕ್ಕ ಶರಣ ಜೀವಿ**
**..............................................**
**ಸಮಾಜ ನೀತಿಗಳಿಗೆ ಎದೆ ತಟ್ಟಿ**
**ಮನ ಮನಕೆ ಜ್ಞಾನವ ನೀಡಿ**

**ಖಾಜಾ ಬಂದೇನವಾಜರ ಕುರುಹುವಾಗಿ**
**ಶರಣ ಬಸವನ ನಿಜರೂಪವಾಗಿ**
**ನಲಿದಾಡುವ ದಿವ್ಯ ಜ್ಯೋತಿ ಆಲ್ದಾಳರಿವರು....”** ⁽⁽

ಆಲ್ದಾಳ ಅವರದು ಆಮೆಯಂತಹ ಸ್ವಭಾವ. ಆಮೆಗೆ ನೆಲವಾದರೇನು, ನೀರಾದರೇನು ತಲೆ ಎತ್ತಿನಡೆಯುವದೊಂದೇ ಗುರಿ, ಎಂಥ ಪರಿಸ್ಥಿತಿಯಲ್ಲೂ, ಸ್ಥಿರವಾಗಿ, ಶಾಂತವಾಗಿರುವ ವ್ಯಕ್ತಿತ್ವ ಆಲ್ದಾಳ ಅವರು ಆಮೆಯಂತೆಯೇ ನಿಗರ್ವಿ, ನಿರುಪದ್ರವಿ, ಅದಕ್ಕಾಗಿಯೇ ಬಲ್ಲವರು ಹೇಳುವುದೇನಂದರೆ, ಸಹನೆಗಿಂತ ತಪಸ್ಸಿಲ್ಲ, ಶಾಂತಿಗಿಂತ ಮಂತ್ರವಿಲ್ಲ

**ಸನ್ನುಡಿ :** ಆಲ್ದಾಳರು ಲೇಖನ ಸಾಮರ್ಥ್ಯ ಹೊಂದಿದ ಪ್ರವೀಣ ಪ್ರತಿಭಾವಂತರು. ಇಂಥವರ ಬಗ್ಗೆ ಅಭಿನಂದನ ಗ್ರಂಥ ರಚನೆಗೆ ಕೈಹಾಕಿ, ಸಿದ್ಧಪಡಿಸಿ ಅರ್ಪಿಸಲು ಬಯಕೆ ತೋರಿದ್ದು ಸಂತೋಷ ಹಾಗೂ ನನ್ನ ಶುಭ ಹಾರೈಸಿ ಸನ್ನುಡಿಗೆ ವಿರಾಮಕೊಡುತ್ತೇನೆ.

**–ಶ್ರೀ ಮ.ನಿ.ಪ್ರ .ಮಹಾಂತ ಮಹಾಸ್ವಾಮಿಗಳು**
**ಜೇರಟಗಿ ತಾ॥ ಜೇವರ್ಗಿ**

**ಚೆನ್ನುಡಿ :** ಆಲ್ದಾಳರ ಜೀವನದುದ್ದಕ್ಕೂ ಸಾಹಿತ್ಯವು ಓತಪ್ರೋತವಾಗಿ ಹರಿದುಬಂದು ಎಲ್ಲರ ಹೃನ್ಮನ ಶುದ್ಧಗೊಳಿಸುವ ಶ್ರೇಷ್ಠ ಸಾಹಿತ್ಯವಾಗಿದೆ. ಗ್ರಂಥರಚಿಸಿ ಸನ್ಮಾನಿಸುವ ಕಾರ್ಯ ಹೆಮ್ಮೆತರುವಂತಹದ್ದು. ಶುಭಕೋರುತ್ತೇನೆ.

**–ಶ್ರೀ.ಮ.ನಿ.ಪ್ರ .ಶಾಂತಲಿಂಗ ಮಹಾಸ್ವಾಮಿಗಳು**
**ಜೇವರ್ಗಿ**

**ಆಲ್ದಾಳರದ್ದೇ ವಿಶೇಷ ಶೈಲಿ :** ಅನೇಕ ಮಹಾತ್ಮರ ಚರಿತ್ರೆ ಹಾಗೂ ಮಳಖೇಡದ ಲಿಂಗೈಕ್ಯ ಶ್ರೀ ಗುರುಕಾರ್ತಿಕೇಶ್ವರರ ತವನಿಧಿ ಮತ್ತು ಅರಕೇರಾ(ಬಿ)ಬೆಟ್ಟದ ಶ್ರೀ ಪರಮಾನಂದೇಶ್ವರರ ಧ್ವನಿ ಸುರಳಿ ಹೀಗೆ ಅನೇಕ ಸಾಹಿತ್ಯ ಕ್ಷೇತ್ರದಲ್ಲಿ ಪಳಗಿದವರು ಆಲ್ದಾಳರು. ಹಲವಾರು ಸಾಹಿತ್ಯ ಓದಿಕೊಂಡು, ಜ್ಞಾನಾರ್ಜನೆಹೊಂದಿ, ಅವುಗಳ ಅನುಭವಸಾರ ತಮ್ಮ ಒಂದೊಂದು ಕೃತಿಗಳ ವಿಷಯ ವಸ್ತುವಿಗೆ ತಕ್ಕಂತೆ ಹೊಂದಿಸಿ ಬರೆಯುವುದು ಆಲ್ದಾಳರ ವಿಶೇಷ ಶೈಲಿ, ಅವರ ಅಭಿನಂದನ ಗ್ರಂಥವು ಪರಿಸರದಲ್ಲಿ ಸದ್ಭಾವನೆಗಳು ಸದಾ ಚೇತೋಹಾರಿಯಾಗಿರಲಿ.

**–ಪೂಜ್ಯ ಶ್ರೀ.ಷ.ಬ್ರ.ವೀರಗಂಗಾಧರ ಶಿವಾಚಾಯ**
**ಮಹಾಸ್ವಾಮಿಗಳು**
**ಸುಕ್ಷೇತ್ರ ಮಳಖೇಡ. ತಾ.ಸೇಡಂ**

**ಸೇವಾ ಕಿಂಕರ :** ಸೇವಾ ಕಿಂಕರರೂ, ಸಾಹಿತಿಗಳಾಗಿರುವ ಸದ್ಭಕ್ತ ಆಲ್ದಾಳರ ಮಹಾತ್ಕಾರ್ಯಕ್ಕೆ, ಹಾಗೂ ಇವರ ಸರ್ವತೋಮುಖ ಅಭಿವೃದ್ಧಿಗೆ ಆನಂದ ಪಟ್ಟು ಅಮೃತದ ಸವಿನುಡಿಗಳನ್ನು ಅರ್ಪಿಸಿ ಶುಭಕೋರುತ್ತೇನೆ.

**–ಪರಮಪೂಜ್ಯ ಶ್ರೀ ಶ್ರೀ ಶ್ರೀನಾಗಪ್ಪಯ್ಯ ಮಹಾಸ್ವಾಮಿಗಳು**
**ಮಹಾತ್ಮಾಪೀಠ, ಗದ್ದುಗೆ ಮಠ, ಅಳ್ಳೊಳ್ಳಿ, ಚಿತಾಪುರ**

**ಭಾವೈಕ್ಯದ ರೂವಾರಿ :** ಕನ್ನಡನಾಡಿನ ಅಪ್ರತಿಮ ಕವಿ. ಪುರಾಣಕರ್ತ, ನಾಟಕಕಾರ ಚರಿತ್ರೆ ಸಂಶೋಧಕ, ಭಾವೈಕ್ಯದ ರೂವಾರಿ. ತಮ್ಮ ಕೃತಿಗಳಲ್ಲಿ ಭಾವೈಕ್ಯದ ಭಾವನೆಗಳನ್ನು ಸಮ್ಮಿಲಿತ ಗೊಳಿಸುವ ಅದ್ಭುತ ಕಲೆ ಸಾಧನೆಗೈದವರು ಆಲ್ದಾಳರು. ಭಗವಂತನು ಇವರಿಗೂ ಹಾಗೂ ಇವರ ಲೇಖನಿಗೂ ಹೆಚ್ಚಿನ ಶಕ್ತಿ ನೀಡಲಿ ಎಂದು ಹಾರೈಸುವೆ.

**–ಶ್ರೀ ಹಜರತ್ ಸೈಯ್ಯದ್ ಶಹಾಮುಸ್ತಫಾ ಖಾದ್ರಿ**
**ಸಜ್ಜಾದಾ ನಶೀನ್,ರೋಜಾ–ಎ–ರಹಮಾನಿಯಾ**
**ಮಳಖೇಡ, ತಾ.ಸೇಡಂ**

**ರಂಗಭೂಮಿಯ ಭೀಷ್ಮ :** ಆಲ್ದಾಳರು ವಿಶೇಷವಾಗಿ "ರಂಗಭೂಮಿ"ಯಲ್ಲಿ ಸಾಹಿತ್ಯ ಕೃಷಿಗೈಯ್ದಿದ್ದಾರೆ. ಅವರು ಎಂದೂ ಯಾರನ್ನು ಗಟ್ಟಿಯಾಗಿ ಮಾತನಾಡಿ ನೋಯಿಸಿದವರಲ್ಲ ರಂಗಭೂಮಿಯ ಭೀಷ್ಮರಾಗಿ, ಶರಣ ಸಾಹಿತಿಯಾಗಿ, ಜನಪದಗಾರುಡಿಗರಾಗಿ ಪ್ರಸಿದ್ಧಿಗೆ ಬಂದವರು. ಆಲ್ದಾಳರ ಅಭಿನಂದನ ಗ್ರಂಥಕ್ಕೆ ನನ್ನ ಅಭಿನಂದನೆ, ಈ ಗ್ರಂಥ ಗಂಧದ ಪರಿಮಳದಂತೆ ಸುವಾಸನೆ ಹೊರಸೂಸಿ ಎಲ್ಲರ ಹೃದಯ ಆಕರ್ಷಿಸಲಿ.

**–ಶ್ರೀ ವೀರಭದ್ರ ಸಿಂಪಿ. ಅಧ್ಯಕ್ಷರು,**
**ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಕಲಬುರ್ಗಿ**

**ಆಲ್ದಾಳರ ಮನೆ, ಜ್ಞಾನಮಂದಿರ**

"ನಾನು ಮಳ್ಳಿ ಗ್ರಾಮಕ್ಕೆ ಕಾಲಿಟ್ಟದಿನ ಮುಂಜಾನೆಯ ಶೀತ ಹವೆಯ ಅರ್ಭಟಕ್ಕೆ ತತ್ತರಿಸುವಂತಾಗಿತ್ತು. ಕನಿಷ್ಠ ಡಿಗ್ರಿ ತಾಪಮಾನ, ಸುತ್ತಲೂ ಹೊಲಗದ್ದೆಗಳಿದ್ದು ಸಂಪೂರ್ಣ ಮಂಜು ಆವರಿಸಿದ ವಾತಾವರಣ. ಚಳಿಗಾಳಿಗೆ ಮೈಯೊಡ್ಡಿದವರ ಪಾಡು ಏನಾಗಬೇಡ! ಅದು ಎಲ್.ಬಿ.ಕೆ ಅವರ ನಾಗರಾಳ (ಮಳ್ಳಿಯಿಂದ ಕಿಲೊಮೀಟರ ಅಂತರವಷ್ಟೆ)ಕ್ಕೆ ತೆರಳುತ್ತಿದ್ದಂತೆ ಅವರು ನನ್ನನ್ನು ಮತ್ತು ನನ್ನೊಂದಿಗಿದ್ದವರನ್ನು ತುಂಬಾ ಆಧರದಿಂದ ಬರಮಾಡಿಕೊಂಡರು.

ಕೈಕಾಲು–ಮುಖ ತೊಳೆಯಲು ಮುಂದಾದ ನಮಗೆ ಬಿಸಿ–ಬಿಸಿನೀರು ತಂದಿತ್ತರು ನಂತರ ಮಹಡಿಯ ಮೇಲಿರುವ ತಮ್ಮ "ಜ್ಞಾನಮಂದಿರ", ಸಾಹಿತ್ಯದ ತೇರನ್ನು ಎಳೆಯಲು ಸಜ್ಜುಗೊಂಡಿರುವ ಅಪಾರವಾದ ಪುಸ್ತಕಗಳ ಸಂಗ್ರಹ ಹೊಂದಿರುವ ಚಿಕ್ಕಕೋಣೆಗೆ ಕರೆದುಕೊಂಡು ಹೋಗಿ ಕುಳ್ಳಿರಿಸಿದರು 'ಈಗ ಬಂದೇ' ಎಂದು ಕೆಳಗಡೆ ಹೋದ ಆಲ್ದಾಳರು, ನಮ್ಮನ್ನು 'ಜ್ಞಾನದ ಮಂದಿರ'ದಲ್ಲಿ ತೇಲುವಂತೆ ಮಾಡಿದರು.

ಆಲ್ದಾಳ ಅವರ ಜ್ಞಾನಮಂದಿರದಲ್ಲಿ ಸಜ್ಜುಗೊಂಡಿರುವ ಗ್ರಂಥಗಳಿಗೆ ಸಾಟಿಯೇ ಇಲ್ಲ, ಯಾವುದು ನೋಡಬೇಕು, ಯಾವುದು ಓದಬೇಕು, ಯಾವುದನ್ನು ತೆಗೆದುಕೊಂಡು ಹೋಗಬೇಕು ಎಂದು ಚಿಂತಿಸುವಂತಿತ್ತು. ಮಾನವನಿಗೆ ಜ್ಞಾನವೆಂಬುದು ಎಲ್ಲದಿಕ್ಕುಗಳಿಂದಲೂ ಬರಬೇಕು ಆಲ್ದಾಳರ ಕೋಣೆಯಲ್ಲಿ ಚಿಕ್ಕ ಟೇಬಲ, ಎರಡೇ ಎರಡು ಕುರ್ಚಿ, ಟೇಬಲ್ ತುಂಬಾ ಪುಸ್ತಕ, ಬರೆಯುವ ಉಪಕರಣಗಳಾದ ಬಿಳಿಹಾಳೆ, ಪೆನ್ಸಿಲು, ಪೆನ್ನುಗಳ ಸಂಗ್ರಹ ಇದ್ದಿತು.

ಕೋಣೆಯ ಗೋಡೆಗಳ ಮೇಲೆ ಪ್ರಶಸ್ತಿಗಳು ಸಾಲಂಕೃತಗೊಂಡಿದ್ದವು, ಒಂದೇ ಎರಡೆ ಎಣಿಸಬೇಕಾಗುತ್ತದೆ. ಇತ್ತೀಚೆಗೆ ನೀಡಿದ ನಾಟಕರತ್ನ ಗುಬ್ಬಿವೀರಣ್ಣ ಪ್ರಶಸ್ತಿ ಫಲಕ ಕಣ್ಣಿಗೆ ಮಿಂಚಿನಂತೆ ಹೊಳೆಯುತ್ತಿತ್ತು. ಪುಸ್ತಕಗಳ ರಾಶಿಯಲ್ಲಿ ಒಂದೆರಡನ್ನು ನೋಡಿದರೆ ಸಮಾಧಾನವಾಗದು, ಎಲ್ಲವೂ ನೋಡಬೇಕು, ಓದಿ ಜ್ಞಾನಭಂಡಾರ ಹೆಚ್ಚಿಸಿಕೊಳ್ಳಬೇಕೆಂದು ಗಾಢವಾಗಿ ಯೋಚಿಸುತ್ತಿರುವಾಗಲೇ, "ಎಲ್ಲರೂ ಟೀ ತೆಗೆದುಕೊಳ್ಳಿರಿ" ಎಂದು ಆಲ್ದಾಳರು ಹೇಳಿದಾಗಲೇ ನಾನು ವಾಸ್ತವ ಲೋಕಕ್ಕೆಬಂದೆ !

ಅಲ್ಲಿ ಕನಸಿತ್ತು, ಬೆವರಿತ್ತು, ಬದ್ಧತೆಇತ್ತು, ಮಮತೆಇತ್ತು, ಉತ್ಸಾಹವಿತ್ತು, ಮುಗ್ಧನಗುವಿತ್ತು, ಇವೆಲ್ಲವುಗಳಿಂದಾಗಿ ನಮ್ಮ ಮನ ತುಂಬಿತ್ತು. ಅಂದು ಎಳ್ಳಮಾವಾಸೆ ದಿವಸವಾಗಿದ್ದರಿಂದ ಆಲ್ದಾಳರ ಮನೆಯಲ್ಲಿ ಸಂಭ್ರಮ. ಮನೆಯಮಂದಿ ಹಬ್ಬದ ಅಡುಗೆ, ಪೂಜೆ, ಪುನಸ್ಕಾರ ಇತರ ಕಾರ್ಯಕ್ರಮಗಳಲ್ಲಿ ತುಂಬಾ 'ಬಿಜಿ'ಯಾಗಿದ್ದರು. ನನ್ನನ್ನು ಮನೆಯೊಳಗೆ ಕರೆದುಕೊಂಡಿಹೋಗಿ, ತಮ್ಮ ಪತ್ನಿ, ಮಕ್ಕಳು, ಸೊಸೆಯಿಂದಿರನ್ನು ಪರಿಚಯಿಸಿದರು. ಆಲ್ದಾಳರು ಬಡವರಿರಬಹುದು ಆದರೆ ಅವರು ತೋರಿದ, ಪ್ರೀತಿ, ವಿಶ್ವಾಸ, ಆಧರಾತಿತ್ಯಕ್ಕೆ ಯಾವುದೇ ಬಡತನ ಕೊರತೆಯಾಗಲಿಲ್ಲ. ಅವರ ಕುಟುಂಬದವರು ತೋರಿದ 'ಅತಿಥಿಸತ್ಕಾರ' ಜೀವನ ಪರ್ಯಂತ ನೆನಪಿನ ಅಂಗಳದಲ್ಲಿ ಉಳಿಯುವಂತಹದ್ದು. ಅದಕ್ಕೆ ಹಿರಿಯರು ಹೇಳುತ್ತಾರೆ. 'ಮದುವೆ ನೋಡಲು ಶ್ರೀಮಂತರ ಕಡೆಗೆ ಹೋಗು, ಊಟಕ್ಕೆ ಹೋಗ ಬೇಕಾಗಿದ್ದರೆ ಬಡವರ ಮದುವೆ ಮನೆಗೆ ಹೋಗು'. ನಮಗೆ ಆಲ್ದಾಳ ಅವರಲ್ಲಿ ದೊರೆತ ಆತಿಥ್ಯ ಅಮೋಘ, ಅನುಕರಣೀಯ, ಸ್ಮರಣೀಯವಾದುದು.

"ಫಸಲು ನಳನಳಿಸುವ ಹೊತ್ತಿಗೆ ಸರಿಯಾಗಿ ಎಳ್ಳಮಾಸೆ ಬರುತ್ತದೆ. ಈ ದಿನದಿಂದಲೇ ಬಿಸಿಲು ಎಳ್ಳುಕಾಳಿನಷ್ಟು ಹೆಚ್ಚುತ್ತ ಸಾಗುತ್ತದೆ. ರೈತರು ಈ ದಿನ ಶುಭ್ರವಸ್ತ್ರಧಾರಿಗಳಾಗಿ ಹೊಲದಲ್ಲಿ ಲಕ್ಷ್ಮಿದೇವಿ ಪುತ್ಥಳಿ ಇಟ್ಟು ಪಾಂಡವರನ್ನು ಮಾಡಿ ಪೂಜಿಸುತ್ತಾರೆ. ಮುಂಗಾರು ಫಸಲು ಮನೆತುಂಬಿ, ಹಿಂಗಾರು ಫಸಲು ಮನತುಂಬುವ ಹೊಸ್ತಿಲಲ್ಲೇ ಬರುವ ಎಳ್ಳಾಮಾಸೆ ರೈತರು, ರೈತ ಮಿತ್ರರು, ರೈತ ಕುಟುಂಬದವರು ಆಚರಿಸಿ ಸಂಭ್ರಮಿಸುತ್ತಾರೆ. ಫಸಲು ಚೆನ್ನಾಗಿ ಬೆಳೆದು ಮನೆ-ಮನ ತುಂಬಲಿ ಎಂದು ಪ್ರಾರ್ಥಿಸುತ್ತಾರೆ. ಭೂಮಿತಾಯಿಗೆ ನೈವೇದ್ಯನೀಡಿ ಹೊಲದ ತುಂಬ ಬೆಳೆಯ ಮೇಲೆ 'ಚರಗ' ಎಂದು ಅರ್ಪಿಸುತ್ತಾರೆ. ಭೂತಾಯಿಗೆ ಉಡಿತುಂಬಲು ನೆರೆಹೊರೆಯ ಹೆಣ್ಣು ಗಂಡು ಮತ್ತು ಮಕ್ಕಳನ್ನು ಯಾವುದೇ ಭೇದವೆನ್ನದೆ ಹೊಲಕ್ಕೆ ಎತ್ತಿನ ಗಾಡಿಯಲ್ಲಿ ವಿಶೇಷವಾಗಿ ಕೃಷಿಜನಪದರ ಹಾಡುಗಳನ್ನು ಹಾಡುತ್ತ, ಭಕ್ಷ-ಭೋಜನಗಳೊಂದಿಗೆ ಹೊಲಕ್ಕೆ ಆಗಮಿಸುತ್ತಾರೆ. ಪೂಜೆಯ ನಂತರ ಹೊಲದಲ್ಲಿ ಕುಳಿತು ಜೋಳದ ರೊಟ್ಟಿ, ಎಳ್ಳು ಹಚ್ಚಿದ ಸಜ್ಜೆರೊಟ್ಟಿ ಭಜ್ಜಿ, ಕಡಬು, ಸೆಂಗಾದ ಖಾರಾ, ಎಳ್ಳು ಹೋಳಿಗೆ, ಬಾನದ ಅನ್ನ ಇತ್ಯಾದಿ ಎಲ್ಲರೂ ಒಟ್ಟಿಗೆ ಭೋಜನವನ್ನು ಉಲ್ಲಾಸ, ಸಡಗರ ಸಂಭ್ರಮದಿಂದ ಸವಿಯುತ್ತಾರೆ.

ಇದು ಕೇವಲ ಹಿಂದುಗಳು ಆಚರಿಸುವ ಹಬ್ಬ ಎನ್ನಬೇಡಿ, ಎಲ್ಲ ರೈತರಿಗೂ ಸುಗ್ಗಿಹಬ್ಬ, ಹೀಗಾಗಿ, ಹಿಂದುಗಳೊಂದಿಗೆ ಮುಸ್ಲಿಂ-ಕ್ರಿಶ್ಚಿಯನ್ ಸೇರಿದಂತೆ ವಿವಿಧ ಸಮಾಜದವರು ಹಬ್ಬವನ್ನು ಆಚರಿಸುತ್ತಾರೆ. ಆಲ್ದಾಳರ ಕುಟುಂಬದವರೊಟ್ಟಿಗೆ ಹೊಲದಲ್ಲಿ ಆಚರಿಸಿದ ಎಳ್ಳಾಮಾವಾಸಿ, ಭರ್ಜರಿ ಭೋಜನದೊಂದಿಗೆ ಹಾಗೂ ಆಲ್ದಾಳರೊಂದಿಗೆ ನಡೆಸಿದ ಸಂವಾದ ನನ್ನನ್ನು

ಸಾಹಿತ್ಯಲೋಕದಲ್ಲಿ ತೇಲಾಡುವ ಅನುಭವ ತಂದಿತು. ತಾವು ಬರೆದ ಹಲವು ಅಧ್ಯಾತ್ಮಿಕ ನಾಟಕಗಳ ಸಂವಾದವನ್ನು ಉಚ್ಚರಿಸಿದ್ದು, ಇಂದಿಗೂ ಅವರ ಜ್ಞಾಪಕ ಶಕ್ತಿ ಎಷ್ಟೊಂದು ಸೂಕ್ಷ್ಮವಾಗಿದುದು ಎಂದು ತೋರಿಸಿಕೊಟ್ಟಿತು. ಆಲ್ದಾಳರು ಮಾತು–ಮಾತಿನಲ್ಲಿ ಹರಿಯಲು ಬಿಟ್ಟ ತ್ರಿಪದಿಗಳು ;

**ಬೆಳಗಿನ ಜಾವಕ್ಕ । ಜಳಕ ಪೂಜೆಯ ಮಾಡಿ ।**
**ಬಿಳಿಎತ್ತುಗಳು ಹೊಡಕೊಂಡು । ಹೊಂಟರ ।**
**ಬಿಳಿ ಜ್ವಾಳದ ರೊಟ್ಟಿ ಕಟ್ಟೀನ ।**

**ಮಳೆಬಂದ ನೀರೀಗೆ । ಪೋಲುಮಾಡೂದು ಬ್ಯಾಡ ।**
**ಅಲ್ಲಲ್ಲಿ ಮಡಿಮಾಡಿ ನೀರುಣಿಸೋ । ಒಕ್ಕಲಿಗ ।**
**ಜೋಳದರಾಶಿ ಬಲು ಸೊಗಸೋ ।**

**ಹತ್ತಿಯ ಹೊಲದಾಗ । ನಿಂತುನೋಡವರ್‍ಯಾರ ।**
**ಒತ್ತಿ ರುಂಬಾಲ ಸುತ್ತ್ಯಾರ । ವಿಶ್ವಾರಾಧ್ಯ ।**
**ಬುತ್ತಿ ತಂದೀನಿ ಉಣಬರ್‍ರಿ ॥**

**ಅಕ್ಷರ ಕಲಿಯವ್ವ । ಸಾಕ್ಷರ ಮೆರಿಯವ್ವ ।**
**ಅಕ್ಷಯ ಜ್ಯೋತಿ ಬೆಳಗವ್ವ । ಚನ್ನಬಸವ ।**
**ಲಕ್ಷ್ಮಿಯೇ ನೀನಾಗಿ ಬಾಳವ್ವ ।**

ಎಂದು ಉಪದೇಶವಿತ್ತ ಆಲ್ದಾಳರ ಬದುಕುಧನ್ಯ, ಸುಲಲಿತವಾಗಿ, ನಿರರ್ಗಳವಾಗಿ, ರಾಗಬದ್ಧವಾಗಿ ಕಂಚಿನ ಕಂಠದಿಂದ ಹೊರಡುತ್ತಿದ್ದ ತ್ರಿಪದಿಗಳ ಸರಮಾಲೆ ಎಲ್ಲರನ್ನು ಸಂತೋಷಗೊಳಿಸಿತು. ಇಂಥ ಅವಕಾಶ ಕಲ್ಪಿಸಿಕೊಟ್ಟು, ಸಂಶೋಧನೆಗೆ ಸ್ಫೂರ್ತಿ ನೀಡಿದ ಹಿರಿಯ ಗುರುಗಳಿಗೆ ನಾನು ಚಿರಋಣಿ". – (ಸಂಶೋಧಕಿ)

**ಹ್ಯಾಂಗ ಮರೆಯಲಿ ಈ ಮಾತು :** 'ಉತ್ತಮ ಗ್ರಂಥಗಳು ನಾಡಿನ ಸಂಸ್ಕೃತಿಯ ಪ್ರತೀಕ' ಎಂದು ಭಾರತದ ಪ್ರಥಮ ಪ್ರಧಾನಿ ಪಂಡಿತ ಜವಾಹರಲಾಲ ನೆಹರು ಅವರು ಹೇಳಿರುವುದು ಮನನೀಯವಾದುದು. ಜನರು ತಮ್ಮ ಕ್ಲೈಬ್ಯ ಕಳೆದುಕೊಂಡು ಉತ್ಸಾಹ ಭರಿತರಾಗಬೇಕು. ಅದಕ್ಕಾಗಿಯೇ ಹಿರಿಯ ಚೇತನ, ನಾಡೋಜ ಪಾಟೀಲ ಪುಟ್ಟಪ್ಪ ಅವರು ಹೇಳುವಂತೆ, ಬದುಕಲು ಬೇಕು ಬದುಕುವ ಈ ಮಾತು". ಅಂತಹ ಮಾತುಗಳನ್ನು ಸಂಗ್ರಹಿಸುವುದು ಅಗತ್ಯ. ಎಲ್.ಬಿ.ಕೆ.ಆಲ್ದಾಳರಿಗೆ ಸಮರ್ಪಿಸಿದ "ರಂಗಸಂತ ಜಂಗಮ" ಅಭಿನಂದನ ಗ್ರಂಥದಲ್ಲಿ ಬರುವ ವಿವಿಧ ಲೇಖನಗಳಿಂದ ಆಯ್ದು ಕೆಲವು ಬದುಕುವ ಮಾತುಗಳಿಂದ ಅಮೃತವನ್ನು ಪಡೆಯಬಹುದು. ಇವು ಬರೀ ಲೇಖನಗಳಲ್ಲ, ಮಾನವರು ಬದುಕಲು ಆವಶ್ಯಕವಾಗಿರುವ

ನುಡಿಗುಚ್ಛಗಳು ಇಲ್ಲಿ ಅಡಕವಾಗಿವೆ. ಇದರಿಂದಾಗಿ ಆಲ್ದಾಳರು ತಮ್ಮ ಬದುಕು-ಬರಹ ಹೇಗೆ ರೂಪಿಸಿಕೊಂಡರು ಎನ್ನುವದು ಈ ಮಾತುಗಳಿಂದ ಅರ್ಥೈಸ ಬಹುದು.

**ಪದಗಳ ಮುತ್ತಿನ ಸರ :** ಗುಲಬರ್ಗಾ ವಿಶ್ವವಿದ್ಯಾಲಯ ಕಲಬುರ್ಗಿ ಇಲ್ಲಿ ಪ್ರವಾಚಕರಾಗಿರುವ ಡಾ.ಎಸ್.ಎಂ.ಹಿರೇಮಠರು "ರಂಗಸಂತ ಜಂಗಮ" ಬಗ್ಗೆ ಅವರ ಅಂತರಾಳದ ಮಾತು (ಪದ)ಗಳನ್ನು ಓದಿರಿ. "ಭಾರತದ ಮಣ್ಣಿಗೆ ಅದರದ್ದೇ ಆದ ಅಸ್ಮಿತತೆಯಿದೆ. 'ಅನೇಕತೆಯಲ್ಲಿ ಏಕತೆ' ಆ ಅಂತಃಸತ್ವ ಕನ್ನಡನಾಡು. ಅದು ಕೆನೆರೂಪ. ಆಲ್ದಾಳರಂತಹ ವ್ಯಕ್ತಿ ಶಕ್ತಿಗಳು ಕೆನೆಯಸಾರ-ಸಾರಾಯ...... ಮುಸ್ಲಿಂ ಮನೆತನದಲ್ಲಿ ಹುಟ್ಟಿದರೂ ಆಲ್ದಾಳರ ಅಂತ ರಂಗವು ಸೂಫಿ ಸಂಸ್ಕೃತಿಯ ಸಂಪನ್ನತೆಯಿಂದ ಸಂಸ್ಕಾರ ಗೊಂಡದ್ದಾಗಿದೆ. ಉದಾತ್ತ ಮೌಲ್ಯಗಳ ಅನುಸಂಧಾನಕ್ಕೆ ಜಾತಿ-ಮತ-ಪಂಥ ಪಂಗಡ ಭಾಷೆಗಳು ಬಂಧನವಾಗಲಾರವೆಂಬ ಭಾವವು ಅಲ್ಲಿ ಸದಾಜಾಗೃತವಾಗಿಯೇ ಇದೆ. ಈ ಕಾರಣದಿಂದಲೇ ಎಲ್.ಬಿ.ಕೆ.ಆಲ್ದಾಳರು ಕುರಾನ್ ಪರಂಪರೆಯ ಒಡಲಲ್ಲಿಯೇ ಪುರಾಣ ಸಂಸ್ಕೃತಿಯ ಪ್ರಕ್ರಿಯೆಗಳನ್ನು ರೂಢಿಸಿಕೊಂಡುದು. ಹೀಗೆ ಮನೆಗೆ ದ್ರೋಹ ಬಗೆಯದೆ 'ಮಾರು ಮಾರುವಿಗೂ ಹಿತವನ್ನುಂಟು ಮಾಡುವ ದಿಶೆಯಲ್ಲಿ ಪಯಣಿಸುತ್ತ ಎಳು ದಶಕಗಳ ಕಾಲ ಪಯಣಸಾಗುತ್ತಲೇ ಬಂದದ್ದು ಆಲ್ದಾಳರ ಬದುಕು ನಿಜಕ್ಕೂ ಸಾರ್ಥಕ ಬದುಕು.

- "ಆಲ್ದಾಳರು ಸಗರನಾಡ ಸೀಮೆಯ ಅನುಭಾವ ಪರಂಪರೆಯಲ್ಲಿ ಮಿಂದು ಮಹೋನ್ನತವಾದ ಭಾವದಲ್ಲಿ ಮಿಡಿಯುತ್ತಿದ್ದರು. ಅವರು ಬರೆದ ಕೃತಿಗಳ ಅಧ್ಯಯನವು ಒಂದು ನಾಡಿನ ವರ್ತಮಾನದ ಸಾಂಸ್ಕೃತಿಕ ಸಾಧ್ಯತೆಯನ್ನೇ ತೆರೆದಿಡಬಲ್ಲದು" ಎಂದು ಖ್ಯಾತ ಲೇಖಕಿ ಡಾ.ಮೀನಾಕ್ಷಿ ಬಾಳಿಯವರು 'ಆಲ್ದಾಳ ವ್ಯಕ್ತಿಚಿತ್ರ' ಲೇಖನದಲ್ಲಿ ಬರೆದಿದ್ದಾರೆ. ಇದು ಮನದಾಳದಿಂದ ಬಂದ ಮಾತು.

- ಉತ್ತುಂಗ ಶಿಖರಕ್ಕೂ ಈ ಮಳ್ಳಿಯ ಹಳ್ಳಿ ಪ್ರತಿಭಾವಂತ ಏರಿದ್ದು ಅಸಹಜವೇನಲ್ಲ- ಇವೆಲ್ಲಕ್ಕೂ ಹೆಚ್ಚಾಗಿ ಅವರು ಕಲ್ಯಾಣ ಕರ್ನಾಟಕದ ಸಾಂಸ್ಕೃತಿಕ ಹರಿಕಾರರಾಗಿ ಸಾಧಕ ಬದುಕಿನ ಮಹತ್ತಿಗೆ ಹಿಡಿದ ಕೈಗನ್ನಡಿಯಾಗಿದೆ. ಇಳಿ ವಯಸ್ಸಿನಲ್ಲಿಯೂ ನಾಟಕ ಕ್ಷೇತ್ರದಲ್ಲಿ ಕ್ರಿಯಾಶೀಲರಾಗಿರುವುದು ಅವರ ಅದಮ್ಯ ಚೈತನ್ಯ ಶಕ್ತಿಯ ದ್ಯೋತಕವಾಗಿದೆ ಎಂದು 'ತಮ್ಮ ರಂಗ ಗಂಭೀರ' ಲೇಖನದಲ್ಲಿ ಡಾ.ಸಂಗಮೇಶ ಸವದತ್ತಿ ಮಠ ಬರೆಯುತ್ತಾರೆ ಎಂದರೆ ಚಿನ್ನವನ್ನು ಪುಟಕ್ಕಿಟ್ಟಂತೆ.

- "ಅವರು ಸಾಂಸ್ಕೃತಿಕ ಕ್ಷೇತ್ರದಲ್ಲಿ ತಮ್ಮದೆ ಆದ ಹೆಜ್ಜೆಗಳನ್ನು ಮೂಡಿಸಿದ್ದಾರೆ. ಸಾಹಿತ್ಯಕ್ಕೆ ವಿಶಿಷ್ಟ ಕಾಣಿಕೆ ಸಲ್ಲಿಸಿದ್ದಾರೆ. ಆಲ್ದಾಳರು ಮೆಚ್ಚಿಕೊಂಡದ್ದು ಕನ್ನಡಭಾಷೆ-ಸಂಸ್ಕೃತಿಗಳನ್ನು, ಹನ್ನೆರಡನೆಯ ಶತಮಾನದ ಶರಣರ ಬದುಕು ಅವರಿಗೆ ಪ್ರೇರಣೆಯನ್ನು ನೀಡಿದೆ ಕನ್ನಡಾಭಿಮಾನಿಗಳಾಗಿರುವ ಆಲ್ದಾಳರು ಕನ್ನಡವೇ ಸತ್ಯ. ಕನ್ನಡವೇ ನಿತ್ಯವೆಂದು ಬಾಳುತ್ತಿರುವವರು". ಎಂದು ಕನ್ನಡ ಪ್ರಶಸ್ತಿಯನ್ನು ತಮ್ಮ ಪದಗಳ ಮೂಲಕವೇ ಸಲ್ಲಿಸಿದ್ದಾರೆ. "ನಾಟಕಲೋಕದ ಸಾಧಕ' ಲೇಖನದ ಮೂಲಕ ಗುಲಬರ್ಗಾ

ವಿಶ್ವವಿದ್ಯಾಲಯದ ಕುಲಸಚಿವ ಡಾ.ಡಿ.ವಿ.ನಾಯಕರು ಅರ್ಪಿಸಿರುವುದು, ಹೃನ್ಮನಕ್ಕೆ ತಂಪೆರಿದಿದೆ. ಕನ್ನಡದ ಕೀರ್ತಿಹೆಚ್ಚಲಿ.

- "ಅವರೊಬ್ಬ ಕಲಾ ಸಂತೆಯ ಸಂತರು. ಕಲೆಗೆ ನಗಿಸುವುದು ಮಾತ್ರ ಗೊತ್ತು. ಆಲ್ದಾಳರು ಒಬ್ಬ ಕಲಾವಿದರು. ಕಲಾವಿದ ಸಮಾಜದ ಸಂಪತ್ತು ಅವನ ಕಲೆ ಅದು ರಾಷ್ಟ್ರದ ಸಂಪತ್ತು. ಹೀಗಾಗಿ ಕಲಾವಿದ ಆಲ್ದಾಳರು ನಮ್ಮ ಸಂಪತ್ತು. ಅವರ ಈ ನಾಟಕ ಎಂಬ ಕಲಾಕೃತಿ ರಾಷ್ಟ್ರೀಯ ಸಂಪತ್ತು" ಎಂದು ಮನಸಾರೆ ಹೊಗಳಿರುವವರು, ಗುಲಬರ್ಗಾ ವಿ.ವಿ.ಯ ಪ್ರಾಧ್ಯಾಪಕರು ಡಾ.ಎಂ.ಎಸ್.ಪಾಟೀಲ. ಅವರು ತಮ್ಮ "ಕಲಾ ಸಂತೆಯ ಸಂತ" ಲೇಖನದಲ್ಲಿ ನಿಜವಾಗಿಯೂ ಆಲ್ದಾಳರು ಸರ್ವರ ಸಂಪತ್ತು ಇದಕ್ಕೆ ಎರಡು ಮಾತಿಲ್ಲ.

- ....."ಅದೆಷ್ಟು ಜನರಿಗೆ ನಾಟಕ ಕಲಿಸಿದ್ದಾರೋ, ಧಾರ್ಮಿಕ ಬೋಧನೆಯನ್ನು ಮಾಡಿದ್ದಾರೋ, ಅದೆಷ್ಟು ಜನ ಇವರ ಹೆಸರು ಹೇಳಿಕೊಂಡು ಬದುಕುತ್ತಿದ್ದಾರೋ, ಮೂರು ವರ್ಷದ ಅವರ ಸಹವಾಸದಲ್ಲಿ ಆಲ್ದಾಳರು ಮುಸಲ್ಮಾನರೆನ್ನುವ ಕುರುಹು ಸಹ ನನಗೆ ಗೊತ್ತಾಗಲಿಲ್ಲ. ಅಂತಹ ಕನ್ನಡ ಕಟ್ಟಾಭಿಮಾನಿಯಾಗಿ ಜೀವಂತ ಇರುವ ಶಿಶುನಾಳ ಷರೀಫ್‌ರಿದ್ದಂತೆ" ಎಂದು ತುಂಬಾ ಭಾವುಕರಾಗಿ ಹೇಳಿದ್ದಾರೆ. ತಮ್ಮ "ಆಡು ಮುಟ್ಟದ ಗಿಡವಿಲ್ಲ" ಲೇಖನದಲ್ಲಿ ಖ್ಯಾತ ರಂಗಭೂಮಿ ಹಾಗೂ ಸಿನೆಮಾ ನಟಿ ಶ್ರೀಮತಿ ಗಿರಿಜಾ ಲೋಕೇಶರು ಆಲ್ದಾಳ ಅವರ ಜೊತೆಗಿದ್ದದ್ದೇ ನನ್ನ ಭಾಗ್ಯ. ಅವರ ಸರಳ ತನವನ್ನು ನಮಗೂ ಕರುಣಿಸಿ ಸ್ವಾಮಿ ಎಂದು ಅವರನ್ನು ಬೇಡುವೆ.

**ಕಲಬುರ್ಗಿ ಜಿಲ್ಲಾ ಕಸಾಪ ಅಧ್ಯಕ್ಷಗಾದಿ : ಆಲ್ದಾಳರಿಗೆ ಸಂದ ಅರ್ಹ ಗೌರವ :**

ಆಲ್ದಾಳರನ್ನು ನೆನೆಯುವ ಮೂಲಕ ಕಲಬುರ್ಗಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಸಾಹಿತ್ಯಕ್ಕೆ ಒಳಿತನ್ನೇ ಮಾಡಿದೆ. ಹೈದ್ರಾಬಾದ ಕರ್ನಾಟಕದ ಅಪರೂಪದ ಸಾಹಿತಿ, ಗ್ರಾಮೀಣ ರಂಗಭೂಮಿಗೆ ಸಾಕಷ್ಟು ಕೊಡುಗೆ ನೀಡಿದ ಖ್ಯಾತ ನಾಟಕಕಾರ ಆಲ್ದಾಳ ಅವರು ಕಲಬುರ್ಗಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸರ್ವಾಧ್ಯಕ್ಷರಾಗಿ ಜೂನ ೨೦೧೩ರಲ್ಲಿ ಸರ್ವಾನುಮತದಿಂದ ಆಯ್ಕೆಗೊಂಡಾಗ ಇಡೀ ಜೇವರ್ಗಿ ತಾಲೂಕಿನ ಜನತೆಗೆ ಅತೀವ ಸಂತೋಷ ನೀಡಿತು. ತಾನಾಗಿಯೇ ಒಲಿದು ಬಂದದ್ದು ವಿಶೇಷ.

"ಕಲಬುರ್ಗಿ ಜಿಲ್ಲಾ ಕಸಾಪ ರಂಗಕರ್ಮಿಯೊಬ್ಬರನ್ನು ಅಧ್ಯಕ್ಷರನ್ನಾಗಿ ಮಾಡುವ ಮೂಲಕ ರಂಗಕರ್ಮಿ, ನಟ, ನಾಟಕಕಾರ ಇವೆಲ್ಲಕ್ಕಿಂತ ಮಿಗಿಲಾಗಿ ಹಳ್ಳಿಗಾಡಿನ ಮಾನವೀಯತೆ ಮೈವೆತ್ತಂತೆ ಇರುವ, ಸಾಮರಸ್ಯಕ್ಕೆ ಸಂಕೇತವಾಗಿರುವ ಹಿರಿಯರೊಬ್ಬರಿಗೆ ಜಿಲ್ಲಾ ಮಟ್ಟದ ಸಾರಸ್ವತಲೋಕದ ಉಚ್ಚಸ್ಥಾನ ನೀಡಿ ಗೌರವಿಸಿದೆ" ಇದು ನಿಜಕ್ಕೂ ಹೆಮ್ಮೆ ಪಡಬೇಕಾದ ಸಂಗತಿಯಾಗಿದೆ ಎಂದು ಜೇವರ್ಗಿ ತಾಲೂಕಿನ ಮಠಾಧೀಶರುಗಳು ಪ್ರಶಂಶಿಸಿದ್ದಾರೆ.

೨೦೧೩ರ ಮೇ ೩೦, (ಗುರುವಾರ) ಎಲ್.ಬಿ.ಕೆ.ಆಲ್ದಾಳರ ಜೀವನದಲ್ಲಿ ಸುವರ್ಣಾಕ್ಷರದಿಂದ ಬರೆಯಲ್ಪಡುವ ದಿನ, ೨೦೧೩ರ ಜೂನ ೧೫ ಮತ್ತು ೧೬ ರಂದು ಎರಡು ದಿನಗಳ ಕಾಲ ಕಲಬುರ್ಗಿ ಕನ್ನಡ ಭವನದಲ್ಲಿ ೧೩ನೇ ಕಲಬುರ್ಗಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಸರ್ವಾನುಮತದಿಂದ ಅಯ್ಕೆ ಮಾಡಿರುವುದು ಸಾಹಿತ್ಯ ಸಮ್ಮೇಳನಕ್ಕೆ ಧಕ್ಕಿದ ಗೌರವವಾಗಿದೆ.

**ಚಪ್ಪಾಳೆ ಪ್ರೋತ್ಸಾಹ :** ಹಿರಿಯ ಚೇತನ ಆಲ್ದಾಳ ದಂಪತಿಯನ್ನು ಸನ್ಮಾನಿಸುವ ಸಂದರ್ಭದಲ್ಲಿ ಪತ್ನಿ ಅಮಿನಬಿ ಅವರನ್ನು ವೇದಿಕೆಗೆ ಆಹ್ವಾನಿಸಿದಾಗ ಸಭಿಕರಿಂದ ಜೋರಾಗಿ ಚಪ್ಪಾಳೆ ಸುರಿಮಳೆ, ಇಬ್ಬರಿಗೆ ಗೌರವಿಸಿದಾಗ ಹರ್ಷದ ಹೊಳೆ ಹರಿಯಿತು.

**ನುಡಿಹಬ್ಬದಲ್ಲಿ ಆಲ್ದಾಳರ ಅಮೋಘ ಭಾಷಣ**

**ಯಾರನ್ನ ಹಾಡಿದರ ಏನ ಬರತಾದ ತಾಯಿ**
**ಗ್ವಾದಲ್ಯಾಗಿರುವ ಬಸವನ್ನ । ಹಾಡಿದರ**
**ಗೋಧಿ ರಾಶಿ ನನ್ನ ಮನಿಯಾಗ ॥**

ದುಡಿತಕ್ಕ ಧ್ವನಿಯಾದ ಅಚ್ಚಕನ್ನಡ ಗರತಿಯ ಈ ತ್ರಿಪದಿಯೊಂದಿಗೆ ನನ್ನ ಮಾತನ್ನು ಆರಂಭಿಸುವೆ. ದೈನಂದಿನ ಬದುಕಿನೊಂದಿಗೆ ಭಾವ-ಬೆಸುಗೆ ಹಾಕಿದ್ದ, ಅಸನಕ್ಕೆ ಆಸರೆಯಾದ ಬಸವ ಎಂದರೆ ಎತ್ತುಗಳೆ, ಅವ ದೇವರು-ದೈವ ಆ ಭಾವದೊಂದಿಗೆ ನಾನು ಬಸವನನ್ನು ಭಕ್ತಿ ಭಾವದೊಂದಿಗೆ ಸ್ಮರಿಸಿ, ನಮಿಸಿ, ಹಾಗೆಯೇ ದೈವಿ ಸ್ವರೂಪಿಯಾದ ಕನ್ನಡಮ್ಮಳಿಗೂ, ನೆರೆದವರೆಲ್ಲರಿಗೂ ಅನಂತ ಶರಣು ಶರಣಾರ್ಥಿಗಳು.

**ಆಲ್ದಾಳ ಮಾಸ್ತರರ 'ಅಕ್ಷರಜಾತ್ರೆ' :** ಕಲಬುರ್ಗಿ ಜಿಲ್ಲಾ ಕಸಾಪ ಅಧ್ಯಕ್ಷ ಮಹಿಪಾಲರೆಡ್ಡಿ ಮುನ್ನೂರ ಆಯೋಜಿಸುತ್ತಿರುವ ಮೊದಲ ಜಿಲ್ಲಾ ಸಮ್ಮೇಳನ... ಸಮ್ಮೇಳನಾಧ್ಯಕ್ಷರಾಗಿ ಎಲ್.ಬಿ.ಕೆ.ಆಲ್ದಾಳ ಆಯ್ಕೆಯಿಂದ ಹಿಡಿದು ಆಹ್ವಾನ ಪತ್ರಿಕೆ ತಯಾರಿಸುವವರೆಗೂ ಶಿಸ್ತು, ಅಚ್ಚುಕಟ್ಟುತನ, ಸೌಂದರ್ಯಪ್ರಜ್ಞೆ ಮೆರೆದಿದ್ದಾರೆ, ಆಲ್ದಾಳ ಅವರು ಮುಸ್ಲಿಂ ಸಮುದಾಯಕ್ಕೆ ಸೇರಿದ ಪ್ರಪ್ರಥಮ ಅಧ್ಯಕ್ಷರು ಎಂಬ ಗೌರವಕ್ಕೆ ಪಾತ್ರರಾದವರು. ಹಿಂದು-ಮುಸ್ಲಿಂ ಭಾವೈಕ್ಯತೆಗಾಗಿ ನಾಟಕ ಬರೆದ ಆಲ್ದಾಳ ಅವರು ಜೀವನದುದ್ದಕ್ಕೂ ಶರಣ-ಸೂಫಿ ಸಂತರ ವಿಚಾರ ಧಾರೆಗಳನ್ನು ಪ್ರಚಾರಮಾಡಿದವರು. ಇಂತವರ ಅಧ್ಯಕ್ಷತೆಯಲ್ಲಿ ನಡೆದ ಎರಡು ದಿನಗಳ ಮೇಳವನ್ನು 'ಆಲ್ದಾಳ ಮಾಸ್ತರರ ಅಕ್ಷರಜಾತ್ರೆ'.. ಎಂದು ಕರೆದರೆ ಶೋಭೆ ತರುತ್ತದೆ.

**ಕೃತಜ್ಞತೆ :** "ಬಂಧುಗಳೇ, ಸಾಸಿವೆಯಷ್ಟಿನ ಕೆಲಸಕ್ಕೆ ರಾಶಿ ಹೊನ್ನು ನೀಡಿದರೆಂಬಂತೆ ನನ್ನ ಅಲ್ಪ ಗೆಯ್ಮೆಗೆ ತಾವು ನನಗೆ ಜಿಲ್ಲಾ ಸಮ್ಮೇಳನದ ಅಧ್ಯಕ್ಷತೆಯನ್ನು ನೀಡಿ ನನ್ನ ಜವಾಬ್ದಾರಿಯನ್ನು ಇನ್ನೂ ಹೆಚ್ಚಿಸಿದ್ದೀರಿ. ನಿಮ್ಮ ನಂಬುಗೆಗೆ ಇಂಬುಗೈಯುವಂತೆ ಮಾಡುತ್ತೇನೆ ಎಂಬುದನ್ನು ನಿಮ್ಮ

ಮನಸಾಕ್ಷಿಯಾಗಿ ನುಡಿಯುತ್ತೇನೆ" ಎಂದು ಆಲ್ದಾಳ ಅವರು ಕನ್ನಡ ಬಂಧುಗಳಿಗೆ ತಮ್ಮ ಕೃತಜ್ಞತೆಯನ್ನು ತೋರ್ಪಡಿಸಿದರು.

**ಎಲ್ಲರೀಗಮ್ ನಮೋ ಬಂಧುಗಳೆ**
**ಭಾಗಿಗಳೆ ಉಲ್ಲಾಸ ವಿತ್ತವರೆ**
**ಮನವ ತೊಳೆದವರೆ ಟೊಳ್ಳುಜಗಸಾಕು ಬಾಳ್ ಎನಿಸಿ**
**ಗುರುವಾಸವರೆ ಕೇಳಿರಿ ನಮನವೆನ್ನುವೆನು- ಮಂಕುತಿಮ್ಮ**

ದಾರ್ಶನಿಕ ಕವಿ ಡಿವ್ಹಿಜಿಯವರ ನುಡಿಯೊಂದಿಗೆ ನಮಿಸಿದ ಆಲ್ದಾಳರು ಭಾಷಣ ಮುಗಿಸಿದಾಗ ಸಭೀಕರಿಂದ ಕಿವಿಗಡಚು ಹಿಡಿಯುವಂತೆ ಚಪ್ಪಾಳೆ ತಟ್ಟಿದಾಗ ಇಡೀ ಸಭೆಯಲ್ಲಿ ಕನ್ನಡದ ಕಹಳೆ ಮೊಳಗಿತು.

**ಆಲ್ದಾಳರಿಗೆ ಪ್ರಶಸ್ತಿಗಳ ಸರಮಾಲೆ**

**"ಜಾತ್ರೆಗೆ ಬಂದಿರುವವರು ನಾವು।**
**ಖಾತ್ರಿಯಾಗಿ ತಿಳಿದುಕೊಳ್ಳಿ ನೀವು। ಜೀವನದ**
**ರಾತ್ರಿಯಾದಾಗ ಅಲ್ಲಿ ಏನೇನು ಇಲ್ಲ**
**ಶಿವಕವೀಶ॥"**

ನಾಡು-ನುಡಿಯ ಏಳಿಗೆಗೆ ಗಣನೀಯ ಕಾಣಿಕೆ ನೀಡಿರುವ ಸಾಹಿತಿಗಳನ್ನು ಸನ್ಮಾನಿಸುವ ಮೂಲಕ ಅವರ ನಾಡಸೇವೆಯನ್ನು ಸ್ಮರಣೀಯವಾಗಿಸುವ ಉದ್ದೇಶದಿಂದ ಅವರನ್ನು ಗೌರವಪೂರ್ವಕ ಸನ್ಮಾನಿಸುವುದು ಭಾರತೀಯ ಪರಂಪರೆಯಲ್ಲಿ ಬಹು ಮಹತ್ವ ಪಡೆದಿದೆ ಎಂಬುದನ್ನು ಮರೆಯುವಂತಿಲ್ಲ.

**ಸರ್ಕಾರದಿಂದ ಸಂದ ಪ್ರಶಸ್ತಿಗಳು :-** ೧೯೯೩ರಲ್ಲಿ ನಾಟಕ ಅಕಾಡೆಮಿಯ ಪ್ರಶಸ್ತಿ, ೨೦೦೧ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ೨೦೦೩ ರಲ್ಲಿ ರಾಮಪೂರದಲ್ಲಿ ತತ್ವಪದಕಾರರ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ೨೦೦೫ರಲ್ಲಿ ಕಲಬುರ್ಗಿಯ ಆಕಾಶವಾಣಿ ಧ್ವನಿ ಪರೀಕ್ಷಾ ಸದಸ್ಯತ್ವ, ೨೦೦೫ರಲ್ಲಿ ಕರ್ನಾಟಕ ನಾಟಕ ಅಕಾಡೆಮಿಯ ಸದಸ್ಯತ್ವ ಬೆಂಗಳೂರು.

**ಸಂಸ್ಥೆಗಳು,ಮಠಗಳಿಂದ ಸಂದ ಪ್ರಶಸ್ತಿಗಳು :-**

೧) 'ನಾಟ್ಯಕವಿರತ್ನ' : ಶ್ರೀ ಮಹಾಂತೇಶ್ವರ ಮಠ ಚಿನ್ಮಯಗಿರಿ, ಅಫಜಲಪುರ – ೧೯೮೧
೨) 'ಸರಸ್ವತಿ ವರಪುತ್ರ' : ಶ್ರೀ ಷಣ್ಮುಖ ಶಿವಯೋಗಿಮಠ ಜೇವರ್ಗಿ – ೧೯೮೨
೩) 'ಶರಣ ಸಾಹಿತ್ಯಸಿಂಧು' : ಶ್ರೀ ಮಹಾತ್ಮಾಪೀಠ ಅಳ್ಳೊಳ್ಳಿ – ೧೯೯೭
೪) 'ಶರಣ ಸಾಹಿತಿ' : ಶ್ರೀ ಕುಣಿಗಲ್ ನಾಟಕೋತ್ಸವ ಬೆಂಗಳೂರು – ೧೯೯೮
೫) 'ಶಿಕ್ಷಕ-ಬಂಧು' : ಶ್ರೀ ಹೈದ್ರಾಬಾದ ಕರ್ನಾಟಕ ಬಳಗ ಶಹಾಪೂರ – ೨೦೦೧

೬) 'ವೀರಶೈವ ಸಾಹಿತ್ಯರತ್ನ' : ಶ್ರೀ ಚನ್ನಮಲ್ಲೇಶ್ವರ ಕುಕನೂರು – ೨೦೦೬

೭) 'ಸಗರ ಸಿರಿ' : ಶ್ರೀ ಚರಬಸವೇಶ್ವರ ಗದ್ದುಗೆ ಶಹಾಪೂರ – ೨೦೦೩

೮) 'ಶರಣಸಾಹಿತ್ಯ ಸಿರಿ' : ಶ್ರೀ ಪರಮಾನಂದೇಶ್ವರ ನಾಟ್ಯ ಸಂಘ ಯಡ್ಡಳ್ಳಿ – ೨೦೦೭

೯) 'ಶರಣಸಾಹಿತ್ಯ ರತ್ನ : ಶ್ರೀ ಪುಟ್ಟರಾಜ ಗವಾಯಿಗಳಿಂದ ಪುರಸ್ಕಾರ ಸಮಿತಿಯಿಂದ೨೦೦೭

೧೦) 'ಕವಿಕಿರಣ' : ಶ್ರೀ ಅಣಿಗಿರಿ ಪುಣ್ಯಕ್ಷೇತ್ರ ಜೇವರ್ಗಿ – ೨೦೦೭

೧೧) 'ನಾಟ್ಯಕಲಾರತ್ನ : ಶ್ರೀ ತಪೋವನ ಮಠ ಶಾಖಾಪೂರ – ೨೦೦೫

೧೨) 'ಸಾಹಿತ್ಯ ಕಲಾಭೂಷಣ : ಶ್ರೀಮದ್ ಕಾಶಿ ಸಿಂಹಾಸನ ಜಂಗಮವಾಡಿ ಮಠ ಕಾಶಿ ೨೦೦೭

೧೩) 'ಕಾಯಕ ಸನ್ಮಾನ' : ಉದಯೋನ್ಮುಖ ಬರಹಗಾರರ ಬಳಗ ಕಲಬುರ್ಗಿ – ೨೦೦೮

೧೪) 'ಸಗರನಾಡು ಸೇವಾರತ್ನ ಪ್ರಶಸ್ತಿ : ಸುರಪುರದಿಂದ

೧೫) ಸಹಸ್ರಮಾನೋತ್ಸವ ಪ್ರಶಸ್ತಿ – ದೇವರದಾಸಿಮಯ್ಯ ಮುದನೂರಿಂದ

೧೬) ಎಸ್.ಪಿ.ವರದರಾಜ ಪ್ರಶಸ್ತಿ – ಚಲನಚಿತ್ರ ಆತ್ಮೀಯ ಬಳಗ ಬೆಂಗಳೂರು – ೨೦೧೧

೧೭) ಸಗರನಾಡಿನ ಸಾರಸ್ವತ ಪುತ್ರ – ಭರತನೂರು ಮಠದಿಂದ – ೨೦೧೨

೧೮) 'ಬಸವಶ್ರೀ ಪ್ರಶಸ್ತಿ' – ಮಳಗಿ(ಕೆ) ಚಿತಾಪೂರ – ೨೦೧೨

೧೯) ಚೆನ್ನರೇಣುಕ ಬಸವಶ್ರೀ – ಹಾರಕೂಡ ಸಂಸ್ಥಾನ ಹಿರೇಮಠ – ೨೦೧೩

೨೦) 'ರಂಗತೋರಣ' – ಬಳ್ಳಾರಿಯಿಂದ – ೨೦೧೩

೨೧) ಡಿ.ಎಸ್.ಮ್ಯಾಕ್ಸ್ ಕನ್ನಡ ಶ್ರೀ – ೨೦೧೩

೨೨) 'ಗುರುವಂದನ' – ಬಾದಾಮಿ ವಿಶ್ವಕರ್ಮ ಸಂಸ್ಥೆ – ೨೦೧೩

ಇತ್ಯಾದಿ ಸಂಘ, ಸಂಸ್ಥೆ, ಅಭಿಮಾನಿಗಳಿಂದ ಆಲ್ದಾಳ ರವರಿಗೆ ಪ್ರಶಸ್ತಿ ನೀಡಿ ಗೌರವ ತೋರಿವೆ, ಕರ್ನಾಟಕದಾದ್ಯಂತ ಇವರಿಗಿರುವ ಅಭಿಮಾನಿಗಳ ಬಳಗ ಮೆಚ್ಚು ವಂಥದ್ದು.[೬೫]

**ಇನ್ನೇನು ಬೇಕು :** ಒಬ್ಬ ಮನುಷ್ಯನಿಗೆ ಇವರೆಲ್ಲರಿಗೂ ಆಲ್ದಾಳರು ಮನತುಂಬಿ ಶರಣು–ಶರಣಾರ್ಥಿಗಳನ್ನು ಸಲ್ಲಿಸುವ ಪರಿಯಿದು. ಹಸಿದ ಹೊಟ್ಟೆಗೆ ಪ್ರಸಾದ, ಬರಿಗೈಗೆ ಶುದ್ಧ ಕಾಯಕ, ಗೌರವಕ್ಕೆ ವಸ್ತ್ರ, ಹೃದಯಕ್ಕೆ ಸಾಂತ್ವನ, ಮನಕ್ಕೆ ತಂಪನ್ನೆಗೈಯ್ದು ಮಾತೃ ಹೃದಯ, ಮಾತೃಸ್ವರೂಪಿ, ಸರ್ವ ಮಠಾಧೀಶ್ವರರಿಗೆ ತಲೆಬಾಗಿ ನಮಸ್ಕರಿಸುವ ಪರಿ ಆಲ್ದಾಳರ ವಿನಯ ಶ್ರದ್ಧೆ ಮನನೀಯ ಇದು ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ "ನಾಟಕಕಾರನ ಕಲೆ ಎಂಬುದೊಂದು ಸಮುದ್ರ ಅದರಲ್ಲಿ ನಮ್ಮ ಬೊಗೆಸೆಗೆ ಧಕ್ಕಿದಷ್ಟೇ ನಮ್ಮದು. ಹಾಗೆಂದೂಕೊಂಡರೂ ಮತ್ತೆ ಅದು ಸೇರುವುದು ಸಮುದ್ರಕ್ಕೆ, ಯಾಕೆಂದರೆ ಬೊಗಸೆಯಲ್ಲಿ ನೀರು ನಿಲ್ಲುವುದಿಲ್ಲ".[೧೨]

**ಎಲ್.ಬಿ.ಕೆ. ಸಾಧನೆ ಕುರಿತು ರಂಗಾಸಕ್ತರ ಅಭಿಪ್ರಾಯ :** ಎಲ್.ಬಿ.ಕೆ ಆಲ್ದಾಳ ಅವರ ಮಾತೃ ಭಾಷೆ–ಮನೆಮಾತು ಉರ್ದುಭಾಷೆ. ಆದರೆ ಅವರು ಕನ್ನಡದ ಅಪ್ಪಟ ಕವಿಯಾಗಿ, ನಾಟಕಕಾರರಾಗಿ ಬೆಳೆದರು, ಬಾಳುತ್ತಿರುವರು, ಕನ್ನಡ ಭಾಷೆ, ಕಾವ್ಯ, ತತ್ವ, ಸಂಸ್ಕೃತಿಗಳ ಜೀವನಾಡಿಯನ್ನು ಹಿಡಿದು ಮಾತಾಡುತ್ತಾರೆ. ಆಡು ಮಾತಿನ ಸತ್ವವನ್ನು ಪರೀಕ್ಷಿಸುವುದಕ್ಕೆ ಅದನ್ನು ತಮ್ಮ ನಾಟಕಗಳಲ್ಲಿ ಒಂದು ಅಲೆಗೆ ಒಯ್ದು ನೋಡಲು ಹಿಂಜರಿಯಲಿಲ್ಲ ಹೀಗೆ ಮಾತೃಭಾಷೆಯಾದ ಉರ್ದುಗಿಂತಲೂ ಕನ್ನಡವೇ ಅವರಿಗೆ ದೊಡ್ಡದಾಗಿದೆ.

ಆಲ್ದಾಳರಂಥ ಧೀಮಂತ ಸಾಹಿತಿಯ ಸಾಧನೆಯನ್ನು ಮೆಚ್ಚಿಕೊಂಡು ತಮ್ಮ ಅಭಿಪ್ರಾಯಗಳನ್ನು ಹೊರಹಾಕಿದ್ದಾರೆ. ಆಲ್ದಾಳರ ಸಾಹಿತ್ಯಪ್ರಿಯರು, ಹಿತೈಷಿಗಳು ಅಭಿಮಾನಿಗಳು ನೀಡಿದ ಕೆಲವು ಅಭಿಪ್ರಾಯಗಳನ್ನು ಓದುಗರ ಕುತೂಹಲಕ್ಕಾಗಿ ಇಲ್ಲಿ ಬರೆಯಲಾಗಿದೆ.

ಆಲ್ದಾಳ ಅವರು ಯಾವಾಗಲೂ ಸ್ತ್ರೀಯರ ಪರ, ಅವರನ್ನು ಗೌರವಿಸುವ ರೀತಿ ಮರೆಯುವಂತಿಲ್ಲ, ಹೆಣ್ಣಾಗಿ ಹುಟ್ಟಿರುವುದು ಹೆಮ್ಮೆಪಡಬೇಕು. ಮನುಷ್ಯ ಬದುಕಬೇಕಾಗಿದ್ದು ತನಗಾಗಿ ಅಲ್ಲ, ಬೇರೆಯವರಿಗೋಸ್ಕರ, ಅದೇ ಬದುಕು ಅನ್ನೋ ಅರ್ಥಕ್ಕೆ ನಿಜವಾದ ಸಾಕ್ಷಿ ಎಂದರೆ, ಆಲ್ದಾಳ ಅವರು 'ನನ್ನ ದೇವರು' ನಾಟಕದಲ್ಲಿ ಸೃಷ್ಟಿಸಿರುವ ಅನ್ನಪೂರ್ಣಳ ಪಾತ್ರ ಮರೆಯುವಂತಿಲ್ಲ. ಪತಿಯಾದವನು ಎಷ್ಟೇ ಕಷ್ಟಕೊಟ್ಟರು ಅದನ್ನು ಸಹನೆಯ ಮೂರ್ತಿಯಾಗಿ ಅಪ್ಪಿಕೊಂಡು ಕೊನೆಯವರೆಗೂ ಪತಿಯೇ ತನ್ನ ದೈವವೆಂದು ಕೀರ್ತಿಪಡೆದಳು.

**–ನೀಲಾ ಕೆ.ಚಿಂತಕಿ ಕಲಬುರ್ಗಿ**

ಬಡತನ ಶಾಪವಲ್ಲ ವರ ಎನ್ನುವುದನ್ನು ಆಲ್ದಾಳರು ತಮ್ಮ ನಾಟಕಗಳಲ್ಲಿ ಬಿಂಬಿಸಿದ್ದಾರೆ. ಕುಡುಕ ಗಂಡನಿಂದ ತಿರಸ್ಕೃರಿಸಲ್ಪಟ್ಟ ಹೆಣ್ಣೊಂದು ವಿದ್ಯಾಪಾರಂಗತಳಾಗಿ, ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡ ಅನೇಕ ಸ್ತ್ರೀ ಪಾತ್ರಧಾರಿಗಳು ಸಮಾಜಕ್ಕೆ ಶುಭ್ರ ಕನ್ನಡಿಯಂತೆ ಕಂಗೋಳಿಸುತ್ತವೆ. ಇಲ್ಲಿ ಬದುಕು ಶಾಪವಾಗದೆ ವರವಾಯಿತು. ಇಲ್ಲಿ ಸರ್ವಜ್ಞನ ಪದ ನೆನಪಿಗೆ ಬರುತ್ತೆ. 'ಆಳಾಗಬಲ್ಲವನು ಆಳುವನು ಅರಸಾಗಿ, ಆಳಾಗಿ ಬಾಳಲರಿಯದವನು, ಹಾಳಾಗಿ ಹೋಗುವನು ಸರ್ವಜ್ಞ,

**–ಡಾ.ಸುಜಾತಾ ಜಂಗಮಶೆಟ್ಟಿ**

ನಾಟಕಕಾರ ಎಲ್.ಬಿ.ಕೆ.ಆಲ್ದಾಳರ ಪ್ರತಿಯೊಂದು ನಾಟಕವೂ ವಿಭಿನ್ನವಾಗಿರುತ್ತದೆ. ಅವರ ಪ್ರಪ್ರಥಮ ನಾಟಕ 'ಪತಿಭಕ್ತಿ' (೧೯೬೪) ರಾಜ್ಯಾದ್ಯಂತ ಪ್ರೇಕ್ಷಕರನ್ನು, ಓದುಗರನ್ನು ಈಗಲೂ ಆಕರ್ಷಿಸುತ್ತಿದೆ. ಸಹಸ್ರಾರು ಪ್ರಯೋಗಗಳನ್ನು ಕಂಡ ಈ ನಾಟಕ ಅವರನ್ನು ಉನ್ನತ ಶಿಖರಕ್ಕೆ ತಲುಪಿಸಿದೆ. ಇದರ ಜೊತೆ ೫೦ ವರ್ಷಗಳ ಹಿಂದಿನ ಬರಹದ ನಾಟಕಗಳು ತಾವೆಂದೆಂದಿಗೂ ಓದುಗರ ಮನಸ್ಸಿನಲ್ಲಿ ಜೀವಂತವಾಗಿ ನೆಲೆಸುವ ಸಾಮರ್ಥ್ಯವನ್ನು ಹೊಂದಿದ್ದೇವೆ ಎಂಬುದನ್ನು ಸಾಬೀತುಗೊಳಿಸುವಲ್ಲಿ ಯಶಸ್ವಿಯಾಗಿವೆ. ನಮ್ಮ ದಿನನಿತ್ಯದ ಜೀವನದ ಜಂಜಾಟಗಳನ್ನು ಮರೆಸುವಂತಹ ನಾಟಕ ಮತ್ತು ಇತರ ಸಾಹಿತ್ಯ ಸೌರಭವನ್ನು ನೀಡುತ್ತಿರುವ ಆಲ್ದಾಳರು ನಿಜಕ್ಕೂ ಅಭಿನಂದನಾರ್ಹರೆಂದರೆ ಅತಿಶಯೋಕ್ತಿಯಾಗಲಾರದು.

**–ಡಾ.ಎಸ್.ಎಸ್.ಹಿರೇಮಠ**

ಜೀವನದಲ್ಲಿ ನಿಜವಾಗಿ ಸುಂದರವಾದದ್ದು, ರುಚಿಕರವಾದದ್ದು, ಸ್ಮರಣೀಯವಾದದ್ದು ಧಾರಾಳವಾಗಿ ಮೊಳಕೆಯಿಂದಲೇ ಬೆಳಕಿನಕಡೆ ಮುಖಮಾಡಿ ಸಸ್ಯ ಬೆಳೆಯುತ್ತದೆ. ಜೀವನವೆಲ್ಲವೂ ಆನಂದದ ಹಂಬಲದಲ್ಲಿ ಮೊಳೆಯುತ್ತದೆ. ಮರುಳು ಗಾಡಿನಲ್ಲಿಯೂ ಓಯಸಿಸ್ಸುಗಳಿರುವಂತೆ ಅತಿ

ಶುಷ್ಕ ಜೀವನದಲ್ಲಿಯೂ ರಸದ ಬುಗ್ಗೆಗಳಿರುತ್ತವೆ. ಆ ಧಾರೆಗಳನ್ನು ಗುರುತಿಸಿ ತೋರಿಸುವ ಅಪೇಕ್ಷೆ ಆಲ್ದಾಳ ಅವರ ಎಲ್ಲಾ ನಾಟಕಕೃತಿಗಳಲ್ಲಿ ಒಳಗೊಂಡಿದೆ.

**–ಶ್ರೀ ನಾಗಪ್ಪಯ್ಯ ಅಳ್ಳೋಳಿ ಮಠ**

ಜನ ಸಾಮಾನ್ಯರ ಗ್ರಾಮ್ಯಭಾಷೆಯನ್ನು ಬಳಸಿಕೊಂಡು ನಾಟಕಗಳನ್ನು ಬರೆದು ಯಶಶ್ವಿಯಾದದ್ದು, ಕಲಬುರ್ಗಿ ಜಿಲ್ಲೆಗೇನೆ ಹೆಮ್ಮೆಯ ಸಂಗತಿ. ಆಲ್ದಾಳ ಅವರಿಗಿರುವ ಕನ್ನಡ ಪ್ರೀತಿ ಸಾಮಾಜಿಕ ಪ್ರಜ್ಞೆ, ಬಡವರ ಬಗೆಗಿನ ಕಳಕಳಿ, ಕಷ್ಟಕಾರ್ಪಣ್ಯಗಳು ಎಲ್ಲವನ್ನು ತಮ್ಮ ನಾಟಕಗಳಲ್ಲಿ ಪ್ರತಿಬಿಂಬಿಸಿ ನಾಟಕಗಳೆಂದರೆ ಎಲ್‌ಬಿಕೆ ನಾಟಕಗಳು ಎನ್ನುವಷ್ಟರ ಮಟ್ಟಿಗೆ ಮನ್ನಣೆಗಳಿಸಿರುವುದು ಒಂದು ತಪಸ್ಸೆ ಆಗಿದೆ ಹೌದು ಎನ್ನಲೇಬೇಕು !

**–ಗವೀಶ ಹಿರೇಮಠ ಸಾಹಿತಿ**

ಕವಿಗಳು ಇಸ್ಲಾಂ ಧರ್ಮದವರೆಂದು ತಿಳಿದಾಗ! ವೀರಶೈವ ಧರ್ಮದ ಬಗ್ಗೆ ಅನೇಕ ಕೃತಿಗಳನ್ನು ನೋಡಿದಾಗ ಮತ್ತು ಅವರ ಸಾದಾ–ಸೀದಾ ಬದುಕು ಕಂಡಾಗ ಆಶ್ಚರ್ಯವಾಗುತ್ತದೆ. ನಾನು ಒಬ್ಬ ಕವಿ ಇದ್ದೇನೆ, ನಂದು ಒಂದು ಹೆಸರು ಇದೆ ಎನ್ನುವುದನ್ನು ಮರೆತು ಜೀವನವನ್ನು ನಡೆಸುತ್ತಿರುವುದನ್ನು ನೋಡಿದರೆ ಆಶ್ಚರ್ಯವೆ ಸರಿ, ಏಕೆಂದರೆ ಕೆಲವರು ಬರೆಯುವುದನ್ನು ಅವರು ಪಡುವ ಗರ್ವವನ್ನು ನೋಡಿದರೆ ಭೂಮಿಗೂ ಆಕಾಶಕ್ಕೂ ಅವರಿಗೂ ಅಂತರವಿದೆ ಅನ್ನಿಸಿ ಅಗಾಧವಾಗುತ್ತದೆ.

**–ಶ್ರೀ ಮ.ಚ.ಗುರುಮೂರ್ತಿ ಶಿವಾಚಾರ್ಯ**
**ಸುಕ್ಷೇತ್ರ ಪಾಳಾ ತಾ.ಜಿ.ಕಲಬುರುಗಿ**

## ಸಂತ ಆಲ್ದಾಳಜ್ಜ

ಸೂಫಿಸಂತ ಎನ್ನಲೆ, ನೀನು ಅಷ್ಟೇ ಅಲ್ಲ
ಶರಣನೆಂದು ಗೌರವಿಸಲೆ ನೀನು ಅಷ್ಟೇ ಅಲ್ಲ
ಮುಗ್ದಮಗುವಿನ ನಗೆ ಎನ್ನಲೆ
ನಿನ್ನ ನೆಲೆ ಅಷ್ಟಕ್ಕೆ ಮುಗೀಲಿಲ್ಲ
ಕ್ಷಮಾಮಯೀ ಧರತ್ರಿ ಎನ್ನಲೆ
ನಿನ್ನ ಪ್ರೀತಿ ದಶದಿಶೆಯಲ್ಲಿ ಹಾಸುಹೊಕ್ಕು ।
ನಿನ್ನೊಳಗೆ ನೀನಿದ್ದು ನನ್ನನ್ನೂ ಕಂಡ ಆರೂಢ ನೆನ್ನಲೆ
ಅಷ್ಟೇ ಸಾಲದು ಅವಧೂತ ।
ಇಂತಿ ಆಲ್ದಾಳಜ್ಜನ ಕಾಲಘಟ್ಟದಲ್ಲಿ
ನಾನಿದ್ದೇನಲ್ಲ ಎಂಬುದೇ
ನನ್ನ ತೀರದ ಭಾಗ್ಯ ।

**–ಶ್ರೀಮತಿ ಸವಿತಾ ಸಿರಗೋಜಿ ಕಲಬುರಗಿ**

ಪ್ರಶಸ್ತಿ, ಸನ್ಮಾನ, ಪುರಸ್ಕಾರಗಳು ಎಲ್.ಬಿ.ಕೆ.ಆಲ್ದಾಳ ಅವರಿಗೆ ವಾರ್ಷಿಕ ಬಡ್ತಿಯಂತೆ ಬರುತ್ತಿದ್ದವು, 'ಕಂಗ್ರಾಚ್ಯುಲೇಷನ್ಸ್' ಹೇಳಿ ಸೋತಿದ್ದೇನೆ 'ಕ್ಷಮಿಸಿ' ಎಂದು ಹೇಳಿದೆ.

**–ಜಿ.ಎಸ್.ಮಾಲಿಪಾಟೀಲ್ ಗಂವಾರ**

ಎಲ್.ಬಿ.ಕೆ ಅವರು ನಾಡು–ನುಡಿಯ ಬೆಳವಣಿಗೆ ಜೊತೆಗೆ ರಂಗಭೂಮಿಗಾಗಿ ನಿಷ್ಠೆಯಿಂದ ದುಡಿದವರು, ಕಲಬುರ್ಗಿಯ ಸಾಂಸ್ಕೃತಿಕ ಚೇತನ ಅವರು, ಕಲೆ ಸಾಹಿತ್ಯದ ದೀರ್ಘಾಲೋಚನೆ, ಪಕ್ವಾನುಭವದ ಫಲವಾಗಿ ಮೂಡಿದ ನಾಟಕಗಳು ಪ್ರೇಕ್ಷಕರೆದುರು ನಿರಂತರ ಉಳಿಯುತ್ತಿವೆ. ಅವರ ಸಾಧನೆ ಸಿದ್ಧಿಯಿಂದ ಅನೇಕ ಪ್ರಶಸ್ತಿಗಳು ಹುಡುಕಿಕೊಂಡು ಬಂದಿವೆ.

**–ನಾಗಯ್ಯಸ್ವಾಮಿ ಬೊಮ್ಮನಹಳ್ಳಿ**

ಆಲ್ದಾಳಕೃತ ಆಧುನಿಕ ವಚನಗಳ 'ವಚನವಾಹಿನಿ' ಉತ್ತಮ ವಚನಗಳ ಸಂಕಲನ. ಪ್ರವಾಹವನ್ನು ಅಳೆಯಲು ಹೇಗೆ ಸಾಧ್ಯವಿಲ್ಲವೋ ಹಾಗೆ ಇಲ್ಲಿಯ ವಚನಗಳ ವಿಷಯ ವ್ಯಾಪ್ತಿಯನ್ನು ಅಳೆಯಲು ಸಾಧ್ಯವಿಲ್ಲ. **–ಪ್ರೊ.ಬಿ.ಮಹಾದೇವಪ್ಪ**

ಆಲ್ದಾಳರ ಕೃತಿ 'ಬಡದಾಳದ ಭಗವಂತ' ಪುಸ್ತಕವನ್ನು ತೆರೆದು ಕಣ್ಣಾಡಿಸಿದಾಗ ಅದರೊಳಗಿನ ಸಾಲುಗಳು ಓದುಗನನ್ನು ಭಕ್ತಿಯ ಹೊನಲಿನಲ್ಲಿ ಸೆಳೆದುಕೊಳ್ಳುತ್ತವೆ. ಓದುಗನು ಮೈ ಮರೆತು ಕೊನೆ ಸಾಲಿನವರೆಗೂ ಹರಿದು ಹೋಗುತ್ತಾನೆ. ಮೈ ಮನಗಳು ಭಕ್ತಿಯ ಪರಿಮಳದಲ್ಲಿ ತೇಲಾಡುತ್ತವೆ. **–ರೇವಣಸಿದ್ಧಯ್ಯಸ್ವಾಮಿ ರುದ್ರಸ್ವಾಮಿ ಮಠ**

'ಮನೆನೋಡು ಬಡವರು ಮನನೋಡಾ ಶ್ರೀಮಂತರು' ಎಂಬ ಮಾತಿನಂತೆ ಬಡತನದ ಬವಣೆಯಲ್ಲಿಯೂ ಹೃದಯ ಶ್ರೀಮಂತಿಕೆಯ ಬಾಳು ಆಲ್ದಾಳರದು.

**–ಡಾ.ಸ್ವಾಮಿರಾವ ಕುಲಕರ್ಣಿ, ಸಾಹಿತಿಗಳು,**

ಶ್ರೀ ಆಲ್ದಾಳರವರ ಸಮಕಾಲೀನ ನಾಟಕಕಾರರು ಜನಪ್ರಿಯತೆಗೋಸ್ಕರ ಬರೆಯಬಾರದ ಸಂಭಾಷಣೆಯನ್ನು ಬರೆದರು. ಆಲ್ದಾಳರು ಮಾತ್ರ ಮನೆ ಮಂದಿಗೆಲ್ಲ ಕುಳಿತು ನೋಡಬಹುದಾದ ಉತ್ತಮ ನಾಟಕಗಳನ್ನು ರಚಿಸಿ, ಜನ, ಮನಗೆದ್ದರು.

**–ಎಸ್.ಎನ್.ದಂಡಿನಕುಮಾರ, ಚಿಂಚೋಳಿ**

ಆಲ್ದಾಳರಿಗೆ ಮುಳ್ಳಿನ ಹಾದಿಯಲ್ಲಿ ಬರಿಗಾಲಲ್ಲಿ ನಡೆದು ಗೊತ್ತು. ರಂಗಭೂಮಿಯಲ್ಲಿ ನಾಟಕಾರಾಧನೆ ಮಾಡಿ ಬರಿಗೈಯಲ್ಲಿ ಬರುವುದೂ ಗೊತ್ತು. ಧನ ಸಂಪಾದನೆ ಇವರ ಮೂಲ ಉದ್ದೇಶವಲ್ಲ, ಜನ ಸಂಪಾದನೇ ಮೂಲಮಂತ್ರ.

**–ಸಂಧ್ಯಾ ಹೊನಗುಂಟಿಕರ್ ಕಲಬುರ್ಗಿ**

ಅನನ್ಯ ಅನುಭವಗಳ ರಸ ಗಟ್ಟಿಯನ್ನು ತಮ್ಮ ಒಡಲಾಳದಲ್ಲಿ ತುಂಬಿಕೊಂಡು ಬಂದ ಬದುಕನ್ನು ಯಥಾರ್ಥವಾಗಿ ಸ್ವೀಕರಿಸಿ, ಸದಾ ಹಸನ್ಮುಖಿಯಾಗಿ ಬಾಳನ್ನೇ ಕಾಯಕ ಮಾಡಿಕೊಂಡ ಕಲಾದೇವಿಯ ವರಪುತ್ರ ಎಲ್.ಬಿ.ಕೆ ಆಲ್ದಾಳ.

**–ಏ.ಕೆ.ರಾಮೇಶ್ವರ ಮಕ್ಕಳ ಕವಿ, ಸಾಹಿತಿ**

ನಾನು ರಂಗಭೂಮಿಯಲ್ಲಿನ ಅನೇಕ ಪ್ರತಿಭಾಶಾಲಿಗಳ ಬಗ್ಗೆ ಓದಿದ್ದೇನೆ, ಕೇಳಿದ್ದೇನೆ, ಆದರೆ ಆಲ್ದಾಳರದು ಅಸಾಧಾರಣ, ಅದ್ಭುತ ಪ್ರತಿಭೆ, ಅವರ ಜ್ಞಾಪಕಶಕ್ತಿ ಅಗಾಧ ನೂರಾರು ನಾಟಕಗಳ ಸಾವಿರಾರು ಸಂಭಾಷಣೆಗಳು ಅವರ ಮಸ್ತಕದಲ್ಲಿ ಅಡಗಿವೆ. ಇಂತಹ ಪ್ರತಿಭೆಯ ಪ್ರಭೆಯನ್ನು ರಂಗಭೂಮಿಗೆ ಸಮರ್ಪಿಸಿದ್ದಕ್ಕಾಗಿ ನನಗೆ ಅತಿ ಆನಂದ ನನ್ನ ಅಂತರಂಗದಲ್ಲಿ ಆಗುತ್ತಿದೆ.

**–ನಾಗರಾಜ ಜಮದ್ರಖಾನಿ ಸುರಪುರ**

ರಂಗಭೂಮಿಗಾಗಿಯೇ ತಮ್ಮ ಇಡೀ ಜೀವನವನ್ನು ಮುಡುಪಾಗಿಟ್ಟ ಮತ್ತು ಆ ಕಾರಣಕ್ಕಾಗಿಯೇ ಡಾ. ಗುಬ್ಬಿವೀರಣ್ಣ ಪ್ರಶಸ್ತಿ ಪಡೆದುಕೊಂಡ ಹೈದ್ರಾಬಾದ ಕರ್ನಾಟಕದ ಏಕೈಕ ರಂಗ ಚೇತನ ಶ್ರೀ ಎಲ್.ಬಿ.ಕೆ ಆಲ್ದಾಳ ನಮ್ಮ ನಡುವಿನ ಸಾಹಿತ್ಯ ಕ್ಷೇತ್ರದ ಗುಲಗಂಜಿ.

**–ಮಹಿಪಾಲರೆಡ್ಡಿ ಮುನ್ನೂರು ಅಧ್ಯಕ್ಷರು ಜಿಲ್ಲಾ ಕಸಾಪ ಕಲಬುರಗಿ**

ಆಲ್ದಾಳರು ತಮ್ಮ ರಂಗ ಬದುಕಿನುದ್ದಕ್ಕೂ ಬಹುತೇಕ ಗ್ರಾಮಾಂತರ ಹಿನ್ನಲೆಯ ಸಾಧಕರು ಹಾಗೂ ಕಲಾವಿದರನ್ನು ಗುರುತಿಸುವ ನೋಂಪಿಯಂತೆ ಮಾಡಿಕೊಂಡು ಬಂದಿದ್ದಾರೆ.

**–ಡಾ.ಶ್ರೀಶೈಲ ನಾಗರಾಳ, ಅಧ್ಯಾಪಕರು, ಸಾಹಿತಿ**

ಸರ್ವ ಧಾರ್ಮಿಕ ಕೇಂದ್ರಗಳ ಜೊತೆಗೆ ಉತ್ತಮ ಬಾಂಧವ್ಯವನ್ನಿಟ್ಟುಕೊಂಡು, ಸದಾ ಹೊಸತನದ ಸಾಹಿತ್ಯ ಸೃಷ್ಠಿಯ ಚಿಂತನೆಯಲ್ಲಿ ತೊಡಗುವ ಇವರದು ಸಂಘರ್ಷದ ಬದುಕು.

**–ಸಿದ್ಧಲಿಂಗಯ್ಯಸ್ವಾಮಿ ಮಲಕೂಡ. ಕವಿಗಳು, ಪತ್ರಕರ್ತರು**

ಕನ್ನಡ ಜನ ಮಾನಸದಲ್ಲಿ ಉಳಿಯುವ ಸಾಹಿತ್ಯ ಸಂಪದ ಹೊಂದಿದ ಸರಸ್ವತಿ ಪುತ್ರ ಅವರನ್ನು ಪಡೆದ ಕನ್ನಡ ನಾಡಿನ ಜನ ಪುಣ್ಯವಂತರು.

**–ಡಾ.ಸರಸ್ವತಿ ಚಿಮ್ಮಲಗಿ ಹಿರಿಯ ಸಾಹಿತಿ**

ಆಲ್ದಾಳರು ನಟರು, ನಾಟಕಕಾರರು ಆಗಿದ್ದಂತೆ, ಕಲಾಕಾರರಿಗೆ ಕಲ್ಪವೃಕ್ಷವಾಗಿದ್ದಾರೆ. ಶಾರದಾಂಬೆಯ ವರಪುತ್ರರಾದ ಅವರಿಂದ ಅನೇಕಾನೇಕ ಕೃತಿ ರತ್ನಗಳು ಹೊರಬರಲಿ.

**–ಪ್ರ.ಸ್ವ.ಶ್ರೀ ಶ್ರೀ ಶಾಂತಲಿಂಗ ಮಹಾಸ್ವಾಮಿಗಳು ಜೇವರ್ಗಿ**

ಆಲ್ದಾಳರು ರಂಗಭೂಮಿಗಾಗಿ ಕಳೆದುಕೊಂಡಿರುವುದು ಬಹಳ. ನಿಃಸ್ವಾರ್ಥ ಭಾವನೆಯಿಂದ ರಂಗಭೂಮಿಯ ಸೇವೆಗೈದು ಪಡೆದುಕೊಂಡಿರುವುದು ಲಕ್ಷಾನುಲಕ್ಷ ಪ್ರೇಕ್ಷಕರ ಪ್ರೀತಿ, ಮೆಚ್ಚುಗೆ, ಪತ್ರಿಕಾ ಪ್ರಶಂಸೆ ಅಲ್ಲದೆ ಮಾನಸನ್ಮಾನಗಳು.

**–ಶ್ರೀ ಈಶ್ವರಯ್ಯ ಮಠ ಪ್ರಾಧ್ಯಾಪಕರು, ಸಾಹಿತಿಗಳು ಕಲಬುರ್ಗಿ**

'ಕಡಕೋಳ ಮಡಿವಾಳಪ್ಪ' ನಾಟಕವು "ನಾಟ್ಯ ಕವಿರತ್ನ" ಕೊಡಮಾಡಿಸಿದ ಕೃತಿಯಾದರೆ "ನಮಸ್ಕಾರ" ನಾಟಕ ಅಮೇರಿಕೆಯ ವಾಷಿಂಗಟನ್ ಲೈಬ್ರರಿಯಲ್ಲಿ ಶ್ರೀ ಆಲ್ದಾಳರ ಹೆಸರನ್ನು ನೊಂದಾಯಿಸಿದ ಕೃತಿಯಾಗಿದೆ.

**–ಶ್ರೀ.ಎಸ್.ಕೆ.ಹೆರೂರ ಎಂ.ಎ.ಕನ್ನಡ ಉಪನ್ಯಾಸಕರು**

## ಸಂಶೋಧಕಿ ಜೊತೆ ಮುಖಾ–ಮುಖಿ

**ಪ್ರಶ್ನೆ : ಜನತೆಯನ್ನು ಮೆಚ್ಚಿಸುವುದೇ ರಂಗಭೂಮಿಯ ಗುರಿಯೆ ?**

**ಎಲ್.ಬಿ.ಕೆ.** ನಾಟಕದಲ್ಲಿಯ ಅಭಿನಯ ಕೇವಲ ಜನರನ್ನು ಮೆಚ್ಚಿಸಲು ಅಥವಾ ತನಗೋಸ್ಕರ ಆಗಬಾರದು. ಜಾತ್ಯತೀತ ಪ್ರಭಾವಿ ಮಾಧ್ಯಮವಾದ ರಂಗಭೂಮಿಯ ಮೂಲಕ ಒಳ್ಳೆಯದನ್ನು ನೀಡಿದರೆ ಪರಿಣಾಮವೂ ಒಳ್ಳೆಯದೇ ಆಗುತ್ತದೆ. ಸಮಾಜದಲ್ಲಿ ಹುದುಗಿರುವ ಓರೇ–ಕೋರೆಗಳನ್ನು ಸರಿಪಡಿಸಲು ರಂಗಭೂಮಿಯು ಮಹತ್ವದ ಪಾತ್ರವನ್ನು ವಹಿಸುತ್ತದೆ ಎಂಬುದನ್ನು ಮರೆಯಲಾಗದು. ಅದಕ್ಕಾಗಿ ರಂಗಭೂಮಿ ನಿರಂತರ ಹೋರಾಟ–ಶ್ರಮವಹಿಸುತ್ತಿದೆ.

**ಪ್ರಶ್ನೆ : ಇಷ್ಟೊಂದು ಅಗಾಧವಾದ ಸಾಹಿತ್ಯ ರಚಿಸಲು ಸಾಧ್ಯವಾದುದು ಹೇಗೆ ?**

**ಎಲ್.ಬಿ.ಕೆ :** ಸರ್ವಜ್ಞನೆಂಬವನು ಗರ್ವದಿಂದಾದವನೆ ? ಸರ್ವರೋಳೊಂದೊಂದು ನುಡಿಗಲಿತು ವಿದ್ಯೆಯ ಪರ್ವತವೇ ಆದನಂತೆ. ನಾನು ಶಾಲೆ ಕಲಿತದ್ದು ಕಡಿಮೆ ಇದ್ದಿರಬೇಕು, ಶಾಲೆಯ ಹೊರಗಿನ ವಿಶಾಲವಾದ ಬಯಲು ಪ್ರಪಂಚ ಎಂಬ ಶಾಲೆಯಿಂದ ಪರಿಸರದಿಂದ, ಸತ್ಸಂಗದಿಂದ, ಮಾನ್ಯರಿಂದ, ಮಠಗಳಿಂದ ದೊರಕಿದ ಶಿಕ್ಷಣದಿಂದ ಸಾಹಿತ್ಯ ಸೃಷ್ಟಿಸಲು ಹೆಜ್ಜೆ ಇರಿಸಿದೆ. ಒಂದೊಂದು ನಾಟಕದಿಂದಲೂ, ನಟರಿಂದಲೂ, ಒಂದೊಂದು ನಡೆಗಲೆತೆ, ನಾಟಕಲೋಕದ ಒಂದು ಶಕ್ತಿಯಾಗಿ, ಒಂದು ಪ್ರಭಾವವಾಗಿ, ಒಂದು ಮೇಲ್ಪಂಕ್ತಿಯಾಗಿ ಬೆಳೆಯುತ್ತಲಿದ್ದೇನೆ. ಸಾಮಾಜಿಕ, ಪೌರಾಣಿಕ, ಜಾನಪದ ಲೋಕವನ್ನು ಪ್ರವೇಶಿಸಿದೆ. ಇದಕ್ಕೆಲ್ಲ ಸತ್ಸಂಗವೇ ಕಾರಣ !

**ಪ್ರಶ್ನೆ : ತಾವು ನಾಟಕಸಾಹಿತ್ಯ ರಚನೆಗೆ ಹೆಚ್ಚು ಮಹತ್ವ ಕೊಡುತ್ತೀರೊ ? ಅಥವಾ ನಾಟಕದಲ್ಲಿ ಪಾತ್ರ ಧಾರಿಯಾಗುವುದಕ್ಕೊ ?**

**ಎಲ್.ಬಿ.ಕೆ :** ಇದೊಂದು ಒಳ್ಳೆಯ ಪ್ರಶ್ನೆ ನನ್ನ ಮುಂದಿರಿಸಿದ್ದಿ ಮಗಳೆ, (ಭಾವುಕರಾಗಿ) ನಾನು ಶಾಲೆ ಕಲಿತರೂ ಅದು ಕಲಿತಂತೆ ಎನ್ನಿಸಲೇ ಇಲ್ಲ, ಶಾಲಾದಿನಾಚರಣೆ ಸಂದರ್ಭದಲ್ಲಿ ಸಗರನಾಡಿನ ಪ್ರಸಿದ್ಧ ಸಾಹಿತಿ, ನಾಟಕಕಾರರಾದ ಸಗರಕೃಷ್ಣಚಾರ್ಯರ 'ಜೀನನ ಸಂಸಾರ', 'ಬಾಡಿಗೆ ಮನೆ' ಏಕಾಂತ ನಾಟಕಗಳಲ್ಲಿ ನಾನು ತೋರಿಸಿದ ಪಾತ್ರಾಭಿನಯ ಹಾಗೂ ಇದಕ್ಕೂ ಮೊದಲು ಶಹಾಪೂರ ತಾಲೂಕಿನ ಆಲ್ದಾಳ ಗ್ರಾಮದ ಹಿರಿಯರಾದ ಸಂಜೀವಣ್ಣ ದೊರಿ, ಹಾಲಗಡ್ಡಿಯವರು ಒತ್ತಾಯಕ್ಕಾಗಿ ಕನಕಾಂಗಿ' ಎಂಬ ಬಯಲಾಟದಲ್ಲಿ ಕೃಷ್ಣನ ಪಾತ್ರದ ಮೂಲಕ ನಾನು ತೋರಿಸಿದ ಅಭಿನಯದಿಂದಾಗಿ ನನ್ನಲ್ಲಿ ರಂಗಾಶಕ್ತಿ ಚಿಗುರೊಡೆಯಿತು. ಆಗ ನನಗೆ ಹನ್ನೆರಡು ವರ್ಷ, ನನ್ನ ಅರಳುವ ಪ್ರತಿಭೆಯನ್ನು ಕಂಡು ಊರಿನ ಜನ ಮೆಚ್ಚುಗೆ ವ್ಯಕ್ತಪಡಿಸಿತು. ನಾಟಕದ ಅಭ್ಯಾಸ ಹಂತದಲ್ಲಿಯೇ ಅಂದಿನ ಕಲಾಲೋಕದ ಅಧ್ವರ್ಯುಗಳನೇಕರುಗಳ ಪರಿಚಯವಾಯಿತು. ಅದು ಬರೀ ಪರಿಚಯವಲ್ಲ, ಮೆಚ್ಚುಗೆ, ಮುಂದೆ ಹೆಜ್ಜೆ ಇರಿಸಲು ಹಾಸಿದ ನಡೆಮುಡಿ.

ನಾನು ಓದಿದ್ದು ಕಡಿಮೆ ಇದ್ದರೂ 'ಮನುಷ್ಯ ಜ್ಞಾನ ಬಹಳವಾಗಿ ಬೆಳೆಸಿಕೊಳ್ಳಬೇಕೆಂಬುದು ನನ್ನ ಅಭಿಮತ' ಇದಕ್ಕೆ ಉದಾಹರಣೆಯಾಗಿ 'ಮಂಕುತಿಮ್ಮ' ಅವರು ಬರೆದ ಕೆಳಗಿನ ಸಾಲುಗಳನ್ನು ಓದಿ–

**ಪುಸ್ತಕದಿ ದೊರೆತರಿವು ಮಸ್ತಕದಿ ತಳೆದ ಮಣಿ**
**ಚಿತ್ತದೊಳು ಬೆಳೆದರಿವು ತರುತಳೆದ ಪುಷ್ಪ**
**ವಸ್ತುಸಾಕ್ಷಾತ್ಕಾರವಂತರೀಕ್ಷಣೆಯಿಂದ ಶಾಸ್ತ್ರ**
**ತನದಿಂದಲ್ಲ – ಮಂಕುತಿಮ್ಮ**

ಜ್ಞಾನ ಎಂಬುದು ಪುಸ್ತಕ ಮೂಲಕದಿಂದಲೇ ಬರಬೇಕೆಂದೇನೂ ಇಲ್ಲ. ಸಾಂದಾರ್ಭಿಕ ಮೌನವನ್ನು ತನ್ನೊಳಗೆ ಆವಾಯಿಸಿಕೊಂಡು ಅದಕ್ಕೆ ಪೂರಕವಾಗಿ ಮನಸ್ಸನ್ನು ಬಾನಂಗಳದಂತೆ ಮುಕ್ತವಾಗಿಟ್ಟುಕೊಂಡರೆ ಬಾಹ್ಯ ಮೂಲಗಳಿಂದಲೂ ಜ್ಞಾನ ನಮ್ಮೊಳಗೆ ಕ್ರೋಢಿಕರಣಗೊಳ್ಳುತ್ತದೆ. ಇದರಿಂದ ಸಹಜವಾಗಿಯೇ ನಮ್ಮೊಳಗೆ ಅರಿವಿನ ಸೌಧದ ಅಂತಸ್ತು, ತನ್ನ ಅಂತಸ್ತು ವೃದ್ಧಿಗೊಳಿಸುತ್ತ ಹೋಗುತ್ತದೆ. ಇಷ್ಟಕ್ಕೂ ಜ್ಞಾನ ಎಂಬುದು ಯಾವುದೇ ಮೂಲದಿಂದ ಬಂದರೂ ಅದನ್ನು ಸ್ವೀಕರಿಸುವ ಮನಸ್ಸು ಹದಗೊಳಿಸಿದ ಮಣ್ಣಿನಂತೆ ಇದ್ದರೆ ಮಾತ್ರ ಬಿತ್ತಿದಕ್ಕಿಂತಲೂ ಹೆಚ್ಚಿನದನ್ನು ಪಡೆಯಲು ಸಾಧ್ಯವಾಗುತ್ತದೆ. ಅದೊಂದು ದಿನ ಯಾವ ಪ್ರೇರಣೆ ನನಗೆ ಹೊಳೆಯಿತೋ ಅಂದಿನಿಂದ ಇಂದಿನವರೆಗೆ ಸರಸ್ವತಿ ದೇವಿಯ ಸೇವೆಯಲ್ಲಿ ತೊಡಗಿದ್ದೇನೆ. ನನ್ನ ಲೆಕ್ಕಣಿಕೆಗೆ ವಿರಾಮ ಎಂಬುದಿಲ್ಲ. ಅದು ರಂಗಭೂಮಿಯ ಸೇವೆಗೂ ಸಿದ್ಧ, ಸಾಮಾಜಿಕ ಸೇವೆಗೂಸಿದ್ಧ. ನಿಮ್ಮ ಪ್ರಶ್ನೆಯ ಉತ್ತರ ನಾನು ಮೇಲೆ ಹೇಳಿದ್ದರಲ್ಲಿಯೇ ಅಡಗಿದೆ. (ಅನುಭವದ ಮಾತೊಂದು ನೆನಪಿಗೆ ಬರುತ್ತಿದೆ, 'ಶರೀರಕ್ಕೆ ಮುಪ್ಪು ಆವರಿಸುವುದು ಸಹಜವಾಗಿದ್ದರೂ ಎಲ್.ಬಿ.ಕೆ ಅವರ ಸಾಹಿತ್ಯಶಕ್ತಿಕುಂದಿಲ್ಲ, ಕುಗ್ಗಿಲ್ಲ, ಬರವಣಿಗೆ ನಿಂತಿಲ್ಲ, ನಾಟಕದ ಹುಚ್ಚುಹೋಗಿಲ್ಲ, ಅವರ ಬದುಕಿನಲ್ಲಿ ಜ್ಞಾನೋಪಾಸನೆ ಮತ್ತು ಜ್ಞಾನ ಪ್ರಸಾರ ಬದುಕಿನ ಕೊನೆಯ ಕ್ಷಣದವರೆಗೂ ನಿಲ್ಲುವುದಿಲ್ಲ ಎನ್ನುವ ಆಲ್ದಾಳ ಅವರ ಹತ್ತಿರ ಇರುವವರ, ಬಲ್ಲವರ ಮಾತು ನೂರಕ್ಕೆ ನೂರರಷ್ಟು ಸತ್ಯ.)

**ಪ್ರಶ್ನೆ : ಬದುಕಿನ ಬವಣೆಯ ಗಾಣಕ್ಕೆ ಸಿಲುಕಿ ರಸಹೀರಿದ ಕಬ್ಬಿನಸಿಪ್ಪೆಯಾಗಿದ್ದರೂ, ಪ್ರೇಕ್ಷಕರು ಮತ್ತು ನಾಟಕ ಕೃತಿಗಳನ್ನು ಓದುವವರ ತುಂಬಿದ ಮನದಲ್ಲಿ, 'ಕಲಾಸಾಗರದ ಮುತ್ತು ರತ್ನಗಳ ಅಧಿಪತಿ ನೀವು, ಕಲಾ ಸರಸ್ವತಿಯ ಸಿರಿಪುತ್ರ ನೀವು, ಜನಮನರಂಜಿಸಿದ ನಾಟಕ ರಂಗದ ಅಧಿಪತಿ ನೀವು' ಎಂದು ಪ್ರತಿಕ್ರಿಯಿಸಿದವರಿಗೆ, ನಿಮ್ಮ ಅಂತರಾತ್ಮಕೆ ಏನನ್ನಿಸುತ್ತದೆ ?**

**ಎಲ್.ಬಿ.ಕೆ :** ನನ್ನ ಜೀವನವೇ ಒಂದು ಹೋರಾಟ, ಅನೇಕ ಕಷ್ಟ ಸಂಕಷ್ಟಗಳನ್ನು ಕಂಡಿದ್ದೇನೆ, ಅನುಭವಿಸಿದ್ದೇನೆ. ಹುಟ್ಟುವಾಗ ಬಾಯಲ್ಲಿ ಚಿನ್ನದ ಚಮಚವನ್ನೇನೂ ಇಟ್ಟುಕೊಂಡು ಹುಟ್ಟಲಿಲ್ಲ, ಹೌದು ಬದುಕಿನ ಬವಣೆಯ ಗಾಣಕ್ಕೆ ಸಿಲುಕಿ ರಸ ಹೀರಿದ ಕಬ್ಬಿನ ಸಿಪ್ಪೆಯಾಗಿದ್ದೇನೆ ಆದರೂ ಬಂದ ಕಷ್ಟಕ್ಕೆ ಅಂಜದೆ, ಅಳುಕದೆ ಫಿನಿಕ್ಸ್ ಪಕ್ಷಿಯಂತೆ ಎದ್ದು ಬಂದಿದ್ದೇನೆ. ನಿಮ್ಮ ಅಭಿಮಾನದ ಮಾತುಗಳು, ಈ ಅಜ್ಜನ ಬಗ್ಗೆ ಇಟ್ಟಿರುವ ವಿಶ್ವಾಸಗಳಿಗೆ ನಾನು ಸಂತೋಷಿಸುತ್ತೇನೆ. ಆದರೆ ನಾನು ಯಾವ ಮುತ್ತುರತ್ನ, ಸಿರಿಪುತ್ರ, ಜನಮನರಂಜಿಸಿದ ನಾಟಕರಂಗದ ಅಧಿಪತಿಯೂ ಅಲ್ಲ,

ಕಲಬುರ್ಗಿ ಜಿಲ್ಲೆ, ಕವಿ, ಸಾಹಿತಿ, ನಾಟಕಕಾರರ, ಬರಹಗಾರರ, ಪಂಡಿತರ ಸಮೃದ್ಧ ನೆಲೆ. ಈ ಮಣ್ಣಿನಲ್ಲಿ ಹುಟ್ಟಿದ ಹಲವಾರು ಮಹನೀಯರು ನಾಡು–ನುಡಿಗೆ ಅಭೂತ ಪೂರ್ವವಾದ ಸೇವೆ ಸಲ್ಲಿಸಿದ್ದಾರೆ. ದೀವಿಗೆಯಂತೆ ಬೆಳಗಿ ಸಾಹಿತ್ಯದ ಪ್ರಕಾಶವನ್ನು ಹರಸಿದ್ದಾರೆ. ಹೀಗೆ ಕನ್ನಡ ಸಾಹಿತ್ಯವನ್ನು ಬೆಳಗಿದ ನಂದಾದೀಪಗಳು ಅನೇಕರಿರುವಾಗ ನಾನೊಬ್ಬನೇ ನಾಟ್ಯ ಶಾರದಾ ದೇವಿಯ ಕೊರಳನ್ನು ಅಲಂಕರಿಸಿದ ಒಂದು ಅನರ್ಘರತ್ನವಾಗಲಿ, ನಾಟಕರತ್ನವಾಗಲಿ ಎಂದುಕೊಂಡರೆ ಆಗಲು ಸಾಧ್ಯವೆ ? ಯಾವ ಹೊಗಳಿಕೆ ನನಗೆ ಸುತಾರಾಂ ಬೇಡ.

(ಎಲ್.ಬಿ.ಕೆ ಅವರು ಎಂದೂ ಅಹಮ್ಮಿಕೆಯಿಂದ ಬೀಗಿದವರಲ್ಲ. ಮಾಡಿದೇನೆಂಬುದನ್ನು ಮನದಲ್ಲಿ ಮೂಡಿಸಿಕೊಂಡವರಲ್ಲ –

**'ಮಾಡಿದೆನೆಂಬುದು ಮನದಲ್ಲಿ ಹೊಳೆದೆಡೆ**
**ಏಡಿಸಿ ಕಾಡಿತ್ತು ಶಿವನಡಂಗುರ**
**ಮಾಡಿದೆನೆನ್ನದಿರಾ ಜಂಗಮಕ್ಕೆ**
**ಮಾಡಿದೆನೆಂಬುದು ಮನದಲಿಲ್ಲದಿದ್ದಡೆ**
**ಬೇಡಿದ್ದ ನೀವ ಕೂಡಲಸಂಗಮದೇವಾ'**

ಎಂದು ವಿಶ್ವಗುರು ಬಸವಣ್ಣನವರು ಹಾಡಿದಂತೆ ಎಲ್.ಬಿ.ಕೆ. ಅವರು, ನಾನು ಮಾಡಿದ್ದು, ನನ್ನಿಂದ ಆದದ್ದು ಅಂದವರಲ್ಲ **"ನಾ"** ಎಂಬ ಅಹಂಕಾರವು ವಿನಾಶಕ್ಕೆ ಮೂಲ ಎಂಬುದನ್ನರಿತ ಎಲ್‌ಬಿಕೆ ಅವರು ತಾವೇ ಮಾಡಿದ್ದರೂ, ತಮ್ಮಿಂದಲೇ ಆಗಿದ್ದರೂ 'ನಾನು ಕೇವಲ ನೆಪಮಾತ್ರ' ಎಂದು ವಿನಯ ಗುಣದಲಿ ಮೆರೆದವರು. 'ಮಾಡುವಂತಿರಬೇಕು, ಮಾಡದಂತಿರಬೇಕು, ಮಾಡುವ ಮಾಟದೊಳಗೆ ತಾನಿಲ್ಲದಂತಿರಬೇಕು'. ಎಂಬ ಮನೋಭಾವದವರು ಎಲ್‌ಬಿಕೆ ಅವರು.

**ಪ್ರಶ್ನೆ : ಮುಖ್ಯ ಭೂಮಿಕೆ ಬದಿಗೆ ಸರಿದಾಗ ಹಾಸ್ಯಗಾರನೇ ರಂಗದದೊರೆ ! ಎಂಬ ಮಾತು ಎಷ್ಟರ ಮಟ್ಟಿಗೆ ಸರಿ ?**

**ಎಲ್.ಬಿ.ಕೆ :** ಹೌದು, ಸರಿಯಾದ ಯೋಚನೆ, ಹಾಸ್ಯ ಪ್ರತಿಭೆಗಳ ಬಾಹುಳ್ಯ, ಪ್ರದರ್ಶನದ ದೀರ್ಘತೆಯ ಶುಷ್ಕತೆಗೆ ಸುಲಭಪರಿಹಾರ. ಅನ್ಯಮಾಧ್ಯಮಗಳ ಆದರ್ಶ, ಇಂದಿನ ಸಾಮಾಜಿಕ ಬದುಕಿನ ತವರ ತಲ್ಲಣಗಳ ಒತ್ತಡ ಇವೆಲ್ಲವೂ ಒಂದೊಂದಾಗಿ ಮತ್ತು ಒಟ್ಟೊಟ್ಟಾಗಿ ಹಾಸ್ಯಪಾತ್ರಧಾರಿ ಮತ್ತು ಹಾಸ್ಯ ಪಾತ್ರಗಳು ವಿಶೇಷವಾಗಿ ವಿಜೃಂಭಿಸುವುದಕ್ಕೆ ಕಾರಣ. ಪ್ರೇಕ್ಷಕ ಮಹಾಶಯನಿಗೆ ದುಃಖ, ಕಷ್ಟ ನಿತ್ಯದ ವ್ಯವಹಾರದಲ್ಲಿ ಇದ್ದುದೆ. ದುಡ್ಡುಕೊಟ್ಟು ಮತ್ತೆ ಅಳುವುದನ್ನೇ ನೋಡಬೇಕೆ? ಸ್ವಲ್ಪ ನಗೋಣ ಎನ್ನುವ ಮನೋಭಾವ ಹಾಸ್ಯರಸದಿಂದ ಬೇಗ ಜನರನ್ನು ಹಿಡಿಯಬಹುದು ಎನ್ನುವ ವ್ಯಾವಹಾರಿಕ ಜಾಣ್ಮೆ ಮೂಖ್ಯ ಭೂಮಿಕೆಗಳು ರಂಗದ ಮೇಲಿನಿಂದ ಬದಿಗೆ ಸರಿದಾಗ ಹಾಸ್ಯಗಾರನೆ ರಂಗವನ್ನು ಆಳಬೇಕಾದ ಅನಿವಾರ್ಯತೆ. ವಿದೂಷಕನೆಂದರೆ ದೂಕ್ಷಕನಲ್ಲಿ, ಆತ ವಿನೋದ ಪ್ರಜ್ಞೆಯವಿದುಷಕನೇ ಆಗಿರುತ್ತಾನೆ. ಕಲೆಯೊಂದು ಮನೋವಿಕಾಸದೊಂದಿಗೆ ಮನೋರಂಜನೆಯ ಉದ್ದೇಶವನ್ನು ಹೊಂದಿರುವುದರಿಂದ ಹಾಸ್ಯಗಾರರ ವ್ಯವಹಾರವು ಹಾಸ್ಯಸ್ಪದವಾಗುವ ಪ್ರಸಮಗ ಬರಬಾರದು. ನಿರ್ದಿಷ್ಟವಾಗಿ ಹೇಳುವುದು ಕಷ್ಟ,

ಸಾಮಾಜಿಕ ಪರಿಸ್ಥಿತಿಯೆ ಕಾರಣವಾಗಿರಬಹುದು. ರಂಗಭೂಮಿಯಲ್ಲಿಯೂ, ಇತರೆಡೆಗಳಲ್ಲಿಯೂ ಹಾಸ್ಯಕ್ಕೆ ಬೇಡಿಕೆಯಿದೆ. ಪ್ರತಿಯೊಂದು ವಾಹಿನಿಯಲ್ಲೂ ಹಾಸ್ಯ ಧಾರಾವಾಹಿಗಳಿವೆ. ಹಾಸ್ಯ ಲಹರಿಗಳಿವೆ, ಕೇವಲ ಹಾಸ್ಯವನ್ನೇ ಪ್ರಸಾರಮಾಡುವ ವಾಹಿನಿಗಳು ಇವೆ. ಬೆಂಗಳೂರು ನಗರದಲ್ಲಿ ನಗುವುದಕ್ಕೆಂದೇ ಕ್ಲಬ್ಬುಗಳಿವೆ ಎಂದು ಕೇಳಿದ್ದೇನೆ. ಇದರ ಅರ್ಥ ಜನರಿಗೆ ನಗು ಬೇಕಾಗಿದೆ. ಅಂದರೆ ಭಾರಹೆಚ್ಚಾಗಿದೆ. ಭಾರವನ್ನಿಳಿಸಿಕೊಳ್ಳಲು 'ನಕ್ಕುಹಗುರಾಗಿರಿ' ಎಂಬ ಸೂತ್ರವನ್ನು ಪಾಲಿಸುತ್ತಿದ್ದಾರೆ. ಸಹಜ ಬದುಕಿನಲ್ಲಿ ಸಿಗದ ನಗು ರಂಗದ ಮೂಲಕ ದೊರೆಯುವುದೆಂದಾದರೆ ಅದನ್ನು ಬಯಸುವುದು ಮಾನವಸಹಜ ಗುಣ. ನಗೆಗಾರರು ವಿಜೃಂಭಿಸುವುದು ಸಹಜ. ಊಟಕ್ಕೆ ಉಪ್ಪಿನಕಾಯಿ ಬೇಕು, ಅನ್ನದ ಬದಲಿಗೆ ಉಪ್ಪಿನಕಾಯಿ ಆಗಬಾರದು.

**ಪ್ರಶ್ನೆ : ಹೊಸ ತಲೆಮಾರಿನ ಬರಹಗಾರರ (ನಾಟಕಕಾರ) ಬಗ್ಗೆ ನಿಮ್ಮ ಅಭಿಪ್ರಾಯ ಹಾಗೂ ಅವರಿಗೆ ನೀವು ಕೊಡುವ ಸಲಹೆ ಏನು ?**

**ಎಲ್.ಬಿ.ಕೆ :** ಬರಹಗಾರ (ನಾಟಕಕಾರ) ಜನ ಚೆನ್ನಾಗಿ ಬದುಕ ಬೇಕೆಂದು ಬರೆಯಬೇಕು ಹಳಬರಾಗಲಿ, ಹೊಸಬರಾಗಲಿ ಅಕ್ಷರ ವಿದ್ಯೆಯಿಂದ ಆತ್ಮ ವಿದ್ಯೆಗೆ ದಾರಿ ತೋರಿಸುವ ಸಾಹಿತ್ಯ ರಚಿಸಬೇಕು. ಕೇವಲ ಮನೋರಂಜನೆಗಾಗಿ ಸಾಹಿತ್ಯಸಾಧು ಎನ್ನಿಸದು. ಇಂದು ಹೊಸ ತಲೆಮಾರಿನ ಬರಹಗಾರರು ಸಾಹಿತ್ಯದ ವಿಭಿನ್ನ ಪ್ರಕಾರಗಳಲ್ಲಿ ಗುರುತಿಸಿ ಕೊಂಡಿದ್ದಾರೆ. ಹೆಚ್ಚಿನ ಅಧ್ಯಯನವನ್ನು ರೂಢಿಸಿಕೊಂಡರೆ ಶ್ರೇಷ್ಠವಾದುದನ್ನು ನೀಡಬಲ್ಲರು ಎಂಬ ಭರವಸೆ ತಳೆಯಬಹುದು. ಹಿಂದಿನ ಪರಿಸ್ಥಿತಿಯಿಂದ ಮುಂದಿನ ಸ್ಥಿತಿಗೆ ಹೋಗಲು ಅರಿವನ್ನು ಸಾಧನೆ ಮಾಡಿಕೊಳ್ಳಬೇಕು. ಸಾಹಿತ್ಯಚೊಕ್ಕ, ಚಿನ್ನದಂತಿರಬೇಕು.

**ಪ್ರಶ್ನೆ : ಇತ್ತೀಚಿನ ದಿನಗಳಲ್ಲಿ ಮಹಿಳೆಯರ ಮೇಲೆ ಅತ್ಯಾಚಾರ ನಡೆಯುತ್ತಿರುವುದು ಒಂದು ಮಾಮೂಲು ಎನ್ನುವಂತಹದ್ದಾಗಿದೆ. ಇದನ್ನು ಕೊನೆಗಾಣಿಸಲು ರಂಗಭೂಮಿಯಿಂದ ಸಾಧ್ಯವಿಲ್ಲವೆ? ಇಂತಹ ನೀಚಕೃತ್ಯಕ್ಕೆ ಕಡಿವಾಣ ಹಾಕಲು ನಾಟಕಗಳ ಪಾತ್ರವೇನು ?**

**ಎಲ್.ಬಿ.ಕೆ :** ಮಹಿಳೆಯರ ಮೇಲೆ ನಡೆಯುತ್ತಿರುವ ಆತಂಕಕಾರಿ ಅತ್ಯಾಚಾರ ಪ್ರಸಂಗಗಳ ಸುದ್ದಿಕೇಳಿ, ಓದಿ ಮನಸ್ಸಿಗೆ ಒಂದು ರೀತಿಯ ಅಸಹ್ಯ ಅನ್ನಿಸುತ್ತದೆ. ದೇಶದ ರಾಜಧಾನಿ ದೆಹಲಿಯಲ್ಲಿ ನಡೆದ ನಿರ್ಭಯಾಳ ಮೇಲಿನ ಕ್ರೂರ ಅತ್ಯಾಚಾರ ಪ್ರಕರಣ ಇಡೀ ದೇಶವನ್ನೇ ತಲ್ಲಣಗೊಳಿಸಿತು. ಕಾನೂನುಗಳು ಮಹಿಳಾಪರ ಹೆಚ್ಚಳಗೊಂಡವು ಆದರೂ ಮಹಿಳೆಯರ ಅತ್ಯಾಚಾರ ಪ್ರಕರಣಗಳಿಗೆ ಕೊನೆಇಲ್ಲದಂತಾಗಿದೆ. ಅತ್ಯಾಚಾರ ಎಲ್ಲೆ ಆಗಲಿ, ಆಗಿರಲಿ ಅದು ಅನ್ಯಾಯ, ಇದರ ವಿರುದ್ಧ ನ್ಯಾಯವಾದ ರೀತಿಯಲ್ಲಿ ತಿರುಗಿ ಬೀಳಬೇಕು. ಯಾರದೇ ವಿರುದ್ಧ ಅತ್ಯಾಚಾರ ನಡೆದರು ಅದನ್ನು ಖಂಡಿಸಲೇ ಬೇಕು. ಸಾಕ್ಷಿ ಹೇಳಲು ಹಿಂದೆ-ಮುಂದೆ ನೋಡಬಾರದು, ಅತ್ಯಾಚಾರ ಪ್ರಕರಣಗಳು ಬೇಗ ಇತ್ಯರ್ಥಕ್ಕೆ ಪ್ರತ್ಯೇಕ ನ್ಯಾಯಾಲಯಗಳ ವ್ಯವಸ್ಥೆಗೊಳ್ಳಬೇಕು. ಸಾಕ್ಷಿಗಳಿಗೆ ಸಂಪೂರ್ಣ ರಕ್ಷಣೆಬೇಕು. ಅತ್ಯಾಚಾರಿಗಳ ವಿರುದ್ಧ ಬಿಗಿಕ್ರಮ ಅತ್ಯಂತ ಅಗತ್ಯವಾಗಿದೆ. ಇದರಿಂದ ಪುರುಷರಲ್ಲಿ ಭಯ ಹುಟ್ಟಿ ಅತ್ಯಾಚಾರದಿಂದ ದೂರ ಸರಿಯಲು ಸಾಧ್ಯವಾಗುತ್ತದೆ. ಇನ್ನು ರಂಗಭೂಮಿಯ ಪಾತ್ರ ಏನು? ಎಂಬ ವಿಚಾರಕ್ಕೆ ಬಂದಾಗ, ರಂಗಭೂಮಿಯ ಪಾತ್ರ ಮಹತ್ವದ್ದಾಗಿದೆ. ರಂಗಭೂಮಿಯಲ್ಲಿ ಅಶ್ಲೀಲ ದೃಶ್ಯ, ಸಂವಾದ, ಪ್ರಚೋಧಕ ಸಂಗೀತ, ದ್ವಂದಾರ್ಥದ ಸಂವಾದಗಳಿಗೆ ಕಡಿವಾಣ ಹಾಕಬೇಕೆಂಬುದು ಇಂದಿನ

ಅಗತ್ಯ. ಅರೆಬತ್ತಲೆ ನೃತ್ಯಗಳಿಗೆ ಕಡಿವಾಣ, ಮಹಿಳೆಯರು ಎಂದರೆ ಪಾವಿತ್ರ್ಯದ ಸಂಕೇತ ಎಂದು ನಾಟಕದಲ್ಲಿ, ನಟನೆಯಲ್ಲಿ ಪ್ರೇಕ್ಷಕರಿಗೆ ಮನದಟ್ಟಾಗುವಂತೆ ತೋರಿಸಬೇಕು. ಒಳ್ಳೆಯ ಭಾವನೆ ಮೂಡಬೇಕು. ಮಹಿಳೆ ಈ ಸಂಸಾರದ ಗೃಹಿಣಿ ಎನ್ನುವ ಮನೋಭಾವನೆ ಪುರುಷರಲ್ಲಿ ಮನೆ–ಮಾಡುವಂತೆ ನಾಟಕರಂಗ ಪ್ರಯತ್ನಿಸಬೇಕು. ಮಹಿಳೆ ಕೇವಲ 'ದೇಹ' ಮಾತ್ರ ಅಲ್ಲ ಎಂದು ಪುರುಷವರ್ಗ ತಳೆದಾಗ ಅತ್ಯಾಚಾರಕ್ಕೆ ತೆರೆ ಬೀಳುತ್ತದೆ.

ಭಾರತದಲ್ಲಿ ಪ್ರತಿವರ್ಷ ೭೨೦೦ಕ್ಕೂ ಹೆಚ್ಚು ಅಪ್ರಾಪ್ತ ಬಾಲಕಿಯರು ಅತ್ಯಾಚಾರಕ್ಕೊಳಗಾಗುತ್ತಾರೆ. ಈ ಪೈಕಿ ದೂರು ಕೊಡಲು ಹೋದವರು ಪೋಲೀಸ ದೌರ್ಜನ್ಯಕ್ಕೆ ಕೆಲವರು ಒಳಗಾಗುತ್ತಾರೆಂಬುದು ದುಃಖಕರ ಸಂಗತಿ. ಇದರಿಂದಾಗಿ ದೂರುಗಳನ್ನು ಕೊಡದೇ ಅವಮಾನ, ಅತ್ಯಾಚಾರ ಸಹಿಸಿಕೊಂಡಿರುತ್ತಾರೆ. ಅತ್ಯಾಚಾರಿಗಳಿಗೆ ಕಠಿಣಶಿಕ್ಷೆಯಾದಾಗ ಮಾತ್ರ ಅತ್ಯಾಚಾರಕ್ಕೆ ಕಡಿವಾಣ ಸಾಧ್ಯ ಇಂತಹ ಪ್ರಕರಣಗಳಲ್ಲಿ ಸಕಲರೂ ಮುಂದಾಗಬೇಕು. ಒಂದು ಮಾತು ಮಾತ್ರ ಮರೆಯದಿರಿ , ಬಸವಣ್ಣನವರು 'ಪರವಧುವನ್ನು ಮಹಾದೇವಿಯೆಂಬೆ' ಎಂಬ ಒಂದೇ ವಾಕ್ಯದಲ್ಲಿ ಸ್ತ್ರೀಯರ ವಿಷಯವಾಗಿರುವ ಆದರಾಭಿಮಾನಿಗಳನ್ನು ತೋರಿಸಿಕೊಟ್ಟಿದ್ದಾರೆ. ಸಿದ್ಧರಾಮನು ಹೆಣ್ಣುಮಾಯೆಯಲ್ಲ, ಹೆಣ್ಣು ರಕ್ಕಸಿಯಲ್ಲ ಸಾಕ್ಷಾತ ಕಪಿಲಸಿದ್ಧ ಚೆನ್ನಮಲ್ಲಿಕಾರ್ಜುನ ಎಂದು ಕಂಡಿದ್ದಾನೆ. ಇಂತಹ ಶರಣ–ಶರಣೆಯರ ಹಿತವಾದ ನುಡಿಗಳನ್ನು ನಾಟಕದಲ್ಲಿ ಅಳವಡಿಸಿಕೊಂಡು ರಂಗಭೂಮಿಯ ಮುಖಾಂತರ ಪ್ರೇಕ್ಷಕರಿಗೆ ಮುಟ್ಟುವಂತೆ ಮಾಡಿದಲ್ಲಿ ಸ್ತ್ರೀಯರ ಮೇಲೆ ನಡೆಯುವ ಅತ್ಯಾಚಾರಗಳನ್ನು ಅಳಿಸಿಹಾಕಲು ಸಾಧ್ಯವಿದೆ.

**ಪ್ರಶ್ನೆ : ಮಠಗಳ ಬಗ್ಗೆ ನಿಮ್ಮ ಅನಿಸಿಕೆ ಏನು ? ಇತ್ತೀಚೆಗೆ ಮಠ–ಮಾನ್ಯರ ಬಗ್ಗೆ ಜನರಲ್ಲಿ ಜಿಗುಪ್ಸೆ ಹುಟ್ಟಿಸುತ್ತದೆ ಇದಕ್ಕೆ ಪರಿಹಾರ ಇಲ್ಲವೆ ?**

**ಎಲ್.ಬಿ.ಕೆ :** ಇದೊಂದು ಗಂಭೀರವಾಗಿ ವಿಚಾರಿಸಿ, ಯೋಚಿಸಿ ಉತ್ತರ ಕೊಡಬೇಕಾದಂಥ ಪ್ರಶ್ನೆ 'ನ ಕೇವಲಂ ಸರ್ವೇ ಜನಾಃ ಅಪಿತು, ಸರ್ವೇ ಜೀವಾಃ ಸುಖಿನೋ ಭವಂತು' ಎಂಬುವುದು ಮಠ ಮಾನ್ಯಗಳ ಆತ್ಯಂತಿಕ ಆಶಯ. 'ಬರಿ ಜನಗಳು ಮಾತ್ರವಲ್ಲ, ಎಲ್ಲ ಜೀವಿಗಳೂ ಸುಖವಾಗಿರಬೇಕು' ಎಂಬ ಸ್ವಸ್ತಿ ಮಂತ್ರವನ್ನು ಮಠಗಳು ಹೇಳಿಕೊಂಡಿರುತ್ತವೆ. ಕರ್ನಾಟಕದ ಬಹುಪಾಲು ಮಠಗಳು ಸಕಲಜೀವಾತ್ಮರಿಗೆ ಲೇಸನ್ನು ಬಯಸುವ ಮಹಾಮಣಿಹಕ್ಕೆ ಹೆಗಲುಕೊಟ್ಟು ಕೊಂಡಿರುವುದನ್ನು ನೋಡುತ್ತೇವೆ. ವೀರಶೈವ ಮಠಗಳಾಗಲಿ, ವಿಪ್ರಮಠಗಳಾಗಲಿ, ಲಿಂಗಾಯತ ಮಠಗಳಾಗಲಿ ಬಹುತೇಕ ಎಲ್ಲ ಮಠಗಳು ಕ್ಷಮತೆ ಮತ್ತು ಬದ್ಧತೆಗಳಿಗೆ ಉಸಿರು ತುಂಬುತ್ತಿರುವುದನ್ನು ಕಾಣುತ್ತೇವೆ.

ವಚನ ಅಧ್ಯಯನ, ಅನ್ನದಾಸೋಹ, ಕಾಯಕದಾಸೋಹ, ಜ್ಞಾನದಾಸೋಹ ತ್ರಿವಿಧ ಹಾಗೂ ವಿವಿಧ ದಾಸೋಹಗಳಲ್ಲಿ ಮಠಗಳು ತೊಡಗಿಸಿಕೊಂಡಿರುತ್ತವೆ. ಪ್ರವಚನ, ಪುರಾಣ, ಪುಣ್ಯಕಥೆಗಳಿಗೆ ಚಾಲನೆ ನೀಡುತ್ತವೆ. ನಮ್ಮ ನಾಡಿನ ಮಠಗಳು ನಮ್ಮನ್ನು ನೈತಿಕಗೊಳಿಸುವಲ್ಲಿ ಪ್ರಧಾನಪಾತ್ರವಹಿಸಿಕೊಂಡಿವೆ. ಅದಕ್ಕೆ ನಾನೇ ಸಾಕ್ಷಿ. ಮಠದಂಗಳವೇ ನನಗೆ ಪುಣ್ಯಭೂಮಿಯಾಯಿತು ಇಲ್ಲಿ ನನಗೆ ಸರಸ್ವತಿಯ ಸಾಕ್ಷಾತ ದರ್ಶನವಾಯಿತು. ಮಠಗಳಿಂದಲೇ ಇಂದು ನಾನು ಈ ಸ್ಥಾನಕ್ಕೇರಲು ಸಾಧ್ಯವಾಯಿತು.

ಕೊಪ್ಪಳ ಶ್ರೀ ಗವಿಸಿದ್ಧೇಶ್ವರ ಮಠ, ಕಲಬುರ್ಗಿಯ ಶ್ರೀ ಶರಣಬಸವೇಶ್ವರ ದಾಸೋಹಮಠ ಬಾಳೆಹೊನ್ನೂರು ರಂಭಾಪುರೀಮಠ, ಸಿರಿಗೆರೆ ತರಳಬಾಳು ಮಠ, ಆದಿ ಚುಂಚನಗಿರಿ ಶ್ರೀಮಠ,ಕಲಬುರ್ಗಿ ಜಿಲ್ಲೆಯಲ್ಲಿರುವ, ಚೌದಾಪುರಿಮಠ, ಗದ್ದುಗೆಮಠ, ಗುರುಬಸವನ ಬ್ರಹ್ಮನಮಠ, ಸುಲಫಲಮಠ, ಮಡಿವಾಳೇಶ್ವರಮಠ, ಕಡಕೋಳ, ಷಣ್ಮುಖ ಶಿವಯೋಗಿಗಳ ಮಠ ಇತ್ಯಾದಿ ಇವೆ. ಮಠಗಳು ಸಾಂಸ್ಕೃತಿಕ, ಸಾಮಾಜಿಕ, ಶೈಕ್ಷಣಿಕ, ಸಾರ್ವಜನಿಕ ಮತ್ತು ಸಾಹಿತ್ಯಿಕವಲಯಗಳಲ್ಲಿ ಭುಯೋಭೂಮವಾಗಿ ತಮ್ಮನ್ನು ತಾವು ಗುರುತಿಸಿಕೊಂಡಿದ್ದು, ನಾಡು, ನಾಡೋಜರ ಮತ್ತು ನಾಡಿಗರ ಗಮನವನ್ನು ಸೆಳೆದುಕೊಂಡಿವೆ.

ಇತ್ತೀಚೆಗೆ ಮಠಗಳು ಅಜ್ಞಾನದ, ಅವ್ಯವಹಾರದ, ಅನೈತಿಕತೆಯ ತಾಣಗಳೆನ್ನಿಸಿಕೊಳ್ಳುತ್ತಿವೆ. ಸಲ್ಲದ ಕೆಲಸದಲ್ಲಿ ತೊಡಗಿವೆ. ಅತ್ಯಾಚಾರದಂತೊಳಸುಳಿಯಲ್ಲಿ ಸ್ವಾಮಿಜಿಗಳು ಸಿಲುಕಿರುವುದು ಬಹಿರಂಗಗೊಳ್ಳುತ್ತಿವೆ. ಇದರಿಂದಾಗಿ ಮಠಗಳ ಬಗ್ಗೆ ಜನರಲ್ಲಿ ಜಿಗುಪ್ಸೆಉಂಟಾಗುವುದು ಸಹಜ ಇಂಥವರನ್ನು ಬಯಲಿಗೆಳೆದು ಶಿಕ್ಷೆಗೆ ಒಳಪಡಿಸಬೇಕು. ಅಧ್ಯಾತ್ಮಿಕ ಜ್ಞಾನದ ದೇಗುಲಗಳನ್ನು ಪವಿತ್ರವಾಗಿರಿಸಬೇಕು. ಸಂಸ್ಕೃತ ಶಬ್ಧಕೋಶದಲ್ಲಿ ಮಠಗಳೆಂದರೆ ಸನ್ಯಾಸಿಗಳಾದವರು ಶಿಷ್ಯರಿಗೆ ಜ್ಞಾನ ಬೋಧನೆ ಮಾಡುತ್ತ ವಾಸಿಸುವಸ್ಥಳಗಳೆಂದು ಹೇಳಲಾಗಿದೆ ಇದನ್ನು ಒಟ್ಟಾಗಿ ಎಲ್ಲರು ನಿಜವಾಗಿಸಬೇಕು. ಇದೆ ನಮ್ಮ ಮುಂದಿರುವ ಈಗಿನ ಪರಿಹಾರ.

**ಪ್ರಶ್ನೆ : ಎಲ್.ಬಿ.ಕೆ ಆಲ್ದಾಳರು "ಶರಣಜೀವಿ" ಶರಣರ ವಿಚಾರ ಧಾರೆಯನ್ನೇ ಒಪ್ಪಿಕೊಂಡು ಅಪ್ಪಿಕೊಂಡು ಸಹಜ ಸಜ್ಜನಿಕೆಯ ಬದುಕು ನಡೆಸುತ್ತಿರುವ ಗ್ರಾಮೀಣ ಬಂಧು ಎಂದು ತಮ್ಮನ್ನು ಗೊ.ರು. ಚೆನ್ನಬಸ್ಸಪ್ಪ ಅವರು ಕೊಂಡಾಡಿದ್ದಾರೆ ಇದನ್ನು ಹೇಗೆ ಸ್ವೀಕರಿಸುತ್ತೀರಿ ?**

**ಎಲ್.ಬಿ.ಕೆ** ಉತ್ತಮವಿಚಾರ ನನ್ನ ಮುಂದಿಟ್ಟಿದ್ದೀರಿ. ಸಂತೋಷ. ನನ್ನನ್ನು 'ಶರಣರ ಜೀವಿ' ಎಂದು ಸನ್ಮಾನ್ಯ ಗೊ.ರು.ಚ. ಅವರು ನುಡಿದಿರುವುದು ಅವರ ದೊಡ್ಡಗುಣ ಎಂದರೆ ತಪ್ಪಲ್ಲ, ನನ್ನ ಬರಹಗಳಲ್ಲಿ, ನಾಟಕಗಳಲ್ಲಿ ನಾನು ಶರಣರ, ಸಂತರ, ಸಾಧುಗಳ ಬಗ್ಗೆ ಹೆಚ್ಚಾಗಿ ಒಲವು ತೋರಿದ್ದು ಕಾಣುವಿರಿ ಇದಕ್ಕೆ ಮುಖ್ಯಕಾರಣ ಸತ್ಸಂಗ. ಶರಣ ಸಂಸ್ಕೃತಿಗೆ ನನ್ನನ್ನು ನಾನು ಒಪ್ಪಿಕೊಂಡಿರುವುದೇ ಶರಣರ ನಡೆ, ನುಡಿ, ಅಲ್ಲಿರುವ ಸಂಸ್ಕೃತಿ ನನ್ನನ್ನು ಈ ರೀತಿ ಆಗಲು ಪ್ರಚೋದಿಸಿದೆ! ಸನ್ಮಾನ್ಯ ಗೋ.ರು.ಚ ಅವರು ಬರೆದ ಈ 'ಶರಣ ಸಂಸ್ಕೃತಿ' ಕೆಳಗಿನ ಸಾಲುಗಳು ನನ್ನ ಜೀವನಕ್ಕೆ ಮಾರ್ಗಸೂಚಿಯಾಗಿವೆ. ಇದನ್ನು ಇನ್ನಿತರರು ಆಚರಣೆಗೆ ತರಬಹುದು.

## ಶರಣ ಸಂಸ್ಕೃತಿ

**ಶರಣ ಸಂಸ್ಕೃತಿಗೆ ಜಾತಿ–ಮತಗಳ ಜಂಜಡವಿಲ್ಲ**
**ಪಂಥ–ಪಂಗಡಗಳ ಪ್ರಶ್ನೆಯಿಲ್ಲ**
**ಮೇಲು ಕೀಳುಗಳ ಮಡಿವಂತಿಕೆಯಿಲ್ಲ**
**ವರ್ಣ–ವರ್ಗಗಳ ವ್ಯತ್ಯಾಸವಿಲ್ಲ**
**ಪೂಜಾರಿ–ಪುರೋಹಿತರ ಪಾರು ಪತ್ಯವಿಲ್ಲ**
**ಕಾಮಿನಿ–ಕಾಂಚನಗಳ ಕಳವಳವಿಲ್ಲ**
**ಆಶೆ–ಆಮಿಷಗಳ ಆಲೋಚನೆಯಿಲ್ಲ**
**ಅಂತಸ್ತು–ಅಧಿಕಾರಗಳ ಅವಿವೇಕವಿಲ್ಲ**
**ಸ್ವರ್ಗ–ನರಕಗಳ ಸಂಕೀರ್ಣತೆಯಿಲ್ಲ**
**ಹೊಗಳಿಕೆ ತೆಗಳಿಕೆಗಳ ಹಳವಂಡವಿಲ್ಲ**
**ಬೆಡಗು–ಬಿನ್ನಾಣಗಳ ಭ್ರಮೆಯಿಲ್ಲ**
**ಸಂಪತ್ತು–ಸೌಂದರ್ಯಗಳ ಸೆಳೆತವಿಲ್ಲ**
**ಹೆದರಿಕೆ–ಬೆದರಿಕೆಗಳ ಹಿಂಸೆಯಿಲ್ಲ**
**ಮಾಯೆ–ಮತ್ಸರಗಳ ಮನ್ನಣೆಯಿಲ್ಲ**
**ಸಂಕಟ–ಸಂಕೋಚಗಳ ಸಂದಿಗ್ಧತೆಯಿಲ್ಲ**
**ಶಾಸ್ತ್ರ–ಸಂಪ್ರದಾಯಗಳ ಸಂಕೋಲೆಯಿಲ್ಲ**
**ಕಾಲ–ದೇಶಗಳ ಕಟ್ಟಳೆಯಿಲ್ಲ**
**ವೇಷ–ಭಾಷೆಗಳ ವಿಲಕ್ಷಣವಿಲ್ಲ**
**ಸಂಚು–ಸಂಗ್ರಹಗಳ ಸವಳಿಯಿಲ್ಲ**
**ನಾನು–ನೀನು ಎಂಬುದಿಲ್ಲ**
**ಅದು ಮುಕ್ತ : ಪೂರ್ಣಮುಕ್ತ! (ಗೋ.ರು.ಚ)**

ನನಗೆ 'ಶರಣಜೀವಿ' ಎಂದು ಹೆಸರಿಸಿದ ಉದ್ದಾಮ ಪಂಡಿತರು, ಶರಣತತ್ವ ಮಹಾಜ್ಞಾನಿಗಳೂ ಆಗಿರುವ ಗೋರುಚ ಅವರಿಗೆ ನನ್ನ ಅನಂತಾನಂತ ವಂದನೆಗಳು. 'ಶರಣಸಂಸ್ಕೃತಿ'ಯಲ್ಲಿ ಮೇಲೆ ತೋರಿದ ಪಂಕ್ತಿಗಳ ಸರಮಾಲೆಯೇ ನಿಮ್ಮ ಪ್ರಶ್ನೆಗೆ ನನ್ನ ಪ್ರಾಮಾಣಿಕ ಉತ್ತರ.

**ಪ್ರಶ್ನೆ : ನಾಟಕ ಸ್ಪರ್ಧೆ ರಂಗಭೂಮಿಗೆ ಅನಿವಾರ್ಯವೆ ?**
**ಎಲ್.ಬಿ.ಕೆ :** ಹೌದು, ನಾಟಕ ಸ್ಪರ್ಧೆ ರಂಗಭೂಮಿಯ ಅವಿಭಾಜ್ಯ ಅಂಗವೆಂಬುದನ್ನು ಒಪ್ಪಿಕೊಳ್ಳಲೇ ಬೇಕು. ರಂಗಭೂಮಿಗೆ ಹೊಸನೀರು ಪ್ರವಾಹವಾಗಿ ಹರಿದು ಬರಲು ಇದು ಅನಿವಾರ್ಯ. ನಾಟಕ ಸ್ಪರ್ಧೆಗಳು ರಂಗಕರ್ಮಿಯ ಆತ್ಮಶೋಧನೆಗೆ, ರಂಗಭೂಮಿಯ ವಿಕಾಸಕ್ಕೆ ಸರಿಯಾದ ಮದ್ದನ್ನು ನೀಡಬಲ್ಲವು. ಆದುದರಿಂದ ನಾಟಕ ಸ್ಪರ್ಧೆಗಳು ಆರೋಗ್ಯಕರ

ವಾತಾವರಣದಲ್ಲಿ ನಿರಂತರವಾಗಿ ನಡೆಯಲಿ. ಹೇಳಿ ಕೇಳಿ ಇದು ಸ್ಪರ್ಧಾಜಗತ್ತು ಆಟೋಟಸ್ಪರ್ಧೆ, ಚರ್ಚಾಸ್ಪರ್ಧೆ, ಪ್ರಬಂಧ, ಕವನಸ್ಪರ್ಧೆ, ಸ್ಪರ್ಧೆಗಳಿಗೆ ಮೊದಲೂ ಇಲ್ಲ, ಕೊನೆಯೂಇಲ್ಲ, ನಾಟಕದ ಆಯ್ಕೆಯಿಂದ ಹಿಡಿದು, ಅದರ ಪ್ರಯೋಗ ಶೈಲಿಯವರೆಗೂ, ಪ್ರಸಾಧನ, ಉಡುಗೆತೊಡುಗೆ, ರಂಗಸಜ್ಜಿಕೆ, ಸಂಗೀತ, ಧ್ವನಿ, ರಂಗಪರಿಕರ ಅಭಿನಯ ಹೀಗೆ ನಾಟಕ ಸ್ಪರ್ಧೆ ನಾನಾ ಬಗೆಯಲ್ಲಿ ವೈಶಿಷ್ಟ ತೋರಿಸಲು ಪ್ರಯತ್ನಿಸುತ್ತವೆ. ಅದಕ್ಕಾಗಿ ಸ್ಪರ್ಧೆ ಅನಿವಾರ್ಯ ಎಂದು ನನ್ನ ಅನಿಸಿಕೆ.

**ಪ್ರಶ್ನೆ : ನಾಟಕಕ್ಕೆ ಹೃದಯ ಬೆಸೆವ ಶಕ್ತಿ : ಇದೆಯೆ** ?

**ಎಲ್.ಬಿ.ಕೆ :** ಈ ಮಾತಿನಲ್ಲಿ ನೂರರಷ್ಟು ಸತ್ಯವಿದೆ. **“**ನಾಟಕ ಕೇವಲ ಮನರಂಜನೆಗಾಗಿ ಅಲ್ಲ, ಒಡೆದು ಹೋದ ಹೃದಯಗಳನ್ನು ಬೆಸೆಯುವ ಶಕ್ತಿ ನಾಟಕಕ್ಕಿದೆ**’** ಎಂದು ಹಿರಿಯ ಕವಿ, ನಾಟಕಕಾರ, ರಂಗಕರ್ಮಿ ಎಲ್.ಬಿ.ಕೆ.ಆಲ್ದಾಳರು ಅಭಿಪ್ರಾಯ ಪಟ್ಟರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆವತಿಯಿಂದ ಬೆಂಗಳೂರಿನಲ್ಲಿ ಜೂನ ೨೧.೨೦.೧೫ ರಂದು ಬೆಂಗಳೂರಿನ ಕನ್ನಡ ಭವನದ ನಯನ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ‘ಮನೆಯಂಗಳದಲ್ಲಿ ಮಾತು ಕತೆ’ ಕಾರ್ಯಕ್ರಮದಲ್ಲಿ ತಿಂಗಳು ಅತಿಥಿಯಾಗಿ ಪಾಲ್ಗೊಂಡು ಅವರು ಮಾತಾಡುತ್ತಿದ್ದರು.

‘ತೀವ್ರ ಆರ್ಥಿಕ ಸಂಕಷ್ಟದ ನಡುವೆಯೇ ನಾಟಕಗಳನ್ನು ಆಡಿಸುತ್ತಿದ್ದ ಮೊಹಮದ್ ಪೀರ್ ಸಾಬ್ ಅವರಿಗೆ ಸಾಲ ಕೊಟ್ಟವನಿಂದ ತುಂಬಾ ಕಿರುಕುಳವಿತ್ತು. ಎಲ್ಲೆಲ್ಲಿ ನಾಟಕದ ಪ್ರದರ್ಶನ ಇರುತ್ತಿತ್ತೋ ಅಲ್ಲಿಗೆಲ್ಲ ಸಾಲಕೊಟ್ಟವ, ಸಾಲಗಾರ ಪೀರಸಾಬ್‌ನ ಹಿಂದೆ ಬೇತಾಳನ ರೀತಿಯಲ್ಲಿ ಬಿಡದೆ ಬೆನ್ನು ಹತ್ತಿ ಬರುತ್ತಿದ್ದರು. ಒಂದು ದಿನ ಪೀರಸಾಬ್ ಅವರು ಇಂದು ನಿಮ್ಮ ಹಣಕೊಟ್ಟೇ ಕೊಡುತ್ತೇನೆ. ಮೊದಲು ನಾಟಕ ನೋಡಿ ಎಂದು ನಾಟಕ ಮಂದಿರದಲ್ಲಿ ಮೊದಲ ಸಾಲಿನಲ್ಲಿ ಕೂರಿಸಿದ್ದರು. ಅಂದು ‘ಗೌತಮಬುದ್ದ’ ನಾಟಕದಲ್ಲಿನ ಪೀರಸಾಬ್ ಗೌತಮ ಬುದ್ಧನ ಪಾತ್ರಧಾರಿಯಾಗಿ ನಟಿಸಿದ್ದರು. ಆ ನಾಟಕದಲ್ಲಿ ತನ್ನಿಂದ ಸಾಲ ಪಡೆದ ವ್ಯಕ್ತಿಯ ಅಭಿನಯ ಕಂಡ ಸಾಲಕೊಟ್ಟ ವ್ಯಕ್ತಿ ಎರಡು ಕಣ್ಣುಗಳಿಂದ ಕಂಡ ಬುದ್ಧನ ಪಾತ್ರ, ಅಭಿನಯ ಕಂಡು ಸಾಲದ ವಸೂಲಿಯ ಬಗ್ಗೆ ಚಿಂತಿಸದೇ, ತನ್ನಲ್ಲಿ ಆದ ಅಪರಿಮಿತ ಬದಲಾವಣೆಯನ್ನು ತಾನೇ ನಂಬದಾದ, ಕೊಟ್ಟಸಾಲವನ್ನೂ ಮರೆತು ನಾಟಕದ ಮೂಲಕ ಜೀವನ ಮೌಲ್ಯಗಳನ್ನು ಕಲಿತೆನೆಂದು ಪ್ರಶಂಸಿಸಿ ಹೊರಗೆ ನಡೆದೆ ಬಿಟ್ಟರು!’ ಇದು ಮಾನವನ ಪರಿವರ್ತನೆಗೆ ಚಿಕ್ಕ ಉದಾಹರಣೆ ಎಂದು ಆಲ್ದಾಳ ಅವರು ಅಂದಿನ ಘಟನೆಯನ್ನು ಮೆಲಕು ಹಾಕಿದರು**”**[೧೩]

ನಾಟಕಗಳು ಪ್ರೇಕ್ಷಕರ ಮೇಲೆ ಹೇಗೆ ಪ್ರಭಾವಬೀರುತ್ತವೆ ಎನ್ನುವುದಕ್ಕೆ ಬೇರೇನು ಉದಾಹರಣೆ ಬೇಕು. ನಾಟಕಗಳು ಸಮಾಜ ಸುಧಾರಣೆಗೆ ದಾರಿ ದೀಪವಾಗಿವೆ. ಜೀವನದ ಗುರಿಯನ್ನು ಅರಿತು ನಡೆಯುವಂತೆ ನಾಟಕಗಳು ಮಾನವನ ಮೇಲೆ ಒಳ್ಳೆಯ ಪ್ರಭಾವ ಬೀರುತ್ತವೆ.

**ಪ್ರಶ್ನೆ : ಬದುಕು ನಿಮಗೆ ಏನನ್ನು ಕೊಟ್ಟಿದೆ ?**

**ಆಲ್ದಾಳ :** ಹೆಚ್ಚುವ್ಯಾಸಂಗ ಮಾಡದೆ ಇದ್ದದ್ದು ಅದು ನನಗೆ ಯಾವರೀತಿಯಲ್ಲೂ ಬದುಕಿಗೆ ತೊಂದರೆಯಾಗಲಿಲ್ಲ. ಬದುಕಿನಿಂದಲೇ ನಾನೆಲ್ಲವನ್ನು ಕಲಿಯುತ್ತಬಂದೆ. ತಾಯಿಯ ತಮ್ಮಂದಿರಿಂದ ಕಲಿತ ಅನುಭವಗಳು ನನಗೆ ಬದುಕಿಗೆ ದಾರಿ ದೀಪವಾದವು. ಬಾಲ್ಯದಲ್ಲಿಯೇ ನಾಟಕದಲ್ಲಿನ ಅಭಿನಯ, ಹಿರಿಯರು ತೋರಿದ ಮೆಚ್ಚುಗೆ ಮರೆಯಲಿಲ್ಲ, ಸುತ್ತಲ ಪ್ರಕೃತಿಯಲ್ಲಿ ಋತುಮಾನಗಳ ಬದಲಾವಣೆಗಳು–ಬೆಳಕು, ಕತ್ತಲು, ಸೊಗಸು–ಸೌಂದರ್ಯ, ಭೀಕರತೆ–ಗಂಭೀರತೆ–ರೌದ್ರತೆ–ಅದ್ಭುತ : ಒಂದೊಂದು ನೋಟವೂ ಮನದಾಳಕ್ಕಿಳಿಯುತ್ತಿದ್ದ ಹೊಸ–ಹೊಸ ರೂಪಗಳು. ನನ್ನ ಮನಸ್ಸು ಸ್ವತಂತ್ರವಾಗಿ ಮಾನಸಿಕವಾಗಿ, ಭಾವನಾತ್ಮಕವಾಗಿ ಸ್ವಚ್ಛಂದವಾಗಿ ವಿಹರಿಸಿದೆ. ನನಗೆ ಎಂದಿಗೂ ಬರೆಯುವ ಆಲೋಚನೆ ಬಂದಿರಲಿಲ್ಲ, ನಾನು ಬರೆಯಬಹುದು, ನಾಟಕಕಾರ ನಾಗಬಹುದು, ರಂಗಭೂಮಿಯಲ್ಲಿ ನಟಿಸಬಹುದು, ಸಾಹಿತಿಯಾಗಬಹುದು ಎಂದು ಕನಸಿನಲ್ಲಿಯೂ ಕಂಡಿರಲಿಲ್ಲ. ಆದರೆ ದೈವ ಸಂಕಲ್ಪ ಹೇಗಿತ್ತೊ ಬಲ್ಲವರಾರು ನನ್ನ ನಲ್ವತ್ತು ನಾಲ್ಕನೆಯ ವಯಸ್ಸಿನಲ್ಲಿ ಬರೆಯಲು ಪ್ರಾರಂಭಿಸಿ. "ಪತಿಭಕ್ತಿ" ನಾಟಕ ಕೃತಿ ಹೊರತಂದು ರಂಗಭೂಮಿಯ ಮೇಲೆ ಪ್ರಯೋಗಿಸಿದಾಗ ಪ್ರೇಕ್ಷಕರ ಪ್ರಶಂಸೆಯಿಂದಾಗಿ ನನ್ನ ಮುಂದಿನ ಬದುಕೇ ಬೇರೆಯಾಯಿತು. ನನ್ನ ಮನಸ್ಸು ತಾನೇ ಬರೆಯಿಸಲು ಮಾರ್ಗತೋರಿಸಿತು. ಕನ್ನಡ ಸಾಹಿತ್ಯ ಲೋಕದಲ್ಲಿ ನಾನು ಹೆಜ್ಜೆ ಇರಿಸಿದೆ. ಈಗಲೂ ಆ ಹೆಜ್ಜೆಗಳು ಮುಂದುವರಿದಿವೆ.

ಬದುಕು ನನಗೆ ಎಲ್ಲವನ್ನು ಕೊಟ್ಟಿದೆ. ಸುಖ–ದುಃಖಗಳನ್ನು ಕಂಡಿದ್ದೇನೆ ನನ್ನ ನಾಟಕ ರಚನೆ ಸಾಕಷ್ಟು ಕೀರ್ತಿತಂದಿದೆ. ನೂರಾರು ಸಾಹಿತ್ಯ ಕೃತಿಗಳನ್ನು ರಚಿಸಿದ್ದೇನೆ. ಪ್ರಶಸ್ತಿಗಳಿಗೆ ಬರವಿಲ್ಲ. ನಾಟಕರತ್ನ ಗುಬ್ಬಿವೀರಣ್ಣ ಪ್ರಶಸ್ತಿ, ರಾಜ್ಯ ಪ್ರಶಸ್ತಿ ಬಂದಿವೆ, ಬಹುಮಾನ–ಹೊಗಳಿಕೆಗಳನ್ನು ಕಂಡಿದ್ದೇನೆ. ಬದುಕು ಇಷ್ಟೆ ಸುಂದರವಾಗಿದ್ದರೆ ಅಂತಯೋಚಿಸಿದ್ದರೆ ಸಾಧ್ಯವಾ? ನನ್ನ ತಂದೆ ಚಿಕ್ಕವಯಸ್ಸಿನಲ್ಲಿ ಸ್ವರ್ಗವಾಸಿಗಳಾದರು ತಾಯಿ ನನ್ನನ್ನು ಬೆನ್ನಿಗೆ ಕಟ್ಟಿಕೊಂಡು ದುಡಿದು ದೊಡ್ಡವನನ್ನಾಗಿ ಮಾಡಿದರು. ಪತ್ನಿ ನನ್ನ ಏಳಿಗೆಗೆ ಸಾಕಷ್ಟು ನೋವುಂಡು ನನಗೆ ಪ್ರೇರಣೆ ನೀಡಿದ್ದು ಮರೆಯಲಾರೆ. ನನ್ನೊಬ್ಬ ಮಗ ಅಂಗವಿಕಲ, ಜೀವನದಲ್ಲಿ ಇದೆಲ್ಲ ಸಹಜ. ನಾನು ಮಠಗಳನ್ನೇ ಆಶ್ರಯತಾಣ ಮಾಡಿಕೊಂಡದ್ದು ನನ್ನ ಬದುಕಿನ ತಿರುವಿಗೆ ಕಾರಣವಾಯಿತು. ಅಲ್ಲಿಯ ಧರ್ಮಸಂಸ್ಕೃತಿ, ಪ್ರೀತಿ, ವಿಶ್ವಾಸಗಳನ್ನು ಕಂಡು ಮಾರುಹೋದೆ. ನಾನು ಬರೆದದ್ದು ನಾಟಕವಾಯಿತು, ಚರಿತ್ರೆಯಾಯಿತು, ನಾಮಾವಳಿಯಾಯಿತು, ವಚನವಾಹಿನಿಯಾಯಿತು, ಕುರಾನ ಸಂಸ್ಕೃತಿಯಿಂದ ಪುರಾಣ ಸಂಸ್ಕೃತಿಯತ್ತ ದಾಪುಗಾಲು ಇರಿಸಿದೆ. ಮುಂದೆಯೂ ಬದಲಾವಣೆ ಹೇಗಾಗುತ್ತೆ ಹೇಗೆ ಹೇಳಲಿ

**ಬಲುಗಳ್ಳನೊಬ್ಬ ವಾಲ್ಮಿಕಿ ಋಷಿಯಾಗಲಿಲ್ಲವೇನಯ್ಯಾ**
**ಕೃಪಣನೊಬ್ಬ ಪುರಂದರದಾಸ ಆಗಲಿಲ್ಲವೇನಯ್ಯ**
**ಸತಿ ಪ್ರೇಮಿಯೊಬ್ಬ ತುಳಸಿದಾಸನಾಗಲಿಲ್ಲ ವೇನಯ್ಯ**
**ಅತಿಕಾಮಿಯೊಬ್ಬ ವೇಮನಯೋಗಿ ಆಗಲಿಲ್ಲ ವೇನಯ್ಯ**
**ಪರಿವರ್ತನೆಗೆ ಅರೆನಿಮಿಷ ಸಾಕೆಂದ ನಮ್ಮ ತಪೋವನ ಮಠಾಧೀಶ!**

**ಪ್ರಶ್ನೆ: ನಾಟಕ ರಂಗದ ಭವಿಷ್ಯವೇನು ?**

**ಎಲ್.ಬಿ.ಕೆ :** ಸಿನಿಮಾ ಬಂದನಂತರ ನಾಟಕದ ಸ್ಥಿತಿಕಳಾಹೀನವಾದದ್ದು ನಿಜ. ಟಿ.ವಿ. ಬಂದನಂತರ ಸಿನೆಮಾ ಸಹ ಹಿನ್ನಡೆ ನಡೆಸಿದೆ. ಈ ಪೈಪೋಟಿಯಲ್ಲಿ ವೃತ್ತಿ ನಾಟಕ ರಂಗದ ಬಗ್ಗೆ ಹೇಳುವುದಾದರು ಹೇಗೆ? ಆದರೂ ಅಲ್ಲಲ್ಲಿ ಕೆಲವರು ವೃತ್ತಿ ರಂಗ ಕರ್ಮಿಗಳನ್ನು ಕರೆಸಿ ನಾಟಕಗಳನ್ನು ರಂಗಭೂಮಿಯ ಮೇಲೆ ಪ್ರಯೋಗಿಸುತ್ತಿದ್ದಾರೆ. ಮೊದಲಿಗೆ ತಾಲೂಕು ಕೇಂದ್ರಗಳಲ್ಲಿ ವೃತ್ತಿ ನಾಟಕಗಳ ಬಗ್ಗೆ ಹೆಚ್ಚಿನ ಆಸಕ್ತಿ ಹುಟ್ಟಿಸುವಂತೆ ಪ್ರಯತ್ನಿಸಬೇಕು. ಕರ್ನಾಟ ಕನಾಟಕ ಅಕಾಡೆಮಿ ಸಹ ವೃತ್ತಿ ನಾಟಕಗಳಿಗೆ ಧನಹಾಯ ನೀಡುತ್ತಿದೆ. ಇದರಿಂದಾಗಿ ರಂಗಾಶಕ್ತರಿಗೆ ಸ್ವಲ್ಪ ಮಟ್ಟಿಗೆ ಉತ್ಸಾಹ ಬರಿಸಲಿದೆ. ಆದರೂ ನಾಟಕದ ಅಂದಿನ ವೈಭವ ಮರುಕಳಿಸುವುದು ಹಗಲು ಗನಸು ಎಂದರೆ ತಪ್ಪಾಗಲಾರದು. ನೀನಾಸಂ, ರಂಗಾಯಣ ಮುಂತಾದ ಸಂಸ್ಥೆಗಳು ಮತ್ತು ಕೆಲವು ಹವ್ಯಾಸಿ ನಾಟಕ ಸಂಸ್ಥೆಗಳು ಹೊಸ-ಹೊಸ ನಾಟಕ ಪ್ರಯೋಗಗಳನ್ನು ಅಲ್ಲಲ್ಲಿ ಮಾಡುತ್ತಿದ್ದಾರೆ. ಆದರೆ ಅಂದಿನ ಪೌರಾಣಿಕ ನಾಟಕಗಳ ಖದರ್ ಮರೆಯಾಗುತ್ತಿರುವುದರಿಂದ ಏನೋ ಒಂದು ಅಮೂಲ್ಯ ವಸ್ತುಕಳೆದುಕೊಂಡು ಹುಡುಕಾಡುವ ಸ್ಥಿತಿ ತಂದಿದೆ. ಆದರೂ ಕಲೆಗೆ ಎಂದೂ ಅಂತ್ಯವೆಂಬುದು ಇಲ್ಲವೆ ಇಲ್ಲ. ನಮ್ಮ ಅಂತಸ್ಸತ್ವದ ಪ್ರತೇಕವಾದ ಬದುಕಿನ ಮಾರ್ಗದರ್ಶಕವಾದ ನಾಟಕ ಕಲೆ, ನಾಟಕರಂಗ ಚಿರಾಯುವಾಗಲಿ ಎಂದು ಆಶಿಸುತ್ತೇನೆ.

**ಪ್ರಾರ್ಥನೆ :** "ತಾನು ಬದುಕಿದ್ದಾಗಲೇ ಇತರರು ಬದುಕುವಂತೆ ಬಾಳುವವನೇ ನಿಜವಾದ ಮಾನವ" – ಹೀಗೆ ರಂಗಭೂಮಿಗೆ, ಮುಂದಿನ ಪೀಳಿಗೆಗಾಗಿ, ವೃತ್ತಿ ರಂಗಭೂಮಿಯ ವೈಭವವನ್ನು ನೆನಪಿಸುವ, ಭವ್ಯ ಪರಂಪರೆಯನ್ನು ಉಳಿಸಿ ಬೆಳೆಸಲು ತಮ್ಮ ಈ ಇಳಿವಯಸ್ಸಿನಲ್ಲೂ ಆರೋಗ್ಯವನ್ನು ಚೆನ್ನಾಗಿಟ್ಟುಕೊಂಡು ರಂಗಸೇವೆ ಮಾಡುತ್ತಿರುವ ರಂಗಸಂತಜಂಗಮ, ರಂಗ ಸಾಮ್ರಾಟ, ರಂಗಗಾರುಡಿಗ ಎಲ್.ಬಿ.ಕೆ.ಆಲ್ದಾಳ ಅವರು ಅವರ ಕುಟುಂಬದೊಂದಿಗೆ ಇನ್ನೂ ನೂರ್ಕಾಲ ಬಾಳಲಿ, ನಮ್ಮ ರಂಗಭೂಮಿಯನ್ನು ಬೆಳಗಲಿ ಎಂದು ಭಗವಂತನಲ್ಲಿ ಪ್ರಾರ್ಥಿಸೋಣ.

# ಅಡಿ ಟಿಪ್ಪಣಿ

೧) ರಂಗಸಂತ ಜಂಗಮ ಅಭಿನಂದನ ಗ್ರಂಥ – ಎಲ್.ಬಿ.ಕೆ.ಆಲ್ದಾಳ

೨) ಅದೇ – ಪು.ಸಂಖ್ಯೆ – ೯

೩) ಅದೇ – ಪು.ಸಂಖ್ಯೆ – ೯

೪) ರಂಗಸಂತ ಜಂಗಮ : ಬಳಸುಳಿ ಲೇಖನ – ಪು.ಸಂಖ್ಯೆ – ೪

೫) ಅದೇ – ಪು.ಸಂಖ್ಯೆ – ೫

೬) ಅದೇ – ಪು.ಸಂಖ್ಯೆ – ೫

೭) ಅದೇ – ಪು.ಸಂಖ್ಯೆ – ೫

೮) ರಂಗಸಂತ ಜಂಗಮ : ಅಭಿನಂದನ ಗ್ರಂಥಕ್ಕೆ, ಗೊ.ರು.ಚನ್ನಬಸಪ್ಪರ ಸಂದೇಶ ಪು.ಸಂಖ್ಯೆ – ೨೨

೯) ತುಷಾರ : ಮಾಸ ಪತ್ರಿಕೆ : ಕವನದ ಲೇಖಕ : ಸೋಮಶೇಖರ ನಂದರಗಿ
ಫೆಬ್ರುವರಿ–೧೯೯೩ ರ ಸಂಚಿಕೆ ಪು.ಸಂಖ್ಯೆ – ೨೩

೧೦) ರಂಗಸಂತ ಜಂಗಮ : ಅಭಿನಂದನ ಗ್ರಂಥ – ಪು.ಸಂಖ್ಯೆ – ೧೮

೧೧) ಅದೇ – ಪು.ಸಂಖ್ಯೆ – ೧೫೪

೧೨) ರಂಗ ಸಂಘಟಕರು – ಸಿ.ಜಿ. ಕೃಷ್ಣಸ್ವಾಮಿ – ಪು.ಸಂಖ್ಯೆ – ೧೩

೧೩) ಪ್ರಜಾವಾಣಿ ದಿ. ೨೧.೦೬.೨೦೧೫ – ಪು.ಸಂಖ್ಯೆ – ೬

# ಅಧ್ಯಾಯ – ೪
## ಎಲ್.ಬಿ.ಕೆ ಆಲ್ದಾಳರ ಸಾಹಿತ್ಯ ಸಾಧನೆ

ಸಮಾಜವನ್ನು ಮುನ್ನಡೆಸಬೇಕಾದ ಕಲಾ ಮಾಧ್ಯಮಗಳು ವ್ಯಾಪಾರದ ಪ್ರವೃತ್ತಿಹೊಂದಿವೆ. ಹಾಡು, ನೃತ್ಯ, ಸಿನೆಮಾ, ನಾಟಕ ಗುರುತಿಸಲಾಗದಷ್ಟು ಸಾಂಸ್ಕೃತಿಕ ವಾತಾವರಣವನ್ನು ಅಧಃಪತನದತ್ತ ಕೊಂಡೊಯ್ಯುತ್ತಿರುವುದನ್ನು ಕಾಣುತ್ತಿದ್ದೇವೆ. ಇದನ್ನು ತಡೆಗಟ್ಟಿ ಸಮಾಜಕ್ಕೆ ಉತ್ತಮ, ಸಾಂಸ್ಕೃತಿಕ ಕೊಡುಗೆ ನೀಡುವ ದೃಷ್ಟಿಯಲ್ಲಿ ಶ್ರೇಷ್ಠ ನಾಟಕಕಾರ ಎಲ್.ಬಿ.ಕೆ ಆಲ್ದಾಳರು ತಮ್ಮ ನಾಟಕದಲ್ಲಿ ಉತ್ತಮ ಕಲೆಗೆ ಅವಕಾಶ ನೀಡಿದ್ದು ಗಮನಾರ್ಹ.

ಆಲ್ದಾಳ ಅವರ ಪ್ರಥಮ ನಾಟಕ 'ಪತಿಭಕ್ತಿ' ಈ ಸಾಮಾಜಿಕ ನಾಟಕ ನಾಟಕಕಾರರ ಭವಿಷ್ಯವನ್ನೇ ಸುಂದರವಾಗಿ ಬದಲಾಯಿಸಿತು. ಕಡು ಬಡತನದಲ್ಲಿ ಹುಟ್ಟಿದರೂ, ಇವರ ಬರಹಗಳು ಮಾತ್ರ ಶ್ರೀಮಂತಿಕೆಯಿಂದ ಕಂಗೊಳಿಸುತ್ತಿವೆ. ನಾಟಕದ ಸಾರ್ವಭೌಮರೆನ್ನಿಸಿಕೊಂಡ ಆಲ್ದಾಳರು ಸಿರಿತನಕ್ಕಾಗಿ ಕೊರಗಲಿಲ್ಲ. ರಂಗಭೂಮಿಯನ್ನೇ ಅಪ್ಪಿಕೊಂಡು ಅದರ ಏಳ್ಗೆಗಾಗಿ ಶ್ರಮಿಸಿದರು. ರಂಗಭೂಮಿಗಾಗಿ, ರಂಗಭೂಮಿಯ ಪ್ರೇಕ್ಷಕರಿಗಾಗಿ ಅನೇಕ ನಾಟಕಗಳನ್ನು ಸೃಷ್ಟಿಸಿದರು. ಸಮಾಜದ ಒಳಿತಿಗಾಗಿ ಉತ್ತಮ ಕೃತಿಗಳನ್ನು ನೀಡಿದರು. ನೀಡುತ್ತಲೇ ಇದ್ದಾರೆ. ಸುಮಾರು ನೂರಕ್ಕೂ ಮೇಲ್ಪಟ್ಟು ಗ್ರಂಥಗಳನ್ನು ರಚಿಸಿದ್ದಾರೆ. ಬಡತನದ ಬವಣೆಯಿಂದಾಗಿ ಅನೇಕ ಗ್ರಂಥಗಳು ಪ್ರಕಟಣೆಗೊಂಡಿಲ್ಲದಿರುವುದು ಮನಸ್ಸಿಗೆ ನೋವುಂಟು ಮಾಡುವುದು ಸಹಜ, ರಂಗಭೂಮಿಯ ಸಮಗ್ರ ಬೆಳವಣಿಗೆಗೆ ಪ್ರಯತ್ನಿಸುತ್ತಿರುವುದನ್ನು ರಾಜ್ಯದ ರಂಗಾಸಕ್ತರು ಗಮನಿಸಿಬೇಕು. ನೆರವಿಗೆ ಮುಂದಾಗಬೇಕು.

ಆಲ್ದಾಳರ ಸಾಹಿತ್ಯ ಓದುತ್ತಾ ಇದ್ದರೆ "ಸಾಕ್ಷಾತ್ ಸರಸ್ವತಿಯ ಸಾಕ್ಷಾತ್ಕಾರ" ಆಗಿದೆಯೋ ಏನೋ ಎಂದು ಭಾಸವಾಗುತ್ತದೆ. ಕಲಿತದ್ದು ಅಲ್ಪ. ಅಂತರಾಳದಲ್ಲಿ ಆ ಶಿವನು ಇವರಿಗೆ ಕರುಣಿಸಿದ್ದು ಕಲ್ಪವೃಕ್ಷ. ಬೇಡಿದ್ದನ್ನು ಆಗಲೆ ಬರೆದು ಬೆರಗುಗೊಳಿಸುವ ಅಪೂರ್ವ ಗ್ರಂಥ ರಚನಾ ಸಾಮಾರ್ಥ್ಯ ಉಳ್ಳವರು ಸರ್ವಾಂಗೀಣ ಸಮೃದ್ಧಿಯ ಮೇರು ಪರ್ವತಜ್ಞಾನ ಕಣಜ.

# ಆಧ್ಯಾತ್ಮಿಕ, ಭಕ್ತಿ ಪ್ರಧಾನ ನಾಟಕಗಳು

## ವೈರಾಗ್ಯ ಚಕ್ರವರ್ತಿ ಶ್ರೀ ಕರಿಘೂಳೇಶ್ವರ ಮಹಾತ್ಮೆ

**(ಅರ್ಥಾತ ಮೂರು ಮುತ್ತುಗಳು)**

ರಂಗದಿಗ್ಗಜ ಎಲ್.ಬಿ.ಕೆ.ಆಲ್ದಾಳ ಅವರ "ವೈರಾಗ್ಯಚಕ್ರವರ್ತಿ ಶ್ರೀ ಕರಿಘೂಳೇಶ್ವರ ಮಹಾತ್ಮೆ ಅರ್ಥಾತ 'ಮೂರು ಮುತ್ತುಗಳು', ಸಾಮಾಜಿಕ, ಅಧ್ಯಾತ್ಮಿಕ ತತ್ವಗಳಿಂದೊಡಗೂಡಿದ ಜನಪ್ರಿಯ ನಾಟಕ ಎಂದು ಪ್ರೇಕ್ಷಕರಿಂದ ಸ್ವಾಗತಿಸಲ್ಪಟ್ಟಿದೆ. ಶ್ರೀ ಕರಿಘೂಳೇಶ್ವರರು ನಮ್ಮ ನಾಡಿನ ಅನುಭಾವಿ ಕವಿ ಮತ್ತು ಸಂತ, ವೈರಾಗ್ಯ ಚಕ್ರವರ್ತಿ ಎಂದು ಅಂಕಿತರಾದ ಇವರು ಶಿಶುನಾಳ ಶರೀಫ್‌ಸಾಹೇಬನಂತೆ, ಕಡಕೋಳದ ಮಡಿವಾಳೇಶ್ವರರಂತೆ ಅನೇಕ ಅನುಭಾವ ಗೀತೆಗಳನ್ನು ರಚಿಸಿದ್ದಾರೆ.

ಶ್ರೀಕರಿಘೂಳೇಶ್ವರ ಮಹಾತ್ಮೆ ಎರಡು ದಶಕಕ್ಕೂ ಹಿಂದೆ ರಚಿಸಿದ ನಾಟಕವಾಗಿದ್ದು ಇಪ್ಪತ್ತಾರು ಪ್ರವೇಶಗಳನ್ನು ಹೊಂದಿದ್ದು, ನಾಟಕ 'ನಾಂದಿ' ಹಾಡಿನೊಂದಿಗೆ ರಂಗಭೂಮಿಯ ತೆರೆಯ ಮುಂದೆ ವಿಜೃಂಭಿಸುತ್ತಿದೆ. ಇದೊಂದು ಭಕ್ತಿಭಾವತುಂಬಿದ ಕಾಶಿಯೇ ಸರಿ.

'ಶ್ರೀಕರಿಘೂಳೇಶ್ವರ ಮಹಾತ್ಮೆ' ನಾಟಕದ ನಾಂದಿ ಹಾಡಿನ ನಂತರ ಆರಂಭಗೊಳ್ಳುವ ಪ್ರಪ್ರಥಮ ಪ್ರವೇಶ ಹಿಡಿ ನಾಟಕದ ತಿರುಳನ್ನೆ ಪ್ರೇಕ್ಷಕರ ಕಿವಿಗೆ ಹಾಕಿದೆ ಎಂದರೆ ತಪ್ಪಾಗಲಾರದು. ಈ ಪ್ರವೇಶದಲ್ಲಿ ಪೋಲಚಿಂತೆ ಬಂಡೆ ಗುರುಗಳ ಶಿಷ್ಯರಾದ ಶಂಕರಾರಾಧ್ಯರು ಮತ್ತು ಮೂವರು ಮಕ್ಕಳ ತಂದೆಯಾದ ಶ್ರೀ ಶರಣಯ್ಯಾ ಸ್ವಾಮಿ ಅವರುಗಳ ನಡುವಣ ಸಂಭಾಷಣೆ ನಾಟಕದ ಮುಂದಿನ ಆಟಕ್ಕೆ, ಓಟಕ್ಕೆ ಮುನ್ನುಡಿಯಾಗಿದೆ. ಕಲಬುರ್ಗಿಯ ಗಡಿಹಳ್ಳಿ ಮಹಾರಾಷ್ಟ್ರದ ಗಡಿಗೆ ಹತ್ತಿರದ ಅಕ್ಕಲಕೋಟ ಬಳಿ ಇರುವ ಗೌಡಗಾಂವದ ಶರಣಯ್ಯನವರಿಗೆ ಮೂವರು ಮಕ್ಕಳು, ಹಿರೇ ಮಗ ವೈರಾಗ್ಯ ಚಕ್ರವರ್ತಿ ಕರಿಘೂಳಯ್ಯ ಎರಡನೇಮಗ ರಾಮಲಿಂಗಯ್ಯ ಅವಧೂತರು, ಮೂರನೇ ಮಗ ಮುರುಗೇಂದ್ರಯ್ಯಾ ವರಕವಿ. ಈ ತ್ರಿಮೂರ್ತಿಗಳ ತಾಯಿ ಸಾಧ್ವಿ ಬಸವಲಿಂಗಮ್ಮ ಇಂಥ 'ಮೂರು ಮುತ್ತು'ಗಳಿಗೆ ಜನ್ಮಕೊಟ್ಟ ತಂದೆ-ತಾಯಿಗಳ ಜನ್ಮಸಾರ್ಥಕ. ಆದರೆ ಈ ಕುಟುಂಬಕ್ಕೆ ಬಡತನ ಎಂಬ ಭೂತ ಬೆನ್ನುಬಿಡದೇ ಬೆನ್ನತ್ತಿದೆ. ಬರುವ ಸೈಪಾಕದಲ್ಲೇ ಹೊಟ್ಟೆ ತುಂಬಿಸಿಕೊಳ್ಳುವುದೇ ಕಷ್ಟವಾಗಿದೆ. ಇಪ್ಪತ್ತೈದು ರೂಪಾಯಿಗಳ ಸಾಲತೀರಿಸಲು ಸಾಧ್ಯವಾಗದ ಪರಿಸ್ಥಿತಿ ಎದುರಾದಾಗ "ಸಾಲಗಾರನು ವಸೂಲಿಗೆ ಬರುವ ಸುದ್ದಿತಿಳಿದ ಶರಣಯ್ಯಾ 'ನಡುರಾತ್ರಿಯಲ್ಲಿ ನಲ್ಲೆಯನ್ನು ಬಿಟ್ಟುಹೋದ ನಳ ಮಹಾರಾಜನಂತೆ" ರಾತ್ರೋರಾತ್ರಿ ಹೆಂಡಿರು ಮಕ್ಕಳೊಂದಿಗೆ ಊರು ಬಿಟ್ಟ".[೧]

"ಶಂಕರಾರಾಧ್ಯರು : ಶರಣಯ್ಯನವರೆ। ಇದು ಕರ್ಮದ ಶರೀರ, ತಾನು ಮಾಡಿದ ಕರ್ಮ ತಾನುಣ್ಣಲೇ ಬೇಕು. ಶ್ರೀ ಕೃಷ್ಣಪರಮಾತ್ಮನು ಗೀತೆಯಲ್ಲಿ ಹೀಗೆ ಹೇಳಿದ್ದಾನೆ, ಕರ್ಮಕ್ಕೆ ಕಟ್ಟುಬಿದ್ದ ಚರಾಚರ ಜಗತ್ತು ಕರ್ಮಫಲ ಭೋಗಿಸಬೇಕೆಂದು; ಪ್ರತ್ಯಕ್ಷ ಶ್ರೀ ಕೃಷ್ಣನಿಗೂ ಮುತ್ತಲಿಲ್ಲವೇ ಆ

ಕರ್ಮ? "ಹತ್ತು ಭವದಲ್ಲಿಬಂದು ಎತ್ತು, ತುರುಗವಕಾಯ್ದು, ಮತ್ತೆ ಪಾಂಡವರಿಗೆ ಆಳಾದ ಹರಿಮುನ್ನ ಮೆತ್ತಿದಾ ಕರ್ಮಸರ್ವಜ್ಞ" ಈ ಕರ್ಮಯಾರಿಗೂ ಬಿಟ್ಟಿಲ್ಲ, ನಮ್ಮ ನಿಮ್ಮಂಥವರ ಪಾಡೇನು?" [೨]

**ಶರಣಯ್ಯಾ : ಎಲ್ಲಿಯವರೆಗೆ ಈ ಕರ್ಮ?**

**ಶಂಕರಾರಾಧ್ಯರು : ಈ ಕಾಲ ಬರುವವರೆಗೆ ಈ ಕಾಲ ಹೋಗುವವರೆಗೆ?**

ನಮ್ಮ ಆಶ್ರಮಕ್ಕೆ ನಿಮ್ಮ ಮೂವರು ಮಕ್ಕಳು ನನ್ನ ಬಳಿ ವಿದ್ಯೆ ಕಲಿಯಲು ಬಾರದೇ ಇದ್ದಲ್ಲಿ ನನಗೆ ಮೋಕ್ಷವೇ ಸಿಗುತ್ತಿರಲಿಲ್ಲ, ಇದು ನನ್ನ ಗುರುಗಳ ಆಜ್ಞೆಯಾಗಿತ್ತು. ಈಗ ಅವರು ಬರುತ್ತಿರುವುದರಿಂದ ನಾನು ನಿರಾಳನಾಗಿದ್ದೇನೆ. ನಿಮ್ಮ ಮಕ್ಕಳ ಅಯ್ಯಾಚಾರ ಇಟ್ಟುಕೊಳ್ಳೋಣ ಅದಕ್ಕಾಗಿ ಚಿಂತಿಸಬೇಡಿ ಎಂದು ಶರಣಯ್ಯನವರನ್ನು ಶಂಕರಾರಾಧ್ಯರು ಸಮಾಧಾನ ಪಡಿಸಿದರು. ಇದೇ ಸಂದರ್ಭದಲ್ಲಿ ಮೂವರು ಮಕ್ಕಳು ಬ್ರಹ್ಮ, ವಿಷ್ಣು, ರುದ್ರರಂತೆ ಅಪರವತಾರಿಗಳಾಗಿದ್ದಾರೆಂದು. ಇವರ ಭವಿಷ್ಯ ವಿಚಿತ್ರವಾಗಿದ್ದರೂ ಸತ್ಯವಾಗಿದೆ. ನಿಮ್ಮ ಮಕ್ಕಳಿಂದ ಏನಾದರೂ ಆಶೆ ಇಟ್ಟುಕೊಂಡಿದ್ದರೆ ತೆಗೆದುಹಾಕಿ. ಮೂವರು ಒಂದೆಡೆ ಕೂಡಿದರೆ ಏನಾದರೊಂದು ದುರ್ಘಟನೆ ಸಂಭವಿಸುತ್ತದೆ. ಇದರಿಂದಾಗಿ ತಂದೆಗಾದ ಚಿಂತೆ ಬಿಡಿಸಿ ಹೇಳಬೇಕಾಗಿಲ್ಲ. ನಿಮ್ಮ ಮಕ್ಕಳು ಲೋಕೋದ್ಧಾರಕರಾಗುತ್ತಾರೆ. ನಿಮ್ಮ ಮಕ್ಕಳು ಅಂತರಜ್ಞಾನಿಗಳು ಇಬ್ಬರು ಕೂಡಿ ಇದ್ದಾಗ, ಮೂರನೇಯವನು ಬರುವುದರಲ್ಲಿ ಇವರಿಬ್ಬರು ಕಂಡು ಹಿಡಿದು ಅಲ್ಲಿಂದ ಒಬ್ಬರು ಹೋಗುತ್ತಾರೆ. ಇದುವೇ ಆಲ್ದಾಳರ ಹೊಸ ವರಸೆ, ನಾಟಕವನ್ನು ನೋಡುಗರಿಗೆ, ಓದುಗರಿಗೆ ಕೌತುಕಮಯವಾಗಿಸಿದ್ದಾರೆ.

ಮಹಾತಾಯಿ ಬಸವಲಿಂಗಮ್ಮಾ ಅವರ ಮೂವರು ಮಕ್ಕಳು ಬೆಳೆದು ಗಳಿಸಿ ಸುಖವಾಗಿರುತ್ತಾರೆಂಬ ಆಸೆ ನಿರಾಸೆಯಲ್ಲಿ ಎಲ್ಲಿ ಮರೆಯಾಗುವುದೆಂಬ ಚಿಂತೆ ಕಾಡಿಸಹತ್ತಿತು. ಇದನ್ನು ಕಂಡ ಮಗ ರಾಮಲಿಂಗಯ್ಯ. "ಹೌದಮ್ಮ! ಭವಿಷ್ಯದ ಬಗ್ಗೆ ನೀನೇಕೆ ಚಿಂತೆ ಮಾಡ್ತಿಯಾ? ಆಗುವ ಹಾಗೆ ಆಗುತ್ತದೆ, ಹೋಗುವ ಹಂಗೆ ಹೋಗುತ್ತದೆ, ಸಂತಿ ಮಾಡಿದರಿಲ್ಲ, ಚಿಂತಿ ಮಾಡಿದರಿಲ್ಲ ಹರನ ನೆನಹುವಿನಲ್ಲಿದ್ದರೆ ಸಾಕು. ಅಮ್ಮ ಈ ಶರೀರಕ್ಕೆ ನೆಚ್ಚಿ ನೀ ಕೆಡಬೇಡ ಹೊಲಸುನಾರುವ, ಕೀವು ರಕ್ತವನ್ನು ಮುಚ್ಚಿ ಮಲಮೂತ್ರದ ಉಗ್ರತೆಯಲ್ಲಿ ಕೊಚ್ಚಿ ಎಲವು ತೊಗಲಿನಿಂದ ಸುತ್ತಿಕೊಂಡ ಈ ಹಂದರ ಒಂದು ದಿವಸ ನಾಶವಾಗುವುದೇ ಹೊರತು ನಿಶ್ಚಿತವಲ್ಲ ಅಂದಾಗ ಭವಿಷ್ಯದ ಮಾತೇನು ಬಂತು. ತಮ್ಮ ಮುರುಗೇಂದ್ರಯ್ಯಾ ಬರುವ ಹೊತ್ತಾಯ್ತು".[೩]

ಬಸವಲಿಂಗಮ್ಮ ತಾಯಿಯ ಮೂವರು ಮಕ್ಕಳು ಅಪ್ಪಟ ಚಿನ್ನವಿದ್ದಂತೆ ಎಂದು ಹೇಳುವಲ್ಲಿ ಅವರ ಗುರುಗಳಾದ ಶಂಕರಾಧ್ಯರು ಹೀಗೆ ಹೇಳುತ್ತಾರೆ, "ಶಂಕರಾಧ್ಯರು; ನಿಜತಾಯಿ ನಿಮ್ಮ ಮೂವರು ಮಕ್ಕಳು, ಸುಳ್ಳು, ಕಳವು, ಹಾದರ ಈ ಮೂರಕಷ್ಟೆ ಅಲ್ಲ ಕಾಮ, ಕ್ರೋಧ, ಲೋಭ, ಮೋಹ, ಮದ ಮತ್ಸರ ಈ ಆರರಿಂದಲೂ ಮುಕ್ತರಾಗಿದ್ದಾರೆ. ಆರು ಮೂರು ಅಳಿಯ ಬೇಕೆಂದು ಹೇಳುವ ಶರಣರ ವಾಣಿಯನ್ನು ಪರಿಪಾಲಿಸುತ್ತಿದ್ದಾರೆ".[೪]

ಮೂವರು ಸಹೋದರರಲ್ಲಿ ಮುರುಗೇಂದ್ರಯ್ಯ ಮದುವೆಯಾಗಿ ಸತಿ ಮಾಣಿಕ್ಕೆಮ್ಮಾಳೊಂದಿಗೆ ಸಂಸಾರ ಸಾಗರದಲ್ಲಿ ತೇಲುತ್ತಿದ್ದರೂ ಸಂಸಾರದ ಬಗ್ಗೆ ಜಿಗುಪ್ಸೆ ವ್ಯಕ್ತ ಪಡಿಸುವ ಪರಿ ಹೀಗಿದೆ. " ಮುರುಗೇಂದ್ರಯ್ಯಾ: ಶರಣಿ ವಿಚಾರಿಸಿ ನೋಡಿದರೆ ಈ ಸಂಸಾರ ದುಃಖಸಾಗರ, ನಿಸ್ಸಾರ, ನಾವೆಷ್ಟು ಅದಕ್ಕೆ ಅಂಟಿಕೊಳ್ಳುತ್ತೇವೆಯೋ ಅದು ನಮ್ಮನ್ನು ಬಲವಾಗಿ ಅಂಟಿಕೊಂಡು ಹಿಂಗಾಣಿ–ಮುಂಗಾಣಿ ಲಾಗಾ ಹೊಡೆಯಾಕ– ಹಚ್ಚತೈತಿ, ಅಂತೆಯೇ ಶಿವಶರಣರು ಪ್ರಪಂಚದಲ್ಲಿದ್ದರೂ ಸಂಸಾರಕ್ಕೆ ಬೆಲೆ ಕೊಡದೇ ಸಸಾರವನ್ನಾಗಿ ಮಾಡಿಕೊಂಡರು. ಪಾರಮಾರ್ಥದ ಮೆಟ್ಟಿಲು ಹತ್ತಿದರು".[೫] ಪತಿಯ ಹೆಜ್ಜೆಯಲ್ಲಿ ಹೆಜ್ಜೆ ಇರಿಸುವ ಮುರುಗೇಂದ್ರಯ್ಯನ ಸತಿ ಶಿರೋಮಣಿ ಮಾಣಿಕ್ಕೆಮ್ಮಾ ಯಾವುದರಲ್ಲೂ ಹಿಂದೆ ಬೀಳದೇ ಪತಿಗೆ ತಕ್ಕ ನುಡಿಯನ್ನೇ ನುಡಿಯುತ್ತಾಳೆ. ಕೇಳಿ, "ಮಾಣಿಕ್ಕೆಮ್ಮಾ: ಹೌದು ಸ್ವಾಮಿ, ಇಡೀ ತಾಲೂಕಿನ ಗುಳಸಾರದ ಶರಣರು, ಹಂಗನಳ್ಳಿಯ ಗುರುಲಿಂಗಪ್ಪಾ ಶರಣರು, ಶಿಶುನಾಳ ಶರೀಫ್‌ಸಾಹೇಬರು, ಕಲಬುರ್ಗಿಯ ಶರಣಬಸವೇಶ್ವರರು ರಾಮಕೃಷ್ಣ ಪರಮಹಂಸರು, ಅಬ್ಬೆ ತುಮಕೂರಿನ ವಿಶ್ವಾರಾಧ್ಯರು ಇವರೆಲ್ಲಾ ಪ್ರಪಂಚದಿಂದಲೇ ಪಾರಮಾರ್ಥದ ಶಿಖರವನ್ನೇರಿದರು ಶಿವನನ್ನೂ ಕಂಡರು".[೬]

ಕರಿಘೂಳೇಶ್ವರ ಅವರ ಹಿಂದಿನ ಗುರುಗಳಾಗಿದ್ದ ಶಂಕರಾಧ್ಯರೇ ಇಂದು ಪುನರಜನ್ಮತಳೆದು ಕರಿಮುಲ್ಲಾರಾಗಿ ವೈರಾಗ್ಯ ಚಕ್ರವರ್ತಿ ಕರಿಘೂಳೇಶ್ವರ ಬಗ್ಗೆ ಇದ್ದ ಅಭಿಮಾನವನ್ನು ವ್ಯಕ್ತ ಪಡಿಸಿದ್ದು ಅವರ ಮಾತಿನಲ್ಲಿಯೇ ತಿಳಿದುಕೊಳ್ಳೋಣ.

"ಕರಿಮುಲ್ಲಾ–ಕರಿಘೂಳೇಶಾ, ನಿನ್ನ ವೈರಾಗ್ಯದ ವಿರತಿಗೆ ನಾವು ಮೆಚ್ಚಿದೇವು. ನಿನ್ನದು ಖಡ್ಗದ ಮೇಲೆ ನಡೆಯುವ ಕಸರತ್ತಿನಂತೆ, ಹಾವಿನ ಸಂಗ ಮಾಡಿದಂತೆ, ಬೆಂಕಿಯ ಮಧ್ಯದಲ್ಲಿ ಬಾಳುವಂತೆ, ಸಿಡಿಲು ಹಿಡಿಯುವ ಸಾಹಸದಂತೆ, ಹಲ್ಲಿಲ್ಲದ ಏಣಿಏರುವ ಕುತೂಹಲದಂತೆ, ಸೊಕ್ಕೇರಿಸಿದ್ದನ್ನು ಬಯಸುವ ಇಂದ್ರಿಯಗಳನ್ನು ಮನದ ಮಂಗತನವನ್ನು ದೈಹಿಕ ಹಸಿವನ್ನು ನಿಗ್ರಹಿಸುವುದು ಸಾಮಾನ್ಯ ಮಾನವನ ಮಾತಲ್ಲ, ನೀನು ಅಸಾಮಾನ್ಯನು, ಅಲೌಕಿಕನು ಇಂದ್ರಿಯಗಳ ಉಪಟಳದಿಂದ ಮುಗ್ಗರಿಸಿ ಮೂಲೆ ಗುಂಪಾದ ಮುನಿಪುಂಗವರೆಷ್ಟೋ.[೭]

ನಾಟಕಕಾರ ಎಲ್.ಬಿ.ಕೆ.ಆಲ್ದಾಳ ಅವರ 'ವೈರಾಗ್ಯ ಚಕ್ರವರ್ತಿ ಶ್ರೀ ಕರಿಘೂಳೇಶ್ವರ ಮಹಾತ್ಮೆ' ಎಂಬ ನಾಟಕ ಅನೇಕ ಮಹಾತ್ಮೆಗಳನ್ನೇ ಸೃಷ್ಟಿಸಿದೆ. ತ್ರಿಮೂರ್ತಿಗಳಾದ ಅವಧೂತರಾಮಲಿಂಗಯ್ಯ, ವರಕವಿ ಮುರುಘೇಂದ್ರ ಮತ್ತು ನಾಟಕದ ಕೇಂದ್ರಬಿಂದು ಎನ್ನಿಸಿಕೊಂಡಿರುವ ಶ್ರೀ ಕರಿಘೂಳೇಶ್ವರರು ಎಲ್ಲರೀತಿಯಿಂದಲೂ ಜನಮೆಚ್ಚುವ ಗುಣವಂತರು. ಸ್ವಭಾವದಲ್ಲಿ ವ್ಯತ್ಯಾಸವಿದ್ದರೂ ಎಲ್ಲರ ಹೃದಯ ಸೇವಾ ಮನೋಭಾವನೆಯದ್ದು'. ಆದರೆ ಅದ್ಯಾವ ಕರ್ಮವೋ ಈ ತ್ರಿಮೂರ್ತಿಗಳು ಒಂದೇ ಕಡೆ ಇರುವಂತಿಲ್ಲ, ಸೇರುವಂತಿಲ್ಲ ಇದು ಆಶ್ಚರ್ಯಎನ್ನಿಸಿದರೂ ಅನ್ಯ ಮಾರ್ಗವೇ ಇಲ್ಲ. ಮೂರನೇ ಮಗ ವರಕವಿ ಮುರುಗೇಂದ್ರಯ್ಯನವರೆ ಸ್ವತಃ ಸಹೋದರರು ಒಂದೆಡೆ ಸೇರಿದರೆ ಆಗುವ ಅನಾಹುತವನ್ನೇ ಈ ರೀತಿ ಹೇಳುತ್ತಾರೆ. "ಮುರುಗೇಂದ್ರಯ್ಯಾ:– ನಿಮ್ಮೆಲ್ಲರಿಗೂ ಒಂದ್ಮಾತು, ನಮ್ಮ ಮೂವರನ್ನು ಕೂಡಿ ಹಾಕುವ ಪ್ರಯತ್ನವನ್ನು ಮಾತ್ರ ಮಾಡಬಾರದು ಅಂತ, ಈಗಲೇ ಮುನ್ನೆಚ್ಚರಿಕೆ ಕೊಡುತ್ತೇನೆ. ಮೊನ್ನೆ ಯಾದಗೀರ ತಾಲೂಕಿನ ಯಡ್ಡಹಳ್ಳಿಯಲ್ಲಿ ನಾವು ಅಕಸ್ಮಾತ ಕೂಡಿದಕ್ಕೆ ಆಲೂರು

ಸಾವುಕಾರ ಶರಣಪ್ಪನ ಕೊಲೆಯಾಯಿತು ಇಂತಹ ಘಟನೆಗಳು ಕೆಲವುಕಡೆ ನಡೆದಿವೆ".[೮]

ಇಂತಹ ದುರ್ಘಟನೆಯಿಂದಾಗಿ ಪ್ರೇಕ್ಷರಲ್ಲಿ ಒಂದು ರೀತಿಯಲ್ಲಿ ಮುಂದೇನು ಎಂಬ ಕುತೂಹಲ, ಭಯಗಳೆರಡು ಎದುರಾಗುತ್ತವೆ. ಒಂದು ರೀತಿಯಲ್ಲಿ ನಾಟಕ ಓದುಗರಿಗೂ, ನೋಡುಗರಿಗೂ 'ಥ್ರಿಲ್' ಎನ್ನಿಸುತ್ತದೆ.

ಅವಧೂತರಾಗಿರುವ ರಾಮಲಿಂಗಯ್ಯ ಅವರು ಜನರಿಗೆ ನೀಡಿರುವ ತತ್ವದ ಹಾಡುಗಳು ಪ್ರಿಯವಾಗಿರುವವು ಅಲ್ಲದೆ ಸರಿದಾರಿಯಲ್ಲಿ ಹೆಜ್ಜೆ ಇರಿಸಲು ಎಚ್ಚರಿಕೆಯ ತತ್ವಪದಗಳಾಗಿವೆ. ಬಾಳ ಬೆಳಗಿಸುವ ದಾರಿ ದೀಪವಾಗಿವೆ. ಕರಿಘೂಳೇಶ್ವರ ಮಾತಿನಲ್ಲಿ ಕೇಳಿ "ರಾಮಲಿಂಗಯ್ಯ! ಮುರುಗೇಂದ್ರಯ್ಯಾ ಹಾಗೂ ನೀನು ಕೂಡಿ ಬರೆದ ತತ್ವದ ಹಾಡುಗಳು ಮುಂದಿನ ಭವಿಷ್ಯವನ್ನೇ ಹೇಳುತ್ತವೆ. ತಾಯಿ ಮಗಳಿಗೊಬ್ಬನೆ ಪುರುಷ, ಸಾಹುಕಾರರು ಸನ್ಯಾಸಿಗಳಾಗುವುದು, ತಂದೆ–ಮಕ್ಕಳ ನ್ಯಾಯ, ಬಚ್ಚಲು ಕುಣಿಯಿಂದ ಉಚ್ಚಿ ಬೀಳುವಾಗ ಎಚ್ಚರ ತಪ್ಪಿದ್ದು, ಗಂಡ–ಹೆಂಡಿರಜಗಳ, ಭೂಮಂಡಲಕ್ಕೂ ಬಲಿ ಬೀಸುವುದು ಭಂಡ ಗೆಟ್ಟ ಸಾಧುಗಳೆಲ್ಲರೂ ಕೂಡಿ ಕಂಡಕಡೆ ನೋಡುವುದು, ಎಂಥಾ ಭವಿಷ್ಯವನ್ನೇ ಬರೆದಿರುವಿರಿ ಧನ್ಯ, ಧನ್ಯ ನಿಮ್ಮಂಥ ಶಿಷ್ಯರಿಗೆ ಪಡೆದುಕೊಂಡ ನಾನೇ ಧನ್ಯ". [೯]

ರಾಮಲಿಂಗಯ್ಯ ಕೋಮುಭಾವನೆಯನ್ನು ಸೌಹಾರ್ದಯುತವಾಗಿ ಕಂಡು ಕೊಳ್ಳುವ ಸ್ವಭಾವ ಬೆಳೆಸಿಕೊಂಡಿದ್ದರು. ರಾಮಲಿಂಗಯ್ಯ ಮರತೂರಕ್ಕೆ ಹೋದಾಗ "ಮುಸ್ಲಿಂರ ಪ್ರಾರ್ಥನಾ ಮಂದಿರಕ್ಕೆ ತೆರಳಿ 'ಅಲ್ಲಾಹು ಅಕ್ಬರ' ಅಂತ 'ಅಜಾ' ಕೊಟ್ಟರು. ಇದನ್ನು ಅರಿತ ನಿಜಾಮ ಸರಕಾರ ರಾಮಲಿಂಗಯ್ಯನಿಗೆ "ಉಲುಮೆ ಮಾರಫತ್" "ತೋಹಿದೆ ಇಲಾಹಿ" ದಾಟಿದ್ದೀರಂತ "ನೂರ–ಎ–ನಬಿ" ಎಂದು ಬಿರುದುಕೊಟ್ಟು ಸನ್ಮಾನಿಸಿದೆ". [೧೦]

ರಾಮಲಿಂಗಯ್ಯ ನವರ ಇನ್ನೊಂದು ವಿಶೀಷವೆಂದರೆ 'ತುಟಿಗೆ ತುಟಿ ಹತ್ತಲಾರದಂತಹ ಹಾಡು ಬರೆದಿರುವುದು! ಕೇಳಿ "ನಳಿಸುತೆ ಇಳೆಯೊಳಗೆ ಉದಿಸಿಹಳೋ..." ಎಂಬುದು.

ಮೂವರ ಬಾಳು, ಗುರಿ, ವಿಚಾರಗಳು ಬೇರೆ ಬೇರೆಯಾಗಿದ್ದರೂ ಎಲ್ಲರು ಜನಹಿತವನ್ನೇ ಕಾಪಾಡುವುದನ್ನು ಅರಿತುಕೊಂಡು ಅದರಂತೆ ನಡೆದುಕೊಂಡರು.

ಭಾರತೀಯ ಸಂಸ್ಕೃತಿಯನ್ನು ಇಡೀ ವಿಶ್ವವೇ ಕೊಂಡಾಡುತ್ತಿರುವುದಕ್ಕೆ ಕರಿಘೂಳೇಶ್ವರ, ಮುರುಗೇಂದ್ರಯ್ಯ, ರಾಮಲಿಂಗಯ್ಯ ಅವರಂಥ ಸಾಧು ತತ್ವ ಹೊಂದಿರುವವರೇ ಕಾರಣ, "ನಮ್ಮದು ಹೃದಯ ಮತ್ತು ಬುದ್ಧಿಯನ್ನು ಪೂಜಿಸುವ ಸಂಸ್ಕೃತಿ. ಉದಾರವಾದ ಭಾವನೆ ಮತ್ತು ನಿರ್ಮಲವಾದ ಜ್ಞಾನದಿಂದ ಜೀವನದಲ್ಲಿ ಸೌಂದರ್ಯವನ್ನು ಬೀರುವ ಸಂಸ್ಕೃತಿ, ಹೃದಯಕ್ಕೆ ಜ್ಞಾನ ವಿಜ್ಞಾನಗಳ ಜೋಡನ್ನು ಇತ್ತು ಸಂಸಾರದಲ್ಲಿ ಸವಿಯನ್ನು ಹರಡುವ ಸಂಸ್ಕೃತಿಯು ಇದು. ಭಾರತಿಯ ಸಂಸ್ಕೃತಿ ಎಂದರೆ ಕರ್ಮ, ಜ್ಞಾನ, ಭಕ್ತಿಗಳ ಜೀವಂತ ಮಹಿಮೆಯ ಚಿತ್ರ. ಶರೀರವನ್ನು, ಬುದ್ಧಿಯನ್ನು ಮತ್ತು ಹೃದಯವನ್ನು ಯಾವಾಗಲೂ ಸೇವೆಯಲ್ಲಿ ನಿರತವಾಗಿಸುವ

ಪ್ರಭಾವವುಳ್ಳದ್ದು". [೧೧]

ಒಂದು ನಾಟಕವೆಂದರೆ ವ್ಯಕ್ತಿಯ ಸಂಪೂರ್ಣ ಸಂಸ್ಕೃತಿ, ಪಾಂಡಿತ್ಯ, ವಿಚಾರ ಮಂಥನಗಳ ಕೆನೆಯಾಗಿರುತ್ತದೆ. ಆಗಿರಲೇಬೇಕು. ನಿಮ್ಮ ಆಯ್ಕೆಯ ಅಭಿರುಚಿಯ, ಆಸಕ್ತಿಗಳೊಂದಿಗೆ ನೋಡುಗರ ಅಭಿರುಚಿ, ಆಸಕ್ತಿ, ವಯೋಧರ್ಮ, ಮನೋಧರ್ಮಗಳನ್ನು ಗಮನಿಸಬೇಕು. ಆಲ್ದಾಳ ಅವರ ನಾಟಕಗಳು ಇವೆಲ್ಲವುಗಳನ್ನು ಗಮನದಲ್ಲಿರಿಸಿಕೊಂಡೆ ನಾಟಕಗಳನ್ನು ಸೃಷ್ಟಿಸುವ ಕಲೆ ಕರಗತಿಸಿ ಕೊಂಡಿದ್ದಾರೆ.

ಆಲ್ದಾಳರು, 'ನಾನೊಬ್ಬನೇ ಕನಸು ಕಂಡರೆ ಅದುಬರೀ ಕನಸು, ನಾವೆಲ್ಲ ಒಂದು ಗೂಡಿ ಕನಸುಕಂಡರೆ ಅದು ನನಸು' ಎನ್ನುವ ನಾಣ್ಣುಡಿಯಂತೆ ನಡೆಯುತ್ತಿದ್ದಾರೆ. ಜೀವನವೆಂದರೇ ಬರೀ ಹಣ ಗಳಿಸುವುದು, ಉಣ್ಣುವುದು ತಿನ್ನುವುದು, ಭೋಗಲಾಲಸೆ, ಅತೀ ಸುಖಪಡುವ ಹವಣಿಕೆ ಮಾತ್ರವಲ್ಲ... ಅದು ಸಾಹಿತ್ಯ, ಸಂಸ್ಕೃತಿಯ ಅವಿಭಾಜ್ಯ ಅಂಗವಾಗಬೇಕು. ಎನ್ನುವುದೇ ಅವರ ಆಶಯವಾಗಿದೆ. ಇದನ್ನೇ ಆಲ್ದಾಳರು ತಮ್ಮ ನಾಟಕಗಳಲ್ಲಿ ಅಳವಡಿಸಿ ಕೊಟ್ಟಿದ್ದಾರೆ.

ಮುರುಗೇಂದ್ರಯ್ಯಾ ತಮ್ಮ ಇಹಲೋಕದ ಯಾತ್ರೆ ಮುಗಿಯಿತು ಎಂಬ ಮುನ್ಸೂಚನೆಯನ್ನು, ನಾವೂ ಒಂದು ದೀವ್ಸ ಹೋಗವ್ರ ಅದೀವಿ, ಮರದಾಗ ಹಣ್ಣಾದ ಎಲಿ ಉದರಾಕ ಬಂದಾಗ ಉದರ ಬೇಕಲ್ಲಪ್ಪಾ..... ಎಂದು ನುಡಿಯುತ್ತಿರುವಂತೆ ಶ್ರೀ ಕರಿಘೂಳೇಶ್ವರರಲ್ಲಿ ಶ್ರೀ ಮುರುಗೇಂದ್ರ ಶಿವಯೋಗಿಗಳು ಬೆರೆತರು. ಈ ಶಿವ ಸಮಯದಲ್ಲಿ ಮೂರು ಮುತ್ತುಗಳು ಆಡಿದ ನಾಟಕಕ್ಕೆ ಮಂಗಲವಾಯಿತು.

ವೈರಾಗ್ಯ ಚಕ್ರವರ್ತಿ ಶ್ರೀ ಕರಿಘೂಳೇಶ್ವರ ಮಹಾತ್ಮೆ ನಾಟಕ ಗ್ರಾಮೀಣ ಭಾಗದ ಜನಮನವನ್ನು ರಂಜಿಸುವುದರೊಂದಿಗೆ ಮಹಿಳೆಯರಲ್ಲಿ ಭಕ್ತಿಯ ಮಹಾಪೂರವೇ ಹರಿಯುವಂತೆ ಮಾಡಿದೆ ಎಂದರೆ ಆಲ್ದಾಳರ ನಾಟಕದ ಕಲೆಯೇ ಅದ್ಭುತವಾಗಿದೆ.

ನಾಟಕದಲ್ಲಿ ಏನಿದೆ ಎಂದು ಕೇಳುವ ಬದಲು ಏನಿಲ್ಲ ಎಂದು ಕೊಂಡು ವಿಚಾರ ಮಂಥನ ಮಾಡಿರಿ. ನಾಟಕದಲ್ಲಿ ಭಕ್ತಿ ರಸವಂತೂ ತುಂಬಿತುಳುಕಿದೆ ಅದರ ಜೊತೆ-ಜೊತೆಯಲ್ಲಿ ಹಾಸ್ಯರಸವೂ ಹೊಳೆಯಾಗಿ ಹರಿದಿದೆ. ಸಣ್ಣೆಪ್ಪ ತ್ರಿಮೂರ್ತಿಗಳಾದ ಕರಿಘೂಳಯ್ಯ, ರಾಮಲಿಂಗಯ್ಯ, ಮುರುಗೇಂದ್ರಯಾ ಇವರುಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ಊರೂರು ಅಲೆಯುವವ ಹಾಗೂ ಸಣ್ಣೆವ್ವ ಇವರ ಸಂವಾದ ಪ್ರೇಕ್ಷಕರನ್ನು ನಕ್ಕು-ನಕ್ಕು ನಲಿಯುವಂತೆ ಮಾಡುತ್ತದೆ. "ಸಣ್ಣೆಪ್ಪ-ಸಾವಕಾಶ ಬಾ ಮಾರಾಯಳ! ಆಸಲ ಎರಡು ಹಡದೀದ್ಯಾ? ಈ ಸಲಾ ಒಂದ ಐದಾರ ಹಡ್ದಬಿಡು". ಸಣ್ಣೆವ್ವ- ನನಗೇನ್ ನಾಯಿ ಅಂತ ತಿಳಿದೇನ್. ಸಣ್ಣೆಪ್ಪ-ಅದಕ್ಕಿಂತ ಅತತ್ತ ಬಿಡಲೇ.... ಹೆಗಲಮ್ಯಾಲ ಕೈಯಿಟ್ಟರ ಸಾಕು ಶರಗ ನಿಂತಿತಂತ ತಿಳಿಬೇಕು. ಸಣ್ಣೆವ್ವನಿಂದು। ನೀನ ನನ್ನ ಹೆಗಲ ಮುಟ್ಟಲಿಲ್ಲಾಂದ್ರ ಹ್ಯಾಂಗ ಆಗ್ತಾವು ಮಕ್ಕಳು ಮಾಡೋದೆಲ್ಲಾ ಮಾಡಿ ಬ್ಯಾಸರ ಮಾಡ್ಕೊಂಡರ ಹ್ಯಾಂಗ ನನರಾಯ.

ಆಲ್ದಾಳರು ತಮ್ಮ ನಾಟಕದಲ್ಲಿನ ಪಾತ್ರಗಳನ್ನು ಸರಿಯಾಗಿ, ವ್ಯವಸ್ಥಿತವಾಗಿ ಉಪಯೋಗಿಸಿಕೊಂಡಿದ್ದಾರೆ. ಯಾವ ಪಾತ್ರಗಳು ಅತಿರೇಕವಾಗಿ ವರ್ತಿಸದೆ ತಮಗಿತ್ತ ಪಾತ್ರವನ್ನು ಯಶಸ್ವಿಯಾಗಿಸುವಲ್ಲಿ ಶ್ರಮಿಸಿದ್ದಾರೆ. ಪುರುಷ ಪಾತ್ರದಷ್ಟೆ ಮಹಿಳೆಯರ ಪಾತ್ರಗಳು ನೋಡುಗರ ಮನಸ್ಸನ್ನು ಆಕರ್ಷಿಸಿವೆ. ತ್ರಿಮೂರ್ತಿಗಳ ತಾಯಿ ಬಸವಲಿಂಗಮ್ಮ ತಾಯಿಯ ಪಾತ್ರ ಅಚ್ಚುಕಟ್ಟಾಗಿ ನಿರ್ವಹಿಸಿ ಮಾತೆಯರ ಕೀರ್ತಿಯನ್ನು ಹೆಚ್ಚಿಸುವಲ್ಲಿ ಅಗ್ರಸ್ಥಾನದಲ್ಲಿದ್ದಾರೆ. ಅವರು ತಮ್ಮ ಮಕ್ಕಳ ಗುರುಗಳಾದ ಶಂಕರಾನಂದರ ಬಗ್ಗೆ ಆಡಿದ ಮಾತು, ತೋರಿದ ಕಳಕಳಿ ಮರೆಯಲಾಗದು.

"**ಬಸವಲಿಂಗಮ್ಮಾ –** ಎಲ್ಲಿಯದೋ ಕೋಗಿಲೇ ಎಲ್ಲಿಯದೋ ಮಾಮರ ಈ ಎರಡಕ್ಕೂ ಕೂಡಿಸುವ ಸಮಯ ಒದಗಿಸಿಕೊಟ್ಟ ಆ ಕಾಲಕ್ಕೆ ನಾನು ಸಾವಿರಸಲ ಶರಣೆಂಬೆ ಯಾಕೆಂದರೆ ನಾವೆಲ್ಲಿಯವರೊ ನಿಮ್ಮ ಹತ್ತಿರ ಕರೆದು ಕರುಣೆಯಿಂದ ನನ್ನ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸಿದಿರಿ. ಮನೆಯು ನಿಂತಾಗ ತಮ್ಮಾಶ್ರಮದಿಂದ ದವಸ ಧಾನ್ಯಗಳನ್ನು ಕಳುಹಿಸಿದಿರಿ ಇದು ಎಂಥಾ ಉಪಕಾರ". [೧೨]

ಕಾಮ ಅಳಿದು ನಿಷ್ಕಾಮಿಯಾದ ಶಿವಶರಣಿ ನಿರ್ಮಲಾಳ ಪಾತ್ರ ಮಹಿಳೆಯರ ಕೃಪೆಗೆ ಪಾತ್ರಳಾಗುವುದನ್ನು ಆಲ್ದಾಳರು ಹೃದಯಂಗಮವಾಗಿ ಬಿಂಬಿಸಿದ್ದಾರೆ. ಎಂಥ ಕೆಟ್ಟಹೆಣ್ಣು ಕೊನೆಯಲ್ಲಿ ಹೇಗೆ ಸುಶಿಲೆಯಾಗಿ ಮಾರ್ಪಡುತ್ತಾಳೆಂಬುದು ನಿರ್ಮಲೆಯಲ್ಲಿ ಕಾಣುತ್ತೇವೆ.

ಹೆಣ್ಣುಮಾಯೆಯಾಗಿ ಮಹಾತ್ಮಾ ಶ್ರೀ ಕರಿಘೂಳೇಶ್ವರ ನನ್ನು ತನ್ನ ಮೋಹದ ಬಲೆಯಲ್ಲಿ ಸಿಕ್ಕಿಸಿಕೊಳ್ಳಲು ನಡೆದ ವಿಫಲಯತ್ನ ಹೀಗಿದೆ!

**ನಿರ್ಮಲಾ–** ಇಂದು ನೀನೇಂದರೂ ಈ ನಿನ್ನಂಗ ಸಂಗದ ಸುಖ ಸವಿಯದೇ ಹೋಗಲಾರೆ.

**ಕರಿಘೂಳೇಶ್ವರ–** ಕೋಪದಿಂದ, ನಿನ್ನಲ್ಲಿ ಹುದುಗಿರುವ ಕಾಮವಿಕಾರ ಸುಟ್ಟು ಹೋಗಲಿ".[೧೩]

ಕರಿಘೂಳೇಶ್ವರನ ಕೋಪಕ್ಕೆ, ಶಾಪಕ್ಕೆ ಗುರಿಯಾದ ನಿರ್ಮಲಾ ತನ್ನೆಲ್ಲ ಜೀವನದ ಸಾರವನ್ನೇ ಕಳೆದುಕೊಂಡು ಅನಾಥಳಂತೆ ಊರುರು ಅಲೆದಾಡುತ್ತಾಳೆ. ಪಶ್ಚಾತಾಪ ಪಡುತ್ತಾಳೆ. ಲೌಕಿಕ ಮೋಹದ ಬಳ್ಳಿಯ ತುಂಬಿನಿಂದ ಕಳಚಿಬಿದ್ದ ವೈರಾಗ್ಯದ ಖಣಿಯಾಗುತ್ತಾಳೆ. ಜೀವನದ ಮೌಲ್ಯ ಅರಿಯುತ್ತಾಳೆ. ಆಲ್ದಾಳರು ಹೆಣ್ಣಿನ ಘನತೆಯನ್ನು ಎತ್ತಿ ಹಿಡಿಯುವಲ್ಲಿ ನಿರ್ಮಲಾಳ ಮನಸ್ಸನ್ನು ಪರಿವರ್ತಿಸುವಲ್ಲಿ ಉತ್ತಮ ನಡೆ ಅನುಸರಿಸಿದ್ದಾರೆ. ಕೊನೆಯಲ್ಲಿ ಹೆಸರಿಗೆ ತಕ್ಕಂತೆ ನಿರ್ಮಲವಾಗಿ ಶಿವಶರಣೆಯಾಗುತ್ತಾಳೆ. ದೃಷ್ಟಿ ಪವಿತ್ರವಾಗಿದೆ, ಭಾವ ಪಾರಿವಾಳವಾಗಿದೆ. ನಡೆ ಸುಕ್ಷೇತ್ರವಾಗಿದೆ. ನುಡಿ ಮುತ್ತಾಗಿದೆ. ಇದೆಲ್ಲ ಸಜ್ಜನರ ಸಂಘದ ಫಲ. ತಮ್ಮ ನಾಟಕಗಳ ಮೂಲಕ

ಮನುಷ್ಯನ ಮನಸ್ಸನ್ನು ಭಗವಂತನತ್ತ ಹೊರಳುವಂತೆ ಮಾಡುವಲ್ಲಿ ಆಲ್ವಾಳರು ಯಶಸ್ವಿಯಾಗಿದ್ದಾರೆ.

ಇಂದಿನ ಸ್ಪರ್ಧಾತ್ಮಕ, ಸಮಕಾಲೀನ ಬದುಕಿನ ನೆಲೆ ಹಿನ್ನೆಲೆಯಲ್ಲಿ ಕನ್ನಡ ರಂಗಕಲೆಯು ತನ್ನ ನಿತ್ಯ ನಿರಂತರ ಚಲಾವಣೆಯ ದೃಷ್ಟಿಯಿಂದ ಬದಲಾವಣೆ ಮತ್ತು ಸುಧಾರಣೆಯನ್ನು ಬಯಸುತ್ತಿದೆ. ರಂಗಭೂಮಿಯು ನಿತ್ಯ ನೂತನ ಆಯಾಮಗಳನ್ನು ಅಳವಡಿಸಿಕೊಂಡು ಹೊಸ ಆವಿಷ್ಕಾರಗಳೊಂದಿಗೆ ಒಡಮೂಡಿಬರಬೇಕಾಗಿದೆ. ಪುನರ್ ಕಾಯಕಲ್ಪಗೊಳ್ಳಬೇಕಾಗಿದೆ.

# ಇಟಗಿಯ ಸಾಧು ಶಿವಲಿಂಗೇಶ್ವರ ಮಹಾತ್ಮೆ

## ರಂಗ ನಾಟಕ

ಶಿವ ಶರಣ ಸಂತ ಸಂಗಮದ ಸಿದ್ಧಾಂತ ಶಿಖಾಮಣಿಯೆನಿಸಿ ವಚನ ಸಾಹಿತ್ಯವನ್ನು ಎಡೆಮಾಡಿ ನೀಡಿದ ಭಕ್ತಿ ಭಂಡಾರಿ ಬಸವಣ್ಣ, ಅಕ್ಕನಾಗಮ್ಮ ಜನ್ಮ ಸ್ಥಾನಕ್ಕೆ ಸಾಕ್ಷಿ ಭೂತವಾಗಿ ನಿಂತ ಭಾಗೇವಾಡಿಯ ಪುಣ್ಯಭೂಮಿ, ಮತ್ತೋರ್ವ ಶರಣನನ್ನು ಬರಮಾಡಿಕೊಳ್ಳುವ ಸನ್ನಾಹದಲ್ಲಿದೆ. ಯರನಾಳದ ರೇವಣಸಿದ್ಧೇಶ್ವರ ಮಂದಿರದಲ್ಲಿ ತಂಗಿರುವ ಜಂಗಮ ಮೂರ್ತಿಗಳಾದ ಶ್ರೀ ನೀಲಕಂಠ ಸ್ವಾಮಿಗಳು ತಮ್ಮ ಶಿಷ್ಯ ಸಾಂಪ್ರದಾಯದಲ್ಲಿ ಒಬ್ಬರಾದ ಕೂಡಗಿ ಸಿದ್ಧಲಿಂಗಪ್ಪಾ, ಗಿರಿಯಮ್ಮ ದಂಪತಿಗಳು ಮಕ್ಕಳಿಲ್ಲದೇ ಆ ಶಿವನಲ್ಲಿ ಮಕ್ಕಳಿಗಾಗಿ ಪ್ರಾರ್ಥಿಸುತ್ತಿದ್ದು ಅವರ ಬಯಕೆಯನ್ನು ಈಡೇರಿಸಿ, ಮಕ್ಕಳಾಗುವಂತೆ ಪುತ್ರಫಲವನ್ನು ನೀಡುವಂತೆ ಶಿವನ ಆದೇಶವಾಗಿದೆಂದು ನುಡಿಯುತ್ತಾರೆ.

"**ಸಿದ್ಧಲಿಂಗಪ್ಪ :** ಪೂಜ್ಯರಿಗೆ ಪ್ರಣಾಮಗಳು (ನಮಸ್ಕರಿಸುವರು) ಬನ್ನಿ ಮನೆಗೆ ದಯಮಾಡಿಸಿ.

**ಸಿದ್ಧಲಿಂಗಪ್ಪ :** ತಾನೊಂದು ಹೂಕಾಯಿ ಬಿಡದ ಬಂಜೆ ಮರವಾದೆನಲ್ಲ ಅಂತಚಿಂತೆ ಮಾಡ್ತಾಳೆ.

**ನೀಲಕಂಠಸ್ವಾಮಿ :** ಸಿದ್ಧಲಿಂಗಪ್ಪ ಆ ಕಾಲವೀಗ ಪಕ್ವವಾಗಿದೆ. ನಾಡಿಗೆ  ಬೆಳಕಾಗುವ ಪುತ್ರ ಫಲವನ್ನು ಗಿರಿಯಮ್ಮ ಪಡೆಯುತ್ತಾಳೆ.

**ಸಿದ್ಧಲಿಂಗಪ್ಪ :** ಧನ್ಯರಾದೆವು। ತಂದೆ ಧನ್ಯರಾದೆವು, ಎಲ್ಲ ಈ ಯರನಾಳದ ಕೂಡಿಗಿಯವರ ಮನೆತನವು ವಂಶಜ್ಯೋತಿಯಿಲ್ಲದೆ ಹೋಗುತ್ತಿದೆಯೇ ಅಂತ ಭಾವಿಸಿದ್ದೇವು ತಮ್ಮ ಶುಭಾಶೀರ್ವಾದದಿಂದ ಬಾಡಿದ ಬಳ್ಳಿ ಚಿಗುರೊಡೆಯಿತು. ಬತ್ತಿದ ಬಾವಿ ನೀರು ತುಂಬಿತು, ಬನ್ನಿ ಹೋಗೋಣ" [೧೪]

ಗಿರೆಮ್ಮಾ ತಾಯಿಯಾಗುವ ಕನಸು ನನಸಾಗುವ ಕಾಲ ಸಮೀಪಕ್ಕೆ ಬಂದಿದ್ದು ಅವಳ ಜೀವನದಲ್ಲಿ ಕವಿದಿದ್ದ ಕತ್ತಲೆ ಕಳೆದು ಜ್ಯೋತಿ ಬೆಳಗಲಿದೆ ಎಂದು ಮನೆಯ ಗುರುಗಳಾದ ಹುಬ್ಬಳಿಯ ನೀಲಕಂಠಸ್ವಾಮಿಗಳು ಅಭಯ ವಚನವಿತ್ತರು. ಹೆಣ್ಣುಜೀವ, ಬಯಸುವುದು ಸಹಜ ಸ್ವಭಾವ, ಹೂಕಾಯಿ ಬಿಟ್ಟ ಬಳ್ಳಿ ಮರಗಳು ನೋಡಿದಾಗ ಮನಕ್ಕೆಷ್ಟು ತೃಪ್ತಿಪಡುವುದೋ? ಅದರಂತೆ ಪ್ರಪಂಚದ ಬಳ್ಳಿಯಲ್ಲಿ ನಾನೊಂದು ಹೂ ಬಿಡದಂತಾದ ಬಳ್ಳಿಯಾದೆನಲ್ಲಾಂತ ಗಿರೆಮ್ಮ ಚಿಂತಿಸುವುದು ಸ್ವಾಭಾವಿಕತಾನೆ?

ಗಂಡು ಮಗುವಿನ ತಾಯಿಯಾಗಿ ಸಂಭ್ರಮಿಸುತ್ತಿರುವ ಗಿರೆಮ್ಮ ಸಿದ್ಧಲಿಂಗಪ್ಪ ದಂಪತಿಗಳು ಮಗುವಿನ ನಾಮಕರಣವನ್ನು ಮನೆಯ ಗುರುಗಳಾದ ನೀಲಕಂಠಸ್ವಾಮಿಗಳಿಗೆ ಭಿನ್ನವಿಸುತ್ತಾರೆ.

"**ಗುಂಡಪ್ಪಮಾಸ್ತರ** : ಹರಗೋಲು ಎಲ್ಲರನ್ನು ಕರೆದುಕೊಂಡು ತುಂಬಿದ ಹೊಳೆಯಿಂದ ಆಚೆ ದಡಕ್ಕೆ ಹೇಗೆ ತಲುಪಿಸುವದೋ ಹಾಗೆಯೇ ಮಾನವನ ಬದುಕಾಗಬೇಕು. ಅಂಧ, ಅನಾಥ, ಅಂಗವಿಕಲರನ್ನ, ದೀನ ದಲಿತರನ್ನ ಸರಿಸಮಾನರೆಂದು ಭಾವಿಸುವುದೇ ಪರಮಧ್ಯೇಯವಾಗಬೇಕು, ಇವರು ಮೇಲು, ಇವರುಕೀಳು, ಇವರು ಶ್ರೀಮಂತರು, ಇವರು ಬಡವರು ಎನ್ನುವ ಮಾತಿನಿಂದ ದೂರವಿದ್ದು ಎಲ್ಲರನ್ನೂ ಒಳಗೊಂಡು ಹೋಗುವುದೇ ಶಿವನಪೂಜೆ, ಅದೇ ಲಿಂಗಬದುಕು, ಅದೇ ಜಂಗಮದ ಕೊಡುಗೆ". [೧೫]

ಡಾ.ಎಚ್. ತಿಪ್ಪೇರುದ್ರಸ್ವಾಮಿಗಳು "ಇಂದಿನ ಸಂಕೀರ್ಣ ಜಗತ್ತಿಗೆ ಅಗತ್ಯವಾದ ವೈಚಾರಿಕ ಹಿನ್ನಲೆಯನ್ನು ಕೊಡಲು ವೀರಶೈವ ಸಂಸ್ಕೃತಿ ಸಮರ್ಥವಾಗಿದೆ, ಆದರೆ ಅದನ್ನು ಹೊಸ ದೃಷ್ಟಿಯಿಂದ ನೋಡುವ ವಿಚಾರ ಶೀಲತೆ ಅಗತ್ಯ"[೧೬] ಎನ್ನುತ್ತಾರೆ. ಇದನ್ನೇ ಎಲ್.ಬಿ.ಕೆ. ಆಲ್ದಾಳ ಅವರಿಗೆ ಹೋಲಿಸಿ ನೋಡಬಹುದು, ಪ್ರಸಿದ್ಧ ಸಾಹಿತಿ ಹಾಗೂ ಪತ್ರಕರ್ತ ಪ್ರೊ.ಬಿ.ಮಹಾದೇವಪ್ಪ ಅವರ ಮಾತಿನಲ್ಲಿಯೇ ಕೇಳೋಣ, ಒಬ್ಬ ನಿಷ್ಠಾವಂತ ಧರ್ಮಿಷ್ಠ ಒಳ್ಳೆಯ ಮುಸಲ್ಮಾನನೂ ಆಗುತ್ತಾನೆ. ಒಳ್ಳೆಯ ಹಿಂದುವೂ ಆಗುತ್ತಾನೆ. ಒಳ್ಳೆಯ ಲಿಂಗವಂತನೂ ಆಗುತ್ತಾನೆ. ಲಿಂಗಧರಿಸಿದವರು ಮಾತ್ರ ಲಿಂಗಾಯತರಲ್ಲ, ಅಂಗ ಗುಣಗಳನ್ನೆಲ್ಲ ಅಳಿದು ಲಿಂಗಗುಣಗಳೆಲ್ಲವನ್ನು ಅಳವಡಿಸಿ ಕೊಂಡವರೂ ಲಿಂಗವಂತರೇ! "ಲಿಂಗವಿಲ್ಲದೆ ಒಂದಂಗ ಸುಳುದುದುಂಟೆ"? ಎಂದು ಅನುಭಾವ ಮಂಟಪದ ಶೂನ್ಯ ಪೀಠಾಧ್ಯಕ್ಷರಾದ ಅಲ್ಲಮ ಪ್ರಭುಗಳೇ ಕೇಳಿದ್ದಾರೆ. ಪ್ರತಿಯೊಬ್ಬರಿಗೂ ಪ್ರಾಣಲಿಂಗ, ಭಾವಲಿಂಗ ಇದ್ದೇ ಇರುತ್ತದೆ. ಇಷ್ಟೇ ಇಷ್ಟಲಿಂಗ ಧಾರಿಗಳಿಗೆ ಭಾವಲಿಂಗ ದರುಶನ ಸುಲಭ–ಸುಸೂತ್ರ, ಶ್ರೀ ಎಲ್.ಬಿ.ಕೆ ಆಲ್ದಾಳ ಅವರು ತಮ್ಮ ಪ್ರವೃತ್ತಿಯಂತೆ ವೀರಶೈವ ಧರ್ಮದ ಚರಜಂಗಮರಾಗಿ ಜೀವನ ಸಾಗಿಸಿದ್ದಾರೆನ್ನಿಸುತ್ತದೆ. ಚರಜಂಗಮದವರು ಹಳ್ಳಿಗೆ ಏಕರಾತ್ರಿ, ಪಟ್ಟಣಕ್ಕೆ ಪಂಚ ರಾತ್ರಿಯಂತೆ ಕಾಲಕಳೆಯಬೇಕು. ಶ್ರೀ ಆಲ್ದಾಳರು ಹೀಗೆಯೇ ಮಾಡಿದ್ದಾರೆ. ಶರಣರು ಹೀಗೆಯೇ ಮಾಡಿದ್ದಾರೆ".[೧೭] 'ಆಲ್ದಾಳರು ನಾಟಕಗಳನ್ನು ಬರೆದು ಆಡಿ, ಆಡಿಸಿದ ಇವರು ರಂಗ ಪ್ರಪಂಚಕ್ಕೆ ನೀಡಿದ ಕಾಣಿಕೆ ಚಿರಸ್ಮರಣೀಯ' ಎಂಬುದರಲ್ಲಿ ತನ್ನನ್ನು ತಾನು ಅದರಲ್ಲಿ ತೊಡಗಿಸಿ ಕೊಳ್ಳುತ್ತಾನೆ.[೧೮] ನಾಟ್ಯಭೂಷಣ ಏಣಗಿ ಬಾಳಪ್ಪ ನವರು ಒಂದೆಡೆ ಹೇಳಿದ ಮಾತು ಆಲ್ದಾಳ ಅವರಿಗೆ ಹೊರತಾಗಿಲ್ಲ. ಆಲ್ದಾಳರು ಯಾವುದೇ ನಾಟಕ ಬರೆಯಲಿ ಅಲ್ಲಿ ಬರಹಗಾರನ ಬರವಣಿಗೆಯ ಮೌಲ್ಯ ಎದ್ದು ಕಾಣುತ್ತದೆ. ಒಂದು ಚಿಕ್ಕ ಪಾತ್ರವೂ ನಾಟಕಕ್ಕೆ ಬೇಕಾಗುವ ಅಗತ್ಯತೆಯನ್ನು ಪ್ರೇಕ್ಷಕರ ಕಣ್ಣಲ್ಲಿ ಸ್ಥಿರವಾಗಿ ಉಳಿಯುತ್ತದೆ. ಇಲ್ಲಿ ಗುಂಡಪ್ಪ ಮಾಸ್ತರ ಪಾತ್ರದ ಮೂಲಕ ವಿದ್ಯೆ ಎಲ್ಲರಿಗೂ ಅಗತ್ಯ ಹಾಗೂ ಅದರ ಸದುಪಯೋಗವನ್ನು ಎಳೆಎಳೆಯಾಗಿ ತೋರಿಸುವಲ್ಲಿ ಆಲ್ದಾಳರು ಜಾಣತನವನ್ನು ಮೆರೆದಿದ್ದಾರೆ.

ಸಿದ್ಧರಾಮ ಮೊದಮೊದಲು ಮದುವೆಯ ಪ್ರಸ್ತಾಪಕ್ಕೆ ತಾಯಿಯ ಮಾತಿಗೆ ವಿಮುಖನಾಗುತ್ತಾನೆ.

"**ಸಿದ್ಧರಾಮ** : ಯವ್ವಾ! ಈ ಮದ್ವಿ ಅನ್ನೋ ಬೇಲಿ ಹಚ್ಚಬ್ಯಾಡವ ಹಚ್ಚಬ್ಯಾಡ ನನಗೆ ಹಾಯಾಗಿರಲಿಕ್ಕಿ ಬಿಟ್ಟುಬಿಡು, ಆಕಾಶದಾಗ ಪಕ್ಕಾಬಿಚ್ಚಿ ಹಕ್ಕಿ ಹಾರಾಡುವಂಗ ನಾ ಹಾರಾಡ್ತಿನಿ

ಶಿವರತಿಯೊಳಗ ಕೂಡ್ತಿನಿ ನನ್ನ ನಾ ಕಂಡ್ಕೊತೀನಿ.

**ಗಿರೆಮ್ಮಾ** : ಸನ್ಯಾಸಿ ಆಗ್ತೀನೊ? ಏನ ಸಂಸಾರೀನೆ ಆಗ್ತೀನೊ? ಸಿದ್ಧರಾಮ ನಿನ್ನ ಮದವಿ ಮಾಡುವಾಕೀನ" [೧೯] ಕೊನೆಗೂ ಸಿದ್ಧರಾಮ ನಿನಗೆ ಹ್ಯಾಂಗತಿಳಿತಾದ ಹಾಂಗಮಾಡು ಅಂತಾನೆ.

ಸಿದ್ಧಲಿಂಗಪ್ಪ ಗಿರೆಮ್ಮ ದಂಪತಿಗಳು ಬೀಳ್ಗ್ಯಾಗ ರಾಚಪ್ಪನ ಮಗಳು ಸಂಗಮ್ಮನನ್ನು ಮಗ ಸಿದ್ಧರಾಮನೊಂದಿಗೆ ಮಂಗಲ ಕಾರ್ಯಮಾಡಿ ಸೊಸೆಯಾಗಿ ತರುತ್ತಾರೆ. ಮನೆತುಂಬಿಸಿ ಕೊಳ್ಳುತ್ತಾರೆ. ಕೊನೆಗೂ ಗಿರೆಮ್ಮಾ ತನ್ನಮಗನಿಗೆ ಮದುವೆ ಮಾಡುವಲ್ಲಿ ಸುಖ ಕಾಣುತ್ತಾಳೆ.

ಇಲ್ಲಿ ಗಿರೆಮ್ಮಾ ತಳೆದ ನಿರ್ಧಾರ ಫಲಕೊಡುವುದಕ್ಕೆ ಅವಳ ಮಾತಿನ ದೃಷ್ಟಾಂತ ಓದಿ.

"**ಗಿರೆಮ್ಮಾ** : ಮದುವೆ ಬ್ಯಾಡ ಅಂತ ಹೇಳುವುದು ಹೇಡಿಗಳ ಲಕ್ಷಣ ಅಂತಾರ, ಜಗದ ಜ್ಯೋತಿಯಾಗಿ ಬೆಳಗಿದ ಬಸವಣ್ಣನವರು ಒಂದಲ್ಲ ಎರಡ ಮದುವಿ ಮಾಡ್ಕೊಂಡು ಈ ಸಂಸಾರ ಗೆದ್ದು ಅಣ್ಣ ಬಸವಣ್ಣಾ ಅನಿಸಿಗೊಂಡ್ರು. ಎಳಂದೂರಿನ ಅರಸು ಮಂಗಳಾದೇವಿಗೆ ಮದುವೆಯಾಗಿ ಆರು ಶಾಸ್ತ್ರಗಳನ್ನು ಬರೆದು ನಿಜಗುಣ ಶಿವಯೋಗಿಗಳಾಗಿ ಶಂಭುಲಿಂಗನ ಬೆಟ್ಟ ಹತ್ತಿದರು. ಶಿಶುನಾಳದ ಶರೀಫ್ ಸಾಹೇಬರು ಹಜ್ಜುಮಾಗೆ ಮಾಡಕೊಂಡು ನಗನಗ್ತಾನೆ ತತ್ವಗೀತೆಗಳನ್ನು ಬರೆದು ಬ್ರಹ್ಮದೊಳಗಾದರು. ಸಂಸಾರದಿಂದ ಸದ್ಗತಿ ಎಂದು ಸಾರಿದರು. ನಾ ಮಾತ್ರ ನಿನಮದುವಿ ಬೀಳಗಿ ರಾಚಪ್ಪನ ಮಗಳ ಸಂಗಮ್ಮನ ಜೊತೆ ಮಾಡು ವಾಕೀನ"[೨೦]

ಪುತ್ರನ ಮನವೋಲಿಸುವಲ್ಲಿ ತಾಯಿ ತೋರಿದ ಜಾಣ್ಮೆ ಸ್ತ್ರೀ ಸಮಾಜಕ್ಕೆ ಕುಂದಣ ಇಟ್ಟಂತೆ ಇದೊಂದು ಚಾರಿತ್ರಿಕ ಪ್ರಜ್ಞೆ, ನಮ್ಮ ಜನತೆಯಲ್ಲಿ "ಮೊದಲಿನಿಂದಲೂ ನಮ್ಮಲ್ಲಿ ಚಾರಿತ್ರಿಕ ಪ್ರಜ್ಞೆಯನ್ನು ಬೆಳೆಸಿಕೊಂಡು ಬರಲಿಲ್ಲ. ಮಾಡಿದ ಕೆಲಸ ಮುಖ್ಯ ಮಾಡಿದವನೇನು ಮಹಾಎಂಬ ತಾತ್ವಿಕ ಧೋರಣೆಯನ್ನು ಬೆಳೆಸಿಕೊಂಡು ಬಂದುದರಿಂದ ನಮಗೆ ನಮ್ಮ ಎಷ್ಟೋ ಕಲಾವಿದರ, ಸಾಹಿತಿಗಳ, ಋಷಿ–ಸಂತರ ಕಾಲಗೊತ್ತಿಲ್ಲ, ಅವರ ಜೀವನ ವಿಚಾರತಿಳಿಯದು".[೨೧] ಹೀಗಾಗಿ ಅನೇಕರು ಸಾಧನೆಯ ಹಾದಿಯನ್ನು ಸವೆಸಿದರೂ ಅವರನ್ನು ಹೊರತರುವಲ್ಲಿ ಆಲ್ದಾಳ ಅವರಂಥವರು ಮುಂದಾಗಿದ್ದಾರೆ.

ಬಾಳಿನ ಹೊಳೆ ನಿಲ್ಲದೆ ಹರಿಯುತ್ತಿದೆ. ಸಿದ್ಧರಾಮ ಸಂಗಮ್ಮ ದಂಪತಿಗಳ ಬಾಳಿನಲ್ಲಿ ಹೊಸ ಅತಿಥಿ ಬರುವ ಸೂಚನೆಗಳು ಬರುತ್ತಲಿವೆ. ಸೊಸಿ ಸಂಗಮ್ಮಳಿಗೆ ಕುಬಸದ ಕಾರಣ ಮಾಡುವ ಸಿದ್ಧತೆಯಲ್ಲಿ ಅತ್ತೆ ಗಿರೆಮ್ಮ ಸಂಭ್ರಮಿಸುತ್ತಿರುವಳು ಅಜ್ಜಿಯಾಗುವ ಕನಸು ನನಸಾಗಲಿದೆ. ಇತ್ತ ಸಿದ್ಧರಾಮ, ಲಚ್ಚ್ಯಾಣದ ಶಿವಯೋಗಿ ಸಿದ್ದಪ್ಪ ಮಹಾರಾಜರ ಸಮ್ಮುಖದಲ್ಲಿನಿಂತು, ತಂದೆ ನಿನ್ನ ವರದ ಹಸ್ತಎನ್ನ ಮಸ್ತಕದ ಮೇಲಿರಿಸಿ ನಿನ್ನ ಶ್ರೀ ಚರಣಕ್ಕೆ ನಮನ ಸಲ್ಲಿಸುವೆ ಎಂದು ಅಂಗಲಾಚುತ್ತಾನೆ.

"**ಸಿದ್ಧಪ್ಪಮಹಾರಾಜ** : ಶರೀಫ್ ಶಿವಯೋಗಿಗಳಿಗೆ ಶಿಶುನಾಳವಿದ್ದಂತೆ ನಿನಗೆ ಯರನಾಳವೊಂದಿದೆ. ಅಲ್ಲಿಗೆ ಹೋಗಿ ನಿನ್ನ ಹೆಂಡತಿ ಮಗುವಿನೊಂದಿಗೆ ಈ ಬಾಳ ಸಾಗರವನೀಜಿ ನನ್ನಡೆಗೆ ಬಾ.

'ಸಿದ್ಧರಾಮ : ಮತ್ತೆ ನಾ ಮನೆ ಸೇರಬೇಕೆ ಗುರುಗಳೇ?

**ಸಿದ್ಧಪ್ಪಮಹಾರಾಜ** : ಗೂಡಿನಿಂದ ಹಾರಿದ ಹಕ್ಕಿಯು ಸಂಜೆಯಾಗುತ್ತಲೇ ಮತ್ತೆ ಗೂಡಿಗೆ ಬರುವುದಿಲ್ಲವೆ? ನಿನ್ನನ್ನೆ ನಂಬಿದ ವ್ಯಕ್ತಿಗಳಿಗೆ ದ್ರೋಹ ಮಾಡಲಾಗದು. ಅದರಿಂದ ಮುಕ್ತನಾಗಿ ನನ್ನೆಡೆಗೆ ಬಾ".[೨೨] ಸಾಧು-ಸನ್ಯಾಸಿ, ಋಷಿ ಮುನಿಗಳಿಗೆ ವಿರಕ್ತ ಭಾವನೆ ಮನದಲ್ಲಿ ಬಂದಾಗ ತಮ್ಮ ಬೆನ್ನಿಗೆ ಬಿದ್ದವರನ್ನು, ನಂಬಿಗಸ್ತರನ್ನು ಬಿಟ್ಟು ತೆರಳುವುದು ಸರಿಯಲ್ಲ ಎನ್ನುವ ಮಾತು ನಿತ್ಯ ಸತ್ಯವಾಗಿರುವುದು. ಇದು ನ್ಯಾಯಯುತವೂ ಹೌದು.

ಸಿದ್ಧರಾಮನ ಹೆಂಡತಿ ಹಸುಗೂಸು ತೊರೆದು ಕಣ್ಮುಚ್ಚಿ ಕೈಲಾಸ ಸೇರಿದಳು. ಗಿರೆಮ್ಮ ಮತ್ತೊಮ್ಮೆ ತನ್ನ ಹಠಮಾರಿತನ ತೋರಿ ಸಿದ್ಧರಾಮನಿಗೆ ಮದುವೆ ಮಾಡಿಸುವಲ್ಲಿ ಗೆದ್ದರೂ. ದಂಪತಿಗಳು ಒಂದಾಗಿ ಬಾಳು ನಡೆಸುವಲ್ಲಿ ಸೋಲುಂಟಾಗುತ್ತದೆ. ಬುದ್ದನಂತೆ ಸಿದ್ಧರಾಮ ಮನೆತೊರೆದು ಅಡವಿ ಸೇರಿ ಅನುಷ್ಠಾನ ಕೈಕೊಂಡು ಓಂನಮಃ ಶಿವಾಯ, ಓಂನಮಃ ಶಿವಾಯ ಓಂಕಾರನಾಥದಲ್ಲಿ ಮುಳುಗುತ್ತಾನೆ.

"**ಸಿದ್ದಪ್ಪ ಮಹಾರಾಜ** : ಸಿದ್ಧರಾಮ ಸಾಕಿನ್ನು ಅನುಷ್ಠಾನ, ಲೋಕಹಿತ ಸಾಧನೆಗೆ ಮೀಸಲಿರಿಸು ನಿನ್ನ ಮೈಮನ ಈ ಜಗದ ಸುಗ್ಗಿಹಿಗ್ಗಿನಿಂದ ಮಾಡಿ ಕಮರಿ ಮಠದ ಸಿದ್ದಪ್ಪ ಮಹಾರಾಜನಿಗರ್ಪಿಸಿ ಸಿದ್ಧಲಿಂಗೇಶನಾದೆ. ಶ್ರೀ ದೇವಿಯಿಂದ ಸಿದ್ಧಿಪಡೆದು ಶಿವಲಿಂಗೇಶ್ವರರಾಗಿ ಈ ಜಗವ ಬೆಳಗು, ನುಡಿದಿದ್ದೆ ಸಿದ್ಧಿ, ಮುಟ್ಟಿದ್ದೇ ಪರುಷ, ನೋಡಿದ್ದೇ ಶಿವಲಿಂಗ" [೨೩] ಸಿದ್ಧರಾಮ ಶೀವಲಿಂಗೇಶ್ವರರಾಗಿ ಲಚ್ಚ್ಯಾಣಧೀಶರ ಆಶೀರ್ವಾದ ಪಡೆದರು.

"**ಅಡಿಗಡಿಗೆ ಮಾಡೊ ಗುರುಸಂಗ**
**ತಡೆಯದಲೆ ಒಲಿವನೋ ಪ್ರಭುಲಿಂಗ**"

– ಎಮ್ಮಡಿಗೆಯ ಪ್ರಭುದೇವ.

ಇಟಗಿಯ ಸಾಧುಶಿವಲಿಂಗೇಶ್ವರ ಮಹಾತ್ಮೆ ನಾಟಕ ಹಲವಾರು ತಿರುವುಗಳನ್ನು ಪಡೆಯುತ್ತದೆ. ಇಲ್ಲಿಯವರೆಗೆ ಸಂಸಾರಿಯಾಗಿದ್ದ ಸಿದ್ಧರಾಮ ಸಾಧು ಶಿವಲಿಂಗೇಶ್ವರರಾಗಿ ಜಗತ್ತಿನ ಋಣ ತೀರಿಸಲು ಮುಂದಾಗಿದ್ದಾರೆ.

ಆಲ್ದಾಳ ಅವರು ನಾಟಕವನ್ನು ಕೇವಲ ಮನರಂಜನೆಗೋಸ್ಕರ ಬರೆಯದೆ, ಜನರಲ್ಲಿ ಒಳ್ಳೆಯ ಗುಣ ಮೂಡಲಿ ಎನ್ನುವುದೇ ಮುಖ್ಯ ಕಾರಣವಾಗಿದೆ. ಸಿದ್ದರಾಮನ ಪ್ರತಿಯೊಂದು ಮಾತುಗಳು ನಾನ್ನುಡಿಯಂತಿವೆ. ನಡು-ನಡುವೆ ಉಪಯಕ್ತವಾದ ಉಪದೇಶಗಳು ಇವೆ. ಯಾವ

ಪಾತ್ರಗಳು ಎಲ್ಲಿಯೂ ಎಡವದೇ ತಮ್ಮಗಳ ಚಾಕಚಕ್ಯತೆಯಿಂದ ಪ್ರೇಕ್ಷಕರ ಗಮನ ಸೆಳೆಯುವುದರೊಂದಿಗೆ ಸರ್ವರ ಗೌರವಾದರಗಳಿಗೆ ಪಾತ್ರವಾಗುತ್ತವೆ. ಸಿದ್ಧರಾಮನ ಪಾತ್ರವಂತು ಈ ನಾಟಕದ ಬೆಳ್ಳಿಚುಕ್ಕಿ ಎಂದರೆ ತಪ್ಪಾಗದು.

ಇನ್ನು ಮುಂದೆ ಶಿವಲಿಂಗೇಶ್ವರ ಮಹಾತ್ಮೆಯ ಇನ್ನುಳಿದ ನಾಟಕ ರಂಗಪರದೆಯ ಮೇಲೆ ವಿಜೃಂಭಿಸಲಿದೆ. ಇಲ್ಲವೆ ಓದುವುದಕ್ಕಾಗಿ ಅಚ್ಚಾದ ಕೃತಿಯೂ ಇದೆ.

**ಸಿದ್ದಪ್ಪ ಮಹಾರಾಜ :** ವಿಶ್ವಾಮಿತ್ರನು ಅದೆಷ್ಟು ಸಲ ತಪಗೈದನೋ? ಅದೆಷ್ಟು ಸಲ ಅವಮಾನ ಪಟ್ಟನೋ? ಆದರೂ ಆತ ಬ್ರಹ್ಮರ್ಷಿ ಪದವಿಗೇರಿದ. ಪ್ರತಿ ಬ್ರಹ್ಮನೆನಿಸಿಕೊಂಡ. ಈ ಜೀವನ ಒಂದು ಸತತ ಕೃಷಿ, ಹೋಗು ಜಗಸಂಚರಿಸು ಜಗದೊಳೆಕಾಗು, ಜಗದಿಂದ ಹೊರಗಿರು"[೨೪] ಎಂದು ಶಿವಲಿಂಗೇಶ್ವರನಿಗೆ ಗುರುಗಳು ಉಪದೇಶಿಸಿದರು.

"ಇಂತಹ ಒಬ್ಬ ಮಹಾಪುರುಷನ ಬದುಕನ್ನು ನಾಟಕಕ್ಕೆ ಅಳವಡಿಸಿ, ಪ್ರಯೋಗಿಸುವ ಸಾಹಸಮಾಡಿದ್ದು ಈ ಭಾಗದ ಶರಣ ಸಾಹಿತಿ ಎಲ್‌ಬಿಕೆ. ಆಲ್ದಾಳ ಒಬ್ಬ ಮುಸ್ಲಿಂ ಬಾಂಧವ ಇಂತಹ ಸಾಹಸಕ್ಕಿಳಿದಿದ್ದು ಚಿಕ್ಕಮಾತಲ್ಲ, ವೀರಶೈವ ಸಾಹಿತ್ಯವನ್ನು ಅರಿತು ಶರಣರ ಬದುಕಿಗೆ ಮಾರುಹೋದ ಎಲ್.ಬಿ.ಕೆ ಆಲ್ದಾಳ ಈ ಸಗರನಾಡಿನ ಎಲ್ಲ ಶರಣರನ್ನು ರಂಗಭೂಮಿಗೆ ತಂದುದು ಶ್ಲಾಘನೀಯ".[೨೫]

ಸಂಸಾರತ್ಯಾಗ ಮಾಡಿದ ಶಿವಲಿಂಗೇಶ್ವರರು, ಪಾಪಕೂಪದಿಂದ ಹೊರಬಂದು ಶರಣರಾದರು. ಅರಳಗುಂಡಿಗೆಯ ಶರಣ ಬಸಪ್ಪ, ಎಳಂದೂರಿನ ಅರಸ ನಿಜಗುಣಾರಾಧ್ಯರು ಹ್ಯಾಂಗ ಆ ಸುಳಿಯಿಂದ ಸಿಡಿದು ಪಶ್ಚಿಮಗಿರಿ ಏರಿದರೊ? ಹಂಗ ನಾವು ಪ್ರಯತ್ನ ಮಾಡ್ಕೋಬೇಕು. "ಹುಟ್ಟುವಾಗ ಬೆತ್ತಲೆ, ಹೋಗುವಾಗ ಬೆತ್ತಲೆ" ನಡುವೆ ಈ ಬಟ್ಟೆಯ ವೇಷಯಾಕೆ? ನಿನ್ನ ಚಟ್ಟಕ್ಕೇರಿಸಿ ಅಗಸಿ ಹೊರಗ ತರುವ ಮೊದಲು ಬೆತ್ತಲಾಗು, ಬೆತ್ತಲಾಗು ಎನ್ನುವ ಮಾತುಗಳು ಭವದ ಕತ್ತಲೆಯ ಕರಾಳವನ್ನು ದೂರೀಕರಿಸಲು ಇದು ಅಗತ್ಯ ಎಂದು ತಿಳಿದರು, ಜೀವನಕ್ಕೆ ಬೇಕಾದದ್ದು ಆಸ್ತಿ ಎಂದರೆ, 'ಅಂಬಲಿ, ಕಂಬಳಿ ಆಸ್ತಿ, ಮಿಕ್ಕಿದ್ದೆಲ್ಲ ಜಾಸ್ತಿ"!

ಮಹಾತ್ಮರಾದವರಲ್ಲಿ ಜಾತಿ, ಮತ, ಪಂಥ ಭೇದ ಭಾವ ಇರುವುದಿಲ್ಲ, ಮಾನವರೆಲ್ಲ ನೆಮ್ಮದಿಯಿಂದ ಬದುಕಲಿ ಎಂಬ ವಾತ್ಸಲ್ಯ ಭಾವವೇ ಇರುತ್ತದೆ." [೨೬] ಇದನ್ನೇ ನಾವು–ನೀವು 'ಇಟಗಿ ಸಾಧು ಶಿವಲಿಂಗೇಶ್ವರ ಮಹಾತ್ಮೆ' ನಾಟಕದಲ್ಲಿ ಕಾಣಬಹುದು ನಾಟಕಕಾರ ಆಲ್ದಾಳ ಅವರು ಶಿವಲಿಂಗೇಶ್ವರ ಪಾತ್ರದ ಮೂಲಕ ಸಮಾಜಕ್ಕೆ ಒಳ್ಳೆಯ ಸಂದೇಶವನ್ನೇ ಕಳುಹಿಸಿದ್ದಾರೆ ಎಂಬುದು ಇಲ್ಲಿ ಕಂಡುಬರುತ್ತದೆ.

ನಾಟಕದಲ್ಲಿ ನಡು ನಡುವೆ ಎದ್ದು ಕಾಣುವ ಪವಾಡಗಳು ಪ್ರೇಕ್ಷಕರನ್ನು ಆಶ್ಚರ್ಯ ಆನಂದ ಮತ್ತು ಚಿಂತನೆಗೆ ಸೆಳೆಯುವ ಆಯಸ್ಕಾಂತದಂತೆ ಕಾಣುತ್ತವೆ. ಶಿವಲಿಂಗೇಶ್ವರರು

ಕೋಣಿನ ಮನೆತನದ ಕಾಶಮ್ಮ ವರ್ಷಗಳಿಂದ ಹಾಸಿಗೆ ಹಿಡಿದಿದ್ದಳು ಅವರ ಬೆನ್ನಿಗೆ ಗುದ್ದಿದ ಕೂಡಲೇ ಎಲ್ಲ ಬೇನೆ ಕಳೆದು ಗುಣ ಮುಖಳನ್ನಾಗಿ ಮಾಡಿದರು.

ಸಾಧು ಶಿವಲಿಂಗೇಶ್ವರರು ಖಣದಾಳ ಊರಿನಲ್ಲಿ ದೊಡ್ಡ ಪವಾಡವನ್ನೇ ಸೃಷ್ಟಿಸಿದಾಗ ಭಕ್ತರು ಬೆರಗಾಗುವಂತಾಯಿತಂತೆ, ಇದನು ಹಾಡಿನ ಮೂಲಕ ಅಲ್ಲಿ ಈಗಲೂ ಮೆಲಕು ಹಾಕುತ್ತಾರೆ.

**ಚಂದಮ್ಮ ತಾಯಿಯೊಡನೆ ಬೀಸಿದನು ದಿಗಂಬರ**
**ಪರುಷ ಬಟ್ಟಲಿವನಿತ್ತ ದಾಸೋಹ ಗೈಯುನಿರಂತರ**
**ಕೋಣಿನ ಕಾಶಮ್ಮನ ರೋಗ ಕಳೆದ ಚಿದಂಬರ**
**ಎಣ್ಣೆ ಕಾಯ್ದ ಕಡಾಯಿಯೊಳಗ ಕರದಿಟ್ಟ ಮಂದಾರ**
**ಆಲ್ದಾಳೀಶ ಸ್ವರೂಪ ಈ ಹರ"** [೨೭]

"ಶಿವಲಿಂಗೇಶ್ವರ : ಮಗುವಾಗಿ ಕಂಡೀರಿ, ಗುರುವೆಂದು ಪೂಜಿಸಿದಿರಿ, ಶಿವ ಶಿವನೆಂದು ಧ್ಯಾನಿಸಿದಿರಿ, ಇಟಗಿಯ ನನ್ನ ಪರಮ ಭಕ್ತರೆ! ನಾವು ಈ ಭವಕೆ ಬಂದ ಪಾತ್ರ ಮುಗಿಯಿತು. ಆ ಶಿವನಾದೇಶದಂತೆ ಇಂದು ಛಟ್ಟಿ ಆದ ಪಂಚಮಿಗೆ ಹೋಗಲೇಬೇಕು ನೀವೆಲ್ಲರು. ನಗುನಗುತ-ಬೀಳ್ಕೊಡಬೇಕು. ಯಾರೂ ದುಃಖಿಸಬಾರದು ಇದು ಕರ್ಮಶರೀರ ಪಂಚ ತತ್ವಗಳಲ್ಲಿ ಬೆರೆತು ಒಂದಾಗಿ ಅನಂತತೆಯಲ್ಲಿ ಅನುಕರಣಿತವಾಗುವುದು".[೨೮] ಎಲ್ಲರೂ ಶಿವನಾಮ ಸ್ಮರಣೆ ಮಾಡಲು ಅಪ್ಪಣೆ ಕೊಡಿಸಿ, ತಾವು ಲಿಂಗೈಕ್ಯರಾದರು. ನಾಟಕ ಮುಕ್ತಾಯ.

**"ಇಟಗಿಯಾ ಜ್ಯೋತಿ"**
**ಬೆಳಗಿನಲಿ ಬೆಳಕಾಯಿತು**
**ಭಕ್ತರ ಹೃದಯ ಸ್ಪಂಧಿಸಿತು**
**ಕಲ್ಯಾಣ ಶರಣರ ನೆನಪಿಸಿತು".** [೨೯]

ಮಲೇಶಪ್ಪ ಅಗರ್ಭ ಶ್ರೀಮಂತನಾಗಿದ್ದು ಶಿವಲಿಂಗೇಶ್ವರ ಭಕ್ತನಾಗಿ ತನ್ನೆಲ್ಲ ಆಸ್ತಿಯನ್ನೆಲ್ಲ ತೊರೆದು ಗುರುಸೇವೆಗೆ ಅಣಿಯಾಗುತ್ತಾರೆ. ಇದೇ ರೀತಿ ಶ್ರೀಮಂತಪ್ಪನು ಸಹ ತಾನು ಮಾಡಿದ ಕೆಲಸಕ್ಕೆ ತಕ್ಕ ಫಲ ಉಣ್ಣುತ್ತಾನೆ. ಅವನ ಅಹಂಕಾರ, ದುಶ್ಚಟಗಳಿಗೆ ಹೆಸರು ಹೇಳಿಸಿ ಮಾಡಿದಂತಿತ್ತು. ಅವನ ಮಾತಿನಲ್ಲಿ ಕೇಳಿ,

"**ಶ್ರೀಮಂತಪ್ಪ** : ಈ ಕೋಟ್ನೂರ ಶ್ರೀಮಂತಪ್ಪನ ಸಿಟ್ಟ ಅಂದ್ರ ಹಠದಲ್ಲಿ ವಿಶ್ವಾಮಿತ್ರ ಛಲದಲ್ಲಿ ದುರ್ಯೋಧನ ಅವರಿಗಿಂತಲೂ ಮಿಗಿಲು ಅನ್ನೋದು ಈ ಸುತ್ತ ನಾಲ್ಕು ಹಳ್ಳಿಗೂ ಮನೆಮಾತಾಗಿದೆ..... ಶಂಬಣ್ಣಗ ಬೆನ್ನಹಚ್ಚಿನಿ ಆ ಹುಚ್ಚಗ ಹಿಡ್ಕೊಂಡ ಬರಲಿಕ್ಕಿ ಹೇಳಿನಿ ಆ ಹುಚ್ಚನ ಗಡ್ಡಾಮೀಸಿ ತಗಿಸುವವರೆಗೂ ನನಗೆ ನೆಮ್ಮದಿಇಲ್ಲ ನನ್ನ ಮನಸ್ಸ್ಯಾಗ ಬಂದದ್ದು ಬಿಟ್ಟಿಲ್ಲ".[೩೦] ಶ್ರೀಮಂತನ ಕೋಪ ಅವನ ವಿನಾಶಕ್ಕೆ ಕಾರಣವಾಯಿತು.

ಉಳಿದೆಲ್ಲ ಪುರುಷ ವರ್ಗದ ಪಾತ್ರಗಳ ಸಂಭಾಷಣೆಗಳು ನಾಟಕದ ಕಳೆ ಹೆಚ್ಚಿಸಿವೆ ಸ್ತ್ರೀಪಾತ್ರಗಳಲ್ಲಿ ಮಹಾಸ್ವಾಧಿ ಗಿರೆಮ್ಮನ ಪಾತ್ರ ಮಹಿಳೆಯರ ಮನ ಕಲುಕಿಸುವಲ್ಲಿ ಯಶಸ್ವಿಯಾಗುತ್ತದೆ. ಮಕ್ಕಳಿಲ್ಲದೆ ಪರಿತಪಿಸುವ ಬಂಜೆ ಹೆಣ್ಣಿಗೆ ಕಾಡುವ, ಕುಹಕದ ನುಡಿಗಳನ್ನು ಕೇಳ ಬೇಕಾದ ಪ್ರಸಂಗ ಜೀವದ ನೆಮ್ಮದಿಯನ್ನೇ ಹಾಳು ಮಾಡುತ್ತದೆ.

"**ಗಿರೆಮ್ಮ** : ಪೂಜ್ಯ ಗುರುಗಳೇ, ತಮ್ಮ ಶ್ರೀ ಚರಣಕ್ಕೆ ಹಣಿ ಹಚ್ಚತೀನ್ರಿ, ಮಣಿತೀನಿ, ದಿಂಡರ್ಕಿ ಉರುಳುತ್ತೀನಿ, ಅದರ ನನಗ ತಾಯಿತನವನ್ನಿತ್ತು ಕೊಟ್ಟುಕಾಪಾಡು ತಂದೆ ಕಾಪಾಡಿರಿ".[೩೧] ಗಿರೆಮ್ಮ ಮಕ್ಕಳಿಗಾಗಿ ಹಂಬಲಿಸುವ ದೃಶ್ಯ. ಮಹಿಳಾ ಪ್ರೇಕ್ಷಕರ ಕಣ್ಣಲ್ಲೂ ನೀರು ತುಂಬಿ ಬಂದಿದ್ದರೆ ಅತಿಶಯೋಕ್ತಿ ಅಲ್ಲ. ಏಕೆಂದರೆ ಹೆಣ್ಣುಜೀವ, ಮಕ್ಕಳನ್ನು ಬಯಸುವುದು ಸಹಜ ಸ್ವಭಾವ, ಹೂಕಾಯಿ ಬಿಟ್ಟ ಬಳ್ಳಿ ಮರಗಳು ನೋಡಿದಾಗ ಮನಕ್ಕೆಷ್ಟು ತೃಪ್ತಿ ಪಡುವುದೋ? ಅದರಂತೆ ಪ್ರಪಂಚದ ಬಳ್ಳಿಯಲ್ಲಿ ನಾನೊಂದು ಹೂಬಿಡದ ಬಳ್ಳಿಯಂತ್ತಾದೆನಲ್ಲಾಂತ ಚಿಂತಿಸುವದು ಸ್ವಾಭಾವಿಕವಾದದ್ದು.

ನಾಟಾಕಕಾರ ಈ ನಾಟಕದಲ್ಲಿ ಅಧ್ಯಾತ್ಮ, ಭಕ್ತಿ ಭಾವನೆ ತುಂಬಿಸಿಟ್ಟಂತೆ ಹಾಸ್ಯವನ್ನು ಪುಷ್ಕಳವಾಗಿ ನೀರಿನಂತೆ ಹರಿಬಿಟ್ಟಿದ್ದಾರೆ. ಹಾಸ್ಯ ಹಾಸ್ಯಕ್ಕಾಗಿ ಇರದೇ ಅಲ್ಲಿಯೂ ಪಾಠ ಬೋಧಿಸಿದ್ದಾರೆ. ಶಾಂತಿ–ಶಾಂತಪ್ಪ ಪಾತ್ರಗಳನ್ನೇನೋಡಿ.

"**ಶಾಂತಿ** : ಯವ್ವ, ಯವ್ವ, ಯವ್ವ, ಈ ಮಕ್ಕಳ ಕಾಲಾಗ ಸಾಕ, ಸಾಕಾಗಿ ಹೋಗೇತಿ, ಒಂದ ಎರ್ ಅಂತಾದ, ಒಂದಚಿರ್ ಅಂತಾದ, ಯಾರಿಗಂತ ರಂಬಸಬೇಕು.

ಆಲ್ದಾಳರು ಹಾಡುಗಳನ್ನು ನಾಟಕದಲ್ಲಿ ಸಂದರ್ಭಕ್ಕನುಸಾರವಾಗಿ ಬಳಸಿ, ನಾಟಕದ ಸನ್ನಿವೇಷಗಳಿಗೆ ರಂಜನೆ, ಜೀವದ ಕಳೆಯನ್ನು ತುಂಬಿದ್ದಾರೆ. ಸಂಗೀತ, ಹಾಡು, ಕುಣಿತ, ಹಾಸ್ಯ ನಾಟಕದ ಜೀವಾಳ, ಇವಿಲ್ಲದಿದ್ದರೆ ನಾಟಕವೇ ಎನ್ನಿಸುವುದಿಲ್ಲ, ಸಂಗೀತ ಹಾಗೂ ಹಾಡುಗಳು ನಾಟಕದ ಯಶಸ್ವಿಗೆ ಕಾರಣವಾಗುತ್ತವೆ.

ನಾಂದಿ ಪದಗಳಂತೆ ಆಲ್ದಾಳ ಅವರ ಪೌರಾಣಿಕ, ಆಧ್ಯಾತ್ಮಿಕ, ಶರಣರ ನಾಟಕಗಳಲ್ಲಿ ಮಂಗಲ ಗೀತೆಗಳು ಭರಪೂರವಾಗಿ ಪ್ರೇಕ್ಷಕರಿಗೆ ತಲೆತೂಗಿಸುತ್ತಿವೆ. ಆದಿ ಅಂತ್ಯದ ಪದ್ಯಗಳು ಹೆಚ್ಚಾಗಿ ದೇವರನ್ನೊ, ಮಹಾತ್ಮರನ್ನೊ, ಶಿವಯೋಗಿಗಳನ್ನೊ ಸ್ತುತಿಸುವ ಪದ್ಯಗಳಾಗಿವೆ, ಆರಂಭದ ಹಾಡುಗಳು ವಿಘ್ನ ನಿವಾರಿಸುವ ಪಾರ್ಥನೆ ಹಾಡುಗಳಿದ್ದರೆ, ಮುಕ್ತಾಯದ ಪದ್ಯಗಳು ರಕ್ಷಣೆ ನೀಡಿ ಕಾಪಾಡಬೇಕೆಂದಾಗಲಿ ಇಲ್ಲವೇ ಸಕಲರಿಗೂ ಲೇಸನ್ನೆ ಬಯಸುವಂತಾಗಿರುತ್ತದೆ. ಸಂದರ್ಭಕ್ಕೆ, ಸಮಯಕ್ಕೆ ತಕ್ಕಹಾಗೆ ಹಾಡುಗಳನ್ನು ರಚಿಸಿ ಪ್ರೇಕ್ಷಕರಿಂದ ಕರತಾಡನಗಿಟ್ಟಿಸುವುದು ನಾಟಕದ ಉದ್ದೇಶವಾಗಿರುತ್ತದೆ. ಗಂಡ–ಹೆಂಡತಿಯರ ಈ ಹಾಡು ನೋಡಿ.

**ಹೆಂಡತಿ :** **ಪುಟ್ಟ, ಪುಟ್ಟ ಹೆಜ್ಜೆಯಿಂದಾಡುವ ಕಂದ**
**ಅಳುವಮಗುವಿಗೆ ಮೊಲೆಯುಣಿಸುವದಾನಂದ॥**

**ಗಂಡ :** **ತುಂಬಿದ ಸಂಸಾರಕ್ಕೆ ಮಕ್ಕಳೆ ಅಂದ**
**ಕೈಹಿಡಿದ ಹೆಂಡತಿ ಮಗ್ಗಲಿರಲು ಬಲುಚಂದ ॥"** [೩೮]

ಈ ನಾಟಕವನ್ನು ಶ್ರೀ.ಷ.ಬ್ರ. ಚನ್ನವೀರ ಶಿವಾಚಾರ್ಯರು ಹಾರಕೂಡ ಅವರು ಉದ್ಘಾಟಿಸಿದಲ್ಲದೆ ತಮ್ಮದೇ ಆದ ಪ್ರಕಾಶನದಿಂದ ೧೦೧೩ನೇ ಇಸ್ವಿಯಲ್ಲಿ ಗ್ರಂಥ ರೂಪದಲ್ಲಿ ನಾಟಕಪ್ರಿಯ ಓದುಗರಿಗೆ ಅರ್ಪಿಸಿದ್ದಾರೆ. ಸಂಗೀತ, ಸಾಹಿತ್ಯ, ಕಲೆ, ಜ್ಞಾನ, ಅನ್ನದಾನ, ಈ ತ್ರಿವೇಣಿ ಸಂಗಮ ಕಲ್ಯಾಣ ನಾಡಿನ ಶ್ರೀ ಚೆನ್ನಬಸವೇಶ್ವರ ಸಂಸ್ಥಾನ ಮಠ ಎಂದರೆ ಆಶ್ಚರ್ಯಪಡಲಾಗದು ನುಡಿದಂತೆ ನಡೆ ಇದೆ ಜನ್ಮಕಡೆ ಎನ್ನುವ ಮಾತು ಸಾರ್ಥಕ ಗೊಳಿಸಿದ್ದಾಗಿದೆ.

## ಮಹಾತ್ಮಾ ಶ್ರೀ ಚರಬಸವೇಶ್ವರ ಮಹಾತ್ಮೆ (ಅಧ್ಯಾತ್ಮಿಕ ನಾಟಕ)

**ಯದಾಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।**
**ಅಭ್ಯುತ್ವಾನಮ್ ಧರ್ಮಸ್ಯತದಾತ್ಮಾನಂ ಸೃಜಮ್ಯಾಹಮ್ ॥**

ಹಿಂದುಗಳ ಪವಿತ್ರ ಗ್ರಂಥವಾದ ಭಗವದ್ ಗೀತೆಯಲ್ಲಿನ ಶ್ಲೋಕದಂತೆ, ಭಾರತದಲ್ಲಿ ಧರ್ಮಕ್ಕೆ ಮಾಲಿನ್ಯಬಂದಾಗ ದುಷ್ಟರನ್ನು ಶಿಕ್ಷಿಸಲು, ಶಿಷ್ಟರನ್ನು ರಕ್ಷಿಸಲು, ಧರ್ಮವನ್ನು ಕಾಪಾಡಲು, ನಾನು ಮತ್ತೇ ಹುಟ್ಟಿಬರುತ್ತೇನೆಂದು ಭಗವಂತನು ಹೇಳಿದಂತೆ ಅನೇಕ ಅವತಾರಿ ಪುರುಷರು ಜನ್ಮತಾಳಿದ್ದಾರೆ. ಜಗತ್ತಿನಲ್ಲಿ ಭಾರತ ದೇಶ ತನ್ನದೇ ಆದ ಗೌರವ ಘನತೆಯನ್ನು ನಾಡಿನ ಉದ್ದಗಲಕ್ಕೂ ಪುಣ್ಯ ನಾಡಿನಲ್ಲಿ ಮಣ್ಣಿನ ಕಣಕಣಗಳಲ್ಲಿ ಶ್ರೀಮಂತ ಶಕ್ತಿ ಅವ್ಯಕ್ತಗೊಂಡಿದೆ. ನಾಡಿನ ಉದ್ದಗಲಕ್ಕೂ ಅನೇಕ ಪುಣ್ಯ ಪುರುಷರು ಮತ್ತು ಆಚಾರ್ಯರು ಅವತರಿಸಿ ಜನಮನದ ಬೆಳವಣಿಗೆಗೆ ಕಾರಣೀ ಭೂತರಾಗಿದ್ದಾರೆ ಅವರ ಪಂಕ್ತಿಯಲ್ಲಿಯೇ ಸುಕ್ಷೇತ್ರ ಶಹಾಪೂರದ "ಮಹಾತ್ಮಾ ಶ್ರೀ ಚರಬಸವೇಶ್ವರರು" ಒಬ್ಬರಾಗಿದ್ದಾರೆ.

ಶ್ರೀ ಚರಬಸವೇಶ್ವರರ ಸಾಧನೆ ಸಣ್ಣದಲ್ಲ, ಸಾತ್ವಿಕ ಶಕ್ತಿಯನ್ನು ಮೈಗೂಡಿಸಿಕೊಂಡ ಶ್ರೀಗಳು ಜನಮನದಲ್ಲಿ ಇನ್ನೂ ಹಸಿರಾಗಿದ್ದಾರೆ. ಗ್ರಾಮಾಂತರ ಜನತೆಗೆ ದಾರಿದೀಪಕರಾಗಿ ಧರ್ಮದ ಕಹಳೆಯನ್ನು ಮೊಳಗಿಸಿದ್ದಾರೆ. ಧಾರ್ಮಿಕ ಕಾರ್ಯಗಳ ಜೊತೆ ಜೊತೆಗೆ ಸಾಮಾಜಿಕ ಸಂವೇದನಾಶೀಲರಾಗಿ ಸಮಾಜದ ಸಂಪ್ರೀತಿಗೆ ಪಾತ್ರರಾಗಿದ್ದಾರೆ.

ಕನ್ನಡ ನಾಡಿನ ಇತಿಹಾಸದಲ್ಲಿಯೇ ಸಗರನಾಡಿನ ಗಾಳಿ ವಿಶಿಷ್ಟ. ಅದು ಸಾಹಿತ್ಯ ಕಲೆಯಲ್ಲಿ, ಸಂಗೀತದಲ್ಲಿ, ಸಂತ–ಮಹಾಂತರಲ್ಲಿ ಅದರಲ್ಲೂ ಕೋಮು ಸೌಹಾರ್ದತೆಯಲ್ಲಿ ಒಂದು ಕೈ ಮೇಲೆನ್ನುವಂತಹ ವಾತಾವರಣ ನಮ್ಮದಾಗಿಸುವಲ್ಲಿ ಶಹಾಪೂರದ ಶ್ರೀ ಚರಬಸವೇಶ್ವರ ಸಂತರು ಒಬ್ಬರು.

"ಎಲ್.ಬಿ.ಕೆ.ಆಲ್ದಾಳರು ಒಬ್ಬ ಸೃಜನಶೀಲ ಸಾಹಿತಿಗಳು, ಇವರ ಸಾಹಿತ್ಯದ ಕೊಡುಗೆ ನಾಡಿಗೆ ಅಪಾರ, ಸಗರ ನಾಡಿನ ಸಿರಿ, ಶಹಾಪೂರ ಬಸವೇಶ್ವರ ಮಹಾತ್ಮೆ ಎಂಬ ನಾಟಕ ರಚಿಸಿ, ನಿರ್ದೇಶಿಸಿ ಜನರ ಮನ್ನಣೆ ಪಡೆದ ಇವರ ಜೀವನ ಪಾವನ.[೩೩]

ಮಹಾತ್ಮ ಶ್ರೀ ಚರಬಸವೇಶ್ವರರು, ಪೂಜ್ಯ ಶ್ರೀ ವೇದಮೂರ್ತಿ ಶೀಲವಂತಯ್ಯ ಮತ್ತು ಅವ್ವಮಾಂಬೆಯ ಪುತ್ರರಾಗಿ ಅನವಾರದ ಶ್ರೀ ಮಠದಲ್ಲಿ ಜನ್ಮತಾಳಿದರು. ಇವರಿಗೆ ಶ್ರೀರಾಚಯ್ಯ ಹಾಗೂ ಶ್ರೀ ಮಹಾಲಿಂಗಯ್ಯ ಎಂಬೀರ್ವರು ತಮ್ಮಂದಿರಿದ್ದರು, ತಮ್ಮ ಕಿರಿಯ ಸಹೋದರ ಜೊತೆ ಕೃಷಿ ಕಾರ್ಯ ಮಾಡುತ್ತ, ಶ್ರೀಮಠದ ಧಾರ್ಮಿಕಾಚರಣೆಗಳನ್ನು ನೆರವೇರಿಸುತ್ತಾ ಅನವಾರ ಹಾಗೂ ಸುತ್ತಲಿನ ಪರಿಸರದಲ್ಲಿ ಜ್ಞಾನ ದಾಸೋಹ ಹಾಗೂ ಅನ್ನದಾಸೋಹಗಳ, ಕಾರ್ಯಕೈಗೊಂಡರು.

ಶ್ರೀ ಚರಬಸವೇಶ್ವರರ ಸದ್ ವರ್ತನೆ, ಸದಾಚಾರವನ್ನು ಕಂಡು ಶಹಾಪುರದ ಭಕ್ತರು ಭಕ್ತಿ ಪೂರ್ವಕವಾಗಿ ಅಮಂತ್ರಿಸಿ, ಪಂಚಕಂತಿ ಮಠವನ್ನು ಸ್ಥಾಪಿಸಿದರು, ಶ್ರೀ ಫಿರಂಗಿ ಸಾಹು ಮಲ್ಲಯ್ಯನವರು ಆಗ ಶಾಹಪೂರದಲ್ಲಿ ಬಟ್ಟೆ ವ್ಯಾಪಾರಕ್ಕಾಗಿ ಪ್ರಸಿದ್ಧರಾಗಿದ್ದರು ಫಿರಂಗಿ ಸಾಹುಕಾರರು ಜವಳಿ ವ್ಯಾಪಾರಕ್ಕಾಗಿ ತಾವು ಎಲ್ಲ ರೀತಿಯ ಸಹಾಯ– ಸಹಕಾರ ನೀಡುವುದಾಗಿ ಶ್ರೀ ಚರಬಸವೇಶ್ವರರಲ್ಲಿ ಪ್ರಾರ್ಥಿಸಿಕೊಂಡರು. ಅದರಂತೆ ಶಹಾಪುರಕ್ಕೆ ಆಗಮಿಸಿದ ಶ್ರೀ ಚರಬಸವೇಶ್ವರರು ಕುದರೆ ಸವಾರಿ ಮಾಡುತ್ತ, ಗೋಗಿ, ಮದ್ರಕಿ, ಬಳಬಟ್ಟಿ, ಕೊಡಚಿ, ಯಡ್ರಾಮಿ, ಇನ್ನೀತರ ಗ್ರಾಮಗಳಲ್ಲಿ ಬಟ್ಟೆ ವ್ಯಾಪಾರ ಮಾಡತೊಡಗಿದರು, ಅವರದು ಸತ್ಯ, ಶುದ್ಧ ವ್ಯಾಪಾರವಾಗಿತ್ತು, ಶರಣರ ಕಾಯಕತತ್ವವನ್ನು ಸಂಪೂರ್ಣವಾಗಿ ಅಳವಡಿಸಿಕೊಂಡಿದ್ದರು, ದಾನ, ಧರ್ಮ, ಪರೋಪಕಾರಗಳ ಮೂಲಕ ಬಾಹ್ಯ ಜವಳಿ ವ್ಯಾಪಾರದೊಂದಿಗೆ ಪಾರಮಾರ್ಥಿಕ ಧನ ಸಂಗ್ರಹವನ್ನು ಕೂಡ ಸಂಪಾದಿಸ ತೊಡಗಿದರು.

"ಜವಳಿ ವ್ಯಾಪಾರದಿಂದ ಸಂಪಾದಿಸಿದ ಹಣ ಸತ್ಯ, ಶುದ್ಧವಾಗಿರಲಿ, ಬಂದಸಂಪಾದನೆ, ದಾಸೋಹಕ್ಕಾಗಿ ವಿನಿಯೋಗಿಸಿ ಶಿವಪ್ರಸಾದವನ್ನು ಹಂಚಬೇಕು, ಹನ್ನೆರಡನೆಯ ಶತಮಾನದಲ್ಲಿ ಕಲ್ಯಾಣದ ಕ್ರಾಂತಿಯ ಕಹಳೆಯನ್ನೇ ಊದಿದ ಅಣ್ಣಬಸವಣ್ಣ, ಹದಿನೇಳನೇಯ ಶತಮಾನದಲ್ಲಿ ಮಹಾದಾಸೋಹ ಗೈದ, ಅರಳಗುಂಡಿಗಿಯ ಶರಣಬಸಪ್ಪ, ಈ ಇಪ್ಪತ್ತನೆಯ ಶತಮಾನದಲ್ಲಿ ಅಯ್ಯನಾಗಿ, ಜಗದಯ್ಯನಾಗಿ ಸಕಲ ಜೀವಿಗಳಲ್ಲಿ ಶಿವಭಾವಕಂಡು, ಕಾಯಕಯೋಗದ ಚರಬಸ್ಸಯ್ಯ ನೀನೊಂದು ಲೋಕ ಹಿತಸಾಧನೆಗೆ ಅವತರಿಸಬೇಕಾಗಿದೆ. ಹರ, ಗುರು, ಚರ, ವಿರಕ್ತರ ಚರಣ ಸೇವೆಯಲ್ಲಿ ಪರಿಪೂರ್ಣವಾಗಬೇಕಾಗಿದೆ"[೩೪] ಎಂದು ಚೆನ್ನವೀರ ಶಿವಾಚಾರ್ಯರು ಬಸವಯ್ಯರಿಗೆ ಹಿತ ನುಡಿಗಳನ್ನು ಬೋಧಿಸಿದರು.

ಎಲ್.ಬಿ.ಕೆ ಆಲ್ದಾಳ ಅವರ 'ಮಹಾತ್ಮಾ ಶ್ರೀ ಚರಬಸವೇಶ್ವರ ಮಹಾತ್ಮೆ' ನಾಟಕವನ್ನು ಕೇವಲ ಮನರಂಜನೆಗಾಗಿ ಬರೆದುದಲ್ಲ, ಸಹಸ್ರಾರು ಜನರು ರಂಗಭೂಮಿಯ ಮೇಲೆ ನಡೆಯುವ ನಾಟಕ ಅದರಲ್ಲಿ ಪ್ರತಿ ಪಾತ್ರಧಾರಿಗಳು ಹೇಳುವ ಸಂಭಾಷಣೆ ಮಹತ್ವದ್ದಾಗಿದೆ. ಸಮಾಜಕ್ಕೆ ಒಂದು ನೀತಿಯ ಪಾಠ ತಲುಪಿಸಬೇಕೆಂಬುದೇ ಆಲ್ದಾಳರ ಉದ್ದೇಶವಾಗಿದೆ. ಇಂದಿನ ಮನುಷ್ಯ ಸಂಬಂಧದ ಸಂಕುಚಿತ ಮನೋಭಾವನೆಯ– ಸಮಾಜಕ್ಕೆ ಶ್ರೀ ಚರಬಸವೇಶ್ವರರು ನೀಡಿದ ಕಾಯಕ ದಾಸೋಹ, ದುಡಿಮೆ, ಶ್ರಮದಾನದಿಂದಾಗಿ ಮಾನಸಿಕ ತೃಪ್ತಿ ಇವುಗಳ ಪರಿಕಲ್ಪನೆಯಲ್ಲಿ ನಾಟಕ ಅಧ್ಯಾತ್ಮಲೋಕಕ್ಕೆಳೆದುಕೊಂಡು ಹೋಗುತ್ತದೆ.

ಮನುಷ್ಯನ ಬಾಳುವೆಯೇ ಹೀಗಿದೆ. ಇದ್ದಾಗ ದಾನ ಮಾಡುವುದಿಲ್ಲ, ಸಾಯುವಾಗ ಮಾಡಲಿಲ್ಲವಲ್ಲ ಎಂಬ ಗೋಳಾಟ. ಅದಕ್ಕಾಗಿಯೇ ಸರ್ವಜ್ಞ ಹೇಳುತ್ತಾನೆ. "ಸಿರಿಬಂದ ಕಾಲಕ್ಕೆ ಕರೆದು ದಾನವ ಮಾಡು, ಪರಿಣಾಮವಕ್ಕು, ಪದವಕ್ಕು ಕೈಲಾಸ ಬಿನ್ನಾಣವಕ್ಕು ಸರ್ವಜ್ಞ" ಸಂಪತ್ತಿದ್ದಾಗ ಬಡವರಿಗೆ, ನಿರ್ಗತಿಕರಿಗೆ, ಕುರುಡರಿಗೆ–ಕುಂಟರಿಗೆ ಕರೆದು ದಾನ ಮಾಡಬೇಕು. ಕೊಟ್ಟು ಕೊಟ್ಟೆನೆನದಿರು. ಅದು ಮುಂದೆ ನಿನ್ನ ದಾರಿಗೆ ಕಟ್ಟಿದ ಬುತ್ತಿಯಾಗುತ್ತದೆ. ಇದರಿಂದ ಜೀವನ ಸಾರ್ಥಕ ಎನ್ನುವಂತೆ ಆಲ್ದಾಳರು ಈ ನಾಟಕದಲ್ಲಿ ಕಾಯಕ, ಸತ್ಯ, ನಿಷ್ಠೆ ಮತ್ತು ದಾಸೋಹದ ಮಹತ್ವತೋರಿಸಿದ್ದಾರೆ.

ಶ್ರೀ ಚರಬಸವಯ್ಯನವರು ಲೋಕ ಹಿತಸಾಧನೆಯೇ ತಮ್ಮ ಬಯಕೆಯಾಗಿಸಿಕೊಂಡರು ಯಾವ ಆಸ್ತಿಗೂ ಆಸೆಮಾಡಲಿಲ್ಲ. ತಮ್ಮ ರಾಚಯ್ಯನಿಗೆ ಎಲ್ಲವನ್ನು ಬಿಟ್ಟು ಹೊರನಡೆದ, ತಿಳಿದಂತೆ ಮಾಡಿದ ಬಂಧು, ಬಳಗದ ಹಂಗುಹರಿದವರಾದರು. ವಿಶ್ವಕುಟುಂಬಿಯಾದವರು. ದಾಸೋಹ ಮೂರ್ತಿಗಳಾಗಿ ಕೀರ್ತಿಗಳಿಸಿದವರು.

ಎಲ್ಲ ಪ್ರಕಾರದ ನಾಟಕಗಳನ್ನು ರಚಿಸಿರುವ ಆಲ್ದಾಳರು ಕಾಲಕ್ಕನುಗುಣವಾಗಿ ತಮ್ಮ ಮನೋಭಾವನೆಯನ್ನು ಬದಲಾಯಿಸಿಕೊಳ್ಳುತ್ತಿದ್ದರು. ಯಾವುದೇ ಸಾಹಿತ್ಯ ಅಂದಂದಿನ ಸಮಾಜದ ಕಾಲದ, ಮನೋಧರ್ಮಕ್ಕನುಗುಣವಾಗಿ ಆವಿರ್ಭವಿಸುತ್ತ, ಬದಲಾವಣೆಕೂಡ ಅನಿವಾರ್ಯ ಮತ್ತು ಅವಶ್ಯ ಈ ಹಿನ್ನಲೆಯಲ್ಲಿ ಆಲ್ದಾಳ ಅವರು ಆಧ್ಯಾತ್ಮಿಕ ನಾಟಕಗಳನ್ನು ಬರೆದು ಕನ್ನಡ ರಂಗಭೂಮಿಗೆ ಕೊಡುಗೆಯಾಗಿ ನೀಡಿದರು. ಅವುಗಳಲ್ಲಿ ಸುಕ್ಷೇತ್ರ ಶಹಾಪುರದ ಮಹಾತ್ಮಾ ಶ್ರೀ ಚರಬಸವೇಶ್ವರ ಮಹಾತ್ಮೆ ನಾಟಕವು ಒಂದು. ಈ ನಾಟಕದ ಸೃಷ್ಟಿಯ ಬಗ್ಗೆ ನಾಟಕಕಾರ ಆಲ್ದಾಳರು ತಮ್ಮ ನನ್ನ ನುಡಿಯಲ್ಲಿ ಹೀಗೆ ಬರೆಯುತ್ತಾರೆ. "ಶಿಲೆ ಒಂದೆಡೆ ಇತ್ತು, ಶಿಲ್ಪಿಯು ಒಂದೆಡೆ ಇದ್ದು ಸುಯೋಗದಿಂದ ಅವರೀರ್ವರ ಸಮ್ಮೀಲನದ ಸಂಕೇತವೇ ಆದಿಕೇಶವ ಮೂರ್ತಿ, ಅದರಂತೆ ನಾನು ಒಂದೆಡೆ ಇದ್ದೆ. ಶಹಾಪೂರ ಶ್ರೀ ಚರಬಸವೇಶ್ವರ ಸಂಸ್ಥಾನ ಗದ್ದುಗೆಯ ಶ್ರೀ ಶರಣು. ಬಿ. ಗದ್ದುಗೆ (ಮುತ್ಯಾ) ಅವರು ಒಂದೆಡೆ ಇದ್ದರು. ನಮ್ಮೀರ್ವರ ಅಪೂರ್ವ ಮಿಲನದ ಶುಭ ಸಂಕೇತವೇ ಶ್ರೀ ಚರಬಸವೇಶ್ವರ ಮಹಾತ್ಮೆ ನಾಟಕ ಕೃತಿ" [೩೫]

'ಶ್ರೀ ಚರಬಸವೇಶ್ವರರ ಮಹಾತ್ಮೆ' ನಾಟಕದಲ್ಲಿ ಅನೇಕ ಪವಾಡಗಳು ನಡೆದು ಪ್ರೇಕ್ಷಕರನ್ನು ರಂಜಿಸುವುದರ ಜೊತೆಗೆ ಭಕ್ತಿಯೂ ಕಂಡುಬರುತ್ತದೆ. ಅದೃಶ್ಯ ಲೀಲೆಗಳು ಮನಸ್ಸಿನಲ್ಲಿ ಗಾಢವಾಗಿ ಮೂಡುತ್ತವೆ. ನಾಟಕದಲ್ಲಿ ಚೆನ್ನಿ; "ಹ್ವಾದಲ್ಲಿ ಪವಾಡ, ಇದ್ದಲ್ಲಿ ಪವಾಡ ಜಗದೊದ್ದಾರ ಮಾಡ್ಲಕ್ಕ ಬಂದ ಆ ಜಂಗಮನ ಪಾದಸಿಕ್ಕಿದ್ದು ನಮ್ಮ ಪುಣ್ಯ ಕೊಡಚಿ ಪುರಾಣ ಮಂಗಲಕ್ಕೆ ಹೋದಾಗ ಬಂದ ಜನಕ್ಕೆ ನೀರ ಸಾಲಲಾರ್ದಂಗ ಆದಾಗ ಕುಲಕರ್ಣೆರ ಬಾವಿಗೆ ಹೋಗಿ ಗಂಗಸ್ತೋತ್ರ ಮಾಡಿದ್ರ ಒಂದು ತಾಸಿನಾಗ ಬಾವಿ ತುಂಬಿ ಬಿಟ್ಟಿತಂತೆ ಎಂದು ಪವಾಡದ ಮಹಿಮೆ ಹೇಳುತ್ತಾಳೆ".[೩೬]

ಚರಬಸವತಾತನವರು ಎಂದರೆ ಎಲ್ಲರಿಗೂ ಭಕ್ತಿ ತುಂಬಿಬರುತ್ತದೆ. ಕಣ್ಣುಗಳು ಹೊಳೆಯುತ್ತವೆ. ಯಾಳವಾರದ ಸಿದ್ದಣ್ಣಗೌಡರ ಪಾತ್ರ ಏನು ಹೇಳುತ್ತದೆ.ಆ ಗುರು ಮಾಹಾರಾಜರು ಯಾವ ರೂಪದಿಂದ ಯಾವ ಯಾವ ಕಾರ್ಯ ಮಾಡಿಸುತ್ತಾರೋ ಯಾರಿಗೆ ಗೊತ್ತು. ಅವರು ಒಲಿದರೆ ಒಣಗಿದ್ದು ಚಿಗುರು ಒಡಿಯುತ್ತದೆ, ಬಂಜಿದನಗಳು ಹಾಲುಗರಿಯುತ್ತಾವು, ವಿಷ ವಿದ್ದದ್ದು ಅಮೃತವಾಗುತ್ತದೆ". ಆ ದೇವರಲ್ಲಿ ಶರಣರಲ್ಲಿ,ಗುರುಗಳಲ್ಲಿಭಕ್ತಿಪೂರ್ವಕವಾಗಿ ನಡೆದುಕೊಂಡಲ್ಲಿ ಸಕಲರ ಜೀವನ ಪಾವನವಾಗುವುದು ಎಂದು ನಾಟಕಕಾರರ ಅಚಲ ವಿಶ್ವಾಸ,

"ಜ್ಯೋತಿ ಬೆಳಗಿತು ಅನಂತ ಆಕಾಶದಲ್ಲಿ ಲೀನವಾಯಿತು ಭಕ್ತರ ಮನದಲಿ",

"ಶ್ರೀ ಚರಬಸವೇಶ್ವರ ಮಹಾತ್ಮೆ" ನಾಟಕದಲ್ಲಿ ಪುರುಷ ಮತ್ತು ಸ್ತ್ರೀ ಪಾತ್ರಗಳು ಹೇರಳವಾಗಿವೆ.ಹದಿನೇಳನೇ ಶತಮಾನದ ಜೀವಂತ ಚಿತ್ರಣವನ್ನು ಆಲ್ದಾಳರು ತಮ್ಮ ನಾಟಕದಲ್ಲಿ ಪಡಿಮೂಡಿಸಿರುವ ಇಲ್ಲಿನ ಪುರುಷ ಪಾತ್ರಗಳಲ್ಲಿ ಪ್ರಮುಖ ಪಾತ್ರವಾಗಿ ಶ್ರೀಚರಬಸವೇಶ್ವರರನ್ನ ಚಿತ್ರಿಸಿದರೆ ಸ್ತ್ರೀಪಾತ್ರಗಳಲ್ಲಿ ಅವ್ವಮಾಂಬೆ, ಸೂಗಮಾಂಬೆ, ಬಸವಾಂಬೆ ಪ್ರಮುಖ ಪಾತ್ರವಾಗುತ್ತಾರೆ. ಇವರಲ್ಲದೆ ಚನ್ನವೀರ ಶಿವಾಚಾರ್ಯರು, ಶೀಲವಂತಯ್ಯಾ, ಮಹಾಲಿಂಗಯ್ಯ ಸಹೋದರರು, ರಾಚಯ್ಯಾ, ಗುರುಬಸವಯ್ಯಾ, ಸುರಪುರದ ದೊರೆ ರಾಜಾವೆಂಕಟಪ್ಪ ನಾಯಕ, ಅಥಣಿ ಮುರುಘೇಂದ್ರಸ್ವಾಮಿ ಮುಂತಾದವರು. ನಾಟಕಕಾರರು ಶರಣಸಂಸ್ಕೃತಿಯ ಇತಿಹಾಸಕ್ಕೆ ಯಾವುದೇ ಅಡ್ಡಿಯಾಗದಂತೆ ನಾಟಕದ ಹಂದರವನ್ನು ಬೆಳೆಸಿಕೊಂಡು ಬಂದಿದ್ದಾರೆ. ಶರಣ ಶ್ರೇಷ್ಠ ಚರಬಸವೇಶ್ವರರ ಬಗೆಗೆ ಈಗಾಗಲೇ ಅನೇಕ ಕೃತಿಗಳು ಹೊರಬಂದಿವೆ. ಆದರೆ ನಾಟಕಕಾರ ಆಲ್ದಾಳ ಅವರು "ನಿಜ ಸಗರ ನಾಡಿನ ಅಂದಿನ ಪ್ರಖ್ಯಾತ ಕವಿಗಳು, ಸಾಹಿತಿಗಳು ಆದ ರಸ್ತಾಪೂರದ ಶ್ರೀಭೀಮ ಕವಿಗಳು ಶ್ರೀಚರಬಸವೇಶ್ವರ ಪುರಾಣವನ್ನು ಆಧಾರವಾಗಿಟ್ಟುಕೊಂಡೆ, ಅನವಾರ ಗ್ರಾಮದ ಹಿರಿಯರ ಮುಖಾಂತರ ಹರಿದು ಬಂದ ಜನಪದರನ್ನು ಸದುಪಯೋಗಪಡಿಸಿಕೊಂಡು ನಾಟಕವನ್ನು ಬರೆಯಲಾಯಿತು"[೩೭] ಎಂದು ತಮ್ಮ ನನ್ನನುಡಿಯಲ್ಲಿ ತಿಳಿಸಿದ್ದಾರೆ.

ಪ್ರಸ್ತುತ ನಿಜಕಾಯಕಯೋಗಿ ಚರಬಸವೇಶ್ವರ ನಾಟಕ ಶಹಾಪೂರ ಮತ್ತು ಇನ್ನಿತರ ಕಡೆಗಳಲ್ಲಿ ಪ್ರಯೋಗಗೊಂಡು ಮನೆಮಾತಾಯಿತು. ವೀರಶೈವ ಸಾಹಿತ್ಯದಲ್ಲಿ ಅಪಾರ ಕೃಷಿ ಮಾಡಿದ ಆಲ್ದಾಳರು ಅನೇಕ ಮಠಮಾನ್ಯರಿಂದ ಗೌರವಕ್ಕೆ ಪಾತ್ರರಾಗಿದ್ದಾರೆ.

ಅಂದಿನ ರಂಗಭೂಮಿಗೂ, ಸಂಗೀತಕ್ಕೂ ಬಿಡಿಸಲಾರದ ಬಂಧ . ನಾಟಕಗಳಲ್ಲಿ ಹಾಡುಗಳಿಗೆ ಹಾಗೂ ಸಂಗೀತಕ್ಕೆ ಹೆಚ್ಚಿನ ಪ್ರಾಧಾನ್ಯತೆಯಿತ್ತು. ಸಂಗೀತ ಮತ್ತು ಹಾಡು ಒಂದೇ ನಾಣ್ಯದ ಎರಡು ಮುಖಗಳಂತೆ ಇದ್ದವು. ಒಂದು ಕಾಲಕ್ಕೆ ನಾಟಕವೆಂದರೆ ಕಾವ್ಯವೇ ಆಗಿತ್ತು. ಹೀಗಾಗಿ ಆಲ್ದಾಳರು ನಾಟಕಗಳಲ್ಲಿ ಸನ್ನಿವೇಶಕ್ಕನುಗುಣವಾಗಿ ಹಾಡುಗಳನ್ನು ಸೇರಿಸುವುದು ಅನಿವಾರ್ಯವೂ, ಅವಶ್ಯವೂ ಆಗಿತ್ತು. ಹಾಡುಗಳಲ್ಲಿ ಸತ್ವ ಮತ್ತು ನೀತಿ ತುಂಬಿದೆ, ನಾಂದಿಪದ, ಲಾಲಿಪದ, ಆರತಿಪದ, ನಾಡಗೀತೆ, ದೇಶಭಕ್ತಿಗೀತೆ, ಭಾವಗೀತೆ, ಮಂಗಲಗೀತೆ ಹೀಗೆ ಹಲವು ಗೀತೆಗಳನ್ನು ನಾಟಕಗಳಲ್ಲಿ ಅಳವಡಿಸಿ ಪ್ರೇಕ್ಷಕರಿಗೆ ರಂಜಿಸುವುದರ ಜೊತೆಗೆ, ಹಿತವಾದ ಬೋಧನೆ ನೀಡಿದ್ದಾರೆ. ಪಂಚ ಪಂಕ್ತಿಯ ಹಿನ್ನಲೆ ಹಾಡಿನಲ್ಲಿ ನೀತಿ ಪಾಠ ಅರಿಯಿರಿ.

**"ಋಣವು ತೀರಿದ ಬಳಿಕ**
**ಈ ನೆಲವಾಸೆ ನಿನಗ್ಯಾಕೇ?**
**ವಿಷಯ ಅಳಿದ ಬಳಿಕ**
**ಮಮಕಾರದಾಸೆ ಯಾತಕೆ?**
**ಓ ಮಾನವಾ, ಓ ಮಾನವಾ"** [೩೮]

ಶ್ರೀ ಶರಣು ಬಿ. ಗದ್ದುಗೆ (ಮುತ್ಯಾ) ಅವರು ಈ ನಾಟಕಕ್ಕೆ ಬೇಕಾದ ದೃಶ್ಯಗಳನ್ನು ಸಕಲ

ಸದ್ಭಕ್ತರ ಸಹಾಯದಿಂದ ಬರೆಯಿಸಿ ಅಳ್ಳಳ್ಳಿಯ ಶ್ರೀ ನಾಗೇಂದ್ರ ನಾಟ್ಯಸಂಘದ ಟ್ರಿಕ್ಸ್‌ಗಳನ್ನು ನಾಚವಾರದ ಕಲಾಬಂಧುಗಳ ಮುಖಾಂತರ ಶ್ರೀ ಮಲ್ಲಯ್ಯಾಸಾಹು ಫಿರಂಗಿ ಅವರು ರಂಗಮಂದಿರದಲ್ಲಿ ನಾಟಕ ಪ್ರಯೋಗಿಸಿದಾಗ ಜನಮನ್ನಣೆಗೆ ಪಾತ್ರವಾಯಿತು. " ಶರಣಸಾಹಿತಿ ಶ್ರೀ ಆಲ್ದಾಳರು ಪ್ರಸ್ತುತ ಶ್ರೀ ಚರಬಸವೇಶ್ವರ ಕುರಿತಾದ ನಾಟಕವನ್ನು ಓದಿದಾಗ ಮತ್ತು ಅದನ್ನು ರಂಗಭೂಮಿಯಮೇಲೆ ನೋಡಿದಾಗ, ೧೨ನೇ ಶತಮಾನದ ಕಲ್ಯಾಣ ನಾಡಿನ ಶರಣರ ಜೀವನವನ್ನು ಹತ್ತಿರದಿಂದ ಅವಲೋಕಿಸಿದ ಅನುಭವ ನಮಗೆ ಆಗುವುದರಲ್ಲಿ ಸಂದೇಹವಿಲ್ಲ". [೩೯]

# ಹಾರಕೂಡ ಶ್ರೀಚನ್ನಬಸವೇಶ್ವರ ಮಹಾತ್ಮೆ

"ರಂಗ ಭೂಮಿ ಸರಸ್ವತಿಯ ನೆಲೆ ಬೀಡು. ನಟರಾಜನ ಆವಾಸಸ್ಥಾನ; ವರ್ಗ, ವರ್ಣ, ಜನಾಂಗಗಳ ನಾನಾ ಸಂಕೋಲೆಗಳನ್ನು ಮೀರಿದ ಕರ್ಮಭೂಮಿ, ಅದು ಸಮಾಜದ ಜೀವಧ್ವನಿ, ಬದುಕಿನ ತನಿ, ಸಾಹಿತ್ಯದ ಖನಿ, ಜ್ಞಾನಸೂರ್ಯನ ಗಣಿಯಾಗಿ ತನ್ನ ತೇಜೋಮಯ ಅಂತಃಸತ್ವದ ಪ್ರಭಾವದಿಂದಾಗಿ ನಿಖರ ಪ್ರಕಾರವಾಗಿ ತನ್ನನ್ನು ಆಗಾಗ್ಗೆ ಸ್ವಪ್ರಭೆಯಿಂದ ತೋರ್ಪಡಿಸಿಕೊಳ್ಳುತ್ತಿರುವುದು ಅದರ ಜೀವಂತಿಕೆಯ ದ್ಯೋತಕ, ಪ್ರತೀಕ, ಸಂಕೇತ, ಸಜೀವ ಕಲೆಯಾದ ರಂಗಕಲೆಯು ತನ್ನ ಒಡಲಾಳದಲ್ಲಿ ಹುದುಗಿಕೊಂಡಿರುವ ಅಸದೃಳ ಅನನ್ಯತೆಯಿಂದಾಗಿ ತಾನು ಬೀರುವ ಗಾಢ ಪ್ರಭಾವದ ಪರಿಣಾಮವನ್ನು ಊಹಿಸಲು ಅಸಾಧ್ಯ" [೪೦] 'ಹಾರಕೂಡ ಶ್ರೀ ಚನ್ನಬಸವೇಶ್ವರ ಮಹಾತ್ಮೆ" ಎಂಬ ರಂಗ ನಾಟಕವು ೧೯೭ರಲ್ಲಿ ಬೀದರ ಜಿಲ್ಲೆ ಬಸವಕಲ್ಯಾಣ ತಾಲೂಕು ಹಾರಕೂಡ ಗ್ರಾಮದಲ್ಲಿ ಹಂಗನಳ್ಳಿಯ ಶ್ರೀರಾಮಲಿಂಗೇಶ್ವರ ನಾಟ್ಯಸಂಘದವರಿಂದ ಮೊಟ್ಟಮೊದಲಿಗೆ ರಂಗಭೂಮಿಯ ಮೇಲೆ ಪ್ರದರ್ಶಿತಗೊಂಡಿತು, ನಂತರ ಕರ್ನಾಟಕದ ಸುಪ್ರಸಿದ್ಧ ರಂಗ ಸಂಸ್ಥೆಯಾದ ಹಾನಗಲ್ ಕುಮಾರೇಶ್ವರ ನಾಟ್ಯಸಂಘದ ಅನುಭವಿಕ ಕಲಾವಿದರಿಂದ ಹಲವು ಪ್ರಯೋಗಗಳನ್ನು ಕಂಡಿತು, ಹೀಗೆ ರಂಗಭೂಮಿಯ ಮೇಲೆ ಯಶಸ್ವಿಯಾಗಿ ಪ್ರದರ್ಶನಗೊಂಡ ಪ್ರಸ್ತುತ ನಾಟಕ ಭಕ್ತರ ಅಪೇಕ್ಷೆಯ ಮೇರೆಗೆ ಹಾರಕೂಡ ಶ್ರೀ ಚೆನ್ನಬಸವೇಶ್ವರ ಸಂಸ್ಥಾನ ಹಿರೇಮಠದ ಸೃಜನ ಶೀಲ ಕೃತಿಮಾಲೆಯಲ್ಲಿ ಪ್ರಕಟವಾಯಿತು.

**"ಶರಣರ ಸನ್ಮಾರ್ಗದಲ್ಲಿ ಇಲ್ಲ ಆಡಂಬರ**
**ಶರಣರ ಬದುಕಿಗೆ 'ಕಾಯಕ'ವೇ ಮೂಲಾಧಾರ**
**ಜಪ,ತಪ,ಮಂತ್ರಗಳು ಇವರಿಗೆ ಬಹುದೂರ**
**ಶರಣರು ಸದಾಬಯಸುವುದು, ಸದಾಚಾರ**
**ಸತ್ಯ ಶುದ್ಧ ಬದುಕಿನಲ್ಲಿಯೇ ಕಂಡರು**
**ದಿವ್ಯ ಬೆಳಕಿನ ಆಗರ**
**ಈ ಬೆಳಕೇ ಬದುಕಿನ ಪಯಣಕ್ಕೆ ಆಧಾರ".** [೪೧]

ಹೀಗೆ ಶರಣರು ಬಾಳಿ ಬದುಕಿದ ೧೨ನೇ ಶತಮಾನದಲ್ಲಿ ಉತ್ತಮ ಸಮಾಜ ಕಟ್ಟಿದರು. ಮೂಢನಂಬಿಕೆಗಳ ವಾತಾವರಣದಲ್ಲಿ ಕೆಟ್ಟುಹೋದ ಮಲೀನ ಗಾಳಿಯನ್ನು ತಮ್ಮ ವಚನಗಳ ಉಸಿರಿನಿಂದ ಶುದ್ಧಗೊಳಿಸಿದರು. ಪಾಮರರ ಬದುಕನ್ನು ಪವಿತ್ರಗೊಳಿಸಿದರು. ೧೯ನೇ ಶತಮಾನದ ಉತ್ತರ ಭಾಗದಲ್ಲಿ ಶತಾಯುಷಿಗಳಾಗಿ ಬಾಳಿದ ಹಾರಕೂಡ ಸಂಸ್ಥಾನ ಹಿರೇಮಠದ ಮಠಾಧೀಶರಾಗಿದ್ದ ಲಿಂಗೈಕ್ಯ ಶ್ರೀ ಚೆನ್ನಬಸವಶಿವಯೋಗಿಗಳು ನಡೆದಾಡುವ ಶಿವನೆಂದೇ ಪ್ರಸಿದ್ಧಿ ಪಡೆದಿದ್ದರು, ಇವರು ಕಲ್ಯಾಣ ನಾಡಿನ ವೀರಶೈವ ಮಹಾಶಿವಯೋಗಿಗಳಲ್ಲಿ ಒಬ್ಬರೆನ್ನಿಸಿದರು (ಕ್ರಿ.ಶ.೧೮೫೧–೧೯೫೧) ಮಾನವ ಧರ್ಮದ ಪ್ರತೀಕದಂತಿದ್ದ ಅವರ ಅನನ್ಯ ವ್ಯಕ್ತಿತ್ವಕ್ಕೆ ಸರ್ವಧರ್ಮ, ಸರ್ವಜಾತಿಗಳವರು ಭಕ್ತಿಯಿಂದ ನಡೆದುಕೊಳ್ಳುತ್ತಿದ್ದರು.

ಬಸವಲಿಂಗ ಶಿವಯೋಗಿಗಳ ಮಾತುಗಳನ್ನೇ ಆಲಿಸಿದ 'ಶಿವಯೋಗಿ' ನಾಮಾಂಕಿತ ಮಗುವಿನ ತಾಯಿ ಆತ್ಮ ಸಂಕಟ ಯಾರು ತಾನೇ ಅರಿಯಬೇಕು, ವ್ರತ, ನೇಮ ಹಿಡಿದು ಕಾಡಿಬೇಡಿ ಪಡೆದ ಈಫಲ, ಈ ಕುಡಿಯನ್ನು ಹೇಗೆ ಜೋಳಿಗೆಯಲ್ಲಿ ಹಾಕಿ ಬಿಡಬೇಕೆಂಬ ತಾಯಿಯ ವೇದನೆ ಹೇಗೆ ಹೇಳುವುದು ಸಾಧ್ಯ?

**"ಹೆತ್ತೊಡಲ ಶಿಸುವೀಗ। ಒತ್ತಿ ಮುದ್ದಾಡುವಾಗ।**
**ಮುತ್ಯಾನ ಮಠಕ ಕೊಡಲ್ವ್ಯಾಂಗ। ಶ್ರೀ ಗುರುವೆ।**
**ನೆತ್ತಿ ಮ್ಯಾಲ ಸಿಡಿಲು ಬಿದ್ದಾಂಗ॥** [೪೨]

ಒಂಬತ್ತು ತಿಂಗಳು ಗರ್ಭದಲ್ಲಿ ಹೊತ್ತು, ಹೆತ್ತು ಆಡಿಸಿದ ಕರುಳು ಚುರ್ ಎನ್ನುವುದು ಸಹಜ, ಬಳ್ಳಿಯಲ್ಲಿ ಅರಳಿದ ಹೂ ಆಗಲೀ, ಇಲ್ಲಾ ಮಿಡಿಯಾಗಲೀ ಹಾದಿಯಲ್ಲಿ ಹೋಗುವವರಿಗೆ ಬಿಡಿಸಿಕೊಂಡು ಹೋಗಿರಿ ಅಂತ ಆ ಬಳ್ಳಿಯೇನಾದರೂ ಹೇಳುತ್ತದೆಯೆ? ತಾಯಿ! ರೇವಾಂಬಿಕೆ, ನಿನ್ನ ಮಗು ಲೋಕ ಕಲ್ಯಾಣಕ್ಕಾಗಿ ಹುಟ್ಟಿಬಂದಿದ್ದಾನೆ, ಈ ಧರೆಯ ಬೆಳಗಲು ಬಂದ ಹರನಿಗೆ ನಿನ್ನ ಪವಿತ್ರ ಗರ್ಭ ಬೇಕಾಗಿತ್ತು ಅಷ್ಟೇ ಬಂದಿದ್ದಾನೆ. ಚಿಂತಿಸದಿರು ಆ ಬಳ್ಳಿಯ ಬ್ರಹ್ಮತ್ವವನ್ನು ಅರಿತುಕೊಂಡು ನಮ್ಮ ಜೋಳಿಗೆಗೆ ಸಮರ್ಪಿಸು ಎಂದು ಬಸವಲಿಂಗ ಶಿವಯೋಗಿಗಳು ರೇವಾಂಬಿಕೆಗೆ ಸಮಾಧಾನ ಹೇಳುತ್ತಾರೆ.

ಕೊನೆಗೂ ರೇವಾಂಬಿಕೆ ಮತ್ತು ಚನ್ನವೀರಯ್ಯಾ ದಂಪತಿಗಳು ಗುರುವಿನ ಮಾತಿಗೆ ಮಣಿಹಾಕಿ, ಈ ಮುತ್ತು ನಿಮ್ಮ ಸೊತ್ತು, ಹಾರಕೂಡ ಮಠದ ಮುತ್ತು, ಭಸ್ಮಹಚ್ಚಿ ಮಾತುಕೊಡುತ್ತಾರೆ.

ತಾಯಿ ರೇವಾಂಬಿಕೆ ಎಂಟುವರ್ಷದ ಮಗನನ್ನು ಕೊನೆಯಲ್ಲಿ ಬೀಳ್ಕೊಡುವ ಮುನ್ನ ಹೇಳುವ ಮಾತುಗಳು ಬರೀಮಾತಲ್ಲ, ಶಿವನ ಸ್ತೋತ್ರಗಳೇ ಆಗಿವೆ. "ಕಂದಾ। ಶಿವರಾತ್ರಿ, ಶಿವನರಾತ್ರಿ, ಆ ಶಿವಯೋಗದಲ್ಲಿಯೇ ಹುಟ್ಟಿ, ಶಿವಯೋಗಿ ಎಂದು ಹೆಸರು ಪಡೆದು, ಸಿಕ್ಕ ಸಮಯವನ್ನು ನಿರರ್ಥಕ ಗೊಳಿಸದೆ, ಶಿವನ ಕಾರ್ಯಕ್ಕೆ ಸೀಮಾತೀತನಾಗು, ಜಡಜಗತ್ತಿದೆ ಜಂಗಮದ ಅರುಹನ್ನು ನೀಡಿ, ಲಿಂಗಾಂಗ ಸಾಮರಸ್ಯದ ಸೊಬಗುಕಂಡು, ಲಿಂಗಕ್ಕೆ ನಿನ್ನಂಗವೇ ಎಡೆ ಮಾಡಿಕೊ, ಆಚಾರದಿಂದ ಆರು ಹಾದಿಗಳನ್ನು ಹಸನುಮಾಡು, ಅಂಧ, ಅನಾಥ, ಅಂಗವಿಕಲರಿಗೆ ನೀ ತಂದೆಯಾಗು, ನಂಬಿ ಬಂದವರನ್ನು ಗುರುವಾಗಿ ಭಾವಿಸು".[೪೩]

ಶಾಲಿವಾಹನ ಶಕೆ ೧೭೮೯ ಮನ್ಮಥನಾಮ ಸಂವತ್ಸರ ವೈಶಾಖ ಶುದ್ಧ ಏಕಾದಶಿ ದಿವಸ, ವಿಧಿವಿಧಾನದಿಂದ ಬೇಲೂರು ನೀಲಕಂಠ ಶಿವಾಚಾರ್ಯರ ಸಾಕ್ಷಿಯಾಗಿ ಶ್ರೀ ಚನ್ನಬಸವ ಶಿವಯೋಗಿ ಶಿವಾಚಾರ್ಯರೆಂಬ ನಾಮದಿಂದ ಹಾರಕೂಡ ಮಠದ ಅಧಿಕಾರ ವಹಿಸಿಕೊಂಡರು. ನಂತರ ಮಾತನಾಡುತ್ತ, ನಮಗೆ ವಹಿಸಿಕೊಟ್ಟಂತ್ತ ಹಾರಕೂಡ ಮಠದ ಅಧಿಕಾರವನ್ನು ದುರುಪಯೋಗಿಸಿಕೊಳ್ಳದೆ ಈ ಮಠದ ಶ್ರೀಗಳ ಕೀರ್ತಿತರುವೆ ಅಂತ ದೀಕ್ಷಾಗುರುವಾಗಿ ಮೋಕ್ಷಗುರುವಾಗಿ ಪರಿಶೋಭಿಸುವ ಶ್ರೀ ಸಂಗನ ಬಸವ ಶಿವಚಾರ್ಯರ ಪಾದ ಸಾಕ್ಷಿಯಾಗಿ

ಪ್ರಮಾಣ ಮಾಡುತ್ತೇವೆ ಎಂದು ಭರವಸೆಯನ್ನಿತ್ತರು ಮಗ್ಗಿ ಗ್ರಾಮದಿಂದ ಬಂದ ರೇವಾಂಬಿಕೆ, ಚನ್ನವೀರಯ್ಯಾ ದಂಪತಿಗಳು ಕಣ್ಣುತುಂಬ ತಮ್ಮ ಮಗನ ರೂಪ ನೋಡುತ್ತಿದ್ದಂತೆ ಒಂದು ಕ್ಷಣ ಶಿವರೂಪಿಯಾಗಿ ಪ್ರತ್ಯಕ್ಷನಾಗಿ ದರ್ಶನ ನೀಡುತ್ತಾನೆ. ಇದು ಅವರವರ ನಂಬಿಕೆಯನ್ನು ಅವಲಂಭಿಸಿದೆ. ನಾಟಕಗಳಲ್ಲಿ ಇದು ಸಹಜವಾಗಿದೆ.

ಶಿವಯೋಗಿಗಳು ಭಕ್ತರ ಮನಸ್ಸನ್ನು ಮುದುಡುವಂತೆ ಎಂದೂ ನಡೆದುಕೊಳ್ಳುತ್ತಿರಲಿಲ್ಲ ಎಲ್ಲರನ್ನು ಪ್ರೀತಿಯಿಂದ ಕಾಣುತ್ತಿದ್ದರು ಚಿತಾಪುರದ ಚಿತಾವಲಿ ಗದ್ದುಗೆ ದರ್ಶನ ಪಡೆದುಕೊಂಡರು. ಅವರು ಸಾಮಾನ್ಯ ಶರಣರಲ್ಲ ಉಲೂಮೆ ಮಾರಿಫತ್ ತೋಹಿದೆ ಇಲಾಹಿ ದಾಟಿದ ಮಹಾಂತರು.

ಶರಣರು ಬರುವಾಗ ಧರಣಿಯು ನಕ್ಕೀತು ಎನ್ನುವ ಸಂಭ್ರಮ ಎಲ್ಲೆಡೆ ಇತ್ತು. ಹಾರಕೂಡ ಶಿವಯೋಗಿಗಳ ದರ್ಶನ ಭಾಗ್ಯಪಡೆಯಲು ಅನೇಕ ಗ್ರಾಮಗಳ ಭಕ್ತರ ಹಂಬಲ, ಶಿವಯೋಗಿಗಳಾದರೂ ಯಾರ ಮನಸ್ಸನ್ನು ನೋಯಿಸಲು ಇಚ್ಚಿಸರು, ದಿನಕ್ಕೆ ಕನಿಷ್ಠ ಎಂದರೂ ಹತ್ತು ಮಂದಿಯಾದರೂ ಬಿನ್ನಹಕೊಡಲು ಕಾತುರದಿಂದ ಬರುತ್ತಾರೆ. ಅವರಾರಿಗೂ ಇಲ್ಲ ಎಂದು ಹೇಳುವುದು ಶಿವಯೋಗಿಗಳ ಮಾತಿನ ಮೂಲಕ ಪ್ರೀತಿ–ವಿಶ್ವಾಸ, ಭಕ್ತಿ, ಸಂಬಂಧಗಳನ್ನು ಗಟ್ಟಿಗೊಳಿಸುತ್ತದೆ.

ನಾಟಕಕಾರ ಆಲ್ದಾಳ ಅವರು ಮಠದಂಗಳ ಪ್ರಿಯರು. ಮಠದ ಮುತ್ಯಾರ ಸಂಗವೇ ಅವರಬಾಳು. ಮಠಬಿಟ್ಟು ದೂರವಿರುವುದು ಎಂದರೆ, ನೀರಿನಲ್ಲಿರುವ ಮೀನನ್ನು ನೀರಿನಿಂದ ಹೊರತಂದಂತೆ!

"ಈ ನಾಟಕವನ್ನು ರಚಿಸಿರುವ ಹಾರಕೂಡ ಸಂಸ್ಥಾನ ಹಿರೇಮಠದ ಪರಮ ಭಕ್ತರಾದ ಶ್ರೀ ಎಲ್.ಬಿ.ಕೆ ಆಲ್ದಾಳರು ಹುಟ್ಟು ಕಲಾವಿದರು, ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಉತ್ತಮ ಕೃತಿಗಳನ್ನು ನೀಡಿದವರು ನಾಟಕ ರಚನೆ ಮತ್ತು ರಂಗಭೂಮಿಯ ಬಹುತೇಕ ಎಲ್ಲಾ ಆಯಾಮಗಳಲ್ಲಿ ಪರಿಣಿತರು, ಸ್ವತಃ ಮುಸಲ್ಮಾನ ಧರ್ಮದವರಾಗಿದ್ದರೂ ವೀರಶೈವ ವಾಙ್ಮಯಕ್ಕೆ ಅನುಪಮ ಸೇವೆಯನ್ನು ಸಲ್ಲಿಸಿದವರು, ಅವರ ನುರಿತ ಲೇಖನಿಯಿಂದ 'ಹಾರಕೂಡ ಶ್ರೀ ಚೆನ್ನಬಸವೇಶ್ವರ ಮಹಾತ್ಮೆ" ಎಂಬ ರಂಗ ನಾಟಕವು ಭಕ್ತಿ ರಸದಿಂದ ಕೂಡಿ ಆಕರ್ಷಕವಾಗಿ ಮೂಡಿ ಬಂದಿದೆ". "ಅಂತೆಯೇ ಪ್ರಸಿದ್ಧ ಸಾಹಿತಿ ಡಾ. ಸಂಗಮೇಶ ಸವದತ್ತಿ ಮಠ ಅವರು ಆಲ್ದಾಳ ಅವರನ್ನು ಒಂದಡೆ "ವೀರಶೈವ ಕವಿ" ಎಂದೇ ತುಂಬಾ ಹೃದಯವಂತರಾಗಿ ವರ್ಣಿಸಿರುವುದು ಯಥೋಚಿತವಾದುದು". [೪೪]

**ಮತಿವಂತರ ಮಾತಿಗಿ। ಚಿತ್ತಿಟ್ಟಕೇಳಿರಿ।**
**ಸತ್ಯದಹಾದಿ ಹಿಡಿಯಿರಿ। ಶರಣರಿಗೆ।**
**ಆತಿಥ್ಯ ಮಾಡಿಕಳಿಸೀರಿ।** [೪೫]

ಆಲ್ದಾಳ ಅವರ ಬರವಣಿಗೆಯಲ್ಲೂ ಸತ್ಯವನ್ನೇ ಕಾಣುತ್ತಿದ್ದೇವೆ. ಇದನ್ನು ಅಲ್ಲಗಳೆಯುವಂತಿಲ್ಲ.

ಸುರುಪುರ ತಾಲೂಕಿನ ಕೊಡೆಕಲ್ ಗ್ರಾಮದ ನಾಟಕಕಾರರಾದ ಶ್ರೀ ಬಸವರಾಜ ಪಂಚಗಲ್ಲು ಅವರು ಬರೆಯುತ್ತಾರೆ. "ನಾ ಕಂಡಂತೆ ಆಲ್ದಾಳ ಅವರು ರಚಿಸಿದ ಭಕ್ತಿ ಪ್ರಧಾನ ನಾಟಕಗಳಾದ, ಶ್ರೀ ವಿಶ್ವಾರಾಧ್ಯರ ಮಹಾತ್ಮೆ, ಶ್ರೀ ಕಡಕೋಳ ಮಡಿವಾಳೇಶ್ವರರ ಮಹಾತ್ಮೆ ಹಾಗೂ ಶ್ರೀ ಹಾರಕೂಡ ಚೆನ್ನಬಸವೇಶ್ವರರ ಮಹಾತ್ಮೆ, ಇನ್ನು ಮುಂತಾದ ನಾಟಕಗಳೇ ಇವರ ಆಧ್ಯಾತ್ಮಿಕ ಚಿಂತನೆಗೆ ಚಿಲುಮೆಯ ಚೇತನಗಳಾಗಿವೆ. 'ಶರಣ ಸಾಹಿತ್ಯರತ್ನ' ಅಂತ ಬಿರುದು ಪಡೆದ ಶ್ರೀ ಮಾರುತೇಶ ಮಾಂಡ್ರೆಯವರ ಅನಂತರ ವೃತ್ತಿ ರಂಗಭೂಮಿಯಲ್ಲಿ ಭಕ್ತಿ ಪ್ರಧಾನ ಹಾಗೂ ಶರಣ ಸಾಹಿತ್ಯದ ವಿಷಯದಲ್ಲಿ ಹಿಂತಿರುಗಿ ನೋಡದೆ ಪೇಕ್ಷಕರಿಂದ 'ಭಲೆ' ಎಂದು ಬೆನ್ನು ತಟ್ಟಿಸಿಕೊಂಡ ಶರಣ ಸಾಹಿತ್ಯದ ನಾಟಕಗಳ ಪರಂಪರೆಯನ್ನು ಮುಂದುವರೆಸಿದ ಮಹಾನ್ ಸೇತುವೆಯಾಗಿದ್ದಾರೆ. ಆಲ್ದಾಳರು, ಶರಣ ಸಾಹಿತ್ಯದ ನಾಟಕವನ್ನಷ್ಟೇ ರಚಿಸಿಲ್ಲ. ಅನೇಕ ಮಹಾನ ಶರಣರ ತತ್ವಾದರ್ಶಗಳನ್ನೇ ತಮ್ಮ ಜೀವನದಲ್ಲಿ ಅಳವಡಿಸಿಕೊಂಡೇ ಬಾಳುತ್ತಿದ್ದಾರೆ. "ನುಡಿದಂತೆ ನಡೆ, ಇದೇ ಜನ್ಮಕಡೆ' ಎಂಬ ನುಡಿಗೆ ತಕ್ಕಂತೆ ಅನ್ವರ್ಥವಾಗಿದ್ದಾರೆ." [೪೬]

'ಹಾರಕೂಡ ಶ್ರೀ ಚನ್ನಬಸವೇಶ್ವರ ಮಹಾತ್ಮೆ' ರಂಗನಾಟಕ ೩೧ ಪ್ರವೇಶಗಳಾಗಿದ್ದು ಭಕ್ತಿರಸದಿಂದ ತುಂಬಿದೆ. ಅಲ್ಲಲ್ಲಿ ಹಾಸ್ಯ ಪಾತ್ರಗಳು ಸಂಭ್ರಮಿಸಿವೆ. ಇದು ಹಾರಕೂಡ ಶ್ರೀ ಚನ್ನಬಸವ ಶಿವಯೋಗಿಗಳ ನೈಜ ಜೀವನದ ಚಿತ್ರಣದ ಕೃತಿಯಾಗಿದೆ. ಇದೊಂದು ಆಲ್ದಾಳ ಅವರ ಲೇಖಣಿಕೆಯಿಂದ ಮೂಡಿದ ಆಧ್ಯಾತ್ಮಿಕ – ಕೃತಿಯಾಗಿದೆ. ನಾಟಕದ ಉದ್ದೇಶ "ವೀರಶೈವ ಧರ್ಮವನ್ನಷ್ಟೇ ಅಲ್ಲ, ಮಾನವೀಯ ಧರ್ಮವನ್ನೇ ಉದ್ದರಿಸಲು ಅವತರಿಸಿಬಂದ ಚೆನ್ನಬಸವ ಶಿವಯೋಗಿ, ವರ್ಣಭೇದ ನಿವಾರಣೆ, ಜ್ಞಾನಪ್ರಚಾರ, ವ್ಯಕ್ತಿ ಸ್ವಾತಂತ್ರ್ಯ, ಸ್ತ್ರಿ–ಪುರುಷ ಸಮಾನತೆ, ಆಲಸ್ಯ ನಿರ್ಮೂಲನೆ, ಕೈಂಕರ್ಯ ಭಾವ, ನಿತ್ಯಾಚಾರ, ತತ್ವಗಳನ್ನು ಜನತೆಗೆ ಅರುಹಿ ಅಮೋಘ ಅರಿವನ್ನು ದೊರಕಿಸಿಕೊಟ್ಟರು. ಇಂತಹ ಮಹಾನ್ ವ್ಯಕ್ತಿಯ ಮಹಾತ್ಮರ ಜೀವನ ನಾಟ್ಯಚರಿತೆ ನಿರ್ಮಿಸಲು ಪ್ರಯತ್ನಿಸಿದ ಆಲ್ದಾಳರು ಧನ್ಯರು, ಅವರು ನಾಟಕರೂಪದಲ್ಲಿ ಕೃತಿ ರಚಿಸುವಲ್ಲಿ, ಕೈಕೊಂಡ ನಿರ್ಧಾರದಲ್ಲಿ ದೈವೀಶಕ್ತಿ, ಸುದೈವಿ ವ್ಯಕ್ತಿಯ ಪ್ರೇರಣೆ ಇದ್ದೀತೆಂದು ಸ್ಮರಿಸಿಕೊಳ್ಳಬೇಕಿದೆ.

ಆಲ್ದಾಳ ಅವರು ಈ ನಾಟಕ ಬರೆಯಲು ಕಾರಣ ಹೀಗಿದೆ "ಶಿಲೆಯೊಂದೆಡೆ ಇತ್ತು, ಶಿಲ್ಪಿಯೊಂದೆಡೆಗಿದ್ದ, ಶಿಲೆ ಮತ್ತು ಶಿಲ್ಪಿ ಕೂಡುವ ಸುಯೋಗದ ತತ್ಫಲವೇ ಆದಿ ಕೇಶವ ಮೂರ್ತಿ ಎಂದು ಹೇಳಿದ ಶ್ರೀ.ಡಿ.ವ್ಹಿ.ಜಿ ಯವರ ಮಾತಿನಂತೆ, ನಾನು ಒಂದೆಡೆಗೆ ಇದ್ದೆ. ಶ್ರೀ ಸೂರ್ಯಕಾಂತ ಮಾಸ್ತರ ಹಾರಕೂಡ ಮಠದ ಭಕ್ತರೋರ್ವರು ಒಂದೆಡೆಗಿದ್ದ ನಮ್ಮಿಬ್ಬರ ಅಪೂರ್ವ ಮಿಲನದ ತತ್ಫಲವೇ "ಶ್ರೀ ಹಾರಕೂಡ ಚೆನ್ನಬಸವೇಶ್ವರ ಮಹಾತ್ಮೆ". [೪೭]

"ಲಿಂಗೈಕ್ಯ ಚನ್ನಬಸವ ಶಿವಯೋಗಿಗಳ ಪವಾಡ ಕಥೆಗಳನ್ನು ಇಲ್ಲಿ ಭಕ್ತಿಯ ಉದ್ದೀಪನಕ್ಕೆ ನಾಟಕಕಾರರು ಉಚಿತವಾಗಿ ಬಳಸಿಕೊಂಡಿದ್ದಾರೆ. ನಾಟಕದ ಕೊನೆಯ ೩೦ ಮತ್ತು ೩೧ನೇ ದೃಶ್ಯಗಳನ್ನು ಇನ್ನಷ್ಟು ಪರಿಣಾಮಕಾರಿಯಾಗುವಂತೆ ಚಿತ್ರಿಸಬಹುದಾಗಿತ್ತು. ಇದೊಂದು ಸಣ್ಣ

ಕೊರತೆಯನ್ನು ಬಿಟ್ಟರೆ ಉಳಿದಂತೆ ನಾಟಕ ಉತ್ತಮವಾಗಿದೆ. ರಂಗದ ಮೇಲೆ ಎಲ್ಲಿ ಬೇಕಾದರೂ ಆಡಿಸುವಂತಿದೆ". [೪೭]

ಆಲ್ದಾಳರ ಸ್ತ್ರೀ ಪಾತ್ರಗಳು ಸದಾ ಸನ್ಮಾರ್ಗದಲ್ಲಿ ದಾಪುಗಾಲು ಹಾಕಿಸುವಲ್ಲಿ ಯಶಸ್ವಿಯಾಗಿದ್ದಾರೆ. ತಾನು ಅನುಸರಿಸಿಕೊಂಡುಬಂದ ಮಾರ್ಗಶುದ್ಧವಾದುದಲ್ಲ ಎಂದು ಅರಿತು ವಂದನಾ ಸುಜ್ಞಾನ ಮಾರ್ಗಹಿಡಿದದ್ದೂ ಇದರಿಂದಾಗಿ ವಂದನಾ ಸಕಲರ ವಂದನೆಗೆ, ಅಭಿನಂದನೆಗೆ ಪಾತ್ರಳಾಗುತ್ತಾಳೆ. ಆಲ್ದಾಳರು ನಾಟಕಕಾರರಾಗಿ ಪ್ರಸಿದ್ಧಿಯನ್ನು ಪಡೆದಂತೆಯೇ ನಾಟಕದ ಕವಿಯಾಗಿಯೂ ಜನಪ್ರಿಯತೆ ಸಂಪಾದಿಸಿದ್ದಾರೆ. ತಮ್ಮ ನಾಟಕಗಳ ದೃಶ್ಯಗಳಿಗೆ ತಕ್ಕಂತೆ ನಟ–ನಟಿಯರು ಹಾಡುವ ಗಾಯನ ರೀತಿಯನ್ನವಲಂಬಿಸಿ ಕವನ ಕಟ್ಟುವ ಕಲೆ ಅವರಿಗೆ ಕರಗತವಾಗಿತ್ತು. ಜನಪದಗೀತೆ, ಹಳ್ಳಿಯಹಾಡು, ಭಕ್ತಿಹಾಡು, ವೃತದಹಾಡು, ಜೋಗುಳ ಹಾಡುಗಳನ್ನು ಬರೆದು ಅವುಗಳಿಗೆ ರಾಗ ಸಂಯೋಜಿಸುತ್ತಿದ್ದರು. "ಶ್ರೀ ಆಲ್ದಾಳರು ನಾಟಕ ಕಲೆಯ ಪ್ರತಿಯೊಂದು ವಿಭಾಗದಲ್ಲೂ ಪ್ರವೀಣರು, ಅವರು ಪರಿಪಕ್ವ ವ್ಯಕ್ತಿತ್ವ ಪಡೆದ ನಂತರವೇ ಅವರಿಗೆ ಈ ನಾಟಕ ಬರೆಯಲು ಯಶ ಲಭಿಸಿದೆ". [೪೮]

"ನಾಟಕಕಾರ ಆಲ್ದಾಳರು ರಂಗನಾಟಕಗಳ ಎಲ್ಲ ಒಳ ಹೊರಗನ್ನು, ಏಳು–ಬೀಳುಗಳನ್ನು ಹಿರಿಮೆ–ಗರಿಮೆಗಳನ್ನು ಬಲ್ಲವರು. ರಂಗಭೂಮಿಯ ಒಂದೊಂದು ನಾಡಿಯ ಬಡಿತವೆಂಥದು ಎಂಬುದನ್ನು ಚೆನ್ನಾಗಿ ತಿಳಿದವರು, ಆದ್ದರಿಂದ ಲೀಲಾಜಾಲವಾಗಿ ಒಂದು ವಸ್ತುವಿನ ಮೇಲೆ ಸ್ವಾರಸ್ಯ ಪೂರ್ಣ ನಾಟಕ ರಚಿಸುವುದು ಅವರಿಗೆ ನೀರಿನಲ್ಲಿನ ತುಂಬಿದ ಕೊಡ ಎತ್ತಿದಷ್ಟು ಸುಲಭ. ಅವರ ನಾಟಕಗಳ ಸರಣಿಯಲ್ಲಿ 'ಹಾರಕೂಡ ಶ್ರೀ ಚನ್ನಬಸವ ಶಿವಯೋಗಿ' ಉತ್ತಮ ನಾಟಕ.[೪೯]

ಈ ನಾಟಕದ ಕಥಾವಸ್ತು ಪ್ರಭಾವಿ ವೀರಶೈವ ಮಠಾಧೀಶರದ್ದು, ದಾರ್ಶನಿಕ ಪುರುಷರ ಕಥೆಯನ್ನು ಹೇಗೆ ತೂಕ ಬದ್ಧವಾಗಿ, ಅಭಾಸಕ್ಕೆ ಎಡೆ ಇಲ್ಲದಂತೆ ತೂಗಿಸಿಕೊಂಡು ಹೋಗಬೇಕೆಂಬ ತಂತ್ರ ಆಲ್ದಾಳರಿಗೆ ಚೆನ್ನಾಗಿ ಕರಗತವಾಗಿದೆ. ಆದ್ದರಿಂದ ಚನ್ನಬಸವ ಶಿವಯೋಗಿಗಳ ಕಥೆಯನ್ನು ತಕ್ಕುದಾದ ಸನ್ನಿವೇಶ ನಿರ್ಮಾಣ ಮತ್ತು ಪಾತ್ರ ಸಂಯೋಜನೆಗಳ ಮೂಲಕ, ಮುನ್ನಡೆಸಿಕೊಂಡು ಹೋಗಿದ್ದಾರೆ. ದೃಶ್ಯ, ಸಂಯೋಜನೆ, ಪಾತ್ರ ಸೃಷ್ಟಿ ಮತ್ತು ಚಿತ್ರಣ, ಭಾಷಾಬಳಕೆ, ಸನ್ನಿವೇಶ ನಿರ್ಮಾಣಗಳಲ್ಲಿ ಪಾರಂಪರಿಕ ಶೈಲಿಯನ್ನು ಸಮರ್ಥಕವಾಗಿ ಬಳಸಿಕೊಂಡಿದ್ದಾರೆ. ಧಾರ್ಮಿಕ ಪರಿಸರವನ್ನು ರಂಗಭೂಮಿಯ ಮೇಲೆ ತರುವುದು ಸುಲಭದ ಕೆಲಸವಲ್ಲ, ಸಂಭಾಷಣೆಗಳು ಪ್ರೇಕ್ಷಕರಿಗೆ ಬೇಸರ ತರಿಸದಂತೆ ಮಲ್ಲಪ್ಪ, ಆಶೆಪ್ಪರಂಥ ಪಾತ್ರಗಳನ್ನು ಹಾಸ್ಯಕ್ಕೆ ಬಳಸಿಕೊಂಡು ಪ್ರೇಕ್ಷಕರನ್ನು ನಗೆಗಡಲಲ್ಲಿ ಮುಳುಗಿಸುತ್ತಾರೆ.

ಡಾ. ಸಂಗಮೇಶ ಸವದತ್ತಿ ಮಠ ಆಲ್ದಾಳರ ಬಗ್ಗೆ ಮುನ್ನುಡಿಯಲ್ಲಿ ಹೀಗೆ ಬರೆಯುತ್ತಾರೆ. "ಶ್ರೀ ಎಲ್.ಬಿ.ಕೆ. ಆಲ್ದಾಳರು ಹತ್ತಾರು ಸಾಮಾಜಿಕ, ಪೌರಾಣಿಕ ನಾಟಕಗಳನ್ನು ಬರೆದಿದ್ದಾರೆ. ಆಡಿಸಿದ್ದಾರೆ. ಆದರೆ ನನಗನಿಸಿದಂತೆ ಅವೆಲ್ಲಕ್ಕಿಂತಲೂ ಪ್ರಸ್ತುತ 'ಶ್ರೀ ಚನ್ನಬಸವೇಶ್ವರ ನಾಟಕ ಜನರ ಮನಸ್ಸಿನ ಮೇಲೆ ಹೆಚ್ಚು ಪ್ರಭಾವ ಬೀರುವಂಥದ್ದು. ಇಂಥ ವಿಶಿಷ್ಠ ನಾಟಕವನ್ನು ರಚಿಸುವಲ್ಲಿ ಅವರಿಗೆ ಲಿಂ.ಚೆನ್ನಬಸವಶಿವಯೋಗಿ ಮತ್ತು ಸದ್ಯದ ಶ್ರೀಗಳಾದ ಶ್ರೀ.ಷ.ಬ್ರ.ಚನ್ನವೀರ

ಶಿವಾಚಾರ್ಯರು ಪ್ರೇರಣೆ ನೀಡಿದ್ದಾರೆ. ಇಂಥ ಅವಕಾಶ ಪಡೆದ ಆಲ್ದಾಳರು ನಿಜಕ್ಕೂ ಧನ್ಯರು".[೫೦]

ಬೀದರ ಜಿಲ್ಲೆಯ ಬಸವಕಲ್ಯಾಣ ತಾಲೂಕಿನ ಹಾರಕೂಡ ಚೆನ್ನಬಸವೇಶ್ವರ ಸಂಸ್ಥಾನ ಹಿರೇಮಠವು ಕಲ್ಯಾಣ ಕರ್ನಾಟಕದ ಒಂದು ಸುಪ್ರಸಿದ್ಧ ವೀರಶೈವ ಮಠ. ಶ್ರೀ ಮಠದ ಸದ್ಯದ ಅಧ್ಯಕ್ಷರು ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಸಾಹಿತ್ಯಿಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನೂ ಅತ್ಯಂತ ವೈಶಿಷ್ಟಪೂರ್ಣವಾಗಿ ಹಮ್ಮಿಕೊಂಡು ವಿದ್ವಾಂಸರ ಉಪನ್ಯಾಸ ಗ್ರಂಥ ಪ್ರಕಟಣೆ, ಕಮ್ಮಟ, ಸಮ್ಮೇಳನ ಇತ್ಯಾದಿ ಚಟುವಟಿಕೆಗಳನ್ನು ನಡೆಸುತ್ತ ಮಠವನ್ನು ಸ್ಥಾವರವಾಗಿಸದೆ ಜಂಗಮವಾಗಿಸಿದ್ದಾರೆ.

"ಮನುಕುಲದ ಉದ್ದಾರಕ್ಕಾಗಿ ಯುಗಕ್ಕೊಮ್ಮೆ ಹುಟ್ಟಿಬರುವ ಮಹಾಪುರುಷರಲ್ಲಿ ಪೂಜ್ಯ ಹಾರಕೂಡ ಚೆನ್ನಬಸವ ಪಟ್ಟದೇವರು ಒಬ್ಬರು. ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿ ಒಂದೊಮ್ಮೆ ಬೀಸಿದ ಅನ್ಯಭಾಷೆಗಳ ಬಿರುಗಾಳಿಯನ್ನು ನಿಲ್ಲಿಸಿದ ಜಟ್ಟಿಗ ಕನ್ನಡದ ಕರುನಾಳು, ದೀನದಲಿತರಬಾಳು ಬೆಳಗಿಸಿದ, ಶ್ರಮದ ಬೆಲೆ ಅರುಹಿದ, ವಿದ್ಯಾದಾನದ ಮಣಿಹ ಹೊತ್ತ "ಬಚ್ಚಬರಿಯ ಬಸವನಂತೆ ಸಾತ್ವಿಕತೆಯ ಗುಡಿ ಕಟ್ಟಿದ ಕಾರುಣ್ಯವು ಮಡುಗಟ್ಟಿದ ಪೂಜ್ಯರನ್ನು ತಮ್ಮ ಕಾಯಕ ದಿವ್ಯ, ತಮ್ಮ ಭಾವನೆ ನವ್ಯ ಸದ್ಗುಣದ ಸಂಗಮವು ದೇಗುಲದ ಜಂಗಮವು ಸಮಚಿತ್ತ ತಮ್ಮ ಜೀವನವು" [೫೧] ಎಂದು ಈ ಭಾಗದ ಅಜ್ಞಾನದ ಕತ್ತಲೆಯನ್ನು ಕರಗಿಸಿದ ಪೂಜ್ಯರ ಹಿರಿದಾದ ವ್ಯಕ್ತಿತ್ವವನ್ನು ಸ್ಮರಿಸಿದ್ದಾರೆ. ತಮ್ಮ ಕವನದ ಮೂಲಕ ಡಾ. ಜಗನ್ನಾಥ ಹೆಬ್ಬಾಳೆ ಅವರು ಪೂಜ್ಯ ಚೆನ್ನಬಸವೇಶ್ವರರ ಮಹಾತ್ಮೆ ಅಪಾರ, ಅದನ್ನು ಎಷ್ಟು ಹೇಳಿದರು ಕಡಿಮೆ.

ನಾಟಕಕಾರ ಆಲ್ದಾಳ ಅವರು, 'ಹಾರಕೂಡ ಚೆನ್ನಬಸವೇಶ್ವರ ಮಹಾತ್ಮೆಯನ್ನು ನಾಟಕರೂಪದಲ್ಲಿ ಸೃಷ್ಟಿಸಿ ರಂಗಭೂಮಿಯ ಮೇಲೆ ಅಮೋಘವಾಗಿ ಪ್ರಯೋಗಿಸಿ ಭಲೇ ಎನ್ನಿಸಿಕೊಂಡಿದ್ದಾರೆ. ಭಕ್ತಿಯ ಸೆಲೆ ಬತ್ತಿ ಹೋಗುತ್ತಿರುವ ಈ ದಿನಮಾನಗಳಲ್ಲಿ ಇಂತಹ ರಂಗನಾಟಕಗಳು ಮನುಷ್ಯನ ಮನಸ್ಸನ್ನು ಶುದ್ಧಿಕರಿಸಲು ಸಹಕಾರಿಯಾಗಲಿವೆಂದರೆ ತಪ್ಪಾಗಲಿಕ್ಕಿಲ್ಲ. ಆಲ್ದಾಳರ ಈ ನಾಟಕ ಉಪಯುಕ್ತ ಹಾಗೂ ಇಂದಿನವರಿಗೆ ಅನಿವಾರ್ಯ.

# ಅಬ್ಬೆ ತುಮಕೂರಿನ ಶ್ರೀ ಸದ್ಗುರು ವಿಶ್ವಾರಾಧ್ಯರ ಮಹಾತ್ಮೆ

**"ಅನುದಿನ ನೆನೆಯಲು ಬೇಕು ದಿನದಿನ ನೆನೆಯಲು ಬೇಕು**
**ವಿಶ್ವರಾಧ್ಯ ಗುರುವಿನ, ಈ ಪವಾಡ ಪುರುಷನ ॥ಪ॥**

**ಹೊನ್ನು ಹೆಣ್ಣು ಮಣ್ಣು ಮೂರು ತ್ಯಜಿಸಿದ ತ್ಯಾಗಿ**
**ನೆನೆದವರ ಮನದಲ್ಲಿ ನೆಲೆಸುವ ಯೋಗಿ,**
**ಕಷ್ಟಗಳನು ಪರಿಹರಿಸುವ ಘನಯೋಗಿಯೇ**
**ಜಗಕೆಲ್ಲ ಬೆಳಕಾದ ಜಗದೊಡೆಯನೇ**
**ಅಮರ ಜ್ಯೋತಿ ನೀನಾದೆ ವಿಶ್ವಮೂರ್ತಿ ನೀನಾದೆ**
**ನೆನೆಯಬೇಕು, ನಿತ್ಯ ನಿನ್ನ ನೆನೆಯಬೇಕು**
**ನೆನೆದಂತೆ ಮನನ ಮಾಡಿಕೊಂಡಿರಬೇಕು**
**ಘನಪಂಡಿತ ವಿಶ್ವಾರಾಧ್ಯ ಸದಾ ಬೆಳಗುತಿರಬೇಕು"** ೭೮

ಕಲಬುರ್ಗಿ ಶರಣರ, ಮಹಾಪುರುಷರ ನಾಡು, ಇಲ್ಲಿ ಮೂಡಿದ ಧಾರ್ಮಿಕ ಕಿರಣಗಳ ಬೆಳಕು ವಿಶ್ವದಲ್ಲೇ ಪಸರಿಸಿದೆ. ಈ ಕಿರಣಗಳು ಯುಗಯುಗಗಳ ಸ್ಮರಣೀಯ ಈ ಭಾಗದ ಶರಣರಿಂದ ಅವರ ದಿವ್ಯ ಪ್ರತಿಭೆಯಿಂದ ಮೂಡಿಬಂದ ವಚನ ಸಾಹಿತ್ಯ ಜಗತ್ತಿನ ಸಂಪತ್ತು. ಕ್ಷೀಣವಾಗಿದ್ದ ವೀರಶೈವ ಧರ್ಮವನ್ನು ಪುನಃ ಜಾಗೃತಗೊಳಿಸಿದ ಶ್ರೇಯಸ್ಸು ಈ ನಾಡಿನ ಶರಣರದು. ಇದು ಪುಣ್ಯಭೂಮಿ ಶರಣರ ವಚನದಂತೆ ಹೇಳುವುದಾದರೆ,

**" ವನವೆಲ್ಲ ಕಲ್ಪತರು ಗಿಡವೆಲ್ಲ ಮರುಜವಣಿ**
**ಶಿಲೆಗಳೆಲ್ಲ ಪರುಷ, ನೆಲವೆಲ್ಲ ಅವಿಮುಕ್ತಕ್ಷೇತ್ರ "**

ಇಂಥ ಪುಣ್ಯಭೂಮಿಯಲ್ಲಿ ಒಂದು ಶತಮಾನದ ಹಿಂದೆ ಅವತರಿಸಿದ ಶ್ರೀ ವಿಶ್ವಾರಾಧ್ಯರು ದೈವಿಪುರುಷರು. ತಮ್ಮ ತಪಃಶಕ್ತಿಯಿಂದ ನಾಡನ್ನು, ರಾಷ್ಟ್ರವನ್ನು ಬೆಳಗಿದವರು. ತಮ್ಮ ಸಾಧನೆಯಿಂದ ಸಿದ್ಧಿಯಿಂದ ಕಷ್ಟ, ನೋವು, ದುಃಖಗಳಲ್ಲಿ ಬೆಂದವರನ್ನು ಉದ್ಧರಿಸಿದರು. ಅವರ ಬದುಕು ದಿವ್ಯ ಶಕ್ತಿಯ ಸಂಕೇತ, ಲಾಲ ಅಹ್ಮದ ಬಂದಾನವಾಜ ಖಲೀಫ್ ಆಲ್ದಾಳ ಅವರು ರಚಿಸಿದ ನಾಟಕ 'ಅಬ್ಬೆತುಮಕೂರ ಶ್ರೀ ಸದ್ಗುರು ವಿಶ್ವಾರಾಧ್ಯರ ಮಹಾತ್ಮೆ' ಪುಟಗಳನ್ನು ತಿರವುತ್ತ ಹೋದಂತೆ ಶ್ರೀ ವಿಶ್ವಾರಾಧ್ಯರ ಬದುಕಿನ ಜ್ಞಾನದ ಬೆಳಕು ಪ್ರಕಾಶಮಾನವಾಗಿ ಕಣ್ಣುಗಳಿಗೆ ಕಂಗೋಳಿಸುತ್ತದೆ. ಪ್ರತಿಯೊಂದು ಪ್ರವೇಶ ಸನ್ನಿವೇಶಕ್ಕೂ ಬರುವ ಪವಾಡಗಳು ಆಶ್ಚರ್ಯ ಹುಟ್ಟಿಸುತ್ತವೆ. ಅವರ ಬದುಕಿನ ಚಿತ್ರ ಸದಾ ಕಣ್ಣುಮುಂದೆ ನಿಲ್ಲುತ್ತದೆ. ವಿಶ್ವಾರಾಧ್ಯರು ಅಸಾಮಾನ್ಯ ಪುರುಷರೆಂದು, ಅವರಿಂದ ಹಲವು ಕಾರ್ಯಗಳು ಮಾನವಶಕ್ತಿಗೆ ಮೀರಿದವುಗಳೆಂದು ಮನವರಿಕೆಯಾಗುತ್ತದೆ. ಅವರ ಬಗ್ಗೆ ಸಹಜವಾಗಿ ಭಕ್ತರಲ್ಲಿ ಅಪಾರ ಪ್ರೀತಿ, ಭಕ್ತಿ ಹುಟ್ಟಿಸುತ್ತದೆ. ಇದೆ ದೃಷ್ಟಿಯನ್ನು ಹೊಂದಿರುವ ಶ್ರೀ ವಿಶ್ವಾರಾಧ್ಯರ ಸಂಪೂರ್ಣ ಜೀವನ ಚರಿತ್ರೆಯನ್ನು ಅವರ

ಸಚ್ಚಾರಿತ್ರ್ಯಕ್ಕೆ ಯಾವುದೇ ವ್ಯತಯ ಬಾರದಂತೆ ಸರಳ ಮತ್ತು ಸುಂದರವಾದ ಶೈಲಿಯಲ್ಲಿ ಹಾಸ್ಯ ಮತ್ತು ಭಕ್ತಿ ರಸಪೂರಿತವಾಗಿ ಬರೆದು ಓದುವ ಮತ್ತು ನೋಡುವ ಸಮಸ್ತ ಜನರನ್ನು ಭಕ್ತಿ ರಸದಲ್ಲಿ ಮಿಂದು ತಣಿಯುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ.

ಈಗ ಯಾದಗಿರಿ ಜಿಲ್ಲೆಯಲ್ಲಿ ಬರುವ ಅಬ್ಬೆತುಮಕೂರ ಸಿದ್ಧಸಂಸ್ಥಾನ ಮಠ ಅತ್ಯಂತ ಜಾಗೃತ ಕ್ಷೇತ್ರವೆಂದು ಪ್ರಸಿದ್ಧಿ ಪಡೆದಿದೆ. ಕ್ಷೇತ್ರದ ಒಡೆಯ ಸದ್ಗುರು ವಿಶ್ವಾರಾಧ್ಯ ಅವರು ನಾಡಿನ ಜನತೆಯ ಆರಾಧ್ಯ ದೈವವಾಗಿದ್ದಾರೆ ಕರ್ನಾಟಕ ಮಾತ್ರವಲ್ಲ ಆಂಧ್ರ, ಮಹಾರಾಷ್ಟ್ರಗಳಿಂದ ಲಕ್ಷೋಪಲಕ್ಷ ಭಕ್ತವೃಂದ ಸಾಗರೋಪಾದಿಯಲ್ಲಿ ಹರಿದು ಬರುತ್ತದೆ. ವಿಶ್ವಾರಾಧ್ಯರ ದರ್ಶನಾಶೀರ್ವಾದ ಪಡೆದು ಭವ ಚಿಂತೆಯನ್ನು ದೂರಮಾಡಿಕೊಂಡು, ಭವ ರೋಗ ನಿವಾರಿಸಿಕೊಂಡು, ಅಂತರಂಗ ಶುದ್ಧಿ ಗೊಳಿಸಿಕೊಂಡು ಪುಣ್ಯಾತ್ಮರಾಗುತ್ತಾರೆ.

ಭೂಮಿಯ ಮೇಲೆ ವಾಸಿಸುವವರೆಗೆ ಉತ್ತಮರ ಸಂಗದೊಳಗಿದ್ದು ನಾವು ಗೊತ್ತು ಪಡಿಸಿಕೊಂಡ ಕಾರ್ಯ ತೃಪ್ತಿಯಿಂದ ಮಾಡಿದಾಗ ಅದೇ ವಿಶ್ವಾರಾಧ್ಯರ ಪೂಜೆ ಆಗ್ತಾದ.

ನೋಡ್ರಿ, ಗಿಡ, ಮರ, ಬಳ್ಳಿ ಫಲಕೊಟ್ಟು ಧನ್ಯವೆನಿಸಿದವು. ತರುಲತೆಗಳು ಹೂ ಬಿಟ್ಟು ಪರಿಮಳ ನೀಡಿ ಧನ್ಯ ವೆನಿಸಿದವು. ಚಂದನದ ಕಟ್ಟಿಗೆ ತನ್ನತಾ ತೇಯ್ದು ಗಂಧ ನೀಡಿ ಧನ್ಯವೆನಿಸಿತು. ಎಲ್ಲಾ ಬಲ್ಲವನಾದ ಮಾನವ ಜೀವಿಯು ಏನೋಂದು ಸಾಧಿಸದಿದ್ದಾಗ ಜಗಕೆ ಬಂದಲ್ಲಿ ಯಾವ ಸಾರ್ಥಕವಾಯಿತು. ಹಗಲು ಹಸಿವೆಗಾಗಿ ಬಡಿದಾಡಿ, ಸೋತು ಹೋದಿರಿ. ರಾತ್ರಿ ವಿಲಾಸ, ಭೋಗ, ದಿಗಭ್ರಮೆಗಳಲ್ಲಿ ತೇಲಾಡಿದಿರಿ, ವಿಕೃತಕ್ಕೆ ಬಲಿಯಾದಿರಿ, ಆದರೆ ಅರೆ ನಿಮಿಷ ಶಿವ ಚಿಂತನೆಗೆ ಅವಕಾಶಕೊಡಲಿಲ್ಲ ಅಂದ್ರಹ್ಯಾಂಗ? ಮುಕ್ತಿಸಿಗ್ತಾದ,

ಅಧ್ಯಾತ್ಮ ತತ್ವಗಳಿಂದೊಡಗೂಡಿದ ಭಕ್ತಿ ಪ್ರಧಾನವಾದ ನಾಟಕ 'ಅಬ್ಬೆ ತುಮಕೂರಿನ ಶ್ರೀ ಸದ್ಗುರು ವಿಶ್ವಾರಾಧ್ಯರ ಮಹಾತ್ಮೆ ೩೬ ದೃಶ್ಯ, ಪ್ರವೇಶಗಳಿಂದ ಕೂಡಿದ್ದು ಪ್ರೇಕ್ಷಕರಿಗೆ ರಂಗಭೂಮಿಯ ಮೇಲೆ ಪ್ರದರ್ಶನಗೊಂಡಂತೆ ಭಕ್ತಿಯ ತೋರಣವನ್ನೇ ಸೃಷ್ಠಿಸುತ್ತದೆ. ಅಧ್ಯಾತ್ಮದಿಂದೊಡಗೂಡಿದ ಅದೊಂದು ಜ್ಞಾನಾಮೃತದ ಕೊಡುಗೆ.

ಜೇವರ್ಗಿ ತಾಲೂಕಿನ ಗಂವಾರ ಗ್ರಾಮದಲ್ಲಿ ವೀರಶೈವ ಮತದ ಪಂಚಪೀಠಗಳಲ್ಲೊಂದಾದ ಕಾಶಿ ಜ್ಞಾನ ಸಿಂಹಾಸನಾಧೀಶ್ವರ ಶ್ರೀ ೧೦೦೮ ಜಗದ್ಗುರು ವಿಶ್ವಾರಾಧ್ಯರ ಪೀಠದ ಶಾಖಾ ಸೂತ್ರಾನುವರ್ತಿಗಳಾದ ಪಂಚಗ್ರಹ ತೋಪಕಟ್ಟಿ ಹಿರೇಮಠದ ಶ್ರೀ ಪಂಡಿತ ಬನದಪ್ಪ ಶಾಸ್ತ್ರಿಗಳು, ಸಾಧ್ವಿ ಶಿರೋಮಣಿ ಶ್ರೀಮತಿ ನೀಲಮ್ಮಾ ಎಂಬ ಆದರ್ಶ ದಂಪತಿಗಳು ಒಂದಾಗಿ ಅನುದಿನವೂ ಸಂಸಾರ ಮಾಡಿಕೊಂಡು ಬಾಳುತ್ತಿದ್ದರು.

ಮದುವೆಯಾಗಿ ಹನ್ನೆರಡು ವರ್ಷಗಳು ಉರುಳಿದರು ಈ ದಂಪತಿಗಳ ಭಾಗ್ಯಕ್ಕೆ ಮಕ್ಕಳಾಗಿರಲಿಲ್ಲ. ಸತಿ ನೀಲಮ್ಮ ಬಂಜೆಯೆಂಬ ಕೆಟ್ಟ ಹೆಸರು ಅಂಟಿಕೊಳ್ಳುತ್ತದೆಂಬ ಚಿಂತೆಯಲ್ಲಿ ಮುಳುಗಿದ್ದರು. " ಮುಂಜಾನೆ ಎದ್ದ ಕೂಡಲೇ ಹುಟ್ಟ ಬಂಜಿ ಮುಖಾ ನೋಡಬಾರ್ದು ಯವ್ವಾ

ನೋಡಬಾರ್ದು...." ಎಂದು ಮಾತಾಡುವವರನ್ನು ಕಂಡು ನೀಲಮ್ಮಾ ತಾಯಿ ಕಂಪಿಸುವಂತಾಗುತ್ತಿದ್ದರು. " ಶಿವಶಿವಾ, ತಂದೆ ಹೆಣ್ಣಾಗಲಿ, ಗಂಡಾಗಲಿ, ಕುರುಡಾಗಲಿ, ಕುಂಟಾಗಲಿ ಒಂದೇ ಒಂದು ಮಗುವನ್ನುಕೊಟ್ಟು ನನ್ನ ಬಂಜೆತನವನ್ನು ಹೋಗಲಾಡಿಸು" ಎಂದು ಹಲಬುತ್ತಿದ್ದಳು. ಇದನ್ನು ಕಂಡ ಪತಿ ಬನದಯ್ಯ ಶಾಸ್ತ್ರಿ " ಹುಚ್ಚಿ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳೇ ಮಕ್ಕಳು ಅಂತಾ ತಿಳಿದುಕೊಳ್ಳುವ ನಿನ್ನ ಬುದ್ದಿಗೆಷ್ಟು ಕೊಂಡಾಡಬೇಕೆ? ಜಗದ ಮಕ್ಕಳೇ ನಮ್ಮ ಮಕ್ಕಳು ಅಂತಾಯಾಕೆ ತಿಳಿದು ಕೊಳ್ಳಬಾರದು" ಎಂದು ಹಿತ ವಚನ ನುಡಿದು ಸತಿಯನ್ನು ಸಂತೈಸುವುದು ಸಾಮಾನ್ಯ ವಿಷಯವಲ್ಲ. ಹೆಣ್ಣಿಗೆ ಸಂತಾನದ ಫಲ ದೊರಕಿದಾಗಲೇ ಅವಳಿಗೆ ಸ್ವರ್ಗದಾನಂದ. ಅದರೆ ಇದು ಪರಮಾತ್ಮನಿಂದಲೇ ಸಾಧ್ಯ ಕಾಯಾ, ವಾಚಾ, ಮನಸಾದಿಂದ ತ್ರಿಕರ್ಣಪೂರ್ವಕವಾಗಿ ಆರಾಧಿಸುವ ಭಕ್ತರ ಆರ್ತಸ್ವರ ಕೇಳಿ ಒಲಿದಾಗ, " ನೀನೋಲಿದರೆ ಕೊರಡು ಕೊನರುವುದಯ್ಯಾ । ನೀನೊಲಿದರೆ ಬರಡು ಹಯನುವುದಯ್ಯ । ನೀನೊಲಿದರೆ ವಿಷವೆಲ್ಲಾ ಅಮೃತವಯ್ಯ । ನೀನೊಲಿದರೆ ಸಕಲ ಪಡಿಪದಾರ್ಥಂಗಳು ಇಪ್ಪವು ಕೂಡಲಸಂಗಮದೇವಾ ॥

ಕಾಶೀಪೀಠ ಸ್ಕಂದ ಗೋತ್ರ ಗಂವಾರದ ಪಂಚಗ್ರಹ ತೋಪಕಟ್ಟಿ ಹಿರೇಮಠದ ವಂಶವೇ ಇಲ್ಲಿಗೆ ಪರಿಸಮಾಪ್ತಿಯಾಯಿತೆಂದು ಭಾವಿಸುತ್ತಿರಲು, ಜಗದ್ಗುರು ಕಾಶಿ ವಿಶ್ವನಾಥನ ದೇವಸ್ಥಾನದಲ್ಲಿ ಭಾವ ಸಮಾಧಿಯಲ್ಲಿದ್ದಾಗ ಆ ಶಿವನೇ ನಾನೇ ವಿಶ್ವರಾಧ್ಯನಾಗಿ ಅವತರಿಸಿ ಬರುವೆ ಎಂದು ಅಪ್ಪಣೆ ಕೊಡಿಸಿದ್ದು ನಿಜವಾಯಿತು. ನೀಲಮ್ಮ ತಾಯಿ ಗರ್ಭಿಣಿಯಾಗಿದ್ದು ಆಕೆಯ ಮುಖದ ಲಕ್ಷಣ ನೋಡಿದರೆ ಒಬ್ಬ ಕಾರಣಿಕ ಪುರುಷನ ಅವತಾರ ವಾಗುತ್ತದೆಯೇನೋ ಅನ್ನಿಸುತ್ತದೆ.

ಶ್ರೀ ಕೃಷ್ಣಪರಮಾತ್ಮನ ವಾಣಿಯಂತೆ ಧರ್ಮಕ್ಕೆ ಧಕ್ಕೆಯೊದಗಿದಾಗ ದೇವರೇ ಶರಣರ ರೂಪಧರಿಸಿ ಧರೆಗೆ ಅವತರಿಸಿ ಬಂದು ಧರ್ಮರಕ್ಷಣೆಗೈದು ದುಷ್ಠ ಶಿಕ್ಷಣ ಶಿಷ್ಠ ರಕ್ಷಣೆ ಮಾಡುತ್ತಾನೆಂದರೆ ಅತಿಶಯೋಕ್ತಿಯೇನಲ್ಲ. ಕನ್ನಡನಾಡಿನ ಪ್ರತಿಯೊಂದು ಹಳ್ಳಿಗಳು ಶಿವನೋದ್ಭವದ ತಾಣವಾಗಿವೆ ಎಂದರೆ ತಪ್ಪಿಲ್ಲ. ಅಂತಹ ಭಕ್ತಿಯ ಬೀಡುಗಳಲ್ಲಿ ಜೇವರ್ಗಿ ತಾಲೂಕಿನ ಗಂವಾರಪುರವು ಒಂದು. ಶಿವನ ಅವತಾರಿಯಾದ ಶ್ರೀ ವಿಶ್ವಾರಾಧ್ಯರು ಶಿವಪೂಜಾಲೋಲರಾದ ಬನದಯ್ಯ ಶಾಸ್ತ್ರಿಗಳು ನೀಲಮ್ಮರೆಂಬ ದಂಪತಿಗಳ ಪೂರ್ಣಗರ್ಭದಲ್ಲಿ ಸುಮಾರು ೧೫೦ ವರ್ಷಗಳ ಹಿಂದೆ ನವಶಿಂಪೀಯಲ್ಲಿ (ಕಪ್ಪೆಚಿಪ್ಪು) ಮುತ್ತು ಜನಿಸಿದಂತೆ ಶಾಲಿ ವಾಹನ ಶಕೆ ೧೮೦೧ ವಿಕ್ರಮ ಸಂವತ್ಸರ ಚೈತ್ರಶುದ್ಧ ತದಿಗಿ ಗುರುವಾರದಂದು ಜನಿಸಿದರು.

"ಬೆಳೆಯಸಿರಿ ಮೊಳಕೆಯಲ್ಲಿ ನೋಡು ಎಂಬಂತೆ" ಬಾಲ್ಯದಲ್ಲಿಯೇ ತನ್ನ ಬಾಲಲೀಲೆಗಳನ್ನು ತೋರಿದರು ವಿಶ್ವಾರಾಧ್ಯರು. ಒಂದು ದಿನ ನೀಲಮ್ಮ ತಾಯಿಯವರು ದೇವರಿಗೆ ಎಡೆ ಹಿಡಿದು ಕೊಂಡು ಬರಲು ತಿಳಿಸಿದರು. ವಿಶ್ವಾರಾಧ್ಯರು, ತಮ್ಮ ಬಸವಲಿಂಗರ ಜೊತೆ ದೇವಸ್ಥಾನದ ಕಡೆಗೆ ಹೊರಟರು ರಸ್ತೆಯಲ್ಲಿ ಹಸಿವು– ಹಸಿವು ಮೂರು ದಿನದಿಂದ ಹೊಟ್ಟೆಯಲ್ಲಿ ಅನ್ನವಿಲ್ಲವೆಂದು ಮೂರ್ಛೆಹೋಗಿ ಭಿಕ್ಷುಕ ನೋರ್ವ ರಸ್ತೆಯ ಮೇಲೆ ಬೀಳುವನು ವಿಶ್ವಾರಾಧ್ಯ ಅವನನ್ನು ಮೇಲಕ್ಕೆತ್ತಿ ತನ್ನ ಬಳಿಯಿದ್ದ ಎಡೆಯನ್ನೇ ಭಿಕ್ಷುಕನಿಗೆ ತಿನ್ನಿಸಿದ ತಮ್ಮ ಬಸವಲಿಂಗ

ದೇವರಿಗೆ  ನೈವೇದ್ಯ ಏನು ಹಿಡಿಯುತ್ತಿ ಎಂದು ಕೇಳಿದಾಗ ತಮ್ಮ ದೇವರನ್ನು ನಾವು ಕೇವಲ ಗುಡಿಯಲ್ಲಿ ಕಾಣಬಾರದಪ್ಪಾ, ದೇವರು ಯಾಕೆ ತಾನೆ ಭಿಕ್ಷುಕ ವೇಷಧಾರಿಯಾಗಿ ಬಂದಿರಬಾರದು. ಎಡೆ ತಿಂದ ಹಸಿದೊಡಲು ಎಷ್ಟೋಂದು ಹಸನ್ಮುಖವಾಗಿದೆ. "ಬಾಲಕನಾಗಿರು– ವಾಗಲೇ ವಿಶ್ವಾರಾಧ್ಯರಲ್ಲಿ ಶಿವತೇಜಸ್ಸು, ಹರಗುರು ಭಕ್ತಿ ಎದ್ದು ಕಾಣುತ್ತಿದ್ದವು ಲೌಕಿಕ ಪ್ರಪಂಚದಲ್ಲಿ ಬೆರೆಯದೇ ಅಧ್ಯಾತ್ಮದ ಪ್ರಪಂಚದಲ್ಲಿರತ್ತಿದ್ದರು" [೫೨]

ಎಲ್.ಬಿ.ಕೆ.ಅಲ್ದಾಳರು ಮುಸ್ಲಿಂ ಧರ್ಮದಲ್ಲಿ ಜನಿಸಿದರು, ಮುಂದೆ ದೊಡ್ಡವರಾಗಿ ತಿಳುವಳಿಕೆ ಮೂಡಿದ ಮೇಲೆ, ಉತ್ತಮರ ಸಂಗದಿಂದ, ಅದರಲ್ಲೂ ಮಠ, ಮಾನ್ಯರ ಒಡನಾಟದಿಂದ ಸಂಪೂರ್ಣ ಪರಿವರ್ತಿಸಿಗೊಂಡರು. ವೀರಶೈವ ಸಂಪ್ರದಾಯವನ್ನು ಬಹುವಾಗಿ ಮೆಚ್ಚಿಕೊಂಡರು ಕುಳಿತರೆ ಶಿವ, ನಿಂತರೆ ಶಿವಾ, ನಡೆದಾಡಿದರೂ ಶಿವನಾಮ ಉಚ್ಛಾರಣೆ ಅವರ ನಾಲಿಗೆಯ ಮೇಲೆ ಸದಾಹರಿದಾಡುತ್ತಿದೆ. ವೀರಶೈವರಲ್ಲಿ ಅನೇಕರಿಗೆ ತಿಳಿಯದಂತ ವಿಚಾರ, ಜ್ಞಾನವನ್ನು ಸಂಪೂರ್ಣವಾಗಿ ಮನನ ಮಾಡಿಕೊಂಡಿರುವ ಆಲ್ದಾಳರನ್ನು ಮಠ–ಮಾನ್ಯರ ಸಂಗಾತಿ ಎಂದೇ ಕರೆಯುತ್ತಾರೆ. ಜೀವ–ಪರವಂಶ ಸಂಬಂಧ ಕುರಿತು 'ಎತ್ತಣ ಮಾಮರ, ಎತ್ತಣ ಕೋಗಿಲೆ ಎತ್ತಣಿಂದೆತ್ತ ಸಂಬಂಧವಯ್ಯ' ಇಲ್ಲಿ ಅಲ್ಲಮ ಪ್ರಭು ದೇವರ ಮಾತು ಜ್ಞಾಪಕಕ್ಕೆ ಬರುತ್ತದೆ.

ಕಲಬುರ್ಗಿ ಜಿಲ್ಲೆಯ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರಾಗಿದ್ದ ಲಕ್ಷ್ಮಣರಾವ ಗೋಗಿ ಅವರು ಅಲ್ದಾಳ ಅವರ ಬಗ್ಗೆ ಮೆಚ್ಚುಗೆಯ ಮಾತು ಹೀಗೆ ಬರೆದಿದ್ದಾರೆ. "೧೯೮೨ ರ ನವೆಂಬರ ತಿಂಗಳು ಹಿಂದಿನ ಕೇಂದ್ರ ಪ್ರವಾಸೋದ್ಯಮ ಸಚಿವೆ ಡಾ.ಸರೋಜಿನಿ ಮಹಿಷಿ ಅವರು ಶಹಾಬಾದ ಪಟ್ಟಣದಲ್ಲಿ ರಂಗಭೂಮಿಯಲ್ಲಿ ಪ್ರಯೋಗಿಸಲ್ಪುಡುತ್ತಿದ್ದ " ಶ್ರೀ ವಿಶ್ವಾರಾಧ್ಯ ಮಹಾತ್ಮೆ" ಭಕ್ತಿ ಪ್ರಧಾನ ನಾಟಕಕ್ಕೆ ಮುಖ್ಯ ಅತಿಥಿಯಾಗಿ ಹೊರಟಿದ್ದರು. ಆಗ ಅವರ ಜೊತೆ ನನಗೂ ಹೋಗುವ ಅವಕಾಶ ಬಂದಿತ್ತು. ಸಾವಿರಾರು ಜನರಿಂದ ಕಿಕ್ಕಿರಿದ ನಾಟ್ಯ ಮಂದಿರ ಕಂಡು ನನಗೆ ಆಶ್ಚರ್ಯ ಅಷ್ಟೇ ಸಂತಸಉಂಟಾಯಿತು. ನಾಟಕ ಪ್ರಾರಂಭವಾದಾಗಿನಿಂದ ಮುಗಿಯುವವರೆಗೂ ಪ್ರೇಕ್ಷಕರು ಸ್ತಬ್ಧವಾಗಿ ಕುಳಿತಿದ್ದೇ ನಾಟಕದ ಯಶಸ್ಸಿಗೆ ಸಾಕ್ಷಿ. ಅಡವಿತಾತನ ಪಾತ್ರವಹಿಸಿದ್ದ ನಾಟಕಕಾರ ಅಲ್ದಾಳ ಅವರ ನಟನೆ ಕಂಡು, ಹಾಗೂ ಮುಸ್ಲಿಂ ಧರ್ಮದವರೊಬ್ಬರು ವೀರಶೈವ ಧರ್ಮದವರ, ಶರಣರ ಬಗ್ಗೆ ಬರೆದ ನಾಟಕ ನೋಡಿದ ಪ್ರೇಕ್ಷಕರೊಂದಿಗೆ ಕೇಂದ್ರ ಸಚಿವೆ ಡಾ.ಸರೋಜಿನಿ ಮಹಿಷಿ ಆಶ್ಚರ್ಯದೊಂದಿಗೆ ಮೆಚ್ಚುಗೆ ವ್ಯಕ್ತಪಡಿಸಿದರು" [೫೩] ವಿವಿಧ ಕಡೆ ತಾವೇ ನಟಿಸಿ, ನಿರ್ದೇಶಿಸಿ ಪ್ರಯೋಗಿಸಿರುವುದು ನಾಟಕಕಾರ ಅಲ್ದಾಳರ ಹೆಗ್ಗಳಿಕೆ!

ವಿಶ್ವರಾಧ್ಯರ  ತಾಯಿ ನೀಲಮ್ಮತಾಯಿ ತಮ್ಮ ಮಕ್ಕಳು ಉಜ್ಜಯಿನಿ ಜಗದ್ಗುರುಗಳು ಬಂದು ಕರೆದುಕೊಂಡ ಹೋದ ಸಂಗತಿ ಗೊತ್ತಾಯಿತು. ಮನಸ್ಸಿನಲ್ಲಿಯೇ ಕೊರಗ ಹತ್ತಿದಳು ಹಾಸಿಗೆ ಹಿಡಿದರು. ಹನ್ನೆರಡು ವರುಷ ಹರಕೆ ಹೊತ್ತು ಪಡೆದು ಹಡೆದ ಮಕ್ಕಳು ಎದುರಿಗೆ  ಇಲ್ಲದ್ದು ತಾಯಿಯ ಮನ ಮರುಗಿತು. ನೀಲಮ್ಮನವರು ಮಠದಲ್ಲಿ ಲಿಂಗಪೂಜೆಯಲ್ಲಿ ಲೀನವಾಗಿದ್ದರು. ಪತಿ ಬನದಯ್ಯ ಶಾಸ್ತ್ರಿ ಪ್ರಸಾದ ತೆಗೆದುಕೊಂಡು ಬಂದು ಸೊಸೆ ಬಸಮ್ಮ ಕೈಯಲ್ಲಿ ಕೊಟ್ಟು ನಿಮ್ಮತ್ತೆಗೆ ತಲುಪಿಸು ಎಂದು ಹೇಳುತ್ತಾರೆ.

ಅತ್ತೆ ನೀಲಮ್ಮ ತಾಯಿಯವರ ಪ್ರಾಣಪಕ್ಷಿ ಆಗಲೆ ಹಾರಿ ಹೋಗಿರುತ್ತದೆ, ಇದನ್ನರಿತ ಪತಿ ಬನದಯ್ಯಾ ಶಾಸ್ತ್ರಿಗಳು, "ನೀಲಾಂಬಿಕೆ । ಜಗದ ಜಂಜಡವ ಹರಿದು ನಾನು ನೀನೆಂಬ ಭಯ ಅಹಂಕಾರವನ್ನಳಿದು, ನಿರಹಂಕಾರಿಯಾಗಿ ಶಂಕರನ ತಾಣ ಸೇರಿದೆಯಾ ಎಂದು ಕೊರಗಿದರು.

" **ಪಂಚಗ್ರಹ ತೋಪಿನಾಕಟ್ಟಿ**
**ಹಿರೇಮಠದ ಹಿರೇಭಾರ ಹೊತ್ತು**
**ಅನ್ನಪೂರ್ಣೆಯಾಗಿ ಸದಾಪೂರ್ಣೆಯಾಗಿ**
**ಅಮರಳಾದಳು ತಾಯಿ ನೀಲಾಂಬಿಕೆ** " [೫೩]

ಅಲ್ದಾಳರು ಅರ್ಥಪೂರ್ಣವಾಗಿ ಜೀವನದಲ್ಲಿ ಎದುರಾಗುವ ಸಮಸ್ಯೆಗಳನ್ನು ತೆರೆದಿಟ್ಟಿದ್ದಾರೆ. ಸಮಾಜದಲ್ಲಿ ಸಂಸಾರಗಳು ಬಡತನ ಇಲ್ಲವೆ ಶ್ರೀಮಂತ ತನದಿಂದಲೇ ತುಂಬಿಕೊಂಡಿರಲಿ. ಅಲ್ಲಿ ಎಷ್ಟೇ ಸುಖವಿರಲಿ, ಆನಂದ ವಿರಲಿ ಸ್ವಾರ್ಥವೆಂಬುದು ಧುತ್ ಎಂದು ಎದುರಾಗುತ್ತದೆ. ಅದು ತನ್ನ ಆಟವನ್ನು ಆಡಿಯೇ ತೋರುತ್ತದೆ. ಇಲ್ಲಿ ಅದನ್ನು ಅಲ್ದಾಳರು ಸಹಜವೆನ್ನುವಂತೆ ತೋರಿದ್ದಾರೆ ಬಸವಲಿಂಗನ ಪಾತ್ರದ ಮೂಲಕ. ವಿಶ್ವಾರಾಧ್ಯರ ತಮ್ಮ ಬಸವಲಿಂಗ ಸಂಸಾರ ನಿರತ, ಅಣ್ಣನಾದವ ಆ ಬಗ್ಗೆ ಎಳ್ಳಷ್ಟು ಚಿಂತೆ ಮಾಡದವ. ತಾನಾಯಿತು ತನ್ನದೇ ಆದ ವಿಚಾರವಾಯಿತು ಇದರಿಂದಾಗಿ ತಮ್ಮ ಬಸವಲಿಂಗ ತಾಯಿಯ ಮರಣದ ನಂತರ ತಂದೆಗೆ ಆಸ್ತಿಯಲ್ಲಿ ಪಾಲು ಮಾಡಿಕೊಡಬೇಕೆಂದು ಆಗ್ರಹಿಸುತ್ತಾನೆ. ಅಣ್ಣ ವಿಶ್ವಾರಾಧ್ಯನ ಬಗ್ಗೆ ದುಂದುವೆಚ್ಚ, ಧಾನ-ಧರ್ಮ ಮಾಡುತ್ತ ಆಸ್ತಿ ವ್ಯಯಿಸುವುದನ್ನು ಸಹದೂರುತ್ತಾನೆ. ಬಸವಲಿಂಗನ ಮನಸ್ಸು ಆಸ್ತಿಗಾಗಿ ಮಲೀನವಾಗುತ್ತದೆ. ಅಣ್ಣನ ಒಳ್ಳೆಯ ಗುಣಗಳ ಬಗ್ಗೆ ಚಿಂತಿಸದೇ ತನ್ನ ಸುಖ-ಭೋಗಕ್ಕಾಗಿ ಹಪ-ಹಪಿಸುತ್ತಾನೆ. ಅದಕ್ಕೆ ಹಿರಿಯರು ಹೇಳುತ್ತಲೇ ಬಂದಿದ್ದಾರೆ, " ಹುಟ್ಟುವಾಗ ಅಣ್ಣ ತಮ್ಮಂದಿರು ಬೆಳೆಯುತ್ತಲೇ ದಾಯಾದಿಗಳು", ಅದರಂತೆ 'ತಾಮ್ರದ ದುಡ್ಡು ತಾಯಿ ಮಕ್ಕಳನ್ನು ಬೇರ್ಪಡಿಸುತ್ತದೆ". ಇದು ಬಸವಲಿಂಗನ ವರ್ತನೆಗೆ ಸರಿಹೊಂದುತ್ತದೆ.

"**ವಿಶ್ವರಾಧ್ಯ :-** ಅಪ್ಪಾ ಅವರೆ! ತಮ್ಮ ಬಸವಲಿಂಗ ಆಸ್ತಿ ಪಾಲು ಕೇಳಿದ ಬಗ್ಗೆ ತಾವೇನು ಭಾವಿಸಬೇಡಿ, ಹುಟ್ಟಿದಾಗಲೇ ಈ ಮಾನವ ಶರೀರ ತನ್ನ ಪಾಲು ತಾನು ಮಾಡಿಕೊಂಡು ಬಂದಿರುವಾಗ, ಈ ಅಸ್ಥಿರವಾದ ಆಸ್ತಿಗೆ ಯಾರು ಹಂಚಿಕೊಡಬೇಕು. ಅಪ್ಪಾಜಿ! ನೀವು ಗಳಿಸಿದ ಆಸ್ತಿ ಎಂದರೆ ಜ್ಞಾನ, ಕ್ರಿಯಾ ಹೌದಲ್ಲವೇ? ತಮ್ಮ ಬಸವಲಿಂಗ ಕ್ರಿಯಾ ಮೂರ್ತಿ ಅವನಿಗೇನೇ ಸಲ್ಲಲಿ ಮಠದ ಸರ್ವಾಸ್ತಿ" [೫೪] ಆಸ್ತಿ ಎಂಬ ಭೂತದ ಬೆನ್ನಿಗೆ ಅಂಟಿಸಿಕೊಳ್ಳದೆ ವಿಶ್ವಾರಾಧ್ಯ ಮಠದ ಎಲ್ಲ ಆಸ್ತಿಯನ್ನು ತಮ್ಮನಿಗೆ ಬಿಟ್ಟುಕೊಟ್ಟತ್ಯಾಗಿ,

**ಓ ನಾಮಾ ಕಲಿರೋ । ನಾನಂಬುದಳಿರೋ**
**ನಾನಂಬುದಳಿರೋ । ಖೂನವ ತಿಳಿರೋ ॥**

**ವಿಶ್ವಾರಾಧ್ಯ** :- ಓ ನಾಮ ಕಲಿರೋ, ನಾನೆಂಬುದು ಅಳಿರೋ, ನಾನು ಯಾರು? ಏತಕ್ಕಾಗಿ ಬಂದೆ? ಬಂದು ಏನ್ಮಾಡಿದೆ? (ನಗುವರು)

'ಶ್ರೀ ಸದ್ಗುರು ವಿಶ್ವಾರಾಧ್ಯರ ಮಹಾತ್ಮೆ' ಭಕ್ತಿ ಪ್ರಧಾನವಾದ ನಾಟಕದಲ್ಲಿ ಅಡವಿತಾತನ ಪಾತ್ರ ಹೆಚ್ಚಿನ ಮಹತ್ವ ಪಡೆದಿದೆ. ಗುರುವಿನ ಪಾತ್ರ ಸಮಾಜಕ್ಕೆ ಮಹತ್ವವನ್ನು ಕಲ್ಪಿಸುತ್ತದೆ ಎಂಬುದನ್ನು ಮರೆಯುವಂತಿಲ್ಲ. ಇದನ್ನು ಅಡವಿತಾತನ ಮಾತಿನಲ್ಲಿಯೇ ಕೇಳಿ.

**ಅಡವಿತಾತ :-** ನರನು ಹರನಾಗಬೇಕಾದರೆ, ಗುರು ಬೇಕು. ಆ ಸದ್ಗುರುವಿನ ವಚನಾಮೃತವನು ಆಲಿಸಿ ಆಚರಿಸಿದಾಗ, ಮಾನವನು ಈ ಭವ ಬಂಧನದಿಂದ ಮುಕ್ತ ನಾಗುತ್ತಾನೆ. ಅವನೇ ಮಹಾಂತನಾಗುತ್ತಾನೆ. ಮಾಂಸ ಪಿಂಡವನ್ನು ಮಂತ್ರ ಪಿಂಡವನ್ನಾಗಿ ಪರಿವರ್ತಿಸಿ, ಹೀನ ವಿಷಯಾ ಪ್ರಭೋಗಗಳಿಂದ ಕೂಡಿದ ಈ ಸಂಸಾರವನ್ನು ಶುದ್ಧೀಕರಿಸುತ್ತಾರೆ. ಅಂಥ ಗುರುವಿಗೆ ಹಳಿಯಬಾರದು, ನಿಂದಿಸಬಾರದು. "ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣಾ ಮುಕುತಿ" ಎಂದು ಹಾಡಿದ ದಾಸರ ವಾಣಿಯನ್ನೇ ತಮ್ಮ ಅನುಭವದಲ್ಲಳವಡಿಸಿಕೊಂಡು ಶಿಶುನಾಳದ ಶರೀಫ್ ಶಿವಯೋಗಿಗಳು ಗುರುಗೋವಿಂದರಲ್ಲಿ ಕೂಡಿ, "ನೂರೆಂಟು ನಾಯಿ ಬೊಗಳಿದರೇನು ಗುರುವಿನ ಕೂಡಿದೇನು" ಅಂತ ಜಗತ್ತಿಗೇನೆ ಸಾರಿ ಹೇಳಿದರು. ಶೃತಿ ವೇದಗಳು ಕೂಡ ಬ್ರಹ್ಮ, ಗುರು, ವಿಷ್ಣು, ಗುರುದೇವೋ ಮಹೇಶ್ವರಾ ಃ ಗುರು ಸಾಕ್ಷಾತ ಪರಬ್ರಹ್ಮ ತಸ್ಮೈ ಶ್ರೀ ಗುರುವೇ ನಮಃ" ಅಂತ ಸಾರಿಹೇಳುತ್ತಿವೆ.

ಸಮಾಜವನ್ನು ಸರಿದಾರಿಯಲ್ಲಿ ನಡೆಯಿಸಿಕೊಂಡು ಹೋಗುವಲ್ಲಿ ಗುರುಗಳು ಅಗತ್ಯ ಎನ್ನುವ ಮಾತನ್ನು ಅಲ್ದಾಳರು ತಮ್ಮ ಭಕ್ತಿನಾಟಕದಲ್ಲಿ ಸಕಲರೂ ತಿಳಿದು ಕೊಂಡು ಅವರು ತಮ್ಮ ಆಚಾರ ವಿಚಾರಗಳಲ್ಲಿ ಒಳ್ಳೆಯ ಗುಣಗಳನ್ನು ಅಳವಡಿಸಿಕೊಳ್ಳಲಿ, ಹಾಗೂ ಗುರುಗಳ ಜಂಗಮರ, ಮಠಾಧೀಶರ, ಪೂಜ್ಯರ, ಹಿರಿಯರ ಮಾತುಗಳನ್ನು ಶಿರಬಾಗಿಸಿ ಕೊಂಡು ಪಾಲಿಸಲಿ ಎಂಬುದೇ ಅಡವಿತಾತನ ಪಾತ್ರದ ಮಹತ್ವ ಎತ್ತಿ ತೋರುತ್ತಿದೆ.

ವಿಶ್ವಾರಾಧ್ಯರು ಅನೇಕ ಪವಾಡಗಳನ್ನು ಗೈಯ್ದರು, ಮಕ್ಕಳಿಲ್ಲದವರಿಗೆ ಸಂತಾನಭಾಗ್ಯ ವೇಶ್ಯೆಯ ಮಗಳನ್ನು ಬದುಕಿಸಿ ಅವಳಿಗೆ ಉತ್ತಮ ಗುಣ-ನಡತೆ ಕಲಿಸಿ ಅವಳ ಬಾಳು ಬೆಳಗುವಂತೆ ಮಾಡಬೇಕೆಂದು ಕೇಳಿಕೊಂಡದ್ದು, ಅಲ್ಲದೆ ನೂರಾರು ಪವಾಡಗಳನ್ನು ಮಾಡಿ ತೋರಿಸಿ ಭಕ್ತರ ಕಷ್ಟ ಪರಿಹರಿಸಿದ್ದು ನಾಟಕದ ಮುಖ್ಯ ಅಂಶಗಳಾಗಿವೆ. ಮಾನವ ಬಹಳಷ್ಟು ಮುಂದುವರಿದಿರುವ ಇಂದಿನ ಯಂತ್ರ ಯುಗದಲ್ಲಿ ಇಂತಹ ಚಿತ್ರ- ವಿಚಿತ್ರ ಪವಾಡಗಳನ್ನು ಕಂಡು ಅವುಗಳು ನಿಜವೆ ಎಂದು ಸಂಶಯದಿಂದ ವಿಚಾರಿಸಿದರೆ ಉತ್ತರಿಸುವದು ಕಷ್ಟಕರ ಆದರೂ ಭಕ್ತಿಯ ನಾಟಕ ಇದಾಗಿದ್ದರಿಂದ ಅಲ್ಲದೆ ಶ್ರೀ ಸದ್ಗುರು ವಿಶ್ವಾರಾಧ್ಯರು ಎಲ್ಲವನ್ನು ತೊರೆದವರಾಗಿದ್ದರಿಂದ, ಅಲ್ಲದೆ ಅವರೊಬ್ಬ ಪವಾಡ ಪುರುಷರು ಎಂದು ಭಕ್ತರು ಮನದಾಳದಿಂದ ನಂಬಿಕೆ ಇರಿಸಿದ್ದರಿಂದ ಪವಾಡಗಳು ಸುಳ್ಳು ಎಂದು ಹೇಳುವಂತಿಲ್ಲ, ಇಲ್ಲಿ ಅವರವರ ಭಕ್ತಿ, ನಂಬಿಕೆ, ವಿಶ್ವಾಸ, ಆಚರಣೆಗಳು ಮಹತ್ವ ಪಡೆಯುತ್ತವೆ.

" ಭಗವಂತನ ಶಿಷ್ಟರಕ್ಷೆ-ದುಷ್ಟ ಶಿಕ್ಷೆ ಎಂಬ ಸೂತ್ರವನ್ನು ಮನವರಿಕೆ ಮಾಡಿಕೊಡುವುದು ಭಗವಂತನ ಲೀಲಾ ವಿನೋದವನ್ನು ಪ್ರಕಟಿಸುವುದು ನಾಟಕಕಾರನ ಉದ್ದೇಶ "[೫೫] ಶಿಷ್ಯನು ಉದ್ಧಾರವಾಗುವುದಕ್ಕೆ ದೈವ ಬೆಂಬಲ, ಅದರ ಈಡೇರಿಕೆಗಾಗಿ ಪವಾಡಗಳ ಬೆಂಬಲ ಈ ಮೂಲಕ ವಿಶಿಷ್ಟ ಚೌಕಟ್ಟಿನಲ್ಲಿ ಭಕ್ತಿ ನಾಟಕಗಳ ರಚನೆ ನಡೆಯಿತು.

ಶ್ರೀ ವಿಶ್ವಾರಾಧ್ಯರು ತಮ್ಮ ಸತಿ ಬಸಮ್ಮಳನ್ನು ಬಸವಾಂಬೆ, ಜೋಗುರಿ ಎಂದು ಪ್ರೀತಿಯಿಂದ ಕರೆಯುತ್ತಿದ್ದರು. ಸಕಲಸಿದ್ದಿಗಳನ್ನು ಪಡೆದು ಜೀವನದಿಂದ ಮುಕ್ತನಾಗುತ್ತಿದ್ದರೂ ಪತ್ನಿಯ ಮೇಲಿನ ಪ್ರೀತಿಗೆ ಕೊನೆ ಇರಲಿಲ್ಲ. ಅವಳೇ ಸರ್ವಶ್ವ ಎಂದು ಹೇಳುವಲ್ಲಿ ಹಿಂಜರಿಯಲಿಲ್ಲ:

"ವಿಶ್ವಾರಾಧ್ಯ- ಜೋಗುರಿ। ನಿನ್ನಂಥ ಸತಿ ಸಾಧ್ವಿಯನ್ನು ಪಡೆದ ನಾನೇ ಧನ್ಯನಾದೆ, ಹರಿಶ್ಚಂದ್ರನ ಸತ್ಯತೆಯನ್ನು ಹೊರ ಬರಬೇಕಾದರೆ ಆತನ ಸತಿ 'ತಾರಾಮತಿ'ಯಿಂದ ; ಶಿರಿಯಾಳನ ಶಿವಭಕ್ತಿ ಹೊರ ಬಂದಿದ್ದು ಆತನ ಸತಿ ಚಾಂಗುಳೆಯಿಂದ, ನಾಕಟ್ಟಿ ಆಳುವ ಅಣಿಮಾದಿ ಅಷ್ಟ ಸಿದ್ಧಿಗಳನ್ನು ಜಯಿಸಿರುವುದು ನಿನ್ನಿಂದ, ಜೋಗುರಿ ನಿನ್ನಿಂದ, ಯನ್ನ ಚಿತ್ತ ಸುಚಿತ್ತವಾಯಿತು. ಬುದ್ಧಿ ಸುಬುದ್ದಿಯಾಯಿತು. ಜ್ಞಾನ ಸುಮನವಾಯಿತು ಜೋಗುರಿ ಅದೀಪ್ರಸಾದ, ಅನಾದಿ ಪ್ರಸಾದ, ವೇದಕ್ಕೆ ನಿಲುಕದ ಅಭೇದ್ಯ ಪ್ರಸಾದ ಅಖಂಡೇಶ್ವರನ ಅವಿರಳ ಪ್ರಸಾದ ಎನಗೆ ಸಾಧ್ಯವಾಯಿತು"[೫೬] ನಾಟಕದ ಉದ್ದೇಶ, ಮಹಿಳೆಯರ ಸ್ಥಾನ ಎಷ್ಟರ ಮಟ್ಟಿಗೆ ಎತ್ತರಕ್ಕೇರುತ್ತದೆಂದು ಇಲ್ಲಿ ಸ್ಪಷ್ಟ ಪಡೆದಿದೆ. ಆಕಸ್ಮಿಕ, ಅದ್ಭುತಗಳಿಂದ ಕೂಡಿದ ಭಕ್ತಿನಾಟಕಗಳು, ಪೌರಾಣಿಕ ನಾಟಕಗಳು ಇಂದಿನವರಿಗೆ ಅವಾಸ್ತವಿಕವೆಂದು ತೋರಿದರೂ ಹಿಂದೆ ಅವು ಜನಪ್ರಿಯವಾಗಿದ್ದವು. "ವೃತ್ತಿ ರಂಗಭೂಮಿ ಭಕ್ತಿ ನಾಟಕಗಳ ರಚನೆ ಆಕಸ್ಮಿಕಗಳು ಮತ್ತು ರಮ್ಯಾದ್ಭುತ ಪವಾಡಗಳ ಮೇಲೆ ನಿಂತಿರುತ್ತದೆ"[೫೭] ಎನ್ನುವ ಸತ್ಯ. ಜನಪ್ರಿಯವಾಗಿದ್ದ ಕಥಾವಸ್ತುವನ್ನಾಧರಿಸಿ ಕೊಂಡು ಅಭಿನಯಿಸುವ ಪ್ರಯತ್ನ ಯಶಸ್ವಿಯಾಗಿ ನಡೆಯುತ್ತದೆ.

ವಿಶ್ವಾರಾಧ್ಯರು ಆರೂಢರಾದರು, ಅವಧೂತರಾದರು, ಅವಮುಕ್ತನಾದರು, ಅಂಬರದ ತುಂಬೆಲ್ಲ ದಿಗಂಬರರಾದರು, ಅಹಂಕಾರವನ್ನು ಸುಟ್ಟು ಅಹಂಬ್ರಹ್ಮಾಸ್ಮಿಯಾದರು, ಓಂಕಾರನಾದ, ಶಂಕರನಾದ, ಭಯಂಕರನಾದ, ಕಿಂಕರನಾದ ಎಲ್ಲವೂ ತಾನಾದ ತನ್ನ ಸತಿ ಬಸಮ್ಮಳನ್ನು ಕರೆದು, ಎಲ್ಲಾ ಸಂಭ್ರಮಗಳನ್ನು ನೋಡಿದ್ದು ಆಯಿತಾ? ಕಣ್ಮನ ತಣಿಯಿತೆ? ಎಂದವರೆ, ಬಸಮ್ಮಳನ್ನು ಕುರಿತು ಹೇಳಿದರು.

ವಿಶ್ವಾರಾಧ್ಯ :- "ಜೋಗುರಿ, ನೀನು ಶಾಖಾಪೂರಕ್ಕೆ ಹೋಗಬೇಕು ನಿನಗಿಲ್ಲಿ ಸ್ಥಾನವಿಲ್ಲ " ನನ್ನೀ ಶಕ್ತಿಗೆ ಸಾಧನವಾಗಿ ನಿಂತ ಶಾಖಾಪುರವೇ ನಿನ್ನ ಮುಕ್ತಿ ಮಂದಿರ, ಪತಿಯ ಆಜ್ಞೆ ಪರಿಪಾಲನೆ ಮಾಡುವುದೇ ಸತಿಯಾದವಳ ಆದ್ಯ ಕರ್ತವ್ಯತಾನೆ?"[೫೮] ಪತಿಯಾಜ್ಞೆ ಶಿರಸಾವಹಿಸಲು ಬಸಮ್ಮ ಶಾಖಾಪುರಕ್ಕೆ ತೆರಳುವುದರೊಂದಿಗೆ " ಪತಿಯ ಸದುದ್ದೇಶ ಮೀರಿ ನಡೆವ ಆ ಸತಿ ಹೆಮ್ಮಾರಿಯಾಗುವಳು" ಎಂದು ತಾನೆ ಈ ಹಿಂದೆ ಪತಿ ಎದುರಿಗೆ ಆಡಿದ ಮಾತನ್ನು ನಡೆಸಿಕೊಟ್ಟು ನಾರಿ ಕುಲಕ್ಕೆ ಕೀರ್ತಿತಂದಳು.

**ಪತಿಯ ಆದೇಶವ ಹೊತ್ತು ನಡೆದಳು ಸತಿ**
**ವಿಶ್ವ ಬೆಳಗುವ ವಿಶ್ವಜ್ಯೋತಿ**
**ಸ್ತ್ರೀ ಸಂಕುಳಕೆ ತಂದಳು ಕೀರ್ತಿ**
**ಮಹಾತಾಯಿ ಗರತಿ ಭಗಿರಥಿ...**

ಬಸಮ್ಮ ತಾಯಿ ಪತಿ ವಿಶ್ವಾರಾಧ್ಯರ ಆಧ್ಯಾತ್ಮಿಕ ಪ್ರಗತಿಗೆ ಶ್ರೀ ಗಂಧದಂತೆ ತೇಯ್ದುಕೊಂಡರು. ಅವರ ಬದುಕಿಗೊಂದು ವಿಶಿಷ್ಟ ಶಕ್ತಿಯಾದರು. ಆ ಶಕ್ತಿ ಅದು ಇಂದಿನ, ಮುಂದಿನ ಮಹಿಳೆಯರಿಗೆ ದಾರಿದೀಪ. ಪೂಜ್ಯ ಜಗಜ್ಯೋತಿ ವಿಶ್ವಾರಾಧ್ಯರನ್ನು ಆ ಜೋಗುರಿ ತಾಯಿ ರಕ್ಷಿಸಿಕೊಂಡು ಬಂದಿದ್ದಾಳೆ ಎಂಬುದಕ್ಕೆ ಇಂದಿಗೂ ಶಾಖಾಪೂರದಲ್ಲಿ ನಡೆಯುವ ತಾಯಿ ಬಸಮ್ಮ ನವರ ಜಾತ್ರೆಯೇ ನಿದರ್ಶನವಾಗಿದೆ. ಅವರು ಲೋಕಕ್ಕೆ ಆದರ್ಶ ತಾಯಿಯಾಗಿದ್ದಾರೆ.

ವೈರಾಗ್ಯ ಚಕ್ರವರ್ತಿ, ತ್ರಿಕಾಲಜ್ಞಾನಿ, ಮೃತ್ಯುಂಜಯನ ಪುಣ್ಯಶರೀರ ಶಾಲಿವಾಹನ ಶಕೆ ೧೮೭೬ ಜಯನಾಮ ಸಂವತ್ಸರ ಪಾಲ್ಗುಣ ಶುದ್ಧ ಪಂಚಮಿಯ ಶುಭದಿನದಂದು ಶಿವನ ಪಾದಾರಂವಿದಗಳಲ್ಲಿ ಸೇರಿತು. ವಿಶ್ವ ಜ್ಯೋತಿಯೊಡನೆ ಒಂದಾಯಿತು.

ಅಬ್ಬೆ ತುಮಕೂರು ದಿವ್ಯ ಕ್ಷೇತ್ರ, ಸಂಸ್ಥಾನ ಮಠದ ಹೊಣೆಯನ್ನು ಹೊತ್ತು ಸಾಗಿರುವ ಪರಮಪೂಜ್ಯ ಷ.ಬ್ರ.ಶ್ರೀ ಗಂಗಾಧರ ಶಿವಾಚಾರ್ಯರು ವಿಶ್ವರಾಧ್ಯನ ಅವತಾರಿಗಳು. ಶ್ರೀಗಳ ಕೃಪೆಯಿಂದ ಧಾರ್ಮಿಕ, ಸಾಹಿತ್ಯಿಕ, ಸಾಂಸ್ಕೃತಿಕ ಕಾರ್ಯಗಳು ಜರುಗುತ್ತಲಿವೆ. ಇದೊಂದು ಮುಕ್ತಿ ಕ್ಷೇತ್ರ ಅದಕ್ಕೆ ನನ್ನ ಕೋಟಿ ನಮನ.

ಎಲ್.ಬಿ.ಕೆ.ಆಲ್ದಾಳರು ತಮ್ಮ ಕಲಾನೈಪುಣ್ಯತೆಯಿಂದ 'ಶ್ರೀ ವಿಶ್ವಾರಾಧ್ಯರ ಮಹಾತ್ಮೆ' ನಾಟಕವನ್ನು ರಚಿಸಿ ರಂಗ ಭೂಮಿಯ ಮೇಲೆ ಯಶಸ್ವಿ ಪ್ರಯೋಗಿಸಿದ್ದಾರೆ ಅಡವಿತಾತನ ಪಾತ್ರದಲ್ಲಿ ತಾವೇ ಸ್ವತಃ ನಟಿಸಿ ಪ್ರೇಕ್ಷಕರ ಗಮನ ಸೆಳೆದಿದ್ದಾರೆ. ಈ ನಾಟಕ ಉತ್ತರ ಕರ್ನಾಟಕದಲ್ಲಿ ಮನೆ ಮಾತಾಗಿದೆ. ಬಸವಲಿಂಗಶಾಸ್ತ್ರಿ, ಬನದಯ್ಯಶಾಸ್ತ್ರಿ, ರಾಚೋಟಿಶಿವಾಚಾರ್ಯರು, ರಾಮಚಂದ್ರಪ್ಪ ಕುಲಕರ್ಣಿ ಅವರ ಹಿತನುಡಿ, ಅವರ ಅಭಿನಯ, ಸಮಾಜ ಚಿಂತನ, ಕಳಕಳಿಯನ್ನು ತಮ್ಮ ಪಾತ್ರಗಳ ಮೂಲಕ ಪ್ರೇಕ್ಷಕರ ಮನಸ್ಸಿನಲ್ಲಿ ಉಳಿಯುತ್ತಾರೆ. ನೀಲಾಂಬಿಕೆ, ಬಸಮ್ಮ ನಾಗೂಬಾಯಿ ಪಾತ್ರಗಳು ಮಹಿಳೆಯರಿಗೆ ದಾರಿದೀಪವಾಗಿ, ಆದರ್ಶಸತಿಯಾಗಿ ಬೆಳಗುವರು. ಭಕ್ತಿಯನ್ನೇ ಇವರು ತಂಪು ಬೆಳದಿಂಗಳು ಮಾಡಿರುವರು, ನಾಟಕದಲ್ಲಿನ ಗ್ರಾಮ್ಯಭಾಷೆ ಎಲ್ಲರಿಗೂ ಹಿಡಿಸುತ್ತದೆ.

ನಕ್ಕು ನಗುವ ನಗೇ ಲೇಸು ಎನ್ನುವಂತೆ ಕಂಟೆಪ್ಪ, ಗಂಟೆಪ್ಪ, ಗಂಗಮ್ಮ ಪಾತ್ರಗಳು ರಂಗಭೂಮಿಯ ಮೇಲೆ ಬರುತ್ತಿದ್ದಂತೆಯೇ ಅವರಾಡುವ ಮಾತುಗಳು, ಭಾಷೆ, ಶೈಲಿ, ವೈಯ್ಯಾರ, ನಟನೆ ಎಂಥವರನ್ನು ನಕ್ಕು ನಲಿಯುವಂತೆ ಮಾಡುತ್ತವೆ. ಇದು ಆಲ್ದಾಳ ಅವರು ನಾಟಕಕ್ಕೆ ಜೋಡಿಸಿರುವದು ಅದ್ಭುತ, ಯಾರಿಗೂ ತಿಳಿಯದಂತೆ ಕಲೆಯನ್ನು ಅಚ್ಚುಕಟ್ಟಾಗಿ ಮೇಳೈಸಿದ್ದಾರೆ. ಇಲ್ಲಿ ಬರುವ ಹಾಸ್ಯ ಪಾತ್ರಗಳು ನಾಟಕಕ್ಕೆ ಜೀವ ತುಂಬಿರುವವು. ಅಂತಿಮವಾಗಿ ನಾಟಕ ನೈಜತೆಯನ್ನು ನಿರೂಪಿಸುವಲ್ಲಿ ಜಯಶಾಲಿಯಾಗಿದೆ.

# ಜಗದ್ಗುರು ಶ್ರೀ ಮೌನೇಶ್ವರ ಮಹಾತ್ಮೆ (ಭಕ್ತಿ ಪ್ರಧಾನ ನಾಟಕ)

"ಪಾಂಡವರಿಗೆ ದುರ್ಯೋಧನ ಸೂಜಿಯ ಮೊನೆಯಷ್ಟೂ ಜಾಗ ಬಿಟ್ಟು ಕೊಡುವುದಿಲ್ಲ ಎಂದೇಳಿದಾಗ ಬೇಸರಗೊಂಡ ವಿಧುರ ತೀರ್ಥಯಾತ್ರೆಗೆ ಹೊರಡುತ್ತಾನೆ. ಇದುವೇ ಮುಂದೆ ಮಹಾಭಾರತ ಯುದ್ಧಕ್ಕೆ ಕಾರಣವಾಗುತ್ತದೆ. ಸಮಯವೇ ಸಂಪತ್ತು, ಸಮಯವೇ ಶಕ್ತಿ, ಇಂಥ ಅಮೂಲ್ಯ ಸಮಯವನ್ನು ಧರ್ಮಕ್ಕಾಗಿ ಮೀಸಲಿಡಬೇಕು. ಧರ್ಮ ಎಂದರೆ ಯುಧಿಷ್ಠಿರ ಸರ್ವಗುಣಗಳ ಸಾಕಾರಮೂರ್ತಿ. ಭೀಮಸೇನ ಎಂದರೆ ಮನುಜ ಕೆಟ್ಟಗುಣಗಳ ದಾಸನಾಗದೆ ಒಳ್ಳೆಯ ಗುಣಗಳನ್ನು ವೃದ್ಧಿಸಿಕೊಳ್ಳಲು ಸಮಯವನ್ನು ಮೀಸಲಿಡಬೇಕು. ಶಾಸ್ತ್ರಾಧ್ಯಾಯನ, ವಿನಯ, ಶುದ್ಧ ಚಾರಿತ್ರ್ಯ ಮತ್ತು ಹಿರಿಯರ ಮಾತುಗಳನ್ನು ಆಲಿಸಿ ಪಾಲಿಸುವುದು ಇದರ ಭಾಗಗಳು. ಈ ಮೇಲಿನ ಕಾರ್ಯಗಳಿಗೆ ಸಮಯ ನೀಡದಿದ್ದಲ್ಲಿ ಕೌರವರಂತೆ ಜೀವನದಲ್ಲಿ ಎಲ್ಲವನ್ನೂ ಕಳೆದುಕೊಳಬೇಕಾಗುತ್ತದೆ".[೫೮] ಆತ್ಮಸಾಕ್ಷಾತ್ಕಾರದ ಗುರಿಯನ್ನಿಟ್ಟುಕೊಂಡು ಸಮಾಜದ ಕಲ್ಯಾಣಕ್ಕಾಗಿ ತಮ್ಮ ಬದುಕನ್ನೇ ಮುಡುಪಾಗಿಟ್ಟವರು ಜಗದ್ಗುರು ತಿಂಥಣಿಯ ಮೌನೇಶ್ವರರು. ಯೋಗ ನಿರತರಾಗಿ ಮುಕ್ತಿ ಪಥದ ಚಿಂತನೆ ಮಾಡಿದರು. ಕ್ರಿ.ಶ.೧೫೬೫ರ ಮಧ್ಯದಲ್ಲಿ ಅವರು ಬಾಳಿ ಬೆಳಗಿದರು. ಈಗಿನ ಯಾದಗಿರಿ ಜಿಲ್ಲೆಯ ಸುರುಪುರ ತಾಲೂಕಿನ ಗೋನಾಲದ ವಿಶ್ವಕರ್ಮರ ಮನೆತನದಲ್ಲಿ ಜನಿಸಿಬಂದು ಬಾಲ್ಯದಲ್ಲಿಯೇ ದೇಹಾತ್ಮ ಪರಮಾತ್ಮಗಳ ಸತ್ಯದರ್ಶನ ಮಾಡಿಕೊಂಡವರು, ಮೇಲೆ ತಿಳಿಹೇಳಿರುವ ಸತ್ಯಾತ್ಮ ತೀರ್ಥ ಶ್ರೀಪಾದರು ಉತ್ತರಮಠ ಇವರ ಪವಿತ್ರಮಾರ್ಗವನ್ನು ಹದಿನಾರನೇಯ ಶತಮಾನದಲ್ಲಿ ಶ್ರೀ ಮೌನೇಶ್ವರರು ಪಾಲಿಸಿಕೊಂಡು ಜನರಲ್ಲಿ, ಸಮಾಜದಲ್ಲಿ ಸಚ್ಚಾರಿತ್ರ್ಯವನ್ನು ರೂಪಿಸುವಲ್ಲಿ ಶ್ರಮಿಸಿದ್ದಾರೆ ಎಂಬುದು ಗಮನಾರ್ಹ ಸಂಗತಿ. ಆದ್ದರಿಂದ ಅವರ ಹುಟ್ಟು ಹುಟ್ಟಲ್ಲ. ಅದೊಂದು ಅವತಾರವೆಂದೇ ಹೇಳಬೇಕು.

"ಮೌನೇಶ್ವರರು ಬಸವಾದಿ ಶರಣರ, ಸೂಫಿಸಂತರ, ಅನುಭಾವಗಳ ಹಾಗೂ ವೇದೋಪನಿಷತ್ತುಗಳ ತತ್ವಸತ್ವವನ್ನರಿತವರು. ಮುಂದೆ ಮಾನವ ಕಲ್ಯಾಣಕ್ಕಾಗಿ ತಮ್ಮನ್ನು ತಾವು ತೊಡಗಿಸಿಕೊಂಡರು. ಜನಸಾಮಾನ್ಯರಲ್ಲಿ ಬೇರುಬಿಟ್ಟಿದ್ದ ಅಜ್ಞಾನ, ಮೂಢನಂಬಿಕೆಗಳು, ಅನಿಷ್ಟ ಆಚರಣೆಗಳು ಅಂದಿನ ಸಮಾಜ ವ್ಯವಸ್ಥೆಯನ್ನು ಅಧಃ ಪತನಕ್ಕೆ ತಳ್ಳಿದ್ದವು, ಹಿಂದು, ಮುಸ್ಲಿಂರ ನಡುವೆ ವೈಷ್ಯಮ್ಯತೆ ಮೇರೆ ಮೀರಿತ್ತು".[೫೯]

ಇಂಥ ಸಂದರ್ಭದಲ್ಲಿ ಶ್ರೀ ಮೌನೇಶ್ವರರು ಜ್ಞಾನದ ಬೆಳಕನ್ನು ಹರಡಲು ಸನ್ನದ್ಧರಾಗಿ ನಿಂತರು. ತಿಂಥಣಿಯಲ್ಲಿ ಸಾಂಘಿಕ ಕರ್ಮಾಗಾರಸ್ಥಾಪಿಸಿ ಶಿಷ್ಯಸಮೂಹಕ್ಕೆ ಕಾಯಕಯೋಗದ ದಾನನೀಡಿದರು. ಜೊತೆಗೆ ಆತ್ಮ ಸಾಕ್ಷಾತ್ಕಾರಕ್ಕಾಗಿ ಸರಳ ಮಾರ್ಗ ತೋರಿದರು ಮಾನವನು ಮಹಾಮಾನವನಾಗುವಲ್ಲಿ ತಮ್ಮ ವಚನಗಳ ಮೂಲಕ, ಪವಾಡಗಳ ಮೂಲಕ, ಸೂಕ್ತ ಮಾರ್ಗದರ್ಶನ ನೀಡಿದರು.

ಲೋಕೋದ್ಧಾರಕರು, ಸಮಾಜ ಸುಧಾರಕರೂ, ಮಹಿಮಾಪುರಷರೂ ಆದಂತಹ ಶ್ರೀ ಮೌನೇಶ್ವರರು ದೇವರ ಗೋನಾಲದ ವಿಶ್ವಕರ್ಮ ದಂಪತಿಗಳಾದ ಶೇಷಪ್ಪಯ್ಯ, ಶೇಷಮ್ಮ ಅವರಿಗೆ ಸತ್ಪುತ್ರನಾಗಿ ಅವತರಿಸಿದರು. ಶ್ರೀ ಮೌನೇಶ್ವರರು ಸ್ವಲ್ಪ ವರ್ಷಗಳನ್ನು ಕಳೆದು ಗೋನಾಲ

ಗ್ರಾಮದಲ್ಲಿ ಇರದೇ ದೇಶದ ನಾನಾಕಡೆಗಳಲ್ಲಿ ಸಂಚರಿಸುತ್ತ, ತಮ್ಮ ಮೃದು ಮಾತುಗಳಿಂದ ಜನರಲ್ಲಿ ದೈವಿ ಭಾವನೆಯೊಂದಿಗೆ ಪ್ರಭಾವ ಬೀರುತ್ತ ಸಂಚರಿಸುತ್ತಿದ್ದರು. ಒಂದೇ ಕಡೆ ನೆಲೆನಿಲ್ಲದೇ ಹೋದಲ್ಲೆಲ್ಲಾ ಜನರಿಗೆ ಅಧ್ಯಾತ್ಮಿಕ ಮಾರ್ಗದರ್ಶನ ನೀಡುತ್ತ ಸನ್ಮಾರ್ಗಕ್ಕೆಳೆಸುತ್ತಿದ್ದರು.

ಈ ರೀತಿಯಾಗಿ ಶ್ರೀ ತಿಂಥಣಿ ಮೌನೇಶ್ವರರು ಕಾಶಿ, ತಿರುಪತಿ ಮೊದಲಾದ ಕಡೆಗಳಲ್ಲಿಯೂ ಸಂಚರಿಸಿ, ಜಾತಿ–ಭೇದ, ಕೀಳು, ಮೇಲು, ಭಾವನೆಗಳನ್ನು ತೊಡೆದು ಹಾಕಲು ದೈವಿ ಲೀಲೆಗಳನ್ನು ಪ್ರದರ್ಶಿಸಿ, ತಮ್ಮ ಪ್ರಭಾವನ್ನು ಬೀರಿ ಧರ್ಮದ ಬಗೆಗಿನ ಅಲ್ಲಿಯಜನರ ಅಜ್ಞಾನವನ್ನು ಕಳೆದರು. ಧಾರವಾಡ ಜಿಲ್ಲೆಯ ಲಕ್ಷ್ಮೇಶ್ವರ, ವರವಿ, ಲಿಂಗನಬಂಡಿ, ಕನಕಗಿರಿ ತಾವರಗೇರಿ ಮೊದಲಾದ ಕಡೆ ಜನರನ್ನು ಸಂಪರ್ಕಿಸಿ ತಮ್ಮ ದೈವಿ ಶಕ್ತಿಯ ಮಹಿಮೆಯಿಂದ ಜನರ ಉದ್ದಾರಕ್ಕಾಗಿ ಕೆಲವೆಡೆ ಪವಾಡಗಳನ್ನು ತೋರಿದರು. ಆದ ಕಾರಣ ಇಂದಿಗೂ ಅವರು ಸಂಚರಿಸಿದ ಆ ಸ್ಥಳಗಳು ಮೌನೇಶ್ವರರ ಮಹಿಮೆಯಿಂದಾಗಿ ಪವಾಡಗಳ ಕುರುಹುಗಳನ್ನು ಹೊಂದಿ ಪವಿತ್ರ ಯಾತ್ರಾ ಕ್ಷೇತ್ರಗಳಾಗಿವೆ. ಕೊನೆಯಲ್ಲಿ ಅವರು ಕೃಷ್ಣಾನದಿಯ ದಂಡೆಯ ದೇವದುರ್ಗ ತಾಲೂಕಿನಲ್ಲಿರುವ ವೀರಘಟ್ಟ ಗ್ರಾಮದ ಸಮೀಪದ ಪ್ರಶಾಂತ ಸ್ಥಳದಲ್ಲಿ ನೆಲೆಸಿ ತಪಸ್ಸನ್ನಾಚರಿಸಿದರು. ನಂತರ ನದಿಯ ಆಚೆಯ ದಂಡೆಗೆ ಬರಲು ನಿಶ್ಚಯಿಸಿ ತಮ್ಮಲ್ಲಿರುವ ಕಂಬಳಿಯನ್ನು ನದಿಯ ಪ್ರವಾಹದ ಮೇಲೆ ಹಾಸಿ ಅದರ ಮೇಲೆ ಕುಳಿತು ತಮ್ಮ ಯೋಗಬಲದ ನೆರವಿನಿಂದ ಈಚೆಯ ದಡಕ್ಕೆ ಸಾಗಿ ಬಂದು ಯಾದಗೀರ ಜಿಲ್ಲೆ, ಸುರುಪುರ ತಾಲೂಕಿನ ತಿಂಥಣಿ ಗ್ರಾಮದ ಕೃಷ್ಣಾ ತಟಾಕದ ಬಹು ರಮ್ಯವೂ, ಪ್ರಶಾಂತವೂ ಆದ ಸ್ಥಳದಲ್ಲಿಯ ಈಶ್ವರ ದೇವಾಲಯದ ಪಕ್ಕದ ಒಂದು ಗುಹೆಯನ್ನು ಕಂಡು ಅದನ್ನೇ ವಾಸಯೋಗ್ಯ ಸ್ಥಳ ಮಾಡಿಕೊಂಡರು. ಆಗಾಗ ಹೊರಬಂದು ಕಮ್ಮಾರಿಕೆಯ ಕಾಯಕ ಮಾಡುತ್ತ, ಜನಪದ ಭಾಷೆಯಲ್ಲಿ ಜನರಿಗೆ ಮೃದುವಚನಗಳ ಮೂಲಕ ಸನ್ಮಾರ್ಗ ತೋರಿಸುತ್ತಿದ್ದರು.

"ಒಂದುದಿನ ತಮ್ಮ ಪ್ರೀತಿಯ ಅನುಯಾಯಿಗಳನ್ನು ಕರೆದು ತಮ್ಮ ಮನದ ಸತ್ ಸಂಕಲ್ಪವನ್ನು ತಿಳಿಸಿ, ತಮ್ಮ ಸಿದ್ಧಿಸಾಧನೆಯ ಕುರುಹುಗಳಾದ ಪಂಚಲೋಹದ ಹೂಜಿ, ಉಕ್ಕಿನ ಪರಶು (ಚಪಕೊಡಲಿ), ಪರುಷ ಬಟ್ಟಲು, ಪರುಶಮಣಿ, ಮುಕ್ಕಾಲು ಮಂಚ, ಇನ್ನಿತರ ಸಾಮಾನುಗಳನ್ನು ಬಿಟ್ಟು ಗುಹಾ ಪ್ರವೇಶಿಸಿ ಐಕ್ಯರಾದರು". [೬೦]

"ಶ್ರೀ ಮೌನೇಶ್ವರರು ಜೀವಂತ ಸಮಾಧಿ ಪಡೆದ ಸ್ಥಳವನ್ನು "ಗವಿ ಸೇರಿದ ಸ್ಥಳ" ಎನ್ನುವರು". [೬೧]

ಇಂದಿಗೂ ಮೌನೇಶ್ವರರು ಬಿಟ್ಟು ಹೋದ ವಸ್ತುಗಳು ಕಣ್ಮರೆಯಾಗಿದ್ದು, ಈಗ ಕೇವಲ ಹೂಜಿ, ಚಪಕೊಡಲಿಗಳು ಮಾತ್ರ ಉಳಿದು ಕೊಂಡಿದ್ದು ಇಂದಿಗೂ ಅವಗಳು ಭಕ್ತಿಯಿಂದ ಪೂಜೆಗೊಳ್ಳುತ್ತಲಿವೆ.

"ಶ್ರೀ ಎಲ್.ಬಿ.ಕೆ ಆಲ್ದಾಳರು ಭಕ್ತಿ ಪ್ರಧಾನವಾಗಿರುವ ಜಗದ್ಗುರು ತಿಂಥಣಿ ಶ್ರೀ ಮೌನೇಶ್ವರ ಮಹಾತ್ಮೆ" ನಾಟಕದಲ್ಲಿ ಜಗದ್ಗುರು ಮೌನೇಶ್ವರರ ಅಲೌಕಿಕ ಬದುಕನ್ನು, ಜನಸಾಮಾನ್ಯರು

ಅರಿಯುವಂತೆ ಅವರ ಜನ್ಮದಾರಭ್ಯದಿಂದ ಐಕ್ಯಸ್ಥಳದವರೆಗೆ ನಡೆದ ಅನೇಕ ಪವಾಡಗಳನ್ನು, ಭಾವೈಕ್ಯತೆಯ ಹಾಗೂ ಶ್ರಮ ಜೀವನದ ಸಂದೇಶಗಳನ್ನು ಸೂಕ್ತವಾಗಿ ಅಳವಡಿಸಲಾಗಿದೆ. ನಡುನಡುವೆ ಸಗರ ನಾಡಿನ ಗಂಡು ಮೆಟ್ಟಿನ ಭಾಷೆಯಲ್ಲಿರುವ ಹಾಸ್ಯ ಪ್ರಸಂಗಗಳೂ ಮನರಂಜಿಸುತ್ತವೆ". [೬೧]

ಶ್ರೀ ಮೌನೇಶ್ವರ ಮಹಾತ್ಮೆ ಪ್ರವೇಶ, ದೃಶ್ಯಗಳು ೩೯ ಹೊಂದಿದ್ದು ಇದೊಂದು ಭಕ್ತಿ ಪ್ರಧಾನ ನಾಟಕವಾಗಿದ್ದು, ಮೊದಲನೇ ದೃಶ್ಯ ಕೈಲಾಸ ಪರ್ವತದಲ್ಲಿ ಶಿವನು ಮೌನಾನುಷ್ಠಾನುದೊಳಗೆ ನಿರತ ಗಣಪತಿ, ನಂದಿ, ಷಣ್ಮುಖ, ಒಂದು ಕಡೆಗೆ ಗಣಂಗಳು ಒಂದೆಡೆ ಹಾಗೂ ಪಾರ್ವತಿಯ ಸುಪ್ರಭಾತದೊಂದಿಗೆ ರಂಗಭೂಮಿಯ ಮೇಲೆ ನಾಟಕ ಆರಂಭ –

**ಶಿವ ಸುಪ್ರಭಾತವು ನಿನಗೆ। ಹರಸು ಪ್ರಭಾತವು ನಿನಗೆ।**
**ವರ ಅರುಣ ಮೂಡಣದಿ। ಬರುತಿಹನು ಎದ್ದೇಳು।**
**ನಂದಿ, ಗಣಪತಿ, ಷಣ್ಮುಖರು। ಶಿವಗಣಂಗಳು ಕಾದಿಹರೇಳು।**
**ಕವಿ ಕುಕಿಲಗಳು ಸುಸ್ವರದಿ। ಪಂಚಮ ದಿಂಚರದಿ ಹಾಡುತಿವೆ ಕೇಳು।**
**ಶಂಭೋ ಹರಹರ ಮಹಾದೇವಾ। ಬಿಂಬಾಧರ ಹರಹರ ಮಹಾದೇವ।**
**ಸಾಂಬಸದಾಶಿವ ಹರ ಹರ ಮಹಾದೇವ। ಅಂಬಿಕಾಪತಿ ಹರ ಹರ ಮಹಾದೇವ।**

ನಾಟ್ಯಮಾಡುತ್ತ ಹಾಡುವ ಈ ಹಾಡು ಕೇಳುಗರ, ವೀಕ್ಷಕರ ಮನಮೆಚ್ಚುತ್ತದೆ. ಮೌನ ಮುರಿದ ಶಿವ, ನಿಲ್ಲಿಸು ದೇವಿ, ನೀಗೈವ ನಾಟ್ಯವನು, ಹಾಗಾದರೆ ಏಕೀ ಮೌನ? ಎಂದು ಹೇಳಿದಾಗ, ಮೌನ ಏನೆಲ್ಲವೂ ಮಾಡುತ್ತದೆ ಎಂದು ಶಿವನು ಗುಟ್ಟು, ಗುಟ್ಟಾಗಿ ಉತ್ತರಿಸುವನು. ಪಾರ್ವತಿ ಅರ್ಥಮಾಡಿಕೊಳ್ಳದೇ ಈ ನಿನ್ನ ಬೆಡಗಿನಮಾತು ಬೇಡ, ನೇರವಾಗಿ ಹೇಳು ಅನ್ನುತ್ತಾಳೆ.

"ಶಿವ, ಬ್ರಹ್ಮ, ವಿಷ್ಣು, ರುದ್ರ ಈ ಮೂರು ಶಕ್ತಿಗಳ ಸಂಗಮವೇ ಮೌನ, ಆ ಮೌನವೇ ಮೌನೇಶನಾಗಿ, ಮೋನಪ್ಪಯ್ಯನಾಗಿ, ವಿಶ್ವ ಬಾಂಧವ್ಯದ ಹರಿಕಾರನಾಗಿ ತಿಂಥಣಿಯೋಳ ಕೃಷ್ಣೆಯ ತಟದಲ್ಲಿ ನೆಲೆಸಿ ಭಕ್ತರುದ್ದಾರ ಮಾಡುತ್ತಾನೆ". [೬೩]

ಗೋನಾಲದ ವಿಶ್ವಕರ್ಮ ದಂಪತಿಗಳಾದ ಶೇಷಪ್ಪ–ಶೇಷಮ್ಮರಿಗೆ ಮಕ್ಕಳ ಭಾಗ್ಯ ವಿಲ್ಲದೆ ಹನ್ನೆರಡು ದೇವರಿಗೆ ಹರಕೆ ಹೊತ್ತಳು. ಮೂವತ್ತು ದೇವರಿಗೆ ಮುಡಿಪು ಕಟ್ಟಿಟ್ಟಳು. ಆದರೂ ದೇವರು ಕಣ್ಣುತೆರೆಯಲಿಲ್ಲ, ಅದಕ್ಕೆ ಬದಲಾಗಿ ಶೇಷಮ್ಮನ ಅತ್ತೆ ಕಾಳಮ್ಮನ ಕಿಟಿಕಿಟಿ ಜೊತೆ ಸಲ್ಲದ ಅಪವಾದ ಬೇರೆ ಶೇಷಮ್ಮ ನನ್ನು ಅತಿಯಾಗಿ ಕಾಡುತ್ತಿತ್ತು, ತಾಯಿಯ ಚಾಡಿಮಾತನ್ನು ಕೇಳಿದ ಶೇಷಪ್ಪ ಹೆಂಡತಿ ಶೇಷಮ್ಮ ದಿನಾಲು ಬೆಳಗು ಮುಂಜಾನೆ ಯಾರಿಗೂ ಕಾಣದಂತೆ ಎಲ್ಲಿಗೆ ಹೋಗುತ್ತಾಳೆ ಎಂಬ ಸಂಶಯದ ಭೂತ ಕಾಡುತ್ತಿತ್ತು, ಅದನ್ನು ತಿಳಿದುಕೊಳ್ಳಲು ಒಂದು ದಿನ ಹೆಂಡತಿ ದೇವಸ್ಥಾನಕ್ಕೆ ಹೋಗುತ್ತಿರುವುದನ್ನು ಕಂಡು ಬೆನ್ನುಹತ್ತಿದ ಆದರೆ ಆದಿಲಿಂಗೇಶ್ವರ ದೇವಸ್ಥಾನದಲ್ಲಿ ಕಂಡ ದೃಶ್ಯ ಶೇಷಪ್ಪಯ್ಯನಿಗೆ ಪಶ್ಚಾತಾಪವಾಗುತ್ತದೆ. ಮೌನೇಶ್ವರರು ಒಂದೆಡೆ ತಮ್ಮ ವಚನದಲ್ಲಿ ಹೀಗೆ ಹೇಳಿದ್ದಾರೆ.

**"ನಡೆಶುದ್ಧ, ನುಡಿಶುದ್ಧ, ಒಡೆಯನ ಚಾಕರಿ ಶುದ್ಧ।**
**ತೊಡೆಯಲ್ಲಿ ಶುದ್ಧ ಅದರಂಥಾ ಒಡವೆ ಮತ್ತೊಂದುಂಟೆ ಧರೆಯೊಳಗೆ।**
**ಕೇಡು ಬಗೆದವನೆ ಕೀಳು ನಾಯಿ ಕೇಳೊ ಬಸವಣ್ಣಾ॥**

ಈ ವಚನದಲ್ಲಿ ಮನುಷ್ಯನಿಗೆ ಚಾರಿತ್ರ್ಯವು ಒಂದು ಸುಂದರ ಒಡವೆಯಂತೆ ವ್ಯಕ್ತಿತ್ವಕ್ಕೆ ಶೋಭೆಕೊಡುವುದು. ಕರ್ತವ್ಯಪ್ರಜ್ಞೆ, ಸಚ್ಚಾರಿತ್ರ್ಯ, ನುಡಿದಂತೆ ನಡೆಯುವುದು, ನಡೆದಂತೆ ನುಡಿಯುವುದು ಇವುಗಳು ಬೆಲೆಯುಳ್ಳ ಆಭರಣಗಳಂತೆ, ಇದಕ್ಕಿಂತ ಮಿಗಿಲಾಗಿ ಒಡವೆವುಂಟೆ? ಶೇಷಮ್ಮ ಒಂದು ಹೆಣ್ಣು, ಕಾಳಮ್ಮ ಹೆಣ್ಣಾಗಿ ತನ್ನ ಸೊಸೆಯ ಚಾರಿತ್ರ್ಯಕ್ಕೆ ಮಸಿ ಬಳೆಯಲು ಹೊರಟಿದ್ದು ಕಂಡರೆ ಹೆಣ್ಣಿಗೆ ಮತ್ತೊಂದು ಹೆಣ್ಣು ಹೆಮ್ಮಾರಿಯಾಗಿದ್ದಾಳೆ ಎಂದೆನ್ನಿಸುತ್ತದೆ. ಅದಕ್ಕೆ ಮೌನೇಶ್ವರರು ತಮ್ಮ ವಚನದಲ್ಲಿ 'ಕೇಡು ಬಗೆದವನೆ ಕೀಳು ನಾಯಿ ಕೇಳೋ ಬಸವಣ್ಣ ಎಂದಿದ್ದಾನೆ". [೬೪]

ಶೇಷಮ್ಮಳ ಮುಂದೆ ಶಿವನೇ ಪ್ರತ್ಯಕ್ಷನಾಗಿ, ತಾನೆ ಮಗುವಾಗಿ ಶೇಷಮ್ಮಳ ತಾಯ್ತನವ ತುಂಬಿ ಎದೆ ಹಾಲು ಚಿಮ್ಮಿಸಿದ. ಹೆಂಡತಿಯನ್ನು ಸಂಹರಿಸಲು ಬಂದಪತಿ, ಪತ್ನಿ ಹಾಗೂ ಮಗುಸಹಿತ ಮನೆ ಅಂಗಳಕ್ಕೆ ಮಂಗಳ ಹಾಡುತ್ತ ನಡೆದರು.

ಪರಮಾತ್ಮನೆ ಮಗುವಾಗಿ, ಶೇಷಮ್ಮಳು ಅದನ್ನು ಎತ್ತಿಕೊಂಡು ಬಂದಿದ್ದಾಳೆ ಎಂದರೆ ಊರವರು ಸಂಭ್ರಮಿಸುತ್ತಿರುವಾಗ, ಕೆಲವರು ಹೊಟ್ಟೆಕಿಚ್ಚು ಪಡುವವರು ಊರಲ್ಲಿ ಇದ್ದೇ ಇರುತ್ತಾರೆ ನೋಡಿ, ಶಿಲ್ಪಾಚಾರಿ ಎಂಬುವವನ ಮಾತುಕೇಳಿ –

"**ಶಿಲ್ಪಾಚಾರಿ :** ಅಲ್ಲೊಪರಪ್ಪಾ। ಊರಿನವರಿಗಿ ಬುದ್ಧಿ ಇಲ್ಲಂದ್ರು ಊರ ಹಿರ್‍ಯಾ ಅನಿಸಿದ ನಿನಗೂ ಬುದ್ಧಿ ಇಲ್ಲಲ್ಲೊ? ನೀನು ಅವರಂಗ ಕುಣಿಯೋದ? ಕವಲೆತ್ತಿನಂಗ ಗೋಣ ಹಾಕೋದ? ಎಲ್ಲೆರೆ ನೋಡಿಯೇನು ಪರಮಾತ್ಮ ಕೂಸಾಗಿ ಬಂದದ್ದು?

**ಪರಪ್ಪ :** ಯಾಕ ಕೂಸಾಗಿ ತೊಟ್ಲಾದಾಗ ಆಡಿಲ್ರಿ ಸತಿ ಅನಸೂಯಳ ಕಥೆ ಕೇಳಿರಿಲ್ಲ? ಬ್ರಹ್ಮ, ವಿಷ್ಣು, ರುದ್ರ ಕೂಸುಗೋಳಾಗಿ ಆಡಿಲ್ರ್ಯಾ? ಊರಿಗೆ ಊರೆ ಸಂಭ್ರಮಿಸುತ್ತಿದೆ, ನಿಮಗ್ಯಾಕ್ರಿ ಹೊಟ್ಟೆ ಕಿಚ್ಚು?

**ಶಿಲ್ಪಾಚಾರಿ :** ಹೊಟ್ಟೆಕಿಚ್ಚು ಅಲ್ಲೊ ಪರಪ್ಪ। ಇದು ಊರಿಗೆ ಬೆಂಕಿ ಹಚ್ಚೊಕೆಲ್ಸಾ.

ನಾಟಕಕಾರ ಆಲ್ದಾಳ ಅವರು ಪಾತ್ರಗಳನ್ನು ಸೃಷ್ಟಿಸುವುದರಲ್ಲಿ ಅಪಾರ ನಿಪುಣರು ಹಾಗೂ ಅನುಭವಸ್ತರು ಆಗಿರುವರು. 'ಜಗದ್ಗುರು ಶ್ರೀ ಮೌನೇಶ್ವರ ಮಹಾತ್ಮೆ' ನಾಟಕದಲ್ಲಿನ ಶಿಲ್ಪಾಚಾರಿಯ ಪಾತ್ರದಿಂದ ಸಮಾಜದಲ್ಲಿ ಇಂತವರು ಇರುತ್ತಾರೆ. ಅವರಿಂದ ಸಮಾಜಕ್ಕೆ ಎಷ್ಟೊಂದು ಆಘಾತಗಳು ಸಂಭವಿಸುತ್ತವೆ ಎಂಬುದು ಬಹು ಸೂಕ್ಷ್ಮವಾಗಿ ಚಿಂತಿಸಿರುವ ಕೃತಿಕಾರರು,

ಕೊನೆಯಲ್ಲಿ ಶಿಲ್ಪಾಚಾರಿ ಯಾರನ್ನು ದ್ವೇಷಿಸುತ್ತಿದ್ದರೋ ಅವರನ್ನೇ ಪೂಜಿಸುವಂತೆ ಮಾಡುವಲ್ಲಿ ಯಶಶ್ವಿಯಾಗಿದ್ದಾರೆ.

ಮೌನೇಶನ ತಾಯಿ ಶೇಷಮ್ಮಳ ಪಾತ್ರ, ಆಕೆ ಮಕ್ಕಳಾಗಲಿಲ್ಲ ಎಂದು ಮಾಡಿದ ಉಪವಾಸ, ವೃತಗಳು, ನಂತರ ಮಗು ಬೆಳೆದು ದೊಡ್ಡವನಾಗಿ ಚಂದ್ರಶೇಖರ ದೊರೆಯ ಪುತ್ರ ರಾಜಕುಮಾರನ ಜೊತೆ ಆಟವಾಡುವಾಗ ಚೆಂಡಿನ ಬಲವಾದ ಹೊಡೆತಕ್ಕೆ ಮರಣವನ್ನಪ್ಪುತ್ತಾನೆ. ಸುರಪೂರ ಗೋಸುಲ ವಂಶದ ದೀಪನಂದೀತೆ? ಎಂದು ಹಲಬುತ್ತಿರುವ ದೊರೆಗಳ ದುಃಖ ಒಂದೆಡೆಯಾದರೆ ಮಗ ಮೌನೇಶ ಮನೆಗೆ ಬಾರದ್ದನ್ನು ಕಂಡು ಶೇಷಮ್ಮಳ ಕರುಳು ಕಿವುಚಿ ಕೊಂಡಂತಾಗುತ್ತದೆ.

ನಾಟಕಗಳಲ್ಲಿ ಬರುವ ಪವಾಡಗಳು ರಂಗಭೂಮಿಯ ಮೇಲೆ ವೀಕ್ಷಿಸುವ ಪ್ರೇಕ್ಷಕರಿಗೆ, ಮನರಂಜನೆ, ಆಶ್ಚರ್ಯ, ಭಯ, ಭಕ್ತಿ, ಕರುಣೆ ಇತ್ಯಾದಿಗಳೆಲ್ಲವೂ ಮೇಳೈಸುತ್ತವೆ. ಪವಾಡ ನಂಬುವುದು, ಬಿಡುವುದು ಅವರವರ ಮನಸ್ಸಿಗೆ ತೋರಿದ್ದು ಅದನ್ನು ನಂಬುವವರೂ ಇದ್ದಾರೆ. ಪವಾಡ ನೋಡಿ ನಕ್ಕುಬಿಡುವವರೂ ಇದ್ದಾರೆ. ಆದರೆ ಒಂದಂತು ನಿಜ. ಪೌರಾಣಿಕ, ಧಾರ್ಮಿಕ, ಭಕ್ತಿಯು ತುಂಬಿದ ನಾಟಕಗಳಲ್ಲಿ ಪವಾಡಗಳು ವಿಜೃಂಭಿಸುತ್ತವೆ. ಪ್ರೇಕ್ಷಕರು ಹೆಚ್ಚಿನವರು ಅದನ್ನು ನಂಬುತ್ತಾರೆ. ಭಕ್ತಿಪೂರ್ವಕ ಮನಸಾರೆ ಸ್ವಾಗತಿಸುತ್ತಾರೆ ಆನಂದ ಪಡುತ್ತಾರೆ. ಅಯ್ಯೋ ಪಾಪವೆಂದು ಕರುಣೆ ತೋರುತ್ತಾರೆ. ಅಂಥಹ ಒಂದು ಪವಾಡ ಈ ನಾಟಕದ ಪ್ರವೇಶ– ೧೪, ದೃಶ್ಯ–ಸ್ಮಶಾನದಲ್ಲಿ ಕಾಣುತ್ತೇವೆ.

**ಮೌನೇಶ** : (ನಕ್ಕು) ಏಳು ರಾಜಕುಮಾರ ನನ್ನ ಮೇಲೆ ಕೋಪೋದ್ರಿಕ್ತನಾಗಿರುವ ನಿನ್ನ ತಂದೆಗೆ, ನಿನ್ನ ಮಂತ್ರಿಗೆ ನಿಜಾಂಶವನ್ನರುಹು" (ಚಿತೆಯಿಂದ ರಾಜಕುಮಾರ ಎದ್ದೇಳುತ್ತಾನೆ).

ಶವವಾಗಿದ್ದ ರಾಜಕುಮಾರ, ಉರಿವ ಬೆಂಕಿಯಿಂದ ಜೀವಂತವಾಗಿ ಎದ್ದುಬರುವ ಸನ್ನೀವೇಶ ಓದುಗರು, ನಾಟಕ ವೀಕ್ಷಕರಿಗೂ ಒಂದುಕ್ಷಣ ಆಶ್ಚರ್ಯವೆನ್ನಿಸಿದರೂ ಸತ್ತವರು ಜೀವಂತವಾಗಿಸುವ ಪವಾಡವನ್ನು ಬೇಗನೆ ಮರೆಯುವುದಂತೂ ಸಾಧ್ಯವಿಲ್ಲ, ಭಕ್ತಿ ನಾಟಕಗಳು ಹೆಚ್ಚಾಗಿ ಪವಾಡಗಳನ್ನೇ ಅವಲಂಬಿಸಿರುತ್ತವೆ. ಪ್ರೇಕ್ಷಕರೂ ಸ್ವಾಗತಿಸುತ್ತಾರೆ.

ಕನ್ನಡ ಸಾಹಿತ್ಯ ಪರಿಷತ್ತಿನ ಕಲಬುರ್ಗಿಯ ಜಿಲ್ಲಾಧ್ಯಕ್ಷ ಶ್ರೀ ಮಹಿಪಾಲರೆಡ್ಡಿ ಮುನ್ನೂರು ಅವರು 'ಆಟ'ದ ಮಾಸ್ಟರ್ ಆಲ್ದಾಳರ ಕೃತಿ ಬಗ್ಗೆ ಬರೆಯುತ್ತಾರೆ. "ನೀವೂ ಈಗಲೂ ನಾಟಕ "ನಾಟಕರಂಗ"ದಲ್ಲಿ ಮಗ್ನರಾಗಿ ನಾಟಕ ಬರೆದು.... ಈ ನಮ್ಮ 'ನಾಟಕಸಂತೆ'ಯನ್ನು ಸಂಭ್ರಮ ಗೊಳಿಸಿದ್ದೀರಿ. ಇದೋ ನಿಮ್ಮ ಕ್ರಿಯಾ ಶೀಲತೆಗೊಂದು ಚಂದನೆಯ ನಮಸ್ಕಾರ. ನಿಮ್ಮ 'ನಾಟಕ' ರಚನೆಯೆಂದರೆ, ಅದು ಬರಿಯ ಭಾವಗೀತೆ ಅಲ್ಲ, ಅದು ಬರಿಯ ಕಲ್ಪನಾ ಲೋಕವೂ ಅಲ್ಲ, ಅದು ಬರಿಯ ಅಕ್ಷರಗಳ ಸಾಲುಗಳಲ್ಲ ಮತ್ತು ಅದು ಬರಿಯ ಡೈಲಾಗ್‌ಗಳ ಓಘವೂ ಅಲ್ಲ, ಈ ನಾಡಿನ ಶರಣರ ಬದುಕಿನ ಸಂಗತಿಗಳಿಗೆ ನಾಟಕ ರೂಪದಲ್ಲೇ ನಿಮ್ಮ ಮೌನ ಸಾಧನೆಯನ್ನು ಸಾಧಿಸುತ್ತಿದ್ದೀರಿ. ಪವಾಡಗಳನ್ನು ಇಂದಿನ ವೈಚಾರಿಕ ಹಾಗೂ ವಾಸ್ತವ ನೆಲೆಯಲ್ಲಿ ಅದರಿಂದಾಚೆಗೆ

ನಿಂತು ಸಮಾಧಾನದಿಂದ ಅಭಿವ್ಯಕ್ತಿಸುವ ನಿಮ್ಮ ಬರಹದ ಸೂಕ್ಷ್ಮತೆ ನಮ್ಮಂಥರಿಗೆ ಅಚ್ಚರಿ ಹುಟ್ಟಿಸುತ್ತದೆ. ಸುಮಾರು ಇಪ್ಪತ್ತೈದು ವರ್ಷದಿಂದಲೂ ನಿಮ್ಮ ನಾಟಕಗಳನ್ನು ಬರಹಗಳನ್ನು ಓದುತ್ತಾ ಓದಂತೆ ನಮಗರಿವಿಲ್ಲದೇ ನೀವು ನನ್ನನ್ನು ಪ್ರಭಾವಿಸಿ ಕೊಂಡಿದ್ದಕ್ಕೆ ನಿಮಗೆ ಧನ್ಯವಾದ ಹೇಳದಿದ್ದರೆ....? ಸಂತ ಮಹಾಂತರ ಬದುಕನ್ನು ವಿಸ್ತಾರವಾದ ನೆಲೆಗಳಲ್ಲಿ ಹಿಡಿದಿಡುತ್ತಾ.... ಫಾಸ್ಟ್‌ಫುಡ್‌ನಂತೆ ಕರಗುವ ನಮ್ಮ ಹಿಂದಿನ ಬದುಕಿಗೆ ಚಿಕಿತ್ಸಕ ರೀತಿಯ ನಿಮ್ಮ ನಾಟಕದ ತುಡಿತ ನಿಜಕ್ಕೂ ಮಾದರಿ. "ತಿಂಥಣಿ ಮೌನೇಶ್ವರ ಮುಂದಿನ ಎಲ್ಲಾ ಯಶಸ್ಸನ್ನು ನಿಮ್ಮದಾಗಿಸಲಿ ಎಂದು...." [೬೫]

ಪ್ರವೇಶ–೧೬–ದೃಶ್ಯ–ಶ್ರೀರಾಚೋಟೇಶ್ವರ ಮಂದಿರದಲ್ಲಿ, ಪರಪಜ್ಞಾ ಲಕ್ಷ ಜಂಗಮರ ಪೂಜೆ ವೇಳೆಗೆ ಬರಲಿಲ್ಲವಲ್ಲ ಮೌನೇಶನೆಂದು ಚಿಂತಿಸುತ್ತಿದ್ದಾಗ ಇಲ್ಲಿಗೆ ಬಂದು ಮಾಯವಾಗಿ ಹೋದೆ, ಯಾರ ಕೈಯಲ್ಲಿರುವ ಲಿಂಗಗಳನ್ನು ನಾನು ಕಿತ್ತಿಕೊಂಡಿಲ್ಲ ಅವುಗಳು ಅವರವರ ಬಳಿಯೇ ಇವೆ ಎಂದು ಪವಾಡ ಮೆರೆದರು.

ಒಮ್ಮೆ ಮೌನೇಶರು ಬ್ರಾಹ್ಮಣವೇಷಧಾರಿಯಾಗಿ ಕಾಶಿಲಕ್ಷ್ಮಿನಾರಾಯಣ ಮಂದಿರದಲ್ಲಿ ಬ್ರಾಹ್ಮಣೋತ್ತಮರಿಗೆ ಮೃಷ್ಟಾನ್ನ ಸಂತರ್ಪಣೆ ಏರ್ಪಾಟು ಮಾಡಿದ್ದು ಅರಿತು ಅಲ್ಲಿಗೆ ತೆರೆಳಿದಾಗ, ಅಲ್ಲಿ ಬ್ರಾಹ್ಮಣ ಪಂಡಿತರೊಬ್ಬರು, ಮೌನೇಶನನ್ನು ಕಂಡು ನೀನು ಬ್ರಾಹ್ಮಣನೇ ಅಲ್ಲ, ಬ್ರಾಹ್ಮಣ ವೇಶದಲ್ಲಿ ಬಂದ ಕೀಳು ಕುಲಜದವನಿರಬಹುದು ಎಂದು ಹಿಯಾಳಿಸುವನು, ಆದರೆ ಭೋಜನ ವ್ಯವಸ್ಥೆ ಮಾಡಿದ ಗುಪ್ತಾದೀಕ್ಷಿತರು ಪಂಡಿತ ಬ್ರಾಹ್ಮಣನಿಗೆ ಬುದ್ಧಿವಾದ ಹೇಳಿ ಪಂಕ್ತಿಯಲ್ಲಿ ಕುಳಿತವರನ್ನು ಎಬ್ಬಿಸಿ ಕಳಿಸಬಾರದು ಎನ್ನತ್ತಾರೆ. ಅವರ ಮಾತುಗಳು ಎಷ್ಟೊಂದು ಅರ್ಥಗರ್ಭಿತವಾಗಿವೆ ನೋಡಿ.

"**ಗುಪ್ತಾದೀಕ್ಷಿತ :** ಕಾಗೆ ಒಂದು ಅಗಳು ಕಂಡರೆ, ತನ್ನೆಲ್ಲಾ ಬಳಗಕ್ಕೆ ಹೇಗೆ ಕರೆದು ಕೊಳ್ಳುವುದೊ, ಅದಕ್ಕಿಂತಲೂ ಕರಕಷ್ಟವಾಯಿತೆ ಮಾನವನ ವಿಚಾರ, ಉಚ್ಚಧರ್ಮಾವಲಂಬಿಗಳಾದ ನಿಮ್ಮಲ್ಲಿ ಉಚ್ಚ ವಿಚಾರವಿರಬೇಕೆ ಹೊರತು ತುಚ್ಚ ಭಾವನೆಗಳು ಇರಕೂಡದು 'ಯಸ್ಯನಾಸ್ತಿ ಸ್ವಯಂ ಪ್ರಜ್ಞೆಶಾಸ್ತ್ರಂತಸ್ಯಕರೋತಿ ಕಿಂಲೋಚನಾಭ್ಯ ವಿಹೀನಸ್ಯ ದರ್ಪಣ ಕಿಂಕರಿಸ್ಯತೀ' (ಯಾರಲ್ಲಿ ಸ್ವಯಂ ಪ್ರಜ್ಞೆ, ಆತ್ಮಾನು ಸಂಧಾನ ವಿವೇಕ ವಿಲ್ಲವೋ ಅಂಥವರು ಎಷ್ಟು ಶಾಸ್ತ್ರ ಓದಿದರೇನು ಫಲ? ಕಣ್ಣಿಲ್ಲದವನ ಕೈಯಲ್ಲಿ ಕನ್ನಡಿ ಕೊಟ್ಟಂತಾಗುತ್ತದೆ." [೬೬]

"**ಮೌನೇಶ :** ಕೊಡೇಕಲ್ಲ ಬಸವಣ್ಣ ಅಂದು ನಾನು ಅಲ್ಲಮಪ್ರಭುವಾಗಿ ಶೂನ್ಯ ಸಿಂಹಾಸನ ಅಧೀಶನಾಗಿದ್ದೆ. ಮಾಯಾ ಕೋಲಾಹಲದಿ ಗೆದ್ದು ನಾನೂ ಅನಂತ ವಚನಗಳನ್ನು ಬರೆದಿದ್ದೆ ನಾವಿಬ್ಬರೂ ಈ ನಾಡ ಪ್ರಣತಿಯಲ್ಲಿ ಜೋಡುಬತ್ತಿಗಳಾಗಿ, ಸರ್ವಧರ್ಮದ ತೈಲವನೆರೆದು ಭಾವೈಕ್ಯತೆಯ ಜ್ಯೋತಿ ಬೆಳಗಿಸಲು ಆದಿವ್ಯ ಭವ್ಯ ಬೆಳಗಿನಲ್ಲಿ ಅನಂತ ಭಕ್ತರನ್ನು ಕಂಡಿದ್ದೇವೆ ಕಾಣತಾ ಇದ್ದೇವೆ."

"**ಬಸವಣ್ಣ :** ಮೌನೇಶ ಪ್ರಭುವೇ ನಿಮ್ಮ ಒಂದೊಂದು ವಚನಗಳು ಪಚನವಾಗುವುದೇ ಇಲ್ಲ, ನೋಡಲು ಹಗುರಾಗಿ ಕಂಡರೂ ಒಳ ಅರ್ಥಮಾತ್ರ ಬಿಗುವಾಗಿದೆ. ಬಲ್ಲವರಿಗೆ ಅದು ಬೆಲ್ಲವೂ ಆಗಿದೆ. ತೋರುಲಿಂಗವ ಕಟ್ಟುವ ಪೋರಜಂಗಮ ನಾನಲ್ಲ. ಈ ಕೀಳು ಭುವನದ ಒಡೆಯ ಅಲ್ಲಮನೆಂಬ ನೀರಲಿಂಗವ ಧರಿಸಿದಾತನಕೂಡ ಊರ ಮಾತೇನು? ಎಂದು ಹೇಳಿದ ಪರಿಯನು ಬಿಡಿಸಿ-ಬಿಡಿಸಿ ನೋಡಿದಾಗ ಅಲ್ಲಿ ಅಂಗ ಲಿಂಗದ ಸಂಗ ಸುಖ ಅನುಭವಿಸಿದ ಅವಿರಳ ಆತ್ಮಜ್ಞಾನವಾಹಿನಿ ಓತ ಪ್ರೋತವಾಗಿ ಹರಿದಿದೆ". [೧೦೮]

ಮೌನೇಶ ಮತ್ತು ಬಸವಣ್ಣನವರ ಸಂವಾದ ನಾಟಕದ ಪ್ರೇಕ್ಷಕರಿಗೂ, ಓದುಗರಿಗೂ ಇವರೀರ್ವರು ಭಕ್ತಿಯ ಸಾಕಾರಮೂರ್ತಿಗಳೆಂದು ವೇದ್ಯವಾಗುತ್ತದೆ. ಆದಿ ಚುಂಚನಗಿರಿ ಮಠದ ಶ್ರೀ ನಿರ್ಮಲಾನಂದ ಸ್ವಾಮಿಜಿಯವರು ಹೇಳುವಮಾತು ಇಲ್ಲಿ ನೆನಪಿಸಿಕೊಳ್ಳಬಹುದು. "ಭಾರತವು ವಿವಿಧತೆಯಲ್ಲಿ ಏಕತೆಯನ್ನು ಸಾಧಿಸಿರುವ ರಾಷ್ಟ್ರ, ಸಾವಿರಾರು ಜಾತಿ-ಭಾಷೆಗಳಿರುವ ದೇಶದಲ್ಲಿ ಈಗಲೂ ಏಕತೆ ನೆಲೆಸಿದ್ದರೆ ಅದಕ್ಕೆ ಅಧ್ಯಾತ್ಮವೇ ಕಾರಣ. ಆಧ್ಯಾತ್ಮದ ಶಕ್ತಿಯ ಮೂಲಕ ಸಾಧು-ಸಂತರು, ಶರಣರು ಸಮಾಜವನ್ನು ಸರಿದಾರಿಯಲ್ಲಿ ಮುನ್ನಡೆ ಸುತ್ತಿದ್ದಾರೆ. ಭಕ್ತರಿಗೆ ಸದಾಕಾಲ ಮಾರ್ಗದರ್ಶನ ಮಾಡುವ ಮೂಲಕ ತಪ್ಪುಗಳನ್ನು ತಿದ್ದುವ ಕೆಲಸವನ್ನು ಅವರು ಮಾಡುತ್ತಿದ್ದಾರೆ. ಆ ಕಾರಣದಿಂದಾಗಿಯೇ ಸಮಾಜದಲ್ಲಿ ಸುಖ-ಶಾಂತಿ ನೆಲೆಸಿದೆ, ಮಠಾಧೀಶರು, ಸಾಧು-ಸಂತರು ಇಲ್ಲದಿದ್ದರೆ ಸಮಾಜ ಹೇಗಿರುತ್ತಿತ್ತು ಎಂಬುದು ಊಹೆಗೂ ನಿಲುಕದು"

ಸಗರನಾಡಿನ ರಂಗರ್ಷಿ ಎಲ್.ಬಿ.ಕೆ ಆಲ್ದಾಳರು ರಚಿಸಿದ ಸುಕ್ಷೇತ್ರ ತಿಂಥಣಿ ಮೌನೇಶ್ವರರ ಮಹಾತ್ಮೆ ಎಂಬ ಭಕ್ತಿ ಪ್ರಧಾನ ನಾಟಕವು ತುಂಬ ಅಪರೂಪದ್ದೆನ್ನಿಸುತ್ತದೆ. ಸುಂದರವಾಗಿದೆ, ಜನಪದರಿಗೆ ಹತ್ತಿರವಾಗಿದೆ. ನಾಟಕ ಪುರಾಣ ಶೈಲಿಯಲ್ಲಿ ಇದರ ಕಥಾ ತಂತ್ರಸಾಗುತ್ತದೆ. ಈ ನಾಟಕದಲ್ಲಿ ಐತಿಹ್ಯಗಳಿವೆ ಪುರಾಣದ ಸಂಗತಿಗಳಿವೆ. ಮೌನೇಶ್ವರರ ಪವಾಡಗಳ ದರ್ಶನವಿದೆ. ನಾಟಕದುದ್ದಕ್ಕೂ ಮೌನೇಶ್ವರರ ವಚನಗಳ ಸದ್ದರ್ಶನವಿದೆ ವಿಶ್ವಕರ್ಮಣ ಸಾಂಸ್ಕೃತಿಕ ಮೌಲ್ಯಗಳ ಪರಿಚಯವಿದೆ. ಹಿಂದು-ಮುಸ್ಲಿಂರ ಐಕ್ಯತೆಗಾಗಿ ಅವರು ಶ್ರಮಿಸಿದ ಚಿತ್ರಣ ಎಲ್ಲರ ಗಮನ ಸೆಳೆಯುತ್ತದೆ. ಜಾತಿಭಾವನೆಗಳಿಗೆ ಪ್ರತಿಭಟನೆ, ಮಾನವ ಧರ್ಮದ ಪ್ರತಿಷ್ಠಾಪನೆಗೆ ಪಟ್ಟಶ್ರಮ ಇಲ್ಲಿ ಅಂದರೆ ಆಲ್ದಾಳರ ಕೃತಿಯಲ್ಲಿ ಆಗುತ್ತದೆ". [೬೭]

ತಾಯಿಶೇಷಮ್ಮಳ ನಿರ್ಮಲ ಭಕ್ತಿ, ತಂದೆ ಶೇಷಪ್ಪಯ್ಯನ ಕಾಯಕಯೋಗ ಗಗನಾಪೂರದ ಗಂಗಪ್ಪಯ್ಯನ ಅಧ್ಯಾತ್ಮದ ನಿಲುವು ಇವರುಗಳ ಪಾತ್ರಗಳ ನಿರೂಪಣೆ ಅಲ್ಲದೆ ನಾಟಕದಲ್ಲಿ ಭಕ್ತಿರಸದೊಂದಿಗೆ ಹಾಸ್ಯರಸವೂ ಭರಪೂರಾಗಿ ವಿಜೃಂಭಿಸಿದೆ. ಪುರುಷ ಪಾತ್ರಗಳಲ್ಲಿ ಕಾಳಪ್ಪ, ಪಡದಯ್ಯ, ಶಿಲ್ಪಾಚಾರ್ಯ ಅವರುಗಳ ಹಾಸ್ಯಭರಿತ ಮಾತುಗಳು ಮುಖ್ಯವಾಗಿ ಪಡದಯ್ಯನ ತೊದಲು ನುಡಿಗಳು ಪ್ರೇಕ್ಷಕರನ್ನು ನಕ್ಕು-ನಕ್ಕು ಸುಸ್ತಾಗುವಂತೆ ಮಾಡುತ್ತವೆ.

ಜಗತ್ತಿನಲ್ಲಿ ಯಾವುದೇ ಧರ್ಮ ಬೆಳಕಿಗೆ ಬರ ಬೇಕಾದರೆ ಅದಕ್ಕೊಬ್ಬ ಮೂಲ ಪುರುಷ ಇರುವುದು ಸಹಜ. ಅವರನ್ನೇ ತಮ್ಮ ಧರ್ಮಗುರುಗಳೆಂದು ಆಯಾ ಧರ್ಮಿಯರು ಆರಾಧಿಸುತ್ತಾ ಬಂದಿದ್ದಾರೆ. ಉದಾಹರಣೆಗೆ, ಜೈನಧರ್ಮಕ್ಕೆ-ಮಹಾವೀರ, ಭೌದ್ಧ ಧರ್ಮಕ್ಕೆ-

ಗೌತಮಬುದ್ಧ, ಕ್ರೈಸ್ತಧರ್ಮಕ್ಕೆ–ಏಸುಕ್ರಿಸ್ತ, ಇಸ್ಲಾಂಧರ್ಮಕ್ಕೆ–ಮಹ್ಮದಪೈಗಂಬರ, ವೀರಶೈವಧರ್ಮಕ್ಕೆ – ಬಸವಣ್ಣ, ವಿಶ್ವಕರ್ಮ ಧರ್ಮಕ್ಕೆ – ಮೌನೇಶ್ವರ.

ವಿಶ್ವಕರ್ಮಧರ್ಮದಲ್ಲಿ ಸಮಾಜವನ್ನು ಸಂಘಟಿಸಲು, ಸಂಸ್ಕರಿಸಲು ಕೆಲವು ಸೂತ್ರಗಳುಂಟು, ಆ ಸೂತ್ರಗಳಲ್ಲಿ ಕೆಲವು ಎಳೆಗಳುಂಟು ಅವುಗಳು ಸಮತಾಭಾವ–ಕಾಯನಿಷ್ಠೆ–ಲೀಲೆ–ಆಧ್ಯಾತ್ಮ–ಸತ್ಯನಿಷ್ಠೆ, ಶ್ರೀ ಮೌನೇಶ್ವರರು ಅನೇಕ ಪವಾಡಗಳ ಮೂಲಕ ಧರ್ಮ, ದೇವರು, ಸತ್ಯ, ಸದಾಚಾರ ಹೀಗೆ ಅನೇಕ ವಿಷಯಗಳನ್ನು ಸಂಚರಿಸುತ್ತ ಭೋಧಿಸಿದರಲ್ಲದೆ ಅನೇಕ ಪವಾಡಗಳನ್ನು ಮೆರೆದರು ಮೌನೇಶ್ವರರ ವಚನ ಮುದ್ರಿಕೆ 'ಬಸವ' ಎಂದಾಗಿರುವುದರಿಂದ ಅನೇಕರು ಅವರು ಬಸವನ ಸಮಕಾಲೀನವರಾಗಿದ್ದರೆಂದು ಊಹಿಸಿದ್ದುಂಟು. ಆದರೆ ಇವರ ವಚನಗಳ ಅಂಕಿತ– 'ಬಸವಣ್ಣ' ಎಂಬುದು ಕೋಡೆಕಲ್ಲ ಬಸವಣ್ಣನನ್ನು ಕುರಿತದ್ದಾಗಿರಬೇಕೆಂದು ಕಪಟರಾಳ ಕೃಷ್ಣರ ಊಹೆಯಿದೆ. ಆದರೆ ಮೌನೇಶ್ವರರು ಹಾಗೆ ಎಲ್ಲಿಯೂ ಹೇಳದೆ, ಅದಕ್ಕೆ ಪ್ರತಿಯಾಗಿ ಅವರು ಕಲ್ಯಾಣದ ಶರಣರಾದ ಅಲ್ಲಮಪ್ರಭು, ಕೂಗಿನ ಮಾರಯ್ಯ, ಘಟ್ಟಿಮಾಳಯ್ಯ, ಚೆನ್ನಬಸವಯ್ಯ, ಕಕ್ಕಯ್ಯ, ಚೊಕ್ಕಯ್ಯರನ್ನು ಸ್ತುತಿಸಿದ್ದಾರೆ. "ಶಿವಶರಣರ ಕೆರವಿಗಿಂತಲೂ ನಾನು ಕಡಿಮೆಯಯ್ಯ ಬಸವಣ್ಣ" ಎಂದು ವಿನಯವನ್ನಾಡಿದ ಮೌನೇಶ್ವರರು ಈ ದೃಷ್ಟಿಯಿಂದ ತಮ್ಮ ಮೇಲೆ ಎಲ್ಲದರಿಂದ ಪ್ರಭಾವ ಬೀರಿದ ಶರಣ ಶರಣ ಶಿಖಾಮಣಿ ವಿನಯ ಸಂಪನ್ನರಾದ ಬಸವಣ್ಣ ನವರನ್ನೇ ಕುರಿತು ಹಾಡಿದ್ದಾರೆಂದರೆ ಅಸಮಂಜಸವಾಗಲಾರದು". [೬೮]

ಮೌನೇಶ್ವರರು ದೂರದೃಷ್ಟಿಯುಳ್ಳವರಾಗಿ, ಸಾಮಾಜಿಕ ಮೌಢ್ಯಗಳನ್ನು ಹೊಂದಿದ ಜನರಿಗಾಗಿ ಅನೇಕ ತತ್ವಗಳನ್ನೊಳಗೊಂಡ ಸರ್ವಜ್ಞರಂತೆ ನಿರ್ಭಯತೆಯಿಂದ, ತ್ರಿಪದಿಯಲ್ಲಿಯೂ ರಚಿಸಿದ ವಚನಗಳಿಂದ ಇವರು ಎಂಥ ಮಹಾಮಹಿಮರಾಗಿದ್ದರೆಂದು ಗೊತ್ತಾಗುವುದು.

**ತಂದೆಯಾದರೇನು? ತಾಯಿಯಾದರೇನು?**
**ಯಾವನಾದರೆನನಗೇನು? ನನ್ನ ನ್ಯಾಯವಿದ್ದಂತೆ ಉಸುರುವೆನು**
**ಅಕ್ಕನಾದರೇನು? ತಂಗಿಯಾದರೇನು? ಚಿಕ್ಕಮ್ಮನಾದರೆ ಬಸವಣ್ಣ॥**
**ನನಗೇನು? ನಾ ನನ್ನ ಲೆಕ್ಕವಿದ್ದಂತೆ ಉಸುರುವೇನು ಬಸವಣ್ಣ॥**

ಇಲ್ಲಿ ನನ್ನವರೆಂಬ ಮಮಕಾರ ಅಳಿಯುವ ತತ್ವವಿದೆ, ಚೌಡಯ್ಯನ ಗಡುಸು ಧ್ವನಿ, ಅಲ್ಲಮ್ಮನ ಆಧ್ಯಾತ್ಮಜ್ಞಾನದ ಹೊಳಹು ಕಾಣಬಹುದು.

ಮೌನೇಶ್ವರರು ತಮ್ಮ ಜೀವಿತದ ಕಾಲದಲ್ಲಿ ಒಟ್ಟು ಏಳುನೂರಾ ಎಪ್ಪತ್ತು ಸ್ಥಳಗಳ ಸಂಚಾರ ಮಾಡಿ ಎಂಟುನೂರಕ್ಕಿಂತ ಹೆಚ್ಚು ವಚನಗಳನ್ನು ತ್ರಿಪದಿ, ಚೌಪದಿ, ಪಂಚಪದಿಗಳಲ್ಲಿ ರಚಿಸಿದ್ದಾರೆ. ಒಂದು ಬಗೆಯ ವಿನೂತನ ಸಂಸ್ಕೃತಿಯ ಜ್ಯೋತಿಯನ್ನೇ ಹೊತ್ತಿಸಲು ಕಾರಣರಾದರು.

ಮೌನೇಶ್ವರರು "ಹುಟ್ಟಿದ್ದು ಗೋನಾಲ, ಮೆರೆದದ್ದು ಲಿಂಗನಬಂಡಿ, ಕುರುಹು ತೋರಿದ್ದು ವರವಿ, ಸ್ಥಿರವಾಗಿ ನೆಲಸಿದ್ದು ತಿಂಥಣಿ" ಎಂಬುದು ವಾಡಿಕೆಯಾಗಿದೆ.

"ಕಲಬುರ್ಗಿ ವಿಶ್ವವಿದ್ಯಾಲಯದಲ್ಲಿ ತಿಂಥಿಣಿ ಮೌನೇಶ್ವರರ ವಚನಗಳ ಅಧ್ಯಯನ ಪೀಠ ಸ್ಥಾಪಿಸುವಲ್ಲಿ ಸರ್ಕಾರ ಮೌನವಹಿಸದೆ ತಕ್ಷಣವೇ ಮೌನೇಶ್ವರರ ಹೆಸರಿನಲ್ಲಿ ಅಧ್ಯಯನ ಪೀಠ ಸ್ಥಾಪಿಸಬೇಕೆಂಬ ಬೇಡಿಕೆಯನ್ನು ವಿಶ್ವಕರ್ಮ ಸಮಾಜದವರು ಮುಂದಿಟ್ಟುರುವುದು ಯೋಗ್ಯವಾದುದು ಗುರು ಮೌನೇಶ್ವರರು ಹೆಚ್ಚಿನ ವಚನಗಳನ್ನು ಬರೆದಿರುವುದು ನಿಜ ವಿಶ್ವಕರ್ಮರ ಸಂಪೂರ್ಣ ಅಸ್ತಿತ್ವ ಸಾರಿದ ಮೌನೇಶ್ವರರನ್ನೇ ಸರ್ಕಾರ ಮರೆಯಬಾರದು ಎಂದು ವಿಶ್ವಕರ್ಮ ಸಮುದಾಯದ ಕಲಬುರ್ಗಿ ಜಿಲ್ಲಾ ಘಟಕದ ಅಧ್ಯಕ್ಷ ಐ.ಸಿ.ಪಂಚಾಳ ಆಗ್ರಹಿಸಿದ್ದಾರೆ. ವಿಶ್ವಜ್ಯೋತಿ ಶ್ರೀ ಬಸವಣ್ಣನವರ ಅನುಭವ ಮಂಟಪದಲ್ಲೇ ಶೇಕಡ ನಾಲ್ಕರಷ್ಟು ಮಿಸಲು ಇತ್ತು. ಈಗಲಾದರು ನಮ್ಮನ್ನು ಮರೆಯದೇ ಮೌನೇಶ್ವರರ ಹೆಸರಲ್ಲಿ ಪೀಠಸ್ಥಾಪನೆ, ತಿಂಥಣಿ, ವರವಿ, ಶಿರಸಂಗಿ ಕ್ಷೇತ್ರಗಳ ಅಭಿವೃದ್ದಿಗೆ ಅನುದಾನ ಮತ್ತು ಜಕಣಾಚಾರಿ ಜಯಂತಿಯನ್ನು ಸರ್ಕಾರವೇ ಆಚರಿಸಬೇಕು". ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಮೌನೇಶ್ವರರ ಪಾಂಡಿತ್ಯ ಅವರ ವಚನಗಳ ಸಂಪೂರ್ಣ ಅಧ್ಯಯನವಾಗಲೇ ಬೇಕು. ಇಂತಹ ಅವಕಾಶವನ್ನು ಆಲಿಸಲು ಕಿವಿ, ನೋಡಲು ಕಣ್ಣು ಹಾಗೂ ಅದನ್ನು ಸವಿಯಲು ಮನಸ್ಸು ಒಂದಿದ್ದರೆ ಸಾಕು.

# ಭರತನೂರ ಶ್ರೀ ಗುರುನಂಜೇಶ್ವರ ಮಹಾತ್ಮೆ

**(ಆಧ್ಯಾತ್ಮಿಕ ನಾಟಕ)**

**ಭರತನೂರಿನ ಭಾಗ್ಯಾವಿಧಾತ**
**ಗುರುನಂಜೇಶ್ವರ ತಾತಾ।**
**ತಪೋನಿರತ। ಪುಣ್ಯಚರಿತ।**
**ಕಾಮರಹಿತ। ಜನಮನ ಪ್ರಣೀತ।**
**ನಂಬಿ ಬರುವ। ದೀನರ ರಕ್ಷಿತ।**
**ಹಸಿದೊಡಲಿಗನೀ। ಅನ್ನದಾತ।**
**ಕಾಯಕದೊಳಗೆ। ಕೈಲಾಸ ತೋರಿದ।**
**ದಾಸೋಹದೊಳಗೆ। ಪ್ರಸಾದ ನೀಡಿದ।**
**ಲಿಂಗಾಂಗದ। ಸಮರಸ ತಿಳಿಸಿದ।**
**ವೀರಶೈವದ ಗುರುವಾಗಿನಿಂತ।** [೧೯]

"ಪಶ್ಚಿಯ ಬಂಗಾಳ, ಮಹಾರಾಷ್ಟ್ರ, ಆಂಧ್ರ ಪ್ರದೇಶ ಮತ್ತು ಕರ್ನಾಟಕ ನಾಲ್ಕು ರಾಜ್ಯಗಳ ಪವಿತ್ರ ಕ್ಷೇತ್ರಗಳಲ್ಲಿ ಕಠಿಣವಾದ ಅನುಷ್ಠಾನ ಕೈಗೊಂಡು, ಆತ್ಮಶಕ್ತಿ ಜಾಗೃತಗೊಳಿಸಿ, ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸಿದವರು, ತ್ರಿಕಾಲ ಲಿಂಗ ಪೂಜಾನಿಷ್ಠರಾಗಿ ಜ್ಞಾನ ದಾಸೋಹದ ಜೊತೆಗೆ ಅನ್ನದಾಸೋಹ ನಡೆಸಿಕೊಂಡು. ಕಾಯಕ ಜೀವಿಗಳಾಗಿ ಬೆಳಗಿದ ಭರತನೂರಿನ ೯ನೇ ಪೀಠಾಧಿಪತಿಗಳಾದ ಲಿಂಗೈಕ್ಯ ಶ್ರೀ ಗುರುನಂಜೇಶ್ವರ ಮಹಾಶಿವಯೋಗಿಗಳವರೊಬ್ಬರು ಮಹಾನ್ ಸಿದ್ಧಿ ಪುರುಷರಾಗಿದ್ದರು". [೨೦]

ಇತ್ತ ಕಲ್ಯಾಣನಾಡು ಅತ್ತ ಸಗರನಾಡು ನಟ್ಟನಡುವೆ ನೃಪತುಂಗನ ಬೀಡು. ಈ ಮೂರು ನಾಡುಗಳಲ್ಲಿ ಶರಣರು, ಸಂತರು, ಶಿವಯೋಗಿಗಳು, ಫಕೀರರು ಜನ್ಮತಾಳಿದಷ್ಟು ಮತ್ತ್ಯಾವ ನಾಡಿನಲ್ಲಿ ಜನ್ಮತಾಳಿಲ್ಲ. ಇಲ್ಲಿಯ ಪ್ರತಿ ಊರಿಗೂ ಶರಣರ, ಶಿವಯೋಗಿಗಳ ಹೆಜ್ಜೆಗಳು ಮೂಡಿವೆ. ಪ್ರತಿಮನೆ ಮನೆಗಳಲ್ಲಿ ಶರಣರ ವಚನಗಳು ನಲಿಯುತ್ತವೆ. ಅಂತೆಯೇ ಈ ಮೂರು ನಾಡುಗಳನ್ನೊಳಗೊಂಡ ಪ್ರತಿ ಊರುಗಳು ಸುಕ್ಷೇತ್ರ ಎನ್ನಿಸಿ ಕೊಂಡಿರುವ ಸಾಲಿನಲ್ಲಿ ಭರತನೂರದ ಶ್ರೀ ಗುರುನಂಜೇಶ್ವರ ವಿರಕ್ತ ಮಠ ಕೂಡಾ ಪುಣ್ಯಕ್ಷೇತ್ರವೆನ್ನಿಸಿಕೊಂಡಿದೆ. ಶ್ರೀ ಮಠದ ಪ್ರಥಮ ಪೀಠಾಧೀಕಾರಿಗಳಾದ ಶ್ರೀ ಮನ್ನಿರಂಜನ ಪ್ರಣವ ಸ್ವರೂಪಿಗಳಾದ ಶ್ರೀ ಗುರು ನಂಜೇಶ್ವರರಿಂದ ಹಿಡಿದು ಇಲ್ಲಿಯವರೆಗೆ ಈಗಿನ ೧೦ನೇ ಪೀಠಾಧಿಕಾರಿ ಚಿಕ್ಕಗುರು ನಂಜೇಶ್ವರರು ಶ್ರೀ ಮಠದಲ್ಲಿ ವಿರಾಜಮಾನರಾಗಿರುವವರು.

**"ಹಲವು ಮಾತೇನು ನೀನೊಲಿದು ಪಾದವನಿಟ್ಟ**
**ನೆಲವೇ ಸುಕ್ಷೇತ್ರ ಜಲವೇ ಪಾವನ ತೀರ್ಥ**
**ಸುಲಭ ಶ್ರೀ ಗುರುವೆ ಕೃಪೆಯಾಗು।"** [೨೧]

ಕಲಬುರ್ಗಿ ಜಿಲ್ಲೆಯ ಕಾಳಗಿ ತಾಲೂಕಿನ ಧರ್ಮಕ್ಷೇತ್ರ, ಪುಣ್ಯಕ್ಷೇತ್ರ ಎಂದು ಪ್ರಸಿದ್ಧಿಗೆ ಬಂದಿರುವ ಭರತನೂರು ವಿರಕ್ತಮಠದ ಒಂಬತ್ತನೇ ಪೀಠಾಧಿಕಾರಿಗಳಾದ ಲಿಂಗೈಕ್ಯ ಶ್ರೀ ಮ.ನಿ.ಪ್ರ. ಗುರು ನಂಜೇಶ್ವರ ಶಿವಯೋಗಿಗಳ ಕುರಿತು ನಾಟಕವನ್ನು ರಂಗಭೂಮಿಗೆ ತರುವಲ್ಲಿ ಮುಂದಾಗಿರುವ ನಾಟಕಕರ್ತರ ಆಧ್ಯಾತ್ಮಿಕ ಕಲೆ ಅಮೋಘವಾದುದು.

ಬಸವಕಲ್ಯಾಣದ ಸುಕ್ಷೇತ್ರ ಹಾರಕೂಡ ಪರಮಪೂಜ್ಯ ಶ್ರೀ ಚೆನ್ನಬಸವೇಶ್ವರ ಸಂಸ್ಥಾನ ಹಿರೇಮಠದ ಶ್ರೀ.ಷ.ಬ್ರ.ಚನ್ನವೀರ ಶಿವಾಚಾರ್ಯರು ತಮ್ಮ ಆಶೀರ್ವಚನದಲ್ಲಿ ಹೀಗೆ ಹೇಳುತ್ತಾರೆ. "ಸಾಗರದೊಳಗೆ ಬಿದ್ದ ಸ್ವಾತಿ ಹನಿ, ಭೂಮಿಯೊಳಗ ಬಿದ್ದ ಬೀಜ, ಎದೆಯೊಳಗೆ ಬಿದ್ದ ಅಕ್ಷರ ಇವು ಒಂದಿಲ್ಲ ಒಂದು ಕಾಲಕ್ಕೆ ಫಲ ಕೊಡುತ್ತವೆ ಅನ್ನುವುದಕ್ಕೆ ನಮ್ಮ ಶ್ರೀಮಠದ ಭಕ್ತ ಪರಂಪರೆಯಲ್ಲಿ ಬರುವ ಕವಿ, ಸಾಹಿತಿ ಎಲ್.ಬಿ.ಕೆ ಆಲ್ದಾಳರು ಒಬ್ಬರು" [೭೨]

"ಭರತನೂರ ಶ್ರೀ ಗುರು ನಂಜೇಶ್ವರ ಮಹಾತ್ಮೆ" ಎಂಬ ಆಧ್ಯಾತ್ಮಿಕ ನಾಟಕವನ್ನು ಶ್ರೀಗಳ ೧೯ನೇಯ ಪುಣ್ಯ ಸ್ಮರಣೋತ್ಸವ ನಿಮಿತ್ಯ ದಿ. ೨೬.೦೩.೨೦೧೩ ರಿಂದ ೩೦.೦೩.೨೦೧೩ ರವರೆಗೆ ಭರತನೂರಿನ ಶ್ರೀ ಮಠದಲ್ಲಿ ಐದು ದಿನಗಳು ನಾಟಕ ಪ್ರದರ್ಶನ ನಡೆದು ಭಕ್ತ ಸಮೂಹ ಮಹಾತಪಸ್ವಿಗಳ ಜೀವನ ಚರಿತ್ರೆ ನೋಡಿ ತಮ್ಮನ್ನು ತಾವು ಪಾವನಗೊಳಿಸಿಕೊಂಡರು. ಆಲ್ದಾಳರು ತಮ್ಮ ೭೫ರ ವಯೋಮಾನದಲ್ಲೂ ಬಿಡುವಿಲ್ಲದ ವ್ಯಕ್ತಿಯಾಗಿ ನಾಟಕ ಪ್ರದರ್ಶನ ಯಶಸ್ವಿಗೊಳಿಸಿ 'ಭಲೆ' ಎನ್ನಿಸಿಕೊಂಡರು.

ಸೇಡಂನ ಶ್ರೀ ವಿಶ್ವ ಗಂಗಾ ಶಿಕ್ಷಣ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಅಧ್ಯಕ್ಷ ಶ್ರೀ ಶಂಕರ ಬಿರಾದಾರ ಈ ನಾಟಕದ ಬಗ್ಗೆ ಮುನ್ನುಡಿಯಲ್ಲಿ ಹೀಗೆ ಹೇಳುತ್ತಾರೆ. "ನಾಟಕವು ಒಂದು ವಿಶೇಷ ಹಾಗೂ ವಿಶಿಷ್ಟವಾದ ಸಾಹಿತ್ಯದ ಪ್ರಕಾರವಾಗಿದೆ. ವಸ್ತುಸ್ಥಿತಿಯನ್ನು ದೃಶ್ಯ ಮತ್ತು ಸಂಗೀತ ಜೊತೆ ಪ್ರಚುರ ಪಡಿಸುವ ಮೂಲಕ ಮನುಷ್ಯನ ಮನದಾಳಕ್ಕೆ ವಿಷಯವನ್ನು ತಲುಪಿಸುವ ಒಂದು ಮಹತ್ವದ ಸಾಧನವೇ ಈ ನಾಟಕ. ಆ ನಿಟ್ಟಿನಲ್ಲಿ ಬದುಕಿನ ಸಮಗ್ರ ಘಟನೆಗಳನ್ನು ಸರಿಯಾಗಿ ಗ್ರಹಿಸಿ, ಅದಕ್ಕನುಗುಣವಾಗಿ ಸನ್ನಿವೇಶಗಳನ್ನು ಸೃಷ್ಟಿಸಿ, ವಾಸ್ತವಿಕತೆಗೆ ತೀರಾ ಹತ್ತಿರವಾಗಿರುವಂತಹ ಪಾತ್ರ ಪೋಷಣೆಯನ್ನು ನಿರ್ವಹಿಸಿ, ನಾಟಕೀಯ ರಂಗಸಾಧಿಸಿ, ಕಾಲೈಕ್ಯ, ಕ್ರಿಯೈಕ್ಯ, ಸ್ಥಳೈಕ್ಯಗಳ ಕಡೆ ಗಮನಕೊಟ್ಟು ಕ್ರಿಯಾತ್ಮಕವಾಗಿ ಅಭಿವ್ಯಕ್ತಿಸುವುದೇ ಈ ನಾಟಕಸಾಹಿತ್ಯ, ಅಧ್ಯಾತ್ಮಿಕ ಕ್ಷೇತ್ರಕ್ಕೆ ತಮ್ಮ ಗಟ್ಟಿ ಸಾಹಿತ್ಯದ ಮೂಲಕ ಅಪಾರ ಕೊಡುಗೆ ನೀಡಿದ ಆಲ್ದಾಳರ ಸೇವೆ ನಿಜಕ್ಕೂ ಅವಿಸ್ಮರಣೀಯ". [೭೩]

ಈ ನಾಟಕ ೩೩ ದೃಶ್ಯಗಳಿಂದ ಕೂಡಿದ್ದು ವೀಕ್ಷಕರಿಗೂ, ಓದುಗರಿಗೂ ಭಕ್ತಿ ಪರವಶದಲ್ಲಿ ತೇಲಿಸುತ್ತದೆ.

ಪ್ರ ಪ್ರಥಮ ಪೀಠಾಧಿಕಾರಿಗಳಾದ ಶ್ರೀ ಮ.ನಿ.ಪ್ರ.ಗುರುನಂಜೇಶ್ವರ ಶಿವಯೋಗಿಗಳು ಲಿಂಗೈಕ್ಯರಾದ ನಂತರ ಮರಿಗುರು ನಂಜೇಶ್ವರರು, ಶ್ರೀ ಸಿದ್ಧಲಿಂಗೇಶ್ವರರು ಆದಿಯಾಗಿ ಎಂಟನೇ ಪೀಠಾಧಿಕಾರಿಗಳಾದ ಶ್ರೀ.ಮ.ನಿ.ಪ್ರ. ಮುರುಘೇಂದ್ರ ಸ್ವಾಮಿಗಳವರೆಗೆ ಭರತನೂರಿನ ಮಠವು ಏಳು-ಬೀಳುಗಳ ಜೊತೆಗೆ ತನ್ನದೇ ಆದ ವರವೀರಶೈವ ಧರ್ಮದ ಕೊಡುಗೆಯನ್ನು ಕೊಡುತ್ತ ಒಟ್ಟು ೩೬೯ ವರ್ಷಗಳವರೆಗೆ ನಡೆದುಕೊಂಡು ಬಂದದ್ದು ಒಂದು ಇತಿಹಾಸವಿದೆ.

ಪ್ರಥಮ ಪೀಠಾಧಿಕಾರಿಗಳು ಭವಿಷ್ಯ ನುಡಿದಂತೆ ಒಂಬತ್ತನೇಯ ಪೀಠಾಧಿಕಾರಿಗಳಾಗಿ ಜಿಲ್ಲೆಯ ಅಥಣಿತಾಲೂಕಿನ ಕೊಕಟನೂರ ಹಿರೇಮಠದ ಆದರ್ಶದಂಪತಿಗಳಾದ ಶ್ರೀ.ವೆ.ಮೂರ್ತಿ ವೀರಯ್ಯಸ್ವಾಮಿ ಶ್ರೀಮತಿ ಲಿಂಬೆಕ್ಕಾ ಗುರುತಾಯಿಯವರ ಪುಣ್ಯೋದುದರದಲ್ಲಿ ದಿ.೧೧.೧೦.೧೯೧೨ ರಂದು ಜನಿಸಿದ್ದಾರೆ, ಈ ಶಿಶು ಸಾಮಾನ್ಯನಲ್ಲ ಅನುಷ್ಠಾನಮೂರ್ತಿಯಾಗಿ ಮೆರೆಯುತ್ತಾರೆ. ಈಗ ರೂಢಿಯಂತೆ ಸಿದ್ಧಲಿಂಗೇಶನೆಂದು ನಾಮಕರಣ ಮಾಡಿಬಿಡಿರಿ ಮುಂದೆ ಹೆಸರು ಪರಿವರ್ತಿಸಿ ಜಗದ ನಂಜನ್ನೇ ಸ್ವೀಕರಿಸಿ ಗುರು ನಂಜುಂಡೇಶ್ವರನಾಗಿ ಮೆರೆಯುತ್ತಾನೆ. ಜಗ ಬೆಳಗುವ ಜಂಗಮನಾಗುತ್ತಾನೆ. ಮುಂದೆ ಈತ ನಿರಾಭಾರಿ ಪಟ್ಟಾಧಿಕಾರಿಯಾಗುತ್ತಾನೆ. ಹಾಗೆಂದು ಆತನ ಭವಿಷ್ಯವೇ ಹೇಳುತ್ತದೆ. ಎಂದು ವೀರಯ್ಯಾಸ್ವಾಮಿ ಅವರಿಗೆ ತಿಳಿಸಿ ಹೇಳುತ್ತಾರೆ.

ತಂದೆ ವೀರಯ್ಯಸ್ವಾಮಿ ಮಗ ಸಿದ್ಧಲಿಂಗಯ್ಯ (ಭವಿಷ್ಯದ ಗುರುನಂಜೇಶ್ವರ) ನನ್ನು ಅಥಣಿಯ ಮುರುಘೇಂದ್ರ ಶಿವಯೋಗಿಗಳವರ ಗಚ್ಚಿನ ಮಠದಲ್ಲಿ ಬಿಟ್ಟರು. ಅಲ್ಲಿ ಪೂಜೆ, ಜಪ, ತಪಗಳೊಂದಿಗೆ ಸಂಸ್ಕೃತ ಮತ್ತು ವಚನಗಳ ಅಧ್ಯಯನ ಮಾಡಿದರು, ಮುಂದೆ ಶಿವಯೋಗ ಮಂದಿರದಲ್ಲಿದ್ದುಕೊಂಡು ವೀರಶೈವ ಧರ್ಮದ ಸಿದ್ಧಾಂತಗಳನ್ನು ಕಲಿತರು. ಪಂಚಾಚಾರ, ಷಟಸ್ಥಲಗಳನ್ನರಿತರು ಶ್ರೀ ಬಿ.ಎ.ಹೈದರಸಾಬರ ಹತ್ತಿರ ಜ್ಯೋತಿಷ್ಯಶಾಸ್ತ್ರ ಕಲಿತರು. ಬಳ್ಳಾರಿಯ ಪಂಡಿತ ಬಸವರಾಜ ಶಾಸ್ತ್ರಿಗಳ ಬಳಿ ವೈದ್ಯಕೀಯಶಾಸ್ತ್ರ ಪಡೆದರು. ಅಲ್ಲಿಂದ ಕಲ್ಬುರ್ಗಿ ಜಿಲ್ಲೆಯ ಚಿಂಚೋಳಿ ತಾಲೂಕಿನ ರಟಕಲ್ ಗ್ರಾಮಕ್ಕೆ ಬಂದು ಮುರುಘೇಂದ್ರ ಮಹಾಸ್ವಾಮಿಗಳ ಹತ್ತಿರ ವೇದಾಗಮನ ಸಾರ ಹೀರಿದರು. ಮಹಾಗಾಂವಕ್ಕೆ ತೆರಳಿ ಪಂಚಾಂಗ ಶ್ರವಣ ಕೈಗೊಂಡರು. ಆಗಲೇ ಸಿದ್ಧಲಿಂಗಯ್ಯ ಅವರ ಕೀರ್ತಿ ದಶದಿಕ್ಕಿಗೂ ಪಸರಿಸಿತ್ತು. ಸಕಲ ವಿದ್ಯಾಪಾರಂಗತರಾಗಿ ಹೊರಹೊಮ್ಮಿದರು.

ಗುರು ನಂಜೇಶ್ವರ ಸ್ವಾಮಿಗಳೆಂಬಭಿಮಾನದಿಂದ ಶ್ರೀಮನನಿರಂಜನ ಪೀಠ ಆಲಂಕರಿಸಿದರು. ವಿರಕ್ತ ಮಠದ ಪೀಠದ ಮಹತ್ವ ಅದರ ಆಚರಣೆ ಎಷ್ಟೊಂದು ಮಹತ್ವದಿಂದ ಕೂಡಿದೆ ಕೇಳಿ.

"ಗುರುನಂಜೇಶ್ವರ :- "ವಿರಕ್ತ ಪೀಠವನ್ನು ಅಲಂಕರಿಸಿದ ಬಳಿಕ ಅಸನ, ವ್ಯಸನ, ವಿಷಯ, ವಿಕಾರಕ್ಕೆ ದೂರವಾಗಿರಬೇಕು. ಹೊನ್ನು, ಮಣ್ಣು, ಹೆಣ್ಣು ಮರಳಿ ಮುಟ್ಟದಿರಬೇಕು. ವಿರಕ್ತನಾದ ಬಳಿಕ ಆಶಾಪಾಶ, ತಾಮಸವ ತೊಲಗಿಸಬೇಕು. ಹಮ್ಮು-ಬಿಮ್ಮು ಗರ್ವ ಅಹಂಕಾರವ ಮೆಟ್ಟಿರಬೇಕು. ಅಂಗಮನ ಪ್ರಾಣೇಂದ್ರಿಯಗಳಲ್ಲಿ ಮುಸುಕಿದ ಅಜ್ಞಾನ, ಕತ್ತಲೆ ಕಳೆಯಬೇಕು. ವಿರಕ್ತನಾದ ಬಳಿಕ ಸರ್ವಾವಸ್ಥೆಯಲ್ಲಿ ಲಿಂಗವನಪ್ಪಿರಬೇಕು. ಸಂಕಲ್ಪ-ವಿಕಲ್ಪವನಳಿದಿರಬೇಕು. ಇದು

ಕಾರಣ ಮನದ ಮುಂದಿರುವ ಭ್ರಾಂತಿಗಳೆಲ್ಲಾ ನೀಗಿ ಶಾಂತಿ, ಸಹಬಾಳ್ವೆಯ ಕ್ರಾಂತಿ ಮಾಡುವೆನು. ಶ್ರೀ ಗುರು ಅಖಂಡೇಶ್ವರರ ಪಾದ ಸಾಕ್ಷಿಯಾಗಿ". ಇದನ್ನು ಚಾಚು ತಪ್ಪದೆ ನಡೆದಾಗಲೇ ಮುಕ್ತಿ".[೭೪]

ಅಥಣಿಯ ಮುರುಘೇಂದ್ರ ಸ್ವಾಮಿಗಳು 'ಕಾವಿ' ಬಟ್ಟೆಯನ್ನು ಧರಿಸುವುದರ ಮಹತ್ವದ ಬಗ್ಗೆ ಶ್ರೀ ಗುರು ನಂಜೇಶ್ವರರಿಗೆ ತಿಳಿಹೇಳುತ್ತಾರೆ. ಅರಿಯಲೇ ಬೇಕು.

ಮುರುಘೇಂದ್ರ ಸ್ವಾಮಿ : "ಅರಿಷಡ್ವರ್ಗಗಳನ್ನು ಸುಟ್ಟು ಹೊರಬಂದದ್ದೇ ಈ ಕಾವಿ. ಸಪ್ತ ವ್ಯಸನಗಳಿಂದ ಈಜಿ ಹೊರಬಂದದ್ದೇ ಈ ಕಾವಿ! ಅಷ್ಟ ಮದಗಳನ್ನೆ ಮೆಟ್ಟಿ ನಿಂತದ್ದು ಈ ಕಾವಿ. ಶಾಂತಿ ಕಾಂತಿಯಾಗಿ, ಚಿನ್ಮಯ ಶಕ್ತಿಯಾಗಿ ಮುಕ್ತಿ ಮಾರ್ಗವನ್ನು ಪಡೆದುಕೊಂಡಿರುವುದೇ ಈ ಕಾವಿ. ಈ ಕಾವಿಯ ಅರ್ಥವನ್ನು ಅರಿತವನೇ ಜ್ಞಾನಿ".[೭೫] ಇದಕ್ಕೆ ಗುರುನಂಜೇಶ್ವರರು ಹೇಳುವ ಮಾತು ಅರ್ಥವತ್ತಾಗಿದೆ.

ಗುರುನಂಜೇಶ್ವರ :- "ಕಾ! ಅಂದರೆ ಕಾಕ ಗುಣಗಳನ್ನು ಅಳಿಯುವುದು. 'ವಿ' ಅಂದರೆ ವಿಶ್ವಜ್ಯೋತಿಯಾಗೆಂದು ಹೀಗೆ ನಾನು ಅರ್ಥ ಮಾಡಿಕೊಂಡಿದ್ದೇನೆ" [೭೬]

ಆದರೆ ಇಂದು 'ಕಾವಿ'ಯ ಬಣ್ಣ ಬದಲಾಗಿದೆ. ಕಾವಿಯ ಪಾವಿತ್ರ್ಯವನ್ನು ಹಲವು ಸ್ವಾಮಿಗಳು ಹಾಳುಮಾಡುತ್ತಿದ್ದಾರೆ. ಮಠಗಳಲ್ಲಿ ನಡೆಯಬಾರದ ದುಷ್ಕೃತ್ಯಗಳು ನಡೆಯುತ್ತಿವೆ. ಕಾವಿ ತೊಟ್ಟವರು ತಮ್ಮ ಅಸಹ್ಯ ನಡೆಯಿಂದ ಬೀದಿಯ ರಂಪಾಟ ಮಾಡಿದ್ದಾರೆ. ವಿರಕ್ತ ಮಠಗಳಾಗಲಿ, ಇನ್ನೀತರ ಮಠಗಳಾಗಲಿ ಅಲ್ಲಿರುವ ಕಾವಿಧಾರಿ ಪೀಠಾಧಿಕಾರಿಗಳು ನಡೆಸುವ ಅನ್ಯಾಯ, ಅನೀತಿ, ಅತ್ಯಾಚಾರಗಳು ಬಯಲಾಗಿ ಅಸಹ್ಯ ಮೂಡಿಸುವ ವಾತಾವರಣ ಸೃಷ್ಟಿಯಾಗುತ್ತಿವೆ.

ಘಟದಿಂದ ಮಠ ಬೆಳಗಬೇಕೇ ಹೊರತು ಮಠದಿಂದ ಘಟ ಬೆಳಗಬಾರದು. ಘಟ ಮಠ ಎರಡು ಗಟ್ಟಿಯಿದ್ದಾಗ ಎಂಥ ಬಿರುಗಾಳಿ ಬೀಸಿದರೂ ತಡೆದುಕೊಳ್ಳುತ್ತದೆ.

ನಾಟಕಕಾರರು, ಈ ನಾಟಕದಲ್ಲಿ ರಂಗಭೂಮಿಯ ಮೇಲೆ ವಿಜೃಂಭಿಸುವ ಜಕ್ಕಪ್ಪ-ಜಕ್ಕಮ್ಮ ದಂಪತಿಗಳು ಕೇವಲ ಹಾಸ್ಯಕ್ಕಾಗಿ ಅವರ ಪಾತ್ರಗಳುಂಟು ಎಂದು ಭಾವಿಸದೆ ಅವರಲ್ಲಿ ಒಳ್ಳೆಯ ಆಚಾರ-ವಿಚಾರಗಳು, ನಡೆನುಡಿಗಳು ಇವೆ ಎಂಬುದನ್ನು ಮರೆಯುವಂತಿಲ್ಲ.

**"ನನಗಂಡ ಬರುವಾಗ। ವನವೆಲ್ಲ ಓಲಾಡಿ।**
**ಕನಕಾಂಬರ ಹೂ ಅರಳ್ಯಾವ। ನನರಾಯ**
**ಮನಕೊಟ್ಟು ಬಿಡಿಸಿ ತಂದಾನ॥**

**ನನರಾಯ ಬರುವಾಗ। ವನದಾವ ಹೂಬಳ್ಳಿ।**
**ತೆನಿಮ್ಯಾಲಿನ ಹಕ್ಕಿ ಹಾರ್‍ಯಾವ। ನನ್ನವರು।**
**ನನಗಾಗಿ ಹೂವು ತಂದಾರ।**

**ಕಾಳೀಗಿಯ ಜಾತ್ರ್ಯಾಗ। ಬಳಿ ಅಂಗಡಿ ಬಿದ್ದಾವ।**
**ಬಳಿ ತೊಡಿಸ ನನ್ನ ಕೈಯಾಗ। ನನರಾಯ।**
**ನೆಲ್ಲಕ್ಕಿ ಸವಿಬಾನ ಉಣಿಸೇನ।**" [೭೭]

**ಜಕ್ಕಮ್ಮ :** ಹುಟಗ್ಯೆ ಮಾಡ್ಕೊಂಡು ಹಂಗ ಎಷ್ಟು ದಿವಸಾಂತ ತಿರಗೂದು, ನೀ ಇಲ್ಲದನೆವ್ನಾ ಹೇಳಬೇಡ.

**ಜಕ್ಕಪ್ಪ :** ಅದ್ಕ ಸಂಸಾರ ಅಂತಾರ। ನಮ್ಮ ಬಡ್ಡಿನಾಗ ನಾವಿರಬೇಕು. ಹಾಲ ಐತಿ ಅಂತ ತಿಳಿದ ಮೇಲು ಮುಖಾತೊಳ್ಕೂಂತಾರೇನು? ಹುಚ್ಚಿ ಅಲಾ ಹುಚ್ಚಿ.

**ಜಕ್ಕಮ್ಮ :** ನೀ ಇಲ್ಲದ ಗುಡ್ಡಾ ಸುತ್ತ ಹರಿಬ್ಯಾಡ. ಇವತ್ತ ನಾ ಕಾಳಗಿ ಜಾತ್ರೀಗಿ ಹೋಗಿ ಬಳಿ ತೊಟಗೊಂಡ ಬರತೀನಿ ಕೊಡು ರೊಕ್ಕಾ! ಇಲ್ಲದಿದ್ರ ನನ್ನತವ್ರ ಮನೀಗಿ ಹೋಗ್ತಿನಿ.

**ಜಕ್ಕಪ್ಪ :** ಹೋಗಲ್ಲ ಯಾರ ಬ್ಯಾಡಂತಾರ! ಹೋಗಕ್ಕಿ ಹೋಗ್ತೀದಿ ನನಗೂ ಒಂದು ಜೋಡ ಧೋತ್ರ ತಗೊಂಡು ಬಾ.

**ಜಕ್ಕಮ್ಮ :** ನಾಚಿಕೆ ಬರಬೇಕು. ನನಗೂ ಒಂದು ಜೋಡು ಧೋತ್ರ ತರಬೇಕೆಂದು ಹೆಳ್ಳಿಕ್ಕಿ.

**ಜಕ್ಕಪ್ಪ :** ನಾಚಿಕೆಯಾಕಲೇ ! ಬೇಡುಂಡಬಾಯಿ ನಾಡ ಕಾಣ್ತಾದಂತ. ನಿಮ್ಮಪ್ಪಗ ನಿನೊಬ್ಬೆ ಮಗಳು. ದೊಡ್ಡ ಶ್ರೀಮಂತ ಅದಾನ. ದಾನ ಮಾಡಬೇಕು. ಇಲ್ಲಾಂದ್ರ ಹ್ಯಾಂಗ ಬಂತು ಹಂಗ ಹೋಗ್ತಾದ. ಕಳ್ಳ ಕುದುರೆ ವ್ಯಾಪಾರ ಆದಂಗ ಆಗಬಾರ್ದು.

ಶ್ರೀ ಗುರು ನಂಜೇಶ್ವರರ ಪ್ರೀತಿ, ವಿಶ್ವಾಸಕ್ಕೆ ಈ ದಂಪತಿಗಳು ಪಾತ್ರರಾಗುವುದು ವಿಶೇಷ ಮಹಾತ್ಮೆ.

'ಶ್ರೀ ಗುರು ನಂಜೇಶ್ವರ ಮಹಾತ್ಮೆ' ನಾಟಕದಲ್ಲಿ ಬರುವ ಜಕ್ಕಪ್ಪ-ಜಕ್ಕವ್ವನ ಪಾತ್ರಗಳು ನೋಡುಗರ ಕಣ್ಣುಗಳಿಗೆ ತಂಪನ್ನು ಸವರುತ್ತವೆ. ಇವರುಗಳ ನಡೆ-ನುಡಿಗಳಿಗೆ ಗುರುನಂಜೇಶ್ವರರು ತುಂಬಾ ಮೆಚ್ಚುಗೆ ವ್ಯಕ್ತಪಡಿಸುತ್ತಾರೆ.

"ಗುರುನಂಜೇಶ್ವರ : ಜಕ್ಕಪ್ಪಾ! ಜಕ್ಕಮ್ಮಾ! ನೀವಿಬ್ರು ನನ್ನ  ಮಾನಸ ಪುತ್ರರು ನಿಮ್ಮ ಸತ್ಯಶುದ್ಧ ಕಾಯಕ ಕಂಡು ನನಗೆ ಆನಂದ ಆಗ್ಯೆತೊ! ಆನಂದ ಆಗೇತಿ. ಮಕ್ಕಳಿಲ್ಲಾ, ಮಕ್ಕಳಿಲ್ಲಾ ಅಂತ ನೀವು ಚಿಂತಿ ಮಾಡ್ಬ್ಯಾಡ್ರಿ. ಗುರುನಂಜೇಶ್ವರ ಹುಟ್ಟಿ ಬರತಾನ ನಿಮ್ಮ ಹೊಟ್ಟ್ಯಾಗ ಇಲ್ಲಿವರೆಗೂ ಮಕ್ಕಳ ಸಲುವಾಗಿ ಬಾಯ್ಬಿಟ್ಟಿ ಕೇಳಿಲ್ಲ ಕೇಳಿದ ಮ್ಯಾಲ ಮಕ್ಕಳ ಕೊಡೋದು ದೊಡ್ಡ ಮಾತಲ್ಲ. ಕೇಳದೇ ಕೊಡೋದು ಧರ್ಮ ಇರ್ಲ್ಲಿ! ಒಕ್ಕಲುತನದ ಉಸ್ತುವಾರಿ ನೋಡ್ಕೊಂಡ್ಹೋಗೊ ಬಸ್ಸಯ್ಯಾ ಬಂದಿಲ್ಲೇನು?" [೭೮]

ಜಕ್ಕಪ್ಪ-ಜಕ್ಕವ್ವ ಪಾತ್ರಗಳನ್ನು ರಂಗಭೂಮಿಗೆ ಅಳವಡಿಸಿಕೊಳ್ಳುವಲ್ಲಿ ನಾಟಕಕಾರರು ಪ್ರೇಕ್ಷಕರ ಭಾವನೆಗಳಿಗೆ ನೀರೆರಿದ್ದಾರೆ. ಇವರೀರ್ವರ ಮಾತಿನ ಭರಾಟೆ, ಮಾತನಾಡುವ ಶೈಲಿ, ಅವರುಗಳ ನಟನೆ ಪ್ರೇಕ್ಷಕರು ನಕ್ಕು-ನಕ್ಕು ಹೊಟ್ಟೆಹುಣ್ಣಾಗುವಂತಾಗುತ್ತದೆ. ಆದರೂ ಅವರ ಪಾತ್ರ ಹಾಸ್ಯಕ್ಕಷ್ಟೆ ಮೀಸಲಿರಿಸದೇ ಬಹುವಾದ ತತ್ವವನ್ನು ಹುದುಗಿಸಲಾಗಿದೆ. ಜನರು ಏನೇನೋ ಬೇಡಿಕೆಯನ್ನು ಗುರುನಂಜೇಶ್ವರರ ಬಳಿ ಇರಿಸಿ ಈಡೇರಿಸಿಕೊಳ್ಳುತ್ತಾರೆ. ಜಕ್ಕಪ್ಪ ಜಕ್ಕವ್ವ ದಂಪತಿಗಳು ಗುರುಗಳು ಹೋದಲ್ಲೆಲ್ಲ ಹೋಗುತ್ತಾರೆ. ಅವರು ಅನುಷ್ಠಾನ ಗೈಯುವ ವೇಳೆಯಲ್ಲಿ ಸದಾ ಅವರ ಸೇವೆಯಲ್ಲಿ ಸಿದ್ಧರಿರುತ್ತಾರೆ. ಇಷ್ಟಿದ್ದರೂ ತಾವು ಇನ್ನೊಬ್ಬರು ಪಡೆದಂತೆ ಮಕ್ಕಳು ಪಡೆಯಲಿಲ್ಲವಲ್ಲ ಬಂಜೆ ಎಂಬ ಶಬ್ಧಗಳು ಕೇಳಿಸಿಕೊಳ್ಳಬೇಕಾಯಿತಲ್ಲ ಎಂದು ಮನದಾಳದಲ್ಲಿ ಚಿಂತೆ ತುಂಬಿ ಕೊಂಡಿದ್ದರೂ. ಎಂದೂ ಅವರು ಗುರುಗಳ ಮುಂದೆ ಕೇಳಿಕೊಳ್ಳಲಿಲ್ಲ. ಹೇಳಿದರೆ ಏನಾಗುವುದು ಎಂಬ ಆತಂಕ ಅವರಲ್ಲಿ ಕಾಡಿರಬಹುದು, ಗುರುಗಳು ಇಂದಿಲ್ಲ ನಾಳೆ ನಮ್ಮ ಮೇಲೆ ಕೃಪೆ ತೋರುತ್ತಾರೆ ಎಂಬ ವಿಶ್ವಾಸವು ಅವರ ಅಂತರದಲ್ಲಿ ಸುಳಿದಿರಬಹುದು. ಹೌದು! ಅದು ಸತ್ಯವಾಯಿತು. ಗುರುನಂಜೇಶ್ವರರು ಕೊಡುವುದನ್ನು ಮರೆಯಲಿಲ್ಲ. ಜಕ್ಕಪ್ಪ ಜಕ್ಕವ್ವ ದಂಪತಿಗಳ ಅಂತರಾಳದ, ಮನದಾಳದ ಹರಕೆಯನ್ನು ತೀರಿಸಿದರು. ನಿನ್ನ ಉದರದಲ್ಲಿ ಗುರು ನಂಜೇಶ್ವರರೇ ಜನಿಸಿ ಬರುತ್ತಾರೆ ಎಂದರು. ಇದನ್ನು ಆಲಿಸಿದ ದಂಪತಿಗಳಿಗೆ ಸ್ವರ್ಗವೇ ದಕ್ಕಿದಂತಾಯಿತು. ಗುರುನಂಜೇಶ್ವರರು ಅಂತರ್ಯಾಮಿಗಳು ಭವಿಷ್ಯ ಅರಿತವರು, ತಮ್ಮ ಶಿಷ್ಯರನ್ನು ಪರೀಕ್ಷಿಸುತ್ತ, ಅವರ ಬೇಡಿಕೆಗಳನ್ನು ಪೂರೈಸುವರು ಎಂಬುದಕ್ಕೆ ಇದು ಸಾಕ್ಷಿಯಾಯಿತು.

ಗುರುನಂಜೇಶ್ವರ: ಸತಿ ಪತಿಗಳು ಒಂದಕ್ಕೂ ಆಸೆ ಪಡದೆ, ಒಮ್ಮನಿಸ್ಸಿನಿಂದ ಶ್ರೀಮಠದಾಗ ಸೇವೆ ಮಾಡಿದ ತತ್ಫಲವೇ ರೂಪುಗೊಂಡು ಶಿಶುವಾಗಿ ನಿಮ್ಮ ಮಡಿಲಿನಿಂದ ಹೊರಬಂದಿದೆ ಉಡಿ ತುಂಬಿದೆ. ಇದು ಭರತನೂರಿನ ಪ್ರಥಮ ಪೀಠಾಧಿಪತಿ ಹಾಗೂ ಬಸವಾಂಬೆ ಅವರ ಘನಾಶೀರ್ವಾದ ಇದಕ್ಕೆ ಕಾರಣ.

ಜಕ್ಕಪ್ಪ- ಜಕ್ಕವ್ವರು ದೇವ ಮಾನವನನ್ನು ಪಡೆಯಲು ಅವರ ತನು ಶುದ್ಧ, ಅದೇಕಾಯಕ ಪೂಜೆ, ಮನಶುದ್ಧ ಮತ್ತು ದಾಸೋಹ ಸೇವೆಯೇ ಕಾರಣವಾಯಿತು. ಭಾವಶುದ್ಧವಾಗಿದ್ರ ಅದೇ ಜಂಗಮಪೂಜೆ, ತನು, ಮನ, ಭಾವ ಈ ಮೂರು ಮುಪ್ಪರಿಗೊಂಡ್ರ ಅದೇ ಗುರುನಂಜೇಶ್ವರನ ಪೂಜೆ ಆಗುತ್ತದೆ ಎನ್ನುವುದಕ್ಕೆ ಈ ದಂಪತಿಗಳೇ ಸಾಕ್ಷಿ.

"ಹುಟ್ಟಿದ್ದು ಒಂದು ದಿವಸ ಸಾಯ್ತಾದ, ಕಟ್ಟಿದ್ದು ಒಂದು ದಿನ ಬೀಳ್ತಾದ. ಅಂಗಿ ಹಳೆಯದಾದಾಗ ಹೊಸ ಅಂಗಿ ಹೊಲಸಗೊಂಡು ಬರಬೇಕು. ಹಂಗ। ನಾ ತೊಟ್ಟ ಅಂಗಿ ಹಳಿದಾದಾಗ. ಅದಕ ಹೊಸ ಅಂಗಿ ಹೊಲಸಗೊಂಡ ಬರಾಕ ಹೊಂಟೀನಿ. ಕಾಯಿ ಹೋಗಿ ಹಣ್ಣ ಆದಾಗ ಬಳ್ಳಿ ತುಂಬಿನಿಂದ ಬಿಡತಾದ ಹೌದಿಲ್ಲ? ನಾವು-ನೀವು ಕೂಡಿ ಈ ಜಗತ್ತಿನ್ಯಾಗ ಸಂತಿ ಮಾಡಾಕ-ಬಂದೀವಿ ಹೌದಿಲ್ಲಾ? ಯಾರ ಸಂತಿ ಮುಗಿತಾಗ ಅವರು ತಮ್ಮ ಊರ ಸೇರತಾರ. ಬರುವಾಗ ಏನ ಎಲ್ಲರೂ ಕೂಡಿ ಬಂದಿವ್ಯಾ? ಇಲ್ಲಾ ಎಲ್ಲರೂ ಒಂದೊಂದು ಊರಿನಿಂದ ಬಂದೀವಿ ಈ ಸಂತ್ಯಾಗ ಕೂಡಿವಿ ಅಂದ್ರ ಎಲ್ಲರಿಗೂ ಕರೆದು ಕೊಂಡು ಹೋಗಂದ್ರ ಹ್ಯಾಂಗೊ" ಗುರುನಂಜೇಶ್ವರ.

ನೀವೆಲ್ಲರೂ ನಮಗೆ ಅಪ್ಪಣೆಕೊಡ್ರಿ. ನಮಗ ಶಿವಬಸಮ್ಮಾಯಿ ಕರಿಯಾಕ ಹತ್ಯಾಳ ಎಲ್ಲರೂ ಓಂ ನಮಃ ಶಿವಾಯ ಅನ್ರಿ. ಅಂಗದಿಂದ ಜ್ಯೋತಿ ಹೊರಗಾಗುವುದು.

ಎಲ್.ಬಿ.ಕೆ ಆಲ್ದಾಳ ಅವರು ಶ್ರೀ ಗುರುನಂಜೇಶ್ವರರ ಮುಖವಾಣಿಯಿಂದ ಹೊರಡಿಸಿದ ಮಾತುಗಳೆಲ್ಲವೂ ಮುತ್ತು-ರತ್ನಗಳ ಸರಮಾಲೆ ತರಹದ್ದು ಮಾನವನಿಗೆ ಒಳ್ಳೆಯ ಮಾರ್ಗದಲ್ಲಿ ನಡೆಯಲು ಸಹಕಾರಿ ಹಾಗೂ ಜೀವನ ಸುಂದರವಾಗಿಟ್ಟುಕೊಂಡು, ಸುಖ ಸಂಸಾರದ ನೌಕೆ ಸಾಗಿಸಲು ಉಪಕಾರಿ.

ಕನ್ನಡ ನಾಡಿಗೆ ಪೌರಾಣಿಕ, ಆಧ್ಯಾತ್ಮಿಕ, ಐತಿಹಾಸಿಕ, ಸಾಮಾಜಿಕ ಮತ್ತು ಕಲಾತ್ಮಕ ನಾಟಕ ನೀಡಿದ ಹೆಮ್ಮೆ ಕರುನಾಡಿನ ಕವಿಗಳದು. ಏಣಗಿ ಬಾಳಪ್ಪ, ಕೆ.ಎನ್.ಸಾಳುಂತೆ, ಪಿ.ಬಿ.ಧುತ್ತರಗಿ, ಹೆಚ್.ಎನ್.ಹೂಗಾರ, ಬಿ.ವಿ. ಈಶ ಅಲ್ಲದೆ ಕಲಾತ್ಮಕ ನಾಟಕಗಳ ರಚನೆಕಾರರಾದ ಪಿ.ಲಂಕೇಶ, ಗಿರೀಶ ಕಾರ್ನಾಡ, ಚಂದ್ರಶೇಖರ ಕಂಬಾರರು ಸೇರಿದಂತೆ ಅನೇಕ ಮಹಾನ್ ನಾಟಕಕಾರರು ತಮ್ಮ ಅಮೂಲ್ಯ ಕೃತಿಗಳನ್ನು ರಂಗಭೂಮಿಯ ಮುಡಿಗೇರಿಸಿದ್ದಾರೆ. ರಂಗಭೂಮಿಯ ಹಿರಿಮೆಯನ್ನು ಹೆಚ್ಚಿಸಿದವರಲ್ಲಿ ಎಲ್.ಬಿ.ಕೆ.ಆಲ್ದಾಳರದ್ದು. ಅವರ ಸಾಧನೆ ಅಮೋಘ.

"ವೃತ್ತಿರಂಗಭೂಮಿಯ ಪೌರಾಣಿಕ, ಆಧ್ಯಾತ್ಮಿಕ ನಾಟಕಗಳು ಅವುಗಳ ರಚನೆ, ಆಕಸ್ಮಿಕಗಳು ಮತ್ತು ರಮ್ಯಾದ್ಭುತ ಪವಾಡಗಳ ಮೇಲೆ ನಿಂತಿರುತ್ತದೆ".[೭೯] ಎನ್ನುವ ಮಾತು ಸತ್ಯ, ಉಪದೇಶವನ್ನೇ ಮುಖ್ಯ ಗುರಿಯಾಗಿಟ್ಟುಕೊಂಡು ಮೂಡಿಬಂದ ಇಂಥ ನಾಟಕಗಳು ಭಾರತೀಯ ಸಂಸ್ಕೃತಿಯ ಜೀವನ ಮೌಲ್ಯಗಳ ಪ್ರತಿಪಾದನೆಯಲ್ಲಿ ಯಶಸ್ವಿಯಾದವು. ಈ ದಿಶೆಯಲ್ಲಿ ನಾಟಕಕಾರ ಜನಪ್ರಿಯವಾದ ವಸ್ತುವನ್ನು ಧರಿಸಿಕೊಂಡು ನಾಟಕ ಅಭಿನಯಿಸುವ ಅವರ ಪ್ರಯತ್ನ ಯಶಸ್ವಿಯಾಗಿ ನಡೆಯಿತು. "ಆಲ್ದಾಳರ ನಾಟಕಗಳಂತೂ ಹೆಣ್ಣಿನ ಹೃದಯವನ್ನು ಗೆಲ್ಲುವಲ್ಲಿ ತುಂಬ ಯಶಸ್ವಿಯಾಗಿವೆ". ಅವರ ನಾಟಕಗಳಲ್ಲಿ ಆಧ್ಯಾತ್ಮಿಕತೆ ಇದ್ದರೂ ಸಮಕಾಲೀನ ಬದುಕಿಗೆ ತೀರ ಹತ್ತಿರವಾಗಿವೆ. ಆಧ್ಯಾತ್ಮ ಮತ್ತು ಪುರಾಣದ ಪ್ರತಿಯೊಂದು ಅಂಗವನ್ನು ಆಳವಾಗಿ ಅಭ್ಯಸಿಸಿದ ಅವರು ಅವುಗಳನ್ನು ತರ್ಕಬದ್ಧವಾಗಿ, ಅರ್ಥಪೂರ್ಣವಾಗಿ ವಿಶ್ಲೇಷಿಸುವ, ಹೊಸ ರೂಪ ಕೊಟ್ಟು ನಿರುಪಿಸುವ ಸೃಜನ ಶೀಲತೆಯನ್ನು ಹೊಂದಿದ್ದಾರೆ. ಈ ಹಿನ್ನಲೆಯಲ್ಲಿ 'ಶ್ರೀ ಗುರುನಂಜೇಶ್ವರ ಮಹಾತ್ಮೆ" ನಾಟಕ ರೂಪುಗೊಂಡಿದ್ದು ಈ ಆಧ್ಯಾತ್ಮಿಕ ನಾಟಕ ನೋಡುವುದು ಒಳ್ಳೆಯದು. ಇದಕ್ಕೆ ಕಾರಣ, ಇಡೀ ನಾಟಕ ದೃಶ್ಯದಿಂದ ದೃಶ್ಯಕ್ಕೆ ಲವಲವಿಕೆಯಿಂದ ಸಾಗುತ್ತದೆ. ಯಾವ ಸಂಭಾಷಣೆಯೂ ತೊಡಕಿಲ್ಲದೆ ಸರಾಗವಾಗಿ ಉಚ್ಚಾರಗೊಂಡು ಭಾವ ಸುಲಭದರಲ್ಲಿ ಪ್ರೇಕ್ಷಕನಿಗೆ ಸಂವಹನವಾಗಲು ಸಹಕಾರಿಯಾಗುತ್ತದೆ. ವೈಚಾರಿಕ ವಿಶ್ಲೇಷಣೆಯಿಂದ ಕೂಡಿದ ಮಾತುಗಳು ಪಾತ್ರಗಳಲ್ಲಿ ಜೀವಂತಿಕೆಯನ್ನು ತುಂಬಿ ಕಳೆಗಟ್ಟುತ್ತವೆ.

"೭೬ರ ವಯೋಮಾನದಲ್ಲಿ ಬಿಡುವಿಲ್ಲದ ವ್ಯಕ್ತಿಯಾಗಿರುವ ಎಲ್‌ಬಿಕೆ ಆಲ್ದಾಳರನ್ನು ಹುಡುಕಿಕೊಂಡುಹೋಗಿ ಶ್ರೀ ಬಸವರಾಜಪ್ಪ ಗೌಡ, ಗುಂಡಪ್ಪಗೌಡ, ಮಾಲೀಪಾಟೀಲ ಮಳಗಿ(ಕೆ) ಲಿಂ. ಶ್ರೀ. ಗುರುನಂಜೇಶ್ವರ ಶಿವಯೋಗಿಗಳ ಕುರಿತು ನಾಟಕವನ್ನು ಬರೆಯಿಸಿ

ಲಕ್ಷರೂಪಾಯಿವೆಚ್ಚದಲ್ಲಿ ರಂಗಭೂಮಿಗೆ ತಂದ ಕೀರ್ತಿ ಪಾಟೀಲರಿಗೆ ಸಲ್ಲುತ್ತದೆ ಅನ್ನೋದಕ್ಕೆ ಎರಡು ಮಾತಿಲ್ಲ–ಇಂಥ ಕಲಾ ಪೋಷಕರಿರುವುದರಿಂದಲೇ ರಂಗಭೂಮಿ ಇಂದು ಜೀವಂತವಾಗಿ ಉಳಿದಿದೆ. ಅಷ್ಟೆ ಅಲ್ಲದೆ ನಾಟಕವನ್ನು ಪ್ರಕಟಿಸಿ ಉಪಕಾರಗೈದಿದ್ದಾರೆ."[೮೦]

# ಜಮಖಂಡಿ ಶಿವಶರಣ ಅಯ್ಯಣ್ಣ ಮುತ್ಯಾಮಹಾತ್ಮೆ

(ಆಧ್ಯಾತ್ಮಿಕನಾಟಕ)

**"ಸಗರನಾಡಿನಾ ಜಮಖಂಡಿಪುರದಲಿ।**
**ಮಲ್ಲಯ್ಯ ನೆನದಾನೋ ಮೈಲಾರಲಿಂಗ॥**
**ಸುತ್ತಿಮುತ್ತಿದಾ ಕತ್ತಲೆ ಕಳೆದು।**
**ಬೆಳಕನು ನೀಡ್ಯಾನೋ ಮೈಲಾರಲಿಂಗ**

**ಶರಣಪ್ಪಗೌಡ ಶರಣಮ್ಮಗೌಡತಿ**
**ಸತಿಪತಿ ಸಂಸಾರೋ।ಮೈಲಾರಲಿಂಗ।**
**ಗೌಡರವಂಶದ ದೀಪಬೆಳಗೆಂದು**
**ಹೇಳ್ಯಾರೋ। ಮೈಲಾರಲಿಂಗ**
**ಏಳುಕೋಟಿ ಏಳುಕೋಟಿಗೆ"** [೮೧]

"ಘಳಿಗೆ ಘಳಿಗೆಯನು ಘನತೆ ಗೌರವಕ್ಕೆ ಮೀಸಲಿಟ್ಟು ಒಳಿತು ಕೆಡಕಿನ ಬಗ್ಗೆ ಸದಾ ಎಚ್ಚರವಹಿಸಿ ಭದ್ರತೆಯ ಬಾಳುನಡೆಸಿದ ಪ್ರೀತಿಯ ಕನ್ನಡಮ್ಮನ ವರಪುತ್ರರಾಗಿರುವ, ಕನ್ನಡಕ್ಕೆ ಒಲಿದ ಶ್ರೀ ಲಾಲ್ ಮಹ್ಮದ ಬಂದೇನವಾಜ ಖಲೀಫ್ ಆಲ್ದಾಳರು ಯಾರಿಗೆ ತಾನೇ ಹೊಸಬರು ಹಸನಾದ ವ್ಯಕ್ತಿತ್ವ ಬೆಳೆಸಿಕೊಂಡ ಶುಭ್ರರು"[೮೨] ಅಂತಲೇ ಅವರ ಈ ಆಧ್ಯಾತ್ಮಿಕ ನಾಟಕ 'ಜಮಖಂಡಿ ಶಿವಶರಣ ಅಯ್ಯಣ್ಣ ಮುತ್ಯಾಮಹಾತ್ಮೆ' ಅಷ್ಟೇ ಓದುಗರನ್ನು, ವೀಕ್ಷಕರನ್ನು ತಟ್ಟಲಿದೆ.

ಜಮಖಂಡಿಯ ಅನುಭಾವಿ ಹಾಗೂ ಖ್ಯಾತ ನಾಟಿವೈದ್ಯ ಶಿವಶರಣ ಅಯ್ಯಣ್ಣ ಮುತ್ಯಾ ಅವರ ಬದುಕನ್ನು ನಾಟಕ ಹೊರ ಹೊಮ್ಮಿಸುತ್ತಿದೆ. ಶರಣಮ್ಮ ಗೌಡತಿ ಮತ್ತು ಶರಣಪ್ಪಗೌಡ ದಂಪತಿಗಳಿಗೆ ಮಕ್ಕಳ ಭಾಗ್ಯ ದೊರಕದ್ದರಿಂದ ಬಹು ಚಿಂತಿತರಾಗಿ ಕಾಲನೂಕುತ್ತಿದ್ದರು. ಮೈಲಾರ ದೇವಸ್ಥಾನಕ್ಕೆ ಆಗಮಿಸಿದ ದಂಪತಿಗಳು ಎಲ್ಲವನ್ನು ಕೊಟ್ಟಿ ಅಪ್ಪ ಆದರೆ ನನಗಿರುವ ತೊಂದರೆ ಎನೆಂಬುದು ಬಲ್ಲವರಾದ, ನನ್ನ ಅಂತರಂಗದ ನೋವನ್ನು ಹೇಗೆ ಹೇಳಲಿ ಎಂದು ಶರಣೆ ಶರಣಮ್ಮ ಗೌಡತಿ ತನ್ನ ಮನದ ನೋವನ್ನು ಹೀಗೆ ತೋಡಿಕೊಳ್ಳುತ್ತಾಳೆ.

"ಶರಣಮ್ಮಗೌಡತಿ: ದೇವಾ ಮೈಲಾಪುರದ ಮಲ್ಲಯ್ಯಾ! ಬಿಡದೆ ಮೂವತ್ತು ವರುಷದಿಂದ ನಿನ್ನ ಪೂಜೆ ಮಾಡುತ್ತ ಬಂದಿರುವೆ. ನನ್ನ ಬರಿದಾದ ಹುಡಿತುಂಬು. ಜಮಖಂಡಿಗೌಡರ ಮನೆತನದ ವಂಶದ ಜ್ಯೋತಿ ಬೆಳಗಿಸು. ಮದುವೆಯಾಗಿ ಮೂವತ್ತು ವರುಷವಾದರೂ ಕಂದನ ಕಾಣುವ ಭಾಗ್ಯ ನನ್ನದಾಗಲಿಲ್ಲ. ಕಣ್ಣೀರು ಕೋಡಿಯಾಗಿ ಹರಿಯೂದು ತಪ್ಪಲಿಲ್ಲ ನೀ ನೋಲಿದರೆ ಏನಿಲ್ಲ? ಎಲ್ಲವೂ ಉಂಟು ಕೊರಡು ಕೊನರುವುದು, ಹೂ ಅರಳುವುದು, ಬರಡು ಹಯನವಾಗಿ, ಹಾಲಿನ ಮಳೆ ಹರಿಯುವುದು, ಕೃಪಾಸಾಗರಾ, ದಯಾಸಿಂಧು ನನ್ನ ಮೊರೆಕೇಳು ಬಂಜೆಎಂಬ ಅಪವಾದದಿಂದ ಮುಕ್ತಳನ್ನಾಗಿಸು".[೮೩]

"ಶರಣಪ್ಪಗೌಡ: ಮೈಲಾರ ಮಲ್ಲಯ್ಯಾ! ಶ್ರೀಶೈಲಮಲ್ಲಿನಾಥ ಮುಗ್ದ ಗೊಲ್ಲಾಳನ ಭಕ್ತಿಗೆ ಮೆಚ್ಚಿ ಕುರಿಯ ಹಿಕ್ಕೆಯಲ್ಲಿ ಲಿಂಗರೂಪದಲ್ಲಿ ದರುಶನ ನೀಡಿರುವೆ, ಭಕ್ತ ಸಿರಿಯಾಳನ ಬಾಗಿಲವ ಕಾಯ್ದಿರುವಿ ಹೇಮರೆಡ್ಡಿ ಮಲ್ಲಮ್ಮಳು ಕೊಟ್ಟ ಹಳಸಿದ ಅಂಬಲಿಯನು ಕುಡಿದು ಗೋವುಗಳನ್ನು ಕಾಯ್ದಿರುವಿ, ನಿಜಗುಣ ಶಿವಯೋಗಿಗಳ ಮಾತಿನಂತೆ ನಾವು ಹಿಡಿದ ವ್ರತವನ್ನು ಬಿಟ್ಟಿಲ್ಲ ತಂದೆ ನಿನ್ನ ಜಪಧ್ಯಾನ ತಪ್ಪಿಲ್ಲ".[೮೪]

ದಂಪತಿಗಳ ಪರಿಪರಿಯ ಬೇಡಿಕೆಯನ್ನು ಕೇಳಿ, ತಿಳಿದು ಮೈಲಾರಲಿಂಗನು ತೋರಿದ ಕರುಣೆಯಿಂದ ಶರಣಮ್ಮ ಗೌಡತಿಯ ಉಡಿಯಲ್ಲಿ ಹೂ ಬೀಳುತ್ತದೆ. ಗೌಡತಿ ಗರ್ಭವತಿಯಾಗಿ ಜಮಖಂಡಿಗೌಡರ ವಂಶ ಬೆಳಗಿಸುತ್ತಾಳೆ.

**ನವಮಾಸ ಹೊತ್ತ ನವಬ್ಯಾನಿತಿಂದು।**
**ಪುತ್ರನ ಪಡೆದಾರೋ। ಮೈಲಾರಲಿಂಗ।** [೮೫]

"ಈ ಸಗರಾದ್ರಿ ಪುಣ್ಯ ವನದಲ್ಲಿ ಚರಿಸುವವರೇ ಧನ್ಯರು, ಇಲ್ಲಿಯ ಮಣ್ಣಿನ ಪುಣ್ಯ ಹಣ್ಣಾದಾಗ ಹರಗುರು ಚರಮೂರ್ತಿಗಳು, ಶರಣ, ಸಂತ ಶಿವಯೋಗಿಗಳು, ಸತ್ಪುರುಷರು ಫಕೀರರು ಜನ್ಮತಾಳಿ, ಈ ಭೂಮಿಯ ಋಣವನ್ನು ತೀರಿಸಿದ್ದಾರೆ. ಈಗ ಶರಣಪ್ಪಗೌಡ ಶರಣಮ್ಮ ಗೌಡತಿಯವರ ಪುಣ್ಯೋಧರದಲ್ಲಿ ಈ ಹಿಂದೆ ನಾವಿತ್ತ ಉತ್ತುತ್ತಿಯ ಫಲದಿಂದ ಪುತ್ರ ಸಂತಾನದ ಉತ್ಪತ್ತಿ" [೮೬] ಯಾಗಿದೆ ಎಂದು ಗೌಡರ ಮನೆತನದ ಗುರುಗಳಾದ ಕಲ್ಮೇಶ ಶಿವಾಚಾರ್ಯ ಅವರು ಹಿಂದೆ ನಡೆದ ಘಟನೆಯನ್ನು ಸ್ಮರಿಸಿಕೊಂಡರು, ಅಲ್ಲದೇ ತೊಟ್ಟಿಲು ಕಾರ್ಯಕ್ರಮಕ್ಕೆ ಗೋಗಿ ಊರಿನಿಂದ ಆಗಮಿಸಿ ತಾವೇ ಕಂದನಿಗೆ ಅಯ್ಯಪ್ಪನೆಂದು ನಾಮಕರಣ ಮಾಡಲು ಹೇಳಿದರು.

"**ಕಲ್ಮೇಶ ಶಿವಾಚಾರ್ಯ** : ಶರಣಪ್ಪ ಗೌಡರೇ ನಿಂಬೆಹಣ್ಣಿನ ರಸದಲ್ಲಿ ಸಕ್ಕರೆ ಬೆರೆಸಿದಾಗ, ಹುಳಿ ಸಿಹಿಗಳ ಮಿಶ್ರಣದಿಂದ ಸ್ವಾರಸ್ಯವಾದ ರುಚಿಯನ್ನು ಕೊಟ್ಟಂತೆ, ನಿಮ್ಮ ಮಗನ ವಿರಕ್ತ ಭಾವದ ಪಾನಕದಲ್ಲಿ ಔಷಧೋಪಚಾರಗಳನ್ನು ಮಾಡುವ ಆಸಕ್ತಿ ಕೂಡಿದಾಗ ಅದನ್ನು ಬೆಳೆಸಿಕೊಂಡಾಗ ಈ ನಾಡಿಗೊಬ್ಬನೇ ವೈದ್ಯನೆಂದು ಪ್ರಸಿದ್ಧಿ ಪಡೆಯುತ್ತಾನೆ. ಅಲ್ಲದೆ ಪ್ರಪಂಚ ಪಾರಮಾರ್ಥಗಳೆರಡು ಸಮ್ಯೆಗ್ದರ್ಶನದಲ್ಲಿ ಶರಣಸಂಕುಲದ ಶಿಖಾಮಣಿ ಎನಿಸಿಕೊಳ್ಳುತ್ತಾನೆ, ಬಡವರಬಂಧುವಾಗಿ ಶ್ರೀಮಂತರ ಸಖನಾಗಿ ಅಂಧ ಅನಾಥ ಅಂಗವಿಕಲರ ಅಂಗರಕ್ಷಕನಾಗಿ ಕಂಗೊಳಿಸುತ್ತಾನೆ.

ಗುರುಗಳ ಮಾತನ್ನು ಕೇಳಿಸಿಕೊಂಡ ದಂಪತಿಗಳಿಗೆ ಎಲ್ಲಿಲ್ಲದ ಆನಂದವಾಗಿ ಎಲ್ಲದಕ್ಕೂ ತಮ್ಮ ಕೃಪೆಯೇ ಕಾರಣ ಮಕ್ಕಳಿಲ್ಲದೆ ಪರಿತಪಿಸುವ ಈ ಗೌಡರ ಮನೆತನಕ್ಕೆ ನಂದಾದೀಪ ಬೆಳಗಿಸಿದ ಕೀರ್ತಿ ನಿಮ್ಮದು ಎಂದರು.

ಬಾಲ ಅಯ್ಯಪ್ಪ ಗುರುಗಳು ಹೇಳಿದ ಪಾಠಗಳನ್ನು ಮನನಮಾಡಿಕೊಂಡು ತಾನು ಕಲಿತುದುದನ್ನು ಒಪ್ಪಿಸಿ ಶಹಾಬ್ಬಸ ಗಿರಿ ಪಡೆಯುತ್ತಿದ್ದ ಆತನ ಜ್ಞಾಪಕಶಕ್ತಿ, ಬುದ್ಧಿ ಅಷ್ಟೊಂದು ಚುರುಕಾಗಿತು. ಹೇಳಿದುದ್ದನ್ನೆ ಕಂಠಮಾಡಿ ಹೇಳುವ ಅತಿ ಬುದ್ಧಿವಂತನಾಗಿದ್ದ, ಆತನ ಬುದ್ಧಿಮತ್ತೆಗೆ ಗುರುಗಳು ಹೇಳುತ್ತಾರೆ,

"**ಕಲ್ಮೇಶ ಶಿವಾಚಾರ್ಯರು** : ಜಗದ ಮಕ್ಕಳಂತೆ ನಿನ್ನ ಮಗನಲ್ಲ ಜಗದ ಜಂಗ(ತುಕ್ಕು)ಅನ್ನು ತೊಳೆದ 'ಅಯ್ಯನವರ ಅಪ್ಪಲ್ಲ ತಾತನವರು' ಈತನ ಸ್ಪರ್ಶದಿಂದಲೇ ರೋಗಗಳು ದೂರಾಗುತ್ತವೆ. ಭೂತ ಪಿಶಾಚಿಗಳು ಓಡುತ್ತವೆ. ಮಂತ್ರವಾದಿಗಳು ಮೂಲೆ ಗುಂಪಾಗುತ್ತಾರೆ. ಅಂತ ದಿವ್ಯ ಶಕ್ತಿಯನ್ನು ಪಡೆದಿದ್ದಾನೆ ನಿನ್ನಮಗ".[೮೭]

"**ಅಯ್ಯಪ್ಪ** : ವಿಭೂತಿ ಧರಿಸಿದೊಡೆ ಮಲತ್ರಯಂಗಳು ಮಾಯವಾಗುವವು ರುದ್ರಾಕ್ಷಿ ಧರಿಸಿದೊಡೆ, ತಾಮಸವೃತ್ತಿ ಅಳಿಯುವುದು, ಲಿಂಗಧರಿಸಿದೊಡೆ, ಅಂತರಂಗಶುದ್ಧಿ ಯಾಗುವುದು ಬಹಿರಂಗ ಬಲಗೊಳ್ಳುವುದು, ಗುರುವಿಗೆ ಪೂಜಿಸಿದರೆ ಭವಪಾಶ ಹರಿದು ಹೋಗುವುದು, ಜನನ ಮರಣದೂರಾಗುವುದು ಅಲ್ಲವೇ ಗುರುಗಳೇ". [೮೮]

"ಒಂದು ಕಡೆಗೆ ಬುದ್ಧಿಯ ಸಂಸ್ಕಾರ, ಇನ್ನೊಂದುಕಡೆ ಹೃದಯಕ್ಕೆ ಸಂಸ್ಕಾರ ಈ ಎರಡು ಕಡೆಯ ಸಂಸ್ಕಾರಗಳಿಂದ ಪರಿಪಕ್ವವಾಗತಕ್ಕದ್ದು; ಜೀವನದ ಅಂತರಂಗ, ಹೀಗೆ ಪರಿಪಕ್ವವಾದ ಜೀವಜಗತ್ತಿನೊಳಗೆ ಉಸಿರಿರುವ ಸುಗಂಧ".[೮೯] ಈ ಸುಗಂಧ ಹರಡುವಿಕೆಯಿಂದ ಎಲ್ಲಾ ಪರಿಸರವೂ ಪರಿಶುದ್ಧ, ಪವಿತ್ರ ಮತ್ತು ಆಹ್ಲಾದಕರ, ಇಂಥದರಲ್ಲಿ ಹುಟ್ಟಿ, ಬೆಳೆದು ಬಂದ ಆಲ್ದಾಳರು ಒಬ್ಬರು ಎಂದು, ಡಾ.ಹಾ.ಮಾ. ನಾಯಕರು ಡಾ.ಎಚ್.ತಿಪ್ಪೇರುದ್ರಸ್ವಾಮಿಗಳವರ ಕುರಿತು ಹೇಳಿರುವ ಮಾತುಗಳನ್ನು ಇಲ್ಲಿ ಉಲ್ಲೇಖಿಸಿದರೆ ತಪ್ಪಾಗದು.

ನಾಟಕದಲ್ಲಿ ಬರುವ ಕಲ್ಮೇಶ ಶಿವಾಚಾರ್ಯರ ಮತ್ತು ಅಯ್ಯಪ್ಪ ಅವರ ಸಂವಾದಗಳು ಆಲ್ದಾಳ ಅವರ ಗುಣ–ಸ್ವಭಾವ, ಪ್ರತಿಭೆಯನ್ನು ಹೊರಸೂಸುತ್ತಿವೆ.

"**ಕಲ್ಮೇಶಶಿವಾಚಾರ್ಯ** : ಅಯ್ಯಪ್ಪ ನಿನ್ನವು ಎಂಥ ಅನುಭವದ ಉಕ್ತಿಗಳಿವು, ನನ್ನ ಆಶ್ರಮಕ್ಕೆ ಇವನು ಬಂದಿರುವನೋ, ಏನು ಇವನ ಆಶ್ರಮಕ್ಕೆ ನಾನು ಹೋಗಿರುವನೋ ಒಂದು ತಿಳಿಯದಂತಾಗಿದೆ. ಗುರುವಾಗಿ ನಾನು ಹೇಳ ತಕ್ಕಂಥ ವಿಷಯಗಳನ್ನೆಲ್ಲ ಈತನೇ ಹೇಳತೊಡಗಿದ್ದಾನೆ. ಎಂಥ ನಿಶಿತಮತಿ ಈತ ಲೋಕಾನುಭವದ ಕರಂಡಕವೇ ಆಗಿದ್ದಾನೆ. ತಾಯಿ! ಶರಣಮ್ಮಗೌಡತಿ ಇಂಥ ಮಕ್ಕಳು ಹುಟ್ಟುವುದು ಅತಿವಿರಳ, ಹುಟ್ಟಿದರೂ ನೂರಕ್ಕೊಬ್ಬರು, ಸಾವಿರಕೊಬ್ಬರು ಕೋಟಿಗೊಬ್ಬರು ಹುಟ್ಟಿಬೆಳಗುತ್ತಾರೆ".[೯೦]

ಜಮಖಂಡಿಯ ಅನುಭಾವಿ ಹಾಗೂ ಖ್ಯಾತನಾಟಿ ವೈದ್ಯ ಶಿವಶರಣ ಅಯ್ಯಣ್ಣ ಮುತ್ಯಾರ ಬದುಕನ್ನು ಎಲ್.ಬಿ.ಕೆ.ಆಲ್ದಾಳರು ಓದುಗರ, ನೋಡುಗರ ಚಿತ್ತ ಭಿತ್ತಿಯಲ್ಲಿ ಅಚ್ಚೊತ್ತಿದಂತೆ ಮೂಡಿಸಿದ್ದಾರೆ. ಕಥಾನಾಯಕ ಅಯ್ಯಣ್ಣ ಮುತ್ಯಾರವರು ಜಮಖಂಡಿಯ ಜೋಡು ಪಟ್ಟೇದಾರರಿದ್ದರೂ ಶರಣ ಮಾರ್ಗದ ಹರಿಕಾರರಾಗಿ ತಮ್ಮ ಆತ್ಮೋನ್ನತಿಯ ಜನಹಿತಕ್ಕೋಸ್ಕರ ತಮ್ಮ ಬದುಕನ್ನ ಮೀಸಲಿರಿಸಿದವರು. ಯಾವುದೇ ಬೇನೆ, ಬೇಸರಿಕೆಗಳಿಗೆ, ಮೈಯಲ್ಲಿ ಕಾಡುವ ಗಡ್ಡೆ ಉಳುಕಿಗೆ ಇವರು ಮಂತ್ರಿಸಿದ ತುಪ್ಪ ಅಥವಾ ಎಣ್ಣೆಯ ಲೇಪನ ದಿವ್ಯ ಔಷಧದಂತೆ ಕೆಲಸ ಮಾಡಿರುವ ದೃಷ್ಟಾಂತಗಳಿವೆ.

ಜೇವರ್ಗಿಯ ಹತ್ತಿರದ ಕೂಡಗಿಯ ಸೂಫಿ ಸಂತರಾದ ಬಾಬಾಸಾಹೇಬರು ಎಂದೇ ಹೆಸರು ಮಾಡಿದ ಇವರು ಶ್ರೀಅಯ್ಯಣ್ಣ ಮುತ್ತ್ಯಾರಿಗೆ ಆಧ್ಯಾತ್ಮಿಕ ಪಥತೋರಿಸಿ ನಾಟಿ ವೈದ್ಯಕೀಯ ವಿದ್ಯೆಯನ್ನು ಕಲಿಸಿದರು. ಅವರಲ್ಲಿನ ಶೃದ್ಧೆ ಭಕ್ತಿಗಳು ಅಯ್ಯಣ್ಣ ಮುತ್ಯಾರವರನ್ನು ಲೋಕೋಪಕಾರಿಯಾಗಲು ಕಾರಣವಾದವು.

**"ಎಣ್ಣೆಯಿಂದಲೇ ಹುಣ್ಣು ಮಾಹಿಸಿದ ವೈದ್ಯ।**
**ತುಪ್ಪದಿಂದಲೇ ಕಲ್ಲು। ಕರಗಿಸಿದಾರಾಧ್ಯ।**
**ಸುರುಪೂರ ದೊರೆಯಿಂದ ಮನ್ನಣೆಯಪಡೆದ।**
**ಸೂಫಿ ಸಂತ ಕೂಡಿಗಿ ಬಾಬಾ ಸಾಹೇಬರಿಂದ**
**ಉಪದೇಶಪಡೆದ"** [೯೧]

ಅಯ್ಯಣ್ಣಮುತ್ತ್ಯಾ ಅನುಷ್ಠಾನ ನಿರತರಾದಾಗ ಬಾಬಾ ಅವರು ಅಯ್ಯಣ್ಣ ಮುತ್ಯಾ ಅವರ ತಂದೆ–ತಾಯಿಗಳಿಗೆ ಹೇಳಿದಂತೆ ನಡೆದುಕೊಳ್ಳಲು ಏಳೂರ ಸೀಮೆ ದಾಟಿ ಬಂದಿದ್ದಾರೆ. ಬಾಬಾ ಅವರು ತಮ್ಮಲ್ಲಿರುವ ವೈದ್ಯವಿದ್ಯೆಯ ಸಂಪತ್ತನ್ನು ಅಯ್ಯಣ್ಣ ಮುತ್ಯಾರಿಗೆ ಎರೆದು ಮರ ಮತ್ತು ಬೇರುಗಳ ಸಂಬಂಧದಂತೆ ಬಾಬಾ ಅನುಗ್ರಹಿಸುತ್ತಾರೆ. ಅವರಲ್ಲಿನ ಶೃದ್ಧೆ, ಭಕ್ತಿಗಳು ಅಯ್ಯಣ್ಣ ಮುತ್ಯಾರವರನ್ನು ರೋಗ ಪೀಡಿತ ಜನರು ಹುಡುಕಿಕೊಂಡು ಬರಲು ಕಾರಣವಾದವು ಅಲ್ಲದೆ ಅವರ ಔಷಧಿಯಿಂದ ರೋಗ ನಿವಾರಿಸಿಕೊಂಡು ಸುಖ–ಸಂತೋಷದಿಂದ ಬಾಳುವೆ ಮಾಡಲು ಅನೇಕರಿಗೆ ವರದಾನವಾಯಿತು. ಅಯ್ಯಣ್ಣಮುತ್ಯಾ ಅವರ ಔಷಧದ ಉಪಯುಕ್ತತೆ ಬಗ್ಗೆ ರಾಷ್ಟ್ರಪತಿ ಪ್ರಶಸ್ತಿ ಪುರಸ್ಕೃತರಾದ ಗೋಗಿಯ ಸಾಹಿತಿ ಹಾಗೂ ನಿವೃತ ಶಿಕ್ಷಕ ಶ್ರೀ ಡಿ.ಎನ್.ಅಕ್ಕಿ ಹೀಗೆ ನುಡಿಯುತ್ತಾರೆ. "ನಮ್ಮ ಹಿರಿಯರು ನಾವು ಕೂಡಾ ಜಮಖಂಡಿಯ ಅಯ್ಯಣ್ಣ ಮುತ್ತ್ಯಾನ ಭಕ್ತವೃಂದದಲ್ಲಿ ಒಬ್ಬರು ನಮ್ಮ ಮನೆಯಲ್ಲಿ ಮಂತ್ರಿಸಿದ ಮೀಸಲು ತುಪ್ಪದ ಕುಡಿಕೆಯನ್ನು ಬಟ್ಟೆಯಿಂದ ಮುಚ್ಚಿ ನೆಲತಾಗದಂತೆ ಅಂತರಲೆ ಜಂತಿಗೆ ಸದಾ ಕಟ್ಟಿರುತ್ತಿದ್ದರು, ಯಾರಿಗೆ ಅನಾರೋಗ್ಯ, ಗಡ್ಡೆ, ಚರ್ಮವ್ಯಾಧಿ ಬಂದಾಗ ಅಯ್ಯಣ ಮುತ್ತ್ಯಾ ಅವರ ಗದ್ದುಗೆಯಿಂದ ತಂದ ತುಪ್ಪ ರಾಮಬಾಣವಾಗಿತ್ತು".[೯೨] ಎಂದು ತುಪ್ಪದ ಮಹತ್ವ ಹೇಳಿದ್ದಾರೆ.

ಭಾರತದ ಸಂಸ್ಕೃತಿ ಬೆಳೆದದ್ದೆ ಧರ್ಮದ ತಳಹದಿಯ ಮೇಲೆ, ಲೋಕೋಪಕಾರವನ್ನೇ ಜೀವನದ ಉಸಿರಾಗಿಸಿಕೊಂಡಿದ್ದ ಅಂದಿನ ನಮ್ಮ ಪೂರ್ವಿಕರು ತಾವು ಬಾಳಿ ಇತರರು ಬದುಕಲು ಆಸ್ಪದ ನೀಡಿದರು. ಅಂಥ ಪುಣ್ಯಪುರುಷರ ಸಾಲಿನಲ್ಲಿ ಶ್ರೀ ಅಯ್ಯಣ್ಣ ಮುತ್ತ್ಯಾರವರು ಒಬ್ಬರಾಗಿ ಸೇರುತ್ತಾರೆ.

ಋಷಿ–ಸಂತರು–ಶರಣರು–ಮಹಾತ್ಮರು ಮಾನವಲೋಕದ ಮಹಾಗುರುಗಳು, ಬದುಕಿನಲ್ಲಿ ಇಂಥವರ ಅಧ್ಯಯನದಿಂದ ಜನರಲ್ಲಿರುವ ಅವಗುಣ ಅಳಿದು ಮನಸ್ಸು ಶುದ್ಧಗೊಳ್ಳುತ್ತದೆ.

ಅಯ್ಯಪ್ಪಮುತ್ತ್ಯಾ ಅವರಿಗೆ ತಮ್ಮ ಅಂತಿಮ ದಿನಗಳು ಸಮೀಪಿಸಿವೆ ಎಂದು ಅರಿವು ಮೂಡುತ್ತಲೆ ಸಾಧ್ವಿ ಪತ್ನಿ ಬಸವಾಂಬೆಗೆ 'ನನಗಿನ್ನು ಅಪ್ಪಣೆಕೊಡು ಹೋಗಲು' ಎನ್ನುತ್ತಾರೆ. ಅಳಬೇಡ ಬಸವಾಂಬೆ ಈ ಹುಟ್ಟುಸಾವುಗಳು ನಿರಂತರ ಅದಕ್ಕೆ ತಡೆಹಿಡಿಯುವ ಶಕ್ತಿ ಯಾರಿಗೂ ಇಲ್ಲ.

"**ಬಸವಾಂಬೆ** : ನನ್ನೊಬ್ಬಳಿಗೆ ಬಿಟ್ಟು ಹೋಗ್ತಿರಾ, ಜೊತೆಯಲ್ಲಿ ನನಗೂ ಕರೆದುಕೊಂಡು ಹೋಗಿರಿ.

**ಅಯ್ಯಪ್ಪ** : ಗೌಡತಿ ಬಳ್ಳಿಗೆ ಹಲವಾರು ಕಾಯಿಗಳು ಬಿಟ್ಟಿವೆ, ಅವೆಲ್ಲ ಒಮ್ಮೆಲೆ ಪರಿಪಕ್ವವಾಗುವುದಿಲ್ಲ. ಆ ಫಲಗಳು ಪಕ್ವವಾಗಿ ಆಯುಮಾನದ ಪ್ರಕಾರ ಕಳಚಿ ಬೀಳುತ್ತವೆ. ಅದರಂತೆ ನನ್ನದೀಗ ಜಗದ ಬಳ್ಳಿಯ ತುಂಬಿನಿಂದ ಕಳಚಿ ಬೀಳುವ ಕಾಲ ಸನ್ನಿಹಿತವಾಗಿದೆ"[೯೩] ಎಂದುಸಮಾಧಾನಿಸುತ್ತಾರೆ. ಓಂ ನಂಃ ಶಿವಾಯ ಅನ್ನುತ್ತಿದ್ದಂತೆ ಅಯ್ಯಪ್ಪಮುತ್ತ್ಯಾ ಲಿಂಗೈಕ್ಯರಾಗುತ್ತಾರೆ.

ಕೆಟ್ಟವರು ಒಳ್ಳೆಯವರಾಗ ಬೇಕಾದರೆ ಸತ್ಸಂಗದಿಂದ ಶರಣರ ಚರಿತ್ರೆಗಳು ಓದುವುದರಿಂದ ದೃಶ್ಯಕಲೆಗಳಲ್ಲಿ ಭಾಗಿಯಾಗುವುದರಿಂದ ಅನ್ನೋದಕ್ಕೆ ಜೇವರ್ಗಿ ತಾಲೂಕಿನ ಜಮಖಂಡಿಯ "ಶಿವಶರಣ ಅಯ್ಯಪ್ಪಮುತ್ತ್ಯಾ' ಅವರ ನಾಟಕವೇ ಸಾಕ್ಷಿ, ಪರಮಪೂಜ್ಯ, ಪವಾಡಪುರುಷ ಶ್ರೀ ಅಯ್ಯಪ್ಪಮುತ್ತ್ಯಾರವರ ಬದುಕಿನಲ್ಲಿ ಮೈಲುಗಲ್ಲಾಗಿ ಬರುವ ಅದೇ ಗ್ರಾಮದ ಶ್ರೀನಿವಾಸ ಕುಲಕರ್ಣಿಯವರು ಮುತ್ತ್ಯಾರವರೊಡನೆ ವೈರದ್ವೇಷ ಸಾಧಿಸಿ ಕೊನೆಗೆ ಶರಣಾಗುತ್ತಾನೆ ಶರಣರಿಗೆ.

"**ಕುಲಕರ್ಣಿ** : ಅಯ್ಯಪ್ಪಮುತ್ತ್ಯಾ ಸಭಾಂಗಣದಲ್ಲಿ ತಾರಾವಳಿ, ಧರಾಂಗಣದಲ್ಲಿ ದೀಪಾವಳಿ, ದಿವ್ಯಾಂಗಳದಲ್ಲಿ ಭಕ್ತ ಸುಮಾವಳಿ ಧನ್ಯ ಧನ್ಯ ತಂದೆ ಜಡದಲ್ಲಿ ಚೇತನಾ ಹೃದಯವನ್ನು ಬೆಳಗಿದ ನಿನ್ನ ಶ್ರೀ ಚರಣಕ್ಕೆ ನಮಿಸುವೇನು ತಂದೆ! ಕ್ಷಮಿಸು ತಂದೆ ಈ ಶ್ರೀನಿವಾಸ ಕುಲಕರ್ಣಿಗೆ"[೯೪] ಇದುವೇ ನಾಟಕದ ತಿರುಳು ತಪ್ಪಿಗೆ ಶೀಕ್ಷೆಯೇ ಕ್ಷಮೆಯಾಗಿರುವುದು ಭಾರತೀಯರ ಧರ್ಮವಾಗಿದೆ. ಇದೇ ಸಜ್ಜನರ ನ್ಯಾಯ.

ನಾಟಕಕಾರ ಆಲ್ದಾಳ ಅವರ ಬತ್ತಳಿಕೆಯಲ್ಲಿರುವ ಒಂದೊಂದು ಬಾಣವೂ ದೈವಿ ಶಕ್ತಿಯನ್ನು ಇಲ್ಲವೆ ಪವಾಡಗಳನ್ನೇ ಸೃಷ್ಟಿಸಿ ಜನರ, ವೀಕ್ಷಕರ ಮನಸ್ಸಿಗೆ ತೃಪ್ತಿ ದೊರಕುವಂತೆ ಮಾಡುತ್ತಾರೆ. ದುಡ್ಡುಕೊಟ್ಟು ರಂಗಭೂಮಿ ಪ್ರವೇಶ ಮಾಡಿದವರು ಅಲ್ಲಿರುವ ವೈವಿಧ್ಯಮಯ ದೃಶ್ಯಗಳು, ಸಂವಾದಗಳು, ದುಃಖ–ಸುಖ, ಪಶ್ಚಾತಾಪ, ಅಹಂಕಾರ ಇತ್ಯಾದಿ ಪಾತ್ರಗಳನ್ನು ಕಂಡು, ಅವರುಗಳ ಸಂಭಾಷಣೆ ಕೇಳಿಕೊಂಡು ತಮ್ಮನ್ನು ತಾವೇ ಪ್ರಶ್ನಿಸಿಕೊಳ್ಳುತ್ತ ಯಾವ ಪಾತ್ರ, ಯಾರನಟನೆ, ಯಾರ ಸಂವಾದ ನಮಗೆ ಅನ್ವಯವಾಗುತ್ತದೆ? ಅಂದಾಗ ಮಾತ್ರ ನಾಟಕದಮೌಲ್ಯ ಹೆಚ್ಚಾಗುತ್ತದೆ. ನಾಟಕದ ಘನತೆ, ಗೌರವಗಳು ಪಾತ್ರಗಳ ರಚನೆಯಲ್ಲಿಯೇ ಅಡಕವಾಗಿರುತ್ತದೆ ಇದನ್ನು ಅರಿತೇ ಆಲ್ದಾಳರು ಕೃತಿ ರಚಿಸುತ್ತಾರೆ.

ನಾಟಕಕಾರ ಆಲ್ದಾಳ ಅವರು 'ಜಮಖಂಡಿ ಶಿವಶರಣ ಅಯ್ಯಣ್ಣ ಮುತ್ತ್ಯಾಮಹಾತ್ಮೆ' ನಾಟಕವನ್ನು ರಚಿಸಿದ್ದು ತೀರಾ ಇತ್ತೀಚೆ ಮುದ್ರಣಗೊಂಡದ್ದು ೨೦೧೩ನೇ ಇಸ್ವಿಯಲ್ಲಿ ೩೧ ದೃಶ್ಯಗಳ ಈ ನಾಟಕ ಅಧ್ಯಾತ್ಮಿಕ ತತ್ವಗಳನ್ನು ಹೊಂದಿದೆ. ಜೇವರ್ಗಿ ತಾಲೂಕಿನ ಜಮಖಂಡಿ ಶಿವಶರಣ ಅಯ್ಯಣ್ಣಮುತ್ತ್ಯಾರ ಸಾರ್ಥಕ ಜೀವನವನ್ನು ಆಲ್ದಾಳ ಅವರು ತಮ್ಮ ಲೇಖನಿಯಲ್ಲಿ ಸೆರೆಹಿಡಿದು ಓದುಗರಿಗೆ, ಪ್ರೇಕ್ಷಕರಿಗೆ ಪ್ರದರ್ಶಿಸಿದ್ದಾರೆ.

# ಜೇವರ್ಗಿ ಜ್ಯೋತಿ ಶ್ರೀ ಷಣ್ಮುಖ ಶಿವಯೋಗಿ

"ಕಲಬುರುಗಿ ಜಿಲ್ಲೆಯ ಜೇವರ್ಗಿ ಮಠದ ಶ್ರೀ ಷಣ್ಮುಖ ಶಿವಯೋಗಿಗಳು ನಾಡುಕಂಡ ಶ್ರೇಷ್ಠವಚನಕಾರರು, ಹನ್ನೆರಡನೇ ಶತಮಾನದ ನಂತರ ಶರಣರಲ್ಲಿ, ವಚನಕಾರರಲ್ಲಿ ಬಹುದೊಡ್ಡ ಹೆಸರು ಶ್ರೀಗಳದು ಅವರ ವಚನಗಳಲ್ಲಿ ಲೋಕಾನುಭವವಿದೆ. ತಾತ್ವಿಕ ಹಿನ್ನಲೆ ಇದೆ. ಬದುಕಿಗೆ ದಾರಿ ಇದೆ ಬೆಳಕಿದೆ".[೬೫]

**"ಸ್ವಯಂ ಜ್ಯೋತಿಶ್ರೀ । ಷಣ್ಮುಖ ಶಿವಯೋಗಿಶಾ ॥**
**ನುಡಿ ಎಡೆಯನುಮಾಡಿ । ನಿಂತಿಹೆವು ಶ್ರೀಷ ॥**
**ಕರುಣೆಯಿಂದ ವರನೀಡು । ದೇವೇಶಾ $$$$ ।**
**ಶಾಂತೇಶಾ, ಶುಭದೀಶಾ, ಹೇ ಪರಮೇಶಾ ॥**

**ಜೇವರ್ಗಿ ಪುರವಾಸ, ಭಕ್ತನಿಧಿ ನಿವಾಸ ।**
**ವಚನ ಜ್ಯೋತಿರ್ಲಿಂಗ । ವಿಸ್ಫುರಣ ಸುಧೀಶ ।**
**ಷಟಸ್ಥಲಚಕ್ರೇಶಾ । ಜ್ಞಾನ ಸುಪ್ರಕಾಶ ॥**
**ವಿಭೋಶ, ತಪಧೀಶ, ಲೋಕೇಶ, ವಾಗೀಶ ।**

**ಜೋಗೀಯ ಕೊಳ್ಳದಿ ಸ್ನಾನಮಾಡಿ ತಪಗೈದ ।**
**ಲೋಕದ ಕಣ್ಣಿಗೆ ಬೆಳಕು ನೀಡಿದಾ ।**
**ಬಸವ ತತ್ವದ ಕಟ್ಟನೆ ಹೊತ್ತ ಜಗಕುಣಿಸಿದ ಕೋಶಾ ॥**
**ವಿಶ್ವಧರ್ಮ ಮಠ ಕಟ್ಟಿ ಗುರುವಾದನು ಅಖಂಡೇಶಾ ।** [೬೬]

ಜೇವರ್ಗಿ ಜ್ಯೋತಿ ಶ್ರೀ ಷಣ್ಮುಖ ಶಿವಯೋಗಿ ನಾಟಕವು 'ನಾಂದಿ' ಹಾಡಿನೊಂದಿಗೆ ಪ್ರಾರಂಭವಾಗುತ್ತದೆ. ದೃಶ್ಯ: ತೋಟ, ಮಲ್ಲಶೆಟ್ಟಿ ಹಿರೇಗೌಡರು ಬೆಳೆಯ ಮಧ್ಯದಲ್ಲಿ ನಿಂತು ಪ್ರಕೃತಿಯ ಸೌಂದರ್ಯವನ್ನು ಕಣ್ಣಾರೆ ಕಂಡು ಆನಂದಿಸುತ್ತಿದ್ದಾರೆ. ಇಲ್ಲಿ ಕವಿಯ ಕಲ್ಪನೆ, ವರ್ಣನೆಗಳು ಮನಸ್ಸನ್ನು ಆನಂದಿಸುತ್ತವೆ. ಭೂದೇವಿ ಎಷ್ಟು ಛಂದ ಕಾಣಸ್ತಾಳ ಹಸರು ಸೀರೆ ಉಟ್ಟು ಈಗ ತಾನೇ ಅರಳಿ ಬರುವ ಹೂಗಳೆಲ್ಲ ತನ್ನ ಜಡೀಗಿ ಕಟ್ಟಿ ಕೊಂಡಿದ್ದಾಳೆ ಎಂದೆನ್ನಿಸುತ್ತಿದೆ. ಈ ನಿನ್ನ ನಿಸರ್ಗದ ಚೆಲುವ ಕಾಣುವ ನನ್ನ ಕಣ್ಣುಗಳು ಪಾವನ ತಾಯಿ! ನೀನಿದ್ದರೇನೆ ಒಕ್ಕಲಿಗ ನೀನಿಲ್ಲದಿದ್ದರೆ ಆತ ಬಕ್ಕಲಿಗ! ಇದೇ ಸಂದರ್ಭದಲ್ಲಿ ದೊಡ್ಡಮ್ಮ ಗೌಡತಿ ಆಗಮಿಸುತ್ತಾಳೆ.

ಮಲ್ಲಶೆಟ್ಟಿ ಹಿರೇಗೌಡರ ಪತ್ನಿ ದೊಡ್ಡಮ್ಮ ಗೌಡತಿ ಮಕ್ಕಳಿಗಾಗಿ ವೃತಾಚರಣೆ ಗೈಯುತ್ತಿರುವುದು ಕಂಡು ಮಲ್ಲಶೆಟ್ಟಿಯವರು, ದೊಡ್ಡಾ, ಎಲ್ಲಿಯವರೆಗೂ ಈ ನಿನ್ನ ವೃತ ಎಂದಾಗ, ಮಗು ಆಗುವ ವರೆಗೆ ಎಂದು ಉತ್ತರಿಸುತ್ತಾಳೆ. 'ನಮ್ಮ ಹೊಟ್ಟೆಯಲ್ಲೆ ಹುಟ್ಟ

ಬೇಕೆಂದೇನು ಹತ ಮಾಡಬೇಡ, ಅನ್ಯರ ಮಕ್ಕಳನ್ನು ನಾವು ನಮ್ಮವೆಂದು ಪ್ರೀತಿಸಬಾರದೇಕೆ?

ಅಷ್ಟರಲ್ಲಿ ಚಿದಾನಂದಪ್ಪ ಬರುವನು ಗೌಡರೆ ಯಾರೋ ಒಬ್ಬ ಜಂಗಮ ಮೂರ್ತಿಗಳು ಬಂದು ಇಷ್ಟಲಿಂಗದಲ್ಲಿ ದೃಷ್ಟಿ ಇಟ್ಟು ಪೂಜೆ ಮಾಡುತ್ತ ಧ್ಯಾನ ಸಮಾಧಿಯಲ್ಲಿ ಕುಂತು ಬಿಟ್ಟಿದ್ದಾರೆ, ಯಾವ ಊರಿನವರೆಂದು ಹ್ಯಾಂಗ ಹೇಳಬೇಕು?

"**ಚಿದಾನಂದ :** ಈ ಶರಣರು ಹ್ಯಾಗೆ ಅಂತ ಹೇಳ್ಬೇಕು ಗೌಡ್ರೆ. ಬಯಲು ಆಲಯ ಮಾಡಿ. ಇಷ್ಟಲಿಂಗದಲ್ಲಿ ದೃಷ್ಟಿಇಟ್ಟು, ಲಿಂಗವೇ ತಾವಾಗಿ ತಾವೇ ಲಿಂಗವಾಗಿ ಕಾಣೋ ಮುಂದೆ ನಾನ್ಹೇಗೆ ಅವರಿಗೆ ಮಾತಾಡ್ಸೋದು ಅಂತ ತಮ್ಮ ಕಡೆಗೆ ಬಂದೆ". [೯೭]

ಅದೋ ನೋಡಿ ಬಿಲ್ವಪತ್ರಿಯ ಮರದ ಬುಡದಲ್ಲಿ ಅದಾವ ರೀತಿ ಕುಳಿತ್ತಿದ್ದಾರೆ. ಅವರೇ ಅಖಂಡೇಶ್ವರರು ಎಂದು ಅರಿವಿಗೆ ಬಂದಿತು.

"**ಅಖಂಡೇಶ್ವರ :** ಸಗರ ನಾಡಿನ ಸೌಂದರ್ಯದಲ್ಲಿ ಶಿವನನ್ನು ಕಂಡ ಶರಣರು ಮೈದಾಳಿಬಂದ ಈ ನೆಲ ಪವಿತ್ರ ಜಲತೀರ್ಥ, ಅನಲ ಮಹಾಮಂತ್ರ, ಮುದನೂರಿನ ದೇವರ ದಾಸಿಮಯ್ಯ, ಕೆಂಭಾವಿ ಭೋಗೇಶ್ವರ, ಹಾವಿನಾಳ ಕಲ್ಲಯ್ಯ, ತಿಂಥಣಿಯ ಮೌನೇಶ, ದೇವಪುರದ ಲಕ್ಷ್ಮೀಶ, ಕೊಂಡಗೂಳಿಯ ಕೇಶಿರಾಜ, ಇನ್ನೂ ಅನೇಕಾನೇಕ ಶರಣರು, ಸಂತರು, ಫಕೀರರು, ಶಿವಯೋಗಿಗಳು ಉತ್ತಮೋತ್ತಮವಾಗಿ ರಚಿಸಿದ ಸಾಹಿತ್ಯದೆಡೆಯನ್ನೇ ತಾಯಿ ಸರಸ್ವತಿಗೆ ಹಿಡಿದಿದ್ದಾರೆ. ಮನದುಂಬಿ ಹಾಡಿದ್ದಾರೆ. ಇದಕ್ಕಿಂತಲೂ ನಾವು ಪೂರ್ವಕಾಲದ ವಿವೇಚನೆ ಮಾಡಿದಾಗ, ದೃಗ್ಗೋಚರ ವಾಗುವದು ಸಗರ ದೊರೆ ಭಗೀರಥನ ಅಸಮ ಸಾಹಸ, ಗಂಗೆಯನ್ನೇ ಕೈಲಾಸದಿಂದ ಭುವಿಗೆ ತಂದ ಸಂತಸ. ಧನ್ಯ ಭೂದೇವಿ ಇಂಥಾ ಪುತ್ರರಿಗೆ ಜನ್ಮನೀಡಿದ ನಿನ್ನ ಶ್ರೀ ಗರ್ಭಕ್ಕೆ ನಮನ ಸಲ್ಲಿಸುತ್ತೇವೆ".[೯೮]

ನಾಟಕಕಾರ ಆಲ್ದಾಳ ಅವರು ಅಖಂಡೇಶ್ವರರ ಮಾತಿನಲ್ಲಿಯೇ ಸಗರನಾಡಿನ ಮಹಿಮೆಯನ್ನು, ಮಹತ್ವವನ್ನು ಇಲ್ಲಿ ಆಗಿಹೋದ ಶರಣರ, ಸಂತರ ಸಾಹಿತ್ಯಕ್ಕೆ ಸಲ್ಲಿಸಿರುವ ಅಮೋಘಸೇವೆಯನ್ನು ಕೊಂಡಾಡಿಸುವಲ್ಲಿ ಕ್ಷಾಣಾಕ್ಷತನ ತೋರಿದ್ದಾರೆ.

೧೨ನೇ ಶತಮಾನದಲ್ಲಿ ಸಗರನಾಡಿನ ಭೀಮಾ-ಕೃಷ್ಣಾ ನಡುವಣ ತಾಣ ಜೇವರ್ಗಿಯಲ್ಲಿ ಷಣ್ಮುಖ ಶಿವಯೋಗಿ ಎಂಬ ನಕ್ಷತ್ರ ಪುಂಜ ಉದಯಿಸಿತು ಉತ್ತರ ಕರ್ನಾಟಕದಲ್ಲಿ ಬದುಕಿ ಬಾಳಿಹೋದ ಶ್ರೇಷ್ಠ ಶರಣರ ಸಾಲಿನಲ್ಲಿ ಜೇವರಗಿ ಶ್ರೀಷಣ್ಮುಖ ಶಿವಯೋಗಿಗಳು ಒಬ್ಬರಾಗಿದ್ದಾರೆ. ಇವರು ಅಖಂಡೇಶ್ವರ ಸ್ವಾಮಿಗಳ ಪರಮಶಿಷ್ಯರು. ಶ್ರೀ ಷಣ್ಮುಖ ಸ್ವಾಮಿಗಳವರ ಜೀವನ ಚರಿತ್ರೆಗೆ ಮುನ್ನ ಶ್ರೀ ಅಖಂಡೇಶ್ವರ ಸ್ವಾಮಿಗಳನ್ನು ಅರಿತುಕೊಳ್ಳುವುದು ಹೆಚ್ಚುಸೂಕ್ತವೆನ್ನಿಸುತ್ತದೆ.

ಅಖಂಡೇಶ್ವರರೂ ಬೆಳಗಾವಿಯ ಭಾಗದವರೆಂದೂ ಮತ್ತು ಇವರು ೧೬ನೇ ಶತಮಾನದ ಉತ್ತರಾರ್ಧದಲ್ಲಿ ಜೀವಿಸಿದ್ದರೆಂದೂ ತಿಳಿದು ಬಂದಿದೆ. ಪುಣ್ಯಕ್ಷೇತ್ರಗಳ ದರ್ಶನಕ್ಕೆಂದೂ ಹೊರಟ

ಸ್ವಾಮಿಗಳು ಜೇವರಗಿಯ ಹತ್ತಿರದ ನಿಸರ್ಗ ಸೌಂದರ್ಯಕ್ಕೆ ಆಕರ್ಷಿತರಾಗಿ, ಅದೇ ಸ್ಥಳವನ್ನು ತಮ್ಮ ತಪೋಭೂಮಿಯನ್ನಾಗಿ ಮಾಡಿಕೊಂಡರು, ಆಗ ಸುತ್ತಮುತ್ತಲಿನ ಜನರೆಲ್ಲ ಅವರ ದರ್ಶನಕ್ಕಾಗಿ ಬರತೊಡಗಿದರು.

ಹೀಗಿರುವಾಗ ಮಲ್ಲಶೆಟ್ಟಿ ಮತ್ತು ದೊಡ್ಡಮಾಂಬೆ ದಂಪತಿಗಳು ಸಹ ಇವರ ದರ್ಶನಕ್ಕಾಗಿ ಬಂದರು. ಮಕ್ಕಳಾಗದ ಕೊರಗುಮಾತ್ರ ಕಾಡುತ್ತಿತ್ತು.

"**ಅಖಂಡೇಶ್ವರ** : ತಾಯಿ । ನೀವುಗೈದ ದಾನ-ಧರ್ಮದ ಫಲಕ್ಕಾಗಿಯೇ ಆ ಶಿವ ಸಂಜಾತನು ಹುಟ್ಟಿ ಬರುವನು ಆತನ ಹುಟ್ಟಿಗೆ ನಿಮ್ಮ ಪವಿತ್ರ ಗರ್ಭವೇ ಬೇಕಾಗಿತ್ತು ತಾಯಿ । ಮಲ ಅಳಿದು ಮೂಲ ತಿಳಿದ ನಿಮ್ಮ ನಿರ್ಮಲ ಗರ್ಭದಿಂದಲೇ ಹುಟ್ಟಿ ಬರುವನು ಅವನಿಂದಲೇ ಬಸವ ತತ್ವದ ಪ್ರಸಾರ. ಶಿವತತ್ವದ ಸುವಿಚಾರ, ವರ ವೀರಶೈವದ ಪುನರುತ್ಥಾನ, ತೆಗೆದಿಕೊ ತಾಯಿ ಶಿವಪ್ರಸಾದ (ಉಡಿಯಲ್ಲಿ ಫಲಗಳನ್ನಿಡುವರು)"[೯೯]

ಅಖಂಡೇಶ್ವರ ವರ ಪ್ರಸಾದದಿಂದಾಗಿ, ಮುಂದೆ ಕ್ರಿ.ಶ. ೧೬೩೯ ರಲ್ಲಿ ಮಲ್ಲಪ್ಪಶೆಟ್ಟಿ ಮತ್ತು ದೊಡ್ಡ ಮಾಂಬೆಯರಿಗೆ ಗಂಡು ಮಗುವೊಂದು ಜನಿಸಿತು.

"**ಚಿದಾನಂದಪ್ಪ :** ಗುರುಗಳೇ ತಮ್ಮ ಬರುವಿಕೆಯಿಂದ ತಮ್ಮ ಪಾದ ಸ್ಪರ್ಶದಿಂದ ನಮ್ಮ ಹಿರೇಗೌಡರ ಮನೆಯ 'ವಂಶಜ್ಯೋತಿ' ಬೆಳಗಿತು. ಅಲ್ಲದೆ ಯಾವ ತಾಯಿಗೆ ಮಕ್ಕಳು ಬೇಡ? ಪ್ರತಿ ಹೆಣ್ಣಿಗೆ ತಾಯಿಯಾಗುವ ಆಸೆ ಇರುವುದಿಲ್ಲವೆ?

ಅಖಂಡೇಶ್ವರ : ಅದುವೇ ಶಿವಶಕ್ತಿ, ಆ ಶಿವಶಕ್ತಿಯ ಪ್ರೇರಣೆಯಾದಾಗ ಕೊರಡು ಕೊನರುತ್ತದೆ, ಬರಡು ಹಯನವಾಗುತ್ತದೆ. ವಿಷ ಅಮೃತವಾಗುತ್ತದೆ. ಇದೆಲ್ಲಕ್ಕೂ ಮಿಗಿಲಾಗಿ ಅವರ ನಂಬಿಗೆ ಈಗ ನೋಡಿ! ನಿಮ್ಮಗೌಡ, ಗೌಡತಿಯವರು ನನ್ನ ಮೇಲಿಟ್ಟಿರುವ ಅಪಾರ ನಂಬಿಗೆಯೇ ಇಂದಿನ ತೊಟ್ಟಿಲು ಕಾರಣದ ಸಂಭ್ರಮ. ಈ ಸಂಭ್ರಮದ ಸಂಪತ್ತೇ ಈ ಶಿಶು" [೧೦೦] ಅವರೇ ಶ್ರೀ ಷಣ್ಮುಖ ಶಿವಯೋಗಿಗಳು,

"**ಹಿರೇಗೌಡರ ಮಗನಾಗಿ । ಶಿಶು ಶಕ್ತಿಯ ಶಿಶುವಾಗಿ ।**
**ಕಾಯಕವೇ ಕೈಲಾಸವಾಗಿ । ನಿತ್ಯ ತತ್ವ ನೀನಾದಿ ॥ ಜೋ ಜೋ ಜೋ ಲಾಲಿ॥**

ಅಖಂಡೇಶ್ವರ : ತಾಯಿ! ದೊಡ್ಡಮ್ಮ ಗೌಡತಿ! ನಿನ್ನ ಕೃಷಿಯಾದ ಹೃದ್‌ಭೂಮಿಯ ಹೂದೋಟದಲ್ಲಿ ದಶದಿಕ್ಕುಗಳಿಗೂ ಸುಮಸೌರಭ ನೀಡುವ ಪುಷ್ಪವೊಂದು ಅರಳಿತು. ಆ ಪುಷ್ಪದ ಪರಾಗದಿಂದಲೇ ಅನಂತ ಸಾಹಿತ್ಯ ಹೊರಬರುತ್ತಿವೆ.

**ದೊಡ್ಡಮಾಂಬಿಕೆ :** ಇದೆಂಥಾ ಭವಿಷ್ಯಗುರುವೆ, ಅದೆಂತು ಸಾಧ್ಯಗುರುವೆ?

**ಅಖಂಡೇಶ್ವರ :** ತಾಯಿ : ಇದು ತ್ರಿಕಾಲಸತ್ಯ, ತಾಯಿ! ನಿಮ್ಮೀರ್ವರ ನಡೆನುಡಿಗಳೇ ರಕ್ತವಾಗಿ ಹರಿದುಬಂದು ಶಿಶುವಿನಲ್ಲಿ ಭರಿಸಿದೆ, ಈ ಹರಿಕಾರನಿಂದಲೇ ಮತ್ತೆ ವಚನ ಸಾಹಿತ್ಯ ಉದಯಿಸಿ ಬಾಳಿಗೊಂದು ಹೊಸಬೆಳಕು ನೀಡುತ್ತವೆ." [೧೦೧]

ಆರು ವರುಷದ ಬಾಲಕ ಷಣ್ಮುಖ ತನಗೆ ಲಿಂಗದೀಕ್ಷೆ ಮಾಡಬೇಕು. ನಾನು ಲಿಂಗದ ಜೊತೆಗೆ ಆಟವಾಡಬೇಕು, ಕಾವಿಬಟ್ಟೆ ಧರಿಸಿಕೊಳ್ಳಬೇಕು. ನನಗೆ ಮದುವೆ ಮಾಡಬೇಕು ಎಂದು ಹೇಳಬೇಡಿ ಎಂದು ಕೇಳಿಕೊಳ್ಳುತ್ತಾನೆ. ತಾಯಿಯ ಕರಳು ಇದನ್ನು ಕೇಳಿ ಗಾಬರಿಗೊಳ್ಳುತ್ತದೆ. ತಾಯಿ ಹೇಳುತ್ತಾಳೆ –

"**ದೊಡ್ಡಮ್ಮಾ :** ಏ! ಷಣ್ಮುಖ, ಏನೊ ಇದು! ನಿಂದೇನು? ಕಾವಿ ಹಾಕ್ಕೊಂಡು ಜೋಗಿ ಆಗಬೇಕೆನ್ನುವಿಯಾ? ಜಂಗಮನಾಗಬೇಕೆನ್ನುವಿಯಾ? ಈ ಮನೆಯ ವಂಶದ ಕುಡಿ ನೀನ್ನದೆ ಮೊದಲು, ನಿನ್ನಂದಲೇ ಕೊನೆಮಾಡಬೇಕೆನ್ನುವಿಯಾ? ಎಂತೆಂಥ ಕಲ್ಪನೆಗಳು ತಲೆಯಲ್ಲಿ ತುಂಬಿಕೊಂಡಿರುವಿಯಲ್ಲೋ ನೀನು ದೊಡ್ಡವನಾದ ಮೇಲೆ ಮದುವೆ ಮಾಡ್ಕೋಬೇಕು, ನಿನ್ನಿಂದಲೇ ನಮ್ಮ ಹಿರೇಗೌಡರ ವಂಶಜ್ಯೋತಿ ಬೆಳಗಬೇಕು". [೧೦೨]

ತಾಯಿಯ ಉಪದೇಶವಾಗಲಿ, ಕನಿಕರವಾಗಲಿ, ಕೊನೆಯಲ್ಲಿ ಆಕೆ ಸುರಿಸಿದ ಕಣ್ಣೀರಾಗಲಿ ಷಣ್ಮುಖನ ಮೇಲೆ ಪರಿಣಾಮ ಬೀರದಿದ್ದಾಗ ಅಖಂಡೇಶ್ವರರು ಮಹಾತಾಯಿ ದೊಡ್ಡಮ್ಮ (ದೊಡ್ಡಮಾಂಬಿಕೆ)ಳಿಗೆ ಉಪದೇಶಿಸುತ್ತಾರೆ.

"**ಅಖಂಡೇಶ್ವರ :** ತಾಯಿ! ದೊಡ್ಡಮ್ಮಗೌಡತಿ, ನಿಮ್ಮ ಅಪೂರ್ವ ದಾಂಪತ್ಯದ ಫಲವೇ ಈ ರತ್ನ, ಈ ರತ್ನಕ್ಕೆ ಜಗತ್ತಿನ ಮಹಾತೊಟ್ಟಿಲಲ್ಲಿ ಮಲಗಿಸಿ, ಷಣ್ಮುಖಸ್ವಾಮಿ ಎಂದು ಹೆಸರಿಸಿ ಜಗತ್ತಿಗೇನೆ ಧಾರೆ ಎರೆದಾಗ, ನಿನ್ನ ತ್ಯಾಗದ ಮುಂದೆ ಇನ್ಯಾರ ತ್ಯಾಗ, ಇದು ನಿಮ್ಮ ಭಾಗ್ಯವೂ ಅಹುದು ಮಕ್ಕಳನ್ನು ಹಡೆಯಬಹುದು ತಾಯಿ! ಆದರೆ ಹಡೆದ ಮಕ್ಕಳನ್ನು ನಾಡಿಗೆ ಅರ್ಪಿಸುವ ಭಾಗ್ಯ ಎಲ್ಲರಿಗೂ ಬರಲಾರದು ಕಾರಣ ನೀವುಗಳು ತ್ಯಾಗಿಗಳಾಗಿ, ಭಾಗ್ಯವಂತ ಹೃದಯದವರಾಗಿ, ಶಿವಯೋಗಿಯಾಗುವ ನಿನ್ನ ಮಗನಿಗೆ ಆಶೀರ್ವದಿಸಬೇಕು. ಅವನು 'ಅಂಗ' ಜಗತ್ತನ್ನು ಬಿಟ್ಟು 'ಜಂಗಮ' ಜಗತ್ತನ್ನು ಪ್ರವೇಸಿಸಲು ನಿಮ್ಮ ಘನಾಶೀರ್ವಾದವೇ ಅವನಿಗೆ ಪ್ರೇರಕ ಶಕ್ತಿಯಾಗಿ ನಿಲ್ಲಬೇಕು". [೧೦೩]

ಮಹಿಳೆಯನ್ನು ರಾಷ್ಟ್ರದ ಮುಖ್ಯವಾಹಿನಿಯಿಂದ ದೂರವಿರಿಸಿದ ಪರಿಣಾಮವಾಗಿ ನಮ್ಮ ದೇಶ ಇಂದಿಗೂ ಪರಿಪೂರ್ಣರಾಷ್ಟ್ರವಾಗಿ ಹೊರಹೊಮ್ಮಿಲ್ಲ, ಭೂಮಿಹೆಣ್ಣು, ಭಾರತಮಾತೆ ಹೆಣ್ಣು, ನಿಸರ್ಗಹೆಣ್ಣು, ಸಮಸ್ತ ಸೃಷ್ಟಿಯೇ ಮಾತೆಯ ರೂಪದಲ್ಲಿರುವಾಗ ಆ ಮಹಾ ಮೂರ್ತಿಯನ್ನು ಗೌರವಿಸೋಣ".[೧೦೪] ಎಂದು ಬೆಳಗಾವಿ ರಾಯಭಾಗ ತಾಲೂಕಿನ ಹಂದಿಗುಂಪ ಶ್ರೀ ಸಿದ್ದೇಶ್ವರ ಮಠದ ಸ್ವಾಮಿಗಳು ಉಪದೇಶಿಸಿರುವುದು ಇದು ಅತ್ಯಂತ ಮನನೀಯವಾದುದು, ಅಂತರಂಗದಲ್ಲಿರಿಸಿ ಮೌನವಾಗಿ ಪಠಿಸುತ್ತಿರಬೇಕಾದದ್ದು.

ಅಖಂಡೇಶ್ವರರು ಜೇವರ್ಗಿಗೆ ಬಂದು ಮಠ ಸ್ಥಾಪಿಸಿದ ನಂತರ ವಿರಕ್ತ ಸಂಪ್ರದಾಯದ ತಳಹದಿಯಲ್ಲಿಯೇ ಮಠ ಸಹ ಷಣ್ಮುಖ ಶಿವಯೋಗಿಗಳ ಮಹಾದಿವ್ಯಜ್ಞಾನದಿಂದ ಬೆಳೆದು ಹೆಮ್ಮರವಾಗಿ 'ಷಣ್ಮುಖ ಶಿವಯೋಗಿಗಳ ಮಠ'ವೆಂದೇ ಈ ಭಾಗದಲ್ಲಿ ಪ್ರಸಿದ್ಧಿಯಾಗಿದೆ.

ಷಣ್ಮುಖ ಶಿವಯೋಗಿಗಳು ಡಂಭಾಚಾರವನ್ನಾಗಲಿ, ಜಾತೀಯತೆಯನ್ನಾಗಲಿ ಸಹಿಸುತ್ತಿರಲಿಲ್ಲ, ಅಬಲೆಯರ ನರಳಾಟ ಸಹಿಸುತ್ತಿರಲಿಲ್ಲ, ಮಕ್ಕಳಿಗೆ ಶಿಕ್ಷಣದ ಕಡೆಗೆ ಒತ್ತುಕೊಡಲು ತಂದೆ-ತಾಯಿಯರನ್ನು ಪ್ರೇರೆಪಿಸುತ್ತಿದ್ದರು.

**ಮೊಟ್ಟೆ ಮೊಟ್ಟೆ ಪತ್ರಿ, ಪುಷ್ಪವತಂದು**
**ವಟವಟ ಲಿಂಗವ ಪೂಜಿಸಿದಡೇನು,**
**ತನುಮನದ ಕೆಟ್ಟತನವ ಹಿಂಗದನ್ನಕ್ಕರ,**
**ಹುಸಿ ಕಳವು ಪರದಾರ ವ್ಯಾಪಾರದಲ್ಲಿ**
**ಹರಿದಾಡುವ ದುರುಳ ಬುದ್ಧಿಯ ದುರಾಚಾರಿಗಳಿಗೆ**
**ದೂರನಾಗಿರ್ಪನು ನೋಡಾ ನಮ್ಮ ಅಖಂಡೇಶ್ವರನು**

ಅಂತರಂಗದ ಅವಗುಣಗಳನಳಿಯದೆ, ಬರಿಯ ಆಡಂಬರದ ಪೂಜೆಯಿಂದ, ಅರ್ಚಕನಿಗಾಗಲಿ, ಸಮಾಜಕ್ಕಾಗಲಿ ಶಾಂತಿ-ಸುಖಗಳು ಲಭಿಸವು ಎಂಬುದೇ ಶಿವ-ಯೋಗಿಗಳ ಅಭಿಪ್ರಾಯ ಈ ವಚನ ಬಿಂಬಿಸುತ್ತದೆ.

**ಷಣ್ಮುಖಶಿವಯೋಗಿ :** ಅಂತರಂಗದಲ್ಲಿ ಅರುಹಿನ ಶುದ್ಧೀಯನ್ನರಿಯದೆ, ಬಹಿರಂಗದಲ್ಲಿ, ಕಂತೆ, ಕರ್ಪುರ, ದಂಡ, ಕಮಂಡಲ, ಭಸ್ಮದ ಗುಂಡಿಗೆಯ ಪಂಚಮುದ್ರೆಗಳನ್ನು ಧರಿಸಿ ಧರೆಯ ಮಂಡಲದೊಳಗೆ ಸಂಚರಿಸುವ ಅಣ್ಣಗಳ ಕಂಡು ಬೆರಗಾದೆ, ಎಲ್ಲಿನೋಡಿದರಲ್ಲಿ ಡಾಂಭಿಕ ಜೀವನದ ವಿಕಟಟ್ಟಾಹಾಸ, ಕಾವಿಯ ಮರೆಯಲ್ಲಿ ಕಾಮಿನಿಯರ ಚೆಲ್ಲಾಟ, ಸಿರಿವಂತರ ಜಾಲದಲ್ಲಿ ಅಬಲೆಯರ ನರಳಾಟ, ಬಡಬಾಂಧವರ ಹೋರಾಟ, ಏನೀಗ್ರಾಮಗಳ ಉನ್ಮಾದ ಭಾವ, ಜಾತಿ-ಜಾತಿಗಳ ಕಲಹದ ಕೂಗಾಟ "ಜ್ಯೋತಿಗೆಲ್ಲಿದೆ ಜ್ಯಾತಿ" ಎಂದು ಹೇಳಿದ ಸರ್ವಜ್ಞನ ಕೂಗು ಇವರ ಕಿವಿಗೆ ಕೇಳಿಸಲಿಲ್ಲವೆ? ಮಕ್ಕಳ ವಿದ್ಯೆಯ ಕಡೆಗೆ ಗಮನವಿಲ್ಲ, ತಮ್ಮ ಆರೋಗ್ಯದ ಕಡೆಗೆ ಲಕ್ಷವಿಲ್ಲ ಅಂದಾಗ ದನಕ್ಕೂ-ಜನಕ್ಕೂ ಇರುವ ವ್ಯತ್ಯಾಸವಾದರೂ ಏನು? ಇಂಥಾಸಮಸ್ಯೆಗಳನ್ನು ಬಗೆಹರಿಸಲೇಬೇಕು".[೧೦೫] ಎಂದು ಹೇಳುವಲ್ಲಿ ಷಣ್ಮುಖ ಶಿವಯೋಗಿಗಳಲ್ಲಿ ಸಮಾಜದಲ್ಲಿ ನಡೆಯುವ ಅನ್ಯಾಯ, ಅತ್ಯಾಚಾರಗಳ ಬಗ್ಗೆ ಎಷ್ಟೊಂದು ಚಡಪಡಿಕೆ ಇತ್ತು ಅನ್ನುವ ಮಾತುಗಳು ಅವರ ಈ ಮಾತುಗಳು ಸ್ಪಷ್ಟಪಡಿಸುತ್ತವೆ. ನಾಟಕಕಾರರು ನಾಟಕಗಳನ್ನು ಕೇವಲ ಮನರಂಜನೆಗಾಗಿ ಬರೆಯಲಿಲ್ಲ. "ತದ್ವಿದ್ಧಿಪ್ರಣಿಪಾತೇನ ಪ್ರಶ್ನೇನ ಸೇವಯಾ" [೧೦೬] ಗೀತೆಯಲ್ಲಿ ಹೇಳಿದಂತೆ, ತಿಳುವಳಿಕೆಯನ್ನು ಪಡೆದುಕೊಳ್ಳಲು ಜ್ಞಾನಿಗಳಬಳಿಗೆ ವಿನಯದಿಂದ ಹೋಗು, ಅವರ ಸೇವೆಯನ್ನು ಮಾಡು ಅವರಲ್ಲಿ ನಿನ್ನ ಸಂದೇಹವನ್ನು ಹೇಳಿಕೊ "ನಹಿಜ್ಞಾನೇನ ಸದೃಶಂ ಪವಿತ್ರಂ"[೧೦೭] ಆತ್ಮಜ್ಞಾನದಂತೆ ಪವಿತ್ರವಾದುದು ಮತ್ತೊಂದು ಇರದು, ಇದುವೇ ನಾಟಕಕಾರ ಆಲ್ದಾಳರ ಗುರಿಯಾಗಿದೆ.

"ಶ್ರೀ ಷಣ್ಮುಖ ಶಿವಯೋಗಿಗಳು ಪರಮ ಜಂಗಮ ಶಕ್ತಿಯಾಗಿ ೧೨ ವರ್ಷಗಳ ಕಾಲ ದೇಶದ ತುಂಬಾ ಸಂಚಾರಮಾಡಿ ಲೋಕದ ಅನುಭವ ಪಡೆದುಕೊಂಡರು. ಹಲವಾರು ಯೋಗಗಳನ್ನು ಅಧ್ಯಯನ ಮಾಡಿದ ಅವರು ಎಲ್ಲಾ ಯೋಗಗಳಲ್ಲಿ ಶಿವಯೋಗವು ಶ್ರೇಷ್ಠವಾದುದ್ದು ಅಂತ ಅನುಭವದಿಂದ ಕಂಡುಕೊಂಡರು. ಈ ಕಾರಣದಿಂದಲೇ ಲೋಕವು ಅವರನ್ನು "ಷಣ್ಮುಖ ಶಿವಯೋಗಿ" ಎಂದು ಭಕ್ತಿಯಿಂದ ಕರೆದು ಗೌರವಿಸಿತು". [೧೦೮]

'ಶ್ರೀ ಷಣ್ಮುಖ ಶಿವಯೋಗಿ' ನಾಟಕದಲ್ಲಿ ಕಂಡು ಬರುವ ಮತ್ತೊಂದು ಪಾತ್ರ ಚಿದಂಬರ ಕುಲಕರ್ಣಿಯವರದು. ಯ್ಯಾರಿಗೂ ಒಳ್ಳೆಯದನ್ನೆ ಬಯಸದ ಜೀವಿ ತನ್ನ ಆಟ ನಡೆಯಬೇಕೆನ್ನುವ ಕುಹಕಿ, ಹೊಟ್ಟಿಕಿಚ್ಚಿನ ಸ್ವಭಾವ, ಈ ಜೇವರಗಿಯಲ್ಲಿ ತಾನಾಡಿದ್ದೇ ಸರಿ ಎನ್ನುವ ಅಹಂಭಾವದವನು ಓದಿ –

"**ಚಿದಂಬರ :** ಈ ಜೇವರಗಿಯೊಳಗೆ ನನಗ ಹೇಳದ, ಕೇಳದ ಯಾರೂ ಒಂದ್ಕೆಲ್ಸಾ ಮಾಡುದಿಲ್ಲ, ಆದರ! ಆ ಹೀರೆಗೌಡ ಮಲ್ಲಶೆಟ್ಟಿ ಅವನ್ಯಾವ್ನೋ ಒಬ್ಬ ಸ್ವಾಮಿಗಿ ಕರತಂದು ಪ್ರವಚನಾ ಹಚ್ಚಿದ್ದಾನೆ, ಜೇವರಗಿಯ ಪ್ರತಿಷ್ಠಿತ ವ್ಯಕ್ತಿಯಾದ ಈ ಚಿದಂಬರ ಕುಲಕರ್ಣಿಗೆ ಒಂದು ಮಾತ ಸಹಕೇಳ್ಲಿಲ್ಲಾ, ಇದು ಅಪಮಾನ ಭಾರಿ ಅಪಮಾನ. ಈ ಕುಲಕರಣಿ ನೆರಳ ಬಿದ್ದರ ಹರಿದು ಹೋಗುವ ಹಾವುಗಳು ಸಹಿತ ಅಲ್ಲೆ ಗಪ್ಪನೇ ನಿಂತ ಬಿಡ್ತಾವು. ಮಲ್ಲಪ್ಪ ಶೆಟ್ಟಿಗೌಡ ಮಾಡು, ಮಾಡು ಒಂದಿವ್ಸ ನಿನ್ನ ಆಸ್ತಿಗಿ ಸರ್ಕಾರದಿಂದ ಜಪ್ತಿ ಮಾಡ್ಸಲಿಲ್ಲಾಂದ್ರ ನನ್ನ ಹೆಸರು ಚಿದಂಬರ ಕುಲಕರ್ಣಿನೇ ಅಲ್ಲ". [೧೦೯]

ತಾ ಮಾಡಿದ ಪಾಪಕ್ಕೆ ಪ್ರಾಯಶ್ಚಿತ ಪಡಲೇಬೇಕು. ಇದು ಪ್ರಕೃತಿ ನಿಯಮ. ಇದನ್ನು ಮೀರಲು ಸಾಧ್ಯವೆ ಇಲ್ಲ. ಷಣ್ಮುಖ ಶಿವಯೋಗಿಯವರನ್ನು ಅನಗತ್ಯವಿಲ್ಲದೆ ದೂಷಿಸಿದ, ದೋಷಿಸಿದ ಅವರಿಗೆ ಕಳಂಕ ಹಚ್ಚಲು ಹೋದ. "ಅಧೋ ಗಚ್ಛಂತಿ ತಾಮಸಾಃ" ತಾಮಸ ಸ್ವಭಾವದವರು ಕೆಳಗಿನ ನೆಲೆಗಳಿಗೆ ಸಾಗುತ್ತಾರೆ ಎಂದು ಭಗವದ್ಗೀತೆ ಹೇಳುತ್ತದೆ. ಕೊನೆಗೆ ಚಿದಂಬರ ಕುಲಕರ್ಣಿಯವರ ಪಾಡು ಅಧೋಗತಿಗೆ ದಾರಿ ತೋರಿಸಿತು ಅವನದು ಎನ್ನಲಾದ ಆಸ್ತಿ ಹಾಳಾಯಿತು. ಎಲ್ಲವನ್ನು ಕಳೆದುಕೊಂಡು ಬೀದಿ, ಬೀದಿ, ಅಲೆಯುವಂತಾಯಿತು. ಹುಚ್ಚನಂತೆ ವರ್ತಿಸಹತ್ತಿದ. ಬೀದಿಯಲ್ಲಿ ಬಾಲಕರು ಕಲ್ಲು ಎಸೆದು ಖುಷಿಪಡುವಂತಾಯಿತು. ಅಂತಿಮವಾಗಿ ಷಣ್ಮುಖರಲ್ಲಿ ಶರಣಾದ. "ಶಿವಯೋಗಿ ನನಗೆ ಕ್ಷಮಿಸುತ್ತಿಯಾ ನನ್ನಪ್ಪ" ರಾಗ ದ್ವೇಷಗಳಿಲ್ಲದೇ ನಿನ್ನ ಕರ್ಮಗಳನ್ನು ಮಾಡು ಅದುವೇ ನಿನಗೆ ಭಾಗ್ಯತಂದೀತು.

ನಾಟಕ ೩೨ ದೃಶ್ಯಗಳನ್ನು ಹೊಂದಿದ್ದು ದೃಶ್ಯದಿಂದ ದೃಶ್ಯಗಳಿಗೆ ಮುಂದುವರಿದಂತೆ ಓದುಗರಿಗೂ, ಪ್ರೇಕ್ಷಕರಿಗೂ ನಾಟಕದ ಬಗ್ಗೆ ನಟರ ಬಗ್ಗೆ ಹೆಚ್ಚು ಆಸಕ್ತಿ ಉಂಟಾಗುತ್ತದೆ. ಸ್ತ್ರೀ ಪಾತ್ರಗಳಿಗಿಂತಲೂ ಪುರುಷ ಪಾತ್ರಗಳೇ ಹೆಚ್ಚಾಗಿವೆ. ಆದರೂ ನಾಟಕದ ಯಾವ ಪಾತ್ರಗಳನ್ನು ಕಡೆಗಣಿಸುವಂತಿಲ್ಲ. ತಮ್ಮ–ತಮ್ಮ ಪಾತ್ರಕ್ಕೆ ತಕ್ಕಹಾಗೆ ಮಾತುಗಳನ್ನು ಮುತ್ತುಗಳಂತೆ ಉದುರಿಸಿದ್ದಾರೆ ಇಲ್ಲಿ ನಾಟಕಕಾರರ ಜಾಣ್ಮೆ, ಕುಶಲತೆ ಮೆಚ್ಚಬೇಕು.

ಭಾಷೆ, ಶೈಲಿಗಳ ಬಗ್ಗೆ ಹೇಳಲೇಬೇಕಿಲ್ಲ ಲೇಖಕರು ಸ್ಥಳೀಕರ ಭಾಷೆಯನ್ನೇ ನಾಟಕದಲ್ಲಿ ಹೆಚ್ಚಾಗಿ ಬಳಸಿ ಹೈದ್ರಾಬಾದ ಕರ್ನಾಟಕದಲ್ಲಿನ ಗ್ರಾಮೀಣರ ಭಾಷೆಗೆ ಮಹತ್ವ ನೀಡಿದ್ದಾರೆ. ಉದಾಹರಣೆಗೆ, ಗಡಗಡಾಬಾರಾ, ಲೇ ಲೇ ತಿರುಬೋಕಿ, ಹಿಂಗರ್‍ಯಾ! ನಡೀರಿಹಂಗಾರ; ಮೂಳಾ ಅಲಾಮೂಳಾ; ನನಗೆಂಥಾ ವಗ್ತಾನ ಸಿಕ್ಕತ ನನ್ನಪ್ಪಾ; ನಿನ್ನ ಬಾಯೀಗಿ ಮುಳ್ಳ ಮುರಿಲಿಲ್ಲಾ, ನಾಲಗಿ ಶೆಟಿಲಿಲ್ಲ; ಬಡಾಯಿಕಚ್ಕೋಬ್ಯಾಡ, ಅರಮಂಡಲಕ ಬೆಂಕಿಬಿದ್ದಾದ; ಧಡ್ಡರಂಡೇಗಂಡಾ!, ಲೇನಿವತ್ತ ನಿನ್ನ ದಾರಾ ಕಡದ ಬಂತಲೇ!, ಅದೆಂತ ಪಿಕನಾಶಿ ಐತ್ಯಾ, ಅವಡಾ, ಸವಡಾ; ಓ, ಹೋ ಹಿಂಗ್ಯೆತೇನ್ರಿ ಇದರ ಹಕಿಕತ್ತು; ಇತ್ಯಾದಿ ಭಾಷೆಯ ಸೊಗಡು ಬಲ್ಲವನೇ ಬಲ್ಲ!.

ನಾಟಕದ ವಸ್ತುವಿನ ಮೂಲಕ ಸಂದರ್ಭಕ್ಕೆ ತಕ್ಕಂತೆ ಸನ್ನಿವೇಶ ನಿರ್ಮಾಣ ಮಾಡುವ ಕಲೆ ನಾಟಕಕಾರರಿಗೆ ಕರಗತವಾಗಿದೆ. ಕೆಲವಡೆ ಆಗಿನ ನಿಜಾಮ ಅರಸರ ಆಡಳಿತ ಭಾಷೆಯಾದ ಉರ್ದುಭಾಷೆಯನ್ನು ನಾಟಕದಲ್ಲಿ ತಕ್ಕಂತೆ ಬಳಸಲಾಗಿದೆ ನಾಟಕದ ಸಂವಾದ ಚೆನ್ನಾಗಿ ನಿರೂಪಿತವಾಗಿದೆ. ಅವರ ನೈಜ ಜೀವನವನ್ನೆ ಪ್ರತಿ ಬಿಂಬಿಸುತ್ತವೆ. ಮಲ್ಲಪ್ಪ, ಚೆನ್ನ, ಖೊನ್ನಿರ್‌ಸಾಬ, ಚಿದಂಬರ, ಗೌರಿ ಇವರುಗಳ ಆಡುಭಾಷೆ ನೈಜವಾಗಿದೆ. ಮಲ್ಲಶೆಟ್ಟಿ ಹಿರೇಗೌಡರ ಧರ್ಮಪತ್ನಿ ದೊಡ್ಡಮ್ಮಗೌಡತಿ ತನ್ನ ಸಾಧ್ವಿತನಕ್ಕೆ ಅನುಗುಣವಾಗಿಯೇ ಹಿತಮಿತವಾದ, ನಯವಾದ ಮಾತುಗಳನ್ನೇ ಆಡುತ್ತಾಳೆ. ಪತಿಯಾದವನು ಪತ್ನಿಯ ಹಾದಿಯಲ್ಲಿ ನಡೆದುಕೊಂಡು ಸುಂದರ ಬದುಕು ರೂಪಿಸಿಕೊಳ್ಳುವರು, ಗೌರಿ, ಶಿವಯ್ಯ, ಚೆನ್ನ ಹಾಸ್ಯದ ರಸದೂಟ ನೀಡುತ್ತಾರೆ.

ಶ್ರೀ ಷಣ್ಮುಖ ಶಿವಯೋಗಿ: ನಿಷ್ಠಿ ವೀರಭದ್ರಪ್ಪನವರೇ ಖೊನ್ನೀರ ಸಾಹೇಬರೇ ಬೆಡಗಿನ ವಚನಗಳನ್ನು ಬರೆದು ರಾಮಪೂರದ ಬೊಕ್ಕಪ್ಪಯ್ಯನವರೇ ನಾವಿಂದು ಲಿಂಗ ಮುಖೇನ ಐಕ್ಯರಾಗುತ್ತೇವೆ. ಹಾಗೆಂದು ಗುರು ಅಖಂಡೇಶ್ವರರ ಅಪ್ಪಣೆಯೂ ಆಗಿದೆ. ಮಂದೇವಾಲದ ಮರಿ ಷಣ್ಮುಖ ದೇವರೆ ಈ ವಚನ ಹೊತ್ತಿಗೆಯನ್ನು ಕಾಯುವ ಭಾರ ನಿಮ್ಮದಾಗಲಿ, ನಾವುಗಳು ಬರೆದ ವಚನಗಳು ಶ್ರೀ ಅಖಂಡೇಶ್ವರ ಮಠದ ಹನ್ನೆರಡನೇಯ ಪೀಠಾಧಿಕಾರಿಯಿಂದ ಪ್ರಕಟಗೊಂಡು ಜನರ ಮನೆಮನೆಗೂ ಹಂಚುತ್ತಾರೆ. ನಾನು ಮತ್ತೆ ಹುಟ್ಟಿಬಂದರೆ ಸಗರ ನಾಡಿನಲ್ಲಿಯೇ ಹುಟ್ಟಿಬರುವೆ. ನೀವೆಲ್ಲರೂ ಐಕ್ಯಭಾವದಿಂದ ಸಮರಸ ಜೀವನ ಸಾಗಿಸಿರಿ, ನಮ್ಮಗಿನ್ನು ಅಪ್ಪಣೆ ದಯಪಾಲಿಸಿರಿ.

**"ಜ್ಞಾನಪೂರ್ಣಂ ಜಗಂಜ್ಯೋತಿ।**
**ನಿರ್ಮಳವಾದ ಮನವೆ ಕರ್ಪೂರದಾರತಿ।**
**ಅನುದಿನ ಗುರುವಿನ ಅನುಗೂಡಿ ಭಕ್ತೀಲಿ।**
**ಜನನ ಮರಣ ರಹಿತ ಜಂಗಮಗೆ ಬೆಳಗುವೆ ॥ಪ॥**

**ಅಷ್ಟಾವರಣ ಸುಲಭ ಮಾನವಜನ್ಮ।**
**ಹುಟ್ಟಿ ಬರುವುದು ದುರ್ಲಭ।**
**ಹೆಸರಿಟ್ಟು ಬೆಳಗುವೆ।**

"ಜೇವರ್ಗಿ ಷಣ್ಮುಖ ಶಿವಯೋಗಿಗಳು ಎಪ್ಪತ್ತೆರಡು ವಸಂತಕಾಲ ಬಾಳಿ ಬದುಕಿದ ವೈರಾಗ್ಯ ಮೂರ್ತಿ (೧೬೩೯–೧೭೧೧) ೧೭೧೧ರಲ್ಲಿ ಶಿವಾಧೀಶರಾದರು ಈಗೀನ ಪೀಠಾಧಿಪತಿಗಳಾದ ಶ್ರೀ.ಮ.ನಿ.ಪ್ರ. ಶಾಂತಲಿಂಗ ಸ್ವಾಮಿಗಳು ಷಣ್ಮುಖ ಶಿವಯೋಗಿಗಳು ರಚಿಸಿದ ೭೩೩ ವಚನಗಳನ್ನು ಮರುಮುದ್ರಣ ಗೊಳಿಸಿರುವರು. ಅಖಂಡೇಶ್ವರರ ಜೋಗುಳಪದ, ನಿರಾಳ ಸದ್ಗುರು ಸ್ತೋತ್ರ ಪಂಪಸಂಜ್ಞೆ ಎಂಬ ಕೃತಿಗಳನ್ನು ರಚಿಸಿದ್ದಾರೆ". [೧೧೦]

**"ಕಲ್ಯಾಣ ಬಳಿಯಲ್ಲಿ ಕಲಬುರಗಿ ಜಿಲ್ಲೆಯ**
**ಬಲ್ಲಿದನಾಡು ಜೇವರ್ಗಿ ಷಣ್ಮುಖನು**
**ಅಲ್ಲಮ ಪ್ರಭುವಾಗಿ ಮೆರೆದಾನ"**

**"ಅರತಿ ಬೆಳಗುವೆನು ವೀರ ವಿರತಿಗೆ**
**ಮಾರಸಂಹಾರ ಷಣ್ಮುಖಗೆ ನಮಿಸುವೇನು**
**ಪಾರು ಮಾಡಪ್ಪ ಶಿವಯೋಗಿ"** [೧೧೧]

ಈ ತ್ರಿಪದಿಗಳನ್ನು ಶಿಷ್ಟಸಾಹಿತ್ಯದಲ್ಲಿ ಏಳನೇ ಶತಮಾನದ ಬಾದಾಮಿ ಶಾಸನದಲ್ಲಿ ಕಾಣುತ್ತೇವೆ.

ಇಂತಹ ಒಬ್ಬ ಮಹಾಪುರುಷನ ಬದುಕನ್ನು ನಾಟಕಕ್ಕೆ ಅಳವಡಿಸಿ, ಪ್ರಯೋಗದ ಸಾಹಸಮಾಡಿದ್ದು ಈ ಭಾಗದ ಶರಣಸಾಹಿತಿ ಶ್ರೀ ಎಲ್.ಬಿ.ಕೆ.ಆಲ್ದಾಳ. ಒಬ್ಬ ಮುಸ್ಲಿಂ ಬಾಂಧವ ಇಂತಹ ಸಾಹಸಕ್ಕಿಳಿದಿದ್ದು ಸಣ್ಣ ಮಾತಲ್ಲ. ವೀರಶೈವ ಸಾಹಿತ್ಯವನ್ನರಿತು ಶರಣರ ಬದುಕಿಗೆ ಮಾರುಹೋದ ಎಲ್.ಬಿ.ಕೆ. ಆಲ್ದಾಳ ಈ ಸಗರನಾಡಿನ ಎಲ್ಲ ಶರಣರನ್ನು ರಂಗಭೂಮಿಗೆ ಬರಮಾಡಿಕೊಂಡಿರುವುದು ಶ್ಲಾಘನೀಯ, ಜೇವರ್ಗಿಯಲ್ಲಿ 'ಶ್ರೀ ಅಖಂಡೇಶ್ವರ ಕೃಪಾಪೋಷಿತ" 'ಸ್ವಯಂ ಜ್ಯೋತಿನಾಟ್ಯಸಂಘ' ಎನ್ನುವ ಹೆಸರಿನಲ್ಲಿ ಷಣ್ಮುಖ ಶಿವಯೋಗಿಗಳ ನಾಟಕ ಪ್ರಯೋಗಗೊಂಡು ಇತಿಹಾಸ ರಚನೆ ಯಾಯಿತು". [೧೧೨]

# ಸುಕ್ಷೇತ್ರ ಅಳ್ಳೊಳ್ಳಿ ಶ್ರೀ ಅಯ್ಯಪ್ಪಯ್ಯ ಮಹಾತ್ಮೆ

## (ಭಕ್ತಿ ಪ್ರಧಾನ ನಾಟಕ)

"ನಮ್ಮ ದೇಶದ ಸಂಸ್ಕೃತಿಗೆ ಜೀವಾಳವಾದದ್ದು– ಈ ನಾಟಕ ಕಲೆ. ಕರ್ನಾಟಕದ ಸಾಂಪ್ರದಾಯಿಕ ಕೃತಿಗಳಲ್ಲಿ, ನಾಟಕ ಕಲೆ ಬಹಳ ಜನ ಪ್ರಿಯತೆಗೆ ಪಾತ್ರವಾದದ್ದು. ಪುರಾತನ ಸಂಸ್ಕೃತಿಯಿಂದಲೂ ಇಂದಿನವರೆಗೂ ಜಗತ್ತಿನೆಲ್ಲೆಡೆ ನಾಟಕದ ಅಭಿಮಾನಿಗಳಿದ್ದಾರೆ. ನಮ್ಮ ಉತ್ತರ ಕರ್ನಾಟಕ ಜನತೆ ಈ ನಾಟಕ ಕಲೆಯ ಬಗ್ಗೆ ಆಸಕ್ತಿ, ಅಭಿಮಾನವನ್ನು ಹೊಂದಿದ್ದರೆ. ಅದು ಸಾಮಾಜಿಕ ನಾಟಕವಾಗಿರಲೀ, ಐತಿಹಾಸಿಕವಾಗಿರಲೀ, ಪೌರಾಣಿಕವಾಗಿರಲೀ, ಕನ್ನಡದ ನೆಲದಲ್ಲಿ ಜನತೆಯ ಸಹಕಾರ ನಾಟಕಕ್ಕೆ ಸದಾ ಇದ್ದೇ ಇದೆ. ಎಂಬುದಕ್ಕೆ ಜೀವಂತ ಸಾಕ್ಷಿ "ಅಳ್ಳೊಳ್ಳಿ ಶ್ರೀ ಅಯ್ಯಪ್ಪಯ್ಯ ಮಹಾತ್ಮೆ" ನಾಟಕ ೧೯೯೪ ರಿಂದ ಇಲ್ಲಿಯವರೆಗೆ ಸುಮಾರು ಐದುನೂರಕ್ಕೂ ಹೆಚ್ಚು ಪ್ರಯೋಗಗಳು ಪ್ರದರ್ಶನಗೊಂಡಿವೆ". [೧೧೩]

"ಜಗತ ಕಲ್ಯಾಣಕ್ಕಾಗಿ ತಮ್ಮ ವೈಯಕ್ತಿಕ ಹಿತಾಸಕ್ತಿಯನ್ನು ಕಡೆಗಣಿಸಿ ಇಡೀ ಮಾನವ ಕುಲದ ಉದ್ಧಾರಕ್ಕಾಗಿ, ಅಭ್ಯುದಯಕ್ಕಾಗಿ ಬದುಕಿ ಬೆಳಕಾಗಿ ಹೋದ ಅನೇಕ ವಿಭೂತಿ ಪುರುಷರ ಚಾರಿತ್ರಿಕ ಸಾಹಿತ್ಯ ನಮ್ಮೆದುರು ಅಪಾರ ಪ್ರಮಾಣದಲ್ಲಿದೆ. ಇಂತಹ ಮಹಾಪುರುಷರ ಚರಿತ್ರೆಗಳನ್ನಾಧರಿಸಿ ಬರೆದ ನಾಟಕಗಳು ನಿಸ್ಸಂದೇಹವಾಗಿ ಸಮಾಜದ ನಡುವೆ ನೈತಿಕ ಮೌಲ್ಯಗಳನ್ನು ಪ್ರತಿಷ್ಠಾಪಿಸುತ್ತವೆ. ಅಂತಹ ದಿವ್ಯ ವಿಭೂತಿ ಪುರುಷರ ಶ್ರೇಣಿಯಲ್ಲಿ ಅಳ್ಳೊಳ್ಳಿಯ ಪೂಜ್ಯ ಶ್ರೀ ಅಯ್ಯಪ್ಪಯ್ಯ ಮಹಾಸ್ವಾಮಿಗಳು ಮೇರು ಸ್ಥಾನದಲ್ಲಿ ನಿಲ್ಲುತ್ತಾರೆ. ಈ ವಿಶ್ವಕರ್ಮಧರ್ಮದ ಪರಂಪರೆಯಲ್ಲಿ ಅನೇಕ ಜನಯೋಗಿಗಳು, ತ್ಯಾಗಿಗಳು, ಯೋಧರು, ರಾಜಮಹಾರಾಜರು, ಹಾಗೂ ಶಿಲ್ಪವರೇಣ್ಯರು ಬೆಳಗಿ ಹೋಗಿದ್ದಾರೆ. ಅವರ ಪರಂಪರೆಯಲ್ಲಿ ಬೆಳಗಿ ಹೋದ ಮಹಾತ್ಮರಲ್ಲಿ ಶ್ರೀ ಅಯ್ಯಪ್ಪಯ್ಯ ಸ್ವಾಮಿಗಳೂ ಒಬ್ಬರು. ಸಾಕ್ಷಾತ ತಿಂಥಣಿಯ ಮೌನೇಶ್ವರರ ಅವತಾರಿಗಳು ಎನ್ನಿಸಿಕೊಂಡು ಲೋಕ ಕಲ್ಯಾಣದಲ್ಲಿ ನಿರತರಾದ ಮಹಾನಯೋಗಿಗಳಿವರು. ತಮ್ಮ ಸಮಕಾಲಿನ ಸಮಾಜದಲ್ಲಿ ಬೇರುಬಿಟ್ಟಿದ್ದ ಮೂಢ ನಂಬಿಕೆಗಳು, ಅತ್ಯಾಚಾರ, ಅನಾಚಾರಗಳು ಹಾಗೂ ಅನೇಕ ಸಾಮಾಜಿಕ ವೈಷಮ್ಯತೆಗಳನ್ನು ನಿರ್ಭಿಡೆಯಿಂದ ಖಂಡಿಸುತ್ತಾ, ಪವಾಡಗಳನ್ನು ಮಾಡುತ್ತಾ ಜನರನ್ನು ಸನ್ಮಾರ್ಗದ ಪಥದಲ್ಲಿ ತರಲು ತಮ್ಮ ತಪಸ್ಸನ್ನೇ ಶ್ರೀ ಅಯ್ಯಪ್ಪಯ್ಯ ಸ್ವಾಮಿಗಳು ಧಾರೆಯೆರೆದಿದ್ದಾರೆ.[೧೧೪]

ಜಗದ್ಗುರು ಪಂಚಾನನ ಮೌನ ಮಹದೇವನನ್ನು ಸ್ಮರಿಸುತ್ತಾ, ಅಳ್ಳಳ್ಳಿ ಕ್ಷೇತ್ರಾಧಿಪತಿಯಾದ ಶ್ರೀ ಅಯ್ಯಪ್ಪಯ್ಯ ಮಹಾಸ್ವಾಮಿಗಳನ್ನು ಹೃನ್ಮಂದಿರದಲ್ಲಿ ನೆನೆಯುತ್ತಾ. ಇಂದಿಗೆ ಮುನ್ನೂರು ವರ್ಷಗಳ ಹಿಂದೆ ವಿಶ್ವವನ್ನು ಉದ್ದರಿಸಲು ಅವತರಿಸಿದ ಪಂಚಾನನ ಜಗದ್ಗುರು ಅಯ್ಯಪ್ಪಯ್ಯ ಮಹಾಸ್ವಾಮಿಗಳ ನಾಟಕ ಮುಂದುವರಿಯುವುದು.

**ಅಳ್ಳಳ್ಳಿ ಅಯ್ಯಪ್ಪಯ್ಯ ನೀ ಧರೆಗೆ ಬಾ**
**ನಿನಗಾಗಿ ಕಾದಿಹೆನು ಯುಗ-ಯುಗದಿ ನಾ ॥**
**ಶ್ರೀರಾಮಚಂದ್ರನಿಗೆ ಕಾಯ್ದ ಶಬರಿಯು ಅಲ್ಲ। ॥ಪ॥**
**ಶ್ರೀಹರಿಯ ಮಮ ಗೆಳೆಯ ಸುಧಾಮ ನಾನಲ್ಲ।**
**ಶಿವನಿಗೆ ಕಣ್ಣಿತ್ತ ಕಣ್ಣಪ್ಪ ನಾನಲ್ಲ॥**
**ಜಪದಲ್ಲಿ ತಪದಲ್ಲಿ ಶಿವಯೋಗಿ ನಾನಲ್ಲ॥ ॥೧॥**

**ಶ್ರೀವನದ ಹೂವಾಗಿ ನೀನರಳಿ ಬಾ।**
**ಮಧುವನದ ಜೇಂಗೊಡವು ನೀ ಸುರಿಸು ಬಾ।**
**ಹಾಲ್ಜೇನ ಅಲೆಯಲ್ಲಿ ನೀ ತೇಲಿ ಬಾ॥**
**ಮನದಲ್ಲಿ ನೀ ನೆಲಿಸಿ ಶುಭ ಗೊಳಿಸು ಬಾ॥ ॥೨॥** [೧೧೫]

ಬೀದರ ಕೋಟೆಯ ಸಂಸ್ಥಾನದ ಶ್ರೀಮಂತ ಮಹಾರಾಜರಾದ ಶ್ರೀ ಪಂಚಾನನ ಜಗದ್ಗುರು ಶ್ರೀ ಶೇಷಗಿರಿರಾಯರು ಜಗದ ಕಲ್ಯಾಣಕ್ಕಾಗಿ ಅವತರಿಸಿ ಬಂದು, ವಿಕಾಶದ ಅಂಚಿನಲ್ಲಿರುವ ಧರ್ಮವನ್ನು ಎತ್ತಿ ಹಿಡಿದು, ಜಗ ಸಂಚರಿಸುತ್ತಾ ರಾಯಚೂರು ಜಿಲ್ಲೆಯ ಕಿಲ್ಲೆ ಕೊಪ್ಪಳದ ಬಾದರ ಬಂಡಿಪುರಕ್ಕೆ ಬಂದು ಅಲ್ಲಿ ತಮ್ಮ ಧರ್ಮ ಕಾರ್ಯದಲ್ಲಿ ನಿರತರಾಗುವರು. ಅವರ ನಾಲ್ಕನೆಯ ತಲೆ ಮಾರಿನವರಾಗಿ, ಅವತರಿಸಿದವರೇ ತಿಂಥಣಿಯ ಮೌನೇಶ್ವರರು, ಅವರೂ ಕೂಡ ಭಾರತದ ತುಂಬ ಸಂಚಾರಿಸಿ ಹಿಂದು-ಮುಸಲ್ಮಾನರಿಗೊಬ್ಬನೇ ದೇವ ಎಂದು ಸಾರಿ, ಕೋಮು ಸೌಹಾರ್ದತೆಗೆ ನಾಂದಿ ಹಾಡಿ. ಅನೇಕ ವಚನಗಳನ್ನು ರಚಿಸಿ ಸುಕ್ಷೇತ್ರ ತಿಂಥಣಿಯಲ್ಲಿ ನಿಜಾನಂದ ಪದವಿಯನ್ನು ಹೊಂದಿದರು. ಅನಂತರ ಅವರ ಏಳನೇ ತಲೆ ಮಾರಿನವರಾಗಿ ಅದೇ ವಿಶ್ವಕರ್ಮ ವಂಶದಲ್ಲಿ ಶ್ರೀ ಅಯ್ಯಪ್ಪಯ್ಯ ಮಹಾಸ್ವಾಮಿಗಳು ಅವತರಿಸಿ ಸಂಸಾರಿಗಳಾಗಿ, ಸಹಧರ್ಮಿಣಿ ಶೇಷಾಂಬಿಕೆಯವರೊಡನೆ ಜಗ ಸಂಚರಿಸುತ್ತ ಸಗರನಾಡಿನ ತಿಂಥಣಿಗೆ ಆಗಮಿಸುವರು ಎಂದು ನಾಟಕ ಕರ್ತೃರು ನಿರುಪಿಸುತ್ತಾರೆ. ಈ ಹಂತದಲ್ಲಿ ಅಯ್ಯಪ್ಪರವರ ಮೂಲವಂಶಸ್ಥರ ಹಾಗೂ ಜನನ ಕುರಿತ ಪರಿಚಯವಾಗುತ್ತದೆ.

ಶ್ರೀ ಅಯ್ಯಪ್ಪಯ್ಯ ಅವರು ಮೌನೇಶ್ವರರ ಅವತಾರ ಪುರುಷರಾಗಿ ಈ ಭೂಮಿಗೆ ಇಳಿದರೆಂದು ಮುಂದಿನ ಪ್ರವೇಶ-ದೃಶ್ಯ, ತಿಂಥಣಿಯ ಮೌನೇಶ್ವರ ದೇವಸ್ಥಾನ ಇಲ್ಲಿ ಮೌನೇಶ್ವರರ ದಿವ್ಯದರ್ಶನವಾಗುತ್ತದೆ.

"**ಅಯ್ಯಪ್ಪಯ್ಯ:** ಓ, ವಿಶ್ವಕರ್ಮವಲ್ಲರಿಯಲ್ಲಿ ಪಲ್ಲವಿಸಿದ ತಿಂಥಣಿಯ ಮೌನೇಶ, ಇದೋ ನಿನ್ನ ದರ್ಶನಕ್ಕಾಗಿ ಬಂದಿದ್ದೇನೆ. ವರವಿಯಲ್ಲಿ ವರವಿಟ್ಟು, ಲಕ್ಷೇಶ್ವರದಲ್ಲಿ ಅಕ್ಷಯವಾಗಿರಿಸಿ, ಲಿಂಗನ ಬಂಡಿಯಲ್ಲಿ ಮನು, ಮಯ, ತ್ವಷ್ಟೃ, ದೈವಜ್ಞ, ಶಿಲ್ಪಿ ಈ ಪಂಚಾಳರನ್ನು ಕೂಡಿಸಿ, ಒಂದೇ ಪಂಕ್ತಿಯಲ್ಲಿ ಪ್ರಸಾದ ಮಾಡಿಸಬೇಕೆಂಬ ನಿನ್ನ ಸಂಕಲ್ಪ ವಿಕಲ್ಪವಾದಾಗ, ಅಲ್ಲಿಯೇ ಕುರಿಕಾಯುವ ಕುರುಬಗೆ ಪ್ರಸಾದ ಮಾಡಿಸಿದೆ. ನಿನ್ನ ಮಹಿಮೆ ಆಗಾಧವಾದುದ್ದು. ಆ ಲಿಂಗನ ಬಂಡಿಯಲ್ಲಿ

ನೀನಿಟ್ಟ ಪಾದಂಗಳಂ ಕಂಡು ಪಾವನನಾದೆ, ಪುನೀತನಾದೆ, ತಿಂಥಣಿಯಲ್ಲಿ ಕುರುಹನಿಟ್ಟು ಅಲೌಕಿಕ ಪವಾಡಗಳಿಂದ ಹಿಂದು-ಮುಸಲ್ಮಾನರಿಗೆ ಒಬ್ಬನೇ ದೇವ ಎಂದು ಸಾರಿದ ಮೌನೋದ್ದೀನ್ ಇದೋ ನಿನಗೆ ಪ್ರಣಾಮ ಸಲ್ಲಿಸುವೆ "ಮೌನನ ವಚನಗಳು, ಚಾನಧಹನನದಂತೆ" ಎಂದು ಸಾರಿದ ನಿನ್ನ ಸಂದೇಶ, ಗಾಳಿ ಗಂಧವಾಗಿ ಪ್ರತಿಯೊಬ್ಬರ ಮನೆ-ಮನ ತಣಿಸಿದೆ ಕುಣಿಸಿದೆ, ಆದರೇನು? ಎಲ್ಲಿ ನೋಡಿದರಲ್ಲಿ ಅನ್ಯಾಯ-ಅತ್ಯಾಚಾರಗಳ ತಾಂಡವ ದೃಶ್ಯ! ಮೋಸ, ವಂಚನೆಗಳ ಮಹಾಪೂರ! ಮಾನಿನಿಯರ ಮಾನಹರಣ! ಗೋವಧೆ ಮುಂತಾದ ಅನಿಷ್ಠ ಕಾರಕ ದೃಶ್ಯಗಳಿಂದ ನಾಡು ಕಂಗೆಟ್ಟಿದೆ. ನುಡಿ ಒಡಲು ಸೇರಿದೆ. ಕಾಡಿನ ಮಧ್ಯ ಬಾಳುವ ಋಷಿ-ಪುಂಗವರ ಜಪ-ತಪಗಳಿಗೆ ವಿವಿಧ ಕಾರಕ ಶಕ್ತಿಗಳಿಂದ ಚಿತ್ರಹಿಂಸೆ ಹೇಳು ದೇವಾ"?

"ಮೌನೇಶ್ವರ (ಪ್ರತ್ಯಕ್ಷನಾಗುವನು) ಕಂದಾ! ಅಯ್ಯಪ್ಪಯ್ಯಾ! ನನ್ನ ಶಕ್ತಿಯೇ ನೀನು ನಿನ್ನಿಂದ ನಾಡು ಬೆಳಗ ಬೇಕಾಗಿದೆ, ನುಡಿ ಗುಡುಗ ಬೇಕಾಗಿದೆ. ಅನ್ಯಾಯ ಅತ್ಯಾಚಾರಗಳನ್ನು ಶರಣ ಮಾರ್ಗದಿಂದ ಸಂಹರಿಸು, ಜಾತಿ-ಮತಗಳ ಕಾಡ್ಗಿಚ್ಚನ್ನೇ ನಂದಿಸಿ ಅಲ್ಲಿ ನಂದಾ ದೀಪ ಬೆಳಗಿಸು ಮಾನಿನಿಯರ ಮಾನ ಹರಣ ಮಾಡಲು ಮುಂದಾದ ಕಾಮಾಂಧರರ ಕಣ್ಣು ಕೀಳಿ ಅಲ್ಲಿ ಜ್ಞಾನ ಪ್ರಭೆ ಬೆಳಗಿಸು. ಪ್ರಾಣಿ ಹಿಂಸೆತಡೆ. ಗೋವಧೆಗಳನ್ನು ನಿಲ್ಲಿಸು. ಆದಿವ್ಯ ಶಕ್ತಿಯ ಪುಣ್ಯಪುಂಜವೇ ನೀನು, ನನ್ನಲ್ಲಿ, ನಿನ್ನಲ್ಲಿ, ಭೇದವಿಲ್ಲ ನಾವಿಬ್ಬರೂ ಅಭೇದ ಶಕ್ತಿಗಳು ಜಾತಿ-ಮತ-ಪಂಥಗಳನ್ನು ಹೋಗಲಾಡಿಸುವುದೇ ವಿಶ್ವಕರ್ಮದ ಧರ್ಮ". [೧೧೬]

"೧೬ನೇ ಶತಮಾನದಲ್ಲಿ ಮನು ಕುಲಕ್ಕೆ ಬೆಳಕಾಗಿ ನಿಂತ-ತಿಂಥಣಿಯ ಮೌನೇಶ್ವರರು ಒಬ್ಬರು. ರೂಢಿಯಲ್ಲಿರುವ ಸರಳ ಭಾಷೆಯಲ್ಲಿ ವಚನಗಳನ್ನು ರಚಿಸಿ ತನ್ಮೂಲಕ ಆಧ್ಯಾತ್ಮದ ಗಹನ ತತ್ವಗಳನ್ನು ಜನಸಾಮಾನ್ಯರಿಗೆ ಮುಟ್ಟಿಸುತ್ತ ಅವರ ಮನದ ಮೈಲಿಗೆಯನ್ನು ತೊಳೆದವರು ಸಗರ ನಾಡಿನ ಮಹಾತ್ಮ ಮೌನೇಶ್ವರರು. ಆಗಿನ ಮುಸ್ಲಿಂರ ವಿಪ್ಲವ ತಾಂಡವವಾಡುತ್ತಿದ್ದಾಗ ಹಿಂದು-ಮುಸ್ಲಿಂರ ನಡುವೆ ಸಾಮರಸ್ಯವನ್ನುಂಟು ಮಾಡಲು ಹಾಗೂ ಸಮಾಜದಲ್ಲಿ ಮಾನವ ಧರ್ಮವನ್ನು ಪ್ರತಿಷ್ಠಾಪಿಸಲು ಮೌನೇಶ್ವರರು ನಡೆಸಿದ ಆಂದೋಲನ ಅತ್ಯಂತ ಮಹತ್ವಪೂರ್ಣವಾದುದು".[೧೧೭]

ಶ್ರೀ ಅಯ್ಯಪ್ಪಯ್ಯ ಮೌನೇಶ್ವರರ ದಿವ್ಯದರುಶನ ಪಡೆದು ಜಗಸಂಚರಿಸಲು ಅನುಮತಿ ಕೇಳಿದಾಗ, ಹೋಗು, ಚರಚಕ್ರವರ್ತಿಯಾಗು ಆದರೂ ನಿನಗೊಂದು ಕಾರ್ಯ ಕ್ಷೇತ್ರ ಬೇಕು.

"**ಮೌನೇಶ :** ಆಧ್ಯಾತ್ಮದ ತವರೂರು ಈ ಕರುನಾಡು, ಈ ಸಗರನಾಡು ಶರಣರ ಬೀಡು. ವಚನ ವಾಙ್ಮಯ ಕಮ್ಮಟ, ಇದೇ ನಾಡಿನಲ್ಲಿಯೇ ನಿನ್ನ ಕಾರ್ಯ ಕ್ಷೇತ್ರವಾಗಬೇಕು.

**ಅಯ್ಯಪ್ಪಯ್ಯ :** ಅದಾವ ದಿಕ್ಕಿಗೆ ತಂದೆ?

**ಮೌನೇಶ :** ಇಲ್ಲಿಂದ ಉತ್ತರ ದಿಕ್ಕಿಗೆ ಹರಿಯುವ ಭೀಮಾನದಿಯನ್ನು ದಾಟಿದರೆ ಹಲಕರ್ಟಿಪುರ ಉಂಟು. ದಕ್ಷ ಬ್ರಹ್ಮನು ನಿರ್ಮಿಸಿದ ಯಜ್ಞಕುಂಡದಲ್ಲಿ ದಾಕ್ಷಾಯಣಿಯ ಪತಿ ಪರಮೇಶ್ವರ ಬಾರದ್ದಕ್ಕೆ ಅದೇ ಯಜ್ಞಕುಂಡದಲ್ಲಿ ಬಿದ್ದು ದಹಿಸಿದಾಗ, ಶಿವನು ಕ್ರೋಧ ತಪ್ತನಾಗಿ

ತನ್ನ ಜಡೆಗಳನ್ನು ನೆಲಕ್ಕಪ್ಪಳಿಸಿದಾಗ ತಕ್ಷಣವೇ ಉದ್ಭವಿಸಿದ ರುದ್ರಮೂರ್ತಿ ವೀರಭದ್ರನು ನೆಲೆಸಿದ ಪುಣ್ಯಭೂಮಿಯು ಹೌದು. ಅಲ್ಲಿಂದ ಮೂರು ಗಾವುದ ಮೇಲೆ, ಆರು ಹಳ್ಳಗಳನ್ನು ದಾಟಿ ಅರುಹಿನಪುರ ಉಂಟು ಅದುವೇ ಮರಿಕಲ್ಯಾಣ. ಹಳ್ಳ ದೀಚೆಗೆ ನಾನು ನೆಲೆಸಿದ ಸ್ಥಾನವೂ ಉಂಟು ಅಲ್ಲಿಯೇ ಮಹಾತ್ಮ ಪೀಠವನ್ನು ಸ್ಥಾಪಿಸು.

"ಈ ಮಹಾಮಹಿಮರ ಜೀವನ ಬೋಧನೆ ಹಾಗೂ ಸಾಧನೆಗಳನ್ನು ಜನಮನದಲ್ಲಿ ಬಿಂಬಿಸಲು ವೈವಿಧ್ಯಮಯ ಸಾಹಿತ್ಯವು ಹೊರಬರುವುದು ಅವಶ್ಯವಾಗಿದೆ. ಈ ನಿಟ್ಟಿನಲ್ಲಿ ಸಗರನಾಡಿನ ಅನುಭಾವ ಕವಿ, ನಾಟಕಕಾರ ಹಾಗೂ ಸಮರ್ಥ ಸಾಹಿತಿಯಾದ ಎಲ್.ಬಿ.ಕೆ. ಆಲ್ದಾಳ ಅವರು ಅಯ್ಯಪ್ಪಯ್ಯ ಮಹಾತ್ಮೆ ಎಂಬ ಭಕ್ತಿ ಪ್ರಧಾನ ನಾಟಕವನ್ನು ರಚಿಸಿ ಲೋಕಾರ್ಪಣೆ ಮಾಡಿ ಧನ್ಯತೆಯನ್ನು ಪಡೆದಿದ್ದಾರೆ". [೧೧೮]

ಮೌನೇಶ್ವರರು ಮತ್ತು ಅಯ್ಯಪ್ಪಯ್ಯರ ಮಧ್ಯದ ಮಾತುಗಳು ಇಡೀ ನಾಟಕದ ಜೀವಾಳವಾಗಿದ್ದು ಕುಂದಣಪ್ರಾಯವಾಗಿವೆ.

ಮುಂದಿನ ಅಧ್ಯಾಯಗಳಲ್ಲಿ ಕಾಣುವುದು ಮರ್ತ್ಯ–ಅಮರ್ತ್ಯಗಳ ನಡುವಿನ ಸಂಘರ್ಷಣೆಗಳನ್ನು. ಈ ಸಂಘರ್ಷಣೆಯಲ್ಲಿ ಸಾತ್ವಿಕ ಚೇತನವು ತಾಮಸ ಪ್ರವೃತ್ತಿಯನ್ನು ಗೆಲ್ಲುತ್ತದೆ. ಇದು ನಾಟಕದ ಮೂಲದ್ರವ್ಯವಾಗಿದೆ.

ಅಮೃತತ್ವದ ಪ್ರತೀಕವಾಗಿ ಬಸವರೆಡ್ಡಿ ಹಾಗೂ ಆತನ ಧರ್ಮಪತ್ನಿ ವಸುಂಧರಾ ಮತ್ತು ಅಯ್ಯಪ್ಪಯ್ಯ ಹಾಗೂ ಅವರ ಧರ್ಮಪತ್ನಿ ಶೇಷಾಂಬಿಕೆಯರು ತಮ್ಮ ನಿಷ್ಠೆಯಿಂದ ತತ್ವಬದ್ಧ ನಡತೆಯಿಂದ ಅತ್ಯಂತ ಎತ್ತರದ ಸ್ಥಾನದಲ್ಲಿ ನಿಲ್ಲುತ್ತಾರೆ.

ಬಸವರೆಡ್ಡಿ ಹಾಗೂ ಅವರ ಧರ್ಮಪತ್ನಿ ವಸುಂಧರೆಯರ ಆತ್ಮೋದ್ಧಾರದ ಸಾಧನೆ ಎಂದರೆ ಅನುಭಾವ ಪೂರಿತಭಕ್ತಿ, ಪ್ರೇಮ, ತ್ಯಾಗಗಳು.

ಬಸವ ರೆಡ್ಡಿಯ ದೇಶಗತಿಯು ನಿಜಾಮನ ಪಾಲಾದಾಗ ಚಿಂತಾಕ್ರಾಂತರಾಗಿ ಬಸವರೆಡ್ಡಿಯು ಬಳಲುತ್ತಿರುವ ಸಂದರ್ಭದಲ್ಲಿ ಅವನ ಧರ್ಮಪತ್ನಿಯಾದ ವಸುಂಧರೆಯು ಧೈರ್ಯಗೆಡದೆ ಗಂಡನಲ್ಲಿ ನೈತಿಕ ಸ್ಥೈರ್ಯ ಮೂಡಿಸುತ್ತಾಳೆ. ಈ ಸಂವಾದ ನೋಡಿ –

"**ಬಸವರೆಡ್ಡಿ :** ಹೋದ ನಮ್ಮ ದೇಶ್ಗತಿ ಮರಳಿ ಬರಬಹುದೇ ವಸುಂಧರಾ?

**ವಸುಂಧರಾ :** ಯಾಕೆ? ಬರಬಾರದು ಸ್ವಾಮಿ? ಯಾಕೆ ಬರಬಾರದು? ಇದರಲ್ಲಿ ನಮ್ಮ ಅಪರಾಧವಾದರೂ ಏನು? ಸತ್ಯಕ್ಕೆ ಸಾವಿರ ಕಂಟಕಗಳು, ಬಂದದ್ದು ಭೋಗಿಸಿ, ತಿಂದದ್ದು ಅರಗಿಸಿ, ಕಳೆದದ್ದನ್ನು ಹುಡುಕಿ ಆಳುವುದೇ ಜಾಣತನ".[೧೧೯] ಎಂದು ಗಂಡನಿಗೆ ಧೈರ್ಯ ಹೇಳುವುದು ಕಂಡಾಗ ಸ್ತ್ರೀ ಹೃದಯಕ್ಕಾಗುವ ಕಳವಳ ನೋಡಬಹುದು.

ಹೆಣ್ಣು ತನ್ನ ಗಂಡನ ಶ್ರೇಯಸ್ಸಿಗಾಗಿ ದೇವರಲ್ಲಿ ಬೇಡುವ ಪರಿ ಮನೋಜ್ಞವಾಗಿದೆ.

"ಶ್ರೀಶೈಲ ಮಲ್ಲಿಕಾರ್ಜುನ ನನ್ನ ಸೌಭಾಗ್ಯ ಕಾಪಾಡುವುದು ನಿನ್ನದು ತಂದೆ, ಸುತ್ತ ಹತ್ತು ಹರದಾರಿಗೆ ಹೆಸರಾದ, ದೇಶಗತಿ ಮನೆತನಕ್ಕೆ ಮುಸುಕಿದ ಕತ್ತಲೆ ಹರಿದು ಸತ್ಯದ ಬೆಳಕು ನೀಡು ತಂದೆ. ಯಾರದೋ ಪಿತುರಿ ಮಾತಿಗೆ ನಂಬಿ ಹೈದರಾಬಾದ ನಿಜಾಮ ದೊರೆಗಳು ಅಳ್ಳಳ್ಳಿಯ ನಮ್ಮ ದೇಶಗತಿಯನ್ನೇ ಕಸಿದು ಕೊಂಡುಬಿಟ್ಟಿದ್ದಾರೆ. ಅಂದಿನಿಂದ ಇಂದಿನವರೆಗೂ ನನ್ನ ಪತಿ ಮಾನಸಿಕ ವೇದನೆಯಿಂದ ಬಳಲುತ್ತಿದ್ದಾರೆ. ದೇವಾ ಮಲ್ಲಿಕಾರ್ಜುನ, ನನಗೆ ನಿನ್ನ ಸಿರಿ, ಸಂಪತ್ತು ಬೇಡ. ನನಗೆ ನನ್ನ ಮನೆತನದ ಮರ್ಯಾದೆ ಬೇಕು. ಮಾನಬೇಕು, ನನ್ನ ಪತಿಯ ಪ್ರಾಣಬೇಕು, ದೇವಾ! ಮುತ್ತೈದೆಯಾಗಿ ಬಾಳುವ ಭಾಗ್ಯ ನೀಡು. ಇಲ್ಲಾ (ಅಳುತ್ತ) ಮುತ್ತೈದೆಯ ಸಾವು ನೀಡು. ನನ್ನ ಪತಿಯ ಮಾನಸಿಕ ವೇದನೆ ದೂರಾಗಲಿ ಎಂದು ಹತ್ತು ದೇವರಿಗೆ ಹರಕೆ ಹೊತ್ತಿದ್ದೇನೆ. ಹನ್ನೆರಡು ದೇವರಿಗೆ ಮುಡುಪು ಕಟ್ಟಿಟ್ಟಿದ್ದೇನೆ. ನಾಡಿನ ನಾನಾ ಮೂಲೆ ಮೂಲೆಗಳಿಂದ ಹಕೀಮರನ್ನು ಕರೆಯಿಸಿ ತೋರಿಸಿಯೂ ಆಯಿತು ಏನು ಮಾಡಲಿ ಶಿವನೇ!"[೧೨೦]

ಇದು ಪತಿಯ ಬಗ್ಗೆ ಇರುವ ಸ್ತ್ರೀಯರ ಕಳವಳ, ಇದನ್ನು ನಾಟಕಕಾರ ಆಲ್ದಾಳ ಅವರು ತಮ್ಮ ಕೃತಿಯಲ್ಲಿ ಮನ ಕರಗುವಂತೆ ಬಿಂಬಿಸಿದ್ದಾರೆ. ಹೆಣ್ಣಿಗೆ ಪತಿಯೇ ದೈವ, ಅವಳು ತನ್ನ ಸೌಭಾಗ್ಯವೇ ಮುಖ್ಯ, ಮುತ್ತೈದೆಯಾಗಿ, ಬಾಳುವುದು ಮತ್ತು ಸಾವು ಮುತ್ತೈದೆಯಾಗಿಯೇ ಬರಲಿ ಎನ್ನುವುದೇ ದೃಢ ನಿಲುವು, ಗಂಡನ ಯೋಗ ಕ್ಷೇಮಕ್ಕಾಗಿ ಯಾವ ತ್ಯಾಗವನ್ನು ಮಾಡಲು ಸಿದ್ಧ ಎನ್ನುವ ಮಾತುಗಳು ವಸುಂಧರಾರ ಪಾತ್ರಗಳ ಮೂಲಕ ಹೃದಯಂಗಮವಾಗಿ ವಿವರಿಸಿದ್ದಾರೆ. ಗ್ರಾಮೀಣ ಭಾಗದಲ್ಲಿ ಕುಟುಂಬದಲ್ಲಿ ಯಾರಿಗೆ ಏನು ಆತಂಕ, ಕಷ್ಟ–ಕಾರ್ಪಣ್ಯಗಳು ಬಾರದಿರಲಿ ಎಂದು ಹರಕೆ ಹೊರುವುದು ದೇವರಿಗೆ ಮುಡುಪು ಕಟ್ಟಿಡುವುದು ಸಾಮಾನ್ಯ. ಇದು ಮಹಿಳೆಯರಲ್ಲಿ ಇರುವ ಭಕ್ತಿ, ನಂಬಿಕೆ ಇದನ್ನು ಬಹಳ ಕಾಲದಿಂದಲೂ ಮುಂದುವರಿಸಿಕೊಂಡೇ ಬಂದಿದ್ದಾರೆ.

ಅಂತಹ ಕಷ್ಟಕರ ಸಮಯದಲ್ಲೂ ಅಯ್ಯಪ್ಪನವರ ಮಹಾತ್ಮಾ ಪೀಠಕ್ಕೆ ಇಬ್ಬರು ದಂಪತಿಗಳು ಭಕ್ತಿಯಿಂದ ಭೂದಾನ ಮಾಡುತ್ತಾರೆ. ಅಯ್ಯಪ್ಪನವರ ಅನುಗ್ರಹ ಪಡೆಯುತ್ತಾರೆ. ಈ ಪುಣ್ಯ ಕಾರ್ಯದಿಂದಾಗಿ ಅವರ ಕಷ್ಟಗಳು ಸರಿದುಹೋಗುತ್ತವೆ. ಹೋದ ದೇಶಗತಿಯನ್ನು ಹೈದ್ರಾಬಾದ ನಿಜಾಮನಿಂದ ಮರಳಿ ಪಡೆಯುತ್ತಾನೆ. ದಂಪತಿಗಳಲ್ಲಿರುವ ಆತ್ಮವಿಶ್ವಾಸ ಅದರಲ್ಲೂ ಸತಿ ವಸುಂಧರಾಳಲ್ಲಿರುವ ದೇವರಲ್ಲಿನ ಅಚಲನಂಬಿಕೆ ಹುಸಿಯಾಗುವುದಿಲ್ಲ, ನಂಬಿದ ಭಕ್ತರನ್ನು ದೇವರು ಕೈ ಬಿಡುವುದಿಲ್ಲ, ಪ್ರತಿಯೊಂದು ಸಂಸಾರದಲ್ಲಿ ಕುಟುಂಬಗಳು ಒಂದಾಗಿ ಬಾಳಲಿ, ಚೆಂದಾಗಿ ಬದುಕುವುದೇ ಮುಖ್ಯ.

ಅದರಂತೆ ಅಯ್ಯಪ್ಪಯ್ಯ–ಶೇಷಾಂಬಿಕೆ ದಂಪತಿಗಳಲ್ಲಿ ಅನುಭಾವ ಪೂರಿತ ತ್ಯಾಗದ ಬದುಕು ಎಲ್ಲರ ಗಮನವನ್ನು ಸೆಳೆಯುತ್ತದೆ. ಮಕ್ಕಳಿರದೆ ಅವರ ಜೀವನ ಸಾಗುತ್ತಿದ್ದಾಗ ಶೇಷಾಂಬಿಕೆಯಲ್ಲಿ ಕಂಡುಬರುವ ಅಪಾರ ಶ್ರದ್ಧೆ, ನಿಷ್ಠೆ ಹಾಗೂ ನೈತಿಕ ಸ್ಥೈರ್ಯಗಳನ್ನು ರಂಗಭೂಮಿಯ ಮೇಲೆ ನೋಡಿದ ಪ್ರೇಕ್ಷಕರಿಗೆ ಬೆರಗುಗೊಳಿಸುತ್ತದೆ.

"ಅಯ್ಯಪ್ಪಯ್ಯ: ಶೇಷಾಂಬಿಕೆ । ಭಾವ ಪಾವನಗೊಂಡು ಬಂದ ಭಕ್ತ ಸಮೂಹಕ್ಕೆ ನೀನು ತಾಯಿಯಾಗಬೇಕು.

ಶೇಷಾಂಬಿಕೆ: ಆಗಲಿ ಸ್ವಾಮಿ ನಿಮ್ಮ ಆಜ್ಞೆ ಶಿರಸಾವಹಿಸಿ ಪಾಲಿಸುತ್ತೇನೆ. ನಿಮ್ಮ ಸತಿಯಾಗಿ, ಜೊತೆಗಾರ್ತಿ ನಾನಾಗಿ, ಹುಟ್ಟು ಸಾವಿಲ್ಲದ ಅನಂತ ಮಕ್ಕಳನ್ನು ಪಡೆದ ಪುಣ್ಯಾನನ್ನದು" [೧೨೧]

ವಿಶ್ವದ ಮಕ್ಕಳೇ ನನ್ನ ಮಕ್ಕಳು ಎನ್ನುವ ಶೇಷಮ್ಮಳ ಮಾತುಗಳು ಅಮೃತ ಸಮಾನ, ನಿತ್ಯಾನಂದ, ಸುಖ-ಸಂಸಾರಕ್ಕೆ ತಕ್ಕುದಾದ ಮಾತುಗಳು ಶೇಷಮ್ಮ ಎಲ್ಲಿಯೂ ತನಗೆ ಮಕ್ಕಳಾಗಲಿಲ್ಲವಲ್ಲ ಎಂದು ಯಾರಲ್ಲೂ ತೋಡಿಕೊಂಡವಳಲ್ಲ, ಯಾವ ಪರೀಕ್ಷೆಯೊಡ್ಡಿದರೂ ಅವಳು ಮಕ್ಕಳ ಬಗ್ಗೆ ದುಃಖ ತೋರದೇ ಇರುವುದು ಅವರ ಮನೋಸ್ಥೈರ್ಯವೇ ಕಾರಣ. ಒಮ್ಮೆ ಶೇಷಮ್ಮಳನ್ನು ಪರೀಕ್ಷೆ ಮಾಡಲೆಂದೇ.

ಅಯ್ಯಪ್ಪಯ್ಯ ಅವರಿಗೆ ತಮ್ಮ ಕೊನೆಗಾಲ ಸಮೀಪವಿದೆ ಎಂದು ಮನವರಿಕೆಯಾದಾಗ ಧರ್ಮಪತ್ನಿ ಶೇಷಮ್ಮಳಿಗೆ ತಿಳಿಹೇಳುವ ಮಾತುಗಳಲ್ಲಿ ಅನೇಕವು ಜೀವನದಲ್ಲಿ ಎಲ್ಲರೂ ಅಳವಡಿಸಿಕೊಳ್ಳಲೇ ಬೇಕಾದ ತತ್ವಗಳು ಅಡಗಿವೆ. ಓದಿ :-

"**ಅಯ್ಯಪ್ಪಯ್ಯ :** ಶೇಷಾಂಬಿಕೆ ನಿನ್ನ ಮಕ್ಕಳ ಮಮತೆ ನೋಡಿದೆಯಾ? ಸಮುದ್ರದ ಅಲೆ ಅಲೆಯಂತೆ ಬರುವ ಜನಸಾಗರಕ್ಕೆ ಹೆತ್ತ ನಿನ್ನೊಡಲು ಮಹಾಂತವಾದದ್ದು ಶೇಷಾ ಮಾತಾಡು.

**ಶೇಷಮ್ಮ :** ಗಿಡದಲ್ಲಿ ವಾಸ ಮಾಡಿಕೊಂಡಿರುವ ಜೋಡಿ ಹಕ್ಕಿಗಳಲ್ಲಿ ಒಂದು ಪಕ್ಷಿ ಹಾರಿ ಹೋದಾಗ ಇದ್ದ ಪಕ್ಷಿಗೆಷ್ಟು ನೋವಾಗುತ್ತದೆ ಅನ್ನೋದು ಹೋಗುವವರಿಗೇನು ಗೊತ್ತಾಗ ಬೇಕು? ಕರೆದುಕೊಂಡು ಬಂದವರು, ಜೊತೆಯಾಗಿ ಬಾಳಿದವರು, ಸಮವಾಗಿ ಕಂಡವರು (ಅಳುತ್ತ) ಇವತ್ತು ಒಬ್ಬಾಕ್ಕೀನ ಬಿಟ್ಟು ಪರದೇಶಿಯಾಗಿ ಮಾಡಿ ಹೋಗ್ತಿರಲ್ಲ.

**ಅಯ್ಯಪ್ಪಯ್ಯ :** ನಾವು ಈ ಭೂಮಿಗೆ ಬಂದಾಗ ಯಾರಿಗೂ ಹೇಳಿ, ಕೇಳಿ ಬಂದಿಲ್ಲ, ಜೊತೆಗೆ ಯಾರಿಗೂ ಕರೆದುಕೊಂಡು ಬಂದಿಲ್ಲ, ಏನೊ ನಾವು-ನೀವು ಈ ಕೂಡಲಸಂಗಮದಲ್ಲಿ ಕೂಡಿದ್ದೇವೆ, ಒಂದಾಗಿದ್ದೇವೆ. ಮಧುರ ಬಾಂಧವ್ಯ ಬೆಳೆದು ಈ ಭೂಮಿಯ ಸಿರಿಯ ಕಂಡಿದ್ದೇವೆ ಅಂದ ಮಾತ್ರಕ್ಕೆ ಜೊತೆ ಗೂಡಿದವರನ್ನು ಜೊತೆಯಲ್ಲಿಯೇ ಕರೆದುಕೊಂಡು ಹೋಗು ಎಂದರೆ ತಪ್ಪಾಗಲಿಕ್ಕಿಲ್ಲವೆ? ನೀನಿನ್ನು ಈ ಭವದ ಸಂತೆ ಮಾಡಬೇಕಾಗಿದೆ. ನಿನ್ನ ಮುದ್ದು ಮಕ್ಕಳ ಪಾಲನೆ ಮಾಡಬೇಕಾಗಿದೆ. ಅಳಬಾರ್ದು ಶೇಷಾ ಹೋಗುವವರನ್ನು ಕಂಡು ಅಳುವದೊಂದು ಮಹಾಪಾಪ। ಹೋಗುವವರನ್ನು ನಗು ನಗುತ್ತಲೇ ಬೀಳ್ಕೊಡಬೇಕು ಯಾರಲ್ಲಿ ಆಶೆಗಳಿರುವುದಿಲ್ಲವೋ ಅವರಿಗೆ ದುಃಖ-ದುಮ್ಮಾನಗಳಿರುವುದಿಲ್ಲ, ನನ್ನ ಅಪ್ಪಣೆಯಂತೆ ಈ ಮಹಾತ್ಮಾ ಪೀಠದ ಮಕ್ಕಳ ಲಾಲನೆ, ಪಾಲನೆ ಗೈದು ನಂತರ ನನ್ನೆಡೆಗೆ ಬಾ-ಇದು ನನ್ನಾಜ್ಞೆ,

ಇದು ಅಯ್ಯಪ್ಪಯ್ಯನವರ ಜೀವನ ಸಂದೇಶವಾಗುತ್ತದೆ. ಇವೆಲ್ಲವುಗಳಲ್ಲಿಬದುಕಿನ ಆಧ್ಯಾತ್ಮದ ಸತ್ಯವೊಂದು ಅನಾವರಣಗೊಳ್ಳುತ್ತದೆ. "ಪ್ರೇಮವನ್ನು ಅನುಭಾವದಲ್ಲಿ ಅನುಭವಿಸುವುದೇ ದಿವ್ಯ ಜೀವನ ಎಂಬ ಸಂದೇಶ ಬಿತ್ತರವಾಗುತ್ತದೆ".

"ಭಕ್ತಿ ಪ್ರಧಾನವಾದ ನಾಟಕಗಳನ್ನು ರಚಿಸುವುದು ಕಷ್ಟದ ಕೆಲಸವೇ ಸರಿ, ನಾಟಕದಲ್ಲಿ ಬರುವ ಸನ್ನಿವೇಶಗಳು, ಕೃತಿ ರಚನೆಯಲ್ಲಿ ಕೊಂಚ ತಪ್ಪು ನುಸುಳಿದರೆ ಸಾಕು ಪ್ರೇಕ್ಷಕ ಅದನ್ನು ಸರಾಗವಾಗಿ ಗುರುತಿಸಬಲ್ಲ, ಮೂಲ ಕಥೆಗೆ ಚ್ಯುತಿ ಬಾರದಂತೆ ದೃಶ್ಯಗಳು ಕೃತಕವೆನ್ನಿಸದಂತೆ ಅಭಿಮಾನಿಗಳ ಮನಕೊಪ್ಪುವಂತೆ, ನೈಜವಾಗಿ, ಸರಳ ಸುಂದರವಾಗಿ ಎಲ್.ಬಿ.ಕೆ ಆಲ್ದಾಳರು ಈ ಕೃತಿಯನ್ನು ರಚಿಸಿ ರಂಗಭೂಮಿಯ ಮೇಲೆ ಪ್ರದರ್ಶಿಸಿ ಸೈ ಎನಿಸಿಕೊಂಡಿದ್ದಾರೆ".[೧೨೨]

"ಇವುಗಳ ಹಿನ್ನೆಲೆಯಲ್ಲಿ 'ಅಳ್ಳೊಳ್ಳಿಯ ಶ್ರೀ ಅಯ್ಯಪ್ಪಯ್ಯ ಮಹಾತ್ಮೆ' ನಾಟಕ ರಚಿತಗೊಂಡು ಓದುಗರ ಕೈಯಲ್ಲಿದೆ. ಇದನ್ನು ಕುರಿತು ಎಷ್ಟು ಹೇಳಿದರು ಕಡಿಮೆ ಸಮಾಜದಲ್ಲಿ ಸಾತ್ವಿಕ ಚೇತನದ ಪ್ರತಿನಿಧಿಯಾಗಿ ಬಸವರೆಡ್ಡಿ ದೇಶಮುಖ ವಿಜೃಂಭಿಸಿದ್ದರೆ, ಇದಕ್ಕೆ ತದ್ವಿರುದ್ಧವಾಗಿ ಅಹಂಕಾರ, ಭೋಗಲಾಲಸೆ, ಅನ್ಯಾಯ ಹಾಗೂ ಹೊಟ್ಟೆ ಕಿಚ್ಚುಗಳಿಗೆ ಪ್ರತೀಕವಾಗಿ ಭೀಮರೆಡ್ಡಿ ಗಮನ ಸೆಳೆಯುತ್ತಾನೆ ಇವರಿಬ್ಬರ ನಡುವೆ ಸ್ತ್ರೀಯರಲ್ಲಿರುವ ಸಾತ್ವಿಕ ಶಕ್ತಿಯ ಪ್ರತೀಕವಾಗಿ ವಸುಂಧರೆಯು ನಾಟಕದುದ್ದಕ್ಕೂ ಕಂಗೋಳಿಸಿದ್ದಾಳೆ". [೧೨೩] ವಸುಂಧರೆ ದಂಪತಿಗಳ ಬಗ್ಗೆ ಅಯ್ಯಪ್ಪಯ್ಯ ಅವರು ಹೇಳಿದ ಮಾತುಗಳನ್ನು ತಿಳಿದುಕೊಂಡಾಗ, ಎಲ್ಲರ ಸಂಸಾರ ಎಷ್ಟೊಂದು ಸುಖಕರವಾಗುತ್ತದೆ.

"**ಅಯ್ಯಪ್ಪಯ್ಯ :** ಆ ಪಂಚಾನನ ಜಗದ್ಗುರು ಮೌನೇಶನು ಅಷ್ಟೈಶ್ವರ್ಯ ಸಂಪತ್ತು ನೀಡಲಿ ಹರಕೆ ಹರವಾಗಲಿ, ಬಸವರೆಡ್ಡಿ ವಸುಂಧರಾದೇವಿ ನಿಮ್ಮೀರ್ವರ ಭಕ್ತಿ ಸಂಪತ್ತು ಅಪಾರವಾದದ್ದು, ನಿಮ್ಮ ದೇಹಗಳೆರಡು ಇದ್ದರೂ ಆತ್ಮ ಒಂದೇ, ಸೃಷ್ಟಿ ಒಂದೇ, ಅಂತೆಯೇ ಮುದನೂರಿನ ದೇವರ ದಾಸಿಮಯ್ಯನು ನುಡಿದಿರಬಹುದು. ಸತಿಪತಿಗೊಳಿಗೊಂದಾದ ಭಕ್ತಿ ಹಿತವಾಗಿಪ್ಪುದು ಆ ಶಿವಂಗೆ ಅಂತ ನಿಜವಾಗಿ ಶಾಂತಿ-ಸುಖ ಅರಸುವುದಾದರೆ ನಿಮ್ಮಂಥ ಸತಿಪತಿಗಳಲ್ಲಿ ಬಡತನವಿರಲಿ, ಶ್ರೀಮಂತಿಕೆ ಇರಲಿ, ಒಂದಕ್ಕೊಂದು ಸಮವಾಗಿ ಹೋದರೇನೆ ಆ ಬಾಳಿಗೆ ಬೆಲೆ. ಆ ಬದುಕಿಗೆ ಬೆಲೆ, ಕೆಲವರು ಇದಕ್ಕೆ ಸಂಸಾರದಲ್ಲಿ ಯಾವ ಸುಖ ಇದೆ? ಎಂದು ಪಲಾಯನ ಮಾಡಿ ಗುಡ್ಡ ಗಂವಾರಗಳಲ್ಲಿ ಕುಳಿತು ತಪಸ್ಸು ಮಾಡಿದರೆ ಆತ್ಮ ತೃಪ್ತಿಯಾಗುವುದೆ? ಆನಂದವಾಗುವುದೆ? ಇಲ್ಲಾ ಅಲ್ಲಿಯೂ ಅವರ ಮನ ಹೊಯ್ದಾಟದ ಸೆಳವಿನಲ್ಲಿ ಸಿಕ್ಕು ಕಂಡಕಡೆ ಜಗಸಂಚರಿಸುತ್ತಾರೆ. ಸಂಸಾರದಲ್ಲಿ ಸುಖವಿಲ್ಲವೆ? ಪರಮಾತ್ಮನಿಲ್ಲವೆ? ಇಲ್ಲಿಯೇ ಆ ಸುಖ ಕಾಣದವರು, ಅಲ್ಲೇನೂ ಸುಖ ಕಾಣುತ್ತಾರೆ, ಅಲ್ಲೇನೂ ಆನಂದ ಪಡೆಯುತ್ತಾರೆ? ನದಿಯಲ್ಲಿದ್ದ ಮೀನು ನೀರನ್ನು ಅರಸಿ ತಿರುಗಿದಂತೆ, ತಾಯಿಯ ತೊಡೆಯಲ್ಲಿದ್ದ ಮಗು ತಾಯಿಗಾಗಿ ಹುಡುಕುವಂತೆ, ಆಕಾಶದಲ್ಲಿರುವ ವಿಹಗ ವಾಯುವಿಗಾಗಿ ವಿಹರಿಸಿದಂತೆ, ಅಂತಹವರು ಕಣ್ಣಿದ್ದು ಕುರುಡರಂತೆ, ಕಿವಿಯಿದ್ದು ಕಿವುಡರು, ಅಂತರಾತ್ಮದಲ್ಲಿ ನೋಡಿದ್ದೇ ಶಿವರೂಪ, ಕೇಳಿದ್ದೆ ಪರಮಬೋಧೆ, ನಮ್ಮನ್ನು ತಮ್ಮ

ಮನೆಗೆ ಕರೆಸಿಕೊಂಡು ಭಕ್ತಿ ಪೂರ್ವಕ ಸ್ವಾಗತಿಸಿದ್ದೀರಿ ಇದು ನಮಗೆ ಆನಂದವಾಗಿದೆ".[೧೨೪]

ಈ ನಾಟಕವು ಬಹಳಷ್ಟು ದೃಷ್ಟಿಕೋನಗಳಿಂದ ವೈಶಿಷ್ಟಪೂರ್ಣ ವೆನ್ನಿಸುತ್ತದೆ ಇದರಲ್ಲಿಯ ಒಂದೊಂದು ಪ್ರಕರಣವೂ ನಾಟಕಕಾರರ ಅಪ್ರತಿಮ ನಿರೂಪಣಾ ಸಾಮರ್ಥ್ಯಕ್ಕೆ ನಿದರ್ಶನ ಇದು ಈ ನಾಟಕದ ವಿಶೇಷ.

"ಶ್ರೀ ಅಯ್ಯಪ್ಪಯ್ಯ ಮಹಾತ್ಮೆ' ನಾಟಕದಲ್ಲಿ ಬರುವ ಭೀಮರೆಡ್ಡಿ ಪಾತ್ರವಂತೂ ಊರಿನ ಜನರನ್ನೇ ತನ್ನ ಕಪಿ ಮುಷ್ಠಿಯಲ್ಲಿ ಇರಿಸಿಕೊಂಡಿರುವಂತೆ ಭಾಸವಾಗುತ್ತದೆ. ಅವನಲ್ಲಿರುವ ಅಹಂಕಾರ, ಕ್ರೂರತನ, ಕೊಲೆಗಡುಕತನ, ಎಷ್ಟೊ ಜನರ ರುಂಡ ಕತ್ತರಿಸಿ ತೆಗೆದಾಂವ, ಹೊಲಗಳಲ್ಲಿ ಬೆಳೆದುನಿಂತು ಪೈರಿಗೆ ಬಂದ ತೆನೆಗಳನ್ನು ಚೆಂಡಾಡಿದಾಂವ, ಭೀಮರೆಡ್ಡಿಗೌಡ ಎಂದರೆ ನೂರಾರು ಹಳ್ಳಿಯ ಜನರು ಹೆದರುವಂತಾಗಿತ್ತು. ಈ ಗೌಡನದ್ದು ಅನ್ಯಾಯ, ಅಧರ್ಮಗಳಿಗೆ, ಶೋಷಣೆಗೆ ಪ್ರತೀಕವಾಗಿ, ತನ್ನ ಬದುಕಿನುದ್ದಕ್ಕೂ ಸಾತ್ವಿಕ ಶಕ್ತಿಗಳನ್ನು ಮೆಟ್ಟಿ ನಿಲ್ಲಲುಯತ್ನಿಸಿದಾಗ ಅಜ್ಞಾನಂಧಃಕ್ಕಾರದಲ್ಲಿ ತೊಳಲುವ, ಕ್ಷುದ್ರಜೀವಿಗೆ ಪ್ರತಿನಿಧಿಯಾಗಿ ನಿಂತಜೀವಿ, ಅನೇಕ ಹೆಣ್ಣು ಮಕ್ಕಳ ಶೀಲ ಹರಣ ಮಾಡಿದಾಂವ ಒಟ್ಟಿನಲ್ಲಿ ಭೀಮರೆಡ್ಡಿಗೌಡ ಎಂದರೆ ಪಾಪಪಿಂಡ". [೧೨೫]

ಇಂತಹ ಮನುಷ್ಯನಲ್ಲಿ ಕೊನೆಗೆ ಶ್ರೀ ಅಯ್ಯಪ್ಪಯ್ಯನವರ ಅನುಗ್ರಹದಿಂದ ಜ್ಞಾನೋದಯವಾಯಿತು ಎಂದರೆ ಆಶ್ಚರ್ಯವೆನ್ನಿಸಿದರೂ ನಿಜವೆನ್ನಲೇ ಬೇಕು. ಮುಂದಿನ ಭವಿಷ್ಯಬಲ್ಲವರಾರು? ಊರ ಗೌಡರು ಎಂದರೆ ತಂದೆ-ತಾಯಿ ಇದ್ದಹಾಗೆ. ಎಂಬುದನ್ನು ಭೀಮರೆಡ್ಡಿಗೆ ಮನವರಿಕೆ ಯಾಗಿರಬಹುದು. ಅದಕ್ಕಾಗಿ ಅವನಿಗೆ ಜ್ಞಾನದ ಅರಿವು ಆಗಿರಬೇಕು. ಅಯ್ಯಪ್ಪ ಅವರ ಕಾಲಿಗೆ ಬಿದ್ದು ಪ್ರಾಯಶ್ಚಿತ ಮಾಡಿಕೊಂಡ ಸನ್ನೀವೇಶವನ್ನು ನಾಟಕಕಾರರು ತುಂಬ ಅದ್ಭುತವಾಗಿ ನಿರೂಪಿಸಿದ್ದಾರೆ. ಅದನ್ನು ಪಶ್ಚಾತಾಪ ಪಟ್ಟುಕೊಂಡು ಮಾನವನಾಗ ಬಯಸಯವ ಭೀಮರೆಡ್ಡಿಯಿಂದ ಕೇಳಿ.

"**ಭೀಮರೆಡ್ಡಿ :** ತಂದೆ! ಅಯ್ಯಪ್ಪಯ್ಯ! ನಭಾಂಗಣದಲ್ಲಿ ತಾರಾವಳಿ, ಧರಾಂಗಣದಲ್ಲಿ ದೀಪಾವಳಿ, ನಿಮ್ಮ ದಿವ್ಯಾಂಗಣದಲ್ಲಿ ಭಕ್ತ ಕುಸುಮಾಂಜಲಿ! ಜಡದಲ್ಲಿ ಚೇತನ ಶಕ್ತಿಯಾಗಿ ಅವತರಿಸಿ ಬಂದು ಮೂಢ ಭಕ್ತರ ಹೃದಯ ಬೆಳಗಿದ ನಿಮಗೆ ನಿಮ್ಮ ಚರಣಕೆ ದಿವ್ಯಾಂಜಲಿ ತಂದೆ ನಿಮ್ಮಲ್ಲಿ ಬಾಗಿ ಬಂದಿರುವ ನನ್ನೆಲ್ಲ ಆಸ್ತಿ ತಮ್ಮ ಪದತಲಕ್ಕೆ ಅರ್ಪಿಸಿರುವೆ ಹಿಡಿದೆತ್ತು ಇಲ್ಲಾ ನನ್ನ ಬಡಿದೊತ್ತು.

ನಾಟಕದಲ್ಲಿ ವೇಶ್ಯೆಯ ಪಾತ್ರಧಾರಿ ಗೌರಿ, ತನ್ನಲ್ಲಿರುವ ದುಶ್ಚಟಗಳನ್ನು ಹೇಗೆ ಬಿಟ್ಟುಕೊಟ್ಟು, ಪಶ್ಚಾತಾಪ ಪಟ್ಟುಕೊಂಡು ಪಾವನಳಾದ ದೃಶ್ಯ, ಸಂವಾದವನ್ನು ಕೇಳುಗರಿಗೂ ಕೂಡ ಒಂದು ರೀತಿಯಲ್ಲಿ ಸರಿ ಎನ್ನಿಸುತ್ತದೆ.

**ಗೌರಿ** : ಭೋಗ ಜೀವನದಲ್ಲಿದ್ದಷ್ಟು ಆನಂದ, ಅನುರಾಗ, ಅಭಿಲಾಷೆ ಮತ್ತಾವ ಜೀವನದಲ್ಲಿಲ್ಲ, ಬಾ. ಹಿಂಜರಿಯ ಬೇಡ.

**ಅಯ್ಯಪ್ಪಯ್ಯ** : ಹೆಂಡಿಯ ಹುಳದಂತೆ ಬಿದ್ದು ಹೊರಳಾಡಿದರೂ ನಿನಗೆ ನಾಚಿಕೆ ಯಾಗುವುದಿಲ್ಲವೆ? ಹಾಗಾದರೆ ಅನುಭವಿಸು, ಅರ್ಥೈಸು ಆ ಮೇಲೆ ಆದರಿಸು, (ಮುಟ್ಟಲು ಹೋಗುವಳು ಉರಿ ಸುತ್ತುವರಿಯುವುದು)

**ಗೌರಿ** : ಅಯ್ಯೊ! ಅಮ್ಮಾ ಉರಿ... ಯಾರಾದರು ಬಂದು ಇಲ್ಲಿಂದ ಪಾರುಮಾಡಿ, ತಂದೆ ಅಯ್ಯಪ್ಪಯ್ಯ ನನ್ನ ಮನದ ಇಂದ್ರಿಯಗಳು ಸುಟ್ಟು ಭಸ್ಮೀ ಭೂತವಾದವು, ನಿಮ್ಮ ಆಸ್ಥಾನದಲ್ಲಿ ನರ್ತಕಿಯಾಗಿದ್ದು ಸಂಗೀತ ಸೇವೆಗೆ ಅನುಮತಿ ನೀಡು ತಂದೆ.

**ಅಯ್ಯಪ್ಪಯ್ಯ** : ಆಗಲಿ, ಗೌರಿ। ಇಂದಿನಿಂದ ನೀನು 'ಶ್ರೀ ಗೌರಿ' ನಿನ್ನ ಮನ ಶುಭ್ರ ನೀಲಾಕಾಶವಾಗಿದೆ. ಬಯಲಾಲಯವಾಗಿದೆ. ಇಂದ್ರನರಮನೆಯ ನರ್ತಕಿಯರಾದ ರಂಭಾ, ಮೇನಕಾ, ಊವರ್ಶಿ, ತಿಲೋತ್ತಮೆಯರಂತೆ ಈ ಅಯ್ಯಪ್ಪಯ್ಯ ಸ್ಥಾಪಿಸಿರುವ ಮಹಾತ್ಮಾ ಪೀಠದ ಆಸ್ಥಾನದ ನರ್ತಕಿಯಾಗು; ಸೂರ್ಯಚಂದ್ರರಿರುವವರೆಗೆ ನಿನ್ನ ವಂಶಜರಿಂದಲೇ ಸೇವೆಸಲ್ಲಲಿ. ತಗೊ ಪ್ರಸಾದ" [೧೨೬] ಎಂದು ಆಶೀರ್ವದಿಸುವರು.

'ಶ್ರೀ ಅಯ್ಯಪ್ಪಯ್ಯ ಮಹಾತ್ಮೆ' ಭಕ್ತಿರಸದಿಂದ ಭರಪೂರ ತುಂಬಿದ್ದರೂ ನಾಟಕದಲ್ಲಿ ಹಾಸ್ಯರಸಕ್ಕೇನು ಕೊರತೆಯಿಲ್ಲ, ಊಟದಲ್ಲಿ ಉಪ್ಪಿನಕಾಯಿ ಬೇಕಿರುವಂತೆ, ನಾಟಕದಲ್ಲಿ ನಾಟಕಕಾರ ಆಲ್ದಾಳ ಅವರು ಪುಷ್ಕಳ ಮನೋರಂಜನೆ ನೀಡುವ ಪಾತ್ರಗಳ ಮೂಲಕ ಹಾಸ್ಯದ ಹೊನಲನ್ನೇ ಹರಿಸಿದ್ದಾರೆ. ಪ್ರೇಕ್ಷಕರು ನಕ್ಕು-ನಕ್ಕು ಮೈನವಿರೇಳುವಂತೆ ಮಾಡಿದ್ದಾರೆ. 'ಸಾಹಿತ್ಯದ ಪ್ರಾಂಜಲ ಮುಖವೇ ಹಾಸ್ಯ. ಹಾಸ್ಯದ ಮುಖಗಳು ಮಜಲುಗಳು, ಪ್ರಕಾರಗಳು ಕೆಲವೆಡೆ ವಿಶಾಲ ವ್ಯಾಪ್ತಿಯನ್ನು ಮತ್ತೆ ಹಲವೆಡೆ ಸೀಮಿತ ಅರ್ಥವನ್ನುಳ್ಳವಾಗಿರುತ್ತವೆ. ವ್ಯಕ್ತಿ ಮತ್ತು ಸಮೂಹವನ್ನು ಖುಷಿ ಪಡಿಸಲೋಸುಗ ಇಣುಕುವ, ಕೆಣಕುವ ಮನೋಭೂಮಿಕೆಯಲ್ಲಿ ಕಾಣಸಿಗುತ್ತವೆ". [೧೨೭]

ಚೈತ್ರಾಚಾರಿ, ದ್ಯಾವಪ್ಪ, ಕಾಶಪ್ಪ, ದಾವಲ್, ರುದ್ರ, ಭದ್ರ, ಶ್ಯಾವಂತಿ ಪಾತ್ರಗಳು ನಾಟಕದ ಮುನ್ನಡೆಗೆ ಶಕ್ತಿ ನೀಡುತ್ತವೆ. ಪ್ರೇಕ್ಷಕರನ್ನು ಹುರಿದುಂಬಿಸುತ್ತಿವೆ. ಕುಳಿತಲ್ಲಿಂದ ಅತ್ತ-ಇತ್ತ ಹೊರಳುವಂತೆ ಮಾಡುತ್ತವೆ. ಅರ್ಥಪೂರ್ಣ ಹಾಸ್ಯ, ವಿಡಂಬನೆಗಳು ದಟ್ಟವಾಗಿವೆ.

ಒಟ್ಟಿನಲ್ಲಿ ಕವಿಗಳಾದ ಲಾಲ ಮಹಮ್ಮದ ಬಂದೆನವಾಜ ಖಲೀಫ್ ಆಲ್ದಾಳ ಅವರು 'ಶ್ರೀ ಅಳ್ಳಳ್ಳಿ ಅಯ್ಯಪ್ಪಯ್ಯರ ಮಹಾತ್ಮೆ' ನಾಟಕದ ಮೂಲಕ ಮನುಷ್ಯನ ಮನಸ್ಸನ್ನು ಭಗವಂತನ ಕಡೆಗೆ ಹೊರಳುವಂತೆ ಮಾಡುವಲ್ಲಿ ಯಶಸ್ವಿಯಗಿದ್ದಾರೆ".[೧೨೮]

# ಸಾಮಾಜಿಕ ನಾಟಕಗಳು

ಪೌರಾಣಿಕ ನಾಟಕಗಳಿಂದ ತುಂಬಿ ತುಳುಕುತ್ತಿದ್ದ ವೃತ್ತಿನಾಟಕ ಪ್ರಪಂಚದಲ್ಲಿ ಸಾಮಾಜಿಕ ನಾಟಕಗಳು ತಮ್ಮದೇ ಆದ ಸ್ಥಾನವನ್ನು ಆಕ್ರಮಿಸಿಕೊಂಡು ಪ್ರಬಲವಾದ ಅಸ್ತಿತ್ವವನ್ನು ಸ್ಥಾಪಿಸಿದವು. ಪೌರಾಣಿಕದಿಂದ ಸಾಮಾಜಿಕದತ್ತ ಹೆಜ್ಜೆಯಿಟ್ಟು ವೃತ್ತಿರಂಗಭೂಮಿ ಪಾಶ್ಚಾತ್ಯ ಶಿಕ್ಷಣ ಹಾಗೂ ಸಾಹಿತ್ಯದ ಪ್ರಬಲ ಪ್ರಭಾವಕ್ಕೆ ಒಳಗಾದುದರಿಂದ ಮಧ್ಯಮ ವರ್ಗದವರ ಜೀವನವನ್ನು ಚಿತ್ರಿಸುವ ಪ್ರಧಾನ ಉದ್ದೇಶವನ್ನು ಹೊಂದಿತು. ಸಮಕಾಲೀನ ವಸ್ತುವಿಗೆ ಆದ್ಯತೆಯನ್ನಿತ್ತುದೇ ಅಲ್ಲದೆ, ಸಮಾಜದಲ್ಲಿ ನಡೆಯುತ್ತಿದ್ದ ಪರಿವರ್ತನೆಗಳಿಗೆ ಮತ್ತು ಅಲ್ಲಿನ ಸಮಸ್ಯೆಗಳಿಗೆ ಅವಕಾಶವನ್ನು ನೀಡಿತು. ನಿಜ ಜೀವನದ ಕಥಾವಸ್ತುವನ್ನು ಹೊಂದಿ. ಆಡು ಮಾತಿನ ಸುಲಭವಾದ ಭಾಷೆಯಲ್ಲಿ ರಚಿತವಾದ ಈ ಸಾಮಾಜಿಕ ನಾಟಕಗಳು ರಂಗ ಸಂಗೀತಕ್ಕಿಂತ ಹಾಸ್ಯಕ್ಕೆ ಪ್ರಧಾನ ಸ್ಥಾನವನ್ನು ನೀಡಿದವು. ವೇಷಭೂಷಣದಲ್ಲಿ ಸಹಜತೆ, ರಂಗಸಜ್ಜಿಕೆಯಲ್ಲಿ ನೈಜತೆ, ಅಭಿನಯದಲ್ಲಿ ವಾಸ್ತವತೆ, ಸಂಭಾಷಣೆಯಲ್ಲಿ ಸರಳತೆ ಇವೇ ಮೊದಲಾದ ವೈಶಿಷ್ಟಗಳಿಂದ ಸಾಮಾಜಿಕ ನಾಟಕಗಳು ಪೌರಾಣಿಕಗಳಿಗಿಂತ ಜನತೆಗೆ ಹೆಚ್ಚು ಸಮೀಪವಾದವು.

## "ಪತಿಭಕ್ತಿ"

ಈ "ನಾಟಕ ಬದುಕಿನ ಪ್ರತಿಬಿಂಬ, ಜೀವನದ ನೋವು ನಲಿವು, ಸುಖ–ದುಃಖ ಇತ್ಯಾದಿಯಾಗಿ ಮಾನವನ ಬದುಕಿಗೆ ಕನ್ನಡಿ ಹಿಡಿದು ಸಮರ್ಥ ಅಭಿನಯದ ಮೂಲಕ ಅವನ ನೋವು, ನಲಿವುಗಳನ್ನು ಪ್ರತಿಬಿಂಬಿಸಿ, ಕೆಲವು ಗಂಟೆಗಳಕಾಲ ಸಹೃದಯರನ್ನು ರಂಜಿಸುತ್ತವೆ, ನಾಟಕ ಕೇವಲ ರಂಜನೆಗಷ್ಟೆ ಮೀಸಲಾಗಿರದೆ. ನೋಡುಗರ ಅಂತರಾಳವನ್ನು ಶುದ್ಧೀಕರಿಸುವ ಮಾಂತ್ರಿಕ ಶೋಧಕವೂ ಹೌದು! ಒಳ್ಳೆಯದನ್ನು ಸ್ವೀಕರಿಸುವ, ಕೆಟ್ಟದ್ದನ್ನು ಧಿಕ್ಕರಿಸುವ ತನ್ನ ಮನಸ್ಸನ್ನು ಚಿಂತನೆಗೊಳಪಡಿಸುವ, ಒಪ್ಪು–ತಪ್ಪುಗಳ ಒಪ್ಪವಾದ ಮಾರ್ಗದಲ್ಲಿ ವಿಮರ್ಶಕನಾಗುತ್ತ ಆರೋಗ್ಯವಂತ ಚಿಂತನೆಯ ಚಿತ್ರಭೆಯಲ್ಲಿ ಮಿಂದ ಪುನೀತ ಭಾವನೆ ಅವನದಾಗುತ್ತದೆ. ಆಗ ಅವನು ಹರ್ಷಿಸುತ್ತಾನೆ, ಉಲ್ಲಸಿತನಾಗುತ್ತಾನೆ, ಸಮಾಜದ ಔನ್ನ್ಯತ್ಯಕ್ಕೆ ಕಾರಣನಾಗುತ್ತಾನೆ" [೧೨೯] ಎಲ್.ಬಿ.ಕೆ.ಆಲ್ದಾಳರ ಒಟ್ಟು ಬರಹಗಳಲ್ಲಿ ನಾಟಕ ಸಾಹಿತ್ಯ ಮತ್ತು ನಾಟಕೇತರ ಸಾಹಿತ್ಯ ಎಂದು ಎರಡು ಗುಂಪುಗಳ ಅಧ್ಯಯನ ಮಾಡಲಾಗಿದೆ.

ಆಲ್ದಾಳ ಅವರು ತಮ್ಮ ಜೀವನದ ಪ್ರಪ್ರಥಮ ನಾಟಕ 'ಪತಿಭಕ್ತಿ' ಅರ್ಥಾತ 'ಜಯ–ವಿಜಯ' ಸಾಮಾಜಿಕ ನಾಟಕದ ಪ್ರಥಮ ಮುದ್ರಣ ಗದಗನ ಅಶೋಕ ಪ್ರಿಂಟಿಂಗ್ ಪ್ರೆಸ್ನಲ್ಲಿ ನಡೆಯಿತು. ಇದು ಶರಣ ಪ್ರಕಾಶನ ಪ್ರಕಟಣೆ ಕಲ್ಬುರ್ಗಿಯವರದ್ದು. ನಾಟಕ ಕೃತಿಯು ಎಸ್.ಎಸ್.ಭಾವಿಕಟ್ಟಿ ಪುಸ್ತಕ ಅಂಗಡಿ ಕಲ್ಬುರ್ಗಿ ಇಲ್ಲಿ ದೊರೆಯಲಿದೆ.

**ತಾಯಿ ಶಾರದೆ ಪೊರೆಯೆ ನಮ್ಮನು। ಕರುಣದಿ ಮನಹರುಷದಿ।**
**ಕಾಯೆ ಭಗವತಿ ವಿದ್ಯೆವಾಹಿನಿ।ದಿವ್ಯಸುಂದರಿ ಮಾತೆಯೇ ॥ಪ॥**

ಈ ನಾಟಕ ಮೂರು ಅಂಕಗಳನ್ನು ಒಳಗೊಂಡಿದ್ದು ಪ್ರತಿ ಅಂಕವನ್ನು ಹಲವು ಪ್ರದೇಶಗಳ ಮೂಲಕ ರಂಗಭೂಮಿಯ ಮೇಲೆ ಪ್ರಯೋಗ ಮಾಡಲಾಗಿದೆ. ನಾಟಕ ಹೊತ್ತಿಗೆಯ ರೂಪದಲ್ಲಿ ಬರುವ ಮುನ್ನವೇ ೧೯೬೪ರಲ್ಲಿ ಎಲ್.ಬಿ.ಕೆ ಆಲ್ದಾಳ ಅವರು ನಾಟಕ ಬರೆದು ರಂಗದ ಮೇಲೆ ಯಶಸ್ವಿ ಪ್ರಯೋಗ ಮಾಡಿಸಿದ್ದಾರೆ. 'ಪತಿಭಕ್ತಿ' ನಾಟಕವಂತು ಮಹಿಳೆಯರ ಮನಸೂರೆ ಗೊಂಡಿತ್ತು. ನಾಟಕದ ನಾಯಕಿ, ಅಗರ್ಭ ಶ್ರೀಮಂತ ಚಂದ್ರಧರನ ಹೆಂಡತಿ ಜಮುನಾ ಮಹಾಸಾಧ್ವಿಮಣಿ, ನಾರಿಕುಲಕ್ಕೆ ಶೋಭೆ ತಂದವಳು. ಈ ನಾಟಕ ನೋಡುತ್ತಿರುವ ಮಹಿಳಾ ಪ್ರೇಕ್ಷಕರ ಕಣ್ಣೀರ ಹನಿಗಳು ನಾಟಕದ ಕೊನೆಯಲ್ಲಿ ಕೆಳಗುರುಳಿದ್ದು ಸತ್ಯ, ಅಂಥ ಅದ್ಭುತ ನಾಟಕ. ಚಿಕ್ಕಂದಿನಲ್ಲಿಯೇ ತಾಯಿಯನ್ನು ಕಳೆದು ಕೊಂಡು ತಬ್ಬಲಿಯಾಗಿರುವ ಜಮುನಾ ಪತಿ ಚಂದ್ರಧರನೊಂದಿಗೆ ಅನ್ಯೋನವಾಗಿರುವುದನ್ನು ಯಾರಾದರು ಅಗಲಿಸಿಯಾರೆ ಎಂಬ ಸಂಶಯ ಆಕೆಯ ಮನದಾಳದಲ್ಲಿ ಮೂಡಿದಾಗ ಗಂಡನಿಗೆ ಕೇಳುತ್ತಾಳೆ.

**ಜಮುನಾ:–** ನೋಡುತಿಹೆನು ಸ್ವಾಮಿ, ನನ್ನ ಹೃದಯ ಮಂದಿರದ ಅಂತರಾತ್ಮದ ಅಂತರಾಳದಲ್ಲಿ ಸೌಭಾಗ್ಯ ಕೋಗಿಲೆಯ 'ಕೂಹುರವ' ಕೇಳುತ್ತಿರುವೇನು, ಆದರೆ ಆ ಕೋಗಿಲೆಯು ಚಿಕ್ಕಂದಿನಲ್ಲಿಯೇ ತಾಯಿಯನ್ನು ಕಳೆದುಕೊಂಡು ತಬ್ಬಲಿಯಾಗಿ ತಿರುಗುವ ಹಾಗೆ, ನಮ್ಮೀರ್ವರ ಪ್ರೇಮದ ಕೋಗಿಲೆ ಎಂಥಾ ಕಠಿಣತರ ಪ್ರಸಂಗ ಬಂದೊರಗಿದರೂ, ಅಗಲಿಸಬೇಡೆಂದು ನಾನು ನಿಮಗೆ ಕೈ ಮುಗಿದು ಬೇಡಿಕೊಳ್ಳುತ್ತೇನೆ.

ಹಾಲು–ಜೇನಿನಂತೆ ಇದ್ದ ಚಂದ್ರಧರ ಮತ್ತು ಜಮುನಾಳ ಸಂಸಾರದಲ್ಲಿ ಅವಳ ನಾದಿನಿ ಶಾಂತಾ ಮತ್ತು ಅವಳ ಅತ್ತೆ ಕಮಲಾಳ ಕುಯುಕ್ತಿ, ಕೀಳುಭಾವನೆಗಳಿಂದಾಗಿ ಜಮುನಾ ಅನುಮಾನಿಸಿದಂತೆ ತನ್ನ ಭವಿಷ್ಯದ ಬದುಕಿನಲ್ಲಿ ಕರಾಳ ಅಧ್ಯಾಯಗಳು ಸಮುದ್ರದ ಅಲೆಗಳಂತೆ ಅಪ್ಪಳಿಸದೇ ಇರಲಾಗವು ಎಂದು ಅಂದು ಕೊಂಡ ಮಾತುಗಳು ನಿಜ ತಳೆಯುತ್ತ ಹೊರಟಿವೆ. ಪತಿ ಚಂದ್ರಧರನ ಗೆಳೆಯ ಮನೋಹರನ ಮಧ್ಯ ಪ್ರವೇಶವು ಚಂದ್ರಧರ – ಜಮುನಾರ ಸಂಸಾರದಲ್ಲಿ ಬೆಂಕಿಯ ಕೆನ್ನಾಲಿಗೆ ಪ್ರವೇಶಿಸಿದಂತಾಯಿತು. ಈ ಬೆಂಕಿ ಯಾವರೀತಿ ಇವರ ಸಂಸಾರವನ್ನು ಭಸ್ಮ ಮಾಡುತ್ತದೆ ಎನ್ನುವ ಕುತೂಹಲ ಹುಟ್ಟಿಸುತ್ತದೆ. ಜಮುನಾಳ ನಾದಿನಿ (ಪತಿಯತಂಗಿ) ಶಾಂತಾ, ತನ್ನ ಹೆಸರಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತಾಳೆ. ತಾನೂ ಒಂದು ಹೆಣ್ಣು ಎನ್ನುವುದನ್ನು ಮರೆತು, ಮನೆಯ ಗಳಗಳನ್ನು ತೆಗೆದು ಬೆಂಕಿಗೆ ಹಾಕಿ ಜ್ವಾಲೆಯಲ್ಲಿ ತನ್ನವರನ್ನೇ ಹಾಕಲು ಹೇಸುವುದಿಲ್ಲ, ಮನೆಗೇನೆ ಮಾರಿಯಾಗಿ ನಿಲ್ಲುತ್ತಾಳೆ.

ಚಂದ್ರಧರ–ಜಮುನಾರ ಆನಂದಮಯ ಸಂಸಾರದ ಬಿರುಕು ಅವರ ಮನೆಯೊಳಗಿಂದಲೇ ಪ್ರಾರಂಭವಾಗುತ್ತದೆ. ಚಂದ್ರಧರನ ತಾಯಿ ಮತ್ತು ತಂಗಿ ಸೇರಿಕೊಂಡು ಮನೆಗೆ ಬೆಂಕಿ ಹಚ್ಚಲು ಸಿದ್ಧರಾದಾಗ ಚಂದ್ರಧರನ ಗೆಳೆಯ ಮನೋಹರ ಬೆಂಕಿಗೆ ಎಣ್ಣೆ ಹಾಕಿ ಅದನ್ನು ಮತ್ತಷ್ಟು

ಭೀಕರವಾಗಿ ದಹಿಸಲು ನೆರವಾಗುತ್ತಾನೆ. ಈ ಮೂವರು ಮಾಡುವ ಮನೆ ಮುರುಕ ನೀತಿಯಿಂದಾಗಿ ಹೆಚ್ಚಿನ ತೊಂದರೆ ಅನುಭವಿಸಿದವರು ಸತಿ ಶಿರೋಮಣಿ ಜಮುನಾ ನಂತರ ಅವಳ ಮಕ್ಕಳು ಜಯ-ವಿಜಯ, ಆದರೂ ಕೊನೆಗೂ ಗೆಲ್ಲುವುದು ಸತ್ಯವೆ ಎಂಬುದು ನಾಟಕದ ತಾತ್ಪರ್ಯ, ಪತಿವೃತಾ ಸ್ತ್ರೀಯರಿಗೆ ಎಷ್ಟೇ ಕಷ್ಟಗಳು ಬಂದರೂ ಅವರು ಮತ್ತೊಬ್ಬರ ಬಗ್ಗೆ ಕೀಳು ನುಡಿಯದೇ ಎಲ್ಲವನ್ನು ಎಲ್ಲರನ್ನು ಕ್ಷಮಿಸುವ ಮಹಾನ ಗುಣವನ್ನು ಹೊಂದಿರುತ್ತಾರೆ.

**ಗುರು:-** ಸುಮಂಗಲಿಭವ। ಧನ್ಯ ಸಾಧ್ವಿ। ನೀ ಧನ್ಯ, ಮಹಾಸದ್ಗುಣಿಯಾಗಿ, ಪತಿವೃತಾ ಶಿರೋಮಣಿಯಾಗಿ, ಜಗತ್ತಿನ ಉತ್ತುಂಗ ವೈಖರಿಯ ಹೊನ್ನಕಳಸವಾಗಿ, ಆಗಸದ ಧೃವತಾರೆಯಂತೆ ಅಜರಾಮರವಾಗಿ ಬಾಳಿ, ಬೆಳಗಿ ಭಾರತದನಾರಿಯಾಗಿ ಕುಲವನ್ನುದ್ಧರಿಸು ತಾಯಿ.

ಇಲ್ಲಿ ಗುರು ಚರಣವ ನಂಬಿ ಎನ್ನುವ ಮಾತು ಮಹತ್ವದ್ದಾಗಿದೆ. "ಸದ್ಗುರುವೊಬ್ಬ ಸಿಕ್ಕಿ ಬಿಟ್ಟರೆ, ಸಕಲವೂ ಸಿದ್ಧಿಸಿದಂತೆಯೇ – ಎಂದು ಸಂತ ಕಬೀರದಾಸರು ತಮ್ಮ ದೋಹೆಯಲ್ಲಿ ವರ್ಣಿಸಿದ್ದಾರೆ. ತಾಯಿ-ತಂದೆ-ಪತಿ-ಪತ್ನಿ-ಮಗಳು, ಆಪ್ತರು, ಹಿತೈಷಿಗಳು, ಬಂಧು-ಬಾಂಧವರೆಲ್ಲಾ ಎಲ್ಲಾ ಮನೆಯಲ್ಲೂ ಇರುತ್ತಾರೆ. ಪ್ರತಿಯೊಬ್ಬರಿಗೂ ಸಿಕ್ಕೇ ಸಿಗುತ್ತಾರೆ. ಆದರೆ ಸದ್ಗುರು ಮಾತ್ರ ಪ್ರತಿಯೊಬ್ಬರಿಗೂ ಸಿಗುವುದು ದುರ್ಲಭ. ಸದ್ಗುರುವಿನ ಕೃಪಾಶೀರ್ವಾದದ ಒಲುಮೆ, ಸಾನಿಧ್ಯ, ಮಾರ್ಗದರ್ಶನ ಪೂರ್ವ ಜನ್ಮದ ಪುಣ್ಯದ ಫಲದಿಂದ ಮಾತ್ರ ಸಾಧ್ಯ. ಜಗದಲ್ಲಿ ಯಾರು ಅಧಿಕರು ಎಂದು ಪಾರ್ವತಿದೇವಿ ಒಮ್ಮೆ ಯೋಗಿರಾಜ ಶಿವನನ್ನು ಕೇಳಿದಾಗ ಪರಮೇಶ್ವರನು "ನಗುರೋರಧಿಕಂ, ನಗುರೋಧಿಕಂ" ಎಂದು ಗುರುವಿನ ಮಹತ್ವವನ್ನು ಆಗಮಗಳಲ್ಲಿ ಸಾರಿ ಹೇಳಿರುವುದು ಇದೇ ಮೌಲ್ಯವನ್ನು ಎತ್ತಿ ಹಿಡಿಯಲು. ಆಲ್ದಾಳರ ಉದ್ದೇಶ ಸ್ಪಷ್ಟವಾಗಿದೆ. 'ಗುರುವಿನ ಗುಲಾಮ ನಾಗುವ ತನಕ ದೊರೆಯದಣ್ಣ ಮುಕ್ತಿ'. ಜಮುನಾ ಸದಾಕಾಲ ಗುರುವಿನ ಬಗ್ಗೆ ನಿಷ್ಠೆಹೊಂದಿರುವುದರಿಂದಲೇ ಕಷ್ಟಗಳೆಲ್ಲ ಮೋಡ ಚದುರಿದಂತೆ ಚದುರಿ ಸುಖವನ್ನೇ ಕೊನೆಯಲ್ಲಿ ತನ್ನದಾಗಿಸಿಕೊಂಡಳು.

ಜಯ-ವಿಜಯರಿಗೆ ಗುರುಗಳು ಆಶೀರ್ವದಿಸುತ್ತ, "ಕನ್ನಡದ ಕಡುಗಲಿಗಳಾಗಿ, ಕೆಚ್ಚೆದೆಯ ವೀರರಾಗಿ, ವೀರಮಾತೆಯಭಟರಾಗಿ, ಜನರ ಅಜ್ಞಾನವೆಂಬ ಅಂಧಕಾರವನ್ನು ಹೋಗಲಾಡಿಸಿರಿ, ಚಂದ್ರಧರನು ಗುರುಗಳಿಗೆ ನಮಸ್ಕರಿಸಿದಾಗ, ಚಂದ್ರಧರಾ! ನಿನ್ನ ಭಾಗ್ಯಕ್ಕೆ ಎಣೆಯುಂಟೆ? ನೀನು ಜ್ಞಾನರತ್ನ ವಿದ್ದಂತೆ, ಪ್ರೇಕ್ಷಕ ಔದಾರ್ಯ ಭ್ರಾತೃವಾತ್ಸಲ್ಯದಿಂದ ಕೀರ್ತಿ-ಅಪಕೀರ್ತಿಗಳನ್ನು ಎಣಿಸದೆ ನಿರ್ವಿಕಲ್ಪ ಗುಣಗಳಿಂದ ದುಡಿದು, ಈ ಹೊಸ ಮನ್ವಂತರದಲ್ಲಿ ನುಗ್ಗಿ ಜ್ಞಾನದಜ್ಯೋತಿಯಾಗು.

ಮನೆಯಲ್ಲಿ ನಡೆದ ಈಶ್ವರನ ಮೂರ್ತಿಪೂಜೆ ನಂತರ ಗುರುಗಳು ಬಳಿ ಬಂದು ನಮಸ್ಕರಿಸಿದವರಿಗೆ ಆಶೀರ್ವಚನವಿತ್ತು ಶುಭ ಕೋರಿದರು. ಚಂದ್ರಧರನ ತಾಯಿ-ತಂಗಿಯರಿಗೆ. ಇದೊಂದು ನುಂಗಲಾರದ ತುತ್ತಾಗಿತ್ತು. ತಾಯಿಗೆ ದುರ್ಬುದ್ಧಿ ಬೋಧಿಸಿದಳು, "ನೋಡಿದೇನಮ್ಮ ನಿನ್ನೆ ನಡೆದ ಶಿವಪೂಜೆಯಲ್ಲಿ ನಮಗಾದ ಅಪಮಾನ, ನವಯೌವ್ವನದ ತಂಗಿಯನ್ನು ನೋಡದೇ ಸತಿಯೊಡನೆ ಸರಸವಾಡಿದ್ದು, ಗಂಡನನ್ನು ತನ್ನ ಮಾಯಾಜಾಲದಲ್ಲಿ ಹಾಕಿಕೊಂಡಿರುವ ಸತಿ

ಜಮುನಾ, ಅಣ್ಣನಂತೂ ಮಾತೃ ಪ್ರೇಮದ ಹೃದಯವನ್ನರಿಯದೇ ಕಾಲನೂಕುವ ಕುಲಹೀನ", ಎಂದು ಹೇಳುತ್ತ ತಾಯಿಯ ಮನದಲ್ಲಿ ಮಗಳು ಶಾಂತಾ ದಳ್ಳುರಿ ಎಬ್ಬಿಸಿದಳು.

ಮಗಳಿಗೆ ದುರ್ಬುದ್ಧಿ ಹುಟ್ಟಿದ್ದು ಅದನ್ನೇ ನೆಚ್ಚಿಕೊಂಡ ತಾಯಿ ತನ್ನ ಹೊಟ್ಟೆಕಿಚ್ಚನು ನೂರುಪಟ್ಟು ಹೆಚ್ಚಿಸಿಕೊಂಡಳು, ಹೇಗಾದರೂ ಮಾಡಿ ತನ್ನ ಮಗನನ್ನು ಸೊಸೆಯಿಂದ ದೂರ ಮಾಡಬೇಕೆಂದು ಕುಟಿಲ ಯೋಚನೆ ಸಿದ್ಧಗೊಂಡಿತು. ಅವರನ್ನು ಮನೆಯಾಡಳಿತದಿಂದ ಸರಿಸಬೇಕು, ಅವರಿಗೆ ನಾವೇ ಎತ್ತಿಹಾಕಿ ಅನ್ನಕೊಡಬೇಕು ಎಂದು ಮಗಳು ಶಾಂತಾ ಬೊಗಳಿದಳು ಅದೇ ಸಮಯಕ್ಕೆ ಮಗ ಚಂದ್ರಧರ ಬರುತ್ತಲೇ, 'ಮನಸ್ಸಿಗೆ ಬಂದಂತೆ ಮಾತಾಡುವ ಅವಳು, ಕೋಲ್ಮಿಂಚಿನಂತೆ ಕುಣಿಯುವ ನಿನ್ನ ಹೆಂಡತಿಯಿಂದ ಅನ್ನಿಸಿಕೊಂಡು ಸಾಕಾಗಿದೆ. ನಿನ್ನ ತಂಗಿಗೂ ಇದು ಸೇರದಾಗಿದೆ. ನಿನಂತೂ ಮಹಾ ಶಂಭುವಿನ ಹಾಗೆ ತಪಸ್ಸಿಗೆ ಕುಳಿತರೆ ನಾವೇಗಿರಬೇಕು, ಎಲ್ಲ ವಿಚಾರಿಸು, ಇಲ್ಲವಾದರೆ ನಾವೇ ಮನೆಬಿಟ್ಟು ಹೋಗುತ್ತೇವೆಂದು ತಾಯಿ ಕಮಲವ್ವ ಅಬ್ಬರಿಸಿದಳು.

ಜಮುನಾ ಪ್ರವೇಶಿಸಿದ್ದಂತೆ ಚಂದ್ರಧರ, ಅನ್ಯಕೆಲಸದ ಮೇಲೆ ಸಿಕೆಂದರಾಬಾದಗೆ ಹೋಗುವುದಿದೆ. ನನ್ನ ಸೂಟಕೇಸ್ ತರಬೇಕೆಂದು ಕೇಳಿಕೊಂಡ, ಬೇಗನೆ ಬನ್ನಿ ಎಂದು ಸತಿ ಗಂಡನಿಗೆ ಭಿನ್ನವಿಸಿದಳು, ಜಮುನಾಳ ಕೈಹಿಡಿದು ನಿನಗೇನು ತರಬೇಕು? "ನನ್ನ ಸೌಭಾಗ್ಯವನ್ನು ಬೆಳಗಿಸಲು ದೇದೀಪ್ಯಮಾನವಾದ 'ಕುಂಕುಮ' ಒಂದೇ ಸಾಕು. ಸೌಭಾಗ್ಯವತಿ ನಾನಿರುವಾಗ ಮತ್ತೇಕೆ ಆ ಕುಂಕುಮ? ಸ್ವಾಮಿ! ಕುಂಕುಮದ ಆ ಮೆರಗು ಸ್ತ್ರೀ ಜೀವನವನ್ನುದ್ಧಾರ ಮಾಡಿ ಹಣೆಯಲ್ಲಿ ತನ್ನ ಪ್ರಪಂಚರೂಪದೊಡನೆ ಇವಳೇ ಮುತ್ತೈದೆಯೆಂದು ತೋರಿಸುತ್ತದೆ. ಸ್ವಾಮಿ, ತಾವು ಬೇಗನೆ ಬರಬೇಕು ಎಂದಳು, ಅದೇ ಸಮಯಕ್ಕೆ 'ಗುರು'ಗಳು ಬಂದರು ಅವರನ್ನು ಉದ್ದೇಶಿಸಿ ಚಂದ್ರಧರ, ಗುರುಗಳೇ ಕೆಲಸ ನಿಮಿತ್ಯ ಊರಿಗೆ ಹೋಗಿ ಬರುತ್ತೇನೆ. ಆಗಾಗ ಮನೆಯಕಡೆ ಬಂದುಹೋಗಿ, ವಿಚಾರಿಸಿರಿ ಎಂದು ಆಶೀರ್ವಾದ ಪಡೆದು ಊರಿಗೆ ಹೊರಟರು ಆದರೆ ಆಗಲೇ ಮುಂದಾಗುವ ಅಪಶಕುನಗಳು ಕಂಡವು, ದೇವರಿಗೆ ನಮಸ್ಕರಿಸುವಾಗ ನಂದಾದೀಪ ನಂದಿತು, ಮನೆಯ ಹೆಬ್ಬಾಗಿಲು ದಾಟಿ ಹೊರ ಹೊರಟಾಗ ಬೆಕ್ಕು ಅಡ್ಡ ಬಂದಿತು!

ಅತ್ತ ಅಣ್ಣ ಊರಿಗೆ ಹೊರಟರೆ, ಇತ್ತ ತಂಗಿ ಶಾಂತಾ ಲಗಾಮು, ತಡಿಇಲ್ಲದ ಕುಣಿಯುವ ಕುದುರೆಯಂತಾದಳು, ಅಣ್ಣನ ಮಿತ್ರ ಮನೋಹರನ ದುಷ್ಟ ಉಪಾಯಗಳಿಗೆ ಮನಸೋತಳು, ಮೈಮರೆತು ತಾನಾರು ಎನ್ನುವುದನ್ನು ವಿಚಾರಿಸದೆ ಅಂಗಸುಖಕ್ಕೆ ಮರುಳಾಗಿ ಮೋಸಹೋದಳು, ಇದೇ ಸಂದರ್ಭಕ್ಕಾಗಿ ಹೊತ್ತು ಹಾಕುತ್ತಿದ್ದ ವಂಚಕ ಪ್ರಿಯಕರ ಮನೋಹರ ವಿಷದ ಪುಡಿಯನ್ನು ಶಾಂತಾಳ ಕೈಯಲ್ಲಿಟ್ಟ, ಸಮಯಸಾಧಿಸಿ ನಿಮ್ಮಣ್ಣನ ಮಕ್ಕಳಾದ ಜಯ-ವಿಜಯರಿಗೆ ಹೊಟ್ಟೆಯಲ್ಲಿ ಹಾಕಬೇಕೆಂದು ಆಗ್ರಹಿಸಿದ. ಅಲ್ಲದೆ ಜಮುನೆಗೂ-ಗುರುಗಳಿಗೂ ಅಕ್ರಮ ಸಂಬಧವಿದೆ ಎಂದು ಅಪಾದಿಸಬೇಕು ಎಂದು ಹೇಳಿದ ಪ್ರೇಮ ಕುರುಡು, ಆ ಸಮಯದಲ್ಲಿ ಏನೆಲ್ಲ ನಡೆಯುತ್ತೆ ಯಾರು ಬಲ್ಲರು, ಮನೋಹರನ ಮಾತನ್ನು ನಿರಾಕರಿಸುವಂತಿರಲಿಲ್ಲ, ಮನೋಹರನ ಕಾಮದ ಬಲೆಗೆ ಆಗಲೇ ಬಿದ್ದಾಗಿತ್ತು! ಹರೆಯದ ದಾಹ ಎಲ್ಲರ ಬದುಕನ್ನು ದುರ್ದೆಸೆಗೊಳಿಸುತ್ತದೆ ಎನ್ನುವ ಮಾತನ್ನು ನಾಟಕಕಾರ ಆಲ್ದಾಳರು ಸೂಚ್ಯವಾಗಿ ಮೊದಲೇ ತೆರೆದಿಟ್ಟಿದ್ದಾರೆ. ಶಾಂತಾಬಾಯಿ

ಮಾಡಿದ ಅಕೃತ್ಯಗಳ ಸರಣಿ, ತನಗೆ ಜನ್ಮ ನೀಡಿದ ತಾಯಿಯ ಎರಡು ಕಣ್ಣುಗಳನ್ನು ಕೀಳುವುದು, ಆಕೆಗೆ ಒದೆಯುವುದು, ಕಷ್ಟಕೊಡುವುದು ಕಂಡಾಗ ಈ ಹೆಣ್ಣು ನಾರಿಕುಲಕ್ಕೆ ತಂದುಕೊಂಡ ಹುಣ್ಣು, ಉಂಡಮನೆಗೆ ಎರಡು ಬಗೆದವಳು, ಮಿತ್ರನೆಂದು ಹೇಳಿಕೊಂಡು ಆತನ ಮನೆಯ ಸಂಪತ್ತು ದೋಚಿದಲ್ಲದೆ ಶಾಂತಾಳ ಬಾಳು ಹಾಳು ಮಾಡಿ ಕೊನೆಯಲ್ಲಿ ಎದೆಗೆ ಚೂರಿ ಹಾಕಿದ ದುಷ್ಟ, ದುರುಳ ಅಲ್ಲದೆ ಅವಳ ತಾಯಿ ಕಮಲವ್ವಳ ಕಣ್ಣು ತೆಗೆಯಿಸಿದ ಪಾಪಿ, ಕೊಲೆಗಾರನಿಗೆ ಶಿಕ್ಷೆ ಬೇಡವೆ? ಮಾಡಿದ ಪಾಪ ಅಳಿಸಿಹೋಗದು, ಅದು ಎದ್ದುನಿಂತು ಹೇಳುತ್ತದೆ. ಸಾಯುವ ಮುನ್ನ ಶಾಂತಾ ತನ್ನ ಕೊಲೆಗಾರ ಮನೋಹರ ಎಂದು ಹೇಳುತ್ತಾಳೆ. ಅಪರಾಧಿ ಮನೋಹರನಿಗೆ ಮಾಡಿರುವ ಕೊಲೆಗೆ ಶೂಲಕ್ಕೇರುವ ಶಿಕ್ಷೆಪಡೆಯುತ್ತಾನೆ. ಗುರುಗಳ ವಿರುದ್ಧ ಮಾಡಿದ ಅಪಾದನೆಗಳು ಸುಳ್ಳು ಎಂದು ಕೊನೆಯುಸಿರು ಬಿಡುವಾಗ ಶಾಂತಾ ತನ್ನ ಅಣ್ಣ ಚಂದ್ರಧರನಿಗೆ ಹೇಳುತ್ತ, ಅತ್ತಿಗೆ ಜಮುನಾ ಆದರ್ಶ ಮಹಿಳೆ, ಪತಿಭಕ್ತಿಯಳ್ಳವಳು ಎಂದು ಸತ್ಯ ನುಡಿಯುತ್ತಾಳೆ, ಪತಿಯೇ ಪರಮಾತ್ಮ ಎಂದು ನಂಬಿದ ಸತಿ ಜಮುನಾ ಮತ್ತು ಅವಳ ಮಕ್ಕಳಾದ ಜಯ-ವಿಜಯ ಎಲ್ಲರ ಮಿಲನವಾಗುತ್ತದೆ.

ಗುರು-(ನಕ್ಕುಸ್ವಗತ) ಹೇಗಿದೆ ದೈವ ಬರಹ? "ಬಾರದು ಬಪ್ಪದು ತಪ್ಪದು" (ಪ್ರಕಾಶ) ಚಂದ್ರಧರಾ, ಅಗಲಿ ಹೋದ ದಂಪತಿಗಳು ಇಂದು ಒಂದಾದುದಕ್ಕೆ ನನಗೆ ಮಹಾದಾನಂದವಾಗಿದೆ. ಭಾರತದ ಆರ್ಯ ನಾರಿಯರೇ ಇಲ್ಲಿ ಪತಿಭಕ್ತಿ ಮೆರೆದಿದೆ.

"ಹೆಣ್ಣು ಮಕ್ಕಳು ದೀಪದ ಬತ್ತಿ ಇದ್ದಹಾಗೆ, ತವರಿನಲ್ಲಿ ಬತ್ತಿ ಹೊಸೆಯಬೇಕು, ಗಂಡನ ಮನೆಯಲ್ಲಿ ಬೆಳಗಬೇಕು". 'ಗಂಡನ ಮನೆಗೆ ಹೋದ ಮೇಲೆ ಹೆಣ್ಣು ಮಕ್ಕಳು ಬದಲಾಗುತ್ತಾರೆ ಅವರ ಹೆಸರು, ಅಡ್ಡಹೆಸರು, ಗೋತ್ರ, ಮನೆದೇವರು ಬದಲಾಗುತ್ತವೆ. ಮೇಲಿನ ಎರಡು ಮಾತುಗಳು 'ಪತಿಭಕ್ತಿ' ನಾಟಕದ ಜಮುನಾಳ ಪಾತ್ರಕ್ಕೆ ಹೇಳಿಮಾಡಿಸಿದಂತವುಗಳಾಗಿವೆ. ಆದರೆ ಈಗ ಕಾಲ ಬದಲಾಗಿದೆ, ಆಲ್ದಾಳ ಅವರು ಈ ನಾಟಕ ಬರೆದದ್ದು ೧೯೬೪ರಲ್ಲಿ, ಅಂದರೆ ಸುಮಾರು ಐವತ್ತು ವರ್ಷಗಳ ಹಿಂದೆ, ಗಂಡನ ಮನೆಬೆಳಗ ಬೇಕಾದಾಕೆ ಸಾವಿನ ಕತ್ತಲೆಯತ್ತ ಮುಖಮಾಡುತ್ತಾಳೆ. ಮದುವೆ ನಂತರ ಹೆಸರು, ಗೋತ್ರ ಇತ್ಯಾದಿ ಬದಲಾದರೂ ಕಷ್ಟಕಾರ್ಪಣ್ಯ ಎದುರಿಸುವ ಹಣೆ ಬರಹ ಮಾತ್ರ ಬದಲಾಗುವುದಿಲ್ಲ! ಹೌದು ಅದೊಂದು ಕಾಲವಿತ್ತು-ಸತಿಯಾಗಿ ಪತಿಯ ಮನೆಗೆ ಬಂದ ಹೆಣ್ಣು ಅತ್ತೆ, ನಾದನಿಯರು ನೀಡುವ ಎಂಥದೇ ಕಷ್ಟ ಕಾರ್ಪಣ್ಯಗಳನ್ನು ಸಹಿಸಿಕೊಂಡು ಪತಿಯೊಂದಿಗೆ ಬಾಳುವೆ ಮಾಡುವ ಧೈರ್ಯ, ಸಹನೆ ಹೊಂದಿರುತ್ತಿದ್ದರು, ಆದರೆ ವಾಸ್ತವ್ಯದಲ್ಲೀಗ ಕೌಟುಂಬಿಕ ಮೌಲ್ಯಗಳು ಬದಲಾಗಿವೆ. ಸ್ತ್ರೀಯರ ವಿಷಯದಲ್ಲಿ ಕಾನೂನು ಹಿಂದೆಂದಿಗಿಂತಲೂ ಸಾಕಷ್ಟು ಬಿಗಿಯಾಗಿವೆ. ವಿದ್ಯಾವಂತ ಸೊಸೆಯನ್ನು ಅತ್ತೆ ನೋಡುವ ದೃಷ್ಟಿ, ವಿಧಾನವೂ ಕೂಡ ಬದಲಾಗಿದೆ. ಸ್ವಲ್ಪ ಕಿರುಕುಳ ಕೊಟ್ಟರೆಸಾಕು, ಗಂಡನ ಮನೆಯವರನ್ನೆಲ್ಲ ಕೋರ್ಟಗೆ ಅಲೆಯುವಂತೆ ಮಾಡುವ ಸೊಸೆಯಂದಿರ ಕಾಲದಲ್ಲಿ ನಾವಿದ್ದೇವೆ, ಆದರೂ 'ಓಲ್ಡ್ ಈಸ್ ಗೋಲ್ಡ್' ಲೆಕ್ಕಾಚಾರದಲ್ಲಿ ಓಬಿರಾಯನ ಕಥೆ ಹೇಳಿ ಹಿಂದಿನ ಕಾಲವನ್ನು ಮೆಲುಕು ಹಾಕುವಂತೆ ಮಾಡಲಾಗುತ್ತಿದೆ. ಕಣ್ಣೀರಕೋಡಿ ಹರಿಯುವ ದೃಶ್ಯವನ್ನು ಇಂದಿನ ನಾಟಕಗಳಲ್ಲೂ ಮುಂದುವರಿದಿವೆ ಅದಕ್ಕಾಗಿ ಹೇಳುವುದು 'ಹಳೆಯದ್ದೆಲ್ಲ ಬಂಗಾರಮಯ' ಮಹಿಳೆಯರಿಗೂ

ಇದೇ ಬೇಕು, ತಮ್ಮ ಹೃದಯ ಹಗುರವಾಗಿಸಲು ಎಷ್ಟಾದರೂ ಅಜ್ಜ ಬೆಳೆಸಿದ ವಿಶಾಲವಾದ ಆಲದ ಮರವೇ ತಂಪು ಎಂದಲ್ಲವೆ?.

'ಪತಿಭಕ್ತಿ' ನಾಟಕದಲ್ಲಿ ಚಂದ್ರಧರನ ಮನೆಯ ಆಳು ಸಿದ್ದಪ್ಪ ಮತ್ತು ಆತನ ಹೆಂಡತಿ ಸಿದ್ಧಿ, ಇವರು ವಹಿಸಿದ ಪಾತ್ರ, ಅಭಿನಯ, ಮಾತು, ಮಾತಿನಲ್ಲಿರುವ ಹಾಸ್ಯ,ನೀತಿ, ಮಾತಾಡುವ ಶೈಲಿ ಅಮೋಘವಾದುದು, ಸ್ತ್ರೀ ಲೋಕಕ್ಕೆ ಮಾದರಿಯಂತೆ ನಡೆದುಕೊಂಡಿದ್ದಾಳೆ ಸಿದ್ಧಿ,(ಗಂಡಸಿದ್ಧಪ್ಪ ಮಾರುವೇಷದಲ್ಲಿ ಸತಿಸಿದ್ಧಿಗೆ ಹಾದಿಯಲ್ಲಿ ನಿಲ್ಲಿಸುತ್ತಾನೆ, ಆಗ, "ಸಿದ್ಧಿ :– ಏ? ಯಾರಲಾ ನೀನು, ಹಾದಿಗುಂಟ ಹೋಗ ಹೆಂಗ್ಸರ್ಗಿ ಕೈಮಾಡಿ ನಿಂದ್ರಸ್ತಿದಿ, ನಿನ್ಗೊಯ್ದು ಪಂಚಾತಿಗೆ ಬಿಗಸಂದ್ಯಾ, ಅಂದ್ರ ಅವಾಗ ದಾರಿಮ್ಯಾಲ ಬರ್ತಿದಿ ಹೋಗಾ ಹೆಂಗ್ಸಿನ ನೋಡಿದರ ನಿನಗೇನ ಬರ್ತಾದ ಕಳಗೇಡಿ, ಕೈಮಾಡಿ ನಿಂದ್ರಸ್ತಾನವ ಮಾನಗೇಡಿ, ಸರಿ ಅಚಾಕ, ಯಾರಲಾ ಫಕೀರಾ, ನನಗೆದಾರಿ ಬಿಡಾಂಗಿಲ್ಲಾ?" [೧೩೧] ಮನೆಯ ಆಳುಸಿದ್ದಪ್ಪನ ಹೆಂಡತಿಯ ಸ್ವಭಾವ, ಆಕೆಯ ಧೈರ್ಯ, ಮಾನವನ್ನು ರಕ್ಷಿಸಿ ಕೊಳ್ಳಲು ಪರಪುರುಷನನ್ನು ಹಿಯ್ಯಾಳಿಸುವ ರೀತಿ ಎಲ್ಲವನ್ನು ಮೆಚ್ಚಲೇ ಬೇಕು.

ಸಿದ್ಧಿಗೆ ಇರುವಷ್ಟು ಒಳ್ಳೆಯ ವಿಚಾರ, ಬುದ್ಧಿ ನಾಟಕದ ನಾಯಕ ಚಂದ್ರಧರನ ತಂಗಿ ಮತ್ತು ತಾಯಿಗೆ ಇಲ್ಲವಲ್ಲ ಎಂಬ ನೋವು ನೋಡುಗರಿಗೆ ಆಗದೆ ಇರದು.

ನಾಟಕಕಾರ ಎಲ್.ಬಿ.ಕೆ ಆಲ್ದಾಳ ಅವರು ತಮ್ಮ ಇಪ್ಪತ್ತೈದನೆಯ ವಯಸ್ಸಿನಲ್ಲಿ ಪ್ರಪ್ರಥಮ ನಾಟಕ ಕೃತಿ 'ಪತಿಭಕ್ತಿ'ಯನ್ನು ಜನರ ಮುಂದೆ ಇರಿಸಿದರು. ಅವರು ಈ ನಾಟಕದ ಪ್ರಪ್ರಥಮ ಪ್ರಯೋಗವನ್ನು ಸ್ವಂತ ಊರಾದ 'ಆಲ್ದಾಳಗ್ರಾಮ'ದಲ್ಲಿ ರಂಗಭೂಮಿಯ ಮೇಲೆ ತಂದರು. ಪ್ರೇಕ್ಷಕರು 'ಭಲೆ' ಎಂದರು ಮಹಿಳೆಯರು ನಮ್ಮೂರಿನ ಕೀರ್ತಿ ಹೆಚ್ಚಿಸಿದರು ಎಂದರೆ ಹಿರಿಯ ಜೀವಿಗಳು ತುಂಬು ಹೃದಯದಿಂದ ಆಶೀರ್ವದಿಸಿದರು. ನಾಟಕ ಐವತ್ತು ಪ್ರಯೋಗಗಳನ್ನು ಕಂಡಾಗ ಆಲ್ದಾಳರು ತಮ್ಮನ್ನು ತಾವೇ ನಂಬದಾದರು, 'ಪತಿಭಕ್ತಿ' ನಾಟಕ ಇದುವರೆಗೂ ೧೫ ಸಲ ಮುದ್ರಣಗೊಂಡಿದೆ. ಗ್ರಾಮಾಂತರ ಜನರ ಹೃದಯವನ್ನೇಗೆದ್ದ ಈ ನಾಟಕ ಇಲ್ಲಿಯ ವರೆಗೂ ಎಷ್ಟು ಪ್ರಯೋಗ ಕಂಡಿದೆ ಎಂದು ಹೇಳುವುದಕ್ಕೆ ಲೆಕ್ಕವಿಲ್ಲದೆ ಕಷ್ಟ ಉಂಟಾಗಿದೆ. ಈ ನಾಟಕ ಉತ್ತರ ಕರ್ನಾಟಕದ ಪ್ರತಿಯೊಂದು ಹಳ್ಳಿಯಲ್ಲೂ ಕನಿಷ್ಟ ಹತ್ತಾರು ಪ್ರಯೋಗ ಕಂಡಿದೆ. ಮಹಾರಾಷ್ಟ್ರದ ವ್ಯಾಪಾರಿ ನಗರವಾದ ಮುಂಬಯಿಯಲ್ಲೂ 'ಪತಿಭಕ್ತಿ' ಪತಾಕೆ ಹಾರಿಸಿದೆ, ಕನ್ನಡ ಚಿತ್ರರಂಗದ ದಿಗ್ಗಜರಾದ. ಉದಯಕುಮಾರ, ಪ್ರಮಿಳಾ ಜೋಷಾಯ, ಸುಭದ್ರಮ್ಮ ಮನ್ಸೂರ, ಕೆ. ನಾಗರತ್ನ ಮುಂತಾದವರು ಈ ನಾಟಕದಲ್ಲಿ ಭಾಗವಹಿಸಿ, ಪಾತ್ರಧಾರಿಗಳಾಗಿ ಅಮೋಘವಾಗಿ ನಟಿಸಿ ಪ್ರೇಕ್ಷಕರ ಮನವನ್ನು ರಂಜಿಸಿದ್ದಾರೆ.

'ಪತಿಭಕ್ತಿ' ನಾಟಕ ಕೃತಿ ಚೊಕ್ಕವೂ, ಅಪೂರ್ವವೂ ಆಗಿದೆ. ಬರವಣಿಗೆಯಲ್ಲೇ ಒಂದು ಓಜಸ್ಸೂ, ವರ್ಚಸ್ಸೂ ಇದೆ. ಕಲಾವಂತಿಕೆಯ ಹೃದಯ, ವೀಣೆಹೃದಯ, ಶೃತಿ ಮಾಡಿಟ್ಟ ವೀಣೆಯಂತೆ ಹೇಗೆ ಕೈಯಾಡಿಸಿದರೂ ಸುಶ್ರಾವ್ಯನಾದವೇ ಬರುವಂತೆ ಬರೆದುದರಲ್ಲೆಲ್ಲಾ ಈ ಹೃದಯಶ್ರೀ ಕಾಣುತ್ತೇವೆ.

# ಬಾಳಿಗೊಂದು ಬೆಲೆಬೇಕು

(ಕಾಲ್ಪನಿಕ ಕೌಟುಂಬಿಕ ನಾಟಕ)

ಸಾಮಾಜಿಕ ಮೌಲ್ಯಗಳನ್ನು ಎತ್ತಿ ಹಿಡಿದ 'ಬಾಳಿಗೊಂದು ಬೆಲೆಬೇಕು' ಕಾಲ್ಪನಿಕ ಕೌಟುಂಬಿಕ ನಾಟಕ ಇದಾಗಿದ್ದು, ಕುಡುಕ ಗೌಡನ ಹೆಂಡತಿ ವೈದ್ಯಳಾಗಿ ಪುರುಷರ ಅಟ್ಟಹಾಸವನ್ನು ಮೆಟ್ಟಿನಿಂತು, ಸ್ತ್ರೀಪರ ಧ್ವನಿಎತ್ತುತ್ತಾಳೆ. ೨೨ ಪ್ರವೇಶಗಳನ್ನು ಹೊಂದಿರುವ ನಾಟಕದಲ್ಲಿ ಬೆಳ್ಳಿ-ಬೆಳ್ಳಪ್ಪ ಪಾತ್ರಗಳ ಮೂಲಕ ಹಾಸ್ಯದ ರಸದೌತಣ ಪ್ರೇಕ್ಷಕರಿಗೆ ನೀಡುತ್ತದೆ. ಈ ನಾಟಕವು "ನಾರದ ವಿಜಯ" ಸಿನೆಮಾವಾಗಿ ಚಲನಚಿತ್ರ ಮಂದಿರಗಳಲ್ಲಿ ತೆರೆಗೆ ಬಂದಾಗ ನಾಟಕಕಾರ ಆಲ್ದಾಳರ ಹೆಸರನ್ನೇ ಚಿತ್ರದ ನಿರ್ಮಾಪಕರು ಹೇಳಿಕೊಂಡಿಲ್ಲ. ಇದಕ್ಕೆ ಕೊಡಬೇಕಾದ ಸಂಭಾವನೆಯನ್ನು ಸಹ ಕೊಟ್ಟಿಲ್ಲ! ಇದಕ್ಕೆ ಆಲ್ದಾಳರ ಸಜ್ಜನ ನಡೆ!! ಹೌದು; ಮಹಾರಾಯಾ, 'ಬಾಳಿಗೊಂದು ಬೆಲೆ ಇರಬೇಕು' ಎಂಬುದನ್ನು ಅರಿಯಿರಿ! ಮಾನವನು ಉಚ್ಚ-ನೀಚ ಭಾವನೆಗಳ ಸಂಕೋಲೆಯಿಂದ ಹೊರಬರಬೇಕು ಆಗಮಾತ್ರ ಮುಕ್ತಿಲಭ್ಯ, ವ್ಯಕ್ತಿ ಹಾಗೂ ಸಮಾಜಕ್ಕೆ ಒಳಿತು.

ಡಾ. ಪಾರ್ಶ್ವನಾಥ ಅವರು 'ರಂಗದುಂದುಭಿ' ಗ್ರಂಥದಲ್ಲಿ 'ನನ್ನುಡಿ'ಯಲ್ಲಿ ಬರೆದಿರುವ ಮಾತುಗಳು ನಮ್ಮ ಹಿರಿಯ ನಟ ಎಲ್.ಬಿ.ಕೆ ಆಲ್ದಾಳರ ಅಂತರಾಳದ ಮಾತು ಏಕಾಗಬಾರದು? "ರಂಗಭೂಮಿ ನನ್ನ ಜೀವ ಭಾವ ಕೋಶದ ಉಸಿರು, ಹಸಿರು, ಬಸಿರು, ಅದು ವಿಲಾಸವಲ್ಲ ವಿಕಾಸ, ಪ್ರಚಾರ ಸಾಮಗ್ರಿಯಲ್ಲ ವಿಚಾರ ಸಾಧನ, ಕಾಲ ಕಳೆಯುವ ವಿಧಾನವಲ್ಲ ಜ್ಞಾನ ಬುತ್ತಿಯ ಸಂಕಲನ, ಬದುಕಿನಲ್ಲಿನ ವ್ಯಕ್ತ ಅವ್ಯಕ್ತ ನಾನಾ ವರಸೆಗಳನ್ನು ಸಂಭಾಳಿಸಿ ಭರವಸೆಯನ್ನು ಮೂಡಿಸುವ ಜೀವವಾಹಕ. ರಂಗಭೂಮಿಯು ಮಾನವೀಯ ಜೀವನ ಮೌಲ್ಯಗಳನ್ನು ವೃದ್ಧಿಸಬಲ್ಲದು. ಸಮಾಜ ಹಾಗೂ ವ್ಯಕ್ತಿಯ ಒಳ-ಹೊರಗುಗಳ ಮುಖವಾಡಗಳನ್ನು ತೆರೆದಿಟ್ಟು ನೈಜಚಿತ್ರಣವನ್ನು ಬಿಡಿಸಬಲ್ಲುದು ಎಂಬ ನನ್ನ ದೃಢ ನಂಬಿಕೆ ಹಾಗೂ ರಂಗ ಹಂಬಲಕ್ಕೆ ಬೆಂಬಲವಾಗಿ ನಿಂತವರು ಹಲವಾರು ಹಿತೈಷಿಗಳು ಅವರೆಲ್ಲರಿಗೂ ನನ್ನ ಸಾಸ್ಟಾಂಗವಂದನೆಗಳು ಸಲ್ಲುತ್ತವೆ". [೧೩೨]

ರಂಗಭೂಮಿ, ರಂಗಸಂಗದ ಬಗ್ಗೆ ಆಲ್ದಾಳ ಅವರು ಹೊಂದಿರುವ ಅವಿನಾಭಾವ ಸಂಬಂಧ ಅತಿ ಪವಿತ್ರವಾದುದು, ಅಂತಲೆ ಅವರು ಬರೆದಿರುವ ನಾಟಕಗಳು ಒಳ್ಳೆಯ ವಿಚಾರ ಉಳ್ಳವುಗಳು 'ಬಾಳಿಗೊಂದು ಬೆಲೆಬೇಕು' ನಾಟಕ ಇಂದಿನ ಸಮಾಜಕ್ಕೆ ಹಿಡಿದ ಕನ್ನಡಿಯಾಗಿದೆ. ಆಲ್ದಾಳರೇ ಹೇಳುವಂತೆ, ಈಗ ಅಚ್ಚಾಗಿ ಓದುಗರ ಕೈಯಲ್ಲಿರುವ ನನ್ನ ಪಂಚಮ ಪುಷ್ಪ, 'ಬಾಳಿಗೊಂದು ಬೆಲೆಬೇಕು' ಈ ನಾಟಕದಲ್ಲಿ ವೈಕುಂಠದ ವಿಷ್ಣು-ಲಕ್ಷ್ಮಿಯರನ್ನು ಹಾಗೂ ತ್ರಿಲೋಕ ಸಂಚಾರಿಗಳಾದ ನಾರದನನ್ನು ಈ ಭೂಲೋಕಕ್ಕೆ ಕರೆಯಿಸಿಕೊಂಡು, ಹಲವಾರು ವಿಷಯಗಳಿಂದ ಕೂಡಿ ಕದಡಿದ ಸಂಸಾರದ ಹೊನಲಲ್ಲಿ ಅವರಿಗೂ ಅಲ್ಲಿ ಪಾತ್ರಕೊಟ್ಟು ಜಗದೋದ್ಧಾರದೊಸಗೆಯನ್ನು ಉಪದೇಶಿಸಲಾಗಿದೆ ಅವರಿಂದ". [೧೩೩]

ನಾಟಕ ಪ್ರಥಮ ಪ್ರವೇಶದಲ್ಲಿಯೇ ಬೆಳ್ಳೆಪ್ಪಗೌಡರ ಆಳು ಮತ್ತು ಆತನ ಹೆಂಡತಿ ಬೆಳ್ಳಿ ನಡೆಸುವ ಹಾಸ್ಯಭರಿತ ಸಂವಾದದಲ್ಲಿ ಊರ ಹಿರಿಯ ಮತ್ತು ಪೋಲೀಸ ಗೌಡರಾಗಿರುವ ದೇವೇ

ಗೌಡರ ಹಿರಿಯ ಮಗ ಧರ್ಮೇಗೌಡ ಮತ್ತು ಆತನ ಹೆಂಡತಿ ಗೌರಮ್ಮ ಅವರು ಎಂಥ ಸ್ವಭಾವದವರು ಎಂಬುದು ಬಯಲಾಗುತ್ತದೆ.

**ಬೆಳ್ಳಿ** : ಅಲ್ಲಾ ಹಿರ್‍ಯಾ ಎಂತಿಂಥವ್ರಗಿ ಬರುತ್ತ, ಧರ್ಮಯಿಲ್ಲದ ಕರ್ಮಗೇಡಿ ಆಧರ್ಮಗೌಡ್ಗ ಯಾಕ ಬರಾಕಿಲ್ಲಾ ಅಂತೀನಿ.

**ಬೆಳ್ಳೆಪ್ಪ** : ಏನದು?

**ಬೆಳ್ಳಿ** : ಹೋಗೂದು! ಹೆಸರಿದ್ರ ಧರ್ಮ ಮಾಡುದೆಲ್ಲಾ ಕರ್ಮ ಅವ್ನ ಹೊಡಿಗಿಗಿದ್ರ ತಾಳಾಕಿಲ್ಲಾ (ಅಳುತ್ತ), ಪಾಪ ಅವನ ಹೆಣ್ತಿ ಗೌರಮ್ಮ ಮೈ ಅಂಬೂದು ಕರಿ–ಕರಿ ಎದ್ದು ಹೋಗೇತಿ(ಅಳುವಳು)

ಬೆಳ್ಳಿ ಗೌಡರ ಮನೆಯಲ್ಲಿ ಅಳಾಗಿ ದುಡಿಯುತ್ತಿರುವ ಆಳುಮಗನ ಹೆಂಡತಿ ಆದರೆ ಆಕೆಯಲ್ಲಿ ಕಾಣುವ ಗುಣಮಾತ್ರ ಅತ್ಯಂತ ಶ್ರೇಷ್ಠವಾದುದು. ಮಹಿಳೆಯರಲ್ಲಿರಬೇಕಾದ ಶಿವಗುಣಗಳನ್ನು ಕಾಣುತ್ತೇವೆ. ಧರ್ಮೆಗೌಡ ಅಧರ್ಮದ ನಡೆ ಇರಿಸುತ್ತಿರುವುದು. ತನ್ನನ್ನೇ ನಂಬಿಬಂದ ಸತಿಯನ್ನು ಕಾರಣವಿಲ್ಲದೆ ಕಂಠಪೂರ್ತಿ ಕುಡಿದು ದನಗಳಿಗೆ ಬಡಿಗೆಯಿಂದ ಹೊಡೆಯುವಂತೆ ಗೌರಮ್ಮಳಿಗೆ ಹೊಡೆದು ಹಿಂಸಿಸುತ್ತಿರುವುದನ್ನು ಕಂಡು ಬೆಳ್ಳಿಯ ಕಣ್ಣಲ್ಲಿ ನೀರು ಬರುವುದು ಸ್ವಾಭಾವಿಕ ಒಂದು ಹೆಣ್ಣು ಮತ್ತೊಂದು ಹೆಣ್ಣಿನ ಕಕ್ಕುಲಾತಿ, ಮನಸ್ಸನ್ನು ಅರಿಯುತ್ತದೆ. ಅವಳ ದುಃಖದಲ್ಲಿ ತಾನು ಭಾಗಿಯಾಗುತ್ತಾಳೆ. ಇದು ಸ್ತ್ರೀ ಸ್ವಭಾವ, ಅದನ್ನು ಬೆಳ್ಳಿ ಕಾಪಾಡಿಕೊಂಡಿದ್ದಾಳೆ.

ಧರ್ಮರಾಯ ಎಂಬ ಹೆಸರು ಮಾತ್ರ ದೊಡ್ಡದು ಆದರೆ ಅವನ ವರ್ತನೆ, ಮಂಗಚೇಷ್ಟೇಗಳು, ಕಾಮುಕತನ, ಅನೀತಿ, ಅತ್ಯಾಚಾರಗಳಿಂದಾಗಿ ತನ್ನ ಹೆಸರಿಗೆ ಕಳಂಕ ತರುತ್ತಾನೆ. ಧರ್ಮೆಗೌಡ ತನ್ನ ಅನಾಚಾರದ ನಡುವಳಿಕೆಯಿಂದ ಅಧರ್ಮಿಯಾಗುತ್ತಾನೆ.

'ಬಾಳಿಗೊಂದು ಬೆಲೆಬೇಕು' ನಾಟಕದ ಮೊದಲಿನೆರಡು ಪ್ರವೇಶಗಳು ಬೆಳ್ಳಿ ಮತ್ತು ಧರ್ಮೇಗೌಡರ ನಡುವಳಿಕೆಯನ್ನು ಎತ್ತಿ ತೋರಿಸುತ್ತವೆ. ಅವರ ಸಂವಾದಗಳೇ ಅವರ ನಡತೆಯನ್ನು ಬಿಂಬಿಸುತ್ತದೆ ಬೆಳ್ಳಿಯದ್ದು ಪರಿಶುದ್ಧವಾದ ಮನಸ್ಸು ಅದಕ್ಕೆ ತದ್ವಿರುದ್ಧವಾಗಿ ನಡೆದುಕೊಳ್ಳುವ ದುರಭ್ಯಾಸ ಮೈಗೂಡಿಸಿಕೊಂಡಿರುವ ಧರ್ಮೇಗೌಡನದು ಒಂದು 'ಅಂದ'ದ ನಡೆಯಾಗಿದ್ದರೆ ಮತ್ತೊಂದರದು 'ಮಂಗ'ನ ಚೇಷ್ಟೆಯದ್ದಾಗಿದೆ.

**ಧರ್ಮೇಗೌಡ** : ಮನಸ್ಸಿಟ್ಟ ಪಕ್ಷಿಯ ಮೇಲೆ ನನ್ನಾಪೇಕ್ಷೆ ತೀರಿಸದೇ ಬಿಡಲಾರೆ ಕಾಮಾಕ್ಷಿ! ತುಚ್ಛ ಕಾಮವಾಸನೆಗೆ ನಿನ್ನಿಚ್ಛೆಯಲೆ ಬಂದು ಸಂತೈಸು...

ಬೆಳ್ಳಿ (ಹೊಡೆದು)ಯ್ಯಾಕಲಾ ಹುಚ್ಚಪ್ಯಾಲಿ ಬಾ ಮನಿಗೆ (ಹೋಗುವಳು)

ಗ್ರಾಮೀಣ ಪ್ರದೇಶದಲ್ಲಿ ಈಗಲೂ ಗೌಡಿಕೆಯ ಪರಂಪರೆ ತೆರೆ ಮರೆಯಲ್ಲಿ ನಡೆದಿರುವುದನ್ನು ಸೂಚ್ಯವಾಗಿ ಗಮನಕ್ಕೆ ತಂದಂತಿದೆ ಗ್ರಾಮಾಂತರ ಪ್ರದೇಶದಲ್ಲಿ ಕೃಷಿ ಕೆಲಸಕ್ಕೆ ಕೂಲಿ ಕಾರ್ಮಿಕರಾಗಿ ಮಹಿಳೆಯರು ಹೋಗುತ್ತಾರೆ. ಅವರು ತಾವಾಯಿತು ತಮ್ಮ ಕೆಲಸವಾಯಿತು ಎಂದು ದುಡಿಯುತ್ತಾರೆ. ಆದರೆ ಕಾಮಪಿಪಾಸಿಗಳು, ಮನೆಮುರುಕರು, ವಿಷಯ ಲಂಪಟರು ತಮ್ಮ ಅನೈತಿಕ ಹಾಗೂ ದುರ್ವರ್ತನೆಯಿಂದಾಗಿ ಮುಗ್ಧ ಮಹಿಳಾ ಕೆಲಸಗಾರರನ್ನು ಆಮಿಷತೋರಿಸಿ ತಮ್ಮ ಬಲೆಗೆ ಬೀಳುವಂತೆ ವರ್ತಿಸುತ್ತಾರೆ. ಆದರೆ ಎಲ್ಲ ಮಹಿಳೆಯರು ಹಾಗೇನು ಅಲ್ಲ ಎಂದು ಆಲ್ದಾಳರು ಈ ನಾಟಕದ ಮೂಲಕ ಸಂದೇಶ ನೀಡಿದ್ದಾರೆ. "ತುಚ್ಛ ಕಾಮವಾಸನೆ" ಎಂಬುದು ಸ್ಪಷ್ಟ ಅರ್ಥಕೊಡುತ್ತಿರುವಾಗ ಅದಕ್ಕಾಗಿ ಹಪಹಪಿಸಿ ಜೀವಕ್ಕೆ ಅಪಾಯ ತಂದುಕೊಳ್ಳಬೇಕೇಕೆ? ನ್ಯಾಯ, ಅನ್ಯಾಯವನ್ನು ಮೆಟ್ಟಿ ನಿಲ್ಲುತ್ತದೆ ಎಂಬುದು ಮರೆಯುವಂತಿಲ್ಲ ಬೆಳ್ಳಿ ತಾನು ಬಡವಿಯಾದರು ಪತಿವೃತೆಯೆಂಬುದನ್ನು ತನ್ನ ಮಾತುಗಳಿಂದ ತೋರಿಸಿಕೊಡುತ್ತಾಳೆ ಅಲ್ಲದೆ ಧರ್ಮೇಗೌಡರಂತವರಿಗೆ ತಕ್ಕುದಾದ ಪಾಠ ಕಲಿಸುತ್ತಾಳೆ. ಗೌಡನ ಮಾತುಗಳನ್ನು ಕೇಳುವುದು ಅಸಹ್ಯವೆಂದು ಅವನ ಮುಖಕ್ಕೆ ಬಾರಿಸುವಳು! ಮತ್ತೇನು?.

ಮನೆಯಲ್ಲಿ ಸಾಧ್ವಿಶಿರೋಮಣಿ ಎನ್ನಿಸಿಕೊಂಡ ಸತಿ ಗೌರಮ್ಮ ಹಾಗೂ ಮಗಳು ಗಂಗಾ ಪ್ರೀತಿಯಿಂದಿರುವಾಗ ಧರ್ಮೇಗೌಡನ ಮನಸ್ಸು ಪರಸ್ತ್ರೀಯ ಮೇಲೆ ಬೀಳುತ್ತಿರುವುದು ಸಂಸಾರದ ಗೂಡಿಗೆ ಕಿಚ್ಚು ತಗುಲಿದಂತಾದೀತು. ಮೂರುಬಿಟ್ಟವರಿಗೆ ಯಾರೇನು ಹೇಳಿದರು ತಿಳಿಯುವುದಿಲ್ಲ! ಅತ್ತಿಗೆ ಗೌರಮ್ಮ ಬೇಗನೆ ಬರಬೇಕೆಂದು ಹೇಳಿ ಕಳುಹಿಸಿದಂತೆ ದೇವೇಗೌಡನ ಕಿರಿಯ ಮಗ ದಿನೇಶ ಊರಿಗೆ ವಾಪಸು ಬರುತ್ತಾನೆ. ಮನೆಯ ಸಂಸಾರದಲ್ಲಿ ಅಣ್ಣನಾದ ಧರ್ಮೇಗೌಡನು ಎಬ್ಬಿಸಿದ ಕೋಲಾಹಲ ತಿಳಿದು ಕುಪಿತನಾಗುತ್ತಾನೆ. ಅಷ್ಟರಲ್ಲಿ ಕಂಠಪೂರ್ತಿ ಸೆರೆಕುಡಿದು ತೂರಾಡುತ್ತ, ಜೋಲಿ ಹೊಡೆಯುತ್ತ ಕುಡುಕ, ಲಂಪಟ, ಸ್ತ್ರೀ ವ್ಯಾಮೋಹಿ ಧರ್ಮೇಗೌಡ ಮನೆಯೊಳಗೆ ಪ್ರವೇಶಿಸುತ್ತಾನೆ.

ಮದ್ಯಪ್ರಿಯರಿಗೆ ತಮ್ಮ, ತಂಗಿ, ತಾಯಿ, ತಂದೆ, ಕೊನೆಗೆ ತನ್ನ ಹೆಂಡತಿ ಮಕ್ಕಳನ್ನು ಸಹ ನಂಬಲು ಸಾಧ್ಯವಿಲ್ಲ ಇದು ಸುರಾಪಾನರ ಗಮ್ಮತು. ಇದರಿಂದ ತನ್ನ ಸಂಸಾರ ಮೂರಾಬಟ್ಟೆಯಾಗುತ್ತದೆಂಬ ಎಚ್ಚರಿಕೆಯೂ ಇರುವುದಿಲ್ಲ, ಧರ್ಮೇಗೌಡ ತನ್ನ ಒಡಹುಟ್ಟಿದ ತಮ್ಮ ದಿನೇಶನನ್ನೇ ನೀನು ಅತ್ತಿಗೆಯೊಂದಿಗೆ ಸರಸ ವಾಡುತ್ತಿಯಾ? ಎಂಬ ಅವಿವೇಕದ ಪ್ರಶ್ನೆ ಹಾಕಿದಾಗ ಸತಿ ಗೌರಮ್ಮ ಮತ್ತು ಆಕೆಯ ಮೈದುನ ದಿನೇಶರ ಕಿವಿಗಳಲ್ಲಿ ಕಾಯಿಸಿದ ಕಬ್ಬಿಣ ಜೋರಾಗಿ ತಿವಿದಂತೆ ಭಾಸವಾಗುತ್ತದೆ. ಧರ್ಮೇಗೌಡನು ಮಾಡಿದ ಅಪವಾದದಿಂದಾಗಿ ದಿನೇಶ ಮತ್ತು ತಂದೆ ಮಾದೇಗೌಡ ಮತ್ತು ತಂಗಿ ಗಂಗಾಳೊಂದಿಗೆ ಮನೆಬಿಟ್ಟು ಹೊರಡುತ್ತಾರೆ.

ತಂದೆ, ತಮ್ಮ, ತಂಗಿಯರು ಹೊರಬಿದ್ದ ಕೂಡಲೇ, ತನ್ನ ತುಂಬು ಗರ್ಭಿಣಿ ಹೆಂಡತಿಯನ್ನು ಧರ್ಮೇಗೌಡ ಹೊರಹಾಕಿ ಬೀದಿಪಾಲುಮಾಡುತ್ತಾನೆ. ನಿಜವಾಗಿ ಇದೊಂದು ಮಹಿಳೆಯ ಮೇಲೆ ಎಸಗಿದ ಘನಘೋರ ಅನ್ಯಾಯ.

ಈ ನಾಟಕದ ಪ್ರವೇಶ ಏಳರಲ್ಲಿ ಆಕಾಶ ಮಾರ್ಗದಲ್ಲಿ ಸಂಚರಿಸುತ್ತಿದ್ದ ನಾರದ ಮಹರ್ಷಿಗಳು 'ನಾರಾಯಣ, ನಾರಾಯಣ' ಎನ್ನುತ್ತ ಭೂಲೋಕಕ್ಕೆ ಆಗಮಿಸುವುದು, ದೇವೇಗೌಡನ ಮನೆಯಂಗಳದಲ್ಲಿ ಹಿರಿಯಮಗ ಧರ್ಮೇಗೌಡನ ದುರ್ವರ್ತನೆ, ಕಂಡು ಒಟ್ಟಾರೆ " ಈಗಂತೂ ಭೂಲೋಕವು ಮದಿರಾ ದೇವಿಯ ಲಾಲಸೆಯಲ್ಲಿ ಕಾಮರತಿಯರ ಉನ್ಮತ್ತ ಲೋಲಾಟದ ರಂಗಭೂಮಿಯಾಗಿ ಪರಿಣಮಿಸಿದೆ. ಅಂದಿನ ಅತ್ರಿಮುನಿ ಸತಿ ಅನುಸೂಯಾಳ ಅವತಾರವೇನೊ ಎಂಬಂತೆ ಈ ಭೂಲೋಕದಲ್ಲಿ ಗೌಡರ ಸತಿ ಗೌರಮ್ಮ ಈಗ ಪಡಬಾರದ ಬವಣೆಗೀಡಾಗಿದ್ದಾಳೆ. ಅವಳು ಹೊತ್ತ ಆಪಾದನೆಯ ಹೊರೆ ಇಳಿಸಬೇಕು (ಯೋಚಿಸಿ) ಇದಕ್ಕೆ ಉಪಾಯ... ಸೃಷ್ಟಿ ಸ್ಥಿತಿ ಲಯಗಳ ಕಾರಣೀಭೂತನಾದ ವಿಷ್ಣುವೇ! ದಕ್ಷನು ಈಗಲೇ ವೈಕುಂಠಕ್ಕೆ ತೆರಳಿ ಲಕ್ಷ್ಮಿ ನಾರಾಯಣನನ್ನು ಕಾಣುವೆ". [೧೩೪](ಪುನಃ ಹಾಡುತ್ತ ನಾರದನು ಹೋಗುವನು)

ದೇವಲೋಕಕ್ಕೆ ಆಗಮಿಸಿದ ನಾರದಮುನಿ ಭೂಲೋಕದಲ್ಲಿ ಎಲ್ಲವೂ ಅಯೋಮಯ ಸಾಧ್ವಿ ಶಿರೋಮಣಿ ಪಡಬಾರದ ಕಷ್ಟಪಡುತ್ತಿದ್ದಾಳೆ ಅದಕ್ಕಾಗಿ ತಾವು ಭೂಲೋಕಕ್ಕೆ ಆಗಮಿಸಿ ಅವಳಿಗೆ ಪರಿಹಾರ ಕಲ್ಪಿಸಬೇಕೆಂದು ವಿಷ್ಣು-ಲಕ್ಷ್ಮಿ ಬಳಿ ಅಹವಾಲು ಒಪ್ಪಿಸಿದ, ಭೂಲೋಕಕ್ಕೆ ಬಂದ ವಿಷ್ಣು-ಲಕ್ಷ್ಮಿಯರು ಗೌರಮ್ಮಳನ್ನು ಆತ್ಮಹತ್ಯೆಗೈಯುವುದರಿಂದ ತಪ್ಪಿಸಿ, ಹೌದು ತಾಯಿ! ಈ ಸಂಸಾರದಲ್ಲಿ ದಡಸೇರಿ ಜಯಿಸಬೇಕು ಆಗತಾನೇ ಬಂಧಮುಕ್ತಳಾಗುವಿ, ಬಾಳಿಗೊಂದು ಬೆಲೆ ಸಿಗುತ್ತದೆಯಮ್ಮಾ.

ದೇವಲೋಕದಿಂದ ಬಂದ ವೈಕುಂಠವಾಸಿ ವಿಷ್ಣು ಶರಣವತಾರಿಯಾಗಿ ಹಾಗೂ ಮಡದಿ ಲಕ್ಷ್ಮಿ ಮಹಾಶರಣಿಯಾಗಿ ಭೂಲೋಕಕ್ಕೆ ಆಗಮಿಸಿ ಇಲ್ಲಿನ ವಿದ್ಯಮಾನ ತಿಳಿಯುತ್ತಾರೆ.

ಧರ್ಮೇಗೌಡನು ಕೊರಳಲ್ಲಿನ ಲಿಂಗತೋರಿಸಿ ತಾನು ವೀರಶೈವ ಎಂದು ಹೇಳಿದಾಗ, ಶರಣಾವತಾರಿಯಾದ ವಿಷ್ಣು, "ಸಂತೋಷ ಶಿವಾ! ಅಲ್ಲಾ ಅಂಗದ ಮೇಲೆ ಲಿಂಗ ಧರಿಸಿಕೊಂಡು, ಅಂಗನೆಯರೊಡನೆ ಚಲ್ಲಾಟವಾಡುವುದಕ್ಕಿಂತ, ಮಾಡಿಕೊಂಡ ಮಂಗಳಾಂಗಿ ಜೊತೆ ಚಕ್ಕಂದವಾಡಿದ್ದರೆ ಅದೆಷ್ಟು ತಮ್ಮ ಬಾಳಿಗೆ ಬಣ್ಣವೇರುತ್ತಿತ್ತೊ..." [೧೩೫] ಅಂಥಾ ವೀರಶೈವ ಧರ್ಮದಲ್ಲಿ ಹುಟ್ಟಿ ಇಂಥ ಹೇಯ ಕೆಲಸಮಾಡಬಹುದೆ? ಕಣ್ಣಿದ್ದು ಕುರುಡರಾಗದಿರಿ.

ಈಗ ಕಾಲ ಬದಲಾಗಿದೆ ಎನ್ನುವುದಕ್ಕಿಂತ, ಮಾನವನೇ ತನ್ನೆಲ್ಲ ಬಯಕೆಗಳನ್ನು ಈಡೇರಿಸಿಕೊಳ್ಳಲು ಬದಲಾಗಿದ್ದಾನೆ ಕಾಂಚಾಣ ಕುಣಿಸುತ್ತಿದೆ. ವಿಷಕನ್ಯೆಯರು ರತಿ ಸುಖನೀಡಿ ತಣಿಸುತ್ತಿದ್ದಾರೆ. ಇದರಿಂದಾಗಿ ಬಾಳಿಗೆ ಎಲ್ಲಿಂದ ಬಂದೀತು ಬೆಲೆ? ನಾರದರು ಹೇಳಿರುವ ಮೇಲಿನ ಹಿತವಚನ ಪಾಲಿಸಿದರೆ ಹೆಣ್ಣು ಪೂಜನೀಯಳಾಗುತ್ತಾಳೆ, ಗೃಹದೇವತೆಯಾಗಿ ಮನೆಮನೆಗಳಲ್ಲಿ ರಾರಾಜಿಸುತ್ತಾಳೆ.

ಇನ್ನು ಮುಂದೆ ಬರಲಿರುವ 'ಬಾಳಿಗೊಂದು ಬೆಲೆ ಬೇಕು' ನಾಟಕದ ಪ್ರವೇಶಗಳು ಸುಖಾಂತ್ಯದ ಹಾದಿ ಹಿಡಿಯುತ್ತವೆ ಧರ್ಮೇಗೌಡ ಮದ್ಯಪಾನಕ್ಕಾಗಿ ಹೆಂಡತಿ ಗೌರಮ್ಮನ ಬಳಿ ಅವಳ ತವರು ಮನೆಯಲ್ಲಿದ್ದಾಗ ಜಗಳಕಾಯುತ್ತಾನೆ, ಹಣ ಕೊಡದಿದ್ದಾಗ ಹೊಡೆಯಲು ಹೋಗಿ

ಗೌರಮ್ಮನ ತಮ್ಮ ಅರವಿಂದನಿಗೆ ಏಟುಬಿದ್ದು ಹೆಣವಾಗುತ್ತಾನೆ. ಧರ್ಮೇಗೌಡ ಕೊಲೆಗಾರನಾಗುತ್ತಾನೆ. ಸಿಐಡಿ ಪೋಲಿಸರು ಕೊಲೆಯ ಸಂಚು ಬಯಲುಮಾಡಿ ಕೊನೆಗೆ ಶೀಕ್ಷೆಗೆ ಗುರಿಪಡಿಸುತ್ತಾರೆ. ಗೌರಮ್ಮನ ತಮ್ಮ ಕಳೆದು ಹೋಗಿದ್ದವನು ಅವನು ದೈವಭಲದಿಂದ ವಿಕ್ರಮನಾಗಿ ಬೆಳೆದು ಸಿಐಡಿ ಅಧಿಕಾರಿಯಾಗುತ್ತಾನೆ, ದಿನೇಶ ಯಾವುದೇ ಸಂಕೋಚವಿಲ್ಲದೆ ಕಾಂಚನಾಳನ್ನು ವಿವಾಹವಾಗುತ್ತಾನೆ. ಆಕೆ ವ್ಯಭಿಚಾರಿ, ವೈಶ್ಯೆ ಎಂದು ಗೊತ್ತಿದ್ದರೂ, ಕೆಸರಿನಲ್ಲಿ ಬೆಳೆದ ತಾವರೆ ಎಂದು ಕರೆದು ಅದು (ತಾವರೆಪುಷ್ಪ) ದೇವರಿಗೆ ಅರ್ಪಿತವಾಗುತ್ತಿರುವಾಗ ನೀನೇಕೆ ನನ್ನ ಮಡದಿಯಾಗಬಾರದು ಎಂದು ವಿಶಾಲ ಮನಸ್ಸಿನಡಿ ಕೈ ಹಿಡಿಯುತ್ತಾನೆ.

ದೇವೆಗೌಡ ಸಂಸಾರದ ಹಿರಿತನ ತನ್ನ ಎದುರಿನಲ್ಲಿಯೇ ತನ್ನ ಸಂಸಾರದ ಸುಂದರವಾದ ಗೋಪೂರ ಕುಸಿದು ಹಾಳುಬಿದ್ದಂತೆ ಆಯಿತಲ್ಲ ಎಂದು ಕೊರಗುತ್ತಾನೆ. ಮಕ್ಕಳು, ಸೊಸೆಯಂದಿರು ಪಟ್ಟಕಷ್ಟಯಾರಿಗೂ ಬೇಡೆನ್ನುತ್ತಾನೆ.

ಈ ನಾಟಕ, 'ಕಾಲ್ಪನಿಕ ಕೌಟುಂಬಿಕನಾಟಕ' ಎಂದು ಲೇಖಕ ಹೇಳಿಕೊಂಡಿದ್ದಾರೆ ನಾರದ, ವಿಷ್ಣು, ಲಕ್ಷ್ಮಿಯರ ಪಾತ್ರಗಳು ಕಾಲ್ಪನಿಕವಾದವುಗಳು. ಇಪ್ಪತ್ತೊಂದನೆಯ ಶತಮಾನದಲ್ಲಿ, ಅದರಲ್ಲೂ ತಂತ್ರಜ್ಞಾನದಲ್ಲಿ ಜಗತ್ತನ್ನೆ ಗೆಲ್ಲುವೇವು ಎನ್ನುವ ಸಂದರ್ಭದಲ್ಲಿ, ನಾರದ, ವಿಷ್ಣು, ಲಕ್ಷ್ಮಿಯರು ಭೂಮಿಗೆ ಶರಣ– ಶರಣೆಯರಾಗಿ ಬಂದಿರುವರು ಎಂದರೆ ನಂಬಲು ಸಾಧ್ಯವೆ? ಸಾಮಾಜಿಕ ನಾಟಕಗಳಲ್ಲಿ ವೈಕುಂಠವಾಸಿ ವಿಷ್ಣು–ಲಕ್ಷ್ಮಿಯರು ಭೂಲೋಕಕ್ಕೆ ಬರಲು ಸಾಧ್ಯವೆ? ಏಕೆ ಸಾಧ್ಯವಿಲ್ಲ! ಭಾರತಿಯ ವಿಜ್ಞಾನಿಗಳು ತಮ್ಮ ಅಗಾದ ಬುದ್ಧಿವಂತಿಕೆಯಿಂದ ಚಂದ್ರ ಗ್ರಹಕ್ಕೆ, ಮಂಗಳ ಗೃಹಗಳಿಗೆ ಮಾನವನನ್ನು ಕಳುಹಿಸಲು ಮುಂದಾಗಿರುವಾಗ ಅಲ್ಲಿ ವೈಕುಂಟ, ದೇವ ಲೋಕವನ್ನು ಕಾಣುವ ದಿನಗಳು ಹತ್ತಿರದಲ್ಲಿವೆ ಎನ್ನಿಸಿದರೆ ಸೋಜಿಗವಾಗದು. ಕಲ್ಪನೆಗಳು ಮುಂದೊಂದು ದಿನ ಸಾಕಾರಗೊಳ್ಳಬಹುದು ಎಂದು ಆಲ್ದಾಳರು ಭಾವಿಸಿದ್ದರೆ, ಯೋಚಿಸಿದ್ದರೆ ತಪ್ಪಲ್ಲ, ಈಗ ಅಂಗೈಯಲ್ಲೇ ಜಗತ್ತನ್ನು, ವಿಶ್ವವನ್ನೇ ಶ್ರೀಕೃಷ್ಣನ ಬಾಯಿಯಲ್ಲಿ ನೋಡಿದಂತೆ ನೋಡುವಂತಾಗಿರುವಾಗ ಯಾವುದು ಅಸಾಧ್ಯ ಹೇಳಿ.

ಇಲ್ಲಿಯ ಪಾತ್ರಗಳಲ್ಲಿ ಜೀವ ತುಂಬಿಕೊಂಡಿವೆ. ಊರ ಹಿರಿಯ ಪೋಲೀಸ ಗೌಡರು ಆಗಿರುವ ದೇವೇಗೌಡರು ತಮ್ಮ ಘನತೆಗೆ ತಕ್ಕಂತೆ ನಡೆದುಕೊಂಡಿದ್ದಾರೆ. ಧರ್ಮೇಗೌಡನ ಉದ್ದಟತನ ನಾಟಕದಲ್ಲಿ ಚೆನ್ನಾಗಿ ಮೂಡಿಬಂದಿದೆ. ತಾನು ಮಾಡಿದ ಪಾಪಕ್ಕೆ ತಾನೇ ಪ್ರಾಯಶ್ಚಿತನಾಗಬೇಕಾಗುತ್ತದೆ ಎಂಬ ನೀತಿ ಪಾಠ ಕೊನೆಯಲ್ಲಿ ಕಂಡು ಬರುತ್ತದೆ. ಧರ್ಮೇಗೌಡನ ಹೆಂಡತಿ ಗೌರಿ ಹೆಸರಿಗೆ ತಕ್ಕ ಹಾಗೆ ನಡೆದ ಗೌರಮ್ಮ. ಮಹಿಳೆಯರು ಸಹನೆಶೀಲರಾಗಿ, ಪತಿಗೆ ವಿಧೇಯರಾಗಿ, ಕಷ್ಟ–ಸುಖಗಳಲ್ಲಿ ಭಾಗಿಯಾಗಿ, ಗಂಡನಾದವನು ಎಷ್ಟೆ ಕಷ್ಟಕೊಟ್ಟರೂ ದೇವರೇ ನನ್ನ ಸೌಭಾಗ್ಯ ಮಂಗಳದಾಯಕವಾಗಿರಲಿ ಎಂದು ಬಯಸುತ್ತಾಳೆ. ಇದು ಆಲ್ದಾಳರು ಕಂಡಪರಿ. ಮನೆಯ ಗೌರವ ಮಹಿಳೆಯರಲ್ಲಿಯೇ ಇರುತ್ತದೆ ಎಂಬ ಸನ್ನಿವೇಶ ಇಲ್ಲಿ ಸೃಷ್ಟಿಸಿರುವುದು ಮೆಚ್ಚಬೇಕು ಇದುವೆ ಬಾಳಿಗೊಂದು ಬೆಲೆ ತರುತ್ತದೆ.

ನಾಟಕದಲ್ಲಿ ಬರುವ ಹಾಡುಗಳು, ದೃಶ್ಯಗಳು, ಸಂಗೀತ, ಗೀತೆ ಪ್ರೇಕ್ಷಕರನ್ನು ರಂಜಿಸುತ್ತವೆ.

ಮುಖ್ಯವಾಗಿ ಹೇಳುವುದೆಂದರೆ, ನಾಟಕವೆಂಬುದು ಚಾಕ್ಷುಷಕಲೆ, ಕಲಾವಂತಿಕೆಯಮೇರು ಅಭಿವ್ಯಕ್ತಿಯ ಸರ್ವಾಂಗೀಣ ಸಾಧನೆ– ಸಾಧ್ಯತೆಗಳ "ಕಲ್ಪನಾಕುಲುಮೆ", ತೆರೆಸರಿದಂತೆ ಅದು ದೃಶ್ಯವಾಹಿನಿಯೆಂತೋ ಶ್ರವ್ಯವಾಹಿನಿಯಾಗಿಯೂ ಹರಿಯುವ ನಿತ್ಯನಿರಂತರ ಸುಧೆ. ಆಲ್ದಾಳರು ಅನುಸರಿಸಿರುವ ನಾಟಕ ನಿರೂಪಣಾ ತಂತ್ರ ವಿಧಾನ ಮತ್ತು ಫ್ಲಾಷ್ ಬ್ಯಾಕ್ ಬಳಕೆಗಳು ಸಾಕಷ್ಟು ಪೋಷಕವಾಗಿಯೇ ನಿಲ್ಲುತ್ತವೆ ಎನ್ನಲಡ್ಡಿಯಿಲ್ಲ, ಹಳ್ಳಿಗರ ನಡೆನುಡಿಗಳನ್ನು ಬಹಳ ಹತ್ತಿರದಿಂದ ಬಲ್ಲ ಒಡನಾಡಿಯಾಗಿದ್ದುಕೊಂಡು, ಎಲ್ಲಿಯೂ ಉತ್ಪ್ರೇಕ್ಷೆಗೆ ಎಡೆಮಾಡಿಕೊಡದೆ ಸರಳ, ಸುಂದರ, ದಿಟ್ಟ ಆಕರ್ಷಕ ಶೈಲಿಯಲ್ಲಿ ಹೇಳಿರುವುದು, ರೂಢಿಸಿಕೊಂಡು ಸಾಧಿಸಿರುವ ಕಲಾವಂತಿಕೆ ಶ್ಲಾಘನೀಯ. ಸೃಜನಶೀಲತೆಯ ಸೂಚಕ. ನಾಟಕದ ಶೀರ್ಷಿಕೆ ನಿಜವಾಗಿಯೂ ಮನಸ್ಸಿನಲ್ಲಿ ಸದಾ ನೆನಪಿಸುವಂತಿದೆ. ಎಲ್ಲರ ಬಾಳಿಗೂ ಒಂದು ಬೆಲೆ ಇದ್ದೇ ಇದೆ ಎಂದು ಸಾರುತ್ತಿದೆ.

ಗ್ರಾಮೀಣ ಸಂಸ್ಕೃತಿಯ ಬದುಕನ್ನು ಅಪಾರವಾಗಿ ಪ್ರೀತಿಸಿ, ಗೌರವಿಸುವ ಆಲ್ದಾಳರು ಅದಕ್ಕೆ ಮಾರು ಹೋದವರು ತಮ್ಮ ಕೃತಿ ರಚನೆಯ ಪ್ರತಿ ಸಂದರ್ಭದಲ್ಲೂ ಅವುಗಳ ಪ್ರಭಾವಕ್ಕೆ ಒಳಗಾಗಿರುವಷ್ಟೇ ಅಲ್ಲದೆ, ಮರೆಯಾಗುತ್ತಿರುವ ಆ ಸಂಪತ್ತನ್ನು ಉಳಿಸಿಕೊಳ್ಳಲು ನಿರಂತರವಾಗಿ ಶ್ರಮಿಸುತ್ತ ಬಂದಿದ್ದಾರೆ. ಜನಪದ ಸಾಹಿತ್ಯ, ಕಲೆಗಳ ಬಗ್ಗೆ ಅವರು ವಹಿಸುತ್ತ ಬಂದ ಆಸಕ್ತಿ, ಮಾಡುತ್ತ ಬಂದ ಕಾರ್ಯಗಳು ಅವರ ಪ್ರತಿಭೆ, ಪ್ರತಿಷ್ಠೆಯನ್ನು ಎತ್ತಿಹಿಡಿದಿವೆ. ಅವರು ನಾಟಕಕಾರಾದರೂ ಅವರ ಇನ್ನಿತರ ಸಾಹಿತ್ಯಗಳು ಕನ್ನಡ ಭಾಷೆ, ಸಾಹಿತ್ಯ ಹಾಗೂ ಸಂಸ್ಕೃತಿಗೆ ನೀಡಿದ ಕೊಡುಗೆಗಳೇ ಆಗಿವೆ. ಅಳಿಸಿ ಹೋಗುತ್ತಿರುವ ಸಂಪತ್ತನ್ನು ಉಳಿಸಿಕೊಳ್ಳಲು ನಡೆಸುತ್ತಿರುವ ಅವರ ಪ್ರಯತ್ನ ಶ್ಲಾಘ್ಯನೀಯವಾದುದು.

# ನನ್ನ ದೇವರು

(ಸಾಮಾಜಿಕ ನಾಟಕ)

'ನನ್ನ ದೇವರು' ಸಾಮಾಜಿಕ ನಾಟಕದಲ್ಲಿ ಕುಡುಕಗಂಡನಿಂದ ಹೆಂಡತಿ ದೂರಾಗಿ ತಂದೆಯ ಸಹಾಯದಿಂದ ಎಂ.ಬಿ.ಬಿ.ಎಸ್. ಮಾಡಿ ಡಾಕ್ಟರಳಾಗುತ್ತಾಳೆ. ಬಡವರಿಗೆ, ದೀನರಿಗೆ, ದಲಿತರಿಗೆ ಉಚಿತವಾಗಿ ಚಿಕಿತ್ಸೆಮಾಡಿ ಮಾನವೀಯತೆಯನ್ನು ಮೆರೆಯುತ್ತಾಳೆ. ಸ್ತ್ರೀ ಮನಸ್ಸು ಮಾಡಿದರೆ ಏನನ್ನಾದರೂ ಸಾಧಿಸಿ ತೋರಬಲ್ಲಳು ಎನ್ನುವುದಕ್ಕೆ 'ನನ್ನ ದೇವರು' ನಾಟಕ ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿಸುತ್ತದೆ. "ಸ್ತ್ರೀಯರಿಗೆ ಶಿಕ್ಷಣ ದೊರೆತರೆ ಅವರು ತಮ್ಮ ಸಾಮರ್ಥ್ಯವನ್ನು ಅರಿಯಬಲ್ಲರು" ಎಂಬುದಕ್ಕೆ 'ನನ್ನ ದೇವರು' ನಾಟಕ ಸಾಕ್ಷಿಯಾಗಿದೆ.

'ನನ್ನ ದೇವರು' ನಾಟಕದ ನಾಯಕಿ ತನ್ನ ಗಂಡನನ್ನೇ ದೇವರೆಂದು ನಂಬಿ, ಪ್ರೀತಿ, ವಿಶ್ವಾಸವಿಟ್ಟು, ಸುಸಂಸ್ಕೃತಳಾಗಿ, ಎಲ್ಲರಿಗೂ ಮೆಚ್ಚುಗೆ ಯಾಗುವಂತೆ ಬಾಳುವ ಚಿತ್ರಣ ನಾಟಕದಲ್ಲಿ ಅದ್ಭುತವಾಗಿ ಮೂಡಿಬಂದಿದೆ, ಕುಡುಕ-ಗಂಡ ಹೆಂಡತಿಯನ್ನು ತೊರೆದು ಅನೇಕ ಸ್ತ್ರೀಯರ ಸಂಗ ಮಾಡುತ್ತ, ಕಾಮುಕನಾಗಿ ಮೆರೆಯುತ್ತಲಿದ್ದರೂ ಹೆಂಡತಿಯಾದವಳು ತನ್ನ ಪತಿವೃತ ಧರ್ಮವನ್ನು ಅನುಸರಿಸುತ್ತ, ದೂರ ಉಳಿದ ಪತಿಯನ್ನೇ ಪರಮೇಶ್ವರ ಎಂದು ಪೂಜೆ ಮಾಡುವುದು ಕಂಡಾಗ 'ಯತ್ರನಾರ್ಯಸ್ಥ ಪೂಜ್ಯತೆ ತತ್ರ ರಮಂತೆ ದೇವತಃ' ಎಂಬ ವಿದ್ವಾಂಸರ ವಾಣಿ ನಿಜವೆನ್ನಿಸುತ್ತದೆ.

**"ಪತಿಯೇ ದೇವರು**
**ಪತಿಯೇ ಕಾಶೀರಾಮೇಶ್ವರ**
**ಪತಿಯ ಪಾದವೇ ಶ್ರೀಶೈಲಗಿರಿಯು**
**ಪತಿಯಿಂದಲೇ ಸದ್ಗತಿಯಾದರೆ ಸತಿ**
**ಪಾವನಳಮ್ಮ"** [೧೩೬]

ಎಂದು ಪತಿವೃತೆ, ನಾರಿಶಿರೋಮಣಿ ಅನುಸೂಯಾ ದೇವರಲ್ಲಿ ಪ್ರಾರ್ಥಿಸುವಳು, ಜೀವನದಲ್ಲಿ ಎದುರಾಗುವ ಎಲ್ಲ ಸಂಕಷ್ಟಗಳನ್ನು ನುಂಗಿಕೊಂಡು ಬದುಕುವುದನ್ನು ಕಲಿತರೆ ಅದು ಮುಂದೆ ಫಲಕೊಡಲಿದೆ ಎಂಬುದೇ 'ನನ್ನ ದೇವರು' ನಾಟಕ ಸತ್ಯವಾಗಿಸಿದೆ. ಸ್ತ್ರೀಯರು ಸಹನಾಶೀಲರು, ಶಕ್ತಿಗಿಂತಲೂ ಸಹನೆ ಹೆಚ್ಚು ಸಾಧಿಸುತ್ತದೆ. ತಾಳಿಕೊಂಡವನು ತನ್ನ ದೈವವನ್ನು ಕೂಡಾ ಗೆಲ್ಲುತ್ತಾನೆ. ಅನುಸೂಯಾಳ ಸಹನೆ ಕೊನೆಗೆ ಅವಳ ಜೀವನವನ್ನೇ ಪಾವನ ಗೊಳಿಸಿತು. ಸತಿ-ಪತಿಗಳು ದೂರಾದವರು ಒಂದಾದರು, ಅಡಿಯ ಮುಂದಿಡೆ ಸ್ವರ್ಗ ಎನ್ನುವ ಮಾತು ಸುಮ್ಮನೆ ಬರಲಿಲ್ಲ. ತನ್ನಲ್ಲಿ ವಿಶ್ವಾಸ ಇರಿಸಿಕೊಂಡವರಿಗೆ ಎಲ್ಲ ಬಾಗಿಲುಗಳು ತೆರೆಯುತ್ತವೆ ಎಂಬುದಕ್ಕೆ 'ನನ್ನ ದೇವರು' ಸಾಕ್ಷಿಯಾಗಿದೆ.

ಹೆಸರಿಗೆ ತಕ್ಕಹಾಗೆ ನಡೆಯ ಬೇಕಾದ ವಿವೇಕ, ತನ್ನ ಅವಿವೇಕವನ್ನೇ ಪ್ರದರ್ಶಿಸುತ್ತಲೇ ಇದ್ದಾನೆ. ತಾನು ಶ್ರೀಮಂತ ಎಂಬುದನ್ನು ತನ್ನ ದರ್ಪದ ಮೂಲಕವೇ ಹೊರಗೆಡವುತ್ತಾನೆ. ಎಂಬುದು 'ನನ್ನ ದೇವರು' ನಾಟಕದಲ್ಲಿ ನೋಡುಬಹುದು, ತುಂಬಾ ಬಡತನ ಮನೆಯ ಹೆಣ್ಣನ್ನು ಮಾಡಿಕೊಂಡ ಶ್ರೀಮಂತ ಕುಟುಂಬದ ವಿವೇಕ ತನ್ನ ಹೆಂಡತಿಯನ್ನು ಶೋಷಿಸುತ್ತಲೇ ಬಂದವನಾಗಿದ್ದ, ಹೆಂಡತಿ ತವರು ಮನೆಗೆ ಹೋದಾಗ ಅಲ್ಲಿ ಹೆಂಡತಿಯ ಅಣ್ಣನಿಗೆ ಮಾತಿನಲ್ಲಿ, ತನ್ನ ದರ್ಪ ತೋರುತ್ತ ಹಿಂಸೆ ನೀಡುವ ಪರಿ ನೋಡಿ.

**ವಿವೇಕ:** ಮೊದಲೇ ಭಿಕಾರಿ ಎಂದು ಬಾಯ್ಬಿಟ್ಟು ಬೊಗಳುತ್ತಿರುವಾಗ ಬೇಡಿದ್ದನ್ನೇನು ಕೊಡುತ್ತೀ.

**ಅರವಿಂದ:** ಮಾಮಾ ನಾನು ಭಿಕಾರಿ ಇರಬಹುದು ಸಮಾಜದ ಕಣ್ಣಿನಲ್ಲಿ; ಆದರೆ ನಿನಗೆ ಬೀಗನಾಗಿದ್ದೇನೆ, ಏನು ಬೇಕೆಂಬುದನ್ನು ಹೇಳು, ನೀನು ಬೇಡುವುದೇ ಒಳಿತು, ನಾನು ಕೊಡುವುದೇ ಒಳಿತು, ಅಕ್ಕಾ ನಿನ್ನ ಗಂಡನಿಗೆ ಏನು ಕೊಡಬೇಕು ಹೇಳಮ್ಮ. [೧೩೭]

ವಿವೇಕ ಶ್ರೀಮಂತನಾಗಿರಬಹುದು ಆದರೆ ಬಡವಿಯಾದ ಸತಿಯ ಮನೆಯವರಿಗೆ ತನ್ನ ಬೇಡಿಕೆ ಇರಿಸುವುದೆಂದರೇ! ಇವನೊಬ್ಬ ಶ್ರೀಮಂತ ಭಿಕ್ಷುಕ ಎಂದರೆ ತಪ್ಪಾಗಲಾರದು.

"ಸಂಪತ್ತಿನಿಂದ ಮಹಿಳೆಯರನ್ನು ಖಾಸಗಿ ಆಸ್ತಿಯಾಗಿಸಲಾಯಿತು. ಅಬಲೆಯಾಗಿಸಿತು, ಸಾಮಾಜಿಕ ಸಂದರ್ಭದಲ್ಲಿ ಮಕ್ಕಳು ಹೆರುವ ಯಂತ್ರವಾದಳು, ಆರ್ಥಿಕವಾಗಿ ಪರಾಧೀನೆಯಾದಳು, ಆದ್ದರಿಂದ ಪ್ರತಿ ಮನೆಯಲ್ಲೂ ಇಂದಿಗೂ ಮಹಿಳೆಯು ಎರಡನೆಯ ದರ್ಜೆಯ ಪ್ರಜೆಯಾಗಿ ಬಾಳುತ್ತಿದ್ದಾಳೆ ಎಂದು ಹೇಳುವುದು ಕ್ಲೀಷೆಯಾಗಲಾರದು. ಅಕ್ಷರಶಃ ಅವಳು ಎಲ್ಲ ವರ್ಗದ ಮನೆಯಲ್ಲಿಯೂ ಅಸ್ತಿತ್ವ ಹೀನಳಾಗಿ ಬದುಕುತ್ತಿದ್ದಾಳೆ ಎಂಬುದು ಅಲ್ಲಗಳೆಯುವಂತಿಲ್ಲ" [೧೩೮] ಇದೇ ಮಾತನ್ನೇ ನಾವು 'ನನ್ನ ದೇವರು'ನಾಟಕದಲ್ಲಿ ಅನುಭವಕ್ಕೆ ಪಡೆದುಕೊಳ್ಳಬಹುದು. ಆದರೆ ಹೆಣ್ಣು ಮನಸ್ಸು ಮಾಡಿದರೆ ಏನನ್ನಾದರೂ ಸಾಧಿಸಬಹುದು ಎಂಬುದನ್ನು ನಾಟಕದ ಅನುಸುಯಾ ತನ್ನ ದೃಢ ನಿರ್ಧಾರದಿಂದ, ಹೆಚ್ಚಿನ ಶಿಕ್ಷಣ ಸಂಪಾದಿಸುವುದರೊಂದಿಗೆ ತಾನು ಸಮಾಜದಲ್ಲಿ ತಲೆ ಎತ್ತಿ ನಿಲ್ಲಬಲ್ಲೆ ಅಲ್ಲದೆ ಸಮಾಜದಲ್ಲಿ ಸೇವೆ ಮಾಡಿ ಭೇಷ ಅನ್ನಿಸಿಕೊಳ್ಳಬಲ್ಲೆ ಎಂಬುದನ್ನು ತೋರಿಸಿಕೊಟ್ಟಿದ್ದಾಳೆ. ಶ್ರೀಮಂತಿಕೆ ಇದ್ದಾಗ ಕರೆದು ದಾನವ ಮಾಡು, ಪುಣ್ಯಕಟ್ಟಿಕೋ ಅಂಥ ಹಿರಿಯರು ಹೇಳುತ್ತಾರೆ ಆ ಮಾತನ್ನು ನಿಜವಾಗಿಯೂ ಮಾಡಿ ತೋರಿಸಿದವಳು ಅನುಸೂಯಾ! ಕಷ್ಟಕಾಲದಲ್ಲಿ ವೈದ್ಯಕೀಯ ಶಿಕ್ಷಣ ಪಡೆದು, ತಾನು ಕಲಿತ ವಿದ್ಯೆಯಿಂದ ಬಡವರಿಗೆ, ದಲಿತರಿಗೆ, ಸಮಾಜದಲ್ಲಿರುವ ಎಲ್ಲಾ ಹಿಂದುಳಿದ ವರ್ಗದವರಿಗೆ ತನ್ನ ಕೈಲಾದ ಸೇವೆಯನ್ನು ಸಲ್ಲಿಸುತ್ತ ಗುಣವಂತೆ ಎನ್ನಿಸಿಕೊಂಡಳು, ನಾಟಕದ ಪಾತ್ರಗಳು ಸಮಾಜಕ್ಕೆ ಮಾರ್ಗದರ್ಶಕರೂ ಆಗಿದ್ದಾರೆ.

'ನನ್ನ ದೇವರು' ನಾಟಕದ ಮುಕ್ತಾಯ ಸುಖದಾಯಕ ವಾಗುವಂತೆ ಮಾಡುವಲ್ಲಿ ನಾಟಕಕಾರರು ಯಶಸ್ವಿಯಾಗಿಸಿ ನಾಯಕಿ, ವೈದ್ಯಳಿಗೆ ನ್ಯಾಯ ತಂದಿತ್ತಿದ್ದಾರೆ, ಕುಡುಕಗಂಡ ವಿವೇಕ ಅಪಘಾತದಲ್ಲಿ ಭೀಕರವಾಗಿ ಗಾಯಗೊಂಡು ಆಸ್ಪತ್ರೆಗೆ ಸೇರುತ್ತಾನೆ. ಶಸ್ತ್ರಚಿಕಿತ್ಸೆ ಮಾಡಿದ

ಡಾಕ್ಟರ ಅವರಿಗೆ ಗುಣಮುಖರನ್ನಾಗಿ ಮಾಡಿದ್ದು ಪುನರಜನ್ಮ ಹೊಂದುವಂತಾಗುತ್ತದೆ. ಆದರೆ ಗಂಡನ ಮರುಜೀವಕ್ಕೆ ಹೆಂಡತಿಯೇ ವೈದ್ಯಕೀಯ ಚಿಕಿತ್ಸೆ ನೀಡಿದವಳು ಎಂದು ಅರಿತಾಗಲಂತೂ ಅವನಿಗೆ ಆಶ್ಚರ್ಯ, ಸಂಕಟವಾಗುತ್ತದೆ. ತನ್ನಿಂದಾದ ತಪ್ಪು ಮನಗಂಡು ಹೆಂಡತಿಯ ಮುಂದೆ ಕೈಜೋಡಿಸಿ ಕ್ಷಮೆಯಾಚಿಸುತ್ತಾನೆ. ಸತಿಸಾವಿತ್ರಿಯಂತಿರುವ ಅನೂಸೂಯಾ 'ನೀವು ಹೇಗಿದ್ದರೇನು ನೀವು ನನ್ನ ದೇವರು' ಎಂದು ತನ್ನ ನಾರಿ ಸಂಸ್ಕೃತಿಯನ್ನು ಎತ್ತಿ ಹಿಡಿಯುತ್ತಾಳೆ. ಕ್ಷಮೆ ತೋರುವುದು ಮಹಿಳೆಗೆ ಶ್ರೇಷ್ಠ ಗುಣವಲ್ಲವೆ? ಎಷ್ಟೇ ಕಷ್ಟಬಂದರೂ ಗಂಡನ ಭಾವ ಚಿತ್ರಕ್ಕೆ ನಿತ್ಯವೂ ಪೂಜೆ ಸಲ್ಲಿಸುವುದನ್ನು ಕಂಡ ಪತಿ, ಹೆಣ್ಣುಕುಲಕ್ಕೆ ಮಾದರಿಯಾಗಿ ತನ್ನ ಸಚ್ಚಾರಿತ್ರ್ಯವನ್ನು ಬಿಂಬಿಸಿರುವುದಕ್ಕೆ ಆನಂದಿಸುತ್ತಾನೆ.

"ಆಲ್ದಾಳ ಅವರು ಈ ನಾಟಕದ ಉದ್ದೇಶ ಮತ್ತು ಗುರಿಯನ್ನು ಸಾಧಿಸಿದ್ದಾರೆ, ಅವರು ಮಹಿಳೆಯರ ಸ್ಥಿತಿ-ಗತಿಗಳನ್ನು ಆಳವಾಗಿ ಅಧ್ಯಯನ ಮಾಡಿದವರಾಗಿದ್ದಾರೆ. ಬಡತನ, ಅನಕ್ಷರತೆ, ಶೋಷಣೆ, ಪುರುಷ ಸಮಾಜದ ಬಲತ್ಕಾರ ಇತ್ಯಾದಿಗಳನ್ನು ಅರಿತು ಮಹಿಳೆ ಸಾಕ್ಷರಳಾಗುವುದರ ಜೊತೆಗೆ ಸ್ವಾವಲಂಬಿ ಯಾಗಬೇಕೆಂದು ಬಯಸುತ್ತಾರೆ. ಇದೆ ಮಾತನ್ನು ಡಾ. ಅಂಬೇಡ್ಕರ್, "ಪುರುಷರಷ್ಟೇ ಸ್ತ್ರೀಯು ಶಕ್ತಿ ಸಾಮರ್ಥ್ಯಗಳನ್ನು ಪಡೆದವಳಾಗಿರಬೇಕು. ಒಂದು ದೇಶ ಪ್ರಗತಿಯನ್ನೆ ಸಾಧಿಸ ಬೇಕಾದರೆ ಸ್ತ್ರೀಯು ಪ್ರಗತಿಯನ್ನು ಹೊಂದಿದಾಗ ಮಾತ್ರ ಸಾಧ್ಯ"[೧೩೯]ವೆಂಬುದನ್ನು ಡಾ. ಅಂಬೇಡ್ಕರ್ ಗುರುತಿಸಿದ್ದರು.

ಆಲ್ದಾಳ ಅವರ ಯಾವುದೇ, ಐತಿಹಾಸಿಕ, ಭಕ್ತಿ, ಸಾಮಾಜಿಕ, ಪೌರಾಣಿಕ ನಾಟಕಗಳಿರಲಿ ಅಲ್ಲಿ ಹಾಸ್ಯ ರಸ ಉಕ್ಕಿ ಹರಿಯುತ್ತದೆ.ಪ್ರೇಕ್ಷಕರನ್ನು ಹೊಟ್ಟೆ ಹುಣ್ಣಾಗುವಂತೆ ನಕ್ಕು ನಲಿಯುವಂತೆ ಮಾಡುತ್ತದೆ. " ಹಾಸ್ಯದ ಎಳೆತೊಳೆ, ಪಕಳೆಗಳು ಬಿರಿದು ಬೀರುವುದು ಹಲವು. ಗೂಡು ಬೀಡು ಜಾಡು ಹಾಡುಗಳಲ್ಲಿ ಆರೋಗ್ಯಕರ ಹಾಸ್ಯದಿಂದ ಹೊರಹೊಮ್ಮುವ ಭಾವನೆಗಳು ಹಲವು ನೊಂದುಬೆಂದು ಬಳಲಿ ಬಸವಳಿದು ಬೇಸತ್ತ ಬೇಡಾದ ದೇಹ ಮತ್ತು ಮನಕ್ಕೆ ಮದನೀಗಿ ಮುದ ನೀಡುವ ಹಾಸ್ಯವು ನಿತ್ಯ ದಿವ್ಯ ಸಂಜಿವಿನಿ, ರಸೋಪಾಕ, ಸಾಂತ್ವನದಾಯಕ ವರದಾಯಿನಿ. ಹಾಸ್ಯವು ಸದಭಿರುಚಿಯದಾಗಿರಬೇಕು ಅದು ಮನಸ್ಸನ್ನು ಅರಳಿಸುವಂತಿರಬೇಕೇ ಹೊರತು ಕೆರಳಿಸುವಂತಿರಬಾರದು. ಉತ್ತಮ ಅಭಿರುಚಿಯ ಹಾಸ್ಯಚಟಾಕಿಯು ಲಟಕು, ಪಟಕು, ಚುಟುಕು ಕುಟುಕು ಗುಟುಕು ಪಟಾಕಿಯಂತೆ ಸುಮ್ಮನೆ ಗುಮ್ಮನೆ ಸಿಡಿದು ಸುತ್ತಮುತ್ತಲೆಲ್ಲೆಡೆ ಆಹ್ಲಾದಕರ ಸುಳಿಗಾಳಿಯನ್ನು ಸಿಂಪಡಿಸಬಲ್ಲದು.

"ಬದುಕಿನ ಗಾಲಿಗೆ ವಿನೋದ ಕೀಲೆಣ್ಣೆ ಇದ್ದಂತೆ, ಆದ್ದರಿಂದ ಬದುಕಿನ ಕನ್ನಡಿಯಾಗಿರುವ ರಂಗಭೂಮಿಯಲ್ಲಿಯೂ ಹಾಸ್ಯಕ್ಕೆ ಮೀಸಲು ಸ್ಥಾನ, ಹೊಟ್ಟೆತುಂಬ ನಗಿಸುತ್ತ, ಜೀವನದ ಪಾಠ-ಕಲಿಸುವ ಹಾಸ್ಯ ಪ್ರಧಾನ ನಾಟಕಗಳು ಉಂಟು. ಯಾವ ಕಾಲದ ಯಾವ ದೇಶದ ರಂಗಭೂಮಿಯಲ್ಲಿಯೂ, ವಿನೋದ ತನ್ನ ಮೀಸಲು ಸ್ಥಾನವನ್ನು ಕಳೆದುಕೊಂಡಿಲ್ಲ, ಹಾಗೆ ಒಂದು ವೇಳೆ ಕಳೆದುಕೊಂಡಿದ್ದರೆ, ಅಲ್ಲಿನ ರಂಗಭೂಮಿ ಬಹುಕಾಲ ಬದುಕಿಲ್ಲ".[೧೪೦]

'ನನ್ನ ದೇವರು' ನಾಟಕದಲ್ಲಿ ಪ್ರಭು ಮತ್ತು ಚೆನ್ನಿ ಪಾತ್ರಗಳು ಜೀವನದ ಪ್ರತಿಯೊಂದು ಘಟನೆಯನ್ನು ಹಾಸ್ಯಮಯವಾಗಿಸಿವೆ. ಇವರ ಹಾಸ್ಯಮಯ ಸಂವಾದಗಳು ಪ್ರತ್ಯೇಕವಾಗಿ ಕಂಡರೂ ನಾಟಕದ ಮುಖ್ಯಪಾತ್ರಗಳಿಗೆ ಕೊಂಡಿಯಂತೆ ಬೆಸೆಯುತ್ತಿವೆ ಎಂಬುದು ಮನವರಿಕೆ ಯಾಗುತ್ತದೆ.

**ಚೆನ್ನಿ:** **"**ಯವ್ವಾ ನಿನ್ನ ದೇವರು ಎಲ್ಲೂ ಹೋಗುವುದಿಲ್ಲ ಬಾ ನೀ ಇದ್ದಲೇ ಬರತಾನಾ ನಿನ್ನ ಭಾವನಾ ಚಲೋ ಐತಿ, ನಿಜವಾಗಿ ಗರತಿ ಗಂಗವ್ವ ನೀನು, ನಿನ್ನಂಥ ಗರತಿ ಗಂಗವ್ವನ ಗಂಡನಾದ ಇವರು ನೀ ಇದ್ದಲಿಗೆ ಬಂದೇ ಬರ್ತಾರ, ಮೊದಲ ನಿನ್ನ ತವರ ಮನಿಗೆ ಹೋಗೋನು ನಡೇ ಯವ್ವ".[೧೪೧]

ಹಾಸ್ಯ ಪ್ರಜ್ಞೆ ಆರೋಗ್ಯದ ಲಕ್ಷಣ. ಅಪಹಾಸ್ಯವು ಅಸ್ವಸ್ಥ ವಿಲಕ್ಷಣ ವ್ಯಕ್ತಿತ್ವದ ಸಂಕೇತ, ಕ್ರಿಯಾಶೀಲತೆ ಹಾಗೂ ಸೃಜನ ಶೀಲತೆಯ ಗುಣಗಳುಳ್ಳ ಪ್ರಾಂಜಲ ಮನಸ್ಸಿನ ಉಲ್ಲಸಿತ ವ್ಯಕ್ತಿಯು ದೀರ್ಘಕಾಲ ನೆಮ್ಮದಿಯಿಂದಿರಬಲ್ಲನು. ಹಸನ್ಮುಖಿ ಸದಾಸುಖಿ. ಹಾಸ್ಯವು ಎಂದೂ ಊರುಗೋಲು ಹೊರತು ತೊಡರು ಗಾಲಲ್ಲ".[೧೪೨] ಆಲ್ದಾಳರ ನಾಟಕಗಳು, ಅಲ್ಲದೆ ಅವರ ಸಾಹಿತ್ಯದ ಕೃತಿಗಳನ್ನು ಓದುವುದೆಂದರೆ ಹೋಳಿಗೆ ಸವಿದಷ್ಟೇ ಸಿಹಿ ಹಾಗೂ ಆನಂದವೆನ್ನಿಸುತ್ತದೆ. ವೃತ್ತಿರಂಗ ಭೂಮಿಗೆ ಅಪಾರ ಸೇವೆಸಲ್ಲಿಸಿರುವ ಸಲ್ಲಿಸುತ್ತಿರುವ ಆಲ್ದಾಳರು ರಂಗ ಭೂಮಿಗೆ ಒಂದು ಆಸ್ತಿ ಇದ್ದಂತೆ ಅವರು ಶ್ರಮಜೀವಿ. ಶ್ರಮದಿಂದಲೇ ಜಯ ಎನ್ನುವ ಮಾತಿನಲ್ಲಿ ನಂಬಿಕೆ ಇಟ್ಟುಕೊಂಡು ಬಂದವರು.

ಭಾಷಾಶೈಲಿ ವಿವಿಧತೆಯಲ್ಲಿ ಏಕತೆಯನ್ನು ಸಾರುವಂತೆ ನಾಟಕದ ಪಾತ್ರಗಳಿಗೆ ತಕ್ಕಹಾಗೆ ಭಾಷೆಯನ್ನು ಬಳಸುವಂತೆ ಮಾಡುವ ಕಲೆ ನಾಟಕಕಾರರಿಗೆ ಕರಗತವಾಗಿದೆ. ಹೈದ್ರಾಬಾದ ಕರ್ನಾಟಕದ ಗಂಡು ಭಾಷೆ ಕೇಳುಗರಿಗೆ, ಓದಗರಿಗೆ ಹಿತಕರವಾಗಿರುತ್ತದೆ. ಆಲ್ದಾಳರು ಸಂದರ್ಭಕ್ಕೆ ತಕ್ಕಂತೆ ಮರಾಠಿ, ಉರ್ದು ತೆಲಗು, ಹಿಂದಿ ಭಾಷೆಗಳನ್ನು ಬಳಸಿ ಪಾತ್ರಗಳಿಂದ ಹೇಳಿಸುವಲ್ಲಿ ಯಶಸ್ವಿಯಾಗಿದ್ದಾರೆ. "ಯಾವುದೇ ನಾಟಕ ಬರೆದಾಗಲೂ ಸರ್ವಧರ್ಮವನ್ನು, ಮಾನವೀಯತೆಯ ಮೌಲ್ಯಗಳನ್ನು ಎತ್ತಿತೋರಿಸುವ, ಗೌರವಿಸುವ ಅಂಶ ಬಂದೇ ಬರುತ್ತದೆ ಧರ್ಮದ ಕ್ಲಿಷ್ಟತೆಯನ್ನು ಸರಳಗೊಳಿಸಿ ಬಹು ಸುಲಲಿತವಾಗಿ ಕಥೆಯ ಕಟ್ಟಡಕ್ಕೆ ಹೊಂದಿಕೊಂಡು ಆಲ್ದಾಳರು ಬರುತ್ತಾರೆ".[೧೪೩]

'ನನ್ನ ದೇವರು' ಸಾಮಾಜಿಕ ನಾಟಕದಲ್ಲಿ ಅನುಸುಯಾ ಪಾತ್ರದ ಮುಖ್ಯ ತಿರುಳು ಸಹನೆ. ಗಂಡ ತೊರೆದಾಗ ಅಬಲೆ ಹೆಣ್ಣು ಕೈಕೊಂಡ ನಿರ್ಧಾರ, ಸಾಗಿರುವ ದಾರಿ ರಾಜಮಾರ್ಗವಾಗಿರಲಿಲ್ಲ, ಅದೊಂದು ಕಲ್ಲು ಮುಳ್ಳುಗಳಿಂದ ತುಂಬಿದ ದೀರ್ಘಾವಧಿ ಬದುಕು ಎಂಬುದು ಯಾರಿಗಾದರೂ ಅರ್ಥವಾಗುತ್ತದೆ. ಆದರೆ ಗುರಿ ಸಾಧನೆಯಲ್ಲಿ ತೋರಿದ ಶ್ರಮ, ಶ್ರದ್ಧೆ, ಪ್ರಾಂಜಲ ಮನಸ್ಸು ಹಾಗೂ ಧೈರ್ಯಗಳು ಕಾರಣವಾದವು. ಇದೇ ಮಾತುಗಳು ಆಲ್ದಾಳ ಅವರಿಗೆ ಅನ್ವಯವಾಗಿವೆ ಎಂದರೆ ತಪ್ಪಾಗಲಿಕ್ಕಿಲ್ಲ ಇವರ ಸಂಸಾರದಲ್ಲಿನ ಕಷ್ಟಗಳಲ್ಲಿಯೂ ನಗುನಗುತ್ತ ಬಾಳುವ ಆಲ್ದಾಳರು ಬಡತನ–ಕಷ್ಟಗಳಲ್ಲಿಯೇ ಆಸೆ ತುಂಬಿದ ಉಸಿರಿನಿಂದ ಬದುಕುತ್ತಿದ್ದಾರೆ.

ಕೊನೆಯದಾಗಿ, ಪತಿ–ಪತ್ನಿಯರಲ್ಲಿ ಹೊಂದಾಣಿಕೆ ಮುಖ್ಯ 'ನನ್ನ ದೇವರು' ನಾಟಕದಲ್ಲಿ ಅದು ಪ್ರಾರಂಭದಲ್ಲಿ ಕಾಣುವುದಿಲ್ಲ, ಜೀವನರಥ ಎಳೆಯುವಲ್ಲಿ ಇಬ್ಬರದೂ ಸಮಾನ ಪಾತ್ರ. ರಥಕ್ಕಿರುವ ಎರಡು ಗಾಲಿಗಳಂತೆ. ಇಬ್ಬರು ಸಮವರ್ತಿಗಳಾಗಿ ನಡೆದರೆ ಚಲನೆ ಸುಲಭ. ಅದು ಬಿಟ್ಟು ನಾ–ಹೆಚ್ಚು–ತಾಹೆಚ್ಚು ಎಂದು ಹೊರಟರೆ ನಡಿಗೆ ಏರುಪೇರಾಗುತ್ತದೆ. ಶ್ರೇಷ್ಠ ಕವಿತ್ರಿ ಹೊನ್ನಮ್ಮನ ಕಾವ್ಯ 'ಹದಿಬದೆಯಧರ್ಮ' ಎಂದು ಹೆಸರು ಪಡೆದಿರುವುದರಿಂದ ಇದು ಪತಿವೃತೆಯರಿಗೆ ಮಾತ್ರ ಮೀಸಲಾದ ಕೃತಿಯೆಂದು ತಿಳಿಯಬೇಕಾಗಿಲ್ಲ ಗಂಡನ ನಡತೆ ಹೇಗಿರಬೇಕೆಂಬುದರ ಬಗ್ಗೆಯು ಹೊನ್ನಮ್ಮ ತಿಳಿಹೇಳುತ್ತಾಳೆ."[೧೪೪]

ಹೊನ್ನಮ್ಮನ ಅಭಿಪ್ರಾಯದಲ್ಲಿ ಹೆಣ್ಣು ಸ್ವತಂತ್ರಳಲ್ಲ, ಅವಳಿಗೆ ಆಶ್ರಯದ ಅಗತ್ಯ ಅವಶ್ಯವಾಗಿದೆ. ಆದ್ದರಿಂದ ಅವಳಿಗೆ ಬಾಲ್ಯದಲ್ಲಿ ತಂದೆಯ, ಯೌವನದಲ್ಲಿ ಪತಿಯ, ಮುಪ್ಪಿನಲ್ಲಿ ಮಗನ ಸಹಾಯ, ಆಶ್ರಯ ಬೇಕು ಎಂಬುದು ಹೇಳುತ್ತಾಳೆ.

**ತಡೆಯದೆಳಮೆಯೊಳು ತಂದೆ ತಾಯಿಗಳಿಗೆ**
**ನಡುವರೆಯದೊಳು ನಲ್ಲನಿಗೆ**
**ಕಡುಮುದುಕಾದ ಕಾಲದೊಳು ತನ್ನಣುಗರಿ**
**ಗಡಕ ಮೆನಿಪುರಬಲೆಯರು** [೧೪೫]

ಇಲ್ಲಿ ಮನುಸ್ಥಿತಿಯಲ್ಲಿ ಬರುವ ವಿಚಾರವನ್ನು ಹೊನ್ನಮ್ಮ ಸಂಪೂರ್ಣವಾಗಿ ಒಪ್ಪಿಕೊಂಡಿರುವುದು ಕಂಡು ಬರುತ್ತದೆ.

**ಪಿತಾರಕ್ಷತಿ ಕೌಮಾರೆ ಭರ್ತಾರಕ್ಷತಿ ಯೌವನೇ**
**ರಕ್ಷಂತಿ ಸ್ಥಾವಿರೇ ಪುತ್ರಾ ನಸ್ತ್ರಿ ಸ್ವಾತಂತ್ರ್ಯಮರ್ಹತಿ**

ಹೆಣ್ಣು ಗಂಡಿನ ಅಧೀನಳು, ಅವಳಿಗೆ ಸ್ವಾತಂತ್ರವಿಲ್ಲ ಎಂದಾಕ್ಷಣ ಅವಳ ಅಸ್ತಿತ್ವವೇ ಕಡೆಗಣಿಸಿ ಹೋದಂತೆ ಎಂದು ಭಾವಿಸುವುದು ಸರಿಯಲ್ಲ, ಅವಳು ಅಧೀನಳು, ಗುಲಾಮಳು ಎಂದೇಕೆ ಭಾವಿಸಬೇಕು? ಮಹಿಳೆ ಸ್ವತಂತ್ರವಾಗಿರಬಲ್ಲಳು. ಒಂಟಿಯಾಗಿ ಓಡಾಡ ಬಲ್ಲಳು, ಏನನ್ನು ಬೇಕಾದರು ಸಾಧಿಸಬಲ್ಲಳು ಎಂಬುದನ್ನು "ನನ್ನ ದೇವರು" ನಾಟಕದ ಮೂಲಕ ಆಲ್ದಾಳ ಅವರು ತೋರಿಸಿಕೊಟ್ಟು ಉತ್ತಮ ಸಂಪ್ರದಾಯವನ್ನು ಮೆರೆದಿದ್ದಾರೆ. ಶ್ರೇಷ್ಠ ಸಾಹಿತಿ ಟಿ.ಎನ್.ನಾಗರತ್ನ ಅವರ ಅಭಿಪ್ರಾಯವೂ ಇದೆ ಆಗಿದೆ. "ಪ್ರೇಮಕ್ಕೆ ದೇಶ, ಕಾಲಗಳಕಟ್ಟಿಲ್ಲ, ಪ್ರೇಮದಿಂದ ಕೂಡಿದ ಅನ್ಯೋನ್ಯ ದಾಂಪತ್ಯದಲ್ಲಿ ಸೇವೆ ಗೌರವಗಳು ಪರಸ್ಪರವಾಗಿರುತ್ತದೆ. ಅದನ್ನು ಪಡೆಯುವ ಹಕ್ಕು ಯಾರೋಬ್ಬರಿಗೂ ಮೀಸಲಾದುದಲ್ಲ. ಈ ದೃಷ್ಟಿಯಿಂದ ಹೊನ್ನಮ್ಮ ಸತಿಗೆ ಉಪದೇಶಿಸಿದ ನೀತಿ ತತ್ವಗಳನ್ನೆಲ್ಲಾ ಪತಿಗೂ ಅನ್ವಯಿಸಬಹುದು. ಆಗ ಇದು 'ಸತಿಧರ್ಮದ ಕೈಪಿಡಿ ಮಾತ್ರವಲ್ಲ, ಪತಿಧರ್ಮದ ಕೈಗನ್ನಡಿಯೂ ಆಗಿ ಕಳೆಗಟ್ಟುತ್ತದೆ. ಮಾನವೀಯತೆಯ ಉತ್ತಮ ಮಾರ್ಗದರ್ಶಿಯಾಗುತ್ತದೆ."[೧೪೬] ಇದೇ ಮಾದರಿಯಲ್ಲಿ "ನನ್ನ ದೇವರು" ನಾಟಕ ರೂಪುಗೊಂಡಿದೆ.

# ಕಲಿಯುಗದ ಕನ್ಯೆ

ಸಾಮಾಜಿಕ ಜೀವನದಲ್ಲಿ ಕಂಡುಬರುವ ವಿಧವಾ ಬದುಕು, ವೇಶ್ಯಾಜೀವನ ಮಧ್ಯಪಾನ, ಅಸ್ಪೃಶ್ಯತೆ, ಅಂತರಜಾತಿ ವಿವಾಹ, ಸ್ತ್ರೀ ಸ್ವಾತಂತ್ರ ಮುಂತಾದವುಗಳು ಆಲ್ದಾಳ ಅವರ ನಾಟಕದಲ್ಲಿ ಮೂಡಿ ಬಂದಿವೆ, ಹಾಗೆಯೇ ಕೌಟುಂಬಿಕ ಸಮಸ್ಯೆ, ಪ್ರೀತಿ, ವಾತ್ಸಲ್ಯ, ಸೋದರತ್ವ, ಮನೆ ಮುರುಕತನ, ವಿಶ್ವಾಸದ್ರೋಹ, ಕಾಮಾಂಧರ ದುರಾಚಾರತ್ವ, ವಿಷಯ ದಾಂಪತ್ಯದ ಭೀಷಣ ಚಿತ್ರ, ಕಹಿ ಅನುಭವ ಮುಂತಾದ ಅಂದಿನ ಸಾಮಾಜಿಕ ಜೀವನದ ಪ್ರತಿಬಿಂಬಗಳನ್ನು ನಾಟಕಗಳಲ್ಲಿ ಎತ್ತಿತೋರಿಸಿದ್ದಾರೆ.

ಯಾವುದೇ ನಾಟಕವನ್ನು ಅವಲೋಕಿಸಿದರೂ ಅಲ್ಲಿ ಸಮಸ್ಯೆಯ ಸುಳಿಯಲ್ಲಿಯೇ ನಾಟಕದ ಕಥೆ ಅರಳುತ್ತದೆ. 'ಪತಿಭಕ್ತಿ' ನಾಟಕದ ನಂತರ ದ್ವಿತೀಯ ಪುಷ್ಪವಾಗಿ ವಿಶ್ವರಂಗ ಭೂಮಿಯ ಮೇಲೆ ಅರಳಿ ನಿಂತಿರುವ 'ಕಲಿಯುಗದಕನ್ಯೆ'ಗೆ ಪತಿಭಕ್ತಿಯ ಕುಂಕುಮವನ್ನಿಟ್ಟು, ಕೊಟ್ಟ ಮನೆಗೂ ಹೆತ್ತಮನೆಗೂ ಕೀರ್ತಿಗಳಿಸಲೆಂದು ಕಳಿಸಿರುವೆ ಎಂದು ನಾಟಕದ ಮುನ್ನುಡಿಯಲ್ಲಿ ಎಲ್.ಬಿ.ಕೆ. ಆಲ್ದಾಳ ಅವರು ಅಭಿಮಾನಿಗಳಿಗೆ, ಓದುಗರಿಗೆ, ಪ್ರೇಕ್ಷಕರಿಗೆ ಕೇಳಿಕೊಂಡಿರುವುದು ಅವರು ಮಹಿಳೆಯರ ಬಗ್ಗೆ ಹೊಂದಿರುವ ಆಧರ, ಅಭಿಮಾನಗಳು ಎಲ್ಲರೂ ಮೆಚ್ಚಲೇ ಬೇಕು. ಅದೇ ಸಮಯದಲ್ಲಿ, ಮಹಿಳೆಯರು ಬೆಳೆದು ಮದುವೆಯಾಗುವವರೆಗೆ ತಂದೆ–ತಾಯಿಗಳ ಆಶ್ರಯ, ಪಾಲನೆಯಲ್ಲಿದ್ದು, ನಂತರ ಪತಿಯ ಮನೆಗೆ ತೆರಳಿ ಕೊನೆಯವರೆಗೂ ಅಲ್ಲಿಯೇ ಜೀವನ ಸವೆಸುವಳು. ಅದಕ್ಕಾಗಿ ಸ್ತ್ರೀಯರು ಸಮಾಜದ ಗೌರವ–ಘನತೆ ಹೆಚ್ಚಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸುವುದರಿಂದಲೇ ಅವರು ಹುಟ್ಟಿದ ಮನೆಗೂ, ಗಂಡನಮನೆಗೂ ನಂದಾ ದೀಪವಾಗಿ, ಉಜ್ವಲವಾಗಿ ಬೆಳಗಲಿ ಎಂಬುದೇ ಇದರ ತಾತ್ಪರ್ಯ. ಈ ನಾಟಕ ಓದುತ್ತಿದ್ದರೆ ಇಲ್ಲವೆ ರಂಗಭೂಮಿಯ ಮೇಲೆ ನೋಡುತ್ತಿದ್ದರೆ ಎಂಥವರಕಣ್ಣು ತೋಯುತ್ತವೆ, ಮನಸ್ಸು ಬಿಕ್ಕಲಿಸುತ್ತದೆ, ಓದಲೇ ಬೇಕಾದ, ನೋಡಲೇ ಬೇಕಾದ ನಾಟಕ.

ಈ ನಾಟಕದಲ್ಲಿ ಬರುವ ಪಾತ್ರಗಳು ಸ್ವಕಲ್ಪಿತವಾದವುಗಳು ಎಂದು ಹೆಚ್ಚಿನ ನಾಟಕಕಾರರು ಹೇಳುವುದೇನೋ ಸರಿ, ಆದರೆ ಸಮಾಜದಲ್ಲಿನ ಸಂಸಾರಗಳಲ್ಲಿ ಈ ಪಾತ್ರಗಳು ಸಾಮಾನ್ಯವಾಗಿ ಕಂಡುಬರುವುದು ಸುಳ್ಳಲ್ಲ. ಕೋಟಿ, ಕೋಟಿ ಸಂಸಾರಗಳಲ್ಲಿ ಹಲವಾರು ಸಂಸಾರಗಳು ನಾಟಕದಲ್ಲಿ ಕಂಡುಬರುವ ಪಾತ್ರಗಳಿಗೆ ಹೋಲುವುದು ಸಹಜ, ಆದರೆ ನಮ್ಮನ್ನೇ ನೋಡಿ ನಾಟಕಕಾರ ಕೃತಿ ರಚಿಸಿದ್ದಾನೆ ಎಂದು ತಿಳಿದುಕೊಳ್ಳುವುದನ್ನು ಓದುಗರು, ಪ್ರೇಕ್ಷಕರು ಮಾತ್ರ ಭಾವಿಸಬಾರದು.

ಓರ್ವ ಮಧ್ಯಮವರ್ಗ ಶ್ರೀಮಂತನ ಪುತ್ರ ಸತೀಶ, ದೇಶ ಭಕ್ತನ ತಂಗಿ ಶೋಭಾ ಈ ತರುಣ–ತರುಣಿಯರ ಸುತ್ತಲೂ ಹೆಣೆದಿರುವ ಕಥಾವಸ್ತುವೆ ಈ 'ಕಲಿಯುಗದಕನ್ಯೆ' ಅಥವಾ 'ಬಾಳುಬೆಳಗಿದ ಹೆಣ್ಣು'

ಈ ನಾಟಕದಲ್ಲಿ ಮೂರು ಅಂಕಗಳ ೩೧ ದೃಶ್ಯಗಳಿದ್ದು ನಾಟಕದ ಆರಂಭ 'ನಾಂದಿ' ಹಾಡಿನ ಮೂಲಕ ನಡೆಯಲಿದೆ.

**"ಏಳು ಶೂರರವಾಣಿ। ಏಳು ಶೂರರ ಪಾಣಿ।**
**ಏಳುತೀರದ ವೀರರಸದವಾಣಿ। ಏಳುಮೀರಿದಜಾನಿ।**
**. . . . . . . . . . . . . . . . . . . . . . . . . . . .**
**ಈ ನಾಡಿನೋಳು ಮಾಡುಪಾಣಿ ಪುತ್ರರಾಬೀಡು।**
**ಏನು ನಂದನದ ಪಾಡು।"**

ಖ್ಯಾತಿ ಸಾಹಿತಿ ದ.ರಾ.ಬೇಂದ್ರೆಯವರ ಈ ಹಾಡು ಆಗಿನ ಕಾಲದಲ್ಲಿ ನಾಟಕ ಪ್ರಾರಂಭದ ಸಮಯದಲ್ಲಿ ರಂಗಭೂಮಿಯ ಮೇಲೆ ಪ್ರಾರ್ಥನೆ ಗೀತವಾಗಿ ಬಳಸಲಾಗುತ್ತಿತ್ತು. ಈಗಲೂ ಈ ಸಂಪ್ರದಾಯ ಅನುಸರಿಸಲಾಗುತ್ತದೆ.

ಸುಮಾರು ೮೦ ವರ್ಷದ ವೃದ್ಧ ಸುಬ್ಬರಾಯ ಮನೆಯ ಯಜಮಾನ, ಆತನಿಗೆ ಹಿರಿಯಮಗ ಕುಡುಕ– ಸುರೇಂದ್ರ ಹಾಗೂ ಆದರ್ಶವ್ಯಕ್ತಿ ಎಂದು ಕರೆಯಿಸಿಕೊಳ್ಳುವ ಸತೀಶ ಎಂಬ ಇಬ್ಬರು ಪುತ್ರರನ್ನು ಹೊಂದಿದ್ದರು, ಸತೀಶನ ಮಿತ್ರ, ದೇಶಭಕ್ತ ಮತ್ತು ಕೋ ಆಪರೇಟಿವ್ ಸೋಸಾಯಿಟಿ ಚೇರಮನ್ ಆಗಿರುವ ಸುರೇಶ, ತನ್ನಕೈಲಾದ ಮಟ್ಟಿಗೆ ಸಹಾಯ ಮಾಡುವ ಸ್ವಭಾವದವನು ಆದರೆ ಸುರೇಶನ ಅಣ್ಣ ಸುರೇಂದ್ರನಂತೂ ಸುರಾಪಾನದ ದಾಸನಾಗಿದ್ದ, ಒಂದೇ ಗರ್ಭದಲ್ಲಿ ಜನಿಸಿದ ಸಹೋದರರು ವಿರುದ್ಧ ಸ್ವಭಾವವನ್ನು ಹೊಂದಿದ್ದರು. ಸತೀಶ ದೇಶಭಕ್ತನಾಗಿದ್ದರೆ ಸುರೇಂದ್ರ ಕುಡುಕ, ಸದಾ ಸಟ್ಟಾ ಜೂಜುಗಳಲ್ಲಿ ತಲ್ಲೀನನಾಗಿದ್ದ, ಮಾದಕ ಪೇಯಗಳ ಸೆರೆಯಾಳಾಗಿ ಅಲ್ಲದೇ ಬೀದಿ ಬಸವಿಯರ ಮಂಚದಲ್ಲಿ ಉರುಳಾಡುವ ದುರಭ್ಯಾಸ ಹೊಂದಿದ್ದನು.

"ನಾಟಕಕಾರ ಈ 'ಕಲಿಯುಗದ ಕನ್ಯೆ'ಯನ್ನು ೧೯೬೯ರಲ್ಲಿ ಬರೆದಿದ್ದು, ಆ ಸಂದರ್ಭದಲ್ಲಿ ದೇಶದಲ್ಲಿ ನಡೆದ ಘಟನೆಗಳನ್ನು ಹೊರಗೆಡಹಿದ್ದಾರೆ ರಾಷ್ಟ್ರಭಕ್ತಿಗೆ ಹೆಸರಾಗಿದ್ದ ಆಗಿನ ರಾಷ್ಟ್ರಪತಿ, ವಿದ್ಯಾಪಾರಂಗತ, ಶಿಕ್ಷಣ ತಜ್ಞ, ಹಿಂದು–ಮುಸ್ಲಿಂ ಎಂಬ ಭೇದ ಬಣ್ಣಿಸದೇ ಕೋಟಿ, ಕೋಟಿ ಭಾರತೀಯರ ಮಮತೆಯ ಮೂರ್ತಿಯಾದ ಡಾ. ಝಾಕೀರ ಹುಸೇನರು ಅಲ್ಲಾನ ಪಾದಸೇರಿದ್ದನ್ನು ದೇಶಭಕ್ತ ಸುರೇಶನ ಪಾತ್ರದ ಮೂಲಕ ಸ್ಮರಿಸಿಕೊಂಡಿದ್ದಾರೆ ಆಲ್ದಾಳರು".

ನಾಟಕದ ಪ್ರಥಮ ದೃಶ್ಯದಲ್ಲಿಯೇ ಸತೀಶ ಹಾಗೂ ಡಾ.ಶೋಭಾ ಅವರು ರಸ್ತೆಯ ಮೇಲೆ–ಭೇಟಿ, ಕಣ್ಣೋಟ, ಪ್ರೀತಿ, ಪ್ರೇಮದ ಮಾತುಗಳ ಭರಾಟೆ, ಮನದಾಳದ ಆಶೆ ಮಾತಿನಲ್ಲಿಯೇ ಪ್ರಕಟಿಸುವ ಶೋಭಾ(ಸ್ವ) "ಪರುಷ ಕಬ್ಬಿಣ ಸೋಂಕಿದಾಗಲೇ ಬಂಗಾರವಾದಂತೆ" ಇಂದು ಅವರ(ಸತೀಶನ) ಅಂಗಸಂಗದಿಂದ ಲಿಂಗವಾಯ್ತು ಪಾವನಮಯ ಆತ್ಮ..."

**ಸತೀಶ:** (ಉದ್ವಿಗ್ನದಿಂದ) ಶೋಭಾ... ನಿನ್ನ ಮನವೆಂಬ ಭ್ರಮರವೂ....

**ಶೋಭಾ:** (ದೈನ್ಯದಿಂದ) ಕೇತಕಿವನಕ್ಕೆ ಹೋಗಿಲ್ಲಾ.

**ಸತೀಶ:** ನಿಜ.... ಹೋಗಿಲ್ಲಾ.....ಆದರೆ

**ಶೋಭಾ:** ಆದರೆ ಎಂಬ ಅನಿಷ್ಟ ಅಡಿ ಇಡಬೇಡಿ ಬಾಳಂಗಳದಿ, ಮನಬಿಚ್ಚಿ, ಮೆಚ್ಚಿಬಂದ ಮಡದಿಗೆ ನಿಮ್ಮ ಪಾದದಡಿಯಲ್ಲಿ ಸ್ಥಾನಕೊಡಿ, (ಕಾಲಿಗೆ ಬೀಳುವಳು) ಎಂದು ದೈನದಿಂದ ಮಾಡಿದ ಪ್ರೇಮದ ನಿವೇದನೆ ಇಲ್ಲಿ ನೋಡಬಹುದು. ಅಂದು ಇದ್ದಂತೆ ಇಂದು ಸಹ ಇಂತಹ ಸನ್ನಿವೇಶಗಳನ್ನು ನೋಡುತ್ತಿದ್ದೇವೆ. ಮುಂದೆಯೂ ನೋಡಲೇ ಬೇಕಾಗುತ್ತದೆ. ಇದು ಸಕಲ ಜೀವಾತ್ಮಗಳಲ್ಲಿ ಆ ಸೃಷ್ಟಿಕರ್ತನು ಸೃಷ್ಟಿಸಿರುವ ಸುಂದರ ಒಡನಾಟ ನೋಡುವವರಿಗೆ ಸುಂದರ ದೃಶ್ಯ!.

'ಕಲಿಯುಗದ ಕನ್ಯೆ' ನಾಟಕದ ಉದ್ದೇಶಗಳು ಹಲವಾರು, ಸಮಸ್ಯೆಗಳು ಅಷ್ಟೆ ಅವುಗಳನ್ನು ಪರಿಹರಿಸುವಲ್ಲಿ ತೋರುವ ಜಾಣ್ಮೆ ಹೆಚ್ಚಿನದು. ಪ್ರವೇಶ ಆರು, ದೃಶ್ಯ: ವೇಶ್ಯೆಯರ ಮನೆ. ಸುಮಿತ್ರಾ ವೇಶ್ಯಾ ವೃತ್ತಿಯೇ ತನ್ನ ಜೀವನ ಮಾಡಿಕೊಂಡು ಅಷ್ಟರಲ್ಲಿಯೇ ಅವಳು ಬರುವ ಕಾಮುಕರನ್ನು ತೃಪ್ತಿಪಡಿಸಿದ್ದರೆ ಅದೊಂದು ರೀತಿಯ ನೆಮ್ಮದಿ ಆಕೆಗೆ ಇರಬಹುದಾಗಿತ್ತು. ಆದರೆ ಹಣಕ್ಕಾಗಿ ಅವಳು ಏನೆಲ್ಲ ಮಾಡಲು ಹಿಂಜರಿಯುವವಳಲ್ಲ ಎಂದು ನಾಟಕಕಾರರು ವೇಶ್ಯೆಯರ ಪಿಶಾಚಿ ಕೃತ್ಯವನ್ನು ರಂಗಭೂಮಿಯ ಮೇಲೆ ಪ್ರೇಕ್ಷಕರೆದುರಿಗೆ ಇಟ್ಟಿದ್ದಾರೆ. ವೇಶ್ಯೆಯಾದವಳು ಮೈಮಾರುವಳು, ಬಂದ ವಿಟಪುರುಷರನ್ನು ಸಂತೃಪ್ತಿ ಪಡಿಸಿ ಕೈ ಜಾಡಿಸುವಳು ಎಂಬುದು ಸಾಮಾನ್ಯ ಸಂಗತಿ, ಹಣದ ದಾಹ ಹೊಂದಿರುವ ವೇಶ್ಯೆಯರು ಮನೆಗೆ ಬಂದವರ ಪ್ರಾಣ ತೆಗೆಯಲು ಹಿಂದೆ ಸರಿಯುವುದಿಲ್ಲ, ಅವಳ ಮನಸ್ಸು ರಕ್ತ ಹೀರುವ ಕೆಲಸಕ್ಕೂ ಸೈ ಎನ್ನುತ್ತದೆ ಎಂಬುದು ಈ ನಾಟಕದಲ್ಲಿ ನೋಡಬಹುದು. ಇಲ್ಲಿ ಬರುವ ಸಂವಾದ ಕೇಳಿ.

**ಸುಮಿತ್ರಾ :–** ಪ್ರಂಪಚವೂ ಒಂದು 'ನಾಟಕ' ಮಿ. ಸುಧೀರಬಾಬು, ನಿಮ್ಮಂಥಾ ಸಿಂಹ ಪುರುಷರು ಎಷ್ಟೊ ತರುಣಿಯರನ್ನು, ಅವರ ತಾಳಿಯನ್ನು ಕತ್ತರಿಸಿ, ಅವಳಲ್ಲಿದ್ದ ಅಂಗ ಸುಖವೆಲ್ಲ ಹೀರಿ ಕಡೆಗೆ ಸಿಪ್ಪೆ ಮಾಡಿ ಎಲ್ಲಿಯೋ ಒಗೆದು ಬಿಡುತ್ತೀರಿ, ಆವಾಗ ಆ ತರುಣಿ ತನ್ನ ದೈವವನ್ನು ಹಳಿಯುತ್ತಾ ಕೊನೆಗೆ 'ಬೀದಿ ಬಸವಿ'ಯಾಗುತ್ತಾಳೆ.

**ಸುಧೀರ :–** ನಿಜ ಸುಮಿತ್ರಾ, ಇಂದಿನ ಸ್ವಾರ್ಥಮಯ ಸಮಾಜಕ್ಕೆ ಕಣ್ಣಿಲ್ಲ, ಉದಾಹರಣೆಗಾಗಿ ನನ್ನ ಚರಿತ್ರೆ ತೆಗೆದಿಕೊ, ಮಾಡಿಕೊಂಡ ಮಡದಿಯನ್ನು ಬಿಟ್ಟು ಓಡಿಬಂದು ಇಲ್ಲಿ ಬಿದ್ದಿರುವೆ.

**ಸುಮಿತ್ರಾ :–** ಇಂದಿನ ಖರ್ಚಿಗೇನಾದ್ರೂ... ಸ್ನೋ ಪೌಡರ, ಹೇರಾಯಿಲ್ ಇವಂತೂ ಮುಗಿದು ಹೋಗಿವೆ.

**ಸುಧೀರ :–** (ನಿಟ್ಟುಸಿರುಬಿಟ್ಟು) ಇದೊಂದು ದಿವಸ ಹೇಗಾದ್ರೂ.....

**ಸುಮಿತ್ರಾ :–** (ಸಿಡುಕಿನಿಂದ) ಸಾಕು ಮಾಡಿ ನಿಮ್ಮ ಅರ್ಥವಿಲ್ಲದ ಆದೇಶ. ಪಲ್ಲಂಗದ ಮೇಲೆ ಪವಡಿಸುವಾಗ, ಗಲ್ಲಕ್ಕೆ ಮುದ್ರೆಯೊತ್ತಲು ಬರುವ ನಿಮ್ಮ ಮುಖ, ತಂದು ಕೊಡು ಎಂದರೆ ತ್ರಿಕೋನಾಕಾರವಾಗಿ ನಿಂತಿದೆ. ಇಷ್ಟೇ ತಾನೆ ನಿಮ್ಮ ಪ್ರೇಮ ಪೌರುಷ? [೧೪೨]

**ಸುಧೀರ :–** ಸುಮಿತ್ರಾ, ನಿನಗೆ "ಶಿಂಗಾರದರಾಣಿ'ಯಾಗಿ ಮಾಡುತ್ತೇನೆ, ನನ್ನ ಮಾತು ನಂಬು.

**ಸುಮಿತ್ರಾ :–** ನನ್ನ ಯವ್ವನ ಜಾರುವುದರೊಳಗೆ "ಭವಿಷ್ಯತ್ತಿನಭಾಗ್ಯ' ಸಂಪಾದಿಸದಿದ್ದರೆ ಬೀದಿ, ಬೀದಿ ಸುತ್ತುತ್ತಾ ಭಿಕ್ಷೆ ಬೇಡುವ ಪ್ರಸಂಗ ಬಂದೀತು. ಇದು ಕಲಿಕಾಲ, ನನಗೆ ಹಣಬೇಕು ಎಲ್ಲಿಯವರೆಗೆ ನಿಮ್ಮ ಹಣ ನೀರಿನಂತೆ ಹರಿದು ಬರುತ್ತದೆಯೋ ಅಲ್ಲಿಯವರೆಗೆ ಮಾತ್ರ ಪ್ರೇಮ. ಈಗ ಒರತೆ ಬತ್ತಿ ಹೋಗಿದೆ (ನಗುವಳು)

**ಸುಧೀರ :–** ಎಲ್ಲಿಯವರೆಗೆ ನಿನ್ನ ವೇಶ್ಯಾವೃತ್ತಿ ನಡೆಯುತ್ತೆ. ಒಂದುದಿನ ಹಣ್ಣಾಗಿ ಹೋದ ಹೆಣ್ಣು ಸಿಪ್ಪೆಯಾಗಲಿಕ್ಕೆ ಬೇಕು. ಆವಾಗ ನಿನ್ನ ಮನೆಮುಂದೆ ಹಳೆಯ ನಾಯಿಯೂ ಸಹ ತಿರುಗುವುದಿಲ್ಲ ಯಾವುದಾದರೂ ಒಂದು ಗಿಡದ ಬುಡದಲ್ಲಿ, ನೆರಳಲ್ಲಿ ಕೂತು ಕಾಲನೂಕುವುದು ಒಳಿತು.

**ಸುಮಿತ್ರಾ :–** ಕೂತ ಗಿಡವೇ ಒಣಗಿ ನಿಂತರೆ, ಈ ಗಿಡವಿಲ್ಲದಿದ್ದರೆ ಮತ್ತೊಂದು ಗಿಡ, ಒಣಮಾತು ಬೇಡ, ಇಲ್ಲಿಂದ...

**ಸುಧೀರ :–** ಹಣವಿದ್ದರೆ ನಾನಿದ್ದೆ ರಾಜಾ, ಹಣವಿಲ್ಲದಾಗ, ನಾ ಬೀದಿ ಕಸಗುಡಿಸುವ ಖಾಜಾ, ಇಂತಿಹದು ಈ 'ಬೀದಿ ಬಸವಿಯರ ಮಜಾ, ಎಲೆ ಹೆಣ್ಣೆ ನೆನಪಿರಲಿ.

**ಸುಮಿತ್ರಾ :–** ಏಕೆ ಪ್ರತಿಕಾರ ತೀರಿಸುವ ಫಟಿಂಗ್ ನಾಗಬೇಕೆನ್ನುವಿಯಾ? ಇಂದೇ ನಿನ್ನ ಕೊನೆಯ ದಿನವೆಂದು ತಿಳಿದಿಕೊ ! [೧೮೪]

ವೇಶ್ಯೆ ಸುಮಿತ್ರಾ ಮನೆಯಲ್ಲಿ ಒಳಗಡೆ ಇದ್ದ ಕೊಲೆಗಡುಕರನ್ನು ಕರೆದು ಸನ್ನೆ ಮಾಡಿ ಸುಧೀರ ನಿನ್ನ ಆಟ ಮುಗಿಯಿತು. ಇದು ನಾನು ಕೈಕೊಂಡ ಎಂಟನೆಯ ಕೊಲೆ! ಜಟ್ಟಿಗಳೇ ಏಕೆ– ನಿಂತಿರಿ ಕೊಲೆ ಮಾಡಿ ಕಂದಕದಲ್ಲಿ ಬಿಸಾಕಿ ಹೋಗಿ.

ನಾಟಕಕಾರರ ಉದ್ದೇಶ ಸ್ಪಷ್ಟವಾಗಿದೆ. ಹೆಣ್ಣೊಂದು ವೇಶ್ಯೆಯಾಗಿ ದಂಧೆಗೆ ಇಳಿಯುವುದಕ್ಕೆ ಪುರುಷನೇ ಕಾರಣ. ಬೀದಿಗೆ ಬಿದ್ದ ಬಸವಿ, ಸೂಳೆ ಮುಂದೆ ಹಣಕ್ಕಾಗಿ ತನ್ನ ದೇಹ ಮಾರುವುದು ಸಾಮಾನ್ಯ, ನಂತರ ಜೀವನದಲ್ಲಿ ಜಿಗುಪ್ಸೆ ಹುಟ್ಟಿ ಪುರುಷರ ಮೇಲೆ ಸೇಡು ತೀರಿಸಿಕೊಳ್ಳುವ ದುಸ್ಸಾಹಸ. ಇಲ್ಲಿ ಓದುಗರು, ಪ್ರೇಕ್ಷಕರು ಕಾಣಬೇಕಾಗುತ್ತದೆ. ಕುಚೋದ್ಯದ ಸಂಗತಿ ಎಂದರೆ ಸುಧೀರ ಸಿಐಡಿ ಪೋಲೀಸ್ ಇನ್ಸಪೆಕ್ಟರ್, ಸಮಾಜದಲ್ಲಿ ಶಾಂತಿ, ನೆಮ್ಮದಿ ಕಾಯ್ದುಕೊಂಡು, ಕಾನೂನು ಪಾಲನೆ ಮಾಡಬೇಕಾದ ಜವಾಬ್ದಾರಿ ಹೊತ್ತ ಅಧಿಕಾರಿಯೇ ಹೆಂಡತಿಯನ್ನು ಬಿಟ್ಟು ಸೂಳೆಗಾರಿಕೆಯ ದಂಧೆಗೆ ಪ್ರೋತ್ಸಾಹಿಸುವುದೆಂದರೆ ಏನು? ಎಲ್ಲಾ ಪೋಲೀಸರು ಹೀಗೆ ಇರುತ್ತಾರೆ

ಎಂದು ಹೇಳದಿದ್ದರೂ, ಒಬ್ಬರು ಇದ್ದರೂ ಪೋಲೀಸ ಇಲಾಖೆಗೆ ಕಳಂಕ ಅಂಟುವುದಿಲ್ಲವೆ? ಇದನ್ನೆ ಆಲ್ದಾಳರು ಈ ನಾಟಕದ ಮೂಲಕ ಪೋಲೀಸ ಇಲಾಖೆಯಲ್ಲಿದ್ದುಕೊಂಡು ಸೂಳೆಯರ ಮನೆಗೆ ನಾಯಿಯಂತೆ ತಿರುಗುವವರ ಬಗ್ಗೆ ಎಚ್ಚರಿಸಿದ್ದಾರೆ. ಒಂದು ಮಾತು ಇಲ್ಲಿ ನೆನಪಿಸಬಹುದು. ಹೆಣ್ಣು ನರರಾಕ್ಷಸಿ ಎಂದುಕೊಂಡರೂ ನರರಾಕ್ಷಸರ ಹೀನ ಕೃತ್ಯದಲ್ಲಿ ಹೆಣ್ಣಿನ ಬದುಕಿನಲ್ಲಾಗುವ ಪರಿಣಾಮವನ್ನು ನಾಟಕಕಾರರು ಅರ್ಥವತ್ತಾಗಿ ಧ್ವನಿಸುತ್ತಾರೆ.

ಕೌಟುಂಬಿಕ ವಸ್ತುವನ್ನು ಹೊಂದಿರುವ ಈ ನಾಟಕದಲ್ಲಿ ಜೀವನದಲ್ಲಿ ಎದುರಾಗುವ ಹೆಣ್ಣಿನ ದುರಾಶೆಗಳನ್ನು ನಾಟಕಕಾರರು ನೈಜವಾಗಿ ಚಿತ್ರಿಸಿದ್ದಾರೆ. ಕೊನೆಗೆ ತನ್ನ ಸಂಗಕ್ಕಾಗಿ ಹಪಹಪಿಸಿದವನನ್ನು ಕೊಲೆಗೈದು, ನಂತರ ಅನ್ಯರೊಂದಿಗೆ ಸಂಗಮಾಡುವುದು, ಚಕ್ಕಂದಕ್ಕೆ ಇಳಿಯುವುದು ಅಸಹ್ಯವಾಗಿದೆ. ಸುಮಿತ್ರಾ ತನ್ನ ನಡತೆಯಿಂದ ಸ್ತ್ರೀಕುಲಕ್ಕೆ ಅಪಮಾನ ಮಾಡುತ್ತಾಳೆ. ಪಾತ್ರದ ಗುಣಾವಗುಣವನ್ನು ಒರೆಗಲ್ಲಿಗೆ ಹಚ್ಚಿದ ನಾಟಕಕಾರರು ಕೆಟ್ಟದ್ದರ ಪರಿಣಾಮ ಒಳಿತಾಗುವುದಿಲ್ಲವೆನ್ನುವ ಸತ್ಯವನ್ನು ಇಲ್ಲಿ ಬಹಿರಂಗವಾಗಿಸಿದ್ದಾರೆ.

'ಕಲಿಯುಗದ ಕನ್ಯೆ' ನಾಟಕದಲ್ಲಿ ಸೀತಾಪತಿ, ಸುಬ್ಬರಾಯ ವೃದ್ಧ ಯಜಮಾನನ ಹತ್ತಿರ ಗುಮಾಸ್ತನಾಗಿ ಪ್ರಾಮಾಣಿಕತನದಿಂದ ಕೆಲಸ ಮಾಡುತ್ತಿದ್ದ, ಇವನ ಹೆಂಡತಿ ಸೀತಾಳಂತೂ ಮನೆ ಮುರುಕತನ ದುಷ್ಟ ಕೆಲಸದಲ್ಲಿ ಭಾಗಿಯಾಗಿದ್ದಳು. ಹೆಣ್ಣುಗಳು ಎಂದರೆ ಜೊಲ್ಲು ಸುರಿಸುವ, ಕಾಮುಕ, ಬಟ್ಟೆ ಹೊಲೆಯುವ ಟೇಲರ್ ಶ್ಯಾಮನೋ ಸೀತಾಳನ್ನು ತನ್ನ ಪ್ರೇಯಸಿಯಾಗಿಟ್ಟಿದ್ದ, ಇಂಥ ಸನ್ನಿವೇಶಗಳು ತಲತಲಾಂತರದಿಂದ ಮುಂದುವರಿದುಕೊಂಡೇ ಬಂದವುಗಳು, ಜಗತ್ತು ಇರುವವರೆಗೂ ಒಳ್ಳೆಯದ್ದರಿಂದ ಕೆಟ್ಟದ್ದಕ್ಕೆ ಹಾದಿ ಹಿಡಿಯುತ್ತಲೇ ಇವೆ. ಅವು ಸರಿ ಹೋಗುವುದರೊಳಗೆ ಅನೇಕ ಅವಗಡಗಳು ನಡೆಯುತ್ತವೆ. ಹೆಣ್ಣು ನಾರಿಯೂ ಹೌದು ಹೆಮ್ಮಾರಿಯು ಹೌದು. ಸಮಾಜ ಹೇಗೆ ನಡೆಸಿಕೊಂಡು ಹೋಗುತ್ತದೆ ಹಾಗೆ ಸ್ತ್ರೀಯ ನಡುವಳಿಕೆ ಕಂಡುಬರುತ್ತದೆ. ಬೇವಿನ ಮರದಲ್ಲಿ ಮಾವಿನ ಹಣ್ಣು ಹುಟ್ಟಲಿ ಎಂದರೆ ಸಾಧ್ಯವೆ? ಸಮಾಜದಲ್ಲಿ ಇರುವ ಒಂದಿಬ್ಬರು ಕಂಟಕರು ಸಮಾಜದ ಸ್ವರೂಪವನ್ನೇ ಹಾಳು ಮಾಡುತ್ತಾರೆ. ಹೀಗಾಗಿ ಅನೇಕ ಸಂಸಾರಗಳು ಹಾಳಾಗುತ್ತವೆ. ಇಲ್ಲಿ ಶ್ಯಾಮ ಮತ್ತು ಸೀತಾ ಅವರು ಹೇಳುವ ಮಾತುಗಳು ಎಷ್ಟು ಮಾರ್ಮಿಕವಾಗಿವೆ.

**ಸೀತಾ :–** (ಅಳುತ್ತಾ) ಅಲ್ಲಾ ಶಾಮಾ ಗಂಡನ ಮನೆಗೆ ಹೋದ್ರಂತೂ ಇಕ್ಕರ್ಸೇ ಬಿಡ್ತಾನ, ತವರಮನೆಗೆ ಹೋದರಂತೂ ಬಾಗಲ್ದಾಗ ಕಾಲ್ಮುರಿತಾರು (ಅಳುತ್ತಾ) ಹ್ಯಾಂಗಯ್ತಲ್ಲಾ ಯವ್ವಾ.

**ಶ್ಯಾಮ :–** ಅಳಬೇಡ ಸೀತಾ, ಹರ್ದ ಹ್ವಾದ ನೀರು ಹಿಂದ್ಕ ಬರೂದಿಲ್ಲ ಇನ್ನ ಮುಂದರ ಹುಷಾರಾಗಿ ಮಾಡ್ಕೊಂತಿರು ನಿನ್ಮನಿಗಿ ಹೋಗಿ ಗಂಡನ ಕಾಲುಬೀಳು ತಪ್ಪಾಗಾದಂತ....

**ಸೀತಾ :–** ಒಲ್ಲೆ ಮಾರಾಯಾ ನನ್ಕೈಲೆ ಸತ್ರು ಅಂವ್ಗ ಮಾರಿ ತೋರ್ಸದು ಆಗುವುದಿಲ್ಲಾ,

**ಶ್ಯಾಮ** :– ಸೀತಾ ಇಲ್ಲೇ ನೋಡು ನೀ ತಪ್ಪೂದು! ನೀಮಾಡಿದ ಹೂರಣ ಯಾರಲ್ಲಿ ಇಲ್ಲಂತ ತಿಳಿದಿದಿ. ಲಗ್ನಾದ ಐದ ತಿಂಗಳ್ದಾಗ ಹಡೆದವರೆಷ್ಟಿಲ್ಲಾ ಈ ಜಗತ್ನ್ಯಾಗ, ಗಂಡನವಂಚಿಸಿ ಪರಗಂಡಸರ ಸರಿ ಸಂಸಾರ ಮಾಡುವ ಭಂಡ ಹೆಂಗ್ಸ್ರು ಎಷ್ಟಿಲ್ಲಾ ಈ ಜಗತ್ನ್ಯಾಗ! ಅಕ್ಕ ತಂಗಿಯರನ್ನು ಕಾಮಿಸುವ ಎಷ್ಟು ಮಂದಿ ಅಧರ್ಮಿಗಳಿಲ್ಲಾ, ಹೆಚ್ಚ್ಯಾಕ ಹೊಟ್ಟಿಲಿ ಹುಟ್ಟಿದ ಮಗಳ ಸಂಗಾಟ ಪ್ರಪಂಚ ಮಾಡುವ ಪಾಪಾತ್ಮಷ್ಟಿರೆಲ್ಲಾ.... ಏನ್ ಹೇಳ್ತಾಳಿಕಿ... ಇಂದು ಎಷ್ಟ ಮಂದಿ ಹೋಗಿ–ಬಂದ ಮತ್ತ ಗಂಡನ ಸರಿ ಸಂಸಾರ ಮಾಡಿಲ್ಲಾ, ಸೀತಾ ಈಗ ಸಾಪ ಸಾಪ ಹೇಳ್ತಿನಿ ನನ್ನ ಕಡಿಯಿಂದ ಬೆನ್ನ ಹಚ್ಚಿಗೊಂಡು ತಿರಗೋದು ಆಗುದಿಲ್ಲಾ ನಿನ್ಗ ದಿಕ್ಕಕಂಡ ಕಡೆ ಹೋಗಿ ಬಿಡು ನಮ್ಗ ಬ್ಯಾಸ್ರಾತು.

ಅಡ್ಡದಾರಿ ಹಿಡಿದವರ ಹಣೆಯ ಬರಹವೇ ಇಷ್ಟೆ 'ಇಟ್ಟುಕೊಂಡವಳು ಇರುವ ತನಕ, ಕಟ್ಟಿಕೊಂಡವಳು ಕೊನೆಯತನಕ' ಎಂದು ಹಿರಿಯರು ಹೇಳಿದ್ದು ಸುಳ್ಳಲ್ಲ.

ಹರೆಯದಲ್ಲಿ ಮಾಡಿದ ತಪ್ಪು ಮುಪ್ಪಿನಲ್ಲಿ ಕಾಡುವುದಂತೆ, ಸೀತಾಳನ್ನು ನಯವಾಗಿ ವಂಚಿಸಿ ಬುಟ್ಟಿಗೆ ಹಾಕಿಕೊಂಡ ಶ್ಯಾಮ ಅವಳನ್ನು ಮನಸೋ ಇಚ್ಛೆ ರಮಿಸಿ ಕೊನೆಯಲ್ಲಿ ಆಕೆಗೆ ಹೇಳುವ ಉಪದೇಶದ ಮಾತುಗಳು ನನ್ನನ್ನು ಕಂಡು ಮಾರುಹೋಗುವವರು ಯಾರಿಲ್ಲ ಎಂದು ಸೋಗಲಾಡಿಯಾಗಿ ವರ್ತಿಸುವ ಹೆಣ್ಣಿಗೆ ಇದೊಂದು ಪಾಠ ತನ್ನದೆನ್ನುವ ಎಲ್ಲವನ್ನು ಕಳೆದುಕೊಂಡು ಕೊನೆಯಲ್ಲಿ ಅತ್ತರೇನು ಫಲ, ಕಣ್ಣೀರೆ ಗತಿ! ಎಚ್ಚರ.

ನಾಟಕಕಾರ ಹೆಣ್ಣು ಹೇಗಿದ್ದರೆ ಚೆನ್ನ ಎನ್ನುವ ಪಾಠ ಹೇಳಿದ್ದಾರೆ. ರಾಮಾಯಣದ ರಾಮ–ಸೀತೆಯರ ಗುಣಗಳು ಎಲ್ಲಿ, ಕಲಿಯುಗದ ಸೀತಾ–ಶ್ಯಾಮರ ಅವಗುಣಗಳು ಎಷ್ಟೆಂದು ಎಣಿಕೆ ಮಾಡಲು ಸಾಧ್ಯವೆ ?

ಸೀತಾ–ಶ್ಯಾಮರ ಪಾತ್ರಗಳು ಕಂಡವರು ಕೋಪ–ತಾಪ ವ್ಯಕ್ತಪಡಿಸುವುದು ಸಹಜ. ಇದಕ್ಕೆ ಅಪವಾದ ಎಂಬಂತೆ ನಾಟಕಕಾರರು ಇದೇ ನಾಟಕದಲ್ಲಿ ಪ್ರೇಕ್ಷಕರ ಮನಸೆಳೆಯುವಂತ ಪಾತ್ರಗಳನ್ನು ಪ್ರೇಕ್ಷಕರ ಮುಂದೆ ನಿಲ್ಲಿಸಿ ಅವರ ಆದರ್ಶ ಪ್ರೇಮವನ್ನು ಮೆರೆಸಿದ್ದಾರೆ. ಸತೀಶ ಮತ್ತು ಶೋಭಾ ಪಾತ್ರಗಳು ಸಮಾಜದಲ್ಲಿನ ಕಳಂಕಿತರ ಕಣ್ಣು ತೆರೆಯಿಸಿ ಅವರುಕೂಡ ಉತ್ತಮ ಮಾರ್ಗದಲ್ಲಿ ಹೆಜ್ಜೆ ಇರಿಸುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಮನೆಯ ಯಜಮಾನನ ಹಿರಿಯ ಪುತ್ರ ಸುರೇಂದ್ರ ಓದುವುದಕ್ಕೆ ನಗರ ಸೇರಿ ಇಲ್ಲದ ದುರಭ್ಯಾಸಗಳನ್ನು ಮೈಯೆಲ್ಲ ಮೆತ್ತಿಸಿಕೊಂಡು ಕುಡುಕ ಮತ್ತು ಕಾಮುಕ ಎಂಬ ಬಿರುದನ್ನು ತಾನಾಗಿಯೇ ಅಲಂಕರಿಸಿಕೊಂಡ ಸುರೇಂದ್ರನ ಸಹೋದರ ಸತೀಶ ಆದರ್ಶವ್ಯಕ್ತಿಯಾಗಿ ಸಮಾಜದಲ್ಲಿ ಹೆಸರು ಪಡೆದವನಾಗಿದ್ದ ಇತನ ಸತಿ ಶೋಭಾ ಎಂ.ಬಿ.ಬಿ.ಎಸ್. ವ್ಯಾಸಂಗ ಮುಗಿಸಿ ವೈದ್ಯಳಾಗಿದ್ದರೂ ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಮಾಜದಲ್ಲಿರುವವರ ಪ್ರೀತಿಗೆ ಪಾತ್ರಳಾಗಿದ್ದಳು, ಭಾವ ಸುರೇಂದ್ರನ ಎಲ್ಲ ಅವಗುಣಗಳನ್ನು ದೂರ ಮಾಡುವಲ್ಲಿ ಶ್ರಮಿಸಿ ಭಲೇ ಎನ್ನಿಸಿಕೊಂಡಳು. ಸತೀಶನ ಮನೆಯ ಗೌರವ ಕಾಪಾಡುವಲ್ಲಿ, ಆ ಮನೆಯ "ಬಾಳುಬೆಳಗಿದ ಹೆಣ್ಣಾಗಿ ಎಲ್ಲರ ಕಣ್ಣು ತೆರೆಸಿದಿ". ನಾಟಕ

ನೋಡುಗರಿಗೂ, ಓದುಗರಿಗೂ ಅನರ್ಘ್ಯನಿಧಿ ಸಿಕ್ಕಿದಷ್ಟು ಹರ್ಷವೆನ್ನಿಸುತ್ತದೆ. ಇದು ನಾಟಕ ಸಾಹಿತ್ಯಕ್ಕೆ ನೀಡಲ್ಪಟ್ಟ ಶ್ರೇಷ್ಠ ಕೊಡುಗೆ.

ಹಿಂದು ಸಂಸ್ಕೃತಿಯನ್ನೇ ಹೊದ್ದುಕೊಂಡ ಶೋಭಾ ಸತೀಶನ ಮನೆತುಂಬಿ, ಮನತುಂಬಿದ ಕಲಿಯುಗದ ಕನ್ಯೆಯೇ ಆಗಿರುವಳು. ಬೆಳೆದ ಮನೆ ಹಾಗೂ ಬಾಳುವ ಮನೆಯನ್ನು ಬೆಳಗುವ ಜ್ಯೋತಿಯಾದಳು. ಕಣ್ಣು ದೃಷ್ಟಿ ಕಳೆದುಕೊಂಡ ಮಾವನ ಕಣ್ಣು ಮರುಕಳಿಸುತ್ತದೆ. ನಾಟಕ ಸುಖಾಂತ್ಯ ನೀಡುತ್ತದೆ. ಇದು ನಾಟಕಕಾರ ಚಿಂತನೆ, ಗುರಿ.

ಹಾಸ್ಯ ಪಾತ್ರಗಳು ನಾಟಕದ ಜೀವಾಳ, ಸೀತಾ–ಸೀತಾಪತಿ–ಶ್ಯಾಮ ತ್ರಿಮೂರ್ತಿಗಳ ಮಾತುಗಳು ಪ್ರೇಕ್ಷಕರನ್ನು ನಗಿಸುವುದರ ಜೊತೆ–ಜೊತೆಯಲ್ಲಿ ಚಾಟಿಯ ಏಟುಗಳ ಶಬ್ಧವು ಕಿವಿಯಲ್ಲಿ ಸೇರುತ್ತವೆ. ನಕ್ಕುನಗಿಸುವ ಈ ನಗು ನಿಜವಾದ ನೀತಿಯ ಪಾಠವನ್ನೇ ಸಾರುತ್ತದೆ. "ಕಲಿಯುಗದಕನ್ಯೆ" ನಾಟಕ ಬರೀ ನಾಟಕವಲ್ಲ, ಇಲ್ಲಿನ ನಟನೆ ಮನರಂಜನೆಗಾಗಿ ಮೀಸಲಿಟ್ಟಿಲ್ಲ ಇದರಲ್ಲಿ ಹಂಸ–ಕ್ಷೀರ ನ್ಯಾಯ ಅಡಗಿದೆ. ಅದನ್ನು ಹಾಯ್ದು ಕೊಳ್ಳುವವರನ್ನೇ ಅವಲಂಭಿಸಿದೆ. ಮಧುರವಾದ ಹಾಡುಗಳು ಕೇಳುಗರನ್ನು ಆನಂದ ಪಡುವಂತೆ ಮಾಡುತ್ತವೆ. ನಾಟಕದಲ್ಲೇ ಹುಟ್ಟಿ, ನಾಟಕದಲ್ಲೇ ಬೆಳೆದು ನಾಟಕವೇ ಜೀವನವಾಗಿರುವ ಆಲ್ದಾಳರಿಗೆ ನಾಟಕವೇ ಸರ್ವಸ್ವ.

# ಗರತಿ ವಿಶ್ವದ ಜ್ಯೋತಿ

೧೯೮೮ರಲ್ಲಿ ಪ್ರಕಟಗೊಂಡ ಮೂವತ್ತು ಮೂರು ಪ್ರವೇಶಗಳನ್ನು ಹೊಂದಿದ ಹೊಸ ಮಾದರಿಯ ಸಾಮಾಜಿಕ ಸಮಸ್ಯಾತ್ಮಕ ಅಧ್ಯಾತ್ಮಿಕ ತತ್ವಗಳೊಂದೊಡಗೂಡಿದ ನಾಟಕ ಇದಾಗಿದೆ. ಈ ನಾಟಕದ ಕೃತಿಯನ್ನು ಆಲ್ದಾಳರು ಮಹಾತಾಯಿ ಮೋಗಲಾಂಬಿಕಾದೇವಿಗೆ ಅರ್ಪಿಸಿದ್ದಾರೆ.

"ಓ ಮೊಗಲಮ್ಮಾತಾಯಿ! ನಿನ್ನೀ ಅಮರತ್ವದ ಜೀವನದಲ್ಲಿ ತ್ಯಾಗ, ಜಪ,ತಪಗಳ, ಅನುಸಂಧಾನದಲ್ಲಿ ಜಯಿಸಿ, ಪತಿಭಕ್ತಿ ಪಾರಾಯಣಳಾಗಿ ನಾಡಿಗೇನೇ "ಮಹಾಂತಬೆಳಗು" ಬೆಳಗಿಸಲು, "ಪುತ್ರರತ್ನ"ವನ್ನು ಹೆತ್ತು 'ರಾಜೆಂದ್ರ'ನೆಂದು ಹೆಸರಿರಿಸಿ, "ಶಿವಯೋಗಿ"ಯಾಗೆಂದು ಸುಪ್ರಭಾತವ ಹಾಡಿ, ಅಮರಳಾದ "ಮಹಾಮಾತೆ ಮೊಗಲಮ್ಮ" ತಾಯಿಯವರೇ ನಿಮ್ಮ ಬಾಳ ತೋಟದಲ್ಲಿ ಅರಳಿದ ಹೂಗಳನ್ನೇ ಆಯ್ದುನಿಮ್ಮಡಿಗೆ ಅರ್ಪಿಸುವೆ. ಇದೋ ಸ್ವೀಕರಿಸಿ ಹರಿಸಿರಿ"[೧೪೮]

'ಗರತಿ ವಿಶ್ವದ ಜ್ಯೋತಿ' ನಾಟಕದ ಕಥಾವಸ್ತುವಿನ ಬಗ್ಗೆ ನಾಟಕಕಾರ ಹೇಳಿರುವಂತೆ, ನನ್ನ ಗುರುಗಳಾದ ಶ್ರೀ ಶ್ರೀ ಶ್ರೀ ಬಾಲಯೋಗಿ ರಾಜೇಂದ್ರ ಮಹಾರಾಜರು ಹಾಗೂ ಅವರ ತಾಯಿ ಮೊಗಲಮ್ಮ ದೇವಿಯವರ ಸುತ್ತ ಹೆಣೆದಿರುವೆ, ಅವರ ಬಾಳ ಪುಟದಲ್ಲಿ ಬಂದಿರುವ ಘಟನೆಗಳನ್ನೇ ಆಯ್ದು ಅಳವಡಿಸಲಾಗಿದೆ, 'ನಾಂದಿ' ಗೀತೆಯೊಂದಿಗೆ ನಾಟಕದ ಪ್ರವೇಶ ಆರಂಭಗೊಳ್ಳುತ್ತದೆ.

ಕಲಬುರ್ಗಿ ಜಿಲ್ಲೆಯ ಚಿತಾಪೂರ ತಾಲೂಕಿನ ರಾಜಾಪೂರ ಗ್ರಾಮದ ಈಡಿಗ ಕುಟುಂಬದ ಮೊಗಲಮ್ಮ, ಸಾಂಸಾರಿಕ ಬದುಕಿನಲ್ಲಿ ಎದುರಿಸುವ ಸಮಸ್ಯೆಗಳು, ಸಂಕಷ್ಟಗಳು; ದುಃಖ, ನೋವುಗಳು ಅವಳನ್ನು ಇನ್ನಷ್ಟು ಪಕ್ವಗೊಳಿಸುತ್ತವೆ. ಆದರೆ ಅವಳು ವಂಶದ ಕುಡಿಗಾಗಿ ಪಡುವ ಹಂಬಲ ನೋಡಿ,

**ಬನ್ನಿ ಮಹಾಂಕಾಳಿ। ನಿರುತದಿ ಕಾಯೆ।**
**ಉಡಿಯೊಡ್ಡಿ ನಿಂತಿರುವೆ। ತಾಯೆ।**
**ಫಲವ ನೀಡು ಮಹಾತಾಯೆ।**
**ಪಾಂಡವ ಪುತ್ರರಿಗೆ ಶ್ರೀರಕ್ಷೆ ನೀಡಿದಿ।**
**ಪರಮಹಂಸರ ಅಧಿದೇವಿ ಆದಿ।**
**ಓ ಮಾತೆ ನೀಜ್ಯೋತಿ ಬೆಳಗೂ**
**ಬಂಜೆತನವನಳೆದು ಕಾಪಾಡು॥**

**ಮೊಗಲಮ್ಮ :** ಹೇ ತಾಯೇ ಬನ್ನಿ ಮಹಾಂಕಾಳಿ, ಶರ್ವಾಣಿ। ಪೂಜಿಸುವೆ ನಿನಗೆ ಅನುದಿನ, ಸರ್ವಶಕ್ತಳೆ, ನಿನ್ನ ನಂಬಿದ ಭಕ್ತರಿಗೆ ರಕ್ಷಿಸು, ಬಂಜೆ ಎಂಬ ಹೆಸರಿನಿಂದ ದೂರವಿರಿಸು, ನನ್ನ ಉಡಿತುಂಬು, ಉಡಿಯೊಡ್ಡಿ ನಿಂತಿರುವೆ, ಈ ದೀನಳ ಆರ್ತಸ್ವರ ಕೇಳು, ನಾನು ನಿನ್ನಂತೆ ಒಂದುಹೆಣ್ಣು, ಹೆಣ್ಣಿನ ವೇದನೆ ಹೆಣ್ಣಿಗೇನೆ ಅರ್ಥವಾಗುವುದು, ಫಲನೀಡುತಾಯೆ? ಅಷ್ಟರಲ್ಲಿ

ಯೋಗಿವರ್ಯರಾದ ರಾಮಚಂದ್ರ ಗಿರಿಯವರು ಮೊಗಲಮ್ಮಳ ಹತ್ತಿರ ಬಂದು, "ಪುತ್ರವತಿಭವ...." ಎಂದು ಆಶೀರ್ವದಿಸುವರು, ಆದರೆ ತಾಯಿ ಮೊಗಲಮ್ಮಾ, ಸಾಬಯ್ಯಾ! ನೀವು ಈ ಕಾಡಿಬೇಡಿದ ಫಲ "ನಿಮ್ಮದಲ್ಲಾ ನಮ್ಮದು" ಆದರೂ ಒಂದ್ಮಾತು ನಿಮ್ಮ ವಂಶ ಬೆಳಗದೆ, ವಿಶ್ವವೇ ಬೆಳಗಿ ವಿಶ್ವಜ್ಯೋತಿಯಾಗುವುದು. ಇಂದಿನಿಂದಲೇ ಅಂಬಾಭವಾನಿಯ ವ್ರತ ಪ್ರಾರಂಭಮಾಡು ತಾಯಿ ಧನ್ಯತಾಯೇ ಧನ್ಯ! 'ಹಿಡಿದ ವೃತವನು ಬಿಡದೆ ಇರುವವರೆ ಜಾಣರು' ಎಂದು ನಿಜಗುಣ ಶಿವಯೋಗಿಗಳು ಹೇಳಿದ ಮಾತು ನಿಜವಾಯಿತು. ಮೊಗಲಮ್ಮ ತಾಯಿ ಈಗ ತುಂಬು ಗರ್ಭಿಣಿ ಮೊಗಲಾಂಬಿಕೆ ದೇವಿಯ ಅಪಾರ ತ್ಯಾಗ, ತಪಸ್ಸಿನ ಫಲವಾಗಿ ಅವಳ ಗರ್ಭದಲ್ಲಿ ಜನಿಸಿದ ಬಾಲಯೋಗಿ ರಾಜೇಂದ್ರ ಬದುಕಿನಲ್ಲಿ ಘಟಿಸಿದ ಮಹತ್ವದ ಸಂದರ್ಭವು ನಾಟಕದ ವಿವಿಧ ಸನ್ನಿವೇಶಗಳಾಗಿ ರೂಪುಗೊಂಡಿವೆ.

"ಈ ನಾಟಕವು ಕಟ್ಟು ಕಥೆಯಲ್ಲ, ತನ್ನ ದೈನಂದಿನ ಜೀವನದಲ್ಲಿ ಪ್ರಾದುರ್ಭವಿಸಿದ ಕಹಿ–ಸಿಹಿ ಘಟನೆಗಳು ಕಂಡುಂಡು "ಗರತಿ ವಿಶ್ವದ ಜ್ಯೋತಿ"ಯಾಗಿ ಹೊರಬಂದು ಸತ್ಯ ಕಥೆಯಾಗಿ ಯುಗ ಕಲ್ಪದವರೆಗೂ ಕಣ್ಣಾಡಿಸಲಿದೆ" ಎಂದು ನಾಟಕಕಾರ ಆಲ್ದಾಳರು ಈ ಕುರಿತು ಕೃತಿಯ 'ನನ್ನ ನುಡಿ'ಯಲ್ಲಿ ಬರೆದಿದ್ದಾರೆ. ಈ ನಾಟಕ ಎರಡು ಅಧ್ಯಾತ್ಮ ಜೀವಿಗಳ ಸುತ್ತಲೂ ಎಣೆದ ಭಕ್ತಿಪೂರ್ವಕ ಹಾಗೂ ಅಧ್ಯಾತ್ಮಿಕ ತತ್ವ ಒಳಗೊಂಡ ಮನಸ್ಸಿಗೆ ಆನಂದ ನೀಡುವ ನಾಟಕ ಇದಾಗಿದೆ.

ಬಾಲ್ಯದಲ್ಲಿಯೇ ರಾಜೇಂದ್ರ ಅಧ್ಯಾತ್ಮದೆಡೆಗೆ ಆಕರ್ಷಿತನಾಗುತ್ತಾನೆ. ಮೂರು ವರ್ಷದ ಬಾಲಕ ನೂರು ವರುಷದ ವೃದ್ಧರಂತೆ, ಕಣ್ಮುಚ್ಚಿ ಭಾವದುಂಬಿ ಹರನಾಮ ಸ್ಮರಣೆ ಮಾಡುತ್ತಾನೆ. ಯೋಗದ ಬಲಾ, ತಪದ ಬಲಾ, ಆಶೀರ್ವಾದ ಫಲಾ ದೊರಕಬೇಕಾದರೆ ಜನ್ಮಜನ್ಮಾಂತರ ಪುಣ್ಯಬೇಕು.

**"ಗುರು ಮನುಜನೆಂದವಗ। ಹರನ ಶಿಲೆಯಂದವಗ।**
**ಕರುಣ ಪ್ರಸಾದವನ್ನು। ಎಂಜಲೆಂದವಗ।**
**ನರಕ ತಪ್ಪದು। ಸರ್ವಜ್ಞ।**

ರಾಜೆಂದ್ರ ಪ್ರಬುದ್ಧನಾಗಿದ್ದಾನೆ. ಅತ್ತೆ ರಾಜಮ್ಮಾಳಿಗೆ ತನ್ನ ಮನಸ್ಸಿನಲ್ಲಿದ್ದುದನ್ನು ಹೇಳುತ್ತಾನೆ. "ಅತ್ತೆ! ನನಗೆ ಈ ಸಂಸಾರ ಶರಧಿಯಲ್ಲಿ ನೂಕಬೇಡ, ಹೆಂಡರು–ಮಕ್ಕಳೆಂಬ ಮೋಹದ ಮುಳ್ಳಿನ ಮಂಟಪದಲ್ಲಿ ಮಲಗಿಸಬೇಡ. ನಾನು ಈ ಭವ ಬಂಧನದಿಂದ ಮುಕ್ತನಾಗುತ್ತೇನೆ. ಗುಡ್ಡಬೆಟ್ಟಗಳಲ್ಲಿ ವಾಸಮಾಡುತ್ತೇನೆ. ನಾನೊಬ್ಬಯೋಗಿ ಯಾಗಬೇಕು, ವಿಶ್ವಾಮಿತ್ರನಂಥ ಹಟಯೋಗಿಯಾಗಬೇಕು" ಎಂದು ತನ್ನ ನಿರ್ಧಾರ ಸ್ಪಷ್ಟ ಪಡಿಸುತ್ತಾನೆ. ಕೊನೆಯಲ್ಲಿ ಕಾವಿಬಟ್ಟೆ ತೊಟ್ಟು, ಕೊರಳಲ್ಲಿ ರುದ್ರಾಕ್ಷಿ ಮಾಲೆಧರಿಸಿ ಹಣೆಗೆ ವಿಭೂತಿ ಹಚ್ಚಿಕೊಂಡು, ಕೈಯಲ್ಲಿ ಕಮಂಡಲ, ಕಾಲಲ್ಲಿ ಕಡಾವಿಗಳನ್ನು ಹಾಕಿಕೊಂಡು ನಿಂತು ತಾಯಿಯ ಆಶೀರ್ವಾದ ಕೇಳುತ್ತಾನೆ. ಅಂತಿಮವಾಗಿ ತಾಯಿ ಮೊಗಲಮ್ಮಾ ತನ್ನ ಮಗನಾದ ರಾಜೆಂದ್ರನನ್ನು ಕುರಿತು, " ಹೋಗಿ ಬಾ ಕಂದಾ । ಮೃಗಪಕ್ಷಿಗಳೇ ನಿನ್ನ ಗೆಳೆಯರಾಗಲಿ, ಅಷ್ಟ ದಿಕ್ಪಾಲಕರೇ ನಿನ್ನ

ಬಂಧುಗಳಾಗಲಿ, ಆಕಾಶವೇ ನಿನಗೆ ಹೊದಿಕೆಯಾಗಲಿ, ನೆಲವೇ ನಿನಗೆ ಹಾಸಿಗೆಯಾಗಲಿ, ಹೋಗಿ ಬಾ ಕಂದಾ ಕಂದಾ ಎಂದು ಅಪ್ಪಿಕೊಳ್ಳುವಳು, ಮಗನ ಜೋಳಿಗೆಯಲ್ಲಿ ಮೊದಲು ತನ್ನ ಕೈಯಿಂದಲೇ ಭಿಕ್ಷೆಯನ್ನು ನೀಡಿ ಹರಸುವಳು. ತಾಯಿ, ಅತ್ತೆಗೆ ನಮಸ್ಕರಿಸಿ ಮನೆ ತೊರೆಯುವನು.

ಮಾನವ ಜನ್ಮ, ಅದರ ಸಾರ್ಥಕತೆ, ಅಳಿವು-ಉಳಿವುಗಳೊಂದಿಗೆ ಜ್ಞಾನ,ಭಕ್ತಿ, ಕಾವ್ಯಕಲೆ ಈ ಮೂರರ ತ್ರಿವೇಣಿ ಸಂಗಮ ಈ ನಾಟಕದಲ್ಲಿ ಬಿಂಬಿಸಲಾಗಿದೆ. ಸಂಸಾರಿಕ ಘಟನೆಗಳು ಹೇಗೆ ಕಾಲಕಾಲಕ್ಕೆ ತಕ್ಕಂತೆ ಬದಲಾಗುತ್ತ ಹೊಸರೂಪ ಪಡೆದುಕೊಂಡು ಹೋಗುತ್ತವೆ. ಸಂಸಾರಿಕ ಜೀವನದಲ್ಲಿ ಹೇಗೆ ತಿರುವು ಪಡೆಯುತ್ತವೆ ಎಂಬುದನ್ನು ನಾಟಕದಲ್ಲಿ ನೋಡಬಹುದು.

ರಾಜೇಂದ್ರನಿಗೆ ವೇದಾಂತದತ್ತ ಒಲವು, "ದೈವಗತಿ ನ್ಯಾರಿ ಹೋತೋ ಬುದ್ಧಿಕ್ಯಾಕರೇಗಿ ಬೇಚಾರಿ" ಎಂಬ ಕಬೀರ ದಾಸರ ಮಾತನ್ನು ಉದ್ಧರಿಸುವ ಮೂಲಕ, ದೈವಿ ಪ್ರಯತ್ನವೇ ಮುಖ್ಯವೆಂದು ಹೇಳುತ್ತಾರೆ. ಅಧ್ಯಾತ್ಮದ ಅಧ್ಯಯನ ಆರಂಭ, ಬದುಕು ಅರಿಯಲು, ಅನುಭವ ಜ್ಞಾನಕ್ಕಾಗಿ ರಾಜೇಂದ್ರ ದೇಶ ಸಂಚಾರಕ್ಕೆ ಹೊರಡುತ್ತಾನೆ. ಚಿಂಚೋಳಿ ತಾಲೂಕಿನ ಗೊಟ್ಟಂ ಗೊಟ್ಟಿ, ಚಾಂಗ್ಲೇರಿ, ಸೇಡಂ ಹಾಗೂ ಸಿಂದಗಿ ತಾಲೂಕಿನ ಹಲವೆಡೆ ತಿಂಗಳಾನುಗಟ್ಟಲೆ ಅನುಷ್ಠಾನ ಗೈಯುವರು, ೩೧ ನೇ ವರ್ಷದಲ್ಲಿ ಗುರುಕರುಣೆ ಲಭಿಸಿ ಬಾಲಯೋಗಿ ರಾಜೇಂದ್ರ ಮಹಾರಾಜರಾಗಿ ಹಿಮಾಲಯದಲ್ಲಿ ಮಾನಸ ಸರೋವರಕ್ಕೂ ಭೇಟಿಕೊಟ್ಟು ಸಾಧು-ಸಂತರ ಸಂಪರ್ಕ ಹೊಂದಿ ಜ್ಯೋತಿಷ್ಯ, ವೈದ್ಯಕೀಯದಲ್ಲೂ ಪ್ರಾವಿಣ್ಯತೆಯನ್ನು ಹೊಂದಿ ವಾಕ್ ಸಿದ್ಧಿಯನ್ನು ಸಾಧಿಸಿದರು. ಸಂಚಾರದ ಕೊನೆಯಲ್ಲಿ ಶಹಾಪೂರದ ಬಿಲ್ಲಂಕೊಂಡಿ ಮಠದಲ್ಲಿ ವಿಧ್ಯುಕ್ತ ದೀಕ್ಷೆಯೊಂದಿಗೆ ಸಂತ-ಶರಣರ ಉದಯವಾಗುತ್ತದೆ.

ತಾಯಿ ಮೊಗಲಾಂಬಿಕಾರ ಅಂತ್ಯಕಾಲದಲ್ಲಿ ಸ್ಟೇಷನ್ ಸೈದಾಪೂರದ ಸನೀಹದಲ್ಲಿ ಮಹಾಮಾತೆ ಮೊಗಲಾಂಬಿಕಾದೇವಿ ಸ್ಮರಣಾರ್ಥ ಯೋಗ ಮಹೇಶ್ವರಿ ಆಶ್ರಮ ಸ್ಥಾಪಿಸಿ ಅಲ್ಲಿಯೇ ಪವಾಡಗಳನ್ನು ಮಾಡುತ್ತ ನೆಲೆಸುವರು ಇದುವೆ 'ಗರತಿ ವಿಶ್ವದ ಜ್ಯೋತಿ' ನಾಟಕದ ಕಥಾವಸ್ತು ಕಂಪನಿ ಪರಂಪರೆಯಲ್ಲಿನ ನಾಟಕದಲ್ಲಿರುವ ಎಲ್ಲ ಅಂಶಗಳು ಈ ನಾಟಕದಲ್ಲಿ ಒಳಗೊಂಡಿವೆ. ನಾಟಕದ ಪ್ರಾರಂಭ ಮಹೇಶ್ವರಿ ಹಾಗೂ ಮೊಗಲಾಂಬಿಕಾ ದೇವಿಯ ಪ್ರಾರ್ಥನೆಯುಳ್ಳ ನಾಂದಿಯೊಂದಿಗೆ ಪ್ರಾರಂಭವಾಗುತ್ತದೆ. ಹಲವು ದೃಶ್ಯಗಳು ಕಂದಪದ್ಯ ಇಲ್ಲವೆ ಸುಮಧುರ ಹಾಡುಗಳಿಂದ ಮೊದಲಾಗುತ್ತವೆ.

'ಗರತಿ ವಿಶ್ವಜ್ಯೋತಿ' ನಾಟಕಕ್ಕೆ ಸಂಪೂರ್ಣ ಜೀವ ತುಂಬಿರುವವರಲ್ಲಿ ಸತಿಶಿರೋಮಣಿ ಮೊಗಲಮ್ಮ, ನಾಟಕದ ಕೇಂದ್ರ ಬಿಂದು ಸಹ ಇವರೆಂದರೆ ತಪ್ಪಾಗಲಾರದು, ಮೊಗಲಮ್ಮ ತಾಯಿಯವರು ಆದಿಶಕ್ತಿ ಬೊಗಳಾಂಬೆಯ ಪ್ರತಿರೂಪವಾಗಿ ಬಂದಿರುವಳೋ ಏನೋ ಎಂಬಂತೆ ಭಾಸವಾಗುತ್ತದೆ. ಹೆಸರಿಗೆ ತಕ್ಕಂತೆ ಮೃದು ಸ್ವಭಾವ, ಶಿವಪೂಜೆಯೇ ಆ ತಾಯಿಯ ನಿತ್ಯ ಕಾರ್ಯ ಕ್ರಮ ಪತಿಯ ಪಾದೋದಕವಿಲ್ಲದೆ ಪ್ರಸಾದ ಸೇವಿಸುತ್ತಿರಲಿಲ್ಲ, ಮನೆಗೆ ಬಂದ ಅತಿಥಿ ಅಭ್ಯಾಗತರಿಗೆ ಕರೆದು ಊಟ ಉಪಚಾರ ಮಾಡಿಸುತ್ತಿದ್ದಳು. ಬಂದ ಭಿಕ್ಷಕರಲ್ಲಿ ಜಂಗಮ ರೂಪ

ಕಂಡು ಸಂತೋಷ ಪಡುತ್ತಿದ್ದರು. ಆದರೇನು? ಆ ಶಿವನಾಡಿಸುವ ಗೊಂಬೆಗಳಲ್ಲವೆ ನಾವೆಲ್ಲರು? ಆ ಶಿವನು ಸೂತ್ರಧಾರಿ, ನಾವು ಪಾತ್ರಧಾರಿ ಅಷ್ಟೇ.

ಮೊಗಲಮ್ಮಳ ಗಂಡನ ತಂಗಿ ಮಾಶೆಮ್ಮ ಕೊಡುವ ಕಷ್ಟಕೋಟಲೆಗಳಂತೂ ಸಹಿಸುವುದು ಸುಲಭದ್ದಲ್ಲ, ಮಾಶೆಮ್ಮ ಗಂಡನ ಮನೆಯಲ್ಲಿ ಮಗನನ್ನು, ಗಂಡನನ್ನು ಬಿಟ್ಟು ತವರು ಮನೆಗೆ ಬಂದು ಅಣ್ಣನನ್ನು ಎದುರು ಹಾಕಿಕೊಳ್ಳುವುದಲ್ಲದೆ ಆತನ ಹೆಂಡತಿಯನ್ನು ಜರೆಯುತ್ತಿದ್ದಳು, ತಾನು ಒಂದು ಹೆಣ್ಣು ಎಂದು ಅರಿಯದ ಅವಳ ಮನಸ್ಸು ಕಠಿಣವಾಗಿತ್ತು, ಕಲ್ಲಾಗಿತ್ತು ! ಆಕೆಯ ಒಂದೊಂದು ಮಾತು ಚೂರಿಯಿಂದ ಎದೆಗೆ ತಿವಿದಂತಾಗುತ್ತಿತ್ತು. ನೋಡಿ, ಮೊಗಲಮ್ಮಳನ್ನು ಹೇಗೆ ಹಿಯ್ಯಾಳಿಸುತ್ತಾಳೆ,

"**ಮಾಶೆಮ್ಮಾ :** ಹೌದ ಸೊಗಲಾಡಿ ಸುಬ್ಬಕ್ಕ! ಬರ್‍ರಿ ಜಳಕಾ ಮಾಡಿ ಪೂಜಾ ಮಾಡ ಬರ್‍ರಿ ಅಂತ, ಹ್ಯಾಂಗ ಕರಿತಾಳನೋಡ್ರಿ ಹಸಿಗೂಸಿ ನಂಗಾ, ನನ್ನ ತಮ್ಮಗ ಮೆಚ್ಚ ಮದ್ದ ತೆಲಿಗೆ ಒರ್ಸಿಬಿಟ್ಟಾಳ ತೀರಿತು". ಹಿರಿಯರು ಹೇಳವಂತೆ, "ನಡೆಯೋ ಹೆಣ್ಣಿಗೆ ನಾದಿನಿ ಮೂಲಾ" ಅನ್ನುವುದು ಸುಳ್ಳಲ್ಲ ಹಠಮಾರಿ ಹೆಣ್ಣು ಬೇರೆಯವರ ಬುದ್ಧಿವಾದ ಕೇಳುವುದೇ ಇಲ್ಲ, ಫಕೀರ ರಾಜೇಸಾಬನ ಮಾತು ನಾವು ಇಲ್ಲಿ ಮರೆಯುವಂತಿಲ್ಲ.

**ರಾಜೇಸಾಬ :** ನೋಡ್ರಿ ಸಾಬಯ್ಯನವರೇ (ಮೊಗಲಮ್ಮನ ಗಂಡ) ನಿಮ್ಮಕ್ಕ ಹಠವಾದಿ ಅಕಿಗಿ ಹುಟ್ಟಿಸಿದ ದೇವರು ಬಂದು ಹೇಳಿದರೂ ಅದು ಸಾಧ್ಯ ಆಗೋದಿಲ್ಲ, ಆ ಅಮ್ಮಗ (ಮಾಶೆಮ್ಮಾ) ಬುದ್ಧಿ ಹೇಳೋದು ಗಟಾರದಾಗಂಥೆಣ್ಣಿ ಚೆಲ್ಲೂದು ಎರಡು ಒಂದೇ "ಗಾಡಿ ಮೋಟಾರ್ ವ್ಯಾನ್ ಹೊಂಟಾಗ ಮೂರು ಮಾರ ಸರದ ಹೋಗ್ಬೇಕಂತ, ಮರಗಮ್ಮನ ಕ್ವಾಣಾ ಹೊಂಟಾಗ ಹತ್ತ ಮಾರ ದೂರ ಸರದ ಹೋಗ ಬೇಕಂತ, ಹುಚ್ಚಾನೆ ಹೊಂಟಾಗ ಬಹುದೂರ ಸರಿದು ಹೋಗ ಬೇಕಂತೆ ದುಷ್ಟ ಮಾನವರು ಹೊಂಟಾಗ ಆ ಊರ ಬಿಟ್ಟು ಹೋಗಬೇಕಂತ ಎಂದು ನಾಲತವಾಡ ವೀರೇಶ್ವರ ಶರಣರು ಹೇಳಿದ ಮಾತು ನೆನಪಿನಲ್ಲಿಟ್ಟುಕೊಳ್ಳಬೇಕು.

ಸಾಕಷ್ಟು ಪೀಡಿಸಿಕೊಂಡ ಮಾಶೆಮ್ಮ ಅಂತಿಮ ಸಮಯದಲ್ಲಿ ತನ್ನದೆಲ್ಲವನ್ನು, ತನ್ನ ಅಹಂಕಾರ, ಸೊಕ್ಕಿನ ನಡತೆಯಿಂದಾಗಿ ಕಳೆದು ಕೊಂಡು ಬೀದಿಗೆ ಬೀಳುತ್ತಾಳೆ ಅವಳನ್ನು ಯಾರೂ ಕಣ್ಣೆತ್ತಿಯೂ ನೋಡುವುದಿಲ್ಲ, ಆದರೆ ಮೊಗಲಮ್ಮಾ ಹಿಂದಿನ ಎಲ್ಲ ಕಷ್ಟಗಳನ್ನು ಮರೆತು ಆಕೆಗೆ ಆಶ್ರಯ, ಉಟೋಪಚಾರ, ಸೇವೆಗೈಯ್ಯಲು ಮುಂದಾಗುತ್ತಾಳೆ, ಇದು ನಾರಿಯರು ತಿದ್ದಿಕೊಳ್ಳ ಬೇಕಾದ ಅಂಶ, ನಾರಿಪಾತ್ರಕ್ಕೆ ನ್ಯಾಯ ಒದಗಿಸುವಲ್ಲಿ ಆಲ್ದಾಳರು ಮೆಚ್ಚುಗೆ ಪಡೆಯುವ ರೀತಿಯಲ್ಲಿ ನಾಟಕ ಸೃಷ್ಟಿಸಿದ್ದಾರೆ.

ಹಿಮಾಲಯದಲ್ಲಿ ಸಾಧು-ಸಜ್ಜನರೊಡನೆ ರಾಜೇಂದ್ರರು, ಚರ್ಚೆಗೆ ತೊಡಗಿದಾಗ ಸಾಧುಗಳಾಗಿ ಬಂದವರು ತಮ್ಮ ಅನುಭವ ಹಂಚಿಕೊಂಡಾಗ, ಒಬ್ಬಸಾಧು ನನಗೆ ಸಾಲ ಹೆಚ್ಚಾಗಿ ತೀರಿಸಲು ಸಾಧ್ಯವಾಗಲಿಲ್ಲ, ಮತ್ತೋರ್ವ ಹೆಂಡತಿ, ಮಕ್ಕಳನ್ನು ಸಲುಹಲಾರದ್ದಕ್ಕೆ, ಮೂರನೇಯವರು ಹಣಕ್ಕಾಗಿ ಕೊಲೆಮಾಡಿ ತಪಿಸಿಕೊಳ್ಳಲು ಸಾಧು ಆಗಿರುವುದನ್ನು

ಹೇಳಿಕೊಂಡರು, ಅವರ ಹೇಳಿಕೆ ಕಂಡು ಬಾಲಯೋಗಿ ರಾಜೇಂದ್ರ ಮಹಾರಾಜರು ಪರಮೇಶ್ವರನ ಜ್ಞಾನವೇ ಮುಕ್ತಿಗೆ ಸಾಧನೆ ಎಂದರು.

ಸಿಟ್ಟಿಳಿದು ಸದಾ ಶಾಂತಿಯಿಂದ ಹರಿಯುವ ನದಿಯಂತಾಗಬೇಕು, ಅದನ್ನು ಬಿಟ್ಟು ಹೊಲಸು ತುಂಬಿದ ಬಚ್ಚಲು ಮೋರೆಯಂತಾಗಬಾರದು.

ಮೃಗ ಜಾತಿಯಲ್ಲಿ ಕತ್ತೆಯೆ ಚಾಂಡಾಲ, ರಾಜರಲ್ಲಿ ಪ್ರಜರು ಮಾಡಿದ ಅಪರಾಧವನ್ನು ಕ್ಷಮಿಸಲಾರದವನೇ ರಾಜಚಾಂಡಾಲ, ಗುರುಗಳಲ್ಲಿ ಶಿಷ್ಯನ ಅಪರಾಧಗಳನ್ನು ಮನ್ನಿಸಲಾರದವನೇ ಗುರುಚಾಂಡಾಳ, ಯತಿನಾಮ ಕೋಪ ಚಾಂಡಾಲ, ಇವುಗಳನ್ನೆಲ್ಲ ಅಳಿದು ಶಿವಧ್ಯಾನ ಮಾಡುತ್ತ ಶಿವನಲ್ಲಿ ಒಂದಾಗಿರಿ ಎಂದು ಹೇಳಿದ ಬಾಲಯೋಗಿಗಳ ಒಂದೊಂದು ಮಾತು ಮನನೀಯ.

ಅನೇಕ– ಪವಾಡಗಳನ್ನು ಮಾಡುತ್ತ ದೇಶಸಂಚಾರ ಕೈಗೊಂಡು ಸಮಾಜದಲ್ಲಿ ತತ್ವಜ್ಞಾನವನ್ನು ಅರುಹಿದರು, ನಾವೆಲ್ಲ ಶಿವನ ಮಕ್ಕಳು, ನಾ ಹೆಚ್ಚು ನೀ ಹೆಚ್ಚು ಅನ್ನುವ ಅಹಂಭಾವ ಬಿಟ್ಟುಕೊಡಿ, ನೋಡಿ.

**'ಸಾರಸಜ್ಜನರ ಸಂಗಲೇಸು ಕಂಡಯ್ಯ।**
**ದೂರ ದುರ್ಜನರ ಸಂಗ ನಮಗೆ ಬೇಡವಯ್ಯಾ॥**

ಗರತಿ ವಿಶ್ವದ ಜ್ಯೋತಿ ನಾಟಕದಲ್ಲಿ ಊರಿನ ಅಗರ್ಭ ಶ್ರೀಮಂತ ನಾಗರೆಡ್ಡಿ ತನ್ನ ಹಣದ ಬಲದಿಂದ ಊರವರನ್ನು ಕಡೆಗಣಸಿ, ಸೊಕ್ಕಿನಿಂದ ವರ್ತಿಸುತ್ತಿದ್ದ ಕೊನೆಯಲ್ಲಿ ಅದಕ್ಕೆ ತಕ್ಕ ಶಿಕ್ಷೆಯಾಯಿತು. ಶರಣಜೀವಿ ಸಾಬಯ್ಯ ಸಮಯಕ್ಕೆ ತಕ್ಕಂತೆ ಹಿತೋಪದೇಶ ಮಾಡುತ್ತ ಶಾಂತಿ ಕಾಯ್ದು ಕೊಳ್ಳುವಂತೆ ಊರವರೊಂದಿಗೆ ಹೆಣಗುತ್ತಿದ್ದ, ರಾಮ, ಶಾಮ, ಸೀತಾ ಹಾಸ್ಯ ಪಾತ್ರ ಇಡೀ ನಾಟಕಕ್ಕೆ ಆಧಾರ ಸ್ಥಂಬವಾಗಿತ್ತು, ಅವರು ಆಡುವ ಮಾತುಗಳಲ್ಲಿ ಚಾಟಿ ಬೀಸುವಂತಿದ್ದವು ಅದೇ ಸಮಯದಲ್ಲಿ ತತ್ವಗಳು ಗೂಡಾರ್ಥದಿಂದ ಕೂಡಿರುತ್ತಿದ್ದವು, ಇವರಾಡುವ ಮಾತುಗಳಲ್ಲಿನ ಶಬ್ಧಗಳು ಉದಾಹರಣೆಗೆ, ಬೇವರ್ಸಿ ನನ ಮಗನ, ಎಲಾರಂಡಿ, ಹರಾಮಖೋರ, ಮೂಳಗೋಳ, ಭಾಡ್ಯಾ, ಹಾದರಕುಟ್ಟಿದವಾ, ಹಲ್ಕಾನನ್ಮಗನಾ ಇತ್ಯಾದಿಗಳು ಆ ಸಂದರ್ಭದಲ್ಲಿ ಪ್ರೇಕ್ಷಕರನ್ನು ಕಚಗುಳಿಗೆ ಒಳಪಡಿಸುವುದು ಸಹಜ, ಆದರೆ ಈ ಶಬ್ಧಗಳು ಕೆಲವರಿಗೆ ಮೂಗು ಮುರಿಯುವಂತಾದರೆ ಅದು ತಪ್ಪಲ್ಲ– ನಾಟಕದಲ್ಲಿನ ಭಾಷೆ ಅದರ ಶ್ರೇಯಸ್ಸಿಗೆ ಕಾರಣವಾಗುತ್ತದೆ. ಈ ನೈಜತೆಯನ್ನಿರತ ಆಲ್ದಾಳರು ತಮ್ಮ ನಾಟಕದಲಿ ಬಳಸಿದ ಭಾಷೆ ಜನಸಾಮಾನ್ಯರಿಗೆ ಹತ್ತಿರವಾದುದು, ಹೀಗಾಗಿ ನಾಟಕಗಳಲ್ಲಿ ಚಿಕ್ಕ–ಚಿಕ್ಕ ಸಂಭಾಷಣೆ, ಸನ್ನಿವೇಷ, ಸಂದರ್ಭಗಳನ್ನು ಸೃಷ್ಟಿಸಿ ಬಳಸಿಕೊಂಡು ಜನತೆಗೆ ರಂಜನೆಯನ್ನು ನೀತಿಯನ್ನು ನೀಡಿದ್ದಾರೆ. ಜೋಗುಳ ಹಾಗೂ ಲಾಲಿ ಪದ್ಯಗಳು, ಕನ್ನಡ, ಮರಾಠಿ ಭಾಷೆಯನ್ನೊಳಗೊಂಡ ಯುಗಳಗೀತೆ, ಗಂಭೀರ ಸನ್ನಿವೇಶಗಳಿಗಾಗಿ ಹಿನ್ನಲೆ ಹಾಡುಗಳನ್ನು ನೀಡಿರುವರು.

ಆಲ್ದಾಳರು ವಚನಕಾರರಿಂದ ಬಹಳಷ್ಟು ಆಕರ್ಷಿತರಾದಂತೆ ಕಂಡುಬರುತ್ತದೆ. ತಮ್ಮ ನಾಟಕಗಳಲ್ಲಿ ಸರ್ವಜ್ಞ, ಡಿ.ವಿಜಿ, ಬಸವಣ್ಣನವರು, ಅಲ್ಲಮಪ್ರಭು, ಮಾತೆ ಮಹಾದೇವಿ, ಅಕ್ಕಮಹಾದೇವಿ, ಕಡಕೋಳ ಮಡಿವಾಳೇಶ್ವರ, ಅಖಂಡೇಶ್ವರ, ಕಬೀರ ಮುಂತಾದವರ ವಚನಗಳನ್ನು ಬಳಸಿ ನಾಟಕದ ಸನ್ನಿವೇಶಗಳನ್ನು ಸುಂದರವಾಗಿಸಿದ್ದಾರೆ. ಅಧ್ಯಾತ್ಮದ ವಾತಾವರಣ ನಿರ್ಮಾಣವಾಗಲು ವಚನಸಾಹಿತ್ಯ ಅನುಕೂಲ ಮಾಡಿಕೊಟ್ಟಿದೆ. "ನಾಟಕಗಳಲ್ಲಿ ನಾಟಕಕಾರನ ಮನಸ್ಸಿನ ಭಾವನೆಗಳನ್ನು ಹೆಚ್ಚು ಸ್ಪಷ್ಟವಾಗಿ, ನಾಟಕಕಾರನ ಮುಖವಾಣಿಯಾಗಿ, ವಿದೂಷಕ ಹಾಗೂ ಪೋಷಕ ನಟರು ವ್ಯಕ್ತ ಪಡಿಸಲು ಸಹಕಾರಿಯಾಗುತ್ತದೆ. ಆ ಕಾರಣದಿಂದಲೇ ಪ್ರೇಕ್ಷಕರ ಮನಸ್ಸಿನ ಆಳಕ್ಕಿಳಿಯುವಲ್ಲಿ ಅವರ ಭಾವನೆಗಳನ್ನು ಮಿಡಿಯುವಲ್ಲಿ ಅವರದೇ ಭಾಷೆ ಹೆಚ್ಚು ಸಮರ್ಥವಾಗುತ್ತದೆ. ಎಂದು ನಾಟಕಕಾರ ಅರಿತಂತೆ ಕಾಣುತ್ತದೆ."[೧೪೯] ಈ ವಿಚಾರವನ್ನರಿತ ನಾಟಕಕಾರರು ತಮಗರಿವಿಲ್ಲದಂತೆ ಪ್ರಾದೇಶಿಕ ಭಾಷೆಯಲ್ಲಿ ನಾಟಕಗಳನ್ನು ರಚಿಸುತ್ತಿದ್ದರು ಬಹುಭಾಷಾ ಪಂಡಿತರಾದ ಆಲ್ದಾಳರು ಸಮಯ, ಸಂದರ್ಭ, ಕಾಲಕ್ಕೆ ತಕ್ಕ ಭಾಷೆಯನ್ನು ಬಳಸಿಕೊಂಡದ್ದು ವಿಶೇಷ.

'ಗರತಿ ವಿಶ್ವದ ಜ್ಯೋತಿ' ನಾಟಕವು ಒಂದು ಕಡೆ ಶ್ರೀಮಂತನ ಅನ್ಯಾಯ, ಅತ್ಯಾಚಾರಗಳನ್ನು ಧಮನಿಸಿದರೆ, ಮತ್ತೊಂದೆಡೆಗೆ, ನಿಜವಾದ ಸದ್ಗುರುವಿನ ಸತ್ಪಥ, ಸಮಾಜ ಚಿಂತಕ, ಸಮಾಜ ಸೇವೆ, ಸಮಾಜ ಸುಧಾರಕ ಇವೆಲ್ಲವುಗಳನ್ನು ಸರಿಯಾಗಿ ಕಾಣಿಸಿದೆ. ಆಲ್ದಾಳರು ಈ ನಾಟಕವನ್ನು ಬರೆದು ಸಮಾಜದಲ್ಲಿನ ಕೆಲವರ ಹೊಲಸು ತೊಳೆದು, ಅದನ್ನು ಸುಂದರವಾಗಿ ಮಾಡುವ ಪ್ರಯತ್ನದಲ್ಲಿ ತೊಡಗಿಸಿಕೊಂಡಿದ್ದಕ್ಕೆ ಅವರ ಉಪಕಾರ ಸ್ಮರಿಸಲೇಬೇಕು.

# ಕಣ್ಣಿಟ್ಟ ಕೈ ಕೊಟ್ಟ

(ಕ್ರಾಂತಿಕಾರಕ ನಾಟಕ)

ಸಮಾಜದಲ್ಲಿ ಎಲ್ಲರೂ ಸಮತಾಭಾವನೆಯಿಂದ ಬಾಳಬೇಕು ನಿಜ. ಅದು ಸಹಜವಾದುದು, ಆದರೆ ಇದು ಎಷ್ಟರ ಮಟ್ಟಿಗೆ ಸಾಧ್ಯವಿದೆ, ಸಮಾಜದಲ್ಲಿ ಕೆಟ್ಟವರೂ ಎದ್ದು ಬರುತ್ತಾರೆ. ಎದ್ದು ಬಂದವರು ಸುಮ್ಮನೆಕೂಡ್ರುವುದಿಲ್ಲ, ಹಣ ಮದದಿಂದ ಸಮಾಜ ಘಾತುಕರಾಗುತ್ತಾರೆ. ತಮ್ಮ ಸುತ್ತ ಮುತ್ತಲಿನ ವಾತಾವರಣ ಮಲೀನ ಗೊಳಿಸುತ್ತಾರೆ. ಬಡವರು ಇವರ ಕಪಿಮುಷ್ಠಿಯಲ್ಲಿ ಸಿಕ್ಕರಂತೂ ಹಿಪ್ಪೆಮಾಡುತ್ತಾರೆ. ಅನಾಥರ ಭಕ್ಷಕರಾಗುತ್ತಾರೆ, ಮಹಿಳೆಯರ ಮಾನಕ್ಕೆ ಕೈಹಾಕುತ್ತಾರೆ. ಕ್ರೂರ ರೀತಿಯಲ್ಲಿ ವರ್ತಿಸುತ್ತಾರೆ. ಹಿಂಸೆ, ಪೀಡನೆಗೆ ಒಳಗಾಗಿಸುತ್ತಾರೆ. 'ಕಣ್ಣಿಟ್ಟ ಕೈಕೊಟ್ಟ' ನಾಟಕದಲ್ಲೂ ಇಂತಹ ದುಷ್ಟ ನಾಯಕರೂ ಇದ್ದಾರೆ. ಇವರಿಂದ ಎಷ್ಟೋ ಸಂಸಾರಗಳು ಬೆಂಕಿಯಲ್ಲಿ ಬೆಂದಂತಾಗುತ್ತವೆ.

ಕಾಮಾಂಧನಾಗಿ ದುರ್ಬಲ ವರ್ಗದ ಹೆಣ್ಣಿನೊಡನೆ ಸ್ನೇಹ ಬೆಳಸಿ ಅವಳಿಂದ ಇರ್ವರು ಮಕ್ಕಳನ್ನು ಪಡೆದು ಕೊನೆಗೆ ಜಾತಿಯ ಸಂಕಟದಲ್ಲಿ ಬಿದ್ದು ಸಾಮಾಜಿಕ ಪ್ರತಿಷ್ಠೆಗಾಗಿ ಅವಳನ್ನು ತ್ಯಜಿಸುತ್ತಾನೆ. ಅಲ್ಲದೆ ಈ ಕಪಟ ಕುಟಿಲ ನಾಟಕದ ವಿಷಯ ಯಾರ ಮುಂದೆಯೂ ಹೇಳಬಾರದು ಎಂದು ಪ್ರತಿಜ್ಞೆಮಾಡಿಸಿಕೊಳ್ಳುತ್ತಾನೆ. ಅನಂತರ ಸಾಲುಸಾಲಾಗಿ ಕಷ್ಟಗಳೇ ಅವಳು ಉಂಡು ಸಹಿಸಬೇಕಾದ ರೋಮಾಂಚನಕಾರಿ, ಕ್ರಾಂತಿಕಾರಿ ನಾಟಕವೇ ಆಲ್ದಾಳರ ಹೆಮ್ಮೆಯ ನಾಟಕ. 'ಕಣ್ಣಿಟ್ಟ ಕೈಕೊಟ್ಟ' !

"ಕಲಾರಸಿಕರೇ ಈ ನಾಟಕದ ಕಥಾವಸ್ತು ಸ್ವಕೃತ, ಯಾರ ಮೇಲೆಯೂ ಊಹಿಸಿ ಬರೆದಿಲ್ಲಾ, ನಿತ್ಯಸಮಾಜದಲ್ಲಿ, ಸಂಸಾರದಲ್ಲಿ ಎದುರಾಗುವ ಘಟನೆಗಳನ್ನೇ ತಮ್ಮ ಮುಂದಿಟ್ಟಿದ್ದೇನೆ" ಎಂದು ತಮ್ಮ ಈ ಕೃತಿಯ 'ನನ್ನನುಡಿ'ಯಲ್ಲಿ ಆಲ್ದಾಳರು ಸ್ಪಷ್ಟನೇ ನೀಡಿದ್ದಾರೆ.

ನಾಟಕದ ಆರಂಭದಲ್ಲಿಯೇ ನಾಟಕ ಅಂತ್ಯವೂ ಮೇಲ್ನೋಟಕ್ಕೆ ಪ್ರೇಕ್ಷಕರು ಊಹಿಸುವಂತಾಗುತ್ತದೆ. ದೃಶ್ಯ-೧-ಅರಣ್ಯದಲ್ಲಿರುವ ಗುಡ್ಡವೊಂದರಲ್ಲಿ ಗುಡಿ ಇದೆ. ನಿವೃತ್ತ ಶಿಕ್ಷಕ ರಂಗಪ್ಪನ ಮಗಳು ಜ್ಯೋತಿ- (ಕೈಯಲ್ಲಿ ಪೂಜಾಸಾಮಾಗ್ರಿ ಹಿಡಿದು ಭಯದಿಂದ ಓಡುತ್ತ ಬರುವಳು) "ಯಾರಾದರೂ ಬಂದು ರಕ್ಷಿಸಿರಿ (ಸುತ್ತಲೂ ನೋಡಿ) ಕಾಮುಕನ ಕೈಯಿಂದ ಪಾರು ಮಾಡಲು ಯಾರೂ ಇಲ್ಲವೆ?" ಊರಿನ ಪ್ರತಿಷ್ಠಿತ ವ್ಯಕ್ತಿ ಕಾಮುಕ ಶೀನಪ್ಪನನ್ನು ನೋಡಿ ಅವರಿಂದ ಬಚಾವಾಗಲೂ ಜ್ಯೋತಿ ಎಲ್ಲಿಲ್ಲದ ಸಂಕಟ ಪಡುತ್ತಿದ್ದಾಳೆ ಹುಲಿಯ ಮುಂದೆ ಜಿಂಕೆಮರಿ ಬೆದರಿಬೆಂಡಾಗಿ ನಿಂತಿರುವಂತೆ ನಿಂತಿದ್ದಾಳೆ ಜ್ಯೋತಿ!

**ಶೀನಪ್ಪ:** (ವಿಕಾರನಗೆಯೊಂದಿಗೆ) "ಓಡಿಹೊಗ್ತಿಯಾ ಜ್ಯೋತಿ, ನೀ ಹಿಂಗೆ ಓಡಿದರೆ ನಾಯೇನ ಬಿಡಾಕಿಲ್ಲ, ಸುಮ್ನೆ ಬಾ ನಿನ್ನನ್ನು ರಾಣಿ ಅಂಗೆ ಮೆರೆಸ್ತಿನಿ, ಈ ಶೀನಪ್ಪಾ ಅಂದರೆ ನೀ ಏನು ತಿಳ್ದಿಕೊಂಡಿದಿಯಾ?"

**ಜ್ಯೋತಿ:** "ಥೂ ಪಶುವೆ ನಿನಗೆ ಮಾನವೀಯತೆಯಿಲ್ಲವೆ? ಒಂದು ಹೆಣ್ಣಿನ ಶೀಲ ಕೆಡಿಸಲು ನಾಚಿಕೆ ಬರುವುದಿಲ್ಲವೆ?".

ಮೇಲ್ಕಾಣಿಸಿದ ಸಂವಾದವೇ ಶೀನಪ್ಪನು ಎಂಥ ಪ್ರತಿಷ್ಠಿತ ವ್ಯಕ್ತಿ ಎಂಬುದು ನಾಟಕಕಾರರು ಪ್ರಾರಂಭದಲ್ಲಿಯೇ ಪ್ರೇಕ್ಷಕರ ಎದುರಿನಲ್ಲಿಟ್ಟಿದ್ದಾರೆ. ಒಂದು ಅಸಾಹಯಕ ಹೆಣ್ಣನ್ನು ಅಡವಿಯಲ್ಲಿ ಒಬ್ಬಳೇ ದೇವಸ್ಥಾನದ ಬಳಿಯಲ್ಲಿದ್ದಾಗಲೇ ಅವಳನ್ನು ಕಾಮುಕ ದೃಷ್ಟಿಯಿಂದ ನೋಡುವ ಶೀನಪ್ಪನು ಎಂಥ ಕ್ರೂರಿ, 'ಕಾಮುಕರಿಗೆ ಲಜ್ಜೆ, ಭಯ ಎಂಬುದು ಇರುವುದಿಲ್ಲ ಎಂಬ ಗಾದೆ ಇಂಥ ನೀಚ ಬುದ್ಧಿಯವರಿಗಾಗಿಯೇ ಹುಟ್ಟಿದೆ. ಗ್ರಾಮಾಂತರ ಪ್ರದೇಶದಲ್ಲಿ ಪುಡಿ ಪುಢಾರಿಗಳು ತಮ್ಮ ಪ್ರತಿಷ್ಠೆ ಬೆಳೆಸಿಕೊಳ್ಳುವಲ್ಲಿ ಅಬಲೆಯರನ್ನು, ವಿಧವೆಯರನ್ನು, ತುಂಬಾ ಬಡ ಮಹಿಳೆಯರನ್ನು ಮೋಸ, ವಂಚನೆ, ಕಪಟ, ಆಶೆ, ಅಮಿಷಗಳಿಂದ ತಮ್ಮ ಬಲೆಯಲ್ಲಿ ಹಾಕಿಕೊಂಡು ತಮ್ಮ ತಿಂಡಿ-ತೆವಲು ತೀರಿಸಿಕೊಂಡು ಅವರನ್ನು ತಿಪ್ಪೆಗೆಸೆಯುವುದು ಮೊದಲಿನಿಂದಲೂ ನಡೆದುಬಂದಿದೆ. ಅದನ್ನೇ ಆಲ್ದಾಳರು "ಕಣ್ಣಿಟ್ಟ ಕೈಕೊಟ್ಟ" ನಾಟಕದ ಮೂಲಕ ಪ್ರದರ್ಶಿಸಿದ್ದಾರೆ. ಇಂತಹ ಲಫಂಗರಿಂದ ದೂರವಿರುವಂತೆ ಎಚ್ಚರಿಸಿದ್ದಾರೆ.

ನಾಟಕದ ಶೀರ್ಷಿಕೆಯೇ ಹೇಳುವಂತೆ, ಊರಿನ ಕಾಮುಕ ಮುಖಂಡ ಶೀನಪ್ಪನ ಕಾಮಾಂಧ ಮನಸ್ಸು, ಅವನ ಮುಖದಲ್ಲಿರುವ ವಂಚನೆ, ಕಣ್ಣುಗಳಲ್ಲಿರುವ ಕಪಟತನವೇ, ಜ್ಯೋತಿಯ ಮೇಲೆ ಕೆಟ್ಟಮನಸ್ಸು ಆವರಿಸುವಂತಾಯಿತು. ನೆಟ್ಟ ಕಣ್ಣಿನ ದೃಶ್ಯ ಅವನಿಗೆ ಉತ್ತೇಜನ ನೀಡಿತು. ಅದಕ್ಕಾಗಿ ಅವಳ ಮೇಲೆ 'ಕಣ್ಣಿಟ್ಟ....' ನಂತರ ತನ್ನ ದುಷ್ಟತನದಿಂದಾಗಿ ಅವಳಿಗೆ ....ಕೈ ಕೊಟ್ಟು ಸುಟ್ಟುಕೊಂಡ. ಇದು ನಾಟಕದ ಗೂಡಾರ್ಥವೂ ಹೌದು! ನಾಟಕದಲ್ಲಿ ಬಳಸಲಾದ ಗಂಭೀರ ಸಂಭಾಷಣೆಗಳು ಪ್ರೇಕ್ಷಕರ ಮನ ಮುಟ್ಟುತ್ತವೆ. ಇದು ಲೇಖಕರ ಚಾಣಾಕ್ಷತನ ಇಲ್ಲಿ ಮೆರೆದಿದೆ. ಉತ್ತರ ಕರ್ನಾಟಕದಲ್ಲಿ ಶತಕ ಬಾರಿಸಿದ ನಾಟಕ 'ಕಣ್ಣಿಟ್ಟ ಕೈಕೊಟ್ಟ' . ನಾಟಕದ ಭಾಷಾಶೈಲಿ ಪ್ರೇಕ್ಷಕರಿಗೆ ಖುಷಿ ಕೊಡುತ್ತದೆ.

ಶೀನಪ್ಪನ ಮನೆ ಮುರುಕತನವನ್ನು ಕಂಡ ವಿದ್ಯಾವಂತ ನಿರುದ್ಯೋಗಿ ಯುವಕ ಕೀರ್ತಿ ಕೆಂಡಾ ಮಂಡಲವಾಗುತ್ತಾನೆ. ಸಮಾಜಕ್ಕೆ ಹಿತ ಹೇಳಬೇಕಾದವರೇ ಹಿರಿಯರೆ ಅಹಿತ ಬಯಸಿ, ಸಮಾಜದ ಬುಡಕ್ಕೆ ಕೊಡಲಿ ಪೆಟ್ಟು ಹಾಕುತ್ತಿರುವಾಗ ಯಾರು ತಾನೆ ಸಹಿಸಿಯಾರು? ಜ್ಯೋತಿಯ ಮೇಲೆ ಅತ್ಯಾಚಾರವಾಗದಂತೆ ಕೀರ್ತಿ ತಡೆಯಲು ಮುಂದಾಗಾಗ ಕಾಮಾಂಧನ ಮಾತು ಕೇಳಿ.

**ಶೀನಪ್ಪಾ:** "ಕೀರ್ತಿ ಇನ್ನೊಮ್ಮೆ ವಿಚಾರಮಾಡು ಹರಿವ ಹಾವಿನ ಹೆಡೆ ತುಳಿದು ರೊಚ್ಚಿಗೆಬ್ಬಿಸದೆ ಸುಮ್ಮನೆ ಹೋಗು, ನಿನ್ತಾಯಿ ಹೊಟ್ಟೆಗೆ ಹಿಟ್ಟಿನ ಸಲುವಾಗಿ ಮನೆ-ಮನೆ ತಿರುಗಿ ಬೇಡ್ತಾಳ, ಪಾಪ,

ಅವಳೊಟ್ಟಿಗೆ ಅನ್ನಾಹಾಕುವ ಕುವತ್ತಿಲ್ಲ, ಭಿಕಾರಿ ನನ್ಮಗನ, ಅದಬಿಟ್ಟು ಕುಸ್ತಿ ಭೀಮ್ನಂಗ ಬಂದಾವ್ನೆ, ಲೇ ಬಾಡ್ಗಿ ಮಗನೆ ಬಾ ಈ ಕಡೆ ಅವ್ನತ್ರ ನಿಂತ್ರಏನ್ ಬರ್ತಾವ ಮಣ್ಣು". [೧೫೦]

**ಕೀರ್ತಿ:** "ಬಾಯ್ಮುಚ್ಚು ಮುದಿಗೂಬೆಯೇ! ನಮ್ಮಂಥ ದರಿದ್ರರಿಂದಲೇ ನೀನಿಂದು ಶ್ರೀಮಂತನಾಗಿರುವಿ, ಶೀನಪ್ಪಾ ಸಾಹುಕಾರರೇ, ಒಳ್ಳೆಯ ಮಾತಿನಿಂದ ಇಲ್ಲಿಂದ ದೂರಾಗು ಇಲ್ಲವಾದರೆ ನಿನ್ನ ಕುತ್ತಿಗೆಯನ್ನೇ ಕತ್ತರಿಸಿ ಬಿಟ್ಟೇನು" (ಕೊಡ್ಲಿ ಎತ್ತುವನು). [೧೫೧]

ಕೊಡಲಿ ಮೇಲೆತ್ತಿದಾಗ ಭಯದಿಂದ, ಭ್ರಮೆಗೊಳಗಾಗಿ ಕೀರ್ತಿಗೆ ರಮಿಸಿದ ಶೀನಪ್ಪಾ ನಿನಗೆ ನೌಕರಿ ಕೊಡಿಸುತ್ತೇನೆ, ನೀನು ನನಗೆ ಗಿರಿವಿಹಾಕಿದ ಆ ಗದ್ದೆಗಳನ್ನು ಬಿಟ್ಟುಬಿಡ್ತಿನಿ, ಸುಮ್ನೆ ಹುಡ್ಗಿನ ಬಿಟ್ಟು ಹೋಗು ಎಂದು ಹೇಳುತ್ತಾನೆ, ಆದರೆ ಕೀರ್ತಿ ಮಾತ್ರ ಯಾವುದಕ್ಕೂ ಆಶೆ ಪಡದೆ ಜ್ಯೋತಿಯ ಮಾನವನ್ನು ಕಾಪಾಡುವಲ್ಲಿ ಅಲ್ಲಿ ಯಶಸ್ವಿ ಯಾಗುತ್ತಾನೆ, ಆಲ್ದಾಳ ಅವರು ಪ್ರೇಕ್ಷಕರಿಗೆ ಇಲ್ಲಿ ಒಂದು ರೀತಿಯಲ್ಲಿ ಸತ್ಯವನ್ನೇ ಹೇಳಿದ್ದಾರೆ. ಹೆಣ್ಣಿಗಾಗಿ ಮನೆ-ಮಠ ಮರ್ಯಾದೆ ಸಹ ಧನದ ಮದವೇರಿದ ಕಾಮುಕರು ಹೇಗೆ ಕಳೆದುಕೊಳ್ಳುತ್ತಾರೆ ಎಂಬುದು ಶೀನಪ್ಪನ ವರ್ತನೆಯಿಂದ ತೋರುತ್ತದೆ. ಮದವೇರಿದವನಿಗೆ ತನ್ನ ಸುತ್ತ-ಮುತ್ತ ಏನು ಇದೆ ಎಂಬುದರ ಅರಿವು ಇರುವುದೇ ಇಲ್ಲ, ಇದೊಂದು ಮಾನವನ ದೌರ್ಬಲ್ಯ ಆದರೆ ಎಲ್ಲರೂ ಹೀಗೆಯೇ ವರ್ತಿಸುತ್ತಾರೆ ಎನ್ನುವ ಹಾಗೆ ಇಲ್ಲ, ಉತ್ತಮರೂ ಸಮಾಜದಲ್ಲಿ ಇದ್ದಾರೆ. ನಮ್ಮ ಹೃದಯದಲ್ಲಿ ಶಾಶ್ವತವಾಗಿರ ಬೇಕಾದದ್ದು ಪ್ರೀತಿ ಮತ್ತು ಸತ್ಯ ಎಂಬುದು ಅರಿತಾಗ ಮನೆ-ಮನ ಬೆಳಗುತ್ತದೆ.

'ಕಣ್ಣಿಟ್ಟ ಕೈಕೊಟ್ಟ' ನಾಟಕದ ಪಾತ್ರಧಾರಿ ಶೀನಪ್ಪ ಕಾಮುಕನೆಂದೇ ಪಟ್ಟ ಗಿಟ್ಟಿಸಿ ಕೊಂಡಿದ್ದರೆ, ಮಗಳು ಆರತಿ ತಾಯಿ ಇಲ್ಲದ ತಬ್ಬಲಿ, ತಂದೆಯ ಅಸಭ್ಯ ನಡತೆಯಿಂದಾಗಿ ಮನನೊಂದು, ಜೀವನದಲ್ಲಿ ಜಿಗುಪ್ಸೆ ತಾಳಿ ಅರೆಹುಚ್ಚಿ ಎಂದು ಅನ್ನಿಸಿಕೊಳ್ಳುವ ಪ್ರಸಂಗ ಎದುರಾಯಿತು, ಆದರೆ ಗ್ರಾಮದ ನಿವೃತ್ತಿ ಹೊಂದಿರುವ ಮಾಸ್ಟರ ರಂಗಪ್ಪನ ಸಾಕು ಮಗಳು ಜ್ಯೋತಿ ಈಗ ಅವಳು ಗ್ರಾಮ ಸೇವಕಿಯ ಉದ್ಯೋಗದಲ್ಲಿದ್ದು ಗ್ರಾಮ ಸುಧಾರಿಸುವಲ್ಲಿ, ಮಹಿಳೆಯರ ಹಕ್ಕುಗಳ ತಿಳುವಳಿಕೆ ಮೂಡಿಸುವಲ್ಲಿ ನಿರತರಾಗಿರುವಂತೆ, ಶೀನಪ್ಪನ ಮಗಳು ಆರತಿಯನ್ನು ಸರಿಯಾಗುವಂತೆ ಮಾಡುವಲ್ಲಿ ಶ್ರಮವಹಿಸಿ ಯಶಸ್ವಿಯಾಗಿದ್ದಾಳೆ, ಆರತಿಯ ತಂದೆ ಶೀನಪ್ಪ ಎಂಥಹ ನೀಚನಾದವನು ಎಂದು ಗೊತ್ತಿದ್ದು ಮತ್ತು ಆತನಿಂದ ಅನುಭವಿಸಿದ ಸಂಕಷ್ಟಗಳನ್ನು ಮರೆತು ಆರತಿಗೆ ಒಳ್ಳೆಯ ಮಾರ್ಗಕ್ಕೆ ತರುವಲ್ಲಿ ನಿರತಳಾದ ಜ್ಯೋತಿಯು ನಿಜವಾಗಿಯೂ ಪರಂಜ್ಯೋತಿ, ಮತ್ತೊಬ್ಬರ ಬಾಳಿನಲ್ಲಿ ಸದಾ ಬೆಳಕಿರಲಿ ಎಂದು ಬಯಸಿದವಳು. ಆಲ್ದಾಳರ ಸಾಮಾಜಿಕ ಕಳಕಳಿ ಈ ನಾಟಕದಲ್ಲಿ ಸಂಪೂರ್ಣವಾಗಿ ಬಳ್ಳಿಯಂತೆ ಹಬ್ಬಿದ್ದು ಮನಕ್ಕೆ ತಂಪು ನೀಡುತ್ತದೆ.

ಕೆಲವು ಕಂಪನಿ ನಾಟಕಗಳಲ್ಲಿ ಅಶ್ಲೀಲತೆ ರಾರಾಜಿಸುತ್ತಿದೆ. ಈ ನಾಟಕ ಆ ಅಪವಾದದಿಂದ ದೂರವಿದೆ ಎಂದು ಹೇಳಲು ಹೆಮ್ಮೆ ಎನ್ನಿಸುತ್ತದೆ. ಪುರುಷ ಪಾತ್ರಧಾರಿಗಳಿಗಿಂತ ಸ್ತ್ರೀಯರಪಾತ್ರಗಳು ನಾಟಕದ ಘನತೆ, ಗಾಂಭಿರ್ಯ ಹೆಚ್ಚಿಸುತ್ತವೆ. ಸ್ತ್ರೀ ಪ್ರಧಾನ ನಾಟಕವೇ ಎಂದರೆ ಸರಿಹೋದಿತು, ನಾಟಕದಲ್ಲಿ ಸ್ತ್ರೀ ಪಾತ್ರಧಾರಿಗಳ ಸಂಭಾಷಣೆ ಹೆಚ್ಚು ದೃಢಚಿತ್ತ ಮತ್ತು ಸ್ತ್ರೀಯರಿಗೆ

ತಕ್ಕುದಾದ ಮಾತುಗಳಿಂದಲೇ ಕೂಡಿವೆ. ಇಲ್ಲಿ ಭಾರತಿ, ಆರತಿ, ಜ್ಯೋತಿ ಪಾತ್ರಗಳ ಮಾತುಗಳನ್ನು ಓದಿ,

**ಭಾರತಿ:** (ಜ್ಯೋತಿಯನ್ನು ಉದ್ದೇಶಿಸಿ) ನಮಸ್ಕಾರಮ್ಮಾ! ಜಗದ ಸೇವೆಗಾಗಿ ದುಡಿಯುವ ನಿಮ್ಮಂಥ ನಾರಿಯರು ಯಾವ ಕ್ಷೇತ್ರದಲ್ಲಿದ್ದರೂ, ನಿಮ್ಮ ಕರ್ತವ್ಯದ ಕೂಗು ಭಾರತದ ಮೂಲೆ ಮೂಲೆಗಳಲ್ಲಿ ಕೇಳಿದಾಗ, ಈ ಜಗವು ಸಗ್ಗವಾಗುವುದು.

**ಆರತಿ:** ಹೆಣ್ಣು ಕೇವಲ ಭೋಗ ನೀಡುವ ಯಂತ್ರವೆಂದು ತಿಳಿದಿರುವ ಈ ಅಜ್ಞ ಸಮಾಜಕ್ಕೇನೆನ್ನಬೇಕೊ? ಹೆಣ್ಣಿನ ಬಣ್ಣ ತಿಳಿಯದು ಯಾವುದೇ ಕ್ಷೇತ್ರದಲ್ಲಿ ಕಾಲಿಟ್ಟರೂ ಅಲ್ಲಿ ದುಡಿಯುತ್ತಿರುವಾಗ ಆ ಹೆಣ್ಣಿನ ಸೌಂದರ್ಯಕ್ಕೆ ಮಾರು ಹೋಗಿ ಇಲ್ಲದ ಕಲಂಕದ ಮಸಿ ಲೇಪಿಸಿದಾಗ ಅವಳ ಬಾಳಿನ ಗತಿ ಏನಾದೀತು ಎಂಬ ಭಾವನೆಯಿಲ್ಲದ ಗಂಡಸರಿಗೆ ಕಂಡು ನನಗೆ ಬಹಳ ದುಃಖವಾಗುತಿದೆಯಮ್ಮಾ.

"ಕಣ್ಣಿಟ್ಟ ಕೈ ಕೊಟ್ಟ" ನಾಟಕದಲ್ಲಿ ಎಲ್ಲಿಯೂ ಅಶ್ಲೀಲತೆಗೆ ಆಸ್ಪದವಿಲ್ಲ. ಭಾಷೆ ಸರಳವಾಗಿದೆ ಈ ನಾಟಕದಲ್ಲಿ ಬಳಕೆಗೆ ಬಂದಿರುವ ವಿವಿಧ ಸಾಹಿತಿಗಳು ಬಳಸಿದ ವಚನಗಳು, ದಾಸರಪದ ಶಿಶುನಾಳರ ಪದ, ಭಗವದ್‌ಗೀತೆ ಶ್ಲೋಕ, ಮಂಕುತಿಮ್ಮನ ಕಗ್ಗಂಟುಗಳು ಇತ್ಯಾದಿ ಮಾತುಗಳು ಬಳಸಿರುವುದು ಆಲ್ದಾಳರು ಹೊಂದಿರುವ ಸಾಹಿತ್ಯದ ಆಳವನ್ನು ಗಮನಿಸಬಹುದು.

ಸಾಧು ವೇಷದಲ್ಲಿರುವ ವ್ಯಕ್ತಿ ಶೀನಪ್ಪನಲ್ಲಿ ಹಿಂದೆ ದುಡಿಯಲು ಆಳಾಗಿದ್ದ ಶಿವಣ್ಣನೇ ಇಂದು ಶಿವನ ಲಾಂಛನ ಧರಿಸಿ ನಾಟಕಕ್ಕೆ ಸುಖಾಂತ್ಯ ಹೇಳುವ ಸಾಕ್ಷಿಯಾಗಿ ನಿಂತಿದ್ದಾನೆ. ತಾವ್ಯಾರು ಎಂಬುದನ್ನೇ ಅರಿಯದವರನ್ನು ಸೇರಿಸಿ ಗುರುತು ಹೇಳಿದ್ದಾನೆ. ಭಾರೀ ಅನಾಹುತವಾಗುವುದನ್ನು ತಡೆಹಿಡಿದಿದ್ದಾನೆ. ತನ್ನ ಸಾಹುಕಾರ ಶೀನಪ್ಪನ ಕಪಟತನವನ್ನು ಹೊರಗಾಕಿದ್ದಾನೆ. ಮುಖ್ಯವಾಗಿ ಹೇಳಬೇಕೆಂದರೆ ಅವನ ಕರಾಳರೂಪ ಬಹಿರಂಗಕ್ಕೆಳಿದಿದ್ದಾನೆ. ಅವನ ತಪ್ಪನ್ನು ತಿದ್ದಿಕೊಳ್ಳಲು ಅವಕಾಶ ಒದಗಿಸಿದ್ದಾನೆ. ಒಬ್ಬ ಆಳು ತನ್ನ ಸಾಹುಕಾರನ ಋಣ ತೀರಿಸಲು ಎಂಬಂತೆ, ಜೀವನದ ಕಹಿಗಳನ್ನೆಲ್ಲ ನೋಡಿ, ಸಂಕಟವನ್ನು ಮನದಲ್ಲಿ ಹುದುಗಿಸಿಟ್ಟು ಅಂತ್ಯದಲ್ಲಿ ಎಲ್ಲರ ಸಮ್ಮುಖದಲ್ಲಿ ತೆರೆದಿಟ್ಟಾಗ ಉಂಟಾದ ದಿಗ್ಭ್ರಮೆ, ಆಶ್ಚರ್ಯ ಅಪಾರವಾಗಿತ್ತು, ಎಲ್ಲ ಗೂಢಚರ್ಯೆ ಬಯಲಾದಾಗ ತಿಳಿಯಾದ ನೀರಿನಂತೆ ಮನಸ್ಸು ತಂಪಾಯಿತು.

ವರದಕ್ಷಿಣೆ ಪಿಡುಗು ಕಾನೂನಿಂದ ಅಳಿಸಲು ಸಾಧ್ಯವಿಲ್ಲ ಅದು ಮನದಾಳದಿಂದ ಬೇರುಸಹಿತ ಕಿತ್ತೊಗೆಯಲು ನಾಟಕದಲ್ಲಿಯ ಪಾತ್ರ ಹೇಗೆ ಪರಿಚಯಿಸುತ್ತದೆ ಎಂಬುದು ಗಮನಾರ್ಹ.

**ಮೂರ್ತಿ:** ಈ ವರದಕ್ಷಿಣೆ, ವರೋಪಚಾರ ನನಗೆ ಬೇಕಾಗಿಲ್ಲ ಗುರುಗಳೆ, ಮೇಲಾಗಿ ನಮ್ಮ ಸರ್ಕಾರವೋ ಇದನ್ನು ಖಂಡಿಸಿದೆ. ಹೆಣ್ಣು ಹೆತ್ತ ತಂದೆ–ತಾಯಿಗಳ ಗೋಳನ್ನು ಕಣ್ಣು ತೆಗೆದು ನೋಡದೇ ಸಹಿಸದೇ ಶ್ರೀಮಂತ ತರುಣರು, ಬಡಕನ್ಯೆಯನ್ನು ಮದುವೆಯಾಗಿ, ವರದಕ್ಷಿಣೆಯ ವಿರುದ್ಧ ಹೋರಾಡಹತ್ತಿದ್ದಾರೆ ಅಹರ್ನಿಸಿ.

ಮಹಿಳೆಯರಿಗೆ ಮಾಂಗಲ್ಯವೇ ದೊಡ್ಡ ಭಾಗ್ಯ, ಅದರ ರಕ್ಷಣೇಯೇ ಮಹಿಳೆಯ ಧರ್ಮ. ಮಾಂಗಲ್ಯದ ಮಹತ್ವ ಕುರಿತು ಸಕಲರ ಕಣ್ಣುತೆರೆಯುವಂತೆ ತಿಳಿಸಿ ಹೇಳಿದ್ದಾರೆ ನೋಡಿ.

**ರಂಗಪ್ಪ:** (ಅಳುತ್ತ) "ಏನೆಲ್ಲವೂ ಮಾಡಿದರೂ ಸಹಿತ ನಾ ಸಹಿಸಿಕೊಳ್ಳುವೇನು ಮೂರ್ತಿ ಆದರೆ... ಆದರೆ ಈ ತಾಳಿಯನ್ನು ಹರಿದು ಕೊಳ್ಳುವುದು ಮಾತ್ರ ಮಾಡಬೇಡ ನಿನ್ನ ಕಾಲಿಗೆ ಬಿದ್ದು ಬೇಡಿಕೊಳ್ಳುತ್ತೇನೆ ನಿನ್ನ ನೆರಳಲ್ಲಿ ನನ್ನ ಮಗಳು ಬಾಳದಿದ್ದರೂ ನೀಕಟ್ಟಿದ ತಾಳಿಯ ನೆರಳಿನಲ್ಲಿ ಬಾಳಲಿ.. (ಮೂರ್ತಿ ಹರಿದುಕೊಳ್ಳಲು ಹೋಗುವನು) ತಾಳು ಮೂರ್ತಿತಾಳು, ಈ ತಾಳಿಯ ಮಹತ್ವ ಏನಾದರೂ ನಿನಗೆ ಗೊತ್ತಿದೆಯೆ? ಅಗ್ನಿ ಸಾಕ್ಷಿಯಾಗಿ ಕೈ ಹಿಡಿದು ಗಂಡು ತಾನೆಷ್ಟು ತಪ್ಪು ಮಾಡಿದರೂ ನೀ ತಾಳಬೇಕೆಂದು ತಾಳಿ ಕಟ್ಟಿದಾಗಲೇ, ತಾಳಿ ಬಾಳು ಎಂದು ಹೇಳುತ್ತಿದೆ ಈ ತಾಳಿ! ತತ್ವ. ತಾವರೆಯ ಹೂವಾಗಿ ಬಾಳೆಂದು ಹೆಣ್ಣಿಗೆ ಹೇಳುತ್ತಿದೆ ಈ ತಾಳಿ! ಕಣ್ಣಿಟ್ಟ ಕಾಮ ವಿಕಾರವ ಮದೋನ್ಮತ್ತರಿಗೆ, ತಾಳ್ಮೆಯಿಂದ ನಾನು ಗರತಿ ಎಂದು ಹೇಳುತ್ತಿದೆ. ಈ ತಾಳೀ!!! ಅಲ್ಲದೆ ಏಟು ಹಾಕುವ ಪತ್ತಾರನ ಕೈಯಿಂದ ಪೆಟ್ಟುತಿಂದು, ಅತ್ತೆ ಮಾವಂದಿರಗೆ ಬೆನ್ನುಕೊಟ್ಟು ನನ್ನಂತೆ ತಾಳಿ–ಬಾಳಿರಿ ಎಂದು ಸಂದೇಶ ಬೀರುತಿದೆ ಈ ತಾಳಿ!

**ಜ್ಯೋತಿ:** ಪಂಚಭೂತಗಳ ಸಾಕ್ಷಿಯಾಗಿ ಹಸಿಮಣೆಯ ಮೇಲೆ ಕೂತು ಕಟ್ಟಿದವರು ನೀವಿರುವಾಗ, ನಾನೇಕೆ ನನ್ನ ಕೊರಳಲ್ಲಿನ ತಾಳಿ ತೆಗೆದುಕೊಡಲಿ.

ಮೂರ್ತಿಗೆ ತಾನು ಮಾಡಿರುವ ತಪ್ಪಿನ ಅರಿವಾಗುತ್ತದೆ, ಪಶ್ಚಾತಾಪ ಪಡುತ್ತಾನೆ. ಜ್ಯೋತಿಯ ಕಾಲಿಗೆರಗಿ, "ನೀಚ ಶೀನಪ್ಪನ ಮಾತುಕೇಳಿ, ಕೊಡಲಾರದ ಆಪಾದನೆಕೊಟ್ಟೆ, ಪಂಚಭೂತಗಳ ಸಾಕ್ಷಿಯಾಗಿ ನಾಕಟ್ಟಿದ ತಾಳಿಯನ್ನೇ ಕಿತ್ತುಕೊಂಡೆ, ನನ್ನನ್ನು ಕ್ಷಮಿಸು ಜ್ಯೋತಿ ಕ್ಷಮಿಸು (ಸ್ಥಂಭಿಭೂತಳಾಗಿ ನಿಲ್ಲುವಳು) ಮಾತಾಡು ಜ್ಯೋತಿ ಮಾತಾಡು, ಮಾಡಿದ ತಪ್ಪೊಪ್ಪಿಕೊಂಡಾಗ ಕ್ಷಮಿಸುವುದು ಮಾನವಂತರ ಸಹಜಧರ್ಮ, ಹೆಣ್ಣು ಸಹನೆಯ ಶ್ರೀಶಕ್ತಿ. ನಾನು ಕಟ್ಟಿರುವ ತಾಳಿ ಕಸಿದುಕೊಂಡಿದ್ದೇನೆ ವಿನಾ ಅಂತರಾತ್ಮಸಾಕ್ಷಿಯಾಗಿ ಕಟ್ಟಿದ ತಾಳಿ ಮಾತ್ರ ಕಸಿದುಕೊಳ್ಳಲಾರೆನು".

ಅಂತಿಮವಾಗಿ ಭಾರತಿ ತನ್ನ ಪತಿ ಶೀನಪ್ಪನನ್ನು ಅಪ್ಪಿಕೊಂಡಳಾದರೂ ಅದು ಕ್ಷಣಿಕವಾಗಿತ್ತು, ಸಂಸಾರದಲ್ಲಿ ಜಿಗುಪ್ಸೆಗೊಂಡ ಶೀನಪ್ಪನನ್ನು ಕಾವಿ ಬಟ್ಟೆತೊಡಿಸಿ ದೀಕ್ಷೆ ಪಡೆದು ಸ್ವಾಮಿಯಾಗಲು ಭಾರತಿ ಅಪ್ಪಣೆ ಕೊಡುವುದು, ನಾಟಕ ಸುಖಾಂತ್ಯ ಕಂಡರೂ ಭಾರತಿಯ ತ್ಯಾಗ ಗುಣ, ಪತಿಯ ಮೇಲಿರಿಸಿದ ಭಕ್ತಿ, ವಿಶ್ವಾಸ ಮೆಚ್ಚಲೇಬೇಕು. 'ಸುಖ ಬರುವುದು ಹಂಚಿಕೊಳ್ಳೋಕೆ ದುಃಖ ಬರುವುದು ನುಂಗಿಕೊಳ್ಳೋಕೆ ಎಂಬ ಮಾತನ್ನು ಭಾರತಿ ಸಾಬೀತು ಪಡಿಸಿದ್ದಾರೆ.

ಚದುರಿ ಹೋಗಿದ್ದವರು ಕೊನೆಯಲ್ಲಿ ತಮ್ಮವರನ್ನು ಪಡೆದು ಸುಖ-ಜೀವನದಲ್ಲಿ ತೇಲಾಡುವಂತಾದುದು ಪ್ರೇಕ್ಷಕರಿಗೆ ನ್ಯಾಯ ದೊರಕಿಸಿದಂತಾಯಿತು.

'ಕಣ್ಣಿಟ್ಟ ಕೈಕೊಟ್ಟ' ನಾಟಕ ಪ್ರಕಟವಾದದ್ದು ೧೯೭೨ರಲ್ಲಿ ನಾಲ್ವತ್ತು ವರ್ಷಗಳ ಹಿಂದೆ ನಾಟಕ ಕೃತಿ ರಚಿಸಿದ್ದರೂ ಅದು ಇಂದಿಗೂ ಪ್ರಸ್ತುತ ಎನ್ನಿಸುತ್ತದೆ. ಅಂದಿನ ಸಮಾಜ ವ್ಯವಸ್ಥೆ ಮೇಲೆ ಕ್ಷ-ಕಿರಣ ಬೀರುವ ರೀತಿಯಲ್ಲಿ ನಾಟಕಕಾರರು ಪಾತ್ರಗಳನ್ನು ಹೆಣೆದಿದ್ದಾರೆ. ಪಾತ್ರಗಳ ನಡತೆಯಿಂದ, ಮಾತಿನಿಂದ ಅಂದಿನ ಸಾಮಾಜಿಕ ವ್ಯವಸ್ಥೆಯನ್ನು ಸುಲಭವಾಗಿ ಗ್ರಹಿಸಬಹುದಾಗಿದೆ. ಈ ನಾಟಕವೊಂದು ಕಾಡುವ, ಕರಗುವ, ದಾರಿ ತೋರುವ ಆತ್ಮಜ್ಞಾನ, ಸ್ವಗತ ಗೀತೆ.

ಭಾಷೆಯ ದೃಷ್ಟಿಯಿಂದ ಶೀನಪ್ಪ ಮೋಹದ ಗುಂಗಿನಲ್ಲಿಯೇ ಸರಸ ಸಲ್ಲಾಪದ ಪ್ರೇಮದ ನುಡಿಗಳನ್ನೇ ಹೆಚ್ಚಾಗಿ ಬಳಸುತ್ತಾನೆ. ಭಾರತಿ ಗೃಹಿಣಿಗೆ ತಕ್ಕಹಾಗೆ ಮಾತಾಡುತ್ತಾಳೆ. ತನ್ನ ಸಾಧ್ವಿತನಕ್ಕೆ ಅನುಗುಣವಾಗಿಯೆ ಹಿತಮಿತವಾದ, ನಯವಾದ ಭಾಷೆಯನ್ನೇ ಬಳಸಿ ಸ್ತ್ರೀ ಕುಲಕ್ಕೆ ಹೆಸರು ತರುತ್ತಾಳೆ. ಜ್ಯೋತಿಯಪಾತ್ರ ಜ್ಯೋತಿಯಂತೆ ಬೆಳಗುತ್ತದೆ ಆರತಿ ಮತ್ತು ಅವಳ ತಂದೆ ಶೀನಪ್ಪ ಮುಕ್ತಿಯ ಮಾರ್ಗ ಅನುಸರಿಸುತ್ತಾರೆ. ರುದ್ರ-ಭದ್ರಿ ಮಾತುಗಳು ಹಾಸ್ಯ ಚೌಕಟ್ಟಿನಲ್ಲಿಯೇ ಮೂಡಿಬಂದು ನಾಟಕಕ್ಕೆ ಮನರಂಜನೆ ನೀಡುತ್ತವೆ. ಅವರಿಬ್ಬರ ಹಾಸ್ಯದ ಸಂಭಾಷಣೆಗಳು ಬರೀ ಸಂಭಾಷಣೆಯಾಗಿರದೇ ಮನುಷ್ಯನಲ್ಲಿ ಅಡಗಿಕೊಂಡಿರುವ ಚಂಚಲಚಿತ್ತವನ್ನು ಹೊರತರುವಂತೆ ನೋಡಿಕೊಳ್ಳುತ್ತವೆ. ಕೇವಲ ಹಾಸ್ಯವೆಂದು ನಕ್ಕುಬಿಡದೆ ತಾನು ಮಾಡಿದ ಮಾಡುತ್ತಿರುವ ವಿಚಾರಗಳಿಗೆ ಒಳ್ಳೆಯ ಮೂರ್ತ ಸ್ವರೂಪ ಕಲ್ಪಿಸಬೇಕೆನ್ನುವುದೇ ಹಾಸ್ಯದ ಒಳಸುಳಿಯಾಗಿರುತ್ತದೆ.

ಕೃತಿಯಲ್ಲಿ ಹಾಸ್ಯದ ಹೊನಲು ಹರಿದರೂ ಬರುವ ಪಾತ್ರಗಳ ವಿಭಿನ್ನತೆಯೊಂದಿಗೆ ಸಾಮಾಜಿಕ ಪ್ರಶ್ನೆಗಳಿರುತ್ತವೆ. ಮುಂದೆ ಅದರಲ್ಲೇ ಉತ್ತರ ಇರುತ್ತದೆ. ಆ ಸಾಮಾಜಿಕ ಜನರ ಬದುಕಿನಲ್ಲಿ ಸಮಸ್ಯೆಗಳು ಸಾಕಷ್ಟು ಇದ್ದರೂ, ಮಾನವ-ಮಾನವನ ನಡುವೆ ಇರುವ ಪವಿತ್ರ ಸಂಬಂಧಗಳ ಬಗ್ಗೆ ಹಾಸ್ಯದ ಮೂಲಕವೇ ಅದಕ್ಕೊಂದು ಪರಿಹಾರ ಸೂಚಿಸುವ ವಿಶೇಷತೆ ನಾಟಕಕಾರರ ಬರಹದಲ್ಲಿದೆ. 'ತನ್ನತಾ, ಪರರಂತೆ ಬಗೆದೊಡೆ ಕೈಲಾಸ ಬಿನ್ನಾಣವಕ್ಕೂ ಸರ್ವಜ್ಞ' ಎಂಬಂತೆ ಎಲ್ಲರಲ್ಲೂ ಒಂದಾಗಿ ಎಲ್ಲರಿಗೂ ಪ್ರಿಯರಾಗಿರುವ ಆಲ್ದಾಳರು ರಂಗ ಕಲಾವಿದರ ಬಳಗದಲ್ಲೇ ಅಪರೂಪದ ವ್ಯಕ್ತಿ.

ಒಟ್ಟು ಹನ್ನೆರಡು ಪಾತ್ರಗಳುಳ್ಳ ಈ ನಾಟಕದಲ್ಲಿ ನಾಲ್ಕು ಸ್ತ್ರೀ ಪಾತ್ರಗಳಿದ್ದು ಇಪ್ಪತ್ನಾಲ್ಕು ದೃಶ್ಯಗಳು ವಿಜೃಂಭಿಸಿವೆ. ಯಾವ ದೃಶ್ಯಗಳನ್ನು ಕಡೆಗಣಿಸುವಂತಿಲ್ಲ. ಈ ನಾಟಕ ವೃತ್ತಿರಂಗ ಭೂಮಿಗೆ ಬರೆದದ್ದಾಗಿದೆ ಆಗಿನ ಕಾಲದಲ್ಲಿ ಪ್ರಧಾನಿ ಶ್ರೀಮತಿ ಇಂದಿರಾಗಾಂಧೀ ಅವರ ಆಳ್ವಿಕೆಯಲ್ಲಿ ಬಡವರಿಗಾಗಿ ಜಾರಿಗೊಳಿಸಿದ್ದ ೨೦ ಅಂಶಗಳ ಸೂತ್ರ ಕಾರ್ಯಕ್ರಮಗಳ ಬಗ್ಗೆಯೂ ಪ್ರಸ್ತಾಪಿಸಲಾಗಿದೆ.

# ನಮಸ್ಕಾರ

**(ಪತ್ತೆದಾರಿ ನಾಟಕ)**

ಸುಮಾರು ನಾಲ್ವತ್ತುಏಳು ವರ್ಷಗಳ ಹಿಂದೆ ಅಂದರೆ ಕ್ರಿ.ಶ. ೧೯೬೮ರಲ್ಲಿ ನಾಟಕಕಾರ ಆಲ್ದಾಳ ಅವರು "ನಮಸ್ಕಾರ" ನಾಟಕವನ್ನು ಬರೆದರು ಇದೊಂದು ಪತ್ತೆದಾರಿ ಕತೆಯಾಗಿದೆ ಆ ಕಾಲಕ್ಕೆ ಇದೊಂದು ವಿನೂತನ ಪ್ರಯೋಗವೆಂದೇ ಹೇಳಬಹುದು ಕಥೆಯ ಕೊನೆಯನ್ನು ಮೊದಲು ಹೇಳಿ ಅನಂತರ ಹಿಂದಿನ ಕಥೆ ಹೇಳುವ ಸಿನಿಮಾದ ಪ್ಲಾಷ್ಯಬ್ಯಾಕ್ ತಂತ್ರವನ್ನೂ ಆಗಲೇ ನಾಟಕದಲ್ಲಿ ಆಲ್ದಾಳರು ಚಾಲ್ತಿಗೆ ತಂದಿದ್ದರು ಎಂಬುದು ವಿಶೇಷ.

ಅಮೃತಗೌಡ ಊರ ಮುಖಂಡ, ರಾಜಕಾರಣಿ, ಆದರೆ ಮಹಾಧೂರ್ತ, ಸ್ವಂತ ತಮ್ಮನನ್ನೇ ದ್ವೇಷಿಸುತ್ತಿದ್ದ, ಅನೀತಿ, ಅತ್ಯಾಚಾರಗಳಿಗೆ ಕುಮ್ಮಕ್ಕು ನೀಡುತ್ತ ಅಧಿಕಾರದ ದರ್ಪ ತೋರುತ್ತಿದ್ದ, ವಿಶ್ವಾಸಘಾತುಕ. ಮನೆಯ ಮಡದಿ ಸಾಧ್ವಿ ನೀಲಾದೇವಿಯ ಮೇಲೆ ಸಲ್ಲದ ಆರೋಪ ಹೊರೆಸಿ ಮನೆಯಿಂದ ಹೊರಗಟ್ಟಿದ ರಾಕ್ಷಸ, ಹೆಸರು ಮಾತ್ರ ಅಮೃತಗೌಡ! ಆದರೆ ದೇಹದ ತುಂಬೆಲ್ಲಾ ವಿಷವೇ ಹರಿಯುತ್ತದೆ. ಮಾವನ ಆಸ್ತಿಯನ್ನು ನುಂಗಿ ನೀರು ಕುಡಿಸಿದ.

ಅಮೃತಗೌಡ ಪಕ್ಕಾ ರಾಜಕಾರಣಿ ಗಿಡದಿಂದ ಗಿಡಕ್ಕೆ ಹಾರ್‍ಯಾಡೂ ಮಂಗ್ಯಾನ ಚಟ ಅಂಟಿಸಿಕೊಂಡವ! ಗೆದ್ದೆತ್ತಿನ ಬಾಲ ಹಿಡಿಯುವವ! ಮುಂದೆಕೇಳಿ!!

"ಪ್ರತಾಪ– ಇದು ರಾಜಕಾರಣ, ಇದೆಯೋ ಇಂದಿನ ರಾಜಕಾರಣ ಅಂದ್ರ ಬೀದಿ ಬಸವೇರ ಮಂಚಿದ್ದ ಹಾಗೆ ತಿಳೀತೇ? ಅಲ್ಲೊ ಶರಣಾ(ಗೌಡನ ಮನೆ ಆಳು) ಈಗಿದ್ದ ಮಂತ್ರಿ, ಮೆಂಬರುಗಳು ಏನು ಮಾಡಿಲ್ಲಾಂತ ತಿಳದೀದಿ ನೀನು? ಖೂನಿಮಾಡಿಸ್ಯಾರ, ಕಳವು ಮಾಡಿಸ್ಯಾರ, ಒಬ್ಬರ ಮನಿ ಆಸ್ತಿ ಒಯ್ದು ಇನ್ನೊಬ್ಬರಿಗೆ ಮಾಡಿಸ್ಯಾರ, ಜೇಲ ಬಿದ್ದಾರ".[೧೫೨]

ನಾಟಕದ ಮುಂದಿನ ಕಥೆಯನ್ನು, ರಾಜಕಾರಣಿಗಳ ಒಡನಾಡಿಗಳ ಮೂಲಕವೇ ಬಿಚ್ಚಿಸುವ ಪ್ರಯತ್ನ ನಡೆಸಿದ್ದಾರೆ. ಇದೊಂದು ಮುನ್ಸೂಚನೆ ಮಾತ್ರ ರಾಜಕೀಯ ಹೊಲಸಿನಲ್ಲಿ ಎಲ್ಲವೂ ಹೇಸಿಕೆಲಸವೇ ಹೆಚ್ಚಾಗಿರುತ್ತದೆಂಬುದು ನಿಜ. ಇದನ್ನೇ ಅಮೃತ ಗೌಡನ ಗೆಳೆಯ ಪ್ರತಾಪನ ಮಾತಿನಿಂದ ತಿಳಿದುಬರುತ್ತದೆ ಅಮೃತಗೌಡನ ಸಹೋದರ ಆನಂದ, ಪ್ರದೀಪ ದೇಸಾಯಿ ಜೊತೆ– ಮಾತನಾಡುತ್ತಿರುವ ಸಂದರ್ಭದಲ್ಲಿ ಪ್ರದೀಪ.... ಊರ ಹಿಂದಿನ ಹಾಳು ದೇಗುಲದಲ್ಲಿ ಕೊಲೆಯಾದವರಾರು? ಮತ್ತೆ ಕೊಲೆಗಡುಕನಾರು? ಎಂದು ಕೇಳುತ್ತಾನೆ, ಅದಕ್ಕೂ ಸಮಯಬೇಕು. ಇಡೀ ದೇಶದ ಶ್ರುತಿಯೇ ತಪ್ಪಿಹೋಗಿದೆ ಈ ಅಡಿಪಾಯವಿಲ್ಲದ ರಾಜಕಾರಣ ಬಂದ ಮೇಲೆ ಎಂದುಸುರುತ್ತಾನೆ.

ಅಮೃತಗೌಡನ ಹೆಂಡತಿ ನೀಲಾ ಪತಿಭಕ್ತಿ, ಬಡವರ ಬಗ್ಗೆ ತುಂಬಾಕಾಳಜಿ, ಯಾವ ವ್ಯಾಮೋಹ ಅವಳನ್ನು ಅಂಟಿಕೊಳ್ಳಲು ಸಾಧ್ಯವಿಲ್ಲ ಪತಿಯೇಪರಮೇಶ್ವರ ಎಂದು ಸದಾ ಪತಿಯ

ಬಗ್ಗೆ ಚಿಂತಿಸುತ್ತಾಳೆ ವಾಮಮಾರ್ಗ ಅನುಸರಿಸುವ ಪತಿಯನ್ನು ಖಂಡಿಸುತ್ತಾಳೆ. ಲಂಚಗುಳಿತನ ವಿರೋಧಿಸುತ್ತಾಳೆ ಬಡವರ ರಕ್ತ ಹೀರುವ ಕೆಟ್ಟಕಾರ್ಯದಿಂದ ದೂರವಿರಲು ಪತಿಯನ್ನು ಅಂಗಲಾಚಿಸುತ್ತಾಳೆ.

ನೀಲಾ–ನೊಂದ ಬಡವರ ಹೃದಯಗಳಿಂದು ಶಪಿಸುತ್ತಿವೆ ಅಡಿಗಡಿಗೆ ಇವನ ವಂಶ ನಿರ್ವಂಶವಾಗಲೆಂದು, ಸಾವಿರಾರು ಕರ್ಕಸ ಸ್ವರಗಳು ಕೇಳಿಬರುತ್ತಿವೆ ಇವನ ದೇಹ ಹೊಲೆ ಹಾದರದ ಪಿಂಡವೆಂದು : ಸಾವಿರಾರು ಹೆಂಗರಳುಗಳು ಮಿಡಿಯತ್ತಿವೆ. ಇವನೊಬ್ಬ ಕಾಮೋನ್ಮಾದದ ಕತ್ತೆಯೆಂದು ಸಾವಿರಾರು ಜನರು ಟಾಳಿ ಹೊಡೆದು ನಗು ನಗುತ್ತ ಬೊಟ್ಟು ಮಾಡಿ ತೋರಿಸುತ್ತಾರೆ 'ಇವನೆಂಥ ಲೀಡರ' ಎಂದು [೧೫೩] ಪತಿ ಅಮೃತಗೌಡನ ಮೇಲೆ ಸತಿ ನೀಲಾಳ ಪ್ರೀತಿ, ಪ್ರೇಮ ಇದೆ ಎಂದಾಕ್ಷಣ ಆತನ ಎಲ್ಲಾ ದುರ್ವ್ಯಶನಗಳಿಗೆ ತೆಪ್ಪಗಿರದೇ ಕಟುವಾಗಿ ಟೀಕಿಸುತ್ತಾಳೆ. ನಿಜವಾಗಿಯೂ ಇದನ್ನು ಮೆಚ್ಚಲೇ ಬೇಕು. ಸಮಾಜಸುಧಾರಿಸಬೇಕಾದರೆ ಹೆಣ್ಣು ಸಂಸಾರ ಹಾಳು ಮಾಡುವ ಪುರುಷರ ಎಲ್ಲಾ ದುಷ್ಟ ವೃತ್ತಿಗಳಿಗೆ ಕಡಿವಾಣ ಹಾಕಲು ಎದೆಸೆಟಿಸಿ ನಿಲ್ಲಬೇಕು. ನೀಲಾ ಪತಿಯ ವಿರುದ್ಧ ತಿರುಗಿ ಬಿದ್ದಿರುವುದು ಮಹಿಳೆಯರ ಉತ್ತಮ ಸಂಸ್ಕೃತಿಗೆ ಚಿನ್ನದ ಲೇಪಕೊಟ್ಟಂತಿದೆ. ಅಡ್ಡ ದಾರಿಯಲ್ಲಿ ಅಡಿಯಿಟ್ಟ ಪತಿಯನ್ನು ತಿದ್ದುವ ಸತಿಗೆ ಅಲ್ಲದೆ ಮತ್ತಾರಿಗಿರುತ್ತದೆ. ಇದು ನಾಟಕಕಾರ ಆಲ್ದಾಳರ ನೀತಿ ಮತ್ತು ನ್ಯಾಯದ ನುಡಿ.

ಭ್ರಷ್ಟ ಅಮೃತಗೌಡ ತನ್ನ ಸತಿ ನೀಲಾಳನ್ನೇ ಮನೆಯಿಂದ ಬೀದಿಗೆ ಅಟ್ಟುತ್ತಾನೆ. ತವರು ಮನೆ ಸೇರಿದರೂ ಅಲ್ಲಿ ಅವಳು ತಂದೆ ವಿರುಪಾಕ್ಷಪ್ಪ ಸಮೇತ ಕಹಿಬಡತನ ದೊಂದಿಗೆ ಹೋರಾಟನಡೆಸುತ್ತಿರುವುದನ್ನು ಕಂಡಾಗ ದೈವದ ಮುಂದೆ ಯಾರ ಆಟ ಸಾಗುವುದಿಲ್ಲ ಎಂದು ಮನಸ್ಸಿಗೆ ಅನ್ನಿಸದೇ ಇರಲಾರದು. ಎಲ್ಲವೂ ಕಳೆದುಕೊಂಡು ಇದ್ದು ಸತ್ತಂತಿರುವ ನತದೃಷ್ಟ ವಿರುಪಾಕ್ಷಪ್ಪ.

ಅಳಿಯ ಅಮೃತಗೌಡನಿಂದ ಮೋಸಹೋದ ಮಾವ ವಿರುಪಾಕ್ಷಪ ತನ್ನಲ್ಲಿದ್ದ ಆಸ್ತಿಯನ್ನೆಲ್ಲ ಅಳಿಯನ ಹೆಸರಿಗೆ ಕೊಟ್ಟು ಬೀದಿಪಾಲಾಗುತ್ತಾನೆ. ಅಡವಿಗೆ ಹೋಗಿ ಕಟ್ಟಿಗೆ ತಂದು, ಮಾರಾಟ ಮಾಡಿ ಮಗಳು, ಮೊಮ್ಮಗ ಶಿವಾನಂದನ ಜೊತೆ ಹೊಟ್ಟೆಹೊರೆದು ಕೊಳ್ಳುತ್ತಾರೆ, ಸಮಾಜ ಘಾತುಕರು ಒಳ್ಳೆಯವರ ಮಾನ ಹೇಗೆ ಹರಾಜು ಹಾಕುತ್ತಾರೆ ಎಂಬುದಕ್ಕೆ ದುಷ್ಟ, ಕುತಂತ್ರಿ ಗೌಡನ ದುಷ್ಟ ಕೆಲಸವೇ ಮುಖ್ಯ ಕಾರಣವಾಗುತ್ತದೆ.

ತಾನೊಂದು ಬಗೆದರೆ ದೈವವೊಂದು ಬಗೆಯಿತು ಎನ್ನುವಂತೆ ಹಾಯಾಗಿದ್ದು ಶಿಕ್ಷಣ ಪಡೆದು ಮುಂದೆ ಬರಬೇಕಾದ ಶಿವಾನಂದ ತನ್ನ ತಂದೆ ಯಾರು ಎಂದು ತಿಳಿಯದೆ, ಅದೇ ಹೆತ್ತ ತಂದೆಯ ಮನೆಯಲ್ಲಿ ಆಳಾಗಿ ದುಡಿಯಲು ಮುಂದಾಗುತ್ತಾನೆ. ಇದು ವಿಧಿಯ ಲಿಖಿತ!

ರಂಗಭೂಮಿಯ ಮೇಲೆ ಪಾತ್ರಗಳನ್ನು ಸೃಷ್ಟಿಸುವುದು ಸುಲಭವಾದುದಲ್ಲ ಅನುಭವಿಕ ನಾಟಕಕಾರರಾಗಿರುವ ಎಲ್.ಬಿ.ಕೆ.ಆಲ್ದಾಳ ಅವರಂಥವರಿಂದಲೇ ಮಾತ್ರ ಸಾಧ್ಯ! ಬಾಲ್ಯದಲ್ಲಿ ನಾಟಕದ ಗೀಳು ಹಚ್ಚಿಕೊಂಡಾಗಲಿಂದ ಇವತ್ತಿನವರೆಗೂ ರಂಗಭೂಮಿಯಲ್ಲೇ ಸಕ್ರಿಯರು,

‘ರಂಗಭೂಮಿ ನನ್ನ ಜೀವದ ಉಸಿರು’ ಅನ್ನುವ ನಾಟಕಕಾರರ ಮಾತಿದು. ನಾಟಕಕ್ಕೆ ಜೀವನದ ದಿಕ್ಕು ಬದಲಿಸುವ ಶಕ್ತಿ ಇದೆ. ಸಾಮಾಜಿಕವಾಗಿ ಜಾಗೃತಿ ನೀಡುವ, ಸಂದೇಶಕೊಡುವ ದೃಶ್ಯಮಾಧ್ಯಮ. ನಾಟಕ ಎಂದರೆ ಮನರಂಜನೆ ಅಷ್ಟೆಅಲ್ಲ. ಸ್ಟೇಜಮೇಲೆ ಪಾತ್ರಮಾಡುವುದಷ್ಟೇ ನಾಟಕ ಅಲ್ಲ, ನಮ್ಮ ಬೌದ್ಧಿಕ ಬೆಳವಣಿಗೆಯ, ಜೀವನದರಂಗ ತಾಲೀಮು ಕೂಡ, ಸಿನಿಮಾ, ಸಿರೀಯಲ್ ತರಹ ಟೇಕ್‌ಗಳು ಇಲ್ಲಿಲ್ಲ, ಪ್ರೇಕ್ಷಕನಿಗೆ ಲೈವ್, ಹೊಗಳಿಕೆ ತೆಗಳಿಕೆ ಸ್ಥಳದಲ್ಲೇ ಸಿಗುತ್ತೆ, ಹಾಗಾಗಿ ರಂಗಭೂಮಿ ಕಲಾವಿದನಿಗೆ, ರಚನೆಕಾರರಿಗೆ ಜಾಣತನ ಮುಖ್ಯ, ಪಾತ್ರಚಿಕ್ಕದು, ದೊಡ್ಡದು ಎಂಬ ಪ್ರಶ್ನೆಯೇ ಬಾರದು ‘ನಮಸ್ಕಾರ’ ನಾಟಕದಲ್ಲಿ ಶಿವಾನಂದನ ಪಾತ್ರ ಚಿಕ್ಕದಾಗಿಯೇ ಕಂಡುಬರಬಹುದು ಆತನಾಡುವ ಒಂದೊಂದು ಮಾತುಗಳು ಪ್ರೇಕ್ಷಕರಿಗೆ ಚಿಂತನ–ಮಂಥನಕ್ಕಿಳಿಸುತ್ತವೆ. ಇಲ್ಲಿಯೇ ನಾಟಕ ರಚನಾಕಾರರ ಜಾಣ್ಮೆ ಎದ್ದು ಕಾಣುತ್ತದೆ. ಇಲ್ಲಿ ಶಿವಾನಂದನು ತನ್ನ ತಾಯಿ ನೀಲಾಳಿಗೆ ಹೇಳುವ ಮಾತುಗಳನ್ನು ಗಮನಿಸೋಣ :–

**“ಶಿವಾನಂದ :** ಈ ಸಿರಿಯುರಿಯ ಜಗದಲ್ಲಿ ನಾಯಿ –ನರಿಗಳಾಗಿ ಹುಟ್ಟಬೇಕೆ ವಿನಃ ಬಡವರಾಗಿ ಹುಟ್ಟಬಾರದಮ್ಮಾ! ಎಲ್ಲಿ ತಿರುಗಿದರೂ ಕೇಳುವವರಿಲ್ಲಮ್ಮ, ನೌಕರಿಯೂ ಇಲ್ಲಮ್ಮಾ”[೧೫೪] (ಇದು ನಿರುದ್ಯೋಗದ ಸಮಸ್ಯೆ ಯಾವತ್ತಿನಿಂದಲೂ ಇದ್ದುದ್ದೆ!)

“ಶಿವಾನಂದ (ಕೊಲೆಗಡುಕ ತಂದೆಯನ್ನು ನೋಡುತ್ತ) ಏನು, ಇವನು ನನ್ನ ತಂದೆಯೇ? ಯಾವ ನಾಲಿಗೆ ಇಂಥವನಿಗೆ ಅಪ್ಪಾ ಎಂದು ಕರೆಯಬೇಕಮ್ಮಾ!? ಬಡವರ ಒಡಲನ್ನೇ ಹರಿದು ತಿನ್ನುವ ಈ ರಾಕ್ಷಸನಿಗೆಂತು ಅಪ್ಪಾ ಅನ್ನಬೇಕಮ್ಮಾ!? ಜೀವಂತ ನರಮಾಂಸವನ್ನು ತಿನ್ನುವವನ್ನೆಂತು ಅಪ್ಪಾ ಎನ್ನ ಬೇಕಮ್ಮಾ!?[೧೫೫] ಇದು ಆಲ್ದಾಳ ಅವರ ದೃಷ್ಟಿಯಲ್ಲಿನ ನ್ಯಾಯ! ಇದನ್ನು ನ್ಯಾಯವೆನ್ನದಿರಲು ಇನ್ನೇನು ಬೇಕು.

ಊರ ಪ್ರಮುಖ ಗೌಡನಾಗಿದ್ದ ಅಮೃತ ಅವನ ನಡತೆ, ಮಾತು–ಕಥೆ, ಸಮಾಜದಲ್ಲಿ ಹೇಗೆ ಬಾಳಬೇಕೆಂದು ಹೇಳಬೇಕಾಗಿದ್ದವರ ಪಾಡು ಕೊನೆಯಲ್ಲಿ ಏನಾಯಿತು? ಎಂಬುದು ‘ನಮಸ್ಕಾರ’ ನಾಟಕ ಚೆನ್ನಾಗಿ ಬಿಚ್ಚಿಟ್ಟಿದೆ.

ಎಷ್ಟೇ ಊರಿಗೆ ದೊಡ್ಡವರಿರಲಿ ಅವನು ಮಾಡಿದ ಪಾಪದ ಫಲಗಳನ್ನು ತಿನ್ನಲೇಬೇಕು ಎನ್ನುವ ಮಾತಿನಂತೆ ಅಮೃತಗೌಡನ ಪಾಪಕ್ಕೆ ತಕ್ಕ ಶಿಕ್ಷೆಯಾಯಿತು.

ಆಲ್ದಾಳ ಅವರ ‘ನಮಸ್ಕಾರ’ ನಾಟಕ ರಚಿಸಿದ್ದು ಅರವತ್ತರ ದಶಕದಲ್ಲಿ ಪಂಡಿತ ಜವಾಹರಲಾಲ ನೆಹರು ಅವರು ಭಾರತದ ಪ್ರಧಾನಿಯಾಗಿದ್ದರು ನಮ್ಮ ನೆರೆಯ ದೇಶ ಚೀನಾ ನಮ್ಮ ಮೇಲೆ ದುರಾಕ್ರಮಣ ನಡೆಯಿಸಿತ್ತು ಆ ಒಂದು ಸಂದರ್ಭದಲ್ಲಿ ದೇಶ ರಕ್ಷಣೆಗಾಗಿ ಭಾರತ ದೇಶವೇ ಒಂದಾಗಿ ನಿಂತಿತು ಯುವಕರು ಸೈನ್ಯದಲ್ಲಿ ಸೇರಿಕೊಂಡು ವೈರಿಗಳನ್ನು ಮೆಟ್ಟಿನಿಂತರು ಈ ಹಿನ್ನಲೆಯಲ್ಲಿ ನಾಟಕ ರಚನೆಗೊಂಡಿದ್ದು ಆಲ್ದಾಳ ಅವರು ದೇಶಪ್ರೇಮ, ದೇಶ ಭಕ್ತಿಯನ್ನು ಹುಟ್ಟಿಸುವಲ್ಲಿ ಯುವಕರಿಗೆ ಸ್ಫೂರ್ತಿತುಂಬುವಲ್ಲಿ ಜಯಸಾಧಿಸಿದ್ದಾರೆ.

ಕೊಲೆಗಾರರನ್ನು, ಲಂಚಬಡಕರನ್ನು, ಭ್ರಷ್ಟಾಚಾರಿಗಳನ್ನು ಬಗ್ಗು ಬಡೆಯುವಲ್ಲಿ ತುಪ್ಪ ಮಾರುವ ವೇಷದಲ್ಲಿದ್ದ ಸಿಐಡಿ ಪೋಲೀಸ ಕಾಳಿ; ಕುಸುಮಾ ಎಂಬ ಹೆಣ್ಣಿನ ವೇಷದಲ್ಲಿದ್ದ ಸಿಐಡಿ ಕುಮಾರ ಮಂಗಲಂ, ಅರೆ ಹುಚ್ಚನಂತೆ ನಟಿಸುತ್ತಿದ್ದ ಸಿಐಡಿ ಗುಂಡ, ಪ್ರದೀಪನ ಗುಮಾಸ್ತನಾಗಿದ್ದ ಸಿಐಡಿ ಬಸು ಇವರೆಲ್ಲರು ವಹಿಸಿದ ಪತ್ತೆದಾರಿ ಪಾತ್ರ ಮೆಚ್ಚಲೇ ಬೇಕು. ಸ್ತ್ರೀ ವೇಷದಲ್ಲಿದ್ದ ಪುರುಷ ಸಿಐಡಿ ಅಧಿಕಾರಿಗಳು, ಸಿಬ್ಬಂದಿವರ್ಗ ತಮ್ಮ ಕ್ಷಾಣಾಕ್ಷತನವನ್ನು ಮೆರೆದಿದ್ದಾರೆ, ಅದರಲ್ಲೂ ಸ್ತ್ರೀ ವೇಷದಲ್ಲಿದ್ದ ಕುಮಾರ ಮಂಗಲಂ ನಟನೆ ಯಾವ ಗಂಡಿಗೂ ಇವರು ಸ್ತ್ರೀ ಎಂದೇ ಎನ್ನಿಸಲಿಲ್ಲ, ಗುಪ್ತ ಇಲಾಖೆಯ ವೈಖರಿಯೇ ಹಾಗೆ!

ನಾಟಕದಲ್ಲಿ ನೀಲಾ ಪಾತ್ರ ಅದ್ಭುತ, ಸ್ಮರಣೀಯವಾದುದು. ಭಾರತೀಯ ಸಂಸ್ಕೃತಿಯ ಪ್ರತಿರೂಪ. ಹೆಣ್ಣಾಗಿ, ಗೃಹಿಣಿಯಾಗಿ, ಮಕ್ಕಳತಾಯಿಯಾಗಿ ಆಕೆ ನಡೆದುಕೊಂಡ ರೀತಿ ಮೆಚ್ಚಲೇಬೇಕು. ಮನೆಯಿಂದ ಗಂಡ ಅಮೃತ ಹೊರಗೆ ದಬ್ಬಿದಾಗಲೂ ತನ್ನ ಹೆಸರಿಗೆ ಕಳಂಕ ಹಚ್ಚಿಕೊಳ್ಳಲಿಲ್ಲ, ಸ್ತ್ರೀಯಲ್ಲಿರುವ ಸಹನೆ ಅಪ್ರತೀಮವಾದದ್ದು ಎಂಬುದನ್ನು ಸಮಾಜಕ್ಕೆ ತೋರಿಸಿಕೊಟ್ಟ ನಾರಿಮಣಿ ನೀಲಾ. ಶ್ರೀಮಂತನ ಹೆಂಡತಿಯಾಗಿ ಜೀವನ ಅನುಭವಿಸುತ್ತಿರುವಾಗ ಕಾಮುಕ, ಸ್ತ್ರೀಲಂಪಟ ಗಂಡನನ್ನು ಸರಿದಾರಿಗೆ ತರಲಾಗದೇ ಕ್ರೂರ ವಿಧಿಯಾಟಕ್ಕೆ ಬಲಿಯಾಗಿ ಬೀದಿಗೆ ತಳ್ಳಲ್ಪಡುತ್ತಾಳೆ. ಅತಿ ಬಡತನ, ಸಂಕಷ್ಟ ಎದುರಿಸುತ್ತಾಳೆ ಆದರೂ ತಾನೂ ಪ್ರತಿವೃತೆ ಧರ್ಮವನ್ನು ಅಪ್ಪಿಕೊಳ್ಳುತ್ತಾಳೆ ಎಂಬುವ ಮಾತು ಮರೆಯುವುದಿಲ್ಲ.

ಆಲ್ದಾಳರ ಹಿಂದಿನ ಸಾಮಾಜಿಕ, ಕೌಟುಂಬಿಕ ನಾಟಕಗಳಲ್ಲಿ ಸೂಕ್ಷ್ಮವಾಗಿ ಸುಳಿದು ಬರುತ್ತಿದ್ದ ಸಾಮಾಜಿಕ ವಿಡಂಬನೆ, ಕೌಟುಂಬಿಕ ಸಾಮರಸ್ಯಗಳನ್ನು 'ನಮಸ್ಕಾರ ನಾಟಕದಲ್ಲಿ ನೋಡಲು ಸಾಧ್ಯವಿಲ್ಲದಿದ್ದರೂ ಇವೆರಡವುಗಳ ಸೊಗಡನ್ನು ತಮ್ಮ ಗರ್ಭದಲ್ಲಿರಿಸಿಕೊಂಡೇ ಅರಳುತ್ತವೆ ಎಂಬುದನ್ನು ಮರೆಯುವಂತಿಲ್ಲ. ಹಣದ ಹಪಾಹಪಿ, ಕುಡಿತ, ಕೌಟುಂಬಿಕ ಸಮಸ್ಯೆ, ಪ್ರೀತಿ–ವಾತ್ಸಲ್ಯ, ಸೋದರತ್ವ, ವಿಶ್ವಾಸದ್ರೋಹ ಮುಂತಾದ ಅಂಶಗಳ ಪ್ರತಿ ಬಿಂಬವು ಈ ನಾಟಕಗಳಲ್ಲಿ ಮೂಡಿ ಬಂದಿದೆ. ಯಾವುದೇ ನಾಟಕ ನೋಡಿದರೂ ಅಲ್ಲಿ ಪತ್ತೆದಾರಿ ಜಾಡಿನಲ್ಲಿಯೇ ನಾಟಕದ ಕಥೆ ಅರಳುತ್ತದೆ. ಪ್ರತಿಯೊಂದು ಸಮಸ್ಯೆಗೂ ಆಲ್ದಾಳರು ಪತ್ತೆದಾರಿ ವಿಚಕ್ಷಕ ಬುದ್ಧಿಯಿಂದ ತನಿಖೆಯನ್ನು ಕೈಗೊಂಡು ಸಾಮಾನ್ಯನಿಗೂ ಪರಿಹಾರ ಅರಿಯುವ ವಿವೇಕ ಮೂಡಿಸುತ್ತಾರೆ. ನಾಟಕ ತೀವ್ರಗತಿಯಲ್ಲಿ ನಡೆದು ಸಹೃದಯನಲ್ಲಿ ಕ್ಷಣ ಕ್ಷಣಕ್ಕೂ ಕುತೂಹಲವನ್ನು ಕೆರಳಿಸುತ್ತದೆ. ದ್ರೋಹಿಗಳ ನೀಚವಂಚನೆಯನ್ನು ಬಯಲಿಗೆಳೆದು ಅವರನ್ನು ಶಿಕ್ಷೆಗೆ ಒಳಪಡಿಸುವುದೇ 'ನಮಸ್ಕಾರ' ನಾಟಕದ ಕಥಾವಸ್ತುವಾಗಿದೆ. ಪುರುಷ ಪಾತ್ರಗಳೆ ಪ್ರಧಾನವಾಗಿ ಕಂಡು ಬಂದರೂ ಸ್ತ್ರೀ ಪಾತ್ರಗಳು ನಾಟಕದ ಕಥಾ ಜಾಡಿಗೆ ಪೂರಕವಾಗಿ ಮೂಡಿಬಂದಿವೆ.

ನಮಸ್ಕಾರ ನಾಟಕದಲ್ಲಿನ ಸನ್ನಿವೇಶ, ಸಂಭಾಷಣೆ, ಹಾಡು, ಸಾಹಿತ್ಯ, ರಂಗ ತಂತ್ರಗಳಲ್ಲಿ ಪತ್ತೆದಾರಿ ಜಾಡಿನ ಹೊಸತನವಿದೆ. ಪ್ರತಿಯೊಂದು ದೃಶ್ಯಕ್ಕೂ ನಾಟಕ ಕುತೂಹಲ ಕೆರಳಿಸಿ ಮುಂದೇನು ಎಂದು ಕೇಳುವಂತಾಗುತ್ತದೆ. ಈ ನಾಟಕ ರಂಗ ಪ್ರಪಂಚಕ್ಕೆ ಹೊಸ ಕಾಣಿಕೆ.

ನಾಟಕ ನ್ಯಾಯ ಪರಂಪರೆಯನ್ನು ಎತ್ತಿಹಿಡಿದಿದೆ, ದುಷ್ಟರಾದ ಅಮೃತಗೌಡ, ಕಾಮುಕ ಗೆಳೆಯ ಡಾ.ಪ್ರತಾಪ, ಶರಣ, ಪ್ರದೀಪ ದೇಸಾಯಿ ಇವರೆಲ್ಲರಿಗೂ ಶಿಕ್ಷೆಯಾಗುವಲ್ಲಿ ಸಿಐಡಿಗಳು ತೋರಿದ ಸಾಹಸ ಪತ್ತೆಕಾರ್ಯ ಶ್ಲಾಘನಿಯವಾದುದು. ಕನ್ನಡ ನಾಟಕ ಸಾಹಿತ್ಯಕ್ಕೆ ಅಪರಿಚಿತವಾಗಿದ್ದ ಪತ್ತೆದಾರಿ ನಾಟಕಗಳ ಪ್ರಥಮ ಕೊಡುಗೆಯನ್ನು ಹೈದ್ರಾಬಾದ ಕರ್ನಾಟಕಕ್ಕೆ ನೀಡಿದವರು ಎಲ್‌ಬಿಕೆ ಆಲ್ದಾಳರು.

"ಇಂದಿನ ಜಾಡು ತಪ್ಪಿದ ರಾಜಕೀಯ ಹಾಗೂ ಸಾಮಾಜಿಕ, ಸಾರ್ವಜನಿಕ ಜೀವನದಲ್ಲಿ ಹಾಸು ಹೊಕ್ಕಾಗಿರುವ ಕಡು ಭ್ರಷ್ಟತೆ, ಕಣ್ಣಾಡಿಸಿದಲ್ಲಿ ಕಾಣಸಿಗುವ ಅನ್ಯಾಯ, ಅಸೂಯೆ, ಅಧರ್ಮ, ಅಜ್ಞಾನ, ಅಕ್ರಮ, ಅನೀತಿ, ಅಗೌರವ, ಅಸಭ್ಯತೆ, ಅತಿಯಾಸೆ, ಅಟ್ಟಹಾಸ, ಅವಮಾನ, ಅಹಂಕಾರ, ಅತ್ಯಾಚಾರ, ಅಹಂಮಿಕೆ, ಅಪನಂಬಿಕೆ, ಅನೈತಿಕತೆ, ಅಶ್ಲೀಲತೆ, ಅಸಂಬದ್ಧತೆ, ಅಪವ್ಯಯ, ಅಧಃಪತನ, ಅಂತಃಕಲಹ, ಅಂತರಾಯ ಅಕಾರ್ಯ, ಅಕೃತ್ಯ, ಅಚಾತುರ್ಯ, ಅಟ್ಟುಳಿ, ಅಣಕ, ಅತಿಕ್ರಮ, ಅತಿರೇಕ, ಅನತ, ಅನಯ ಹಾಗೂ ಅನಿಯತ, ಆಟಾಟೋಪ ಮೊದಲಾದ 'ಅ'ಕಾರಾದಿ ಸಂಧಿಗೊಂದಿಗಳಲ್ಲಿ ವ್ಯಾಪಿಸಿವೆ. ಬದುಕಿನೊಂದಿಗೆ ಬೆರೆತು ಹೋಗಿರುವ ಸ್ವಾರ್ಥತನ, ನೈತಿಕ ಮೌಲ್ಯಗಳು ಕುಸಿದು ಜೀವನವೆಂಬುದು ದಿಕ್ಕೆಟ್ಟು ದಿವಾಳಿಯಾಗಿದೆ. 'ಮೂರು (ನಾಚಿಕೆ, ಮಾನ, ಮರ್ಯಾದೆ) ಬಿಟ್ಟವನು ಮೂರು ಲೋಕಕ್ಕೆ ಒಡೆಯ' ಎಂಬ ನುಡಿ ನಿಜವೆನಿಸುವಂತಿದೆ. ಉಂಡವರ ತೇಗು, ಹಸಿದವರ ಕೂಗು ಕೇಳಲಾರಂಭಿಸಿದೆ. ಕುಸಂಸ್ಕೃತಿ ಮೈತಾಳಿ ವಿಜೃಂಭಿಸುತ್ತದೆ" [೧೫೬] ನಮಸ್ಕಾರ ನಾಟಕದಲ್ಲಿ ಕಂಡು ಬರುವ ಮೇಲ್ಕಾಣಿಸಿದ ನಡೆಗಳಿಂದಾಗಿ ಸಮಾಜ, ದೇಶ ಸುಧಾರಿಸಲು ಸಾಧ್ಯವೆ? ಎಂಬ ಪ್ರಶ್ನೆ ಪೇಡಂಭೂತವಾಗಿ ನಮ್ಮೆದುರಿಗೆ ನಿಲ್ಲುತ್ತದೆ. ಅದಕ್ಕಾಗಿ ಸಕಲರೂ ಒಳ್ಳೆಯ ಸಂಸ್ಕೃತಿಗೆ ಮಣೆಹಾಕಲಿ ಎಂಬುದೇ 'ನಮಸ್ಕಾರ' ನಾಟಕದ ಉದ್ದೇಶ ನಿಮಗೆಲ್ಲರಿಗೂ ನಮಸ್ಕಾರ.

**"ನಮಸ್ಕಾರ ನಾಟ್ಯವಾಡುತ । ನಡೆಯಿತು ಈ ಜಗತ್ತು ।**
**ಚಮತ್ಕಾರದ ಮೋಡಿ ಹಾಕುತ । ಕೈಕೊಟ್ಟಿತು ಇಂತೆನಿತು॥**
**ಸಿರಿವಂತರಿಗಿಹುದು ಸುಖಸೋನ । ಬಡವರಿಗಿಹುದು ವಿಧಿವಿಷಪಾನ ।**
**ಹೀಗಿದೆ ನಮ್ಮಯಾ ಹಿಂದುಸ್ಥಾನ ॥"** [೧೫೭]

**"ನಮಸ್ಕಾರ ಶಿವ ಸ್ವರೂಪಿಗಳಿಗೆಲ್ಲಾ ನಮಸ್ಕಾರ ಶಿವ ಜೀವದ ಅರು**
**ವನ್ನು ತಿಳಿಸುವ ಪರಮ ಗುರುಗಳಿಗೆಲ್ಲಾ ಲೇಯಪ್ಪಾ, ನಿನಗೆಷ್ಟು**
**ಸಲಾ ನಮಸ್ಕಾರ ಹೊಡದ್ರೂ.... ಒಂದು ಕೈ ತೋರಸ್ತೀಯಲ್ಲೊ**
**ನೀ ಏನ ಆ ಕೆಂಪ ಕೋತಿಗಳ ವಂಶಕ್ಕೆ ಹುಟ್ಟಿದಾಂಗ ಕಾಣಸತ?**
**ಅಲ್ಲಾ, ನಮ್ಮ ಈ ಪವಿತ್ರವಾದ ಹಿಂದು ಧರ್ಮದ ಸಂಸ್ಕೃತಿಗನು**
**ಸಾರವಾಗಿ, ನಯವಿನಯದಿಂದ ಎರಡೂ ಕೈ ಜೋಡಿಸಿ ನಮಸ್ಕಾರಕ್ಕೆ**
**ಪ್ರತಿ ನಮಸ್ಕಾರಂದ್ರ ನಿಮ್ಮ ಗಂಟ ಹೊಕ್ಕೈತ....?** [೧೫೮]

ನಾಟಕದ ಶಿರೋನಾಮೆ ಎಂಥವರನ್ನು ವಿನಯವಂಥರನ್ನಾಗಿಸುತ್ತದೆ. ಭಾರತೀಯರ 'ನಮಸ್ಕಾರ' ಮಂತ್ರದಂತೆ ಕೆಲಸ ಮಾಡುತ್ತವೆ. ವಿದೇಶಿಯರನ್ನು ಬೆರಗು ಗೊಳಿಸಿ ಗೌರವ ಸೂಚಿಸುವಂತೆ ಮಾಡುತ್ತದೆ. ಈ ನಮಸ್ಕಾರ ಎಂಬ ಮಂತ್ರ ! ಅದಕ್ಕಾಗಿಯೇ ಹೇಳುತ್ತೇನೆ, ಮತ್ತೊಮ್ಮೆ ಮೊಗದೊಮ್ಮೆ ಎಲ್ಲರಿಗೂ ನನ್ನ ನಮಸ್ಕಾರ.

# ಹಂಡೆ ಕುಲತಿಲಕ ರಾಜಾ ಬಲದ ಹನುಮಪ್ಪನಾಯಕ

(ಐತಿಹಾಸಿಕ ನಾಟಕ)

ಸಾಹಿತ್ಯ ನಿಂತ ನೀರಲ್ಲ, ಬದಲಾವಣೆಯೇ ಅದರ ವಿಶಿಷ್ಟ ಲಕ್ಷಣ. ಈ ದೃಷ್ಟಿಯಿಂದ ರಂಗಭೂಮಿಯ ಧೋರಣೆಗಳು ಬದಲಾಗುತ್ತ ಬಂದಂತೆ ಪ್ರಾರಂಭದಲ್ಲಿ ಭಕ್ತಿ ಪರ ಹಾಗೂ ಪೌರಾಣಿಕ ನಾಟಕಗಳನ್ನು ರಚಿಸುತ್ತಿದ್ದವರು ಕಾಲಾಂತರದಲ್ಲಿ ಐತಿಹಾಸಿಕ ನಾಟಕಗಳ ರಚನೆಗೆ ಒಲವು ತೋರ ಹತ್ತಿದರು. ರಾಮಾಯಣ, ಮಹಾಭಾರತ ಪುರಾಣದ ಕಥಾವಸ್ತುಗಳನ್ನೊಳಗೊಂಡ ಪೌರಾಣಿಕ ನಾಟಕಗಳ ಜೊತೆಗೆ ಐತಿಹಾಸಿಕ ಶ್ರೇಷ್ಠರ ಜೀವನವನ್ನು ಆಧರಿಸಿ ನಾಟಕಗಳು ಹುಟ್ಟಿಕೊಂಡವು. ರಂಗಭೂಮಿಯ ಮೇಲೆ ಬರುವ ಐತಿಹಾಸಿಕ ಶ್ರೇಷ್ಠರನ್ನು ಕಂಡ ಪ್ರೇಕ್ಷಕರು ದೇಶಗೌರವ ಭಕ್ತಿಯಿಂದ ಕೈ ಮುಗಿಯತೊಡಗಿದ. "ಪ್ರೇಕ್ಷಕರ ಅಭಿರುಚಿಯನ್ನು ಅರಿತುಕೊಂಡಿದ್ದ ನಾಟಕಕಾರರು ಐತಿಹಾಸಿಕ ನಾಟಕಗಳನ್ನು ಬರೆದು ನಾಟಕ ಸಾಹಿತ್ಯದಲ್ಲಿ ದೈವಭಕ್ತಿಯನ್ನು ಮತ್ತು ದೇಶಭಕ್ತಿಯನ್ನು ಸಮರ್ಥವಾಗಿ ನಿರೂಪಿಸಿದರು. ಈ ನಾಟಕಗಳ ಯಶಸ್ಸಿನಿಂದಾಗಿ ಸ್ಫೂರ್ತಿಪಡೆದ ಮಂಡಳಿಗಳು, ಕನ್ನಡ ವೀರರು–ವೀರವನಿತೆಯರು ಬ್ರಿಟಿಷರನ್ನು ಬಗ್ಗು ಬಡಿಯಲು ಮಾಡಿದ ತ್ಯಾಗ, ದೇಹಾರ್ಪಣೆಗಳನ್ನು ವಿಷಯವಾಗಿಟ್ಟುಕೊಂಡು ರಚಿತವಾದ ಐತಿಹಾಸಿಕ ರಂಗ ನಾಟಕಗಳನ್ನು ಪ್ರದರ್ಶಿಸತೊಡಗಿದವು. [೧೫೯]

"ವೃತ್ತಿ ರಂಗಭೂಮಿಯಲ್ಲಿ ಐತಿಹಾಸಿಕ ನಾಟಕಗಳಿಗೆ ಅನುಕೂಲಾವಕಾಶಗಳು ಕಲ್ಪಿತವಾಗುವ ಮೊದಲೇ ನವೋದಯ ನಾಟಕಕಾರರಾದ 'ಸಂಸ'ರಿಂದ 'ಬೆಟ್ಟದರಸು' ಎಂಬ ಮೊದಲ ಐತಿಹಾಸಿಕ ನಾಟಕ ೧೯೨೩ರಲ್ಲಿ ಮೂಡಿಬಂದಿತೆಂಬುದು ಗಮನಾರ್ಹ" [೧೬೦]

ಚೊಚ್ಚಲ ಐತಿಹಾಸಿಕ ನಾಟಕ "ಹಂಡೆ ಕುಲತಿಲಕ ರಾಜಾಬಲದ ಹನಮಪ್ಪ ನಾಯಕ" ಹೊರತಂದಿದ್ದಾರೆ. "ಹಂಡೆ ಕುಲ ತಿಲಕ ರಾಜಾ ಬಲದ ಹನುಮಪ್ಪ ನಾಯಕ ಚರಿತ್ರೆಯಿಂದ ಎತ್ತಿಕೊಂಡವಸ್ತು, ತಮ್ಮ ಶೌರ್ಯಸಾಹಸ, ಔದಾರ್ಯ ಪ್ರಜಾನುಕಂಪೆಯುಳ್ಳ ಹಲವಾರು ಶತಮಾನಗಳಕಾಲ ರಾಜ್ಯವನ್ನಾಳಿದ ಇತಿಹಾಸದ ಗರ್ಭದೊಳಕ್ಕೆ ಮರೆಯಾಗಿ ಹೋಗಿದ್ದ ಹಂಡೆ ವಜೀರ ವೀರಶೈವ ಲಿಂಗಾಯತ ರಾಜನ ಬದುಕಿನ ಒಂದು ಎಳೆಯನ್ನು ಎತ್ತಿಕೊಂಡು ಹೆಣೆದ ವೀರೋಚಿತ ಕಥೆಯಾಗಿದೆ. ಆಲ್ದಾಳರು ದೇಶಿ ಸೊಗಡಿನಲ್ಲಿ ಓದುಗರ ಮನಸ್ಸಿಗೆ ಮೆಚ್ಚುವ ರೀತಿಯಲ್ಲಿ ನೇರ, ಸರಳ ನುಡಿಯಲ್ಲಿ ನಿರೂಪಿಸಿದ್ದಾರೆ".[೧೬೧]

ಈ ಐತಿಹಾಸಿಕ ನಾಟಕ ಪ್ರಾರಂಭವೇ ಕುತೂಹಲವನ್ನೇ ಕೆರಳಿಸುತ್ತಿದೆ. ಗುರು–ಶಿಷ್ಯರ ನಡುವೆ ನಡೆಯುವ ಸಂವಾದ ಮೂಲಕ ನಾಟಕದಕಥೆ ಮುಂದುವರಿಸುವ ಪರಿ ಎಲ್ಲರಿಗೂ ಹಿತವೆನ್ನಿಸುತ್ತದೆ. ಎಷ್ಟಾದರು ಇದು ಐತಿಹಾಸಿಕ ನಾಟಕವಲ್ಲವೆ? ಮಕ್ಕಳ ಮನಸ್ಸನ್ನು ಇತಿಹಾಸದ ಕಡೆಗೆ ಗಮನ ಹರಿಸಲು ಗುರುಗಳಾದವರು ಹೆಚ್ಚಿನ ಅನುಭವ ಪಡೆದವರಾಗಿರಬೇಕು ಇತಿಹಾಸ ಪಾಠ ಬೇಗನೆ ಮಕ್ಕಳ ಮನಸ್ಸಿನ ಮೇಲೆ ಅಚ್ಚೊತ್ತುವುದಿಲ್ಲ, ಅದಕ್ಕಾಗಿ ಪಾಠದ ಸಿದ್ಧತೆ ಅವಶ್ಯಕವೆಂಬುದನ್ನು ನಾಟಕಕಾರ ಆಲ್ದಾಳರು ಚೆನ್ನಾಗಿ ಬಲ್ಲವರು, ಮಕ್ಕಳ ಮನಸ್ಸು ಶುಭ್ರ ಹಾಗೂ

ಬಿಳಿಯ ಬಣ್ಣದ ಹಾಳೆ ಇದ್ದಂತೆ ಅದರ ಮೇಲೆ ಮೂಡಿಸುವ ಅಕ್ಷರಗಳು ಅಷ್ಟೆ ರಂಗು–ರಂಗಾಗಿರಬೇಕು. ಮಕ್ಕಳು ಉತ್ಸಾಹಿತರಾಗಿರುವಂತೆ ನೋಡಿಕೊಳ್ಳಬೇಕು. ಅದು ಮಾತ್ರ ಆಲ್ದಾಳರಿಂದಲೇ ಸಾಧ್ಯ ಎನ್ನಬಹುದು. ಸಂವಾದ ಓದಿ......

"ಬಾಲಕ – ವಿರಶೈವ ಹಂಡೆ ವಜೀರರು ಅಂದರೆ ಯಾರು? ಮೂಲ ಮತ್ತು ಆಳರಸರ ಗಾಥೆಯನ್ನು ತಿಳಿಸುವ ಕೃಪೆಯಾಗಬೇಕು". [೧೬೨]

"ಗುರು – ಮಕ್ಕಳೇ ! ಇಲ್ಲಿಯವರೆಗೆ ರಾಜ–ಮಹಾರಾಜರನ್ನೇ ಮುಖ್ಯವಾಗಿ ಗಮನಿಸುತ್ತ, ಸಣ್ಣ–ಪುಟ್ಟ ಅರಸು ಮನೆತನಗಳನ್ನು ಗಣನೆಗೆ ತಾರದೇ ಇದ್ದದ್ದು ಇತಿಹಾಸಕಾರರ ಬಹು ದೊಡ್ಡ ತಪ್ಪು ಎಂದರೂ ಅಡ್ಡಿಯಿಲ್ಲ" [೧೬೩]

ಬಾಲಕ – ಅದು ಹೇಗೆ ಗುರುಗಳೆ ?

"ಗುರು– ಕೋಟೆ ಕೊತ್ತಲುಗಳನ್ನು ಕಟ್ಟಲು ಸಣ್ಣ ಸಣ್ಣ ಚಿಪುಗಲ್ಲುಗಳು ಸಹಾಯ ಮಾಡಿದಂತೆ ದೊಡ್ಡ–ದೊಡ್ಡ ರಾಜ ಮಹಾರಾಜರ ಜೊತೆಗೆ ತಮ್ಮ ತಮ್ಮ ಪ್ರಾಣವನ್ನೇ ಪಣಕ್ಕಿಟ್ಟು ರಾಜ್ಯಕಟ್ಟುವಲ್ಲಿ ಸಾಮಂತರು, ಪಾಳೇಗಾರರು ಯಶಸ್ವಿಯಾಗಿದ್ದಾರೆ?" [೧೬೪]

"ಬಾಲಕ – ಇದು ನಿಜ. ಪಾಳೆಗಾರರು ಮಾಂಡಲಿಕರು ತಮ್ಮೊಡೆಯನ ಸಹಾಯಕ್ಕಾಗಿ ರಾಜ್ಯದ ಉಳವಿಗಾಗಿ ಶತ್ರು ಸೈನ್ಯದೊಡನೆ ಹೋರಾಡಿ ವಿಜಯಗಳಿಸಿ ಕೊಟ್ಟಿದ್ದಾರೆ".

"ಗುರು – ಅಂದಾಗ, ಆ ಪಾಳೇಗಾರರ, ಮಾಂಡಲೀಕರ ಇತಿಹಾಸವನ್ನು ಮರೆಮಾಚಿದಲ್ಲಿ ಒಂದು ದೊಡ್ಡದುರಂತ, ಅಂಥ ಪಾಳೆಗಾರರ ಸಾಲಿನಲ್ಲಿ ಬರುವ ವೀರಶೈವ ಹಂಡೆ ಆಳರಸರ ಚರಿತ್ರೆ ರೋಚಕವಾದದ್ದು". [೧೬೫]

ಶಾಲೆಯಲ್ಲಿ ಇತಿಹಾಸ ಪಾಠ ಕಲಿಕೆಯ ಮುನ್ನ ಗುರುಗಳು ಅಂದಿನ ಪಾಠದ ಸಂಪೂರ್ಣ ಜ್ಞಾನ, ಅಧ್ಯಯನ ಹೊಂದಿರಬೇಕು. ಪೀಠಿಕೆ ಪ್ರಶ್ನೋತ್ತರಗಳು ಸರಳ ಹಾಗೂ ಆಕರ್ಷಕವಾಗಿರಬೇಕು. ಆಲ್ದಾಳರು ಉತ್ತಮ ಗುರುಗಳಾದವರಂತೆ ಪೀಠಿಕೆ ಹಾಕಿ ಮಕ್ಕಳ ಚಿತ್ತವನ್ನು ಪಾಠದ ಕಡೆಗೆ ಸೆಳೆಯುವಲ್ಲಿ ಯಶಸ್ವಿಯಾಗಿದ್ದಾರೆ. ಮುಂದಿನ ಚರಿತ್ರೆಯನ್ನು ತಿಳಿಸಿಕೊಡುವಲ್ಲಿ ಉತ್ತಮ ನಡೆ ಹಾಕಿದ್ದಾರೆ. ಆತ್ಮವಿಶ್ವಾಸವೇ ಇದಕ್ಕೆ ಮದ್ದು.

ಕ್ರಿ.ಶ.೧೫೧೨ರಿಂದ ಕ್ರಿ.ಶ.೧೮೬೦ರ ವರೆಗೆ ಅಂದರೆ ಸುದೀರ್ಘವಾಗಿ ಮೂರುನೂರಾ ನಾಲ್ವತ್ತು ಮೂರು ವರ್ಷಗಳವರೆಗೆ ರಾಜ್ಯಭಾರ ಮಾಡಿದ ಕೀರ್ತಿ ಈ ಹಂಡೆ ಅರಸು ಮನೆತನಕ್ಕೆ ಸಲ್ಲುತ್ತದೆ. ಹಂಡೆ ಅರಸರ ಮೂಲವು ಹತ್ತನೆಯ ಶತಮಾನದಲ್ಲಿದ್ದ ಪಂದೆ ಅರಸರೆಂದು ಕರೆಯಿಸಿಕೊಂಡಿರಬೇಕು. ಪಂದೆ ಅರಸರು, ವಿಜಯನಗರ ಪೂರ್ವೋತ್ತರದ ಅವಧಿಯಲ್ಲಿ ಪಂದೆ

ಅರಸರಾಗಿ, ಪಾಳೆಗಾರರಾಗಿ, ನಾಯಕರಾಗಿ, ದಂಡನಾಯಕ ಸೇನಾಧಿಪತಿಯಾಗಿ, ಸರದಾರರಾಗಿ ಗುರುತಿಸಿಕೊಂಡಿರಬೇಕು.

ನಾಟಕದ ಮೂಲ ಪುರುಷ ಮತ್ತು ಅವರ ನೆಲೆಯನ್ನು ಅರಿತು ಕೊಳ್ಳುವುದು ಅವಶ್ಯ.

ಈಗಿನ ವಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲೂಕಿನ ಮುತ್ತಗಿವಡವಡಗಿ ಗ್ರಾಮದ ವೀರಶೈವ ಲಿಂಗಾಯತ ಮನೆತನದ ಲಕ್ಕಿನಾಯಕನೆಂಬುವವನು ಗೌಡಕಿಮಾಡಿ ಕೊಂಡಿದ್ದನು. ಅವನಿಗೆ ಬಲದ ಹನುಮಪ್ಪಾನಾಯಕ ಮತ್ತು ಬಳಗನಾಯಕ ಎಂಬ ಇಬ್ಬರು ಮಕ್ಕಳು.

ಐತಿಹಾಸಿಕ ನಾಟಕದ ನಾಯಕ ಬಲದ ಹನುಮಪ್ಪ ನಾಯಕನು ವಿಜಾಪೂರದ ಅಲಿಆದಿಲ್ ಶಾಹದ ಕೈಕೆಳಗೆ ಸರನಾಡ ಗೌಡನಾಗಿ ತನ್ನ ಶೌರ್ಯಸಾಹಸಗಳಿಂದ ದೊರೆಯ ಪ್ರೀತಿಗೆ ಪಾತ್ರನಾಗಿದ್ದ ಅಲ್ಲದೆ ಆ ಸ್ಥಾನದ ಸೇನಾಧಿಕಾರಿಯಾಗಿ ರಾಜಕಿಯ ಕಾರ್ಯದಲ್ಲಿ ಮುತ್ಸದ್ದಿತನದಿಂದ ಯಾವ ಕಾರ್ಯ ಹೇಗೆ ಮಾಡಿಕೊಡಬೇಕೆಂದು ಚತುರ ಮತಿಯಾಗಿದ್ದು ಅದಕ್ಕಾಗಿ ಬಲದ ಹನುಪಪ್ಪ ನಾಯಕನಿಗೆ 'ವಜೀರ'ನೆಂಬ ಬಿರುದು ಕೊಟ್ಟು, ಹಾವೇರಿ ಜಿಲ್ಲೆಯ ಪ್ರದೇಶಗಳು ಒಳ ಆಡಳಿತವನ್ನು ನೋಡಿಕೊಂಡು ಹೋಗಲು, ಬಳ್ಳಾರಿ, ತೆಕ್ಕಲಕೋಟ, ಕುರುಗೋಡು ಈ ಮೂರು ಪರಗಣಗಳಿಗೆ ಸನದು ಬರೆದುಕೊಟ್ಟು ಕಳಿಸುತ್ತಾನೆ.

ಬಲದ ಹನುಮಪ್ಪನಾಯಕ ೧೫೧೦ ರಲ್ಲಿ ಬಂಕಾಪೂರಕ್ಕೆ ಬಂದು ಅಲ್ಲಲ್ಲಿ ತಲೆ ಎತ್ತಿದ ಅರಾಜಕತೆಯನ್ನು ಬಗ್ಗು ಬಡೆದು ಪ್ರಜೆಗಳಿಂದ ಅಪಾರ ವಿಶ್ವಾಸಗಳಿಸುತ್ತಾನೆ. ಬಂಕಾಪೂರದಲ್ಲಿ ಕಿಲ್ಲೆ ಕಟ್ಟಿಸಿ ಶಾಂತಿ ನೆಲೆಯಾಗುವಂತೆ ಮಾಡುತ್ತಾನೆ. ಹಂದೆ ಆಳರಸರ ಧ್ವಜ "ವರಹಧ್ವಜ, ಇದು ವಿಷ್ಣುವಿನ ಅವತಾರ, ದಾಖಲೆಯಿಂದ ಇವರು ಚಾಲುಕ್ಯ ವಂಶದವರು ಮುಂದೆ ಆ ಆಳರಸರು ಏಳು ಬೀಳುಗಳ ಮಧ್ಯ ಕಲ್ಯಾಣ ಚಾಲುಕ್ಯರಾಗಿ, ವಿಜಯನಗರಕಾಲದಲ್ಲಿ ಹಂಡೆ ಅರಸರಾಗಿದ್ದಾರೆ ಕ್ರಿ.ಶ.೧೬೪೯ರ ವರೆಗೆ ಇವರ ಆಳ್ವಿಕೆ  ಹೋಗುತ್ತದೆ. ಇದೊಂದು ರೋಚಕ ಕಥೆ !.

ರಾಜಾಬಲದ ಹನುಮಪ್ಪ ನಾಯಕ ಸ್ವಾಮಿನಿಷ್ಠನು ಹೌದು ಸ್ವಾಭಿಮಾನಿಯೂ ಆಗಿದ್ದನು, ಸಮಯ ಬಂದರೆ ಜೀವ ಕೊಡಲು ಸಿದ್ಧ! ಅದೇ ಸಮಯದಲ್ಲಿ ಸ್ವಾಭಿಮಾನಕ್ಕೆ ಧಕ್ಕೆ ತಂದಲ್ಲಿ ಅವರ ವಿರುದ್ಧ ಕೆಂಡಕಾರಲು ಸಿದ್ಧ ಇದಕ್ಕೆ ಇಲ್ಲಿದೆ....

"ಹನುಮಪ್ಪ ನಾಯಕ : ಉಪ್ಪುಂಡವರ ಮನೆಗೆ ಕಪ್ಪು ಹಚ್ಚುವ ಕಾರ್ಯ ನಮಗೆಂದಿಗೂ ಒಪ್ಪದು, ಮೇಲಾಗಿ ಅದು ಶೂರರ ಲಕ್ಷಣವೂ ಅಲ್ಲ, ತಲೆಯಲ್ಲಿ ಬುದ್ಧಿ, ಕರದಲ್ಲಿ ಕಲೆ, ಎದೆಯಲ್ಲಿ ಯಾವುದೇ ಕೆಲಸ ಮಾಡುತ್ತೇನೆ ಎನ್ನುವ ಛಲವಿದ್ದಾಗ, ಪ್ರತ್ಯಕ್ಷ ಪರಮೇಶ್ವರನಿಗೂ ಅಂಜಬೇಕಾಗಿಲ್ಲ. ಅದು ನನ್ನ ಸ್ವಾಮಿನಿಷ್ಠೆ". [೧೬೬]

"ಅಲಿ ಆದಿಲ್ ಶಾಹ : ಬಹುತ್‌ಖೂಬ್ ನಿನ್ನ ಐವರು ಮಕ್ಕಳಲ್ಲಿ, ಒಬ್ಬನನ್ನು ನಮಗೆ ಕೊಡಿ, ಅವನು ಬೆಳೆದು ದೊಡ್ಡವನಾದಾಗ ಬಾದಶಹನನ್ನಾಗಿ ಮಾಡುತ್ತೇನೆ".

"ಹನುಮಪ್ಪನಾಯಕ (ಅತ್ಯಂತಸಿಟ್ಟಿನಿಂದ) ದೊರೆಗಳೇ ! ನೀವು ಮಾತಾಡದೆ ಇನ್ನೊಬ್ಬರು ಮಾತಾಡಿದ್ದರೆ ಇಷ್ಟರಲ್ಲಿ ಅವನ ರುಂಡ ಮುಂಡದಿಂದ ಬೇರ್ಪಡುತ್ತಿತ್ತು. ನನ್ನದು ಸ್ವಾಭಿಮಾನದ ಜೀವನ ಮಕ್ಕಳನ್ನು ಕೊಟ್ಟು ಬದುಕುವವನು ನಾನಲ್ಲ". [೧೬೭]

ಪಾಳೆಗಾರರಲ್ಲಿ, ಸಾಮಂತರಲ್ಲಿ ಎಂತಿಂಥ ಶೂರರು ಇದ್ದರು ಎನ್ನುವುದು ಇತಿಹಾಸ ಪೂರ್ಣಮರೆಮಾಚಿದೆ ಎನ್ನುವುದು ಮಾತ್ರ ಸತ್ಯವಾದ ಮಾತು.

ವಿಜಯನಗರದ ಅರಸು ಶ್ರೀಕೃಷ್ಣದೇವರಾಯನು ಅಂತ್ಯರಾದ ಮೇಲೆ ಅವರ ಅಳಿಯ ರಾಮರಾಯನಿಗೆ ಪಟ್ಟಗಟ್ಟಬೇಕೆನ್ನುವಷ್ಟರಲ್ಲಿ ಮಹಾಮಂತ್ರಿ ಸಲಕದ ತಿಮ್ಮರಸ ಕೋಶಾಧ್ಯಕ್ಷ ಒಳಗೊಳಗೆ ಸಂಚುನಡೆಸಿ ಮುಸಲ್ಮಾನ ದೊರೆಗಳೊಡನೆ ವಿಜಯನಗರದ ಮೇಲೆ ಯುದ್ಧಸಾರಲು ಆದೇಶಿಸಿದ್ದ. ಈ ವಿಷಯವನ್ನು ಗುಪ್ತಚಾರರಿಂದ ರಾಮರಾಯನಿಗೆ ತಿಳಿದು ಬಲದ ಹನುಮಪ್ಪ ನಾಯಕನನ್ನು ಕರೆಯಿಸಿಕೊಂಡು ಮಂತ್ರಾಲೋಚನೆ ನಡೆಸಿದನು.

ಮಂತ್ರಿ ತಿಮ್ಮರಸನ ಒಳಸಂಚು ಬಯಲಿಗೆಳೆದ ಹನುಮಪ್ಪ ನಾಯಕ ದರಬಾರನಲ್ಲಿ ಸಭೆಯಲ್ಲಿ ಎಲ್ಲರ ಸಮ್ಮುಖದಲ್ಲಿ ರಾಮರಾಯರಿಗೆ ವಿಷಯ ಅರುಹಿದ, ಆದರೆ ಮುನ್ನೆಚ್ಚರಿಕೆಯ ಫಲವಾಗಿ ವಿಜಯನಗರಕ್ಕೆ ಮುತ್ತಿಗೆ ಹಾಕಿದ ಮಂತ್ರಿ ತಿಮ್ಮರಸ ಮತ್ತು ವೈರಿಗಳ ಸೈನ್ಯವನ್ನು ಯುದ್ಧದಲ್ಲಿ ಧೂಳಿಪಟ ಮಾಡಿ ರಾಮರಾಯನನ್ನು ಕಾಪಾಡಿದ.

ಹನುಮಪ್ಪನಾಯಕನ ಧೈರ್ಯ, ಸಾಹಸದಿಂದ ವಿಜಯನಗರಕ್ಕೆ ಎದುರಾಗಿದ್ದ ಕಂಟಕ ದೂರಾಯಿತು. ರಾಮರಾಯರ ನೆರವಿನಿಂದ ಬುಕ್ಕರಾಯ ಸಮುದ್ರಕ್ಕೆ ಹೋಗಿ ಅಲ್ಲಿಯೇ ರಾಜದರ್ಬಾರ ಆರಂಭಿಸಿದನು ಅಲ್ಲದೆ ಅಲಿ ಆದಿಲ್‌ಶಾಹ ಕೊಟ್ಟ ಹನ್ನೊಂದು ಪರಗಣಿಗಳು ಎರಡು ರಾಜ್ಯವನ್ನು ನಡೆಸಿಕೊಂಡು ಹೋಗುವನು. ಸಕಲ ಪ್ರಜೆಗಳ ನೆಮ್ಮದಿಯಿಂದಿರಲು ಕೋಟೆ, ಕೊತ್ತಲ, ಕೆರೆ, ಬಾವಿಗಳನ್ನು ತೋಡಿಸಿದನು.

ಹಂಡೆ ವಂಶದ ಮೂಲ ಪುರುಷನಾದ ಬಲದ ಹನುಮಪ್ಪನಾಯಕನಿಗೆ ಐವರು ಗಂಡು ಮಕ್ಕಳು, ತನ್ನ ಮಕ್ಕಳಿಗೆ ಪರಗಣಿಗಳನ್ನು ಹಂಚಿಕೊಡುತ್ತಾನೆ. ನ್ಯಾಯಯುತವಾಗಿ ಆಳ್ವಿಕೆ ನಡೆಯಿಸಲು ಬೋಧಿಸುತ್ತಾನೆ. ಅಖಂಡ ಪ್ರಜಾಕೋಟಿಗರಿಗಾಗಿ ಸಮಯ ಬಂದಾಗ ರಾಜನಾದವನು ಪ್ರಾಣಕೊಡಲು ಸದಾಸಿದ್ಧನಾಗಿರಬೇಕು.

"ಎಲ್ಲ ಮಕ್ಕಳು–ತಮ್ಮ ಅಪ್ಪಣೆಯನ್ನು ಶಿರಸಾವಹಿಸಿ ಪಾಲಿಸುತ್ತೇವೆ. ಅಪ್ಪಾಜಿ, ಅಗ್ನಿಸಾಕ್ಷಿಯಾಗಿ, ತಮ್ಮ ಪಾದಸಾಕ್ಷಿಯಾಗಿ ಕೈಕೊಂಡ ಪ್ರತಿಜ್ಞೆ ಇದು ಹಂಡೆ ಆಳರಸರ ವೃತವಿದು".[೧೬೮] ತಂದೆಗೆ ತಕ್ಕ ಮಕ್ಕಳಿವರು ಎಂದಾಗ ತಪ್ಪಾಗದು.

ರಾಜ ಗುರು ಕರಿಬಸವ ಶಿವಾಚಾರ್ಯರು ಒಂದು ಹಂತದಲ್ಲಿ ಬುಕ್ಕಸಮುದ್ರದ ಸಾಮ್ರಾಜ್ಯವು ಮೊಹ್ಮದಿಯ ಕೈವಶವಾಗುವ ಪ್ರಸಂಗ ಬಂದೀತೆ ? ಕರ್ನಾಟಕದ ಕೀರ್ತಿ ಸಾಮ್ರಾಜ್ಯದ ಕಿರೀಟವು ಕಳಚುವ ಕಾಲ ಸನ್ನಿಹಿತವಾಯಿತೆ ? ಎಂಬ ಸಂಶಯ ಮನದಲ್ಲಿ ಮೂಡಿದ್ದು ಸಹಜವಾಗಿದೆ. ಇತಿಹಾಸದಲ್ಲಿ ಎಂತೆಂಥ ಘಟನೆಗಳು ಘಟಿಸುತ್ತವೆ ಇದರೊಟ್ಟಿಗೆ ರಾಜ–ಮಹಾರಾಜರ ಏಳು–ಬೀಳುಗಳು ಸೇರಿಕೊಂಡಿರುತ್ತವೆ.

ಬಲದ ಹನುಮಪ್ಪನಾಯಕನ ಮೊಮ್ಮಗನಾದ ಪ್ರಸನ್ನನಾಯಕನು ಅನಂತಪುರದ ಅರಸನಾಗಿ ರಾಜ್ಯಭಾರ ಮಾಡುತ್ತಿರುತ್ತಾನೆ. "ರಾಜಾ ಪ್ರತ್ಯಕ್ಷ ದೇವತಾ" ಎಂಬ ಮಾತನ್ನು ಕಡೆಗಣಿಸುತ್ತಾನೆ. ಆತನ ಮನಸ್ಸು ವಿಕೃತಕಾಮಕ್ಕೆಳಿಸುತ್ತದೆ. ರಾಣಿ ಸಿದ್ಧಮ್ಮ ಇದು ಅಪರಾಧ ಎಂದು ಬುದ್ಧಿ ಹೇಳುತ್ತಾಳೆ ಅದೇನೊ ಅನ್ನುತ್ತಾರೆ "ಕಾಮಾ ತುರಾಣಾಂ ನ ಭಯಂ, ನ ಲಜ್ಜಂ" ಎನ್ನುವವನಿಗೆ ಯಾರ ಮಾತೇನು ಹಿಡಿಸೀತು?

"ಪ್ರಸನ್ನನಾಯಕ : ಮಹಾರಾಣಿ, ನನಗೆ ಬುದ್ಧಿ ಹೇಳಲು ನೀನಾರು ?

ರಾಣಿಸಿದ್ಧಮ್ಮ : ಈ ಅನಂತಪುರದ ಪ್ರಜೆ ಅಲ್ಲದೆ ನಿಮ್ಮ ಸತಿ ಸಿದ್ಧಮಾಂಬೆ, ಹಾದಿ ಬಿಟ್ಟಿರುವ ಪತಿಗೆ ತಿದ್ದಿ ತೀಡುವ ಹಕ್ಕು ಸತಿಗಲ್ಲದೆ ಮತ್ತಾರಿಗಿರುತ್ತದೆ. ಅಲ್ಲದೆ ಹಾದಿಬಿಟ್ಟ ಪತಿಗೆ ಸರಿದಾರಿಗೆ ತರುವುದು ಸತಿಯಾದವಳ ಧರ್ಮ" [೧೬೯] ಕಂಡ ಕಂಡ ಪುಷ್ಪಗಳ ಬಂಡನ್ನುಂಡ ಭ್ರಮರ ಅದೇ ಪುಷ್ಪದಲ್ಲಿ ಹೊಕ್ಕು ಮರಣವನ್ನಪ್ಪುತ್ತದೆ ಎನ್ನುವುದು ತಿಳಿದಿರಬೇಕು ಅಲ್ಲವೆ ?

ಪ್ರಸನ್ನ ನಾಯಕ ಸ್ತ್ರೀ ವ್ಯಸನಿಯಾಗಿದ್ದು, ಅದನ್ನು ತಪ್ಪಿಸಲು ಮಂತ್ರಿ ಹಾವಿನಾಯಕ ಪಡುತ್ತಿರುವ ಸಂಕಟವನ್ನು ಆಲ್ದಾಳರು ಚೆನ್ನಾಗಿ ಚಿತ್ರಿಸಿದ್ದಾರೆ.

"ಹಾವಿನಾಯಕ–ರಾಜಕೀಯ ವ್ಯವಸ್ಥೆ ಕೆಟ್ಟಾಗ, ಹದಗೆಟ್ಟಾಗ ಅದನ್ನು ಸರಿಪಡಿಸುವುದು ಮಹಾಮಂತ್ರಿಯಾದ ನನ್ನ ಕರ್ತವ್ಯ. ಅರ್ಥಶಾಸ್ತ್ರದಲ್ಲಿ ಸೂಚಿಸಿದಂತೆ ರಾಜ್ಯರಥಕ್ಕೆ ಎರಡು ಗಾಲಿಗಳು. ಒಂದು ಅರಸನದು, ಇನ್ನೊಂದು ಮಂತ್ರಿಯದು ಈ ಎರಡು ಗಾಲಿಗಳು ಸಮನಾಂತರದಲ್ಲಿ ನಡೆದಾಗ ಮಾತ್ರ ರಥಸರಿಯಾಗಿ ಚಲಿಸುತ್ತದೆ. ಅರಸರು ತಮ್ಮ ಅಧಿಕಾರದ ದುರುಪಯೋಗವಾಗದಿರಲಿ. ಈ ಹಿಂದೆ ಸ್ವೇಚ್ಛಾ ವೃತ್ತಿಯಿಂದ ವರ್ತಿಸಿದ ಅರಸರು ಅಧಿಕಾರನ್ನು ಕಳೆದುಕೊಂಡದ್ದು ತಿಳಿಯದ ವಿಷಯವೇನಲ್ಲ, ರಾಜ್ಯ ರಕ್ಷಣೆ, ರಾಜ್ಯವಿಸ್ತಾರ, ಇವೆಲ್ಲವೂಗಳಿಗೂ ಅರಸನಷ್ಟೇ ಮುಖ್ಯಮಂತ್ರಿಗಳದ್ದು". [೧೭೦]

ಯಾವ ಹಂಡೇ ವಜೀರ ವೀರಶೈವ ಆಳರಸರ ದರಬಾರದಲ್ಲಿ ವಿಜಯಧ್ವನಿ ಮೊಳಗಬೇಕಾಗಿತ್ತೋ, ಆ ದರ್ಬಾರದಲ್ಲಿಂದು ಕಾಮಕೇಳಿಯ ಧ್ವನಿಸತೊಡಗಿದೆ. ಅರಸು ಮನೆತನದ ಮರ್ಯಾದೆಗೆ ಕಲಂಕದ ಕೆಸರು ಅಂಟಿಕೊಂಡಿತು.

ನರ್ತಕಿ ವಾಸಂತಿ ಕೊನೆಗೂ ಪ್ರಸನ್ನನಾಯಕನನ್ನು ಕ್ರೂರವಾಗಿ ಕೊಲೆ ಮಾಡುತ್ತಾಳೆ. ಇದನ್ನೇ ಕರಿಬಸವ ಶಿವಾಚಾರ್ಯರು ಬಹುಮಾರ್ಮಿಕವಾಗಿ ಕೆಳಗಿನಂತೆ ಹೇಳಿದ್ದಾರೆ.

'ಪುಷ್ಪದೊಳಗೆ ಹೊಕ್ಕ ಭೃಂಗ ಹೆಣವಾಗಿಯೇ ಹೊರಗೆ ಬರುವುದು ಎಂದು ಅಂದು ನಾವು ಹೇಳಿದ್ದೇವು' ಕೊನೆಗೂ ಅದು ನಿಜವಾಯಿತು. ವಿಷಯಾತುರದಲ್ಲಿ ಸಿಕ್ಕವರ ಸ್ಥಿತಿ ಎಲ್ಲಿಗೆ ಬಂದು ನಿಲ್ಲುತ್ತದೆನ್ನುವುದಕ್ಕೆ ಪ್ರಸನ್ನನಾಯಕನೇ ಸಾಕ್ಷಿ.

ಹಂಡೆಕುಲತಿಲಕ ರಾಜಾಬಲದ ಹನುಮಪ್ಪ ನಾಯಕನ ಎರಡನೇ ಮೊಮ್ಮಗ ತನ್ನ ಅಣ್ಣನಾದ ಪ್ರಸನ್ನ ನಾಯಕನಿಗಿಂತ ಭಿನ್ನನಾಗಿದ್ದ ಆತನೇ ಪವಾಡೆಪ್ಪನಾಯಕ ಈತ ಬುಕ್ಕಸಮುದ್ರದ ಅರಸನಾಗಿದ್ದ ಜನರಿಗೆ ಯಾವ ತೊಂದರೆಯಾಗದಂತೆ ನೋಡಿಕೊಳ್ಳುತ್ತಿದ್ದ. ಪ್ರಜೆಗಳನ್ನು ತನ್ನ ಮಕ್ಕಳಂತೆ ನೋಡುತ್ತಿದ್ದ. ಆದರೆ ವಿಧಿಬರಹವೇ ಬೇರೆಯಾಗಿತ್ತು. ತಮ್ಮವರ ಸಂಚಿನಿಂದಾಗಿ ಕಡಪಾದ ನವಾಬರ ಷಢ್ಯಂತ್ರದಿಂದ ಹಾಗೂ ಮಂತ್ರಿ ರಾಮಜಿಯ ಕುತಂತ್ರದಿಂದ ಸುರಂಗದಲ್ಲಿ ಬಂಧಿಯಾಗುತ್ತಾನೆ. ರಾಜಗುರು ಕರಿಬಸವ ಶಿವಾಚಾರ್ಯರ ಕೃಪೆಯಿಂದ ಅಲ್ಲಿಂದ ಪಾರಾಗಿ ಬದುಕುಳಿಯುತ್ತಾನೆ. ವೈರಿಗಳನ್ನು ಸದೆಬಡೆದು ಮತ್ತೇ ಅರಸು ಪಟ್ಟಕ್ಕೇರುತ್ತಾನೆ.

"ರಾಜದರಬಾರ ನಡೆಯುತ್ತಲಿದೆ ಶತಾಯುಷಿ ಹಂಡೆಕುಲತಿಲಕ ಹನುಮಪ್ಪನಾಯಕ ಸಿಂಹಾಸನರೂಢನಾಗಿದ್ದಾನೆ. ಎಡಬಲ ಬಂಧು-ಬಾಂಧವರು ಮಂತ್ರಿ ಮಹೋದಯರು ಕುಳಿತಿದ್ದಾರೆ. ರಾಜ ಗುರು ಶಿವಾಚಾರ್ಯರು ಸಭೆಯನ್ನುದ್ದೇಶಿಸಿ ಮಾತನಾಡುತ್ತ, ನಮ್ಮ ಹಂಡೆ ಕುಲತಿಲಕ ಬಲದ ಹನುಮಪ್ಪ ನಾಯಕರು ಬುದ್ಧಿ ಬಲದಿಂದ, ಬಾಹು ಬಲದಿಂದ, ಶಕ್ತಿ ಬಲದಿಂದ ರಾಜ್ಯವನ್ನಾಳಿದ ಧೀಮಂತ ಪುರುಷನೀಗ ಶತಮಾನದ ಶಕಪುರುಷನಾಗಿರುವುದು ಸೌಭಾಗ್ಯ. ಸೊಕ್ಕೇರಿದವರ ಮಣ್ಣು ಮುಕ್ಕಿಸಿದ, ಚಂಡ ಪ್ರಚಂಡರಾಗಿ ಬಂದವರ ಮುಂಡದಿಂದ ರುಂಡವನ್ನು ಕತ್ತಿರಿಸಿದ ಗಂಡು, ಗಂಡರಗಂಡ ಹಂಡೆ ಹನುಮಪ್ಪನಾಯಕರಿಗೆ ಬುಕ್ಕಸಮುದ್ರ ಹಾಗೂ ಬಂಕಾಪುರದ ಪ್ರಜೆಗಳು ಪುಷ್ಪವೃಷ್ಟಿ ಹಾಕಿ ಸಂತೋಷಿಸಲಿ. ಇದೇ ಸಂಭ್ರಮದ ಮಧ್ಯೆ ಹಂಡೆ ಕುಲತಿಲಕ ಬಲದ ಹನುಮಪ್ಪನಾಯಕ ಲಿಂಗೈಕ್ಯರಾಗುವರು ಕೊನೆಯಲ್ಲಿ ರಾಜಗುರುಗಳ ಹೊಸ ಕೆರೆ ಮಠದಲ್ಲಿ ಸಮಾಧಿಸ್ತರಾದರು". [೧೭೧]

"ನಾಟಕವು 'ಹಂಡೆಕುಲತಿಲಕ ಹನುಮಪ್ಪನಾಯಕ', ಹಂಡೆ ವಜೀರ ಅರಸು ಮನೆತನದ ವಿಷಯದ ಅಧ್ಯಯನ ಕ್ಷೇತ್ರದಲ್ಲಿ ಇದೊಂದು ವಿಶಿಷ್ಟ ಮೌಲಿಕ ನಾಟಕವಾಗಿ ಸಾಹಿತ್ಯಾಸಕ್ತರಿಗೂ, ಜನಸಾಮಾನ್ಯರಿಗೂ ಉಪಯುಕ್ತವೆಂಬುದು ನಿಸ್ಸಂಶಯ, ಹೀಗೆ ಇತಿಹಾಸದ ಪುಟಗಳಿಂದ ಪರಿಶೋಧಿಸಿ ಶ್ರೀ ಆಲ್ದಾಳರು ತಮ್ಮ ಸೃಜನ ಶೀಲ ಪ್ರತಿಭೆಯ ಮೂಸೆಯಿಂದ ಈ ವಿಷಯವನ್ನು ನಾಟಕ ಕೃತಿಯಾಗಿಸಿದ್ದಾರೆ". [೧೭೨]

"ಜಗದ್ವಿಖ್ಯಾತ ಕಲ್ಯಾಣ ಚಾಲುಕ್ಯ ಸಾಮ್ರಾಜ್ಯದ ಅಧೀನರಾಜರಾಗಿ ಆಳಿದ ಅರಸರಲ್ಲಿ ಹಂಡೆ ಮನೆತನವೂ ಒಂದು. ಕರ್ನಾಟಕದ ಗಡಿಭಾಗದ, ಮಹಾರಾಷ್ಟ್ರದ ಸೋಲಾಪೂರ ಜಿಲ್ಲೆ, ಆಂಧ್ರದ ಕರೀಮನಗರ, ನಲ್ಗೊಂಡ, ಅನಂತಪೂರ, ಕರ್ನೂಲ, ದಕ್ಷಿಣ ಅರ್ಕಾಟ, ಕರ್ನಾಟಕದ

ಚಿತ್ರದುರ್ಗ, ಬಳ್ಳಾರಿ, ರಾಯಚೂರು, ಯಾದಗಿರಿ, ಕಲಬುರುಗಿ, ವಿಜಯಪುರ ಜಿಲ್ಲೆಗಳಲ್ಲಿ ಈ ಹಂಡೆ ಅರಸರ ಕುರುಹುಗಳನ್ನು ಕಾಣುತ್ತೇವೆ". [೧೭೩]

"ವಿಜಯನಗರ ಸಾಮ್ರಾಜ್ಯದ ಅರಸ ಅಳಿಯರಾಮರಾಯನ ಕಾಲದಿಂದ ಅನಂತಪುರ ಪ್ರದೇಶದ ಈ ಭಾಗವು 'ಹಂಡೆ ಅನಂತಪುರರಾಜ್ಯ' ಎಂಬ ಹೆಸರನ್ನು ಪಡೆದು ಸೊನ್ನಲಾಪುರದ ಹಂಡೆವಂಶದ'ವರಾದ ಕನ್ನಡಿಗರಿಂದ ೩೫೦ ವರ್ಷಗಳ ಮೇಲ್ಪಟ್ಟು ಆಳಲ್ಪಟ್ಟಿತು. ಈ ಹಂಡೆವಂಶದ ಮೂಲ ಪುರುಷನಾದ "ಹನಮಪ್ಪನಾಯಕನು" ವಿಜಯನಗರ ಸಾಮ್ರಾಜ್ಯವು ಮುಸಲ್ಮಾನರ ವಶವಾಗದಂತೆ ರಕ್ಷಿಸಿ ಅಜರಾಮರವಾದ ಕೀರ್ತಿಯನ್ನು ಸಂಪಾದಿಸಿದನು. ೧೮ನೇಯ ಶತಮಾನದ ಕೊನೆಯಲ್ಲಿ ಹೈದರಲಿ, ಟಿಪ್ಪುಸುಲ್ತಾನರ ಕಾಲದಲ್ಲಿ ಈ ವಂಶದ ಪತನವಾಗಿ ೧೮೦೦ರಲ್ಲಿ ಬ್ರಿಟಿಷರ ಆಳ್ವಿಕೆಯ ಕೆಳಗೆಬಂದಿತು". [೧೭೪]

"ಹಂಡೆ ಅರಸರು ಶೈವರಾಗಿ ನಂತರ ವೀರಶೈವರಾಗಿ ಹನ್ನೆರಡನೆಯ ಶತಮಾನದಿಂದ ಲಿಂಗಾಯತರಾಗಿ ಬೆಳೆದುಬಂದಿರುವುದು ಹಂಡೆ ಅರಸರ ಐತಿಹಾಸಿಕ ಹಿನ್ನಲೆಯಿಂದ ತಿಳಿದು ಬರುತ್ತದೆ".

ವೀರಶೈವ ಹಂಡೇವಜೀರ ಸಮಾಜಕ್ಕೆ ಹತ್ತನೆಯ ಶತಮಾನದಷ್ಟು ಹಿಂದಿನ ಇತಿಹಾಸವಿದೆ. ಕನ್ನಡ ನಾಡು, ನುಡಿಗೆ ಮತ್ತು ಸಾಂಸ್ಕೃತಿಕ ಲೋಕಕ್ಕೆ ಈ ಸಮುದಾಯ ನೀಡಿದ ಕೊಡುಗೆ ಅನುಪಮ. ವಿಜಯನಗರ ಸಾಮ್ರಾಜ್ಯದ ಅಳಿವು-ಉಳಿವಿನ ಹಂತದಲ್ಲಿ ಈ ಸಾಮ್ರಾಜ್ಯಕ್ಕೆ ಆಸರೆಯಾಗಿ ನಿಂತು ಅದರ ರಕ್ಷಣೆಮಾಡಿದ ಹೆಮ್ಮೆ ಈ ಜನಾಂಗಕ್ಕಿದೆ".[೧೭೫]

"ಇತಿಹಾಸದಲ್ಲಿ ತಮ್ಮದೇ ಹೆಜ್ಜೆಗುರುತುಗಳನ್ನು ಮೂಡಿಸಿ ಮರೆಯಾದವರು 'ಹಂಡೆ ಪಾಳೆಯಗಾರ ಅರಸರು' ಇವರನ್ನು ಕುರಿತು ಬಹುಹಿಂದೆ (೧೮೫೩ರಲ್ಲಿ) ಸಿ.ಪಿ.ಬ್ರೌನ್ ಎಂಬ ವಿದೇಶಿ ವಿದ್ವಾಂಸ, ಕನ್ನಡ, ತೆಲುಗು, ಮರಾಠಿ ದಾಖಲೆಗಳನ್ನು ಸಂಗ್ರಹಿಸಿ, ಅವುಗಳ ಆಧಾರದಿಂದ ಇಂಗ್ಲಿಷನಲ್ಲಿ 'ದಿ ವಾರ್ಸ್ ಆಫ್ ದಿ ರಾಜಾಸ್' ಎಂಬ ಪುಸ್ತಕವನ್ನು ಬರೆದದ್ದು ಅದರಿಂದ ಈ ಅರಸರ ಚರಿತ್ರೆಯ ಅಧ್ಯಯನದ ಬಾಗಿಲು ತೆರೆದದ್ದು ಕೂಡ ಈಗ ಇತಿಹಾಸ"[೧೭೬]

ಕಲಬುರ್ಗಿಯ ಚಾಲುಕ್ಯ ಸಂಸ್ಕೃತಿ ಅಧ್ಯಯನ ಪೀಠದ ಅಧ್ಯಕ್ಷ ಶ್ರೀ ಜಿ.ಎನ್.ಪಾಟೀಲರು ಹೀಗೆ ಬರೆಯುತ್ತಾರೆ. "ಚಾಲುಕ್ಯ ಸಂಸ್ಕೃತಿ ಅಧ್ಯಯನ ಪೀಠದಿಂದ ೨೦೦೪ರಲ್ಲಿ " ಹಂಡೆ ಅರಸು ಮನೆತನದ ವಂಶಾವಳಿ" ಮತ್ತು ವೀರಶೈವ ಹಂಡೇ ವಜೀರ ಜನಾಂಗ ಪರಿಚಯ' ಎಂಬ ಎರಡು ಗ್ರಂಥಗಳನ್ನು ಹೊರತರಲಾಗಿದ್ದು, ಇದೀಗ "ಹಂಡೆ ಪಾಳೆಗಾರರ ಕುರಿತ ಕೈಫಿಯತ್ತುಗಳು' ಎಂಬ ಕೃತಿಯು ಬೆಳಕು ಕಾಣುತ್ತಲಿದೆ. ಅಜ್ಞಾತವಾಗಿದ್ದ ಹಂಡೆ ಅರಸರಿಗೆ ಸಂಬಧಿಸಿದ ಕೈಫಿಯತ್ತು (ವಂಶಾವಳಿ)ಗಳನ್ನು ಪ್ರೋ.ಎಸ್.ಸಿ.ಪಾಟೀಲರು ಒಂದೆಡೆಗೆ ಸಂಪಾದಿಸಿದ್ದಾರೆ. ಅವರಿಗೆ ನಮ್ಮ ಅನಂತ ಕೃತಜ್ಞತೆಗಳು". [೧೭೭]

"ಡಾ.ಎಸ್.ಸಿ. ಪಾಟೀಲರು, ಕನ್ನಡ ಸಾಹಿತ್ಯ, ಜಾನಪದ, ಶಿಕ್ಷಣಕ್ಷೇತ್ರವಲ್ಲದೆ ವಿಶೇಷವಾಗಿ ಆಸಕ್ತಿಯನ್ನು ಚಿತ್ರ ಮತ್ತು ಶಿಲ್ಪಕಲೆಗಳಲ್ಲಿ ಹೊಂದಿದವರಾಗಿದ್ದಾರೆ. ಇವರ ಸಂಪಾದನೆಯ 'ಬುಕ್ಕರಾಯ ಚರಿತ್ರೆ' ಹಂಡೆ ಅರಸು ಮನೆತನದ ವಂಶಾವಳಿ, ಹಂಡೆ ವಜೀರ ಜನಾಂಗದ ವ್ಯಕ್ತಿಯೊಬ್ಬ ಊರ ಗೌಡನಾಗಿ, ಸಂಸ್ಥಾನಿಕನಾಗಿ, ಪಾಳೆಗಾರನಾಗಿ ರಾಜ್ಯವನ್ನು ಸಂಪಾದನೆ ಮಾಡಿದ ವಿವರಣೆ ಇದರಲ್ಲಿದೆ. ಇಲ್ಲಿ ಹಂಡೆ ಅರಸರ ಅನೇಕ ಐತಿಹಾಸಿಕ ವಿವರಗಳನ್ನು ಪ್ರಥಮ ಬಾರಿಗೆ ಬೆಳಕಿಗೆ ಬಂದಿವೆ. ಮುಂದಿನ ಸಂಶೋಧಕರಿಗೆ ಇದೊಂದು ಪ್ರಮುಖ ಆಕರ ಗ್ರಂಥವಾಗಲಿದೆ". [೧೭೮]

'ಹಂಡೆ' ಎಂಬ ವಿಶೇಷಣ, ಜೋಯಿಸರು, ಜೋಗಿಗಳು, ವಾಲ್ಮಿಕಿಗಳು, ರಾವುತರು, ಗೌಡರು, ಕುರುಬರು, ಕೊರವರು, ಮುಸ್ಲಿಂರು, ವಟ್ಟುಗಳು–ಇಷ್ಟು ಜಾತಿ–ಜನಾಂಗಗಳವರೆಗೆ ಇದ್ದ ಸಂಗತಿ ಈಚೆಗೆ ತಿಳಿದು ಬಂದಿದ್ದು ಅದು ಒಂದೇ ಕೋಮಿಗೆ ಇರುವಂಥದಲ್ಲ ಎಂಬುದು ಸ್ಪಷ್ಟವಾಗಿದೆ. ಈ ಪಾಳೆಯಗಾರರು ವಿಜಾಪುರ–ವಿಜಯನಗರ ಕಾಲಕ್ಕಿಂತ ಹಿಂದಿನಿಂದ ಲಿಂಗಾಯತ ಅಥವಾ ವೀರಶೈವ ಧರ್ಮದವರಿದ್ದರೆಂದು ಈಗಾಗಲೆ ಸಂಶೋಧಕರು ತೋರಿಸಿಕೊಟ್ಟಿದ್ದಾರಾಗಿ ಈ ಮೇಲಿನ ಮಾತನ್ನು ಹೇಳುವುದು ಅಗತ್ಯವಿದೆ ಎನಿಸಿತು.

ಇತಿಹಾಸಕ್ಕೆ ಯಾವುದೇ ಅಪಚಾರವಾಗದಂತೆ ನಡೆದುಕೊಳ್ಳಬೇಕಾಗಿರುವುದು ಬರಹಗಾರರ, ಸಾಹಿತಿಗಳ ಕೆಲಸವಾಗಬೇಕು 'ರಾಜಾ ಬಲದ ಹನುಮಪ್ಪ ನಾಯಕ' ಐತಿಹಾಸಿಕ ನಾಟಕದ ರಚನೆಯ ವಿಷಯದಲ್ಲಿ ನಾಟಕಕಾರ ಆಲ್ದಾಳ ಅವರು "ಹಂಡೆವಜೀರ" ವಂಶಾವಳಿಯನ್ನ ಬೆಳಕಿಗೆ ತರುವಲ್ಲಿ ಹಾಗೂ ನಾಟಕದ ಬಗ್ಗೆ ಯಾವುದೇ ಅಪಾರ್ಥವಾಗದಿರಲು ಬಹುಜಾಣನಡೆ ಪ್ರದರ್ಶಿಸಿದ್ದಾರೆ. ಹಂಡೆ ವಂಶಕ್ಕೆ ಸಂಬಂಧಿಸಿದ ಎಲ್ಲಾ ಕೋನಗಳನ್ನು ಹದ್ದಿನ ಕಣ್ಣಿನಿಂದ ನೋಡಿದ್ದಾರೆ. ಸಾಕಷ್ಟು ಗ್ರಂಥಗಳನ್ನು ಈ ಬಗ್ಗೆ ತಡಕಾಡಿದ್ದಾರೆ. ಐತಿಹಾಸಿಕ ನಾಟಕಗಳು ನಡೆದ ಘಟನೆಗಳ ಬಗ್ಗೆ ಚಿತ್ರ ನೀಡುತ್ತವೆ ಅದಕ್ಕಾಗಿ ಲೇಖಕರು ಯಾವುದೇ ದಿಕ್ಕು ತಪ್ಪಿಸುವ ಕೆಲಸಕ್ಕೆ ಕೈಹಾಕದೇ ನ್ಯಾಯವನ್ನು ನಿಷ್ಠುರವಾಗಿ ನಡೆದುಕೊಳ್ಳಬೇಕು ಅದಕ್ಕಾಗಿ ಆಲ್ದಾಳರು ಸಾಕಷ್ಟು ಆಕರ ಗ್ರಂಥಗಳನ್ನು ಸೂಕ್ಷ್ಮವಾಗಿ ಅಭ್ಯಸಿಸಿ ನಾಟಕದ ರೂಪದಲ್ಲಿ ಮನೋಜ್ಞವಾಗುವಂತೆ ರಚಿಸಿದ್ದಾರೆ ಎಂಬುದಕ್ಕೆ ಸುಮಾರು ಹತ್ತಾರು ಆಕರ ಗ್ರಂಥಗಳ ವಿವರಗಳನ್ನು ನಾಟಕ ಕೃತಿಯ ಕೊನೆಯಲ್ಲಿ ಪ್ರಕಟಿಸಿರುವುದಕ್ಕೆ ಸಾಕ್ಷಿಯಾಗಿದೆ.

ನಮ್ಮ ಸಾಂಸ್ಕೃತಿಕ ಪರಿಸರದಲ್ಲಿ ತಾಜಾತನವನ್ನು ಉಳಿಸಿಕೊಂಡು ಸಾಗಿಬಂದ ಎಲ್.ಬಿ.ಕೆ.ಆಲ್ದಾಳ ಅವರು ನಾನಾ ಹಂತಗಳಲ್ಲಿ ಅವರ ಶ್ರಮ, ಅಧ್ಯಯನ ಶೀಲತೆ ಪ್ರಾಮಾಣಿಕತೆಗಳು ನಿಚ್ಚಳವಾಗಿ ಕಾಣುತ್ತೇವೆ. ಅ ಆ ಇ ಈ ಯ ಗಂಧವೂ ಸೂಸದಿದ್ದ ಮುಗ್ಧ ಹಳ್ಳಿ ನೆಲದಲ್ಲಿ ಜನಿಸಿ ಮಣ್ಣಿನ ಚೈತನ್ಯಶೀಲತೆಯನ್ನು ಗುಟುಕರಿಸುತ್ತಾ, ಇವತ್ತು ಮರವಾಗಿ ಬೆಳೆದಿರುವ ಎಲ್.ಬಿ.ಕೆ. ತನ್ನ ತಳದಲ್ಲಿನ ಮೂಲ ಗರಿಕೆಯ ಬೇರಿಗೆ ಪಸಿಯನ್ನು ಕಾಯ್ದಿಟ್ಟುಕೊಳ್ಳುವ ಮಣ್ಣಿನ ಮನಸ್ಸನ್ನು ಉಳಿಸಿಕೊಂಡಿರುವ ಪರಿಯೇ ಈ ಬದುಕಿಗೆ ವೈವಿಧ್ಯತೆಯ ಪೂರ್ಣಾರ್ಥ ತಂದುಕೊಡುತ್ತದೆ.

ಪ್ರಸ್ತುತ ಐತಿಹಾಸಿಕ ನಾಟಕ 'ಹಂಡೆಕುಲತಿಲಕ ರಾಜಾಬಲದ ಹನುಮಪ್ಪ ನಾಯಕ'

**'ನೋಡ ಬನ್ನಿರಿ । ಕೇಳಬನ್ನಿರಿ ।**
**ಹಂಡೆ ಆಳರಸರ ಚರಮಗೀತೆ ।**
**ಕೇಳ ಬನ್ನಿರಿ ಹಾಡ ಬನ್ನಿ ॥ಪ॥** ಗೀತೆಯೊಂದಿಗೆ ಆರಂಭವಾಗುತ್ತದೆ.

ಈ ನಾಟಕ ಇಪ್ಪತ್ತೊಂದು ಪ್ರವೇಶಗಳನ್ನು ಹೊಂದಿದೆ. ಪ್ರಾರಂಭ ಗುರು-ಶಿಷ್ಯರ ಸಂವಾದ, ಪ್ರಶ್ನೆ ಉತ್ತರಗಳ ಮೂಲಕ ರಂಗಭೂಮಿಯಲ್ಲಿ ವಿಜೃಂಭಿಸುತ್ತದೆ. ವಿವಿಧ ನಾಟಕ ಬರೆಯುವ ಕಲೆಯನ್ನು ಕರಗತ ಮಾಡಿಕೊಂಡಿರುವ ನಾಟಕಕಾರ ಆಲ್ದಾಳರು ಈ ಐತಿಹಾಸಿಕ ನಾಟಕವು ಸಹ ರಂಗಭೂಮಿಯ ಮೇಲೆ ಪ್ರಯೋಗಗೊಂಡು ಪ್ರೇಕ್ಷಕರನ್ನು ರಂಜಿಸುವುದರ ಜೊತೆಗೆ ನಮ್ಮ ಪೂರ್ವಿಕರು ದೇಶದ ಘನತೆ, ಗೌರವ ಕಾಪಾಡಿಕೊಂಡು ಬರುವಲ್ಲಿ ದೇಶ ದ್ರೋಹಿಗಳ ವಿರುದ್ದ ಕೆಚ್ಚೆದೆಯಿಂದ ಹೋರಾಟ ನಡೆಸಿರುವುದು ಹೆಮ್ಮೆ ಮೂಡಿಸುತ್ತದೆ. ಸಾಹಿತ್ಯ ನಿಂತ ನೀರಲ್ಲ, ಬದಲಾವಣೆಯೇ ಅದರ ವಿಶಿಷ್ಟ ಲಕ್ಷಣ. ರಾಷ್ಟ್ರ ಭಕ್ತಿ, ಭಾಷಾಭಿಮಾನ ಮುಖ್ಯವಾಗಿವೆ ಎನ್ನುವ ಮಾತು ಐತಿಹಾಸಿಕ ನಾಟಕಗಳಿಂದಲೇ ಕಾಣಬಹುದು. ಹೆಚ್ಚಿನ ಐತಿಹಾಸಿಕ ನಾಟಕಗಳು ರಾಷ್ಟ್ರಾಭಿಮಾನದ ಸಂಕೇತವಾಗಿರುತ್ತವೆ.

ಎಲ್.ಬಿ.ಕೆ. ಆಲ್ದಾಳ ಅವರ ನಾಟಕಗಳೆಂದರೆ ಕೇವಲ ವೀಕ್ಷಿಸುವುದಕ್ಕಾಗಲಿ, ನಗುವುದಕ್ಕಾಗಲಿ ಅಲ್ಲ, ನಮ್ಮಲ್ಲಿ ಹೂತು, ಕೊಳೆತು ಹೋಗಿರುವ ಅವ ಗುಣಗಳ ಪಟ್ಟಿಮಾಡುತ್ತ ನಮಗೊಂದು ಎಚ್ಚರಿಕೆ ಕೊಡುತ್ತವೆ. ಅವರ ನಾಟಕಗಳಲ್ಲಿ ಒಂದು ರಸಾನುಭವದ ಚೂರ್ಣವಿದೆ. ಅದನ್ನು ಮೆದ್ದಷ್ಟು ನಮ್ಮ ಬುದ್ಧಿಗೆ ಹೊಸ ಆರೋಗ್ಯದ ಪ್ರಾಪ್ತಿ ಆಗುತ್ತದೆ ಇದುವೆ ಆಲ್ದಾಳರ ನಾಟಕಗಳ ಉತ್ತಮ ಶೈಲಿ.

ಆಲ್ದಾಳರ ಅಮರ ಕಲಾಕೃತಿಯಾದ 'ಹಂಡೆಕುಲತಿಲಕ ರಾಜಾಬಲದ ಹನುಮಪ್ಪ ನಾಯಕ' ಚಾರಿತ್ರಿಕ ಅಂಶಕ್ಕೆ ಕುಂದು ಬರದಂತೆ ಮೂಲ ವಸ್ತುವಿನಲ್ಲಿ ಯಾವುದೇ ಬದಲಾವಣೆ ಮಾಡದಂತೆ ಎಚ್ಚರಿಕೆಯಿಂದ ನಾಟಕಕಾರರು ನಾಟಕವನ್ನು ಹೆಣೆದಿದ್ದಾರೆ.

# ಅಪ್ರಕಟಿತ ನಾಟಕಗಳು

**ಗಾಜರಕೋಟೆ ಚೆನ್ನಪ್ಪಯ್ಯ :**

ಸುಮಾರು ೧೭೭ರ ಉತ್ತರಾರ್ಧ ೧೮೮ರ ಪೂರ್ವಾದದ ಒಂದು ಅಮೋಘ ಚರಿತ್ರೆಯಿಂದ ಒಳಗೊಂಡ ನಾಟಕವು ಆಲ್ದಾಳರ ಅನುಭವದ ಕುಂಚದಲ್ಲಿ ಮೂಡಿದೆ.

ನಾಟಕದಲ್ಲಿ ಧರ್ಮದ ಬಗ್ಗೆ ಜನರಲ್ಲಿ ಜಾಗೃತೆ ಮೂಡಿಸುವುದಾಗಿದೆ. ಸ್ತ್ರೀಪರಕಾಳಜಿ ನಾಟಕದಲ್ಲಿ ನೋಡುವವರಿಗೂ ಓದುಗರಿಗೂ ಸ್ಪಷ್ಟವಾಗಿ ಗೋಚರಿಸುತ್ತದೆ. ದೀನದಲಿತರ ಬಗ್ಗೆ ಅನುಕಂಪವಿದೆ. ಸಮಾಜದಲ್ಲಿ ಶೋಷಣೆಗೆ ಒಳಗಾಗಿರುವವರನ್ನು ಎತ್ತಿಹಿಡಿದು ಅವರ ಜೀವನ ಸುಧಾರಣೆಗೆ ಮಾರ್ಗೋಪಾಯ ಕಲ್ಪಿಸಲಾಗಿದೆ. ಇಲ್ಲಿ ಆಲ್ದಾಳ ಅವರ ಕಳಕಳಿ ಎದ್ದುಕಾಣುತ್ತದೆ.

ಗಾಜರಕೋಟ ಚೆನ್ನಪ್ಪಯ್ಯ ನಾಟಕವು ಆಧ್ಯಾತ್ಮ ಚಿಂತನೆಯಿಂದ ಶಿವಗಿರಿ ಕಾಣುವ ಚಿಂತನೆಯತ್ತ ಮನವೊಲಿಸುತ್ತದೆ. ಪಶು–ಪಕ್ಷಿ–ಪ್ರಾಣಿಗಳ ಮೇಲೆ ದಯಾಪರ ಭಾವ ದೃಢೀಕರಣಗೊಂಡಿದೆ.

ನಾಟಕದ ಮುಖ್ಯ ಆಕರ್ಷಣೆ ಎಂದರೆ ನಾವೆಲ್ಲರೂ ಒಂದೇ ಭೂಮಾತೆಯ ಮಕ್ಕಳು ಅನ್ನುವ ಪಾಂಚಜನ್ಯ ಮೊಳಗಿಸಿದೆ.

ನಾಟಕದಲ್ಲಿನ ಪಾತ್ರಗಳು ತಮ್ಮ – ತಮ್ಮ ಅಭಿನಯವನ್ನು ಪ್ರೇಕ್ಷಕರಿಗೆ ರಸದೊಟ ಬಡಿಸಿವೆ. ಈ ನಾಟಕವು ಪ್ರಪಂಚದಿಂದ ಪಾರಮಾರ್ಥಕ್ಕೊಯ್ಯುವ ಸತ್ಸಂಗದ ನಿಲುವು ಇದೆ. ಒಟ್ಟಾರೆ ನಾಟಕ ಕುಟುಂಬ ಸಮೇತ ಬಂದು ನೋಡುವಂತಿದೆ.

**ರಸ್ತಾಪುರ ಶರಭಲಿಂಗೇಶ್ವರ ಮಹಾತ್ಮೆ :** ಸುಮಾರು ಎರಡುನೂರು ವರ್ಷಗಳ ಹಿಂದೆ ಈ ನಾಟಕಕಾರ ಶ್ರದ್ಧಾ ಭಕ್ತಿಯಿಂದ ಈ ಮಹಾತ್ಮರ ಚರಿತ್ರೆಯನ್ನು ಜನ ಸಾಮಾನ್ಯರಿಗೆ ತಿಳಿಯುವಂತೆ ಮಾಡುವಲ್ಲಿ ಕೃತಿ ರಚಿಸಿ ರಂಗಭೂಮಿಯ ಮೇಲೆ ಪ್ರದರ್ಶಿಸುವಲ್ಲಿ ಯಶಸ್ವಿಯಾಗಿರುವರು.

ನಾಟಕದಲ್ಲಿ ಮುಖ್ಯಪಾತ್ರವಹಿಸಿರುವ ಶರಣರು ಸಮಾಜಸೇವೆಯನ್ನು ತಮ್ಮ ಗುರಿಯಾಗಿಸಿಕೊಂಡಿದ್ದರು. ನಾಟಿ ಔಷಧದಿಂದ ಅನೇಕ ತರಹದ ರೋಗಗಳನ್ನು ಗುಣ ಪಡಿಸುತ್ತಿದ್ದರು ಮಕ್ಕಳಿಲ್ಲದವರು ಬಂಜೆತನಕ್ಕೆ ಇವರ ಬಳಿ ಬಂದು ಔಷಧ ಪಡೆದು ಸಂತಾನ ಭಾಗ್ಯಪಡೆಯುತ್ತಿದ್ದರು.

ಶರಣ ಶ್ರೀ ಶರಣ ಶರಭಲಿಂಗೇಶ್ವರರು ಜನಸಮುದಾಯದ ಮಧ್ಯದಲ್ಲಿಯೇ ಇದ್ದು ಅನುಷ್ಠಾನ, ಜಪ, ತಪ, ಮಾಡುತ್ತ ಅಂಧ– ಅನಾಥರ ಸೇವೆಯಲ್ಲಿ ತೊಡಗುತ್ತಿದ್ದರು. ಸಕಲಧರ್ಮದವರನ್ನು ಒಂದೇ ರೀತಿಯಲ್ಲಿ ಕಾಣುತ್ತ, ಜಂಗಮಕ್ಕೆ ಜಾತಿಯಿಲ್ಲ ಅದೊಂದು ದೃಷ್ಟಿ ಎಂದು ಹೇಳುತ್ತಿದ್ದರು. ನಾಟಕ ಭಕ್ತಿಯಿಂದ ಕೂಡಿದೆ.

**ಮುಗಳಖೋಡಯಲ್ಲಪ್ಪ ಮಹಾರಾಜ :** ನಾಟಕ ಸೃಷ್ಟಿಸುವುದೇ ಕಲೆಯಾಗಿಸಿಕೊಂಡಿರುವ ನಾಟಕಕಾರ ಆಲ್ದಾಳರು 'ಮುಗುಳಖೋಡ ಯಲ್ಲಪ್ಪ ಮಹಾರಾಜ'ರ ಕೃತಿಯನ್ನು ಸಕಲರು ಮೆಚ್ಚುವಂತೆ ಬರೆದಿದ್ದಾರೆ. ನಾಟಕದಲ್ಲಿ ಕಂಡು ಬರುವ ಯಲ್ಲಪ್ಪನು ಲೌಕಿಕದ ಕುಸ್ತಿ ಆಡುತ್ತ ಅಲೌಕಿಕದ ಕುಸ್ತಿ ಹಿಡಿಯುವಲ್ಲಿ ಪರಿಣಿತನಾಗಿ ಯಲ್ಲಪ್ಪ ಮಹಾರಾಜನೆಂದು ಹೆಸರು ಮಾಡುತ್ತಾನೆ.

ಜನಸಮುದಾಯಕ್ಕೆ ಉಪದೇಶಕೊಡುವ ಬದಲಿಗೆ ಸ್ವತಃತಾನೆ ಶ್ರಮವಹಿಸಿ ದುಡಿದು ದುಡಿತದಲ್ಲಿಯೇ ದೇವರನ್ನು ಕಾಣುವ ಪರಿಯನ್ನು ತಿಳಿಸುವ ಉತ್ಕಟೇಚ್ಛೆಯಿದೆ. ಎಲ್ಲರಿಗೂ ಲೇಸಾಗಿ ಬದುಕುವ ಆಯಾಮವಿದೆ.

ನಾಟಕ ಮುಂದುವರಿಯುತ್ತಿದ್ದಂತೆ ಪ್ರೇಕ್ಷಕರಲ್ಲಿ ತಮ್ಮನ್ನು ತಾವು ಒರೆಗೆ ಹಚ್ಚಿಕೊಳ್ಳುವಂತೆ ಮಾಡುತ್ತದೆ. ಮನುಷ್ಯನಲ್ಲಿರುವ ದುರ್ಗುಣಗಳು ಅವನನ್ನು ಯಾವ ಸ್ಥಿತಿಗೆ ತಳ್ಳುತ್ತವೆ. ಅವುಗಳಿಂದ ಹೇಗೆ ಮುಕ್ತಿಹೊಂದ ಬೇಕೆನ್ನುವ ನೀತಿಪಾಠ ನಾಟಕದಲ್ಲಿ ಕಾಣುತ್ತೇವೆ.

ಕಳ್ಳರನ್ನು, ಸುಳ್ಳರನ್ನು, ದರೋಡೆಕೋರರನ್ನು ಮುಖ್ಯವಾಹಿನಿಗೆ ತಂದು ಅವರನ್ನು ಕಷ್ಟಪಟ್ಟು ದುಡಿದುಣ್ಣುವ ರೀತಿ ಕಲಿಸುವ ಧ್ವನಿ ನಾಟಕದಲ್ಲಿ ವಿಶೇಷವಾಗಿ ಕಾಣುತ್ತೇವೆ.

ಒಬ್ಬ ಕುರಿಕಾಯುವವನು ತನ್ನ ಶ್ರಮ, ಪರೋಪಕಾರ, ತ್ಯಾಗ, ನಯ, ವಿನಯ, ಗುಣಗಳಿಂದಾಗಿ ಕರುನಾಡಿನ ಕಣ್ಣಾಗಿ ಮುಗುಳಕೋಡ ಯಲ್ಲಪ್ಪ ಮಹಾರಾಜರು ಎನ್ನಿಸಿಕೊಂಡರು. ಆಲ್ದಾಳರು ಇವರ ಚರಿತ್ರೆಯನ್ನು ತಮ್ಮ ಅನುಭವದ ಮೂಸೆಯಲ್ಲಿ ಭಟ್ಟಿ ಇಳಿಸಿ, ಓದುಗರಿಗೂ, ನಾಟಕ ವೀಕ್ಷಕರಿಗೂ ಆನಂದ ಉಂಟುಮಾಡುವಲ್ಲಿ ಶ್ರಮವಹಿಸಿ ಭಲೇ ಎನ್ನಿಸಿಕೊಂಡಿದ್ದಾರೆ ಎಂದರೆ ತಪ್ಪಾಗದು.

ಕಂಭನಿ, ಕಾಂಚಾಣ, ಕಾಮಿನಿ ನನ್ನವು ಎಂದು ಒದ್ದಾಡುವುದನ್ನು ನಿಲ್ಲಿಸಿ ನನ್ನದೆನ್ನುವ ಜ್ಞಾನವೆಂಬ ದಿವ್ಯರತ್ನವನ್ನು ನಾವುಗಳಿಸಿಕೊಂಡಾಗ ಮಾತ್ರ ನಮ್ಮದು ಮನುಷ್ಯ ಜೀವನ ಸಾರ್ಥಕವಾಗುತ್ತದೆ ಎಂಬ ಸಂದೇಶ ಈ ನಾಟಕದ ಮುಖಾಂತರ ನಾಟಕಕಾರರು ತಿಳಿಹೇಳಿದ್ದಾರೆ. ನಾಟಕದ ಸಂವಾದ, ಭಾಷೆ, ಶೈಲಿ, ಅಲಂಕಾರ, ಹಾಡುಗಳು ನೋಡುಗರಿಗೆ ಮೆಚ್ಚುಗೆ ತರಿಸುತ್ತವೆ.

ಈ ನಾಟಕವು ಅಶ್ವಿನಿ ಕಂಬೈನ್ಸ್‌ರವರು ಚಲನ ಚಿತ್ರಕ್ಕೆ ಆಯ್ಕೆಮಾಡಿಕೊಂಡಿರುವುದು ವಿಶೇಷ.

**ಕಟ್ಟಿಮೇಯಿಸಿದ ಕುದುರೆ :** ಇದೊಂದು ಸಾಮಾಜಿಕ ನಾಟಕ. ಆಲ್ದಾಳರು ಈ ನಾಟಕದಲ್ಲಿ ಮಾನವರ ಚಂಚಲ ಸ್ವಭಾವವನ್ನು ಕುದುರೆಗೆ ಹೋಲಿಸಿದ್ದಾರೆ. ನಾಟಕ ಹಾಸ್ಯ ಭರಿತವಾಗಿದ್ದು ಮನುಷ್ಯನ ಗುಣಾವಗುಣಗಳನ್ನು ಎಳೆ–ಎಳೆಯಾಗಿ ಇಲ್ಲಿ ಬರುವ ಪಾತ್ರಗಳ ಮೂಲಕ ಬಿಡಿಸಿ, ಪ್ರೇಕ್ಷಕರನ್ನು ಭರಪೂರ ಆನಂದಿಸುವಂತೆ ಮಾಡಿದ್ದಾರೆ.

'ಕಟ್ಟಿ ಮೇಯಿಸಿದ ಕುದುರೆ' ನಾಟಕದಲ್ಲಿ ಸಕಲ ಸಂಪತ್ತಿನ ಸಿರಿಯನ್ನು ಹೊಂದಿರುವ ಭರದಲ್ಲಿ ಅಹಂಕಾರದಿಂದ ಮೆರೆಯುವ ಪ್ರವೃತ್ತಿಗೆ ಕಡಿವಾಣ ಹಾಕಿ ಮಾನವೀಯತೆಯ ಮೌಲ್ಯ ತಿಳಿಸುವ ತಿಳಿವಾತಾವರಣವನ್ನು ನಾಟಕಕಾರರು ನಮ್ಮ ಮುಂದಿರಿಸಿದ್ದಾರೆ.

ಅತಿ ಜಿಪುಣರಾದವರನ್ನು ಪರಿವರ್ತಿಸಿ, ಅತಿದಾನವನ್ನು ನೀಡುವ ದಾಸೋಹಿ –ಯನ್ನಾಗಿಸಿದ ಶರಣರ ಸಂದೇಶಗಳಿವೆ.

ಇಬ್ಬರು ಹೆಂಡಿರನ್ನು ಹೊಂದಿ ಕೂಡಿಬಾಳುವ ಸೊಂಪು ಹಂಪಿಯಾಗಿರಿಸಿದೆ. ತನ್ನ ಮನೆಗೆ ಕಳವು ಮಾಡಲು ಬರುವುದಾಗಿ ಹೇಳಿ ಕಳುಹಿಸಿದ ಹಲ್ಚೇರಿಯ ಕಳ್ಳರು ಬರುವ ಪೂರ್ವದಲ್ಲಿಯೇ ಮನೆಯೊಳಗಿರುವ ಸಾಮಾನುಗಳನ್ನೆ ಎತ್ತಿನ ಬಂಡೆಗಳಲ್ಲಿ ಹೇರಿಸಿ ನಿಲ್ಲಿಸಿದ ಉದಾರ ಹೃದಯದ ವ್ಯಕ್ತಿತ್ವ ಇಲ್ಲಿ ಭರಿಸಿದೆ.

ಇಬ್ಬರು ಹೆಂಡತಿಯರು ಇರುವ ಪುರುಷನ ಬಗ್ಗೆ ವಿಕಾರ ಭಾವನೆ ತೋರಿಸದೆ ನಾಟಕಕಾರರು ಒಂದು ಬಂಡಿಗೆ ಎರಡು ಗಾಲಿಗಳಿರುವುದಿಲ್ಲವೆ? ಎಂದು ಚಿಂತಿಸಿದ್ದಾರೆ. ಎರಡು ಗಾಲಿಗಳಿರುವುದು ಸರಾಗವಾಗಿ ಚಲಿಸುವುದಿಲ್ಲವೆ? ಎಂದು ಯೋಚಿಸಿರಬಹುದು. ಅದೇನೆ ಇರಲಿ ನಾಟಕ ರಂಜಿಸುವಂತಿದೆ. ಗ್ರಾಮೀಣ ಭಾಷೆಯ ಸೊಗಡು ಸಂಭ್ರಮಿಸಿದೆ. ಕಟ್ಟಿ ಮೇಯಿಸಿದ ಕುದುರೆಯ ಅಂದ–ಚಂದ ಅದರ ನಡುಗೆ ತಿಳಿದು ಕೊಳ್ಳಲು ಉತ್ಸುಕರಾಗಿರಿ.

# ಅಂಬಿಗರ ಚೌಡಯ್ಯ (ನಾಟಕ)

ಭಾರತದ ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ, ಸಾಮಾಜಿಕ ಬದುಕಿನ ಒಂದು ಅಪೂರ್ವಘಟ್ಟ. ಎಂದರೆ ೧೨ನೇ ಶತಮಾನದ ಶರಣ ಚಳುವಳಿ, ಈ ಚಳುವಳಿ ಕೇವಲ ಚಿಂತನೆಯ ಫಲವಾಗದೆ ಸಮೂಹ ಚಿಂತನೆಯ ಫಲವಾಗಿ ರೂಪಗೊಂಡಿದ್ದರಿಂದ ಇದಕ್ಕೆ ಐತಿಹಾಸಿಕ ಮಹತ್ವವಿದೆ. ಎಲ್ಲ ವರ್ಗ, ವರ್ಣ, ವಯೋಮಾನದ ಜನ, ಲಿಂಗ, ಜಾತಿ, ಬೇಧವಿಲ್ಲದೆ ಒಟ್ಟಾಗಿ ರೂಪಿಸಿದ ಸಿದ್ಧಾಂತ. ಈ ಚಳುವಳಿಯಲ್ಲಿ ಭಾಗವಹಿಸಿದ ಸಾವಿರಾರು ಶರಣರಲ್ಲಿ ಅಂಬಿಗರ ಚೌಡಯ್ಯನೂ ಒಬ್ಬ, ತನ್ನ ನಿಷ್ಟುರ ನಿಲುವು, ಹರಿತಮಾತು, ನಿರ್ಭೀತ ವ್ಯಕ್ತಿತ್ವ, ನಿಶಿತ ವಿಚಾರಗಳಿಂದ ಇತರರಿಗಿಂತ ತೀರ ಭಿನ್ನವಾಗಿ ಕಾಣಿಸಿಕೊಳ್ಳುತ್ತಾನೆ ಅಂಬಿಗರಚೌಡಯ್ಯ.

ಶರಣ "ಅಂಬಿಗರ ಚೌಡಯ್ಯ" ನಾಟಕದಲ್ಲಿ ಜಾತಿಯ ಅಂಟು ಜಾಡ್ಯ, ಮೂಢನಂಬಿಕೆ, ವೈದಿಕ ಧರ್ಮದ ವಿಡಂಬನೆ, ತುಳಿತಕ್ಕೊಳಗಾದವರನ್ನು ಕೈಹಿಡಿದೆತ್ತುವ ಧ್ವನಿಯಾಗಿ ಅಷ್ಟಾಂಗದೊಳಗೆ ಲಿಂಗವನ್ನು ಕಂಡಂತಹ ನಿಜ ಸ್ವರೂಪದ ಜ್ಞಾನ, ಕಾಡು ಧೈರ್ಯದಿಂದ ಬೆಟ್ಟದ ಲಿಂಗಕ್ಕೆ ಹೋಗಿ ಅಡ್ಡ ಬೀಳುವವರನ್ನ ತರಾಟೆಗೆ ತೆಗೆದುಕೊಂಡ ಬಂಡಾಯ ಧ್ವನಿ ಎದ್ದು ಕಾಣುತ್ತದೆ.

'ಅಂಬು' ಎಂದರೆ ನೀರು, 'ಗ' ಎಂದರೆ ಗಮಿಸು ಅಥವಾ ಚಲಿಸು ತನ್ನ ಹರಿಗೋಲಿನ ಸಹಾಯದಿಂದ ನೀರಿನಲ್ಲಿ ಚಲಿಸುತ್ತರಾದ ಕಾರಣ ಇವರನ್ನು ಅಂಬಿಗರು ಎನ್ನುತ್ತಾರೆ.

**ಅಂಬಿಗ, ಅಂಬಿಗ ಎಂದು ಕುಂದು ನುಡಿಯದಿರು**
**ನಂಬಿದರೆ ಒಂದೇ ಹುಟ್ಟಲಿ**
**ಕಡೆಯ ಹಾಯಿಸುವನಂಬಿಗರ ಚೌಡಯ್ಯ**

ಎಂಬ ಅಂಬಿಗರ ಚೌಡಯ್ಯನ ವಚನದಲ್ಲಿ ಆತನ ಕಾಯಕದ ಸೂಚನೆಯೂ ಇದೆ. ಆ ಕಾಯಕದ ಬಗ್ಗೆ ಸ್ವಾಭಿಮಾನವೂ ಇದೆ. ಅಂಬಿಗ ಎಂದು ಕುಲವೆತ್ತಿ ನಿಂದಿಸುವವರನ್ನು ಖಂಡಿಸುವ ದಿಟ್ಟತನವೂ ಇದೆ. ತನ್ನ ವಿಚಾರಗಳ ನೇರ, ಸರಳ, ಮನಮುಟ್ಟುವ ಪ್ರತಿಪಾದನೆಯೂ ಇದೆ. ಈ ವಚನ ಅಂಬಿಗರ, ಚೌಡಯ್ಯನ ವ್ಯಕ್ತಿತ್ವಕ್ಕೆ ಹಿಡಿದ ಕೈಗನ್ನಡಿಯಾಗಿದೆ.

ಅಂಬಿಗರ ಚೌಡಯ್ಯನದು ನೇರ ನಡೆ, ನೇರ ನುಡಿ, ಡಾಂಭಿಕತೆ ಆತನಿಗೆ ಸೇರದು ವೇಷ ಡಂಭಕರನ್ನು ಕಂಡಾಗ ಆತ ಕಿಡಿ–ಕಿಡಿಯಾಗುತ್ತಾನೆ. 'ಪಡಿಹಾರಿ ಉತ್ತಣ್ಣನ ಎಡ ಪಾದುಕೆ ತೆಗೆದುಕೊಂಡು ಲಟಲಟನೆ ಹೊಡೆ' ಎನ್ನುತ್ತಾನೆ. 'ಬಾಯಿ ಮೇಲೆ ಅರ್ಧಮಣದ ಪಾದರಕ್ಷೆಯ ತೆಗೆದುಕೊಂಡು ಮಾಸಿ ಕಡಿಮೆಯಿಲ್ಲದ, ತೂಗಿ ತೂಗಿ ಟೊಕ, ಟೊಕನ ಹೊಡೆ' ಎನ್ನುತ್ತಾನೆ.

ಆಲ್ದಾಳ ಅವರು ನಾಟಕದಲ್ಲಿ ತಾತ್ವಿಕತೆಗಿಂತ ನೈತಿಕ ಹಾಗೂ ಸಾಮಾಜಿಕ ವಿಚಾರಗಳಿಗೆ ಪ್ರಾಧಾನ್ಯತೆ ತೋರಿದ್ದಾರೆ. ಪ್ರೇಕ್ಷಕರ ಮನಸ್ಸಿನಲ್ಲಿ ಶರಣ ಅಂಬಿಗರ ಚೌಡಯ್ಯನವರ ವಿಚಾರಧಾರೆಗಳನ್ನು ಮನತುಂಬುವಂತೆ ಶ್ರಮಿಸಿದ್ದಾರೆ. ನಾಟಕದಲ್ಲಿ ಬರುವ ಸಂವಾದಗಳು ಜನರ ಜೀವನ ಪರಿವರ್ತನೆಗೆ ಮಾರ್ಗಸೂಚಿಯಾಗಿವೆ. ಸೂಜಿಗಲ್ಲಿನಂತೆ ಆಕರ್ಷಕವಾಗಿವೆ. ಗಟ್ಟಿಯಾಗಿ ಅಪ್ಪುತ್ತವೆ.

"ಕೇಳಿರಯ್ಯ ಮಾನವರೆ, ಗಂಡ–ಹೆಂಡಿರ ಮನಸ್ಸು ದೇವರ ಮುಂದೆ ನಂದಾದೀವಿಗೆಯ ಮುಡಿಸಿದ ಹಾಗೆ, ಗಂಡ–ಹೆಂಡಿರ ಮನಸ್ಸು ಬೇರೆಯಾದರೆ, ಗಂಜಳದೊಳಗೆ ಹಂದಿ ಹೊರಳಾಡಿ ಒಂದರ ಮೇಲೆ ಒಂದು ಮೂಸಿದಹಾಗೆ" ಎಂದು ಚೌಡಯ್ಯ ಅವರು ಹೇಳುವಲ್ಲಿ ದಾಂಪತ್ಯ ಸಾಮರಸ್ಯವನ್ನು, "ಪರಧನ–ಪರಸತಿ, ಪರನಿಂದೆಗಳಿಂದ ಮುಂದೆ ನರಕವು" ಎನ್ನುವಲ್ಲಿ ನೈತಿಕತೆಯನ್ನು, "ಕುರಿ–ಕೋಳಿ, ಕಿರುಮೀನ ತಿಂಬುವರ ಊರೊಳಗೆ ಇರು ಎಂಬರು, ಅಮೃತಾನ್ನವ ಕರೆವ ಗೋವ ತಿಂಬುವರ ಊರಿನಿಂದ ಹೊರಗಿರು ಎಂಬರು" ಎನ್ನುವಲ್ಲಿ ಸಾಮಾಜಿಕ ಚಿಂತನೆಯನ್ನು ಕಾಣಬಹುದು.

ಮನುಷ್ಯರಾದವರು ಮನಮೆಚ್ಚುವಂತೆ ನಡೆಯ ಬೇಕಲ್ಲವೆ? ಜನ ಮೆಚ್ಚುವಂತೆ ನಡೆಯಬಾರದು. ಜನ ಹೇಗಿದ್ದರೂ ಒಂದು ಹೆಸರಿಡುತ್ತಾರೆ ಎನ್ನುವುದನ್ನು ಚೌಡಯ್ಯ ಅವರು ಈ ಕೆಳಗಿನ ವಚನದಲ್ಲಿ ಬಹಳ ಸುಂದರವಾಗಿ ಹೇಳಿರುವುದನ್ನು ಪ್ರೇಕ್ಷಕರು ಗಮನದಲ್ಲಿರಿಸಿಕೊಳ್ಳಬೇಕು. ಜೀವನದಲ್ಲಿ ಅನುಸರಿಸ ಬೇಕು ಎಂದು ಪ್ರತ್ಯೇಕವಾಗಿ ಹೇಳುವ ಅವಶ್ಯಕತೆಯಿಲ್ಲ.

**ಉಂಡರೆ ಭೂತನೆಂಬರು; ಉಣ್ಣದಿದ್ದರೆ ಚಕೋರನೆಂಬರು,**
**ಭೋಗಿಸಿದರೆ ಕಾಮಿಯೆಂಬರು; ಭೋಗಿಸದಿದ್ದರೆ ಮುನ್ನ**
**ಮಾಡಿದ ಕರ್ಮಿಎಂಬರು,**
**ಊರೊಳಗಿದ್ದರೆ ಸಂಸಾರಿ ಎಂಬರು; ಅಡವಿಯೊಳಗಿದ್ದರೆ**
**ಮೃಗಜಾತಿ ಎಂಬರು,**
**ನಿದ್ರೆಗೈದರೆ ಜಡದೇಹಿ ಎಂಬರು, ಎದ್ದಿದ್ದರೆ ಚಕೋರನೆಂಬರು,**
**ಇಂತೀ ಜನಮೆಚ್ಚಿನಡೆದವರ ಎಡದ ಪಾದ ಕಿರಿ**
**ಕಿರುಗುಣಿಯಲ್ಲಿ ಮನೆಮಾಡು,**
**ಮನೆಮಾಡು ಎಂದಾತ ನಮ್ಮ ಅಂಬಿಗರಚೌಡಯ್ಯ।**

ಆ ಕಾರಣಕ್ಕಾಗಿ ನಾವು ಜನರನ್ನು ಮೆಚ್ಚಿಸುವುದಕ್ಕಾಗಿ ಬದುಕ ಬೇಕಾದ ಅಗತ್ಯವಿಲ್ಲ, ನಮ್ಮ ಮನಸ್ಸು ನಮಗೆ ದಾರಿದೀಪವಾಗಬೇಕು. ನಮ್ಮ ಬುದ್ಧಿ ಶಕ್ತಿ ನಮಗೆ ತೋರು ಬೆರಳಾಗಿರಬೇಕು.

ಅಂಬಿಗರ ಚೌಡಯ್ಯ ಮೂಢನಂಬಿಕೆಗಳನ್ನು ಅಲ್ಲಗಳೆಯುತ್ತಾನೆ. ನೀತಿ ಪ್ರಧಾನ ಬಾಳುವೆಯನ್ನು ಮೆಚ್ಚಿಕೊಳ್ಳುತ್ತಾನೆ. ದಾಂಪತ್ಯ ಸಾಮರಸ್ಯವನ್ನು ಎತ್ತಿ ಹಿಡಿಯುತ್ತಾನೆ. ಪರಿಸರ ಪ್ರೀತಿಯನ್ನು ಹೇಳುತ್ತಾನೆ. ಮಾನವೀಯ ಅನುಕಂಪವನ್ನು ಪ್ರೋತ್ಸಾಹಿಸುತ್ತಾನೆ. ಇಂದಿಗೂ ಈ

ಎಲ್ಲ ಅಂಶಗಳು ಅಗತ್ಯವಾಗಿರುವುದನ್ನು ಆ ದಿಶೆಯಲ್ಲಿ ನಾವೆಲ್ಲರು ಸಾಗಬೇಕೆಂಬುದೇ ಶರಣ ಅಂಬಿಗರ ಚೌಡಯ್ಯನವರ ಅಭಿಲಾಷೆಯಾಗಿದೆ. ನಾಟಕದಲ್ಲಿ ನೀತಿ ಬೋಧನೆ ತುಂಬಿತುಳುಕುತ್ತಿದೆ. ಪ್ರೇಕ್ಷಕರನ್ನು ಮುಗ್ಧಗೊಳಿಸುತ್ತದೆ. ನಾಟಕದ ಭಾಷೆ ಗ್ರಾಮೀಣ ಜನತೆಗೆ ಹಿಡಿಸುವಲ್ಲಿ ಯಶಸ್ವಿಯಾಗಿದೆ ಹಾಸ್ಯಕ್ಕೂ ಕೊರತೆಯಿಲ್ಲ, ಎಲ್ಲ ಪಾತ್ರಗಳು ತಮ್ಮ-ತಮ್ಮ ಸಂಭಾಷಣೆ, ನಟನೆಯನ್ನು ಸರಿಯಾಗಿ ನಡೆಸಿಕೊಟ್ಟಿವೆ. ಆಲ್ದಾಳ ಅವರ ನಾಟಕದ ಭಾಷೆಯಂತೆ ಶೈಲಿಗೆ ಆದ್ಯತೆ ನೀಡಿದ್ದಾರೆ. ರಂಗಭೂಮಿಯ ಮೇಲೆ ನಡೆದ ಪ್ರಯೋಗ ಕಣ್ಣಿಗೆ ಮತ್ತು ಮನಕ್ಕೆ ಹಬ್ಬದ ಸಂಭ್ರಮ ತಂದಿದೆ ರಂಗಸಿರಿ ಎದ್ದು ಕಾಣುತ್ತಿದೆ. ಇಂತಹ ಕೃತಿ ನೀಡಿದ ನಾಟಕಕಾರ ಆಲ್ದಾಳರು ರಂಗಾಸಕ್ತರ ಪ್ರೀತಿಗೆ ಪಾತ್ರರಾಗುತ್ತಾರೆಂಬುದರಲ್ಲಿ ಎರಡು ಮಾತಿಲ್ಲ, ಆದರೆ ವಿಷಾದದ ಸಂಗತಿ ಎಂದರೆ ಓದುಗರಿಗೆ ಮಾತ್ರ ಈ ನಾಟಕ ಕೈಗೆಟುಕದೇ ಇರುವುದರಿಂದ ಅವರು ನಿರಾಶರಾಗಬೇಕಾಗುತ್ತದೆ. ಈ ನಾಟಕ ಪ್ರಕಟಣೆಯ ಭಾಗ್ಯಕಂಡಿಲ್ಲ, ಇದು ನಿಜಕ್ಕೂ ಶೋಚನೀಯ ಸಂಗತಿಯಾಗಿದೆ. ಗ್ರಂಥ ಪ್ರಕಾಶಕರು ಮನಸ್ಸು ಮಾಡಿದರೆ ಒಂದು ಉತ್ತಮ ನಾಟಕ ಕನ್ನಡಿಗರು ಓದಿ, ಆನಂದ ಪಡುತ್ತಾರೆ.

ನಟ ಉದಯಕುಮಾರ, ನಟಿ ಪ್ರಮಿಳಾ ಜೋಷಾಯ, ರಂಗ ನಟಿ ಸುಭದ್ರಮ್ಮ, ಮನಸೂರ ಕೆ.ನಾಗರತ್ನ ಮುಂತಾದವರು ಈ ನಾಟಕದಲ್ಲಿ ಅಭಿನಯಿಸಿದ್ದಾರೆ. ಇತರ ನಾಟಕಕಾರರು ಬರೆಯಬಾರದ ಸಂಭಾಷಣೆ ಬರೆದರೆ, ಆಲ್ದಾಳರು ಮಾತ್ರ ಮನೆಮಂದಿ ಎಲ್ಲ ಒಟ್ಟಾಗಿ ಕುಳಿತು ನೋಡಬಹುದಾದ ನಾಟಕ ರಚಿಸಿದ್ದು ಅವರ ಜನಪ್ರಿಯತೆ ಹೆಚ್ಚಿಸಿತು, ಅವರ ಒಟ್ಟಾರೆ ನಾಟಕಗಳು ಕರ್ನಾಟಕದಾದ್ಯಂತ ವಿವಿಧ ಜನಪ್ರಿಯ ನಾಟಕ ಮಂಡಳಿಗಳಿಂದ ಪ್ರಯೋಗಗೊಂಡು ಯಶಸ್ವಿಯಾಗಿವೆ.

ಆಲ್ದಾಳರ ನಾಟಕಗಳು ಕನ್ನಡ ಸಾಹಿತ್ಯಕ್ಕೆ ಕೊಟ್ಟ ಅಪೂರ್ವಕೊಡುಗೆಗಳಾಗಿವೆ. ಸಂಸಾರ ಚಿತ್ರಗಳನ್ನು ಅತ್ಯಂತ ರಮ್ಯ ಹಾಗೂ ಮನೋಜ್ಞವಾಗಿ ಚಿತ್ರಿಸಬಲ್ಲ ಅವರ ಲೇಖನಿ ಮೋಡಿಹಾಕಿದಂತೆ ಓದುಗನನ್ನು, ರಂಗಭೂಮಿಯಲ್ಲಿ ಪ್ರಯೋಗವನ್ನು ನೋಡುವ ಪ್ರೇಕ್ಷಕನನ್ನು ಸಹ ಸೆರೆಹಿಡಿಯಬಲ್ಲದು.

# ಮುದನೂರು ದೇವರದಾಸಿಮಯ್ಯ

'ವಚನ' ಒಂದು ಸಾಹಿತ್ಯ ಪ್ರಕಾರವಾಗಿ ರೂಪುಗೊಳ್ಳುವುದನ್ನು ದೇವರದಾಸಿಮಯ್ಯನವರ ವಚನಗಳಲ್ಲಿ ಕಾಣಬಹುದು. ಕನ್ನಡ ಭಾಷೆಯನ್ನು ಹೊರತು ಪಡಿಸಿದರೆ, ಭಾರತದಲ್ಲಷ್ಟೇ ಅಲ್ಲ ಜಗತ್ತಿನ ಬೇರಾವ ಭಾಷೆಯಲ್ಲೂ 'ವಚನ' ಸಾಹಿತ್ಯ ಪ್ರಕಾರವು ಕಾಣಸಿಗದು ಎಂದು ಅನೇಕ ವಿದ್ವಾಂಸರು ಸ್ಪಷ್ಟ ಪಡಿಸಿದ್ದಾರೆ. ಆದ್ದರಿಂದ ದೇವರ ದಾಸಿಮಯ್ಯನವರು ಕನ್ನಡಿಗರಿಗೆ ಅಷ್ಟೇ 'ವಚನಪಿತ' ರಾಗಿಲ್ಲ ಇಡೀ ವಿಶ್ವಕ್ಕೆ 'ವಚನಪಿತ' ರಾಗಿದ್ದಾರೆ.

ಏಕೆಂದರೆ ದೇವರ ದಾಸಿಮಯ್ಯನವರು ನಮ್ಮ ನಾಡಿನ ವಚನಗಳ ಮೂಲ ಗಂಗೋತ್ರಿಯಾಗಿದ್ದಾರೆ. ವಚನಗಳ ತವನಿಧಿ, ವಚನ ಪ್ರಕಾರಕ್ಕೆ ಭದ್ರ ತಳಪಾಯ ಹಾಕಿದ ಸಮಾಜ ಚಿಂತಕರೂ ಹೌದು. ದೇವರ ದಾಸಿಮಯ್ಯ ಕಲಬುರುಗಿ ಜಿಲ್ಲೆಯ (ಈಗ ಯಾದಗಿರ ಜಿಲ್ಲೆ) ಸುರುಪುರ ತಾಲೂಕಿನ 'ಮುದನೂರು'ನಲ್ಲಿ ಚೈತ್ರಮಾಸದ ಶುದ್ಧ ಪಂಚಮಿಯಂದು ಹುಟ್ಟಿದ, ಕಾಮಯ್ಯ-ಶಂಕರಿ ದಂಪತಿಗಳ ಮಗ. ದೇವರ ದಾಸಿಮಯ್ಯನನ್ನು ದಾಸಯ್ಯ, ದಾಸದೇವ, ಜೇಡರದಾಸಿಮಯ್ಯ, ದೇವಾಂಗ ದಾಸಿಮಯ್ಯ, ದಾಸಮಾರ್ಯ ಎಂದು ಬಹುನಾಮಗಳಿಂದ ಕವಿಗಳು ಪುರಾಣ ಕರ್ತರು ಕರೆದಿದ್ದಾರೆ. ಆ ಪೈಕಿ 'ದೇವರ ದಾಸಿಮಯ್ಯ' ಸೂಕ್ತ ಎಂಬುದು ಸಂಶೋಧಕರ ಸಹಮತ.

'ಮುದನೂರು ದೇವರ ದಾಸಿಮಯ್ಯ' ನಾಟಕ ಶರಣ ತತ್ವಗಳನ್ನೇ ಅಳವಡಿಸಿಕೊಂಡಿದೆ. ಪ್ರೇಕ್ಷಕರು ದೇವರ ದಾಸಿಮಯ್ಯನ ತತ್ವಗಳನ್ನು ಮನದಟ್ಟಾಗಿಸಿಕೊಂಡು ಸನ್ಮಾರ್ಗದಲ್ಲಿ ನಡೆಯಲು, ಚಿಂತನೆಯಲ್ಲಿ ತೊಡಗಿಸುತ್ತದೆ. ದಾಸಿಮಯ್ಯನವರು, ಜಗಜ್ಯೋತಿ ಭಕ್ತಿಭಂಡಾರಿ ಬಸವಣ್ಣನವರಿಗಿಂತಲೂ ಮೊದಲೇ ಅಂದರೆ ಹನ್ನೊಂದನೆಯ ಶತಮಾನದಲ್ಲಿಯೇ ವಚನಕಾರರಾಗಿ ಬೆಳಗಿದವರು, ಕನ್ನಡದಲ್ಲಿ ವಚನ ಸಾಹಿತ್ಯ ಅನುಪಮವಾದುದು. ಎಂಥವರನ್ನೂ ಆಕರ್ಷಿಸಿ ಪರಿಣಾಮಕಾರಿಯಾಗಿ ಪ್ರಭಾವ ಬೀರುವ ಈ ಸಾಹಿತ್ಯ ಕನ್ನಡ ಸಾಹಿತ್ಯಲೋಕದ ತಪೋವನ ಎಂದು ಕರೆಯುವುದುಂಟು, ವಚನ ಸಾಹಿತ್ಯ ಸಕ್ಕರೆಯಂತೆ ಸೊಗಸು, ಸಿಹಿ, ಜೇನಿನಂತೆ ಮಧುರ, ಸಾಗರದಷ್ಟು ಹಿರಿದು.

ದೇವರ ದಾಸಿಮಯ್ಯನ ವಚನಗಳ ಅಂಕಿತನಾಮ 'ರಾಮನಾಥ' ತನ್ನ ಕಾಲದ ಕಂದಾಚಾರ, ಅಂಕು-ಡೊಂಕು, ಅಧರ್ಮ-ಅನೀತಿ, ಡಂಬಾಚಾರ, ಅತಿಯಾಸೆ, ಅನೇಕ ಸಂಗತಿಗಳನ್ನು ಮುಲಾಜಿಲ್ಲದೆ ಚುಚ್ಚುಮಾತಿನಲ್ಲಿ ವಚನಗಳನ್ನು ರಚಿಸಿದ್ದು ಈತನ ಗಟ್ಟಿಗಾರಿಕೆ, ಆಲ್ದಾಳ ಅವರ ನಾಟಕದ ಉದ್ದೇಶವು ಸಹ ಸ್ಪಷ್ಟವಾಗಿದೆ. ಸಮಾಜದ ಅಂಕು-ಡೊಂಕುಗಳನ್ನು ಬಯಲಾಗಿಸಿ ಅವುಗಳನ್ನು ತೊರೆಯುವಂತೆ ಮಾಡುವಲ್ಲಿ ನಾಟಕ ಮಾಧ್ಯಮವನ್ನು ಚೆನ್ನಾಗಿ ಬಳಸಿಕೊಂಡಿದ್ದಾರೆ. ಹದಗೆಟ್ಟ ಅಂದಿನ ಸಮಾಜದ ಪರಿಸ್ಥಿತಿ ಕುರಿತು ಟೀಕಿಸಿ, ಅಹಂಕಾರ, ನಾಸ್ತಿಕತೆ, ಪರನಿಂದೆ, ಸ್ವಪ್ರಶಂಸೆಯ ಡಂಬಾಚಾರಿಗಳನ್ನು ಕುರಿತು ದೇವರ ದಾಸಿಮಯ್ಯ ತನ್ನ

ವಚನದಲ್ಲಿ ಹೀಗೆ ಹೇಳಿದ್ದಾನೆ.

**ಇಳೆ ನಿಮ್ಮದಾನ, ಬೆಳೆ ನಿಮ್ಮದಾನ**
**ಸುಳಿದು ಬೀಸುವ ಗಾಳಿ ನಿಮ್ಮದಾನ**
**ನಿಮ್ಮದಾನವನ್ನುಂಡು ಅನ್ಯರನು**
**ಹೊಗಳುವ ಕುನ್ನಿಗಳ ನೇನೆಂಬೆ ರಾಮನಾಥ.**

ಎನ್ನುತ್ತಾನೆ. ನಾಟಕದ ಮಾಧ್ಯಮದ ಮೂಲಕ, ಪಾತ್ರಗಳ ಮೂಲಕ ಈ ವಚನಗಳು ನಟರ ಬಾಯಿಯಿಂದ ರಾಗಬದ್ಧವಾಗಿ ಹೊರ ಬೀಳುತ್ತಿದ್ದಂತೆ ಪ್ರೇಕ್ಷಕರು ಹುಚ್ಚೆದ್ದು ಕುಣಿಯುತ್ತಾರೆ. ಮತ್ತೆ–ಮತ್ತೆ ಈ ವಚನಗಳನ್ನು ಕೇಳುವುದಕ್ಕೆ 'ಒನ್ಸ್‌ಮೋರ್' ಬೇಡಿಕೆಯನ್ನೇ ಇಡುತ್ತಾರೆ.

ದೇವರದಾಸಿಮಯ್ಯನ ಪಾತ್ರದ ಭವ್ಯತೆ, ಅವರಾಡುವ ಮಾತುಗಳು ಮುತ್ತು ಪೋಣಿಸಿದಂತೆ, ಕಟುವಾಗಿದ್ದರೂ ಅವುಗಳಲ್ಲಿ ಅಡಕವಾಗಿರುವ ಅರ್ಥ ಘನವಾದುದು, ಅಮೃತಮಯವಾದುದು. ಆಲ್ದಾಳ ಅವರು ಸಕಲ ಪಾತ್ರಗಳಿಗೆ ಸಮಾನ ಗೌರವ ನೀಡಿದ್ದಾರೆ. ಎಲ್ಲೂ ಟೀಕೆಗೆ ಆಸ್ಪದ ನೀಡದಂತೆ ನಾಟಕವನ್ನು ಸುಖಾಂತವಾಗಿ ದಡಸೇರಿಸಿದ್ದಾರೆ. ಇದು ಒಂದು ರೀತಿಯಲ್ಲಿ ಕಲೆ. ಹಾಸ್ಯ ಪಾತ್ರಗಳು ನಿದ್ದೆಗೆಡಿಸುತ್ತವೆ. ಮಾನವ ಮಾತನಾಡುವ ಏಕೈಕ ಪ್ರಾಣಿ ನಾಲಿಗೆಯನ್ನು ಮನ ಬಂದಂತೆ ಹರಿಬಿಡುವುದು ಸಲ್ಲದು ಎಂಬ ನೀತಿ ಬೋದನೆ ಈ ನಾಟಕದಲ್ಲಿ ಎದ್ದು ಕಾಣುತ್ತದೆ.

# ಕುಮಸಗಿ ಶ್ರೀ ವೆಂಕಟೇಶ್ವರ ಶಿವಯೋಗಿ ಮಹಾತ್ಮೆ

**(ಸಾಮಾಜಿಕ ನಾಟಕ) (ಅಪ್ರಕಟಿತ)**

ಎಲ್.ಬಿ.ಕೆ ಆಲ್ದಾಳ ಅವರು ರಚಿಸಿರುವ "ಕುಮಸಗಿ ಶ್ರೀವೆಂಕಟೇಶ್ವರ ಶಿವಯೋಗಿ ಮಹಾತ್ಮೆ" ಎಂಬ ಧಾರ್ಮಿಕ ನಾಟಕ ಓದುಗರ ಕೈಸೇರದೇ ಇರುವುದು ಒಂದು ರೀತಿಯ ನೋವು ಲೇಖಕರು ಅನುಭವಿಸುತ್ತಿದ್ದಾರೆ. ಈ ನಾಟಕ ಬರೆದು ದಶಕಗಳೇ ಕಳೆದರೂ ಪ್ರಕಟವಾಗದೇ ಮನೆಯ ಕಪಾಟನಲ್ಲಿ, ಒಂದು ಮೂಲೆಯಲ್ಲಿ ಜೀವಚ್ಛವದಂತೆ ಬಿದ್ದುಕೊಂಡಿದೆ. ಪ್ರಕಟಿಸುವ ಶಕ್ತಿ ಲೇಖಕರಿಗಿಲ್ಲ. ಅಂಥ ಪ್ರಕಾಶಕರಿಗಾಗಿ ಆಲ್ದಾಳರ ಹಲವು ನಾಟಕಗಳು ದಾರಿಕಾಯುತ್ತಲೇ ಇವೆ.

"ಶ್ರೀ ವೆಂಕಟೇಶ್ವರ ಶಿವಯೋಗಿ ಮಹಾತ್ಮೆ" ನಾಟಕ ಸಮಾಜದಲ್ಲಿನ ಬಡವರ, ಹಿಂದುಳಿದವರ, ದೀನ, ದಲೀತರ ಬಗ್ಗೆ ಹೆಚ್ಚು ತುಡಿತ ಹೊಂದಿದೆ. ಮೇಲು–ಕೀಳು ಎಂಬ ಭಾವನೆ. ಅಜಾತಿ–ಈಜಾತಿಯ ಬಗ್ಗೆ ಕೆಲಸಕ್ಕೆ ಬಾರದ ಕ್ಷುಲ್ಲಕ ವಿಷಯವನ್ನೇ ದೊಡ್ಡದು ಮಾಡಿಕೊಂಡವರನ್ನು ಸರಿದಾರಿಗೆ ತರುವ ಪ್ರಯತ್ನ ಈ ನಾಟಕದ ಮೂಲಕ ಮಾಡಲಾಗಿದೆ. ಜಾತಿಯ ಬೇಲಿಯನ್ನು ದಾಟಿದ ಜಂಗಮತ್ವ ನಾಟಕದಲ್ಲಿ ವಿಜೃಂಭಿಸುತ್ತದೆ.

ಮಾನವನ ಬಾಳು ಬಂಗಾರವಾಗಬೇಕು. ಹಸನು ಆಗಿರಬೇಕು, ಪಾದಯಾತ್ರೆಯ ಮೂಲಕ ಆರೋಗ್ಯ ಕಾಯ್ದುಕೊಳ್ಳುವ ಉತ್ತಮಪಾಠ ಆಲ್ದಾಳರು ತೋರಿದ್ದಾರೆ. ಆಲ್ದಾಳರು ನಾಟಕದ ಯಾವ, ಯಾವ ಭಾಗಕ್ಕೆ ಹೆಚ್ಚು ಒತ್ತು ಕೊಡಬೇಕೋ ಅಲ್ಲೆಲ್ಲಾ ಮೇಳವನ್ನು ಪರಿಣಾಮಕಾರಿಯಾಗಿ ಉಪಯೋಗಿಸಿಕೊಂಡಿದ್ದಾರೆ. ಹಾಡುಗಳನ್ನು ಸಹ ಸಂದರ್ಭೋಚಿತವಾಗಿ ಉಪಯೋಗಿಸಿದ್ದಾರೆ.

"ಕುಮಸಗಿ ಶ್ರೀ ವೆಂಕಟೇಶ್ವರ ಶಿವಯೋಗಿ ಮಹಾತ್ಮೆ" ನಾಟಕದಲ್ಲಿ ಮನುಕುಲದ ಮರ್ಮವಿದೆ. ಆಡುವ ಮಾತುಗಳು ಸೂತಕವಾಗಿರಬಾರದೆನ್ನುವ ವೈಚಾರಿಕತೆ ಇದೆ. "ಒಳ್ಳೇ ಕೆಲಸವನ್ನು ಮಾಡು. ಅದನ್ನು ಹಿಂದಿರುಗಿ ನೋಡಬೇಡ, ಅದು ತನ್ನಿಂದ ತಾನೇ ಬೆನ್ನು ಹತ್ತುತ್ತದೆ, ಎಂಬ ನೀತಿಪಾಠವಿದೆ. "ಚಹಾ ಜಗತ್ತು ನಿನಗೇನು ಗೊತ್ತು ಹೊತ್ತು ಗೊತ್ತಿರದೆ ತರುವು ದಾಪತ್ತೊ" ಎಂದು ಹೇಳುವಲ್ಲಿ ಜಾಣ್ಮೆಯಿದೆ. "ಗಂಡನ ಜೀವನದ ಎಕಕಸತಿ. ಹೆಣ್ಣಿನ ಜೀವನ ಬೆಳಕು ಪತಿ" ಎಂದು ಹೇಳುವಲ್ಲಿ ಸತಿಪತಿಗಳ ಬದುಕು ಬಂಗಾರದಂತಿದೆ.

ನಾಟಕದ ಸಕಲ ಪಾತ್ರಗಳು ನಾಟಕಕ್ಕೆ ಹೇಳಿ ಮಾಡಿಸಿದಂತಿವೆ. ಅದರಲ್ಲೂ ಹಿರಿಯ ಮಹಾತ್ಮರ ಪಾತ್ರ ಅವರ ಅಭಿನಯ, ಅವರ ಉಪದೇಶ, ಸಮಾಜದ ಬಗ್ಗೆ ಇರುವ ಕಳಕಳಿ ನಾಟಕಕ್ಕೆ ಜೀವ ತುಂಬಿದಂತಾಗಿದೆ. ಹಾಸ್ಯದ ಇಣುಕು ನೋಟ ಅವರ ಅಭಿನಯ ಪ್ರೇಕ್ಷಕರಿಗೆ ಭರಪೂರ ಮನರಂಜಿಸದೇ ಇರದು.

'ಕುಮುಸಗಿ ಶ್ರೀ ವೆಂಕಟೇಶ್ವರ ಶಿವಯೋಗಿ ಮಹಾತ್ಮೆ' ಆಲ್ದಾಳರ ಯಶಸ್ವಿ ನಾಟಕಗಳ ಸಾಲಿನಲ್ಲಿ ಇದೊಂದು ಸೇರ್ಪಡೆಗೆ ಅರ್ಹವಾದುದು.

## ಯಾರದೊ ದುಡ್ಡು ಯಲ್ಲಮನ ಜಾತ್ರೆ (ನಾಟಕ)

ಕಲಬುರ್ಗಿ ನಗರದ ಹಾನಗಲ್ ಕುಮಾರೇಶ್ವರ ನಾಟಕಸಂಘದ ರಂಗಭೂಮಿಯ ಮೇಲೆ ಆಲ್ದಾಳ ಕೃತ "ಯಾರದೋ ದುಡ್ಡು ಯಲ್ಲಮನ ಜಾತ್ರೆ" ಸಾಮಾಜಿಕ ನಾಟಕ ಭರ್ಜರಿಯಾಗಿ ಜನಮನವನ್ನು ರಂಜಿಸುತ್ತ ಸುಮಾರು ಸಾವಿರಾರು ಪ್ರಯೋಗಗಳನ್ನು ಕಂಡಿದೆ ಎಂದರೆ ಯಾರಿಗಾದರೂ ಆಶ್ಚರ್ಯ ತರದೇ ಇರಲಾರದು.

'ಯಾರದೋ ದುಡ್ಡು ಯಲ್ಲಮನ ಜಾತ್ರೆ' ಎಲ್ಲೆಡೆಯೂ ಯಶಸ್ವಿಯಾಗುವುದಕ್ಕೆ ಆಲ್ದಾಳರು ತೋರುವ ಕಳಕಳಿ, ಭಾಷೆಯಶೈಲಿ, ಅದರಲ್ಲೂ ಗ್ರಾಮೀಣ ರಂಗ ಪ್ರೇಮಿಗಳಿಗೆ ಆಕರ್ಷಕವಾಗುವ ಶೈಲಿಯಲ್ಲಿ ಪಾತ್ರಗಳ ನಟನೆ, ಪಾತ್ರಗಳಿಗೆ ತಕ್ಕ ಹಾಗೆ ಸಂವಾದ ಮತ್ತು ಹೆಚ್ಚಿನ ಮುತವರ್ಜಿಯೊಂದಿಗೆ ನಾಟಕದ ನಿರ್ದೇಶನವನ್ನು ನಾಟಕಾರರು ವಹಿಸುತ್ತಿರುವುದು ಮುಖ್ಯವಾಗಿದೆ.

ಈ ನಾಟಕ ಪ್ರೇಕ್ಷಕರಿಗೆ ನಾಟಕದ ಕಥೆ ಅರ್ಥಮಾಡಿಕೊಳ್ಳುವುದು ಸ್ವಲ್ಪ ಮಟ್ಟಿಗೆ ಕಷ್ಟವೆನ್ನಿಸಿದರೂ ಕೊನೆಯಲ್ಲಿ ನಾಟಕದ ಉದ್ದೇಶ ಮನವರಿಕೆಯಾಗುತ್ತದೆ.

ಆಧುನಿಕ ಸಮಾಜದಲ್ಲಿ ನಿತ್ಯ ಕಾಣುವ ವಸ್ತುವನ್ನೇ ಆಲ್ದಾಳರು ಈ ನಾಟಕದಲ್ಲಿ ನಿರೂಪಿಸಿದ್ದು ಕೀರ್ತಿ, ಜ್ಯೋತಿ ಇವರುಗಳ ಪಾತ್ರ, ಸಂವಾದ ಸಮಾಜಕ್ಕೆ ಹಿಡಿದ ಕನ್ನಡಿಯಾಗಿದೆ, ಸಾಮಾಜಿಕ ಮೌಲ್ಯಗಳು ರಾರಾಜಿಸಿವೆ. ಹಾಸ್ಯಕ್ಕೇನೂ ಕೊರತೆಯಿಲ್ಲ, ಹಾಸ್ಯದ ಮಾತುಗಳು ನಾಟಕಕಾರರು ಸೃಷ್ಟಿಸುವ ಜಾಣತನ ಮೆಚ್ಚಲೇ ಬೇಕು. ರಂಗದ ಮೇಲೆ ಸೀನಪ್ಪ, ರಂಗಪ್ಪ ನಾಟಕದ ಸನ್ನಿವೇಶಕ್ಕೆ ರಂಗು ತುಂಬುವಲ್ಲಿ, ಪ್ರೇಕ್ಷಕರನ್ನು ರಂಜಿಸುವಲ್ಲಿ ಅವು 'ಒನ್ಸಮೋರ್' ಪಡೆದುಕೊಳ್ಳುವ ಶಕ್ತಿಯನ್ನು ಪಡೆದಿವೆ.

# ಕಲ್ಕಂಬದ ಕಿರಣ

(ಜೀವನ ಚರಿತ್ರೆ)

**ಓ! ಜಗಜ್ಜನನಿ ನಿಮ್ಮ ಸಿರಿ ಪಾದಗಳಿಗೆ ದಿನನಿತ್ಯ ನಮಿಸಿ**
**ಅಷ್ಟ ದಿಕ್ಪಾಲಕರು, ಜಗದ ಶರಣ ಶರಣೆಯರಿಗೆ ನಿನ್ನ**
**ರೂಪದಲ್ಲಿ ಸ್ಮರಿಸುತ್ತಾ, ಶರಣ ರುಕ್ನುದ್ದೀನ ಸಾಹೇಬರ**
**ದಿವ್ಯ ಚರಿತ್ರೆ ಬರೆಯಲು ನಿಮ್ಮ ಘನಾಶೀರ್ವಾದ ನೀಡಿ**
**ಇದೊ ನಮಸ್ಕರಿಸುವೆ**

ಎಲ್.ಬಿ.ಕೆ.ಆಲ್ದಾಳರು ಕರ್ನಾಟಕದ ಲೇಖಕರಲ್ಲಿ ಅಗ್ರಗಣ್ಯರು ಆಲ್ದಾಳರನ್ನು ಯಾವುದೇ ಧರ್ಮದ ವ್ಯಾಪ್ತಿಗೆ ಒಳಪಡಿಸಿ ಗುರುತಿಸುವುದು ತುಂಬಾ ಸಂಕುಚಿತವಾದೀತು. ಉತ್ತರದಿಂದ ದಕ್ಷಿಣಕ್ಕೆ ಪ್ರಯಾಣಿಸಿದ ಇಸ್ಲಾಂ ಸಂಸ್ಕೃತಿಯು, ಸ್ಥಳೀಯ ಸಂಸ್ಕೃತಿಯೊಂದಿಗೆ ಬೆರೆತು ಹೋಗಿದೆ. ಎಂತಲೇ ೧೫,೧೬ ನೇ ಶತಮಾನದಿಂದಲೂ ಇಸ್ಲಾಂ ಪ್ರತಿಭೆಗಳು ಇಲ್ಲಿ ತತ್ವಪದ, ಕಾವ್ಯ, ಕೀರ್ತನೆ, ವಚನಗಳನ್ನು ವೆಗ್ಗಳವಾಗಿ ರಚಿಸಿದ್ದಾರೆ. ಉರ್ದುಮಯ ಕನ್ನಡದ ಗಮಲನ್ನು ಚನ್ನೂರು ಜಲಾಲಸಾಹೇಬರು, ಮೋಟ್ನಳ್ಳಿ ಹಸನಸಾಬ, ಖಾಕಿಪೀರ ಮುಂತಾದವರು ಪಸರಿಸಿದ್ದಾರೆ. ಇವರೆಲ್ಲರೂ ಮತ ಧರ್ಮಗಳ ಸಂಕುಚಿತ ಪರಧಿಗಳಾಚೆ ನಿಂತು ಮಾನವೀಯ ನೆಲೆಯಲ್ಲಿ ಬದುಕಿ ಸೌಹಾರ್ದತೆಯ ಸೇತುವೆಯನ್ನು ಕಟ್ಟಿದ್ದಾರೆ. ಇದೇ ಪರಂಪರೆಯಲ್ಲಿ ಬೆಳೆದು ಬಂದ ಆಲ್ದಾಳರು ಆಧುನಿಕೋತ್ತರ ಯುಗದ ಲೇಖಕರು. ಇವರು ಬರೆದ ಶರಣ–ಸಂತರ ನಾಟಕಗಳು, ಜೀವನ ಚರಿತ್ರೆಗಳು, ಸಂತರನಾಟಕಗಳು ಸುಪ್ರಭಾತಗಳು, ಇನ್ನಿತರ ಭಕ್ತಿ ಪ್ರಧಾನ ಕಾವ್ಯಗಳನ್ನು ಗಮನಿಸಿದರೆ ಈ ಮಾತು ಧೃಢವಾಗುತ್ತದೆ. ಈ ಭಾಗದ ಸಿದ್ಧ, ಆರೂಢ, ನಾಥ, ಅವಧೂತ ಪರಂಪರೆಯ ತಾತ್ವಿಕ ಧಾರೆಗಳನ್ನು ಆಲ್ದಾಳರು ಹೆಚ್ಚಿನ ರೀತಿಯಲ್ಲಿ ಕರಗತ ಮಾಡಿಕೊಂಡಿದ್ದಾರೆ. ಇದೆ ಸಾಲಿನಲ್ಲಿ ಮತ್ತೊಂದು ಹೊಸ ಬಗೆಯ ಹೊತ್ತಿಗೆ 'ಕಲ್ಕಂಬದ ಕಿರಣ' ಆಲ್ದಾಳರ ಪ್ರತಿಭೆಯಡಿ ಪ್ರಕಟಗೊಂಡಿದೆ.

" ಈ ಹೊತ್ತಿಗೆಯಲ್ಲಿ ಅವರ ಶಾಸ್ತ್ರಾನುಭವ, ಸಾಹಿತ್ಯಾಭ್ಯಾಸ, ಪದವೈಖರಿ ಮತ್ತು ನಿರೂಪಣೆಯ ಬೆಡಗು ಎದ್ದು ಕಾಣುತ್ತದೆ. ಶೈಲಿ ಬಂಧುರವಾಗಿದೆ. ಸರಳವಾಗಿದೆ. ಮಾತಿನ ಓಟ ಬಲುಚಂದ, ವೈದ್ಯಗುರು, ಕವಿತಿಲಕ, ನಿರಾಡಂಬರಜೀವಿ ಡಾ. ರುಕ್ನುದ್ದೀನ್ ಸಾಹೇಬ ಕಲ್ಕಂಬರ ಚರಿತ್ರೆ ಬೆಣ್ಣೆಯ ಮುದ್ದೆಯಂತೆ ಕಣ್ಣಿಗೆ ಅಕರ್ಷಕ ಹಾಗೂ ಸವಿಯಾಗಿದೆ. ಇದನ್ನು ಗದ್ಯ ಕಾವ್ಯವೆಂದು ಕರೆಯಬಹುದು. ಈ ಚರಿತ್ರೆಯನ್ನು ಎಲ್ಲರೂ ಓದಲೇ ಬೇಕು. ಅವರ ಮಹಾಮಾರ್ಗದಲ್ಲಿ ಮುನ್ನಡೆಯಲೇ ಬೇಕು. ಇದು ಒತ್ತಾಯಿಸುವ ಮಾತು ಅಲ್ಲ". [೧೭೯]

ದೇವಾದಿ ದೇವತೆಗಳನ್ನು ಹಾಗೂ 'ಕಲ್ಕಂಬದ ಕಿರಣ'ದ ನಾಯಕನ ತಂದೆ–ತಾಯಿಯರನ್ನು ಸುತ್ತಿಸುವುದರೊಂದಿಗೆ ಈ ಹೊತ್ತಿಗೆ ಪ್ರಾರಂಭಗೊಂಡಿದ್ದು ಶ್ರೀ ಆಲ್ದಾಳರ ಅಧ್ಯಾತ್ಮ ಬಲವಿಗೆ ಹಿಡಿದ ಕೈಗನ್ನಡಿಯಾಗಿದೆ.

# ಜೋಗೂರ ಜ್ಯೋತಿ

(ಚರಿತ್ರಾಮೃತ)

**ವಿಶ್ವಾರಾಧ್ಯರ ಗತಿ । ವಿಶ್ವಕ್ಕೆ ಚಿಜ್ಯೋತಿ ।**
**ಸಾವಿರದ ಶರಣೆ ನೀನಮ್ಮ । ಬಸಮ್ಮ ।**
**ಭವ ಪರಿಹಾರವು ಮಾಡಮ್ಮ ।**

**ಸಿರಿದೇವಿ ಮಹಾದೇವಿ । ಶಾಖಾಂಬೆ ಪುರದೇವಿ ।**
**ಧರೆಗೆ ಅವತರಿಸಿ ಬಾರಮ್ಮ । ಶ್ರೀ ದೇವಿ ।**
**ಭವ ಬಂಧನವ ನೀ ಬಿಡಿಸಮ್ಮ ।**

ಕನ್ನಡನಾಡಿನಲ್ಲಿ ಕಾಲಕಾಲಕ್ಕೆ ಅನೇಕ ಶರಣರು,ಸಂತರು, ಮಹಾಪುರುಷರು ಆಗಿ ಹೋದಂತೆ ಶಿವ ಶರಣೆಯರು ಬಾಳಿ ಬೆಳಗಿ ವಿಜೃಂಭಿಸಿದ್ದಾರೆ. ಇತ್ತೀಚೆಗೆ ಇಂಥ ತಾಯಂದಿರ ಸಾಲಿನಲ್ಲಿ ಸಜ್ಜಲ ಗುಡ್ಡದ ಶರಣಮ್ಮ, ಸೊಲಾಪುರದ ರುದ್ರಮ್ಮ, ಜಯದೇವಿತಾಯಿ ಲಿಗಾಡೆ, ಆದವಾನಿ ಲಕ್ಷ್ಮಮ್ಮ, ಸುರುಪುರದ ತುಳಜಮ್ಮ, ಸೂಗುರುದ ಶರಣಮ್ಮ ಇವರೆಲ್ಲ ಶರಣತ್ವದ ಸುಧೆಯನ್ನುಂಡು ಶಿವಾನುಭವ ಕಂಡವರು. ಹುಟ್ಟಿದ ನಾಡಿಗೆ, ದೇಶಕ್ಕೆ ಕೀರ್ತಿ ತಂದವರು. ಇಂಥ ತಾಯಂದಿರಲ್ಲಿ ಯಾದಗಿರಿ ತಾಲೂಕಿನ ಅಬ್ಬೆ ತುಮಕೂರಿನ ಘನ ಪಂಡಿತ ವಿಶ್ವಾರಾಧ್ಯರ ಸತಿಶಿರೋಮಣಿ ಶಿವಶರಣೆ ಬಸಮ್ಮ ತಾಯಿಯವರು ಒಬ್ಬರು.

ಮಹಾಕಾವ್ಯಗಳ ಕಾಲದ ಸೀತೆ, ಸಾವಿತ್ರಿಯರಿಂದ ಇಂದಿನ ಶಾರದಾಮಾತೆ, ಕಸ್ತೂರಿಬಾಗಾಂಧಿಯವರ ವರೆಗೆ ಅಸಂಖ್ಯಾತ ಆದರ್ಶ ಮಹಿಳೆಯರ ಜೀವನ ಅಧ್ಯಯನದ ಪುಣ್ಯನಮ್ಮದಾಗಿದೆ. ಅಂತಹವರಲ್ಲಿ ನಮ್ಮ ಭಾಗದ ಜನರಭಕ್ತಿ, ಜ್ಞಾನಗಳಿಗೆ ಆಶ್ರಯದಾತನಾದ ಅಬ್ಬೆತುಮಕೂರಿನ ವಿಶ್ವಜ್ಯೋತಿ ವಿಶ್ವಾರಾಧ್ಯರ ಮಡದಿ ಬಸಮ್ಮ ತಾಯಿಯು ಒಬ್ಬರು.

"ಹರಪೂಜೆ, ಗುರುಸೇವೆ। ವರಪೂಣ್ಯವಿಲ್ಲದಲೆ। ಬರಿದೆ ಸುಖಭೋಗವು। ದೊರಕುವದೆ ಆತ್ಮ।" ಎಂಬ ನಿಜಗುಣ ಶಿವಯೋಗಿಗಳು ಒಂದು ಕಡೆ ಹೇಳಿದ್ದಾರೆ " ಹರಪೂಜೆ, ಗುರುಸೇವೆ, ವರಪುಣ್ಯಗಳ ತ್ರಿಧಾರೆಯನ್ನು ಏಕ ಮುಖವಾಗಿ ಪಡೆದುದರಿಂದಲೇ ಬಸಮ್ಮ ತಾಯಿಯವರು ವಿಶ್ವಜ್ಯೋತಿಯ ಬತ್ತಿಗೆ ತೈಲವಾಗುವ ಸಾಧ್ಯತೆ ಪಡೆದಿದ್ದಾರೆ. ಸಾಮಾನ್ಯರಂತೆ ಕಂಡರೂ ಅಸಾಮಾನ್ಯರಾದ ಆ ಅಣಿವಾದಿ ಅಷ್ಟಸಿದ್ಧಿಗಳನ್ನು ಕಟ್ಟಿ ಆಳಿದ ಈ ಜಗಜೆಟ್ಟಿಯ ಬೆನ್ನು ಬಿಡದೆ ಆಜ್ಯೋತಿಗೆ ಶ್ರೀರಕ್ಷೆಯಾದುದಲ್ಲದೇ ಅವರ ಅಸಂಖ್ಯಾತ ಶಿಷ್ಯರಿಗೆ ಪ್ರೀತಿಯ ಬಸ್ಸಮವ್ವನವರಾಗಿದ್ದರು" [೧೮೦]

**ಸಾವಿತ್ರಿ, ಗಾಯತ್ರಿ, ಭೂದೇವಿ ಭಾರತಿ ।**
**ಶಂಕರಿ ಶುಭಕರಿ ವಾಗ್ದೇವಿ ಭಗವತಿ ।**
**ಬಸವಾಂಬೆ ಜಗದಂಬೆ ವಿಶ್ವಾರಾಧ್ಯರ ಸತಿ ।**
**ಸಿದ್ಧ ಬಸವಾರ್ಯರ ಪುತ್ರಿ ಜೋಗೂರ ಜ್ಯೋತಿ ।**
**ನವಿಸುವೇನು ತಾಯೇ ।** ೧೮೧

**ಗಂವ್ಹಾರದ ಹಿರೇ ಮಠದ ಸೊಸೆಯಾಗಿಬಂದೆ ।**
**ಹುಟ್ಟು ಸಾವಿಲ್ಲದ ಮಕ್ಕಳನ್ನು ನೀಪಡೆದೆ ।**
**ಕಾಯಕದ ಶುಚಿಯಲ್ಲಿ ಕೈಲಾಸ ತೋರಿದೆ ।**
**ದಾಸೋಹ ಭಾವದಲ್ಲಿ ಶಿವ ಪ್ರಸಾದ ಹಂಚಿದೆ ।**
**ನವಿಸುವೇನು ತಾಯೇ ।** ೧೮೨

ವಿಶ್ವಾರಧ್ಯರು ಬಸಮ್ಮ ತಾಯಿಯನ್ನು ಹಲವಾರುಬಾರಿ ಪರೀಕ್ಷಿಸಿದ್ದಾರೆ. "ಅರೆದು ನೋಡುವ ಚಂದನದಂತೆ, ಒರೆದು ನೋಡುವ ಚಿನ್ನದಂತೆ, ತರಿದು ನೋಡುವ ಕಬ್ಬಿನಂತೆ, ಅರೆದರೆ ಸಣ್ಣಾಗದಿದ್ದರೆ, ಒರೆದರೆ ಒಪ್ಪಗೆಡದಿದ್ದರೆ, ತೆರೆದರೆ ಸವಿಗೆಡದಿದ್ದರೆ ಕೈ ಹಿಡಿದೆತ್ತಿಕೊಂಬ" ಎಂಬ ಬಸವಣ್ಣನವರ ವಚನದಂತೆ ಬಸಮ್ಮ ತಾಯಿ ವಿಶ್ವಾರಾಧ್ಯರ ಎಲ್ಲ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಅವರ ಕೃಪಾಶೀರ್ವಾದಕ್ಕೆ ಪಾತ್ರರಾದರು.

ಬಸಮ್ಮ ತಾಯಿ ಪತಿ ವಿಶ್ವಾರಾಧ್ಯರ ಅಧ್ಯಾತ್ಮಿಕ ಪ್ರಗತಿಗೆ ಶ್ರೀ ಗಂಧದಂತೆ ತೆಯ್ದುಕೊಂಡರು. ಅವರ ಬದುಕಿಗೊಂದು ವಿಶಿಷ್ಟ ಶಕ್ತಿಯಾದರು. ಆ ಶಕ್ತಿ ಅದು ಇಂದಿನ ಮುಂದಿನ ಮಹಿಳೆಯರಿಗೆ ದಾರಿದೀಪ, ಅವರ ಸಚ್ಚಾರಿತ್ರಕ್ಕೆ ಸಾರ್ವಕಾಲಿಕತೆ ಇದೆ.

ಲೇಖಕ, ನಾಟಕಕಾರ ಎಲ್.ಬಿ.ಕೆ ಆಲ್ದಾಳ ಅವರು ಗೌರವಾನ್ವಿತರು. ಮಹಿಳೆಯರ ಬಗ್ಗೆ ಅವರು ಹೊಂದಿರುವ ಗೌರವ, ವಿಶ್ವಾಸ ಅನುಪಮ "ಹೆಣ್ಣು ತನ್ನ ಮನೆತನದ ಭದ್ರ ಬುನಾದಿ, ಗಂಡು ಆ ಬುನಾದಿಯ ಮೇಲೆ ಕಟ್ಟಿದ ಅಂದದ ಗೋಡೆ" ಹೆಣ್ಣು ಮಾತಾಡಿದರೆ, ಮುತ್ತು ರತ್ನಗಳಾಗಿರಬೇಕು, ನಕ್ಕರೆ ಚುಕ್ಕೆಗಳು ಅರಳಬೇಕು.

**ಹೆಣ್ಣು ಬಾಯ್ತೆರದರೆ ಮಲ್ಲಿಗೆಯ ಬೀರಿದ್ಹಂಗ**
**ನಮ್ಮೂರ ಹಯನೆಲ್ಲ ಉಕ್ಕಿ ಹರಿದ್ಹಂಗ**

ಆಲ್ದಾಳರು ಶಬ್ಧ ಬ್ರಹ್ಮರಿದ್ದಂತೆ, ಯಾವ ಸಮಯಕ್ಕೆ ಯಾವಪದ, ಯಾವವಾಕ್ಯ, ಯಾವ ಕವನ, ಯಾವ ಕಥೆ, ಯಾವ ವಚನ, ಯಾವ ಮಾತುಗಳನ್ನು ಜೋಡಿಸಬೇಕೆಂಬ ಶೈಲಿಯನ್ನು ಕರಗತ ಮಾಡಿಕೊಂಡದ್ದರಿಂದಲೇ ಅವರ ಯಾವುದೇ ಕೃತಿ ಓದುಗರನ್ನು ಸರಳ ರೀತಿಯಲ್ಲಿ ಓದಿಸಿಕೊಂಡು ಹೋಗುತ್ತದೆ. ನೋಡಿ ಹೆಣ್ಣಿನ ಬಗ್ಗೆ ಅವರು ಹೊಂದಿರುವ ಭಾವನೆಗಳು ಎಷ್ಟೊಂದು ಅಪಾರ.

ಬಸವಾಂಬೆ ಹಾಸಿಗೆ ಹಿಡಿದು ಮಲಗಿದರು. ಎಳ್ಳಾಮಾಸಿ ಆದ ಆರನೇ ದಿನಕ್ಕೆ ಶಿವನಪ್ಪಣೆಯಾಗಿದೆ ನಾನು ಹೊರಡುತ್ತೇನೆ, ನಗುನಗುತ್ತ ಬೀಳ್ಕೊಡಬೇಕು ನೋಡಪ್ಪ ಅಂದಾಗ ಸಿದ್ಧರಾಮ ಶಿವಯೋಗಿಗಳ ಕಣ್ಣಲ್ಲಿ ನೀರು ಧಾರಾಕಾರವಾಗಿ ಹರಿಯ ತೊಡಗಿತು. ಗುರುತಾಯಿ ಬಸಮ್ಮ ಅವರು ಸ್ನಾನ ಮಾಡಿ ಲಿಂಗಾರ್ಚನೆಗೆ ಕುಳಿತರು. ಲಿಂಗದಲ್ಲಿ ಅಂಗಬೆರೆತು, ಶಿವಬೆಳಗಿನಲಿ ಕೂಡಿತು. ಜೋಗೂರ ಜ್ಯೋತಿ ಬೆಳಗಿತು.

**ವಿಶ್ವ ಬಸವಾಂಬೆಯರು । ವಿಶ್ವಕ್ಕೆ ಬೆಳಗು ।**
**ವಿಶ್ವಾಸದ ಗುಡಿಯಲಿ ನೆಲಿಸ್ಯಾರ । ಸತಿಪತಿ ।**
**ವಿಶ್ವದ ಮಕ್ಕಳೀಗಿ ಹೆತ್ತಾರ ।**

# ಪರಿಚಯ ಪ್ರಭಾ

**ಈ ಜಗಕೆ ನಾನೇಕೆ ಬಂದಿಹೆನೋ, ತಿಳಿಯದು ।**
**ಎಲ್ಲಿಂದ ಬಂದೆನೋ, ಪೋಪುದಾವೆಡೆಗೋ ।**
**ಇಚ್ಛೆ ಕೇಳುವರಿಲ್ಲ, ಗುಟ್ಟು ಬಿಚ್ಚುವರಿಲ್ಲ ।**
**ಮರುಭೂಮಿಯಲಿ ಭೋರಿಡುವ ಗಾಳಿ ನಾನು ॥**
**–ಉಮರಖಯಾಮನ ಒಸಗೆ**

ಕರ್ಮಾಕರ್ಮಗಳ ಸುಯೋಗದಿಂದ ಅವನತಿಯ ಮಾರ್ಗಹಿಡಿದ ಪಾರಮಾರ್ಥಿಕ ಪ್ರಪಂಚದಲ್ಲಿ ಧರ್ಮನಾಶವಾಗುವಾಗ ಬುದ್ಧ, ಬಸವ, ಅಲ್ಲಮ ಪ್ರಭು, ರಾಮಕೃಷ್ಣ ಪರಮಹಂಸರು, ಅಲ್ಲದೆ ಇವರಿಗಿಂತಲೂ ಪೂರ್ವಜರಾದ ಏಸುಕ್ರಿಸ್ತ, ಮಹ್ಮದ ಪೈಗಂಬರರು ಜನ್ಮತಾಳಿ ಮಾನವ ಧರ್ಮದ ಕ್ರಾಂತಿ ಮಾಡಿ ಶಾಂತಿಯ ನೆಲೆಗಟ್ಟಿನ ಮೇಲೆ ಧರ್ಮ ಧ್ವಜ ಹಾರಿಸಿದರು ಅಧ್ಯಾತ್ಮದ ತವರೂರಾದ ಭಾರತ ನೆಲದಲ್ಲಿ ಅಂತಹ ಸುಪುತ್ರರಿಗೆ, ಸತ್ಪುರುಷರಿಗೆ ಜನ್ಮ ನೀಡಿ ಧನ್ಯವಾಗಿದೆ.

**ಬಿಂದು ನಾದವನುಂಗಿ । ಇಂದು ರವಿಯನುನುಂಗಿ**
**ಸಂದಿರ್ದರವಿಯು ನಿಜನುಂಗಿದಾಯೋಗಿ**
**ಇಂದುಧರನಕ್ಕು ಸರ್ವಜ್ಞ॥**

ಎಂದು ಸಾರಿರುವ ಸನ್ಯಾಸಿ ಸರ್ವಜ್ಞನನು ಇಳೆಗವತರಿಸಿದಾ. ಭುವಿಜನಗಳಿಗೆಲ್ಲಾ ಶಿವ ಜೀವರ ಏಕ ರೂಪತೆಯನ್ನು ತಿಳಿಸಿ, ತೀರ್ಯಗ್ಜ್ಯಾತಿಗೂ ಗುರುವಾದ, ತಿರೆತಿರುಗುವ ವರೆಗೂ ತಳವೂರಿನಿಂತ ತತ್ವಜ್ಞಾನಿಯಾದ. ಶತ ಶತಮಾನಗಳ ಸೋಪಾನಗಳನ್ನೇರಿ ನೋಡಿದಾಗ ಶರಣರ ಸಾಧು ಸಂತರ, ಫಕೀರರ ಧರ್ಮ ಧ್ವಜ ಗಗನದೆತ್ತರಕ್ಕೆ ಹಾರಾಡುತ್ತಿದೆ. ಕಲಬುರ್ಗಿಯ ಈ ನೆಲ, ಈಜಲ, ಈಫಲ, ಅದೆಷ್ಟು ಪಾವನ, ಅದೆಷ್ಟು ಚೇತನ, ಹನ್ನೆರಡನೇ ಶತಮಾನದಿಂದವಲೋಕಿಸಿದಾಗ ಗೋಚರವಾಗುವುದು ಕಲಬುರ್ಗಿ ಜಿಲ್ಲೆಯ ಚರಿತ್ರೆ. ಕೃಷ್ಣ ಭೀಮೆಯರು ಹರಿದ ಒಡಲುಡಿಯೇ ಸಗರನಾಡು, ಶರಣರ ಬೀಡು, ಕವಿಗಳ ಗೂಡು, ವೀರಕೇಸರಿಗಳ ನೆಲೆವೀಡು ಎಂದು ಇತಿಹಾಸ ಪ್ರಸಿದ್ಧವಾಗಿದೆ ಕೂಡ.

ಗಿರಿಯ ಗರ್ಭವ ನೊಡೆದು ನೊರೆ ತೊರೆಯಾಗಿ ಝುರಿಯಾಗಿ ಹರಿದು ಬಂದ ಶರಣ ಸಾಗರವು ನಿರಂತರವಾಗಿ ಹರಿಯುತ್ತಲೆ ಇದೆ. ಇಂತಿಪ್ಪ ಶರಣರ ಹೃದ್ಭುವಿಯಿಂದ ಹರಿದು ಬಂದ ವಚನಾಮೃತವು ಶಹಾಪೂರದ ಬಿಲ್ಲುಕೊಂಡಿ ಮಠದ ಶ್ರೀ ಸದ್ಗುರು ಪಂಚಾಕ್ಷರಿ ಮಹಾಸ್ವಾಮಿಗಳ ಶಿಷ್ಯರಾಗಿ, ತಪೋನಿಧಿಗಳಾಗಿ, ವೈರಾಗ್ಯ ಶಿಖಾಮಣಿಗಳಾಗಿ, ಅನ್ನದಾಸೋಹಿಗಳಾಗಿ, ಸಿದ್ಧಿಯ ತಾಣವಾಗಿ ಸೈದಾಪೂರದಲ್ಲಿ, ಯೋಗ ಮಹೇಶ್ವರಿಯ ಆಶ್ರಮವನ್ನೇ ಕಟ್ಟಿ, ಭಕ್ತಾದಿಗಳ ಬೇಡಿಕೆಗಳನ್ನು ಈಡೇರಿಸಲು ಆ ಪರಶಿವನ ಶ್ರೀ ಶಕ್ತಿಯೇ ಕಲ್ಪವೃಕ್ಷವಾಗಿ, ಕಾಮಧೇನುವಾಗಿ ಶ್ರೀ

ಬಾಲಯೋಗಿ ರಾಜೇಂದ್ರ ಮಹಾರಾಜರ ನಾಲಿಗೆಯ ಮೇಲೆ ಸ್ಥಿರವಾಗಿ ನಿಂತವು !

ಈ ಕಾರಣೀಪುರುಷರೇ ನಮ್ಮ ಚರಿತ್ರೆಯ ನಾಯಕರು ಅವರು ಹುಟ್ಟಿದ್ದು ಕಲಬುರ್ಗಿ ಜಿಲ್ಲೆಯ ಕೊರವಿ ಎಂಬ ಗ್ರಾಮದಲ್ಲಿ ಅದಕ್ಕಾಗಿಯೇ ಪೂಜ್ಯರಾದ ಡಾ॥ ಜ.ಚ.ನಿ ಯವರು, ಕಲಬುರ್ಗಿಯಲ್ಲಿ ನಡೆದ ೪೮ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣದಲ್ಲಿ, " ಈ ಕಲಬುರ್ಗಿಯು ಶರಣರಿಗೆ ಉಗಮಸ್ಥಾನವಾದರೆ, ಕಲಾ ಕೋವಿದರಿಗದು ಉನ್ನತ ಸ್ಥಾನವಾಗಿದೆ ಎಂದು ಹಾಗೂ ಈ ಕಲಬುರ್ಗಿ ಎಂದರೆ ' ಸಕಲ ಕಲೆಯಿಂದೊಡಗೂಡಿದ ಒಂದು ಪಾತ್ರೆ ಇದ್ದಹಾಗೆ, ಸಾಹಿತ್ಯ, ಸಂಸ್ಕೃತಿಗಳಿಂದ ಪರಿಶೋಭಿಸುವ ಜಾತ್ರೆಯಿದ್ದಂತೆ" ಎಂದು ಬಹು ಮಾರ್ಮಿಕವಾಗಿ ಹೇಳಿದ್ದಾರೆ.

ವಿಧಿಯ ವಿಚಿತ್ರದಾಟ ಬಲ್ಲವರಾರು ? ತಾನೊಂದು ಬಗೆದರೆ ದೈವವೊಂದು ಬಗೆಯಿತು. ಮಗ ರಾಜೇಂದ್ರ ಹುಟ್ಟಿದ ಐದು ವರ್ಷಕ್ಕೆ ಶರಣ ಸಾಬಯ್ಯ ಶಿವನ ಪಾದದಲ್ಲಿ ಐಕ್ಯರಾದರು ಸತಿಯಾದ ಮೊಗಲಮ್ಮನ ದುಃಖಕ್ಕೆ ಪಾರವೇ ಇಲ್ಲದಂತಾಯಿತು. ಆದರೇನು?

**ವಿದ್ಯೆಕ್ಕೆ ನೆಲೆಯಿಲ್ಲ । ಬುದ್ಧಿಗೆ ಬೆಲೆಯಿಲ್ಲ ।**
**ಛಿದ್ರಿಸುವವರಿಗೆ ಗತಿಯಿಲ್ಲ । ಮರಣಕ್ಕೆ**
**ಮದ್ದುಗಳಿಲ್ಲ । ಸರ್ವಜ್ಞ॥**

ಹುಟ್ಟಿದ್ದೊಂದು ದಿವಸ ಸಾವು ಬರಲೇ ಬೇಕು. ಕಟ್ಟಿದ್ದೊಂದು ದಿವಸ ಬೀಳಲೇ ಬೇಕು.

**"ಹೆತ್ತಾತ ಅರ್ಜುನ । ಮುತ್ತೈಯ್ಯ ದೇವಿಂದ್ರ ।**
**ಮಾತಾಗ್ರಜನೇ ಶ್ರೀ ಹರಿಯಿರಲು । ಅಭಿಮನ್ಯು ।**
**ಸತ್ತನೇಕೆ ? ಸರ್ವಜ್ಞ॥**

ಒಂದು ನಾಶವಾದಾಗಲೇ ಇನ್ನೊಂದರ ಉಗಮ. ಅದುವೆ ನಿಸರ್ಗದ ನಿಯಮ.

ಕೊರವಿಯ ಬಾಲಯೋಗಿ ಸೈದಾಪುರದ ರಾಜೇಂದ್ರಯೋಗಿಯಾಗಿ ಧರ್ಮಶ್ರೀ ಕಾರ್ಯದಲ್ಲಿ ಮಹಾರಾಜರಾಗಿ ಮೆರೆಯುತ್ತಿರುವ ಶ್ರಿ ಬಾಲಯೋಗಿ ರಾಜೇಂದ್ರ ಮಹಾರಾಜರ ಜೀವನ ಚರಿತ್ರೆಯನ್ನು ಭಾವ ದುಂಬಿ ಬರೆದ ಶ್ರೀ ಆಲ್ದಾಳರ ಶ್ರಮ ಸಾರ್ಥಕವಾಗಿದೆ. ಈ ಗ್ರಂಥವನ್ನು ಶ್ರೀ ಮಹಾರಾಜರ ಭಕ್ತರೆಲ್ಲರೂಕೊಂಡು ಓದಿ ಪುನೀತರಾದರೆ ಕೃತಿಕರ್ತರು ಸಂತೃಪ್ತರು... ಆಲ್ದಾಳರಿಂದ ಭಕ್ತರಿಂದ ಭಕ್ತಿಯ ಬೆಳೆ ಹುಲುಸಾಗಲಿ! ಧಾರ್ಮಿಕ ರಾಶಿ ಧರೆ ತುಂಬಲಿ । ಎಂದು ಹೃದಯಾರೆ ಹಾರೈಸುತ್ತೇನೆ " .[೧೮೩]

## ಶರಣ ಸಿಂಚನ

**ತಳ್ಳೊಳ್ಳಿದಾಗ ಹುಟ್ಟಿ ಸೇಡಂದಾಗ ನೆಲೆಸಿ**
**ನೂರಾಒಂದು ಬಳ್ಳಿ ನೀ ಹರಸಿ॥**
**ಕಷ್ಟಕ್ಕೆ ಕರಗಿದೆ ನಿಷ್ಠುರಿಗೆ ನಿನೊಲಿದೆ**
**ಶ್ರೇಷ್ಠ ಜೀವನವೆಮಗೆ ದಾರಿದೀಪವಾದೆ।**
**ನೀ ಗುರುಲಿಂಗ ಜಂಗಮರ ಸೇವೆಯಲ್ಲಿ ಕಾಲಕಳೆದೆ**
**ಮಹಾದಾಸೋಹ ಎನಿಸಿ ಜ್ಯೋತಿಯಂತೆ ಬೆಳಗಿದೆ॥**

"ಹನ್ನೆರಡನೆಯ ಶತಮಾನದ ಶರಣರ ಬದುಕು ಸಮಾಜಕ್ಕೊಂದು ಮಾರ್ಗದರ್ಶಿ ಮಾದರಿ, ಬೆತ್ತಲಾದವರಿಗೆ ಬಟ್ಟೆ ತೊಡಿಸುವ, ಅಸಹಾಯಕರಿಗೆ ಸಹಾಯ ಹಸ್ತ ನೀಡುವ ಹಸಿದವರಿಗೆ ಬೊಗಸೆ ತುಂಬವ, ಅಳುವವರ ಕಂಬನಿ ವರೆಸುವ ಕನಿಷ್ಟ ಕೆಲಸಗಳಾದರೂ ಮನುಷ್ಯರೆನ್ನಿಸಿ ಕೊಳ್ಳುವ ನಾವೆಲ್ಲ ಮಾಡಲೇ ಬೇಕು. ಇದುವೇ ನಿಜವಾದ ಮನುಷ್ಯ ಧರ್ಮ.

"ಹನ್ನೆರಡನೆಯ ಶತಮಾನದ ಶರಣರು ನಂಬಿದ್ದ 'ಕಾಯಕವೇ ಕೈಲಾಸ' ತತ್ವವನ್ನೇ ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ಬದುಕನ್ನು ಸಾರ್ಥಕ ಪಡಿಸಿಕೊಂಡವರಲ್ಲಿ ಸಿದ್ಧರಾಮಪ್ಪ ತಳ್ಳಳ್ಳಿಯವರೂ ಒಬ್ಬರು. ಲಿಂಗೈಕ್ಯ ಶರಣ ಸಿದ್ಧರಾಮಪ್ಪ ಅವರು ಬಾಳಿ ಬದುಕಿದ ಜೀವನ ಗಾತೆಯನ್ನು ಪ್ರತಿ ಬಿಂಬಿಸುವ ಉದ್ದೇಶವೇ ಈ 'ಶರಣ ಸಿಂಚನ' ಕೃತಿ ಬದುಕಿನುದ್ದಕ್ಕೂ ಅಪಾರವಾದ ಎರಡು ತೊಡರುಗಳನ್ನು ಎದುರಿಸಿ ಕಷ್ಟ– ಕಾರ್ಪಣ್ಯಗಳನ್ನು ಅನುಭವಿಸಿ, ಬೇಡಿ ಬಂದವರ ಉಡಿಗೆ ಬೊಗಸೆಯಿಂದ ನೀಡಿ, ದುಃಖದಲ್ಲೂ, ಸಂತೋಷದಲ್ಲೂ, ನೋವಿನಲ್ಲೂ ನಲಿವು ಕಂಡುಕೊಂಡ ಅನುಕರಣೀಯ ವ್ಯಕ್ತಿ ತಳ್ಳಳ್ಳಿಯವರು, ತುಂಬುಸಂಸಾರದ ಬಂಡಿಯಗಾಲಿಗಳಿಗೆ ಕೀಲುಗಳಾಗಿ ಯಶಸ್ಸಿನ ಹಾದಿಯಲ್ಲಿಸಾಗಿ ಬದುಕಿ, ಭೇಷ ಎನ್ನಿಸಿಕೊಂಡ ಸಿದ್ಧರಾಮಪ್ಪ ತಳ್ಳಳ್ಳಿಯವರದು ಸಾರ್ಥಕ ಬದುಕು".

ದಿಂ. ಸಿದ್ರಾಮಪ್ಪನವರು, ಅವರೊಂದು ಸಂಪೂರ್ಣ ಭಿನ್ನವಾದ ಮಾನವಜೀವಿ, ಬರೀ ಮೇಧಾವಿಗಳಲ್ಲ, ಕಲಾವಿದರಲ್ಲ, ಕವಿಗಳಲ್ಲ, ಸಾಹಿತಿಯೂ ಅಲ್ಲ; ದಾರ್ಶನಿಕರು, ದೈವಿ ಶಕ್ತಿಯ ವಾಹಕ ವ್ಯಕ್ತಿ, ದೈವವನ್ನು ಒಳ ಬರಲೆಂದು ದೀಪವನ್ನು ಹಚ್ಚಿ ಹೃದಯ ಬಾಗಿಲನ್ನು ತೆರೆದವರು ಎಂದು 'ಶರಣ ಸಿಂಚನ' ಆಲೋಚನೆ, ತತ್ವ ನಿಷ್ಠೆಗಳನ್ನು ಅಪಾರವಾಗಿ ತಮ್ಮ ಬದುಕಿನೊಂದಿಗೆ ಮೇಳೈಸಿಕೊಂಡಿರುವ ಕವಿ, ಲೇಖಕ, ನಾಟಕಕಾರ ಆಗಿರುವ ಎಲ್.ಬಿ.ಕೆ ಆಲ್ದಾಳ ಅವರು ಹೇಳುತ್ತಾರೆ.

ಎಲ್ಲಿಯ ಮಳ್ಳಿ, ಎಲ್ಲಿಯ ಸೇಡಂ! ನೂರಾರು ಕಿ.ಮಿ. ದೂರದ ಅಂತರ, ಆದರೆ ಈ ಅಂತರ ಆಲ್ದಾಳವರಿಗೆ ಏನು ಅನ್ನಿಸಲಿಲ್ಲ. ದಿಂ.ಸಿದ್ದರಾಮಪ್ಪ ತಳ್ಳಳ್ಳಿಯವರನ್ನು ಪರಿಚಯಿಸಿಕೊಂಡದ್ದು ಒಂದು ಯೋಗಾಯೋಗ, ಸೇಡಂ ಪಟ್ಟಣದಲ್ಲಿ 'ತಳ್ಳಳ್ಳಿ ಪುಸ್ತಕ ಅಂಗಡಿ'

ಇದ್ದು ಇವರೀರ್ವರನ್ನು ಭೇಟಿ ಮಾಡುವ ಅವಕಾಶ ಕಲ್ಪಿಸಿತು, ದಿವಂಗತರ ಬಗ್ಗೆ, ಅವರ ಬದುಕಿನ ಕುರಿತಾಗಿ ಒಂದು ಕೃತಿ ರಚಿಸುವುದಾಗಿ ಅವರ ಪುತ್ರ ಸಿದ್ದಪ್ಪ ತಳ್ಳಳ್ಳಿ ಹತ್ತಿರ ಆಲ್ದಾಳರು ಕೇಳಿದಾಗ ಇಲ್ಲವೆನ್ನಲಾಗದೇ ಸಮ್ಮತಿಸಿದರು. ಅವರ ಶ್ರಮದ ಫಲವೇ ಈ 'ಶರಣ ಚಿಂತನ'.

ಆಲ್ದಾಳರ ವಿಶೇಷತೆ ಎಂದರೆ, ಇವರು ಯಾವುದೇ ವಿಶ್ವವಿದ್ಯಾಲಯದಿಂದ ಪದವಿ ಪಡೆಯದೇ ಇದ್ದರೂ ಇವರು ಬರೆದ ಕೃತಿಗಳು ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕವಾಗಿವೆ. ತಮ್ಮ ಸುತ್ತ ಮುತ್ತಲಿನ ಪರಿಸರ ಸ್ವ ಅಧ್ಯಾಯ ಅನುಭವಿಗಳ ಒಡನಾಟದ ಹಿನ್ನಲೆಯಲ್ಲಿ ತಮ್ಮ ಸಾಹಿತ್ಯ ಸೇವೆಯನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿ ಜನಮನ ಗೆದ್ದಿದ್ದಾರೆ.

**ಕಣ್ಣಿರುವ ತನಕ ಕಾಶಿ ಕಾಣಬೇಕಂತೆ**
**ಕಾಲುಗಳಿರುವ ತನಕ ಯಾತ್ರೆ ಮಾಡಬೇಕಂತೆ**

ಕಲಕೇರಿ ಶ್ರೀ ಗುರು ಸ್ವಾಮಿಯವರ ಕವಿ ವಾಣಿಯಂತೆ ಸಿದ್ರಾಮಪ್ಪ ತಳ್ಳಳ್ಳಿಯವರು ತಮ್ಮ ವೃದ್ಧಾವಸ್ಥೆಯನ್ನು ಹಿಂದಕ್ಕಟ್ಟಿ ತಮ್ಮ ಪರಿವಾರದೊಂದಿಗೆ ಇಡೀ ಭಾರತ ಸಂಚರಿಸಿದ್ದು ಸೋಜಿಗ! ಶಿವ ಸೃಷ್ಠಿಯ ನಿಸರ್ಗರಮಣೀಯತೆ ಮನದಣಿಯೇ ನೋಡಿದರು, ಹಿಮವತ್ ಕೇದಾರದ ಲಿಂಗ ದರ್ಶನ ಮಾಡಿ ಆನಂದಿಸಿದರು. ಸಿದ್ಧ ಸಾಧ್ಯರಿಗೆ ತಪೋವನ ಎನಿಸಿದ ಹಿಮಾಲಯದ ಎತ್ತರ ಬರಿಗಣ್ಣಿನಿಂದ ಕಂಡರು. ದಕ್ಷಿಣದ ಮಥುರಾ ಮೀನಾಕ್ಷಿ, ರಾಮೇಶ್ವರ, ಕುಂಭಕೋಣ, ಕನ್ಯಾಕುಮಾರಿ ಪವಿತ್ರ ಸ್ಥಳಗಳ ದರ್ಶನ ಭಾಗ್ಯಪಡೆದರು. ಸೃಷ್ಟಿ ಸೊಬಗಿತ್ತ ಧರೆಗೆ ಧನ್ಯತೆ ಅರ್ಪಿಸಿದರು ಕೃತಿಯನ್ನು ಓದುವವರಿಗೊಂದು ಪಾಠ ಕಲಿಸುತ್ತದೆ.

ಆಲ್ದಾಳ ಅವರ ವಿಚಾರ ಸರಣಿ, ಅವರ ಭಾಷಾಶೈಲಿ, ಜೀವನ ಚರಿತ್ರೆ ಓದಿಸಿಕೊಂಡು ಹೋಗುವರೀತಿ, ಓದುಗರು ಮುಗ್ಧರಾಗುವ ರೀತಿ, ಎಲ್ಲಕ್ಕೂ ಮೇಲಾಗಿ ದೈವಿ ಸಂಕಲ್ಪ, ದೈವಿ ಶಕ್ತಿಯ ಬಗ್ಗೆ ಅವರಿಗಿರುವ ಭಕ್ತಿ ಮರೆಯಲಾಗದು. ಪ್ರತಿಭೆ ಎನ್ನುವುದು ಹೀಗೆಯೇ ಬರುತ್ತದೆ ಎಂದು ಹೇಳಲಾಗದು.

**ಉದಯಾಸ್ತ ಮಾನ ಎಂಬೆರಡು ಕೊಳಗದಲಿ**
**ಆಯುಷ್ಯವೆಂಬ ರಾಶಿ ಅಳೆದು ತೀರದ ಮುನ್ನ**
**ಶಿವನ ನೆನೆಯಿರೆ, ಶಿವನ ನೆನೆಯಿರೆ,**
**ಈ ಜನ್ಮ ಬಳಿಕಿಲ್ಲ – ಅಕ್ಕಮಹಾದೇವಿ.**

# ಬಡದಾಳದ ಭಗವಂತ

**ಎತ್ತಣ ಮಾಮರ ಎತ್ತಣ ಕೋಗಿಲೆ**
**ಎತ್ತಣಿಂದೆತ್ತ ಸಂಬಂಧವಯ್ಯ?**
**ಎತ್ತಣ ಇಸ್ಲಾಂ ಎತ್ತಣ ವೀರಶೈವ**
**ಎತ್ತಣಿಂದೆತ್ತ ಲಾಲಮಹ್ಮದ ಬಂದೇನವಾಜ ಖಲೀಫ್‌ರ ಸಂಬಂಧವಯ್ಯ**

– ಶ್ರೀ ರೇವಣಸಿದ್ಧಯ್ಯಸ್ವಾಮಿ ರುದ್ರಸ್ವಾಮಿ ಮಠ

ಮಾನವಧರ್ಮಕ್ಕೆ ಆಧಾರವಾದ ಎಲ್ಲ ಮೌಲ್ಯಗಳು ಕುಸಿದುಬಿದ್ದಂತೆ ತೋರುತ್ತಿರುವ ದಿನ ಮಾನಗಳಿವು. ಮನುಷ್ಯನ ಆಸೆಗಳು ಮಿತಿ ಮೀರಿ ಇಡೀ ಜೀವ ಸಂಕುಲವನ್ನೇ ಈ ಆತಂಕದ ಲಕ್ಷಣಗಳಲ್ಲಿ ಎಲ್ಲಾ ಧರ್ಮಗಳೂ ಒಂದೇ ಎಂಬ ತಾತ್ವಿಕ ನೆಲೆಯಲ್ಲಿ ನಾವು ನಮ್ಮ ಕವಿಗಳ ಸಂತರ, ಜ್ಞಾನಿಗಳ ಅರಿವಿನ ಬೆಳಕನ್ನು ನಮ್ಮೊಳಗೆ ತುಂಬಿ ಕೊಳ್ಳಬೇಕಾಗಿದೆ. ಮಾನವ ಧರ್ಮದ ಮೌಲ್ಯಗಳನ್ನು ಕಾಲದ ಎಲ್ಲೆಗಳನ್ನು ಮೀರಿ ಇಂದಿನ ಬದುಕಿಗೂ ತಲುಪಿಸುವ ಮಹತ್ವದ ಪ್ರಯತ್ನವಾಗಿದೆ. [೧೮೪]

'ಬಡದಾಳ ಭಗವಂತ' ಗ್ರಂಥವು ಕಲಬುರ್ಗಿಜಿಲ್ಲಾ ಆಫಜಲಪೂರ ತಾಲೂಕಿನ ಬಡದಾಳ ಗ್ರಾಮದ ತೇರಿನ ಮಠದ ಪೀಠಾಧಿಕಾರಿಗಳಾಗಿದ್ದ ಲಿಂಗೈಕ್ಯ ಶ್ರೀ.ಷ.ಬ್ರ. ಚನ್ನಮಲ್ಲೇಶ್ವರ ಶಿವಾಚಾರ್ಯರ ಜೀವನ ಚರಿತ್ರೆಯಾಗಿದೆ. ಅವರು ಅವಧೂತ ಮಾರ್ಗದ ತಪಸ್ವಿಗಳಾಗಿದ್ದರು. ಈ ಪ್ರದೇಶದ ನಡೆದಾಡುವ ದೇವರೆಂದು ಪರಿಗಣಿಸಿದ್ದರು. "ಹಲಗೆ ಬಳಪವ ಪಿಡಿಯ ದೊಂದಗ್ಗಳಿಕೆ" ಶ್ರೀ ಚೆನ್ನಮಲ್ಲೇಶ್ವರರದು. ಇವರು ಶಾಲೆ–ಮಠ–ಪೀಠಕ್ಕೆ ಹೋಗಿ ಓದಿದವರಲ್ಲ, ತಪಸ್ಸು ಮಾಡಿದವರು ಅಲ್ಲ. ಶ್ರೀ ಗಳವರು ಹುಟ್ಟು ತಪಸ್ವಿಗಳು, ಯಾರಿಗೂ ತಿಳಿಯದ ಲೆಕ್ಕ ಪತ್ರ ಇವರ ನಾಲಿಗೆಯ ಮೇಲೆ ಲಾಸ್ಯಮಾಡುತ್ತಿತ್ತು, ಉಂಡೂಟ, ಕಂಡಕನಸು ಹೇಳುವ ಲಿಂ.ಚನ್ನಮಲ್ಲೇಶ್ವರ ಶಿವಾಚಾರ್ಯರು ಪಾದವಿಟ್ಟ ಮನೆ ಪಾವನವಾಗಿದೆ. ನುಡಿದ ವಾಕ್ಯಗಳು ಸತ್ಯವಾಗಿವೆ. ತಮ್ಮ ಹನ್ನೆರಡನೇ ವಯಸ್ಸಿಗೆ ಬಡದಾಳದ ತೇರಿನ ಮಠಕ್ಕೆ ಪೀಠಾಧಿಕಾರಿಗಳಾಗಿ ಬಂದಿದ್ದವರು ತಮ್ಮ ಅಸಾಮಾನ್ಯ ವ್ಯಕ್ತಿತ್ವದಿಂದ 'ಬಡದಾಳ ಭಗವಂತ' ಎನ್ನಿಸಿದರು. [೧೮೫]

'ಬಡದಾಳದ ಭಗವಂತ' ಮೂರು ಭಾಗಗಳಲ್ಲಿ ವಿಂಗಡಿಸಲಾಗಿದೆ. ಮೂರು ಭಾಗಗಳು ಓದುಗರ ಮನವನ್ನು ಭಕ್ತಿರಸದಲ್ಲಿ ನೆನೆಯುವಂತೆ ಮಾಡುತ್ತವೆ. ಪ್ರಥಮ ಭಾಗದಲ್ಲಿ ತೇರಿನ ಮಠದ ದಿವ್ಯಪರಂಪರೆಯನ್ನು ತೋರಿಸಲಾಗಿದೆ. ಅಲ್ಲದೆ ಅನೇಕ ರೀತಿಯಲ್ಲಿ ಭಕ್ತರ ಪರಿಚಯವು ನಮಗೆ ತಿಳಿದುಬರುತ್ತದೆ. "ಮಣ್ಣಿನ ಪರಿಪಾಕವನ್ನುಂಡು ಬೆಳೆದ ಬಳ್ಳಿಯ ಹೂವು, ತನ್ನ ಪರಿಮಳವನ್ನು ಗಾಳಿ ಮುಖಾಂತರ ಭೃಂಗಗಳಿಗೆ ಕರೆಕರೆದು ಔತಣ ವಿತ್ತಂತೆ" ತೇರಿನ ಮಠವು ನಾಡಿನ ಅಸಂಖ್ಯಾತ ಭಕ್ತರನ್ನು ಕರೆಕರೆದು ಧರ್ಮಬೋಧೆ ಮಾಡುವಲ್ಲಿ ಸದಾ ನಿರತವಾಗಿರುತ್ತದೆ. ಹಂಬಲಿಸಿ ಬಂದವರಿಗಂಬಲಿಯನ್ನು ಕುಡಿಸಿ ಇಷ್ಟಾರ್ಥ ಪೂರೈಸಿಕೊಡುವಲ್ಲಿ ತೇರಿನ ಮಠದ

ಮೂಲ ಕರ್ತೃ ಗದ್ದುಗೆಯ ಚಿನ್ಮಯ ಜ್ಯೋತಿ ಶ್ರೀ ಚನ್ನ ಮಲ್ಲೇಶ್ವರ ಶಿವಯೋಗಿ ಈ ನಾಡಿಗೆ ತಮ್ಮ ಪಾದವನಿಟ್ಟು ಪಾವನ ಗೊಳಿಸಿದರು.

"ಬಡದಾಳ ಭಗವಂತ" ಎರಡನೇ ಭಾಗದಲ್ಲಿ ಲಿಂ.ಷ.ಬ್ರ. ಚನ್ನಮಲ್ಲೇಶ್ವರ ಶಿವಾಚಾರ್ಯರ ಪವಾಡಗಳನ್ನು ವಿವರಿಸಲಾಗಿದೆ. ಅವರ ಅಪಾರ ಮಹಿಮೆಗಳನ್ನು ನಾವು ತಿಳಿದುಕೊಳ್ಳುತ್ತೇವೆ. ಹಿಂದಿನ ಕಾಲದಲ್ಲಿ ಪವಾಡಗಳನ್ನು ನಂಬುತ್ತಿದ್ದರೂ ಎಂದೇ ಅವುಗಳು ಈಗಲೂ ಮುಂದುವರಿದಿವೆ. ಹಿರಿಯ ಸಾಹಿತಿಗಳಾದ ಕುವೆಂಪು ಮತ್ತು ಕೆ.ಎಸ್.ನರಸಿಂಹಯ್ಯ ನಂತವರು ಪವಾಡಗಳನ್ನು ನಂಬುವುದಿಲ್ಲ. ಆದರೂ ಮಠಗಳ ಮೇಲೆ, ಮಠಗಳಲ್ಲಿರುವ ಪೀಠಾಧಿಪತಿಗಳವರ ಮೇಲೆ ವಿಶ್ವಾಸ ವಿಟ್ಟಿದ್ದರಿಂದಲೇ ಪವಾಡಗಳು ವಿಜೃಂಭಿಸುತ್ತವೆ.

ಬಡದಾಳ ಗ್ರಾಮದ ವೈಶಿಷ್ಟ ಕೇಳಿ, ಪ್ರತಿ ಗ್ರಾಮದಲ್ಲಿ ಹನುಮಾನ ಮಂದಿರವಿರುತ್ತದೆ. ಆದರೆ ಈ ಗ್ರಾಮದಲ್ಲಿ 'ನಾಲ್ಕು ಮುಖದ' ಹನುಮಾನ ದೇವರ ಮೂರ್ತಿ ಕಂಗೋಳಿಸುತ್ತಿದೆ.

ಬಡದಾಳದ ಉತ್ತರಕ್ಕೆ ಮುಸ್ಲಿಂ ಸಂತ ಹಜರತ್ ಮಂದಿ ಸಾಹೇಬರ ದರ್ಗಾ ಶರೀಫ್ ಇದೆ. ಮಳೆ ಬಾರದೇ ಇದ್ದಾಗ ಊರಿನ ಸರ್ವ ಜನಾಂಗದವರು 'ಮಾಲದಿ' ಎಡೆ ಮಾಡಿಕೊಂಡು ಬಂದು ಒಟ್ಟಿಗೆ ಸೇರಿ 'ಹೆಡಿಗೆ ಜಾತ್ರೆ' ಆಚರಿಸುತ್ತಾರೆ, ಅಂದು ನಾಲ್ಕು ಹನಿಯಾದರೂ ಆಕಾಶದಿಂದ ಭೂಮಿಗೆ ಮಳೆಬರುತ್ತದೆ. ಜನರನ್ನು ಸಂತಷ ಪಡಿಸುತ್ತದಂತೆ. ಇದೊಂದು ಭಾವೈಕ್ಯದ ಸಂಗಮ.

ಇನ್ನೊಂದು ಹೆಸರು ಚಾಲ್ತಿಯಲ್ಲಿದೆ. ಶಿವ ಶರಣೆಯೊಬ್ಬಳು, ಶರಣ ಸಮೂಹಕ್ಕೆ ತೃಪ್ತಿ ಭೋಜನ ಬಡಿಸುತ್ತಿದ್ದಳಂತೆ, 'ಬಡಿಸ್ಯಾಳ' ಎಂಬುದೇ ಮುಂದೆ 'ಬಡಿದಾಳ' ಎಂದು ಗ್ರಾಮದ ಹೆಸರು ರೂಢಿಗೆ ಬಂದಿತೆಂದು ಹೇಳುತ್ತಾರೆ.

ಹಾಳು ಹಂಪೆಯಾಗಿದ್ದ ಬಡದಾಳ ತೇರಿನ ಮಠವೀಗ ಸಕಲ ಸಂಭ್ರಮದಲ್ಲಿ ಲೋಲಾಡುತ್ತಿದೆ. "ಬಡದಾಳ ಶ್ರೀಶೈಲ ಮಾಡತಾನೋ ಮಕ್ಕಳ್ಯಾ" ಎಂದು ನುಡಿದ ಲಿಂ.ಚನ್ನಮಲ್ಲೇಶ್ವರ ಶಿವಾಚಾರ್ಯರ ನುಡಿ ನಿಜವಾಗಿದೆ. 'ಬಡದಾಳ ಭಗವಂತ' ಕೃತಿ ಹೀಗೆ ಬರೆಯುತ್ತಾ ಹೋದಂತೆ ಸಪ್ತ ಸಮುದ್ರಗಳ ಮಸಿಯೇ ತೀರುತ್ತದೆ. ಮಠದ ಚರಿತ್ರೆ ಮುಗಿಯದೇ ಉಳಿಯುತ್ತದೆ. ಅದಕ್ಕೆ ಆದಿ ಇಲ್ಲ, ಅಂತ್ಯವಿಲ್ಲ. ಅದೊಂದು ಅಪರಂಪಾರ ಎಂದು ಹೇಳುವ ಆಲ್ದಾಳ ಅವರ ಮಾತುಗಳು ಉತ್ಪ್ರೇಕ್ಷೆ ಎಂದುಕೊಂಡರು. ಮಹಾತ್ಮರ ಚರಿತ್ರೆಗಳು, ಅವರು ನಡೆದು ಕೊಂಡು ಬಂದದಾರಿಗಳು, ಅವರು ತೋರಿದ ಪವಾಡ, ಮಾರ್ಗ ಮುಗಿಯಿತು ಎಂದು ಹೇಳುವುದು ಸಾಧ್ಯವಿಲ್ಲ, ಅದು ನಿರಂತರ ಹರಿಯುವ ನೀರು.

# ಹೊನ್ನಳ್ಳಿಯ ಹೊಂಗಿರಣ

(ಜೀವನ ಚರಿತ್ರೆ)

**ಬೇವಿನ ಬೀಜವ ಬಿತ್ತಿ ಬೆಲ್ಲದ ಕಟ್ಟೆಯ ಕಟ್ಟಿ,**
**ಆಕಳ ಹಾಲ ನೆರೆದು ಜೇನುತುಪ್ಪವ ಹೊಯ್ದರೆ,**
**ಸಿಹಿಯಾಗ ಬಲ್ಲುದೆ ಕಹಿಯವುದಲ್ಲದೆ?**
**ಶಿವಭಕ್ತರಲ್ಲದವರ ಕೂಡೆ ನುಡಿಯಲಾಗದು**
**ಕೂಡಲಸಂಗಮದೇವ.**

" 'ಬಿತ್ತಿದಂತೆ ಬೆಳೆ' ಎಂಬಮಾತು ಅಕ್ಷರಶಃ ಸತ್ಯ ಕಳಪೆ ಬೀಜವನ್ನು ಬಿತ್ತಿದರೆ ಬರುವುದು ಕಳಪೆ ಬೆಳೆಯೇ, ಆದ್ದರಿಂದ ಬಿತ್ತನೆ ಬೀಜ ಸತ್ವಯುತವಾಗಿರಬೇಕು. ಅಂದಾಗ ನಿರೀಕ್ಷಿತ ಗುಣಮಟ್ಟ ಮತ್ತು ಪ್ರಮಾಣದ ಬೆಳೆ ಕೈ ತುಂಬುತ್ತದೆ. ಮಾನವ ಸಮಾಜದಲ್ಲಿ ಮತ್ತೊಂದು ಬಿತ್ತನೆಯ ಕಾರ್ಯ ನಿರಂತರವಾಗಿ ನಡೆಯುತ್ತಲೇ ಇರುತ್ತದೆ. ಅದೇ ಆಧ್ಯಾತ್ಮಿಕ ಬಿತ್ತನೆ. ಅತಿ ಅವಸರ, ಆವಾಂತರ, ಆತಂಕ, ಖಿನ್ನತೆ, ಬೇಸರ ಮತ್ತು ಏಕತಾನತೆಯಂಥ ಅನೇಕ ವ್ಯಾಧಿಗಳು ಇಂದು ಮಾನವನ ಬದುಕಿನಲ್ಲಿ ಹಾಸುಹೊಕ್ಕಾಗಿ ಬಿಟ್ಟಿವೆ. ಆಂತರ್ಯದಲ್ಲಿ ಒಂದಿಲ್ಲೊಂದು ತುಮುಲ ತುಂಬಿಕೊಂಡಿರುವಾಗ ಬದುಕು ಅಸಹನೀಯವಾಗುತ್ತದೆ. ಗೊಂದಲದ ಗೂಡಾಗುವುದು ಸಹಜವೇ. ಇಂಥ ಅಸಹನೀಯತೆ, ಗೊಂದಲಗಳನ್ನು ನಿವಾರಣೆ ಯಾಗ ಬೇಕೆಂದರೆ ಆಧ್ಯಾತ್ಮಿಕತೆ ಬೇಕು. ಆಧ್ಯಾತ್ಮಿಕ ಬಿತ್ತನೆ ಎಂದರೆ ಅಜ್ಞಾನದ ಬಿತ್ತನೆ ಅಲ್ಲ; ಅಜ್ಞಾನದ ಮೋಡವನ್ನು ಸರಿಸಿ, ಸುಜ್ಞಾನದ ಸೂರ್ಯನ ದರ್ಶನವನ್ನು ಮಾಡಿಸುವುದೇ ನಿಜವಾದ ಅಧ್ಯಾತ್ಮಿಕ ಬಿತ್ತನೆ ಒಬ್ಬ ಪ್ರಬುದ್ಧನ ವಿಚಾರಧಾರೆಯಿಂದ ಸಾವಿರಾರು ಜನರು ಪ್ರಜ್ಞೆಯನ್ನು ಪಡೆಯುವಂತಾಗಬೇಕು".[೧೮೬] ಹೊನ್ನಳ್ಳಿ ಗ್ರಾಮದ ಲಿಂಗೈಕ್ಯ ಶ್ರೀ ವೀರಘಂಟಯ್ಯ ತಾತನವರ ಜೀವನ ಚರಿತ್ರೆ ಬರೆದು ಕನ್ನಡದ ಕಂಪಿನೊಂದಿಗೆ ತಂದಿರುವುದು ಈಗಿನ ದಿನಮಾನಗಳಲ್ಲಿ ಯಥೋಚಿತವಾಗಿದೆ.

ಕರ್ನಾಟಕದಾದ್ಯಂತ ಮಠ ಮಾನ್ಯಗಳು ತುಂಬಿ ತುಳಕುತ್ತಿವೆ. ಪ್ರತಿ ಗ್ರಾಮಕ್ಕೊಂದು ಮಠ ಹಿರೇಮಠ, ವಿರಕ್ತಮಠ, ಸವದತ್ತಿಮಠ, ರುದ್ರ ಸ್ವಾಮಿಮಠ ಎಂಬ ಹೆಸರಿನಲ್ಲಿ ಇಲ್ಲಿಯವರೆಗೆ ಜೀವಂತವಾಗಿ ತಮ್ಮ ಕಾರ್ಯಸಾಧನೆ ಮಾಡುತ್ತಿವೆ. ಅದರಂತೆ ವಿಜಾಪೂರ ಜಲ್ಲೆಯ ಸಿಂದಗಿ ತಾಲೂಕಿನ ಹೊನ್ನಳ್ಳಿ ಎಂಬ ಚಿಕ್ಕ ಗ್ರಾಮ ಇಲ್ಲಿ ಹನ್ನೆರಡನೇಯ ಶತಮಾನದ ಮಡಿವಾಳ ಮಾಚಿ ದೇವನ ಹೆಸರಿನಿಂದ ಮಠವಿದ್ದು ಇದಕ್ಕೆ 'ಗದ್ದುಗೆ ಮಠ' ಎಂದು ಹೆಸರು. ಇಲ್ಲಿರುವ ಗದ್ದುಗೆಗೆ ಪೂಜೆಮಾಡುವ ಅಧಿಕಾರಿಗಳಿಗೆ ವಾಕ್ಯಸಿದ್ಧಿ ಪ್ರಾಪ್ತಿ, ಇಲ್ಲಿಯವರೆಗೂ ನಡೆದುಕೊಂಡು ಬಂದ ಶಕ್ತಿಯಾಗಿದೆ. ಅದರಂತೆ ಹಿಂದಿನ ಮುತ್ಯಾ ವೀರಘಂಟಯ್ಯ ಖಾಸಯ್ಯ ಎಂಬ ಸ್ವಾಮಿಗಳು ಪೂಜಾಫಲದಿಂದ ವಾಕ್ಯಸಿದ್ಧಿ ಪಡೆದವರು ಬಂದ ಭಕ್ತರ ಇಷ್ಟಾರ್ಥಗಳನ್ನು ಈಡೇರಿಸಿದ್ದಾರೆ. ಈ ಮಠದ ಉತ್ತರಾಧಿಕಾರಿಗಳು ಪ್ರಪಂಚಕರಿದ್ದು ಪಾರಮಾರ್ಥದೆಡೆಗೆ ಭಕ್ತರನ್ನು ಒಯ್ಯುವ ಸಾಹಸಿಗಳಾಗಿದ್ದಾರೆ. ಶ್ರೀಮಠಕ್ಕೆ ಜಾತಿ, ಮತ, ಪಂಥಗಳೆನ್ನದೆ, 'ಇವನಾರವ, ಇವನಾರವ,

ಇವನಾರವ ಎನ್ನದೆ; ಇವ ನಮ್ಮವ, ಇವನಮ್ಮವ ಎಂದೆನಿಸಯ್ಯ' ಎನ್ನುವಂತೆ, ಈಗಿನ ದಿನ ಮಾನಗಳಲ್ಲಿ ಮಾರ್ಗದರ್ಶನವಾಗಿದೆ. ಈಗಿನ ಸ್ವಾಮಿಗಳು ಸರಳ ಸ್ವಭಾವದ ಸಂಪನ್ನರು, ಸರಳ ಹೃದಯಿಗಳು, ಮೃದು ಮಾತಿನವರು.

ಹೊನ್ನಳ್ಳಿಯ ಮಡಿಮಾಳೇಶ್ವರ ಮಠಕ್ಕೆ ಯಾವ ಜಾತಿಮತಗಳ ಕಲಂಕವಿಲ್ಲ ಅಜಾತವಾಗಿ, ನಿಷ್ಕಳಂಕವಾಗಿ, ನಿರಭ್ರನೀಲಾವಾಕಾಶವಾಗಿ ಬೆಳಗುತ್ತಿತ್ತು ಶ್ರೀ ಮಠಕ್ಕೆ ಮುಸ್ಲಿಂ ಭಕ್ತರೇ ಹೆಚ್ಚು, ಅವರದೇ ಕಾರುಭಾರು. ಮುಸ್ಲಿಂರೇ ಭಕ್ತರೆಂದ ಬಳಿಕ, ಇನ್ನುಳಿದ ಪಂಗಡದ ಭಕ್ತರು ಅಧಿಕ. ಆ ಮಠ ಭಾವೈಕ್ಯದ ಬೆಳಕು ಆಗಿ ಜಂಗಮ ಚೇತೋಹಾರಿಯಾಗಿ ಪರಿಣಮಿಸಿತ್ತು.

**ಜಂಗಮಕ್ಕೆ ಮಾತಾಪಿತರಿಲ್ಲ**
**ಜಂಗಮಕ್ಕೆ ಜಾತಿ,ಬಂಧುಗಳಿಲ್ಲ**
**ಜಂಗಮಕ್ಕೆ ನಾಮರೂಪಗಳಿಲ್ಲ**
**ಜಂಗಮಕ್ಕೆ ಸಂಗ ಸೀಮೆಗಳಿಲ್ಲ**
**ಜಂಗಮಕ್ಕೆ ಕುಲ, ಗೋತ್ರಗಳಿಲ್ಲ**
**ಜಂಗಮಕ್ಕೆ ಮಲ ಮಾಯೆಗಳಿಲ್ಲ ನೋಡಾ ಅಖಂಡೇಶ್ವರ.**

# ತವ ನಿಧಿ

(ಲಿಂ, ಶ್ರೀ.ಷ.ಬ್ರ ಕಾರ್ತಿಕೇಶ್ವರ ಶಿವಾಚಾರ್ಯರ ಜೀವನ ಚರಿತ್ರೆ)

"ಶಾಖಾಪುರ ಶ್ರೀ ವಿಶ್ವಾರಾಧ್ಯ ತಪೋವನ ಮಠದ ಆಸ್ಥಾನದ ಕವಿಗಳಾದ ಶ್ರೀ ಎಲ್.ಬಿ.ಕೆ. ಆಲ್ದಾಳರು ಮಳಖೇಡದ ಮೂಲಾಧಾರ ಕಟ್ಟಿಮನಿ ಸಂಸ್ಥಾನದ ಮಠದೊಡೆಯರಾದ ಲಿಂ.ಶ್ರೀ.ಷ.ಬ್ರ. ಕಾರ್ತಿಕೇಶ್ವರ ಶಿವಾಚಾರ್ಯರ ಕುರಿತು ಆತ್ಮ ಚರಿತ್ರೆಯನ್ನು ಬರೆದ 'ತವನಿಧಿ' ಎಂಬ ಗ್ರಂಥವು ಹೊರಬರುತ್ತಿರುವುದು ಸಂತಸವಾಗಿದೆ ಎಂದು ಶಾಖಾಪೂರ ಶ್ರೀ ವಿಶ್ವಾರಾಧ್ಯ ತಪೋವನ ಮಠದ ಶ್ರೀ.ಷ.ಬ್ರ. ಸಿದ್ಧರಾಮ ಶಿವಾಚಾರ್ಯರು ತಮ್ಮ ಹಾರೈಕೆಯಲ್ಲಿ ಬರೆದಿದ್ದಾರೆ.

"ತವನಿಧಿ" ಒಂದು ಜೀವನ ಚರಿತ್ರೆಯೊಂದಿಗೆ ಮೂವರು ಸತ್ಪುರುಷರ ದರ್ಶನ ನೀಡುವ ಅಕ್ಷಯ ನಿಧಿ. ಕಾರ್ತಿಕೇಶ್ವರ ಶಿವಾಚಾರ್ಯರ ಜೀವನದೊಂದಿಗೆ ಅವರಿಗೆ ಗುರುವಾಗಿ ದಾರಿತೋರಿರುವ ಹಾರಕೂಡ ಪೂಜ್ಯ ಶ್ರೀ ಚೆನ್ನಬಸವ ಶಿವಯೋಗಿಗಳ ಮಹತ್ವ ಒಂದು ಕಡೆಯಾದರೆ, ಪೂಜ್ಯರ ಸಹೋದರ ನೀಲಕಂಠಯ್ಯ ಅವರ ಬದುಕಿನ ಪರಿಚಯ ಮತ್ತೊಂದೆಡೆ. ಗ್ರಂಥದ ಅರ್ಧದಷ್ಟು ಭಾಗ ಶಿವಾಚಾರ್ಯರ ಹುಟ್ಟು, ಬಾಲ್ಯದೊಂದಿಗೆ ಚನ್ನಬಸವ ಶಿವಯೋಗಿಗಳ ದರ್ಶನವಾದರೆ, ಉಳಿದರ್ದ ಭಾಗದಲ್ಲಿ ಶಿವಾಚಾರ್ಯರ ಪಟ್ಟಾಧಿಕಾರ, ಪವಾಡಗಳ ಬಗ್ಗೆ ದರ್ಶನ ನೀಡುತ್ತದೆ".

ಇಲ್ಲಿ ಅಲ್ದಾಳರು ತಮ್ಮ ಅನುಭವಗಳನ್ನು, ಮೂಲ ಆಶಯಕ್ಕೆ ಧಕ್ಕೆ ಬರದಂತೆ, ಅಷ್ಟೇ ಆಕರ್ಷಕ ಉದಾಹರಣೆಗಳು ಪದಗಳ ಸುಂದರ ಜೋಡಣೆ ಗೊಳಿಸುವಲ್ಲಿ ಯಶಶ್ವಿಯಾಗಿದ್ದಾರೆ. ಇದು ಓದುಗರನ್ನು ಸಂವಹನಗೊಳಿಸುವುದರಲ್ಲಿ ಸಂದೇಹವೇ ಇಲ್ಲ. ಶಬ್ಧಗಳ ಬಂಢಾರ ಚೆಲುವಾಗಿ ನಿಂತಿವೆ.

ಹಿರಿಯರು ತಮ್ಮ ಅನುಭವದಿಂದ ಹೇಳುವಂತೆ "ಕಣ್ಣುಗಳು ಇದ್ದಾಗ ಕಾಶಿಗೆ ಹೋಗಬೇಕಂತೆ, ಕಾಲುಗಳಿದ್ದಾಗ ಕೇದಾರಕ್ಕೆ ಹೋಗಬೇಕಂತೆ", "ಮನ ವಿಮಲವಾಗಿದ್ದಾಗ ಶ್ರೀ ಶೈಲಕ್ಕೆ ಹೋಗ ಬೇಕಂತೆ", "ಸಂಭ್ರಮದಲ್ಲಿದ್ದಾಗ ರಂಭಾಪುರಿಗೆ ಹೋಗಬೇಕಂತೆ", ಶ್ರೀಗಳು ಶಿವಾಚಾರ್ಯರಾಗಿ ಮಠದಲ್ಲಿ ಕುಳಿತುಕೊಳ್ಳದೆ ಧಾರ್ಮಿಕ ಸ್ಥಳಗಳ ಯಾತ್ರೆ ಕೈಕೊಂಡು ಭಕ್ತರಲ್ಲಿ ಧಾರ್ಮಿಕ ಭಾವನೆಗಳನ್ನು ಬಿತ್ತಿದರು.

ಶ್ರೀ ಕಾರ್ತಿಕೇಶ್ವರ ಶಿವಾಚಾರ್ಯರು ಶತಮಾನಗಳ ಸೋಪಾನದ ಮೇಲೆ ಪಾದವಿರಿಸಿದ್ದರು, ನೃಪತುಂಗನ ಕಾವ್ಯಭೂಮಿಯ ಮೇಲೆ ಅಧ್ಯಾತ್ಮದ ಬೀಜ ಬಿತ್ತಿ ರಾಶಿ ಮಾಡಿದ ಕೀರ್ತಿ ಶತಾಯುಷಿಗಳಿಗೆ ಸಲ್ಲುತ್ತದೆ. ಅವರಾವ ಶಾಸ್ತ್ರ ಓದಿಕೊಂಡವರಲ್ಲ, ಅವರಾವ ತತ್ವ ಅಭ್ಯಾಸ ಮಾಡಿದವರಲ್ಲ, ಅವರಾವ ಯೋಗ ಮಾಡಿದವರಲ್ಲ, ಆದರೆ ಅವರ ಹೃದಯ ಪಟಲದಲ್ಲಿ ಹಣಿಕಿ ಹಾಕಿದಾಗ ಆ ಎಲ್ಲಾ ಶಾಸ್ತ್ರ, ತತ್ವ, ಯೋಗಗಳು ಸಂಪುಟವಾಗಿತ್ತು. ಅವರ ಹೃದಯ, ಯುಗ ಯುಗದ ಯೋಗ ಮೈ ಗೂಡಿತ್ತು. ಮೃದು ವಚನಂಗಳ ಮಣಿಮುಕುಟವಾಗಿದ್ದ ಶ್ರೀಗಳು ತಮ್ಮ

ಶಿಷ್ಯರಿಗಾಗಲಿ, ಭಕ್ತರಿಗಾಗಲಿ, ಕಾಡಿದವರಲ್ಲ, ಬೇಡಿದವರಲ್ಲ, ತೊಂದರೆ ಕೊಟ್ಟವರೇ ಅಲ್ಲ, ದಿನಾಂಕ ೦೨-೦೪-೨೦೦೨ ರಂದು ಸಾಯಂಕಾಲ ೬.೪೫ ಕ್ಕೆ ಶ್ರೀಗಳು ಶಿವಸಾನಿಧ್ಯವನ್ನು ಸೇರಿದರು. ಹಾರಕೂಡದ ಶ್ರೀ ಚನ್ನವೀರ ಶಿವಾಚಾರ್ಯರು ತಮಗೆ ಶತಮಾನದ ತಪಸ್ಸಿನ ಧಾರೆ ಎರೆದ ಗುರುವಿಗೆ ಪುಷ್ಪಾಂಜಲಿ ಅರ್ಪಿಸಿದರು.

**ತೇರು ಸಾಗಿತಮ್ಮ ನೋಡಿರೇ ।**
**ಈ ದೇಹವೆಂಬ ।**
**ತೇರು ಸಾಗಿತಮ್ಮ ನೋಡಿರೇ । ಎಂಬ**

ಭಜನೆಯೊಂದಿಗೆ ಸಾಗಿತು ಅಪ್ಪಗಳವರ ತೇರು ಅಂತಿಮವಾಗಿ.

ಒಂದು ಕಡೆಗೆ ಸಚ್ಚಾರಿತ್ರ್ಯ, ಮತ್ತೊಂದು ಕಡೆಗೆ ಸತ್‌ಪಥದ ಗ್ರಂಥ ಕರ್ತರು, ಹೀಗೆ ತವನಿಧಿ ಹೆಸರಿನ ಪೂಜ್ಯ ಲಿಂಗೈಕ್ಯ ಶ್ರೀ.ಷ.ಬ್ರ. ಕಾರ್ತಿಕೇಶ್ವರ ಶಿವಯೋಗಿಗಳ ಜೀವನ ಚರಿತ್ರೆ ಓದುವುದೇ ಭಕ್ತರಿಗೆ ಒಂದು ಭಾಗ್ಯ.

ಎಲ್.ಬಿ.ಕೆ.ಆಲ್ದಾಳ ಅವರ 'ತವನಿಧಿ' ಚಿನ್ನದ ನಿಧಿಯೇ ಆಗಿದೆ. ಅದರ ಹೊಳಪು ಎಲ್ಲರನ್ನು ಆಕರ್ಷಿಸುವಂತೆ, 'ತವನಿಧಿ' ಗ್ರಂಥ ಪಾರಾಯಣದಿಂದ ಮನುಷ್ಯ ಮಾನವನಾಗುವ, ಧರ್ಮಭೀರು ಆಗುವ ಹಾದಿಯಲ್ಲಿ ಹೆಜ್ಜೆ ಇರಿಸುತ್ತಾರೆ. ಆಲ್ದಾಳ ಅವರು ಭಕ್ತಿ ರಸಪೂರ್ಣ ಗ್ರಂಥಗಳನ್ನು ಬರೆಯುವುದರಲ್ಲೂ ಸಿದ್ಧ ಹಸ್ತರಾಗಿದ್ದಾರೆ. "ಜಗದ ಜಂಜಡವನ್ನು ಹರಿದು, ಜಂಗಮ ಜ್ಯೋತಿಯಾಗಿ ಬೆಳಗಿದ ಮಳಖೇಡದ ಲಿಂ.ಷ.ಬ್ರ. ಕಾರ್ತಿಕೇಶ್ವರ ಶಿವಾಚಾರ್ಯರ ಬದುಕಿನುದ್ದಕ್ಕೂ ತೆರೆದಿಟ್ಟ ಜೀವನ ಚರಿತ್ರೆಯನ್ನು ಬರೆದು ಅದಕ್ಕೆ ತವನಿಧಿ ಎಂದು ಸಾರ್ಥಕ ಹೆಸರಿರಿಸಿ ಕನ್ನಡಿಗರ ಕೈಗಿತ್ತ "ಸಗರ ನಾಡಿನ ಶರಣ ಕವಿ" ಎಂದು ಖ್ಯಾತಿಪಡೆದ ಆತ್ಮೀಯರು, ಅಭಿಮಾನಧನರು ಆದ ಎಲ್.ಬಿ.ಕೆ. ಆಲ್ದಾಳರ ಸೇವೆ ಅವಿಸ್ಮರಣೀಯ" [೧೮೭]

**ಗುರುಗೀತೆ ಹಾಡಿಸಿತು, ಈ ಪುಣ್ಯಭೂಮಿ**
**ಶರಣ ಚರಿತ್ರೆ ಬರೆಯಿಸಿತು ನೃಪತುಂಗ ಸೀಮೆ**
**ಅದು ನಿತ್ಯ ಪೌರ್ಣಿಮೆ ॥**

# ಶ್ರೀ ಸಿದ್ಧ ಬಸವೇಶ್ವರರ ಜೀವನ ಚರಿತ್ರೆ

ಕರ್ನಾಟಕದಲ್ಲಿ ಕಲಬುರಗಿ ಜಿಲ್ಲೆ ಧಾರ್ಮಿಕವಾಗಿ ಗಮನಾರ್ಹ ಸ್ಥಾನ ಪಡೆದಿದೆ. ಈ ಭಾಗದಲ್ಲಿ ಅನೇಕ ಶಿವಾಚಾರ್ಯರು, ಗುರು-ವಿರಕ್ತರು, ಸೂಫಿ, ಫಕೀರರು, ಸಂತರು, ಮಹಾಂತರು, ಧರ್ಮ ಸುಧಾಕರರು, ಶರಣರು, ಮಹಾಮಾನವತಾವಾದಿಗಳು, ಸಿದ್ಧಿ ಪುರುಷರು, ವಚನಕಾರರು, ದಾಸರು, ಪವಾಡಪುರುಷರು, ಶಿವಯೋಗಿಗಳು, ತ್ಯಾಗಿಗಳು, ತಪಸ್ವಿಗಳು, ಪುಣ್ಯಪುರುಷರು ಜನ್ಮತಳೆದಷ್ಟು ಮತ್ತಾವ ನಾಡಿನಲ್ಲಿ ಆಗಿಲ್ಲಾ ಎಂಬುದು ನಿಜಾಂಶವಾಗಿದೆ. ಕಲಬುರ್ಗಿ ಜಿಲ್ಲೆಯ ಜೇವರ್ಗಿ ತಾಲೂಕಿನ ಕೋಳ್ಕೂರು ಗ್ರಾಮ ಶ್ರೀ ಸಿದ್ಧ ಬಸವೇಶ್ವರರ ಪುಣ್ಯಕ್ಷೇತ್ರವಾಗಿದ್ದು ಪ್ರತಿವರ್ಷ ಇಲ್ಲಿ ನಡೆಯುವ ವೈಭವದ ರಥಯಾತ್ರೆಗೆ ಸಹಸ್ರಾರು ಭಕ್ತರು ಶ್ರೀ ಸಿದ್ಧಬಸವೇಶ್ವರರ ದರ್ಶನ ಪಡೆದು ಪುನೀತರಾಗುತ್ತಾರೆ.

ಕೋಳ್ಕೂರು ಗ್ರಾಮ ಪುರಾಣಕಾಲದಲ್ಲಿ ಪ್ರಸಿದ್ಧಿಪಡೆದಿದ್ದು, ಕೋಮಲಿಪುರವೆಂದು ಪ್ರಖ್ಯಾತಿ. ಮುತ್ತು-ರತ್ನಗಳ ವ್ಯಾಪಾರದ ಕೇಂದ್ರವಾಗಿತ್ತು ಅಲ್ಲಿ ಕೊಡುಕೊಳ್ಳುವ ವ್ಯವಹಾರವು ಇತ್ತು, ಮುಂದೆ ಅದುವೇ ಕೊಡುಕೊಳ್ಳುವ ಹೆಸರನ್ನು ಪರಿವರ್ತಿಸಿ ಕೋಳ್ಕೂರು ಆಗಿರಬಹುದು. ಭೀಮಾನದಿಯ ದಂಡೆಯ ಮೇಲೆ ಬರುವ ಈ ಊರು ಮುಂದೆ ಶ್ರೀ ಸಿದ್ಧಬಸವೇಶ್ವರರ ಕಾರ್ಯಕ್ಷೇತ್ರವಾಗಿ ಹೊರಹೊಮ್ಮುತ್ತದೆ. "ಮಾನವನಲ್ಲಿ ಅಡಗಿರುವ ಅಜ್ಞಾನ ತೊಲಗಬೇಕು, ಜ್ಞಾನದ ಜ್ಯೋತಿ ಸದಾ ಬೆಳಗಬೇಕು. ಮಾತಿಗಿಂತ ಕೃತಿ, ತತ್ವಕ್ಕಿಂತ ಆಚರಣೆ ಬಲುಮುಖ್ಯ, ಪೂರ್ವಜರು ಹಾಕಿದ ಹೆದ್ದಾರಿಯಲ್ಲಿ ಮುನ್ನಡೆದು ಸುಖ, ಶಾಂತಿ ನೆಮ್ಮದಿಯನ್ನು ಪಡೆಯಬೇಕಾಗಿದೆ, ವೈಚಾರಿಕತೆಯ ಹೆಸರಿನಲ್ಲಿ ಧರ್ಮ ಸಂಸ್ಕೃತಿಯ ಪರಂಪರೆಯನ್ನು ಮರೆತರೆ ಮುಂದೊಂದು ದಿನ ನೋವನ್ನು ಅನುಭವಿಸುವುದರಲ್ಲಿ ಅನುಮಾನವಿಲ್ಲ",[೧೮೮] ಅದಕ್ಕೆಂದೇ ಆಗಾಗ ಸತ್ಪುರಷರು ಜನ್ಮತಾಳಿ ಸಮಾಜಕ್ಕೆ ನೆಮ್ಮದಿಯ, ಶಾಂತಿಯ ಮಾರ್ಗತೋರುತ್ತಾರೆ, ಎಂಬುದಕ್ಕೆ ಶ್ರೀ ಸಿದ್ಧ ಬಸವೇಶ್ವರರ ಸಾಧನೆ, ಪವಾಡ, ಲೀಲೆಗಳನ್ನು ಅರಿತು ಮುಂದೆ ನಡೆಯಬೇಕು.

ಜಗದ ಋಣವ ತೀರಿಸುವ ಜೊತೆಗೆ ಭಕ್ತರನ್ನುದ್ದರಿಸಿದ ಶ್ರೀ ಸಿದ್ಧಬಸವೇಶ್ವರರು ಭಾವೈಕ್ಯದ ಬೆಳಕಾಗಿ, ಬಾಳಿ ಕೋಳ್ಕೂರದಲ್ಲಿನ ಸಕಲ ಭಕ್ತರನ್ನು ಕರೆಯಿಸಿ ತಾವು ಶಿವ ಸಮಾಧಿ ಹೊಂದುವ ವಿಷಯ ತಿಳಿಸಿ ಸಮಾಧಿಯನ್ನು ಕಟ್ಟಿಸಿದರು, ಯುಗಾದಿಯ ಪ್ರತಿಪದ ಪಾಡ್ಯದಂದು ಎಲ್ಲಾ ಭಕ್ತರನ್ನು ದ್ದೇಶಿಸಿ, 'ಕಾರಣ ಮುಗಿದ ಮೇಲೆ ಕಾರ್ಯವಿಲ್ಲ' ಇಲ್ಲಿಗೆ ಶಿವನಪ್ಪಣೆಯ ಮೇರೆಗೆ ಬಂದ ನಮ್ಮ ಕಾರ್ಯ ಮುಗಿಯಿತು. ಹುಟ್ಟುಸಾವಿನ ನಡವೆ ಇರುವ ಬದುಕೇ ಭಗವಂತನದು, ಆತನನ್ನು ಅಲ್ಲಿ, ಇಲ್ಲಿ, ಎಲ್ಲೆಲ್ಲಿ ಕಾಣುವುದಕ್ಕಿಂತ ನಿಮ್ಮ ನಿಮ್ಮ ಮನದಲ್ಲಿ ಮನೆಮಾಡಿರುವವ ನನ್ನ ಹೊರ ಕರೆದು ಪೂಜಿಸಿರಿ, ಯಜಿಸಿರಿ, ಭಜಿಸಿರಿ, ಅಂಧ, ಅನಾಥ, ಅಂಗವಿಕಲರನ್ನು ಕರೆದು ಗೌರವಿಸಿರಿ, ಸರ್ವರನ್ನೂ ಗೌರವಿಸಿರಿ ಸರ್ವೇಜನಾ ಸುಖಿನೋಭವಂತು ಎನ್ನುತ್ತ ಓಂಕಾರಮಯ ವಾತವರಣದಲ್ಲಿ ಓಂ ನಮಃ ಶಿವಾಯ ಎನ್ನುತ್ತಾ ಶ್ರೀ ಸಿದ್ಧಬಸವೇಶ್ವರರು ಜೀವಂತ ಸಮಾಧಿಯನ್ನು ಹೊಕ್ಕರು.

"೧೫ನೇ ಶತಮಾನದ ಪವಾಡ ಪುರುಷ, ಮಹಾತ್ಮ ಶ್ರೀ ಸಿದ್ಧಬಸವೇಶ್ವರರು ಲೋಕಕಲ್ಯಾಣಕ್ಕಾಗಿ ದೇಶವನ್ನು ಸಂಚರಿಸಿ ನಾಡಿಗೆ ಭಾವೈಕ್ಯತೆಯ ಸಂದೇಶ ನೀಡಿದ್ದಾರೆ ಎಂದು ಶಕಾಪೂರ ತಪೋವನ ಮಠದ ಪೀಠಾಧಿಪತಿ ಡಾ.ಸಿದ್ಧರಾಮ ಶಿವಾಚಾರ್ಯರು, ಜೇವರ್ಗಿ ತಾಲೂಕಿನ ಕೋಳ್ಳೂರು ಗ್ರಾಮದ ಆರಾಧ್ಯ ದೈವ ಶ್ರೀ ಸಿದ್ಧಬಸವೇಶ್ವರರ ಜಾತ್ರಾಮಹೋತ್ಸವ ನಿಮಿತ್ಯ (೨೧.೩.೨೦೧೫) ಆಯೋಜಿಸಿದ್ಧ ಧಾರ್ಮಿಕ ಸಭೆ ಹಾಗೂ ಪುರಾಣ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು, ಅವರು ಮುಂದುವರಿದು ಪವಾಡ ಪುರುಷ ಶ್ರೀ ಸಿದ್ಧಬಸವೇಶ್ವರರು ಪುಣ್ಯದಂತೆ ಬಂದು, ಜ್ಞಾನದಂತೆ ಇದ್ದು ಭಕ್ತರಿಗೆ ಮೋಕ್ಷ ಮಾರ್ಗವನ್ನು ದಯಪಾಲಿಸಿ ಕೋಳ್ಳೂರುದಲ್ಲಿ ಜೀವಂತ ಸಮಾಧಿ ಪಡೆದ ಮಹಾನಶರಣ, ಕೋಳ್ಳೂರು ಅವಿಮುಕ್ತ ಕ್ಷೇತ್ರವಾಗಿದ್ದು, ಈ ಕ್ಷೇತ್ರದಲ್ಲಿ ಸಿದ್ಧಬಸವೇಶ್ವರರ ಚೈತನ್ಯ ಜ್ಯೋತಿ ನಿರಂತರವಾಗಿ ಬೆಳಗುತ್ತಿದೆ ಎಂದು ಶಕಾಪೂರ ಶ್ರೀಗಳು ತಿಳಿಸಿದರು". [೧೮೯]

'ನೀರಿಗೆ ಸಂಸ್ಕಾರ ನೀಡಿದರೆ ತೀರ್ಥ, ಪದಾರ್ಥಕ್ಕೆ ಸಂಸ್ಕಾರ ನೀಡಿದರೆ ಪ್ರಸಾದ, ಸಗಣಿಗೆ ಸಂಸ್ಕಾರ ನೀಡಿದರೆ ವಿಭೂತಿ, ಶಬ್ಧಕ್ಕೆ ಸಂಸ್ಕಾರ ನೀಡಿದರೆ ಮಂತ್ರವಾಗುವಂತೆ ಭವ ಬಂಧನದಲ್ಲಿರುವ ಮಾನವನಿಗೆ ಉತ್ತಮ ಸಂಸ್ಕಾರ ನೀಡಿದರೆ ಸಂತ, ಮಹಾತ್ಮನಾಗುತ್ತಾನೆ'. ಮನಸ್ಸುಮಾಡಿದ್ದರೆ ಬಸವೇಶನು ಪಟ್ಟದ ಅರಸನಾಗಿ ಮೆರೆಯ ಬಹುದಾಗಿದ್ದ, ಆದರೆ ಲೌಕಿಕ ಜಗತ್ತಿನಲ್ಲಿ ಯಾವುದು ಶಾಶ್ವತವಲ್ಲ ಎಂದರಿತು ಎಲ್ಲರನ್ನೂ, ಎಲ್ಲವನ್ನೂ ತ್ಯಜಿಸಿದನು. ಭಕ್ತಿಯ ಮಾರ್ಗದಲ್ಲಿ ನಡೆಯುವಾಗ ಎದುರಾದ ಎಲ್ಲ ವಿಘ್ನಗಳನ್ನು ನಿವಾರಿಸಿ ಸಿದ್ಧಪುರುಷನಾದ, ಜ್ಞಾನದ ಬಲದಿಂದ ಲೋಕವನ್ನು ಬೆಳಗಿದರು. ಬಸವೇಶ್ವನು ಜ್ಞಾನಿಯಾಗಿ ಗುರಿಸಾಧಿಸಿದ್ದಲ್ಲದೆ ಇಂದಿಗೂ ಪ್ರಾತಃ ಸ್ಮರಣೀಯರಾಗಿದ್ದಾರೆ. ಬಾಹ್ಯ ಅಧಿಕಾರ, ಸಂಪತ್ತಿಗಿಂತ ಕೊನೆವರೆಗೂ ಉಳಿಯುವ ಜ್ಞಾನ ಸಂಪತ್ತುಗಳಿಸಬೇಕು ಎಂಬುದು ಸಿದ್ಧಬಸವೇಶ್ವರ ಜೀವನ ಚರಿತ್ರೆಯಿಂದ ತಿಳಿದು ಬರುತ್ತದೆ. ಇಂಥವರು ನಮ್ಮ ನಡುವೆ ಬಾಳಿ, ಬೆಳಗಿ ಮತ್ತೊಬ್ಬರ ಬಾಳಿಗೆ ಬೆಳಕು ನೀಡುತ್ತಿರುವುದು ಅವರ ಪುಣ್ಯದ ಫಲ.

# ಅನುಭಾವಿ ಕವಿ ಕಡಕೋಳ ಮಡಿವಾಳೇಶ್ವರರ ಪುರಾಣ

ಪುರಾಣ, ಪ್ರವಚನಗಳು ಮಾನವಜನಾಂಗದ ಮನಸ್ಸಿಗೆ ನೆಮ್ಮದಿಯನ್ನು ನೀಡುತ್ತವೆ. ಇಂದು ಮಾನವೀಯ ಮೌಲ್ಯಗಳು ಕಣ್ಮರೆಯಾಗುತ್ತಿವೆ. ನೈತಿಕಮಟ್ಟ ಕುಸಿಯುತ್ತಿದೆ. ಸಮಾಜದಲ್ಲಿ ಅಶಾಂತಿ ಉಂಟಾಗುತ್ತಿದೆ. ಇದನ್ನು ನಿವಾರಿಸಲು ಪುರಾಣ, ಪ್ರವಚನಗಳು ಅಗತ್ಯ.

ಪ್ರೊ.ಎಚ್.ಜೆ. ಲಕ್ಕಪ್ಪಗೌಡರು ತಮ್ಮ ಕೃತಿ "ಇಬ್ಬನಿ" ಗಾದೆಗಳ ಸಂಕಲನದಲ್ಲಿ ಪುರಾಣ ಕುರಿತು ಹೀಗೆ ಹೇಳುತ್ತಾರೆ. "ಪುರಾಣ ಹುಟ್ಟಿಕೊಂಡಿದ್ದೆ, ಪುಣ್ಯ-ಪಾಪ, ಧರ್ಮ-ಅಧರ್ಮ, ನ್ಯಾಯ-ಅನ್ಯಾಯಗಳ ಏರು-ಪೇರುಗಳನ್ನು ಹೇಳೆಂದು.

**"ಕಾಡಿ ಕೌರವ ಕೆಟ್ಟ, ಆಡಿ ಧರ್ಮಜ ಕೆಟ್ಟ**
**ಕೂಡಿ ಪಾಂಡವ ಕೆಟ್ಟ, ನೋಡಿ ಕೀಚಕ ಕೆಟ್ಟ**
**ಛಲವಿದ್ದವ ಭೀಮ; ಛಲ ಇದ್ದವ ಕೌರವ**
**ಪಾಂಡವರ ಪಾಡೂ ಬೇಡ; ಕೌರವರ ಗೋಳು ಬೇಡ"** [೧೯೦]

ಎಂಬ ಹಲವು ಗಾದೆಗಳು ಪುರಾಣಲೋಕವನ್ನು ನೇರವಾಗಿ ಬಿಂಬಿಸುತ್ತವೆ.

"ನಮ್ಮ ಸಾಂಸ್ಕೃತಿಕ ಪರಿಸರದಲ್ಲಿ ಪುರಾಣಕ್ಕೆ ಜನಪದೀಯ ಸಂವೇದನೆ, ಅಂತೆಯೇ ಇಂದಿಗೂ ನಮ್ಮ ಗ್ರಾಮೀಣರಿಗೆ, ವಿಶೇಷವಾಗಿ ಹೆಣ್ಣು ಮಕ್ಕಳಿಗೆ ಪುರಾಣ, ಪುಣ್ಯಕಥೆಗಳಲ್ಲಿ ಅಪಾರನಂಬುಗೆ, ಗ್ರೀಕ್ ನಾಟಕಗಳಿರಲಿ, ಜ್ಞಾನಪೀಠ ಪುರಸ್ಕೃತ ಗಿರೀಶ ಕಾರ್ನಾಡ್ ಅವರ ಬಹುತೇಕ ನಾಟಕಗಳ ಒಳಹೂರಣವೇ ಪುರಾಣಗಳ ಪ್ರತಿಮಾ ಶಿಲ್ಪಗಳು". [೧೯೧]

"ಹಾಗೆ ನೋಡಿದರೆ ಇದು ಪುರಾಣಯುಗವಲ್ಲ, ಪುರಾಣ ಬರೆಯುವ, ಓದುವ ಹೊತ್ತಲ್ಲ, ದೀರ್ಘವಾದ, ಕ್ಲಿಷ್ಟಕರವಾದ ಪುರಾಣ ಕೃತಿಗಳನ್ನು ಓದಿ, ಅರ್ಥೈಸಿಕೊಳ್ಳುವಷ್ಟು ವ್ಯವಧಾನ ಈಗ ಯಾರಲ್ಲೂ ಇಲ್ಲ. ಆಶ್ಚರ್ಯವೆಂದರೆ ಪುರಾಣ ಹೇಳಲು ಹಚ್ಚುವ ಹಾಗೂ ಕೇಳುವ ಹವ್ಯಾಸ ಮಾತ್ರ ಕಾಲಕ್ಕೆ ತಕ್ಕ ಹೊಸ ಪ್ರಯೋಗಗಳೊಂದಿಗೆ ಆವಿರ್ಭವಿಸುತ್ತಲೆ ಇದೆ. ಜನಪದ ಮನಸ್ಸಿನ ಚಲನ ಶೀಲತೆಯ ದ್ಯೋತಕವಾಗಿಯೇ ಈ ಬಗೆಯ ವಿದ್ಯಮಾನಗಳು ಅಸ್ತಿತ್ವದಲ್ಲಿವೆ". [೧೯೧]

ಈ ದಿಶೆಯಲ್ಲಿ ಸಗರನಾಡಿನ ಶರಣರ ಶಿಖರಾದದ ಕಲಬುರುಗಿ ಜಿಲ್ಲೆಯ ಜೇವರ್ಗಿ ತಾಲೂಕಿನ ಕಡಕೋಳ ಮಡಿವಾಳೇಶ್ವರ ಮಠವೂ ಒಂದು. ಈ ಮಠದೊಡೆಯರಾದ ಶ್ರೀ.ಷ.ಬ್ರ.ರುದ್ರಮುನಿ ಶಿವಾಚಾರ್ಯರು ಸಾಹಿತ್ಯಿಕವಾಗಿ, ಸಾಂಸ್ಕೃತಿಕವಾಗಿ ಪ್ರಸಿದ್ಧರು.

ಸುಮಾರು ೧೭–೧೮ನೇ ಶತಮಾನದ ಮಧ್ಯಭಾಗದಲ್ಲಿ ಬಾಳಿಹೋದ ಕಡಕೋಳ ಮಡಿವಾಳಪ್ಪನವರು ಈ ಭಾಗದ ಆರಾಧ್ಯದೈವರು, ಜಡ್ಡುಗಟ್ಟಿದ ಸಾಂಪ್ರದಾಯಕ ವ್ಯವಸ್ಥೆಯ ವಿರುದ್ಧ ಸೆಡ್ಡು ಹೊಡೆದು ನಿಂತ ಮಡಿವಾಳಪ್ಪ ಈ ಭಾಗದ ಜನಪದರ ಅಂತಃಸಾಕ್ಷಿ ಅಲ್ಲದೆ ತತ್ವಪದ ಪ್ರಕಾರದ ಮೇರು ಪರ್ವತ, ಸಾಧು, ಸಂತ, ಅವಧೂತ, ಆರೂಢ, ಸಿದ್ಧ, ಶರಣ ಇತ್ಯಾದಿ ಅನುಭಾವಿ ಲೋಕಕಂಡ ಅಪ್ರತಿಮ ಸಾಧಕ.

ಶ್ರೀ.ಷ.ಬ್ರ. ರುದ್ರಮುನಿ ಶಿವಾಚಾರ್ಯರಿಗೆ ಥಟ್ಟನೆ ನೆನಪಿಗೆ ಬಂದ ಹೆಸರು ಮಹಾನ್ ನಾಟಕಕಾರ, ತತ್ವಪದಕಾರ ಎಲ್.ಬಿ.ಕೆ ಆಲ್ದಾಳರದ್ದು ಈ ಬಗ್ಗೆ ಎಲ್.ಬಿ.ಕೆ ಆಲ್ದಾಳರು 'ಶ್ರೀ ಮಡಿವಾಳೇಶ್ವರ ಪುರಾಣ' ಕೃತಿಯಲ್ಲಿ ನನ್ನೊಳಗಿನ ಮಾತು ಎಂಬ ಬರಹದಲ್ಲಿ ಹೀಗೆ ಉಚ್ಚರಿಸುತ್ತಾರೆ. ಶ್ರೀಗಳ ಸಂಕಲ್ಪದಂತೆ ಶ್ರೀ ಮಡಿವಾಳೇಶ್ವರರ ಕುರಿತು ಎಲ್ಲರಿಗೂ ತಿಳಿಯುವ ಹಾಗೆ ಸರಳ ಭಾಷೆಯಲ್ಲಿ ಪುರಾಣ ಬರೆಯಬೇಕೆಂದು ಬಯಕೆ ಇಟ್ಟಾಗ ನಾನು ಒಪ್ಪಿಕೊಂಡೆ. ಈ ಮೊದಲೆ ಮಡಿವಾಳೇಶ್ವರ ಬಗ್ಗೆ ಮೂರು ಪುರಾಣಗಳ ಹಸ್ತ ಪ್ರತಿಗಳಿವೆ. ಆದರೆ ಅದರೊಳಗೆ ಅವರ ಜೀವನ, ಬದುಕು ನಾಡಿಗೆ ಸಲ್ಲಿಸಿದ ಕೊಡುಗೆ ಎಲ್ಲವೂ ಅಸ್ಪಷ್ಟ. ಈ ಕಾರಣ ನೀವು ಪುರಾಣ ಬರೆಯಬೇಕೆಂದು; ಡಾ.ಮೀನಾಕ್ಷಿ ಬಾಳಿಯವರು ಬರೆದು ಮಂಡಿಸಿದ ಪ್ರಬಂಧ ಗ್ರಂಥ "ತನ್ನ ತಾನು ತಿಳಿದ ಮೇಲೆ" ಎಂಬ ಪುಸ್ತಕವನ್ನು ಕೈಗಿತ್ತು. ಆದಷ್ಟು ಬೇಗ ಬರೆದುಕೊಟ್ಟಲ್ಲಿ ಬರಲಿರುವ ಜಾತ್ರೆಯಲ್ಲಿ ಬಿಡುಗಡೆ ಮಾಡುತ್ತೇವೆ ಎಂದು ಹೇಳಿದ ತತ್ಫಲವೇ ಈ ಅನುಭಾವಿ ಕವಿ ಕಡಕೋಳ ಮಡಿವಾಳೇಶ್ವರ ಪುರಾಣ ಗ್ರಂಥವು".[೧೯೩]

**"ಪನ್ನಗಧರ ನಾಣತಿಯ ಹೊತ್ತು**
**ನಿನ್ನ ಪುರಾಣವನು ರಚಿಸುವೇನು**
**ಚೆನ್ನಸುವರ್ಣಾಕ್ಷರದಿ ಹೆಮ್ಮೆಯಿಂದ ಹೇಳುವೆ ನಾ।**
**ನಿನ್ನ ಸೇವೆಗೆ ಅನುವುಗೊಳಿ ಸೈ**
**ಚೆನ್ನುಡಿಯ ಕಾವ್ಯ ಹೊರ ಬರಲು ಉ–**
**ನ್ನನಿಯ ಮಂಟಪದಿನೀ ಕುಂತು ಕೇಳೈ ಮಡಿವಾಳೇಶ"** [೧೯೪]

ಪುರಾಣದ ಕೇಂದ್ರಬಿಂದುವಾಗಿರುವ ಶ್ರೀ ಮಡಿವಾಳೇಶ್ವರರ ತಾಯಿ ಗಾಣಿಗರ ಗಂಗಮ್ಮ ಈಕೆ–ವಿಜಾಪುರ ಜಿಲ್ಲೆಯ ಇಂಡಿ ತಾಲೂಕಿನ ನಾಗಠಾಣ ಎಂಬ ಹಳ್ಳಿಯಿಂದ ತನ್ನ ಮುಪ್ಪಿನ ತಂದೆಯೊಡನೆ ಕಲಬುರುಗಿ ಜಿಲ್ಲೆಯ ಆಫಜಲಪುರ ತಾಲೂಕಿನ ಬಿದನೂರಿಗೆ ವಲಸೆ ಬಂದಳು.

**"ಶೀಲ ಸಂಪದೆ ಗಂಗಾಂಬಿಕೆ**
**ಕೂಲಿ ಮಾಡುತ ಕಾಲಕಳೆದಳು**
**ಮಲ್ಲಿಕಾರ್ಜುನ ಗೌಡರ ತೋಟದಲತಿ ಹರುಷದಿಂ ।**
**ಎಲ್ಲರಬಾಯಿ ಬೆಲ್ಲದಚ್ಚಾಗಿ**
**ಚೆಲುವೆ ಗಂಗಮ್ಮ ಕಾಣುವಂತಾ–**

**ಗಲು; ರೋಗದಿಂ ಮುಪ್ಪಿನಾತಂದೆ ಕಾಲವಶನಾದ"** [೧೯೫]

ಚಿಕ್ಕವಳಿರುವಾಗಲೇ ಮದುವೆಯಾಗಿದ್ದ ಗಂಗಮ್ಮ ಆದರೇನು ಆ ಕಾಲದಲ್ಲಿ ಗಂಡ ಸತ್ತು ಬಾಲ ವಿಧವೆಯಾಗಿದ್ದಳು. ತಂದೆ ಸಾವಿನಿಂದ ಒಂಟಿಯಾದಳು, ಪ್ರಬುದ್ಧಳಾದಳು.

**"ಮಲ್ಲಿಕಾರ್ಜುನ ಗೌಡರುಬಂದು**
**ತಲೆಯ ಮೇಲೆ ಕೈಯಿಟ್ಟು ಹೇಳಲ್**
**ಪಾಲಕನಾನಾಗಿ ನಿನ್ನ ತಂದೆಯ ಸ್ಥಾನ ತುಂಬುವೆ ।**
**ಮಲ್ಲಿಗೆಯ ಪರಿ ಜತನಮಾಡುವೆ**
**ಮಲ್ಲಿಕಾರ್ಜುನ ಸಾಕ್ಷಿದು ಸತ್ಯ**
**ಹಲುಬಬೇಡೆಂದುಪದೇಶ ನೀಡಿ ಮನೆಗೆ ಕರೆತಂದ"** [೧೯೬]

ಸದಾ ದೇವರ ಸ್ಮರಣೆ ಮಾಡುತ್ತ ಕೂಲಿ ಮಾಡುತ್ತಲಿದ್ದ ಗಂಗಮ್ಮಳ ಸೌಂದರ್ಯ ಕಂಡು ಕಣ್ಣುಕುಕ್ಕಿ ಕಾಮದ ಕಣ್ಣುಗಳು ಅವಳ ಮೇಲೆ ಬಿದ್ದವು. ಇದರಿಂದ ನೊಂದು ಕೋಳಿ ಕೂಗುವ ಮುನ್ನವೇ ಈ ಲೋಕ ತೊರೆಯಲು ನಿರ್ಧರಿಸಿದಳು.

**"ಸೀರೆಯ ಸೆರಗು ಟೊಂಕಕ್ಕೆ ಸುತ್ತಿ**
**ನೀರ ಗಚ್ಚಿಯ ಹಾಕಿ ನಡೆಯುತ**
**ಊರ ಮುಂದಿನ ಬಾವಿ ದಂಡೆಗೆ ಹೋಗಿನಿಂತಳು।**
**ಗುರು ವಿರುಪಾಕ್ಷಯ್ಯ ಓಡುತ್ತ**
**ಬರಸೆಳೆದುಕೊಂಡು ಯಾಕಿ ತಾಪ**
**ಯಾರು ನೀನೆಂದು ಕೇಳಿದರು ಕಳವಳಿಸಿ ಹೌಹಾರಿ"** [೧೯೭]

ಮಠದೊಡೆಯರಾದ ವಿರುಪಾಕ್ಷಸ್ವಾಮಿಗಳು ಆತ್ಮಹತ್ಯೆ ಮಹಾಪಾಪ ಎಂದು ಸಾಂತ್ವನ ವ್ಯಕ್ತಪಡಿಸಿದರು. ನನ್ನನ್ನು ತಡೆಯ ಬೇಡಿರಿ, ನಾನಿದ್ದು ಫಲವೇನು, ನೋಡುವ ಕಂಗಳೂಟಕ್ಕೆ ಬಲಿಯಾಗಿ ಬದುಕಲಾರೆ ಸಾಯುವುದೇ ಲೇಸೆಂದು ಗಂಗಮ್ಮ ಗೋಗರೆದಳು.

ದಯಾಂತಃಕರಣ ತುಂಬಿದ ವಿರುಪಾಕ್ಷಯ್ಯ ಸ್ವಾಮಿಗಳು, 'ಸತ್ತು ಸಾಧಿಸುವುದಕ್ಕಿಂತ ಇದ್ದು ಜಯಿಸಬೇಕು' ಎಂದು ಮನ ಬದಲಿಸಿ ಮಠಕ್ಕೆ ಕರೆದುಕೊಂಡು ಬಂದರು. ಕಾಲಗತಿಸಿ, ಇವರೀರ್ವರ ಪ್ರೀತಿ–ಪ್ರೇಮವಾಗಿ ಜನಿಸಿದವರೇ ಕಡಕೋಳ ಮಡಿವಾಳೇಶ್ವರರು.

**ಮಠದ ತುಂಬಾ ಬೆಳಕು ಚೆಲ್ಲಿತು**
**ಸಾಟಿಯಿಲ್ಲದ ಗುಂಪುಸೇರಿತು.**

ಶ್ರೀ ಮಠವು ಬಾಲಭಾಸ್ಕರನಂತಿರುವ ಶಿಶುವಿನ ಚೆಂಬೆಳಕಿನಲ್ಲಿ ಲೋಲಾಡಿತು. ಹೆಬ್ಬೆಟ್ಟು

ಚೀಪುತ್ತಾ ಆಡುವ ಶಿಶುವಿಗೆ ಕಂಡು, ನಿನ್ನಾಟ ಶಿವನಿಗೂ ಮೀರಿದ್ದು ಎಂದು ಹರಿಸಿದರು, ಮಹಾಂತ ಶಿವಾಚಾರ್ಯರು, ಇವನಾಟ ಪಾಠವ ಕಂಡವರು ಸಾಂಬನ ಅವತಾರಿಯೇ ಎಂದರು.

ಬಾಲ ಮಡಿವಾಳನು ದೊಡ್ಡವನಾದ, ಜಂಗಮ ದೀಕ್ಷಾರ್ಥಿಯಾಗಿ ಮಡಿವಾಳನು ಬಿದನೂರಿನಿಂದ ತಾಯಿ ಅಪ್ಪಣೆಯನ್ನು ಪಡೆದು ಚಿನ್ಮಯ ಗಿರಿ ಏರಿದ. ಶ್ರೀ ಗಿರಿಯ ಒಡೆಯರಾದ ಶ್ರೀ ಷ.ಬ್ರ. ಗುರು ಬಸವ ಶಿವಾಚಾರ್ಯರಿಗೆ ಸಾಷ್ಟಾಂಗ ಹಾಕಿದ. ಶಿವಾಚಾರ್ಯರು ಆತನನ್ನು ಹಿಡಿದೆತ್ತಿ ನಾನಲ್ಲ ಮಹಾಂತ ಶಿವಯೋಗಿ ಅವರು ಲಿಂಗೈಕ್ಯರಾಗಿದ್ದಾರೆ. ಲಿಂಗದೀಕ್ಷೆಯಾಗ ಬೇಕೆಂದು ಹಪಹಪಿಸಿದ. ಜಂಗಮನಾಗಬೇಕೆಂದು ಚಿಂತಿಸಿದ. ಈ ತುಡಿತದಿಂದ ಎದ್ದುನಿಂತ. ಅರಳ ಗುಂಡಿಗೆಯ ದಾರಿ ಹಿಡಿದ. ಶ್ರೀ ಶರಣ ಬಸವೇಶ್ವರರಲ್ಲಿಗೆ ನೇರವಾಗಿ ಬಂದ. 'ಬಚ್ಚಲದಲ್ಲಿ ಬಿಲ್ವ ಪತ್ರೆಯ ಗಿಡಹುಟ್ಟಿದೆ. ಅದರ ದಳಗಳು ಲಿಂಗದೇವನಿಗೆ ಅರ್ಪಿತವಾಗಬಲ್ಲುವೇ?' ಎಂದು ಪ್ರಶ್ನಿಸಿದ, ತತಕ್ಷಣವೇ ಅದು "ಅರ್ಪಿತ" ಎಂದು ಉತ್ತರ ಬಂದಿತು. ನನ್ನ ಜನ್ಮವಾದರೂ ಈ ಬಿಲ್ವ ಮರದಂತಾಗಿದೆ. ನನಗೆ ಜಂಗಮ ಲಿಂಗ ದೀಕ್ಷೆಯಾಗಬೇಕು. ಶ್ರೀ ಶರಣಬಸವೇಶ್ವರರು ಅರಳಗುಂಡಿಗೆಯಲ್ಲಿಯೇ ಇದ್ದ ಹಳೆಪ್ಯಾಟಿ ಬಸಯ್ಯನವರು ಬಾಲಕ ಮಡಿವಾಳನಿಗೆ ಲಿಂಗದಿಕ್ಷೆ ಮಾಡಲು ನಿರಾಕರಿಸುತ್ತ, "ಎಲ್ಲಿಯೋಹುಟ್ಟಿ ಎಲ್ಲಿಯೋ ಬೆಳೆದು ಬಂದವನಿಗೆ ನಾನು ಲಿಂಗದೀಕ್ಷೆ ಕೊಡಬೇಕೆ"? ಎಂದು ಕೆನಲಿ ಕೆಂಡವಾದರು. ಅಶು ಕವಿ ಮಡಿವಾಳಪ್ಪನ ಹೃದಯದಿಂದ ಚಿಮ್ಮಿತೊಂದು ಕೋಲ್ಮಿಂಚು.

**'ಆಯ್ತಾನದ ಹಮ್ಮೇನೋ ಚುಮ್ಮ!**
**ತಂದೆ ತಾಯಿಗಳ ಮೈಥುನದಿಂದಾಯ್ತು ಸೊಮ್ಮು!**
**ಎಲವು ತೊಗಲು ನರಸುತ್ತಿ ಅದು ಹೊಲಿದು.**
**ಮಾಡಿದ ಮಲಮೂತ್ರದ ತಿತ್ತಿ!**
**ಚಲುವಾ ಯಾವುದು ಹೇಳೋ ಮುಕ್ತಿ!**
**ನಿನ್ನ ಹೊಲಸು ಮುಚ್ಚಿಕೊಳ್ಳೋ ಛೀ ಮೂಳ ಕತ್ತೆ!'** [೧೯೮]

ಎಂದು ಪದ ಹಾಡಿ ಬಸ್ಸಯ್ಯನವರ ಮೈನೀರಿಳಿಸಿ ಬಿಟ್ಟ, ಛೀ ಮೂಳಕತ್ತೆ ಎಂದ! ಬಾಲಕ ಮಡಿವಾಳನನ್ನು ಕಲಕೇರಿಗೆ ಕರೆದುಕೊಂಡು ಹೋಗಿ ಶ್ರೀ ಶರಣಬಸವೇಶ್ವರರು ತಮ್ಮ ಗುರು ಮರುಳಾರಾಧ್ಯರಿಂದ ಜಂಗಮದೀಕ್ಷೆ ಕೊಡಿಸಿದರು.

ಮುಂದೆ ಮಡಿವಾಳಪ್ಪ ನವರು ಅನೇಕ ತತ್ವಗೀತೆಗಳನ್ನು ರಚಿಸಿದರು, ತೆಲಗುಬಾಳದ ರ್‍ಯಾವಪ್ಪ, ಕಡ್ಲೆವಾಡದ ಸಿದ್ದಪ್ಪ, ಖೈನೂರು ಕೃಷ್ಣಪ್ಪ, ಅರಳ ಗುಂಡಿಗೆಯ ಭಾಗಮ್ಮ ಹೀಗೆ ಅನಂತ ಜನ ಶಿಷ್ಯರಾದರು ಸುರಪುರ ತಾಲೂಕಿನ ಯಾಳಗಿ ಭಕ್ತರು ಪುರಾಣ ಹೇಳಿಸಿದರು. ಪುರಾಣ ಕೇಳಲು ದಶದಿಕ್ಕುಗಳಿಂದಲೂ ತೆರಪಿಲ್ಲದೆ ಜನ ಸೇರಿತು.

**"ಬೆಳ್ಳ ಬೆಳತನ ಭೋಗವ ಮಾಡ್ತಿ**
**ಬೆಳಗಿನ ವೇಳೆ ಭಜನಿಯು ಮಾಡ್ತಿ**
**ಗಾಳಕ್ಕೆ ಸಿಕ್ಕ ಮೀನಿನ ತೆರ ಮಾಯೆಗೆ ಸೋತರೆ ಹ್ಯಾಂಗೋ?!**
**ಅಳಿದು ಹೋಗುವ ದೇಹಕೆ-ನಂಬಿ**
**ವೇಳೆ ಗಳಿಯುತ ಹಿಂಗ ಹೊಂಟೀ**
**ಉಳಿದು ಹೋಗುವ ಕಾರ್ಯಮಾಡದೆ ಹಾಳಿಗೆ ಹೊಂಟಿ"** [೧೯೯]

ಪುರಾಣದ ನಡುನಡುವೆ ಹಲವಾರು ವಿಷಯಗಳನ್ನು ಖಂಡಿಸಿ ನೀತಿ ಭೋದಿಸುತ್ತಿದ್ದರು ಭವ್ಯಪುರಾಣ ಆಲಿಸಿದ ಜನ 'ನಭೂತೋ, ನಭವಿಷ್ಯತಿ' ಎಂದು ಭಗವಂತನನ್ನು ಧ್ಯಾನಿಸಿದರು.

ಮಡಿವಾಳಪ್ಪನವರು ಒಳ್ಳೆಯ ವಚನಕಾರರು ಹೌದು. ಹಲವಾರು ಸಿದ್ಧಿಗಳನ್ನು ಮಾಡಿಕೊಂಡು ಅವುಗಳನ್ನು ಸಮಾಜದ ಹಿತಕಾರ್ಯಕ್ಕೆ ಬಳಸಿಕೊಂಡರು. ಮಡಿವಾಳರ ಹಾಡುಗಳಲ್ಲಿ 'ಗುರುಮಹಾಂತ' ಎಂಬ ಅಂಕಿತವಿದೆ. ಇನ್ನು ಕೆಲವು ಕಡೆ ಚಿಣಮಗೇರಿ ವಾಸ, ಚೆನ್ನ ಗುಡ್ಡಯೋಗಿ, ಕಡಕೋಳ ಗುಡ್ಡದ ಮಹಾಂತ, ಸೈದಾಪೂರ ಮಹಾಂತೇಶ್ವರ, ಬಿದನೂರ ಮಡಿವಾಳ, ಬಿದನೂರ ವಿರುಪಾಕ್ಷ ಅಂಕಿತಗಳನ್ನು ಕಾಣುತ್ತೇವೆ. ಅವರ ವಚನದಲ್ಲಿ 'ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ ಎಂಬ ಅಂಕಿತ ಬರುತ್ತದೆ. ಇನ್ನೊಂದುಕಡೆ "ಶಂಕರಪ್ರಿಯ ಚೆನ್ನಕದಂಬಲಿಂಗ ಮಹಾಂತಯೋಗಿ" ಎಂಬ ಅಂಕಿತವೂ ಬರುತ್ತದೆ.

ಉಸಿರುಗಟ್ಟುವ ವಾತಾವರಣದಲ್ಲಿ ಮಡಿವಾಳಪ್ಪನವರು ಸುಮ್ಮನಿರಲಿಲ್ಲ 'ಮಾಡಿಉಣ್ಣು ಬೇಕಾದಷ್ಟು, ನೋಡಿ ಉಣ್ಣು ನೀಡಿದಷ್ಟು ಎಂಬ ತತ್ವಗೀತೆಯ ಮುಖಾಂತರ ಕಾಯಕ ಪ್ರಜ್ಞೆ ಮೂಡಿಸಿದರು. ಮಡಿವಾಳಪ್ಪನವರು ಕಡಕೋಳಕ್ಕೆ ಬಂದು ನೆಲೆಯೂರಿದರು, ತಮ್ಮ ಜೀವನದ ಅಂತಿಮ ಘಟ್ಟಕ್ಕೆ ಬಂದಾಗ ಅವರು ಆತ್ಮವನ್ನು, ಅಧ್ಯಾತ್ಮವನ್ನು ಕುರಿತು ವಿಡಂಬನಾತ್ಮಕವಾಗಿ ಹಾಡೊಂದು ಹೇಳಿದರು.

**ಕ್ವಾಡಗನ ಕೋಳಿನುಂಗಿತ ॥ಪ॥**
**ಆಡಮಾಡವುನುಂಗಿ**
**ಗ್ವಾಡಿಯ ಸುಣ್ಣವುನುಂಗಿ**
**ಆಡಲಿಕ್ಕೆ ಬಂದ ಪಾತರಗಿತ್ತಿನ ಮದ್ದಲಿ**
**ನುಂಗಿತಕ್ಕಯ್ಯ........**
**............................**
**ವಿದ್ಯೆಹೇಳುವ ಗುರುವಿನ ಆತ್ಮನುಂಗಿತಕ್ಕಯ್ಯ।**

ಹೀಗೆ ಎರಡು ಒಂದಾದ, ಬಯಲಿನಲ್ಲಿ ಬಯಲಾದ, ಆತ್ಮಪರಮಾತ್ಮನಲ್ಲಿ ಬೆರೆತು

ಬೇರಿಲ್ಲದ ಉನ್ನತ ಸ್ಥಿತಿಯನ್ನು ಮಡಿವಾಳರು, 'ತನ್ನತಾನು ತಿಳಿದಮೇಲೆ ಇನ್ನೇನಿನ್ನೇನೋ ಎಂದು ಹಾಡುತ್ತ ಆ ಪರಶಿವನಲ್ಲಿ ಜೀವಂತ ಸಮಾಧಿ ಹೊಕ್ಕರು.

"ಕಡಕೋಳದಾಗ ಕಾಗಿ ಜೀವ್ನಾನೂ ಪಾವನ" ಇಲ್ಲಿ ಕತ್ತೆ ಕೂಗಿದರೂ ಶಾಸ್ತ್ರೋಕ್ತವಾಗಿ ಕೂಗುತ್ತದೆ ಎಂಬುದು ಆಡು ನುಡಿಯಾಗಿದೆ. ಕಡಕೋಳ ಗ್ರಾಮವನ್ನು ಜನರು 'ಸಗರನಾಡಿನ ಶಿಖರವೆಂದೂ, ಭಕ್ತಿ ಸಾಮ್ರಾಜ್ಯದ ಮುಕ್ತಿ ಧಾಮವೆಂದೂ, ಕಲ್ಯಾಣ ನಾಡಿನ ಕೈಲಾಸವೆಂದೂ, ಭೂಲೋಕದ ಕಲ್ಪವೃಕ್ಷವೆಂದೂ ಕರೆದು ಗೌರವಿಸಿದ್ದಾರೆ. ಪ್ರತಿವರ್ಷ ಡಿಸೆಂಬರ ತಿಂಗಳಿನಲ್ಲಿ ಮಾರ್ಗಶೀರ್ಷ ವದ್ಯ ಅಷ್ಟಮಿ ನವಮಿಗಳೆಂದು ಮಡಿವಾಳಪ್ಪ ನವರ ಜಾತ್ರೆ ನಡೆಯುತ್ತದೆ. ಚಿಣಮಗೇರಿ ಗುಡ್ಡದಲ್ಲೂ ಭಜನೆ, ಕೀರ್ತನೆ, ಪ್ರವಚನ ಕಾರ್ಯಕ್ರಮಗಳು ನಡೆಯುತ್ತವೆ. ಭಜನಾಮೇಳದವರು ಮಡಿವಾಳಪ್ಪನವರ ಸ್ವರ ವಚನಗಳನ್ನು ಹಾಡುವುದನ್ನು ಪುರಾಣ ಕೇಳಿ ಪುನೀತರಾಗುವುದನ್ನು ಈಗಲೂ ನೋಡಬಹುದು.

"ಅಪ್ರತಿಮ ಬಂಡಾಯಗಾರ, ನಿಷ್ಠುರವಾದಿ, ಧರ್ಮನಿರಪೇಕ್ಷ ಮನೋಭಾವದ ಮಡಿವಾಳಪ್ಪನವರನ್ನು ಪರಂಪರಾಗತ ಪುರಾಣ ಕೃತಿಯ ಜಾಡಿನಲ್ಲಿ ಹಿಡಿದಿಡುವುದು ಪರಮ ಸಾಹಸದ ಕೆಲಸ. ಇಂಥ ಅಗ್ನಿ ದಿವ್ಯವನ್ನು ಹಾದು ಬರುವ ಪ್ರಯತ್ನವನ್ನು ಆಲ್ದಾಳರು ಮಾಡಿದ್ದಾರೆ. ಪುರಾಣದ ತಾಂತ್ರಿಕ ಚೌಕಟ್ಟು ಮತ್ತು ಮಡಿವಾಳಪ್ಪನವರ ಪ್ರಖರ ವ್ಯಕ್ತಿತ್ವ ಎರಡಕ್ಕೂ ಅಪಚಾರವಾಗದಂತೆ ಜಾಣ್ಮೆಯನ್ನು ಮೆರೆದಿದ್ದಾರೆ. ಪುರಾಣ ಹೇಳುವರಿಗೆ ಅನುಕೂಲವಾಗಲೆಂದು ಪದ್ಯದೊಂದಿಗೆ ಗದ್ಯದಲ್ಲಿ ಸರಳಾನುವಾದ ಬರೆದಿದ್ದಾರೆ". [೨೦೦]

**"ಹೆಣ್ಣಿಗಾಗಿ ರಾಮ ರಾವಣರ ಕಾದಾಟ**
**ಮಣ್ಣಿಗಾಗಿ ಕೌರವ-ಪಾಂಡವರ ಹೊಡೆದಾಟ**
**ಹೊನ್ನಿಗಾಗಿ ಸುಂದೋಪ ಸಂದರ ಸೆಣಸಾಟ**
**ಪ್ರಭುತ್ವಕ್ಕಾಗಿ ಆರ್ಯದ್ರಾವಿಡರ ಹೋರಾಟ!**
**ಪುರಾತನ ಪುರಾಣಗಳು ಕದನದ ಕಥೆಗಳೇ ಹೊರತು**
**ಧರ್ಮಗ್ರಂಥಗಳೆಲ್ಲೆಂದ ಕುಮಾರ ಕಕ್ಕಯ್ಯ!"** [೨೦೧]

ರಾಮಾಯಣ, ಮಹಾಭಾರತ, ಭಾಗವತ, ಶಿವಪುರಾಣ ವಿಷ್ಣು ಪುರಾಣ, ಗರುಡ ಪುರಾಣ, ಪದ್ಮ ಪುರಾಣ ಹೀಗೆ ಅನೇಕ ಪುರಾಣಗಳು ಇಂದಿಗೂ ಒಂದಕ್ಷರ ಬದಲಾಗದಂತೆ ಉಳಿದುಕೊಂಡು ಬಂದಿವೆ.

ಭಾರತ ಜ್ಞಾನದ ಖಣಿ ಎಂದು ವಿದೇಶಿಗರು ಹೊಗಳಿದ್ದು, ಇದಕ್ಕೆ ವ್ಯಾಸ ಮುನಿಗಳು ೧೮ ಪುರಾಣಗಳನ್ನು ರಚಿಸುವ ಮೂಲಕ ದೇಶದ ಪುರಾಣ ಸಂಸ್ಕೃತಿಗೆ ಬಹುದೊಡ್ಡ ಕೊಡುಗೆ ನೀಡಿದ್ದಾರೆ. ಮಹಾಪುರುಷರು ಜೀವನ ಸಾಗಿಸಿರುವುದನ್ನೇ ಪುರಾಣ ರೂಪದಲ್ಲಿ ಅವರನ್ನು ಕೊಂಡಾಡಲಾಗಿದೆ. ಶ್ರೀ ಶರಣಬಸವೇಶ್ವರ ಪುರಾಣ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಶ್ರಾವಣ ಮಾಸದಲ್ಲಿ ಹಳ್ಳಿ ಹಳ್ಳಿಗಳಲ್ಲೂ ಶರಣಬಸವೇಶ್ವರರ ಪುರಾಣ ನಡೆಸಲಾಗುತ್ತಿದ್ದು, ಪುರಾಣ

ಶ್ರವಣದಿಂದ ಮನಸ್ಸು ಪರಿಶುದ್ಧವಾಗುತ್ತದೆ. ಅಲ್ಲದೆ ಜೀವನ ಪರಿವರ್ತನೆಗೆ ಕಾರಣವಾಗುತ್ತದೆ. ದುರ್ಮಾರ್ಗ ಅನುಸರಿಸುವ ಮನಸ್ಸುಗಳು ಸನ್ಮಾರ್ಗದತ್ತ ಒಲವು ಮೂಡಿಸುವ ಶಕ್ತಿ ಪುರಾಣಕ್ಕಿದೆ. ಅಂತೆಯೇ ನಮ್ಮ ದೇಶದಲ್ಲಿ ಪುರಾಣ, ಪುಣ್ಯ ಕಥೆಗೆ ಹೆಚ್ಚಿನ ಒತ್ತು ನೀಡಲಾಗಿದೆ. ಅಧ್ಯಾತ್ಮಿಕ ಕ್ಷೇತ್ರದಲ್ಲಿ ಪುರಾಣಗಳು ಅತ್ಯಂತ ಪವಿತ್ರ ಸ್ಥಾನ ಹೊಂದಿವೆ. ಇಂದಿಗೂ ಪುರಾಣಗಳು ಪ್ರಚಲಿತವಾಗಿವೆ". [೨೦೨]

## ತಪೋವನ ಮಠದ “ವಚನ ವಾಹಿನಿ”

**ಕಲ್ಲಿನಲಿ ಕಾವ್ಯ ಬರೆದರು ನಮ್ಮವರು**
**ಕಲ್ಲಿನಲಿ ಕಲೆಯರಳಿಸಿದರು ನಮ್ಮವರು**
**ಕಲ್ಲು ಮಲ್ಲಿಗೆಯನ್ನಾಗಿಸಿದರು ನಮ್ಮವರು**
**ಕಲ್ಲುಸಕ್ಕರೆಯನ್ನಾಗಿಸಿದರು ನಮ್ಮವರು**
**ಗುರುದೇವಾ ಮಲ್ಲಿಗೆಯಂಥಾ ಹೃದಯ**
**ಕಲ್ಲಾಗಿರಿಸಿಕೊಂಡರು ನೋಡಾ ನಮ್ಮವರು (೨೯೨)**
**ತಪೋವನ ಮಠಾಧೀಶ**

ಶ್ರೀ ವಿಶ್ವಾರಾಧ್ಯ ತಪೋವನ ಮಠ ಶಾಕಾಪೂರದ ತಪೋಭೂಷಣ ಸಿದ್ಧರಾಮ ಶಿವಾಚಾರ್ಯರು ತಮ್ಮ ಆಶೀರ್ವಚನದಲ್ಲಿ ತಿಳಿಸಿರುವ ಮಾತುಗಳು ಎಲ್.ಬಿ.ಕೆ ಆಲ್ದಾಳ ಅವರ ಸಜ್ಜನಿಕೆಗೆ ಸಂದಗೌರವ. ಅದಕ್ಕೂ ಮಿಗಿಲಾಗಿ, ಶ್ರೀಗಳು ಮುಂದುವರಿದು ಎಲ್.ಬಿ.ಕೆ ಅವರು ನಮ್ಮ ಶಕಾಪೂರ ಮಠದ "ಆಸ್ಥಾನ ಕವಿಗಳು" ಎಂದು ಹೇಳಿರುವುದು ಎಂತಹ ವೈಭವ, ಇದು ಎಲ್ಲರಿಗೂ ದೊರಕುವುದಿಲ್ಲ. ಎಲ್.ಬಿ.ಕೆ ಅವರನ್ನು ಮೇರು ಕವಿಗಳ ಸಾಲಿನಲ್ಲಿ ಶ್ರೀಗಳು ಕುಳ್ಳಿರಿಸಿರುವುದು ಅವರ ಜೀವನ ಸಾರ್ಥಕ ಹಾಗೂ ಪಾವನಗೊಂಡಂತಾಗಿದೆ.

ಆಲ್ದಾಳರು ಹೇಳಿದಂತೆ, ‘ಕವಿತಪಸ್ವಿಯಾದಾಗ ಅವನ ಕಾವ್ಯ ತಪೋಭೂಷಣವಾಗುತ್ತದೆ’ ಅಂದಂತೆ ಇವರೂ ಒಬ್ಬ ಕವಿ, ತಪಸ್ವಿ ಎಂದು ಹೇಳಬಹುದು.

"ವಚನ ವಾಹಿನಿ"ಯ ಬಗ್ಗೆ ಆಲ್ದಾಳರು ಹೀಗೆ ಹೇಳುತ್ತಾರೆ.

**ಆದ್ಯರ ವಚನಗಳಸಾರ ಶರಣರ ನುಡಿಗವನಗಳು**
**ಕವಿಗಳ ತತ್ವ ಗೀತೆಗಳು ಸಮಾಜದ ಸಾಂದರ್ಭಿಕ**
**ಘಟನೆಗಳ ಸಾರವೇ ಈ ‘ವಚನ ವಾಹಿನಿ’,**
**ನಾನು ನಿಮಿತ್ಯ ಮಾತ್ರನಯ್ಯ**
**ತಪೋವನ ಮಠಾಧೀಶ..॥೨೪೧॥**

ನನ್ನದು ಏನುಇಲ್ಲ, ಎಲ್ಲವೂ ತಪೋವನಾಧೀಶರದೇ ಎಂದು ಹೇಳುವಲ್ಲಿ ಆಲ್ದಾಳ ಅವರು, ನಾನೇ ಎಲ್ಲಾ ಎಂಬ ಸ್ವಾರ್ಥಪರತೆಯಿಂದ ಗಾವುದ ದೂರ ಇರುವುದು ಅವರ ವಚನದಿಂದ ಸ್ಪಷ್ಟವಾಗುತ್ತದೆ. ನಿಜವಾಗಿಯೂ ಎಲ್.ಬಿ.ಕೆ ಅವರದು ಸಹನೆಯ ಬದುಕು, ಸತ್ವದ ಬದುಕು ಅಂತಲೇ ಅಂಥವರು ಅಪರೂಪ, ಅವರು ಒಬ್ಬ ವಾಙ್ಮಯ ತಪಸ್ವಿ, ಆ ತಪಸ್ವಿಗೆ ವೈಯಕ್ತಿಕ ಸಾಂಸಾರಿಕ ಜೀವನದ ಕಷ್ಟ, ಕಂಟಕ ಯಾವುದು ಅಡ್ಡಿ ಆಗಲಿಲ್ಲ ಎಂಬುದು ನೆನಪಿಟ್ಟು ಕೊಳ್ಳಬೇಕಾದ ಸಂಗತಿ. ಅದು ನಿಜಕ್ಕೂ ‘ಪರೀಷಹ ಜಯ’!

**ಮಡದಿ ಮಕ್ಕಳು ನನ್ನವರೆಂದು**

**ಭ್ರಮೆ ಗೆಟ್ಟು ತಿರುಗಿದೆನಯ್ಯ!**
**ಭೂಮಿ–ಸೀಮಿ ನನ್ನದೆಂದು**
**ಬಡಿದಾಡಿ ಬಳಲಿದೆ ನೋಡಯ್ಯಾ**
**ಹೊನ್ನಿಗಾಗಿ ಹಲವು ಕನಸು ಕಂಡು**
**ಮರಿಚಿಕೆಯಂತಾದೆನಯ್ಯ! ತಪೋವನ ಮಠಾಧೀಶ..॥೧೨॥**

ಮೂಢ ನಂಬಿಕೆ ಸಮಾಜವನ್ನು ಹಾಳುಗೆಡುವುದಕ್ಕೆ ದಾರಿ ಮಾಡಿ ಕೊಡುತ್ತದೆ. ಮಾಯೆ, ಜಾದು, ಭೂ ಮಂತ್ರ, ಭಾನಾಮತಿಗಳೆಲ್ಲವೂ ಮನುಷ್ಯನ ಶಾಂತಿಯನ್ನು ಅಲ್ಲೋಲ ಕಲ್ಲೋಲ ಗೊಳಿಸುತ್ತವೆ. ಮುಠ್ಠಾಳರ ಮಾತಿಗೆ ಮರುಳಾದರೆ ಜೀವನ ನಿಸ್ಸಾರವಾಗುತ್ತದೆ. ಮಂತ್ರಕ್ಕೆ ಮಾವಿನಕಾಯಿ ಉದುರುತ್ತದೆಯೆ? ಇದೊಂದು ಕಣ್ಕಟ್ಟು! ಮೋಸಗಾರಿಕೆ!!

**"ಮಂತ್ರದಿಂದ ಮಳೆ ತರಿಸುವೊಡೆ**
**ಉಗ್ರರ ಮೇಲೆಕೆ ಉಪಯೋಗಿಸ ಬಾರದಯ್ಯಾ?**
**ಮಂತ್ರದಿಂದ ದೇವರನ್ನು ಪ್ರತಿಷ್ಠಾನ ಗೈದೊಡೆ**
**ಹರಡುತ್ತಿರುವ ಸಾರ್ಸ್, ಏಡ್ಸ್ ನಿಯಂತ್ರಿಸ ಬಾರದೇಕಯ್ಯಾ**
**ಮಂತ್ರದಿಂದ ಭೂತ ಪ್ರೇತ ಬಿಡಿಸುವಂತಿದ್ದೊಡೆ**
**ಒಡೆದ ಮನಗಳಿಗೇ ಒಗ್ಗೂಡಿಸ ಬಾರದೇಕಯ್ಯಾ?**
**ಮಂತ್ರದಿಂದ ಮಾವಿನಕಾಯಿ ಉದುರುತ್ತವೆಯೆ?**
**ಅನ್ನುವ ಮಾಯದಾಟ ಕಂಡು ನಗುವನಯ್ಯ! ನಮ್ಮ**
**ತಪೋವನ ಮಠಾಧೀಶ..**

ಜನತೆ ಮಾಟಗಾರರ ಮಾತನ್ನು ಆಲಿಸುವ ಮುನ್ನವೇ ಅವರನ್ನೇ ಪರೀಕ್ಷೆಗೆ ಒಳಪಡಿಸಲು ಧೈರ್ಯವಾಗಿ ಮುಂದಾಗಿ. ಆಗವರ ಅಸಲಿ ಬಣ್ಣ ಬಯಲಾಗುತ್ತದೆ. ಅದಕ್ಕಾಗಿ ಇಂಥವರ ಸಹವಾಸ ಇಲ್ಲವೇ ಮಾತಿನ ಮೋಡಿಯಿಂದ ದೂರವಾಗಿರಿ ಎಂದು ಆಲ್ದಾಳರು ಎಚ್ಚರಿಸುತ್ತಾರೆ. ತಮ್ಮ ವಚನಗಳ ಮುಖಾಂತರ ಜನರಿಗೆ ಒಳ್ಳೆಯ ತತ್ವಗಳನ್ನು ತಿಳಿಸಿದ್ದಾರೆ. ಅಂತಹ ಕಳಕಳಿಯ ವಚನಗಳನ್ನು "ವಚನ ವಾಹಿನಿ" ಗ್ರಂಥದಲ್ಲಿ ಅಡಕವಾಗಿವೆ.

**ಕಾಗೆ 'ಕಾ' ಎಂದೊಡೆ ಅಪಸ್ವರ ಎನ್ನುವರಯ್ಯ।**
**ಕೋಗಿಲೆಯ 'ಕುಹೂರ'ಕ್ಕೆ ಜಗವೆಲ್ಲ ಶಿರತೂಗಿತಯ್ಯ।**
**ಕಾಗೆ ಕಟ್ಟಿದ ಗೂಡಿನಲ್ಲಿ, ಕೋಗಿಲೆ ಮೊಟ್ಟೆ ಇಟ್ಟಿತಯ್ಯ।**
**ತನ್ನದೆಂದೂಹಿಸಿದ ಕಾಗೆ ಮರಿತೆಗಿತಯ್ಯ**
**ಗುಟುಕಿಕ್ಕಿ ಬೆಳೆಸಿದ ಕಾಗೆ ಹೆಚ್ಚೊ?**
**ಜಗಕೆ ಮರುಳು ಮಾಡಿದ ಕೋಗಿಲೆ ಹೆಚ್ಚೊ?**
**ನೀನೇ ಹೇಳಾ ತಪೋವನ ಮಠಾಧೀಶ... ॥೨೧॥**

" 'ವಚನವಾಹಿನಿ' ಹೆಸರೇ ಸೂಚಿಸುವಂತೆ ಅಲ್ಲಾಳಕವಿಗಳ ವಚನ ಪ್ರವಾಹವೆ ಇಲ್ಲಿದೆ. ಪ್ರವಾಹವನ್ನು ಅಳೆಯಲು ಹೇಗೆ ಸಾಧ್ಯವಿಲ್ಲವೋ ಹಾಗೆ ಇಲ್ಲಿಯ ವಚನಗಳ ವಿಷಯ ವ್ಯಾಪ್ತಿಯನ್ನು ಅಳೆಯಲು ಸಾಧ್ಯವಿಲ್ಲ. ಸಮಕಾಲಿನ ಬದುಕಿನ ನೂರಾರು ಅನುಭವಗಳನ್ನು ಶಿವಶರಣರ ವಚನಗಳ ಮಾದರಿಯಲ್ಲಿ ತಮ್ಮ ಅನುಭಾವದ ಮೂಸೆಯಲ್ಲಿ ಹಾಕಿ ಅವುಗಳಿಗೆ ಕಾವ್ಯಲೇಪನ ನೀಡಿ ಪೋಣಿಸಿ, ಸುಂದರ ವಚನಮಾಲೆಯನ್ನು ಶ್ರೀ ಆಲ್ದಾಳರು ಇಲ್ಲಿ ನೀಡಿದ್ದಾರೆ" [೨೦೩]

"ವಚನಗಳು ಓದಿದಂತೆ ಆಲ್ದಾಳರ ಪ್ರತಿಭೆ ಎದ್ದು ಕಾಣುತ್ತದೆ. "ಅತ್ತ ಅಫಜಲಪೂರ ತಾಲೂಕಿನ ಶ್ರೀ ಮಹಾಂತೇಶ್ವರ ಮಠ "ನಾಟ್ಯ ಕವಿ ರತ್ನ" ಪ್ರಶಸ್ತಿ ನೀಡಿದರೆ, ಇತ್ತ ಕುಕನೂರಿನ ಚೆನ್ನ ಮಲ್ಲೇಶ್ವರ ಮಠ "ವೀರಶೈವ ಸಾಹಿತ್ಯರತ್ನ" ಪ್ರಶಸ್ತಿ ನೀಡಿ ಗೌರವಿಸಿದೆ. ಒಂದು ಕಡೆ ಶಾಹಪೂರ ಫಕೀರೇಶ್ವರ ಮಠ " ಸಗರ ಸಾಹಿತ್ಯ ರತ್ನ" ಪ್ರಶಸ್ತಿ ಕರುಣಿಸಿದರೆ ಮತ್ತೊಂದು ಕಡೆ ಗದುಗಿನ ವೀರೇಶ್ವರಾಶ್ರಮ "ಶರಣ ಸಾಹಿತ್ಯರತ್ನ" ಪ್ರಶಸ್ತಿ ದಯಪಾಲಿಸಿದೆ. ಹೀಗೆ ಅವರ ಪ್ರತಿಭೆ ನಾನಾ ದಿಕ್ಕಿನಿಂದ ಪುರಸ್ಕಾರಗೊಂಡಿದೆ. ಇಂಥ ಸಾಹಿತ್ಯ ರತ್ನ ವ್ಯಕ್ತಿ ಕನ್ನಡ ಸಾಹಿತ್ಯ ರತ್ನಗಳಂತಿರುವ ವಚನ ಸಂಕಲನಗಳನ್ನು ಹೊರತರುವುದು ಏನಾಶ್ಚರ್ಯ!" [೨೦೪]

ಆಲ್ದಾಳರು 'ವಚನ ವಾಹಿನಿ'ಯಲ್ಲಿ ಕಾಣಿಸಿದ ವಚನಗಳ ಮೂಲಕ ಸಮಾಜಕ್ಕೆ ಉತ್ತಮ ಸಂದೇಶ ನೀಡಿದ್ದಾರೆ. ಅಲೆಮಾರಿಗಳಾಗದಿರಿ, ಕಾಯಕವೇ ಕೈಲಾಸವೆಂದು ನಿಮ್ಮ-ನಿಮ್ಮ ಕೆಲಸದಲ್ಲಿ ತೊಡಗಿ ಜೀವನ ರಥ ಸರಳವಾಗಿ ಎಳೆಯಿರಿ ಎಂದು ಹೇಳಿದ್ದಾರೆ.

" 'ವಚನ ವಾಹಿನಿ' ಎಂಬ ಆಲ್ದಾಳರ ಕೃತಿಯು ವಚನಸಾಹಿತ್ಯದ ನಿರಂತರತೆಯನ್ನು ಸೂಚಿಸುವಂತಿದೆ. ಹನ್ನೊಂದನೆಯ ಶತಮಾನದ ದೇವರ ದಾಸಿಮಯ್ಯನಿಂದ ಪುಟಿದೆದ್ದ ಈ ಸೆಲೆ ಈ ಹೊತ್ತು ಬತ್ತದ ಝುರಿಯಾಗಿ ಹರಿಯುತ್ತಿದೆ. ಶರಣರ ನಡೆಯೆ ನುಡಿಯಾಗಿ ನೆಲೆಗೊಂಡು ಚಿರಂತನ ಸಾಹಿತ್ಯ ವಿಶ್ವಮಾನ್ಯತೆ ಪಡೆದ ಅಪರೂಪದ ಕನ್ನಡ ಆಸ್ತಿ ಸರಳ ಬಂಧುರ ಶಿವನುಡಿ."[೨೦೫]

ಅಲ್ದಾಳರ ವಚನಗಳು ನಿಜವಾಗಿಯೂ ಕುಸುಮದ ಕುಡಿಗಳು, ವೈಚಾರಿಕ ಕಿಡಿಗಳು ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುವಲ್ಲಿ ಸಹಕಾರಿಯಾಗಿವೆ. ಮಾನವ ಜನ್ಮಕ್ಕೆ ಬಂದ ಮೇಲೆ ತನ್ನ ತಾನರಿಯುವುದು ಮನುಷ್ಯ ಜನ್ಮದ ಸಾರ್ಥಕತೆ.

**ಆಚಾರದಿಂದ ಹಾದಿ ಹಸನಗೊಳಿಸಿದರು**
**ಹಾರಕೂಡ ಶ್ರೀ ಚೆನ್ನಬಸವ ಶಿವಯೋಗಿಗಳಯ್ಯ!**
**ಕಾಯಕಯೋಗದಿಂದ ಶರಣರೆಂದೆನಿಸಿದರು**
**ಶಹಪೂರ ಚರಬಸವ ತನವರಯ್ಯಾ!**
**ಶಿವಯೋಗವ ಸಾಧಿಸಿ ಶಿವಯೋಗಿಗಳಾದರು**
**ಜೇವರ್ಗಿ ಷಣ್ಮುಖ ಸ್ವಾಮಿಗಳಯ್ಯ!**

**ಬೇಕುಬೇಡೆಂಬುದಳಿದು ದಿಗಂಬರರಾದರು**
**ಶಕಾಪೂರ ತಪೋವನಧೀಶ ವಿಶ್ವಾರಾಧ್ಯರಯ್ಯ!**

ಹೀಗೆ ಹೇಳುತ್ತಲೇ ನಾಲವಾರ ಕೋರಿಸಿದ್ಧೇಶ್ವರರು, ಮಳಖೇಡದ ಕಾರ್ತಿಕೇಶ್ವರರು ಭರತನೂರು ಗುರುನಂಜೇಶ್ವರರು ಹೀಗೆ ಹಲವು ಮಠಾಧೀಶರನ್ನು ಭಕ್ತಿಯಿಂದ ಸ್ಮರಿಸುತ್ತಾರೆ. ಆಲ್ದಾಳರು ಹೈದ್ರಾಬಾದ ಕರ್ನಾಟಕದಲ್ಲಿರುವ ಸಕಲ ಮಠ. ಮಾನ್ಯರನ್ನು ಕಂಡು ಭೇಟಿ ಮಾಡಿದವರಾಗಿದ್ದಾರೆ. ಮಠಗಳೇ, ಪೀಠಾಧಿಪತಿಗಳೇ ಆಲ್ದಾಳರ ಜೀವಾಳ ಎಂದರೆ ಅತಿಯೋಕ್ತಿ ಅಲ್ಲ. ಇವರಲ್ಲಿನ ಕವಿಗಳ ವೀರಶೈವ ಭಕ್ತಿ ಇಲ್ಲಿ ಸ್ಥಾಯಿಯಾಗಿದೆ. ಅನುಭವ ಇಲ್ಲಿನ ವಚನಗಳಲ್ಲಿ ಹರಳುಗಟ್ಟಿದೆ. ಹೀಗೆ ಈ ವಚನಗಳಲ್ಲಿ ಏನೆಲ್ಲವೂ ಇದೆ.

" 'ವಚನ ವಾಹಿನಿ' ಗ್ರಂಥದ ಬಗ್ಗೆ ಆಲ್ದಾಳರು ಹೀಗೆ ಬರೆಯುತ್ತಾರೆ ತಮ್ಮ ನಲುಮೆಯನುಡಿಯಲ್ಲಿ– 'ವಚನ ವಾಹಿನಿ' ಪುಸ್ತಕವನ್ನು ತಮ್ಮೆಲ್ಲರ ಕೈಗೆ ಒಪ್ಪಿಸಲು ಆನಂದವಾಗುತ್ತಿದೆ. ನಾನೇನು ಸಾಹಿತಿಯು ಅಲ್ಲ, ವಚನಕಾರನು ಅಲ್ಲ, ತತ್ವ ಪದಕಾರನು ಅಲ್ಲ, ಆದರೆ ಇಷ್ಟು ಮಾತ್ರ ನಿಜ 'ನನ್ನನಾ' ತಿಳಿದು ಕೊಳ್ಳುವ ಸಾಧನ ಮಾರ್ಗಲ್ಲಿದ್ದವನು. ನನ್ನ ಸುತ್ತ ಮುತ್ತಲಿನ ಪರಿಸರ, ಕಣ್ಣಿಗೆ ಕಂಡ ಅಸಾಹಾಯಕ ದೃಶ್ಯ, ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುವ ಅತ್ಯಾಚಾರ ವರದಿಗಳು, ಅನಾಚಾರ, ಭ್ರಷ್ಟಾಚಾರ ಹೀಗೆ ಜನಪದರಿಂದ ವಾಹಿನಿಯಾಗಿ ಹರಿದು ಬರುತ್ತಿರುವ ನುಡಿಗಟ್ಟಿಗಳೇ ಮಡುಗಟ್ಟಿ ಮಂಥನಗೊಂಡು ನವನೀತವಾಗಿ ಹೊರ ಬಂದುದೆ ಈ ವಚನ ವಾಹಿನಿ." [೨೦೬]

'ವಚನ ವಾಹಿನಿ' ಹೊತ್ತಿಗೆಗೆ ಶ್ರೀಮದ ರಂಭಾಪುರಿ ವೀರಸಿಂಹಾಸನಾಧೀಶ್ವರ ಪ್ರಸನ್ನ ರೇಣುಕ ವೀರಸೋಮೇಶ್ವರ ರಾಜ ದೇಶಿ ಕೇಂದ್ರ ಶಿವಾಚಾರ್ಯ ಭಗವತ್ಪಾದರು ತಮ್ಮ ಶುಭಾಶೀರ್ವಾದ ಸಂದೇಶದಲ್ಲಿ ಕೆಳಗಿನಂತೆ ಹೇಳಿದ್ದಾರೆ.

"ಬದುಕು ಎಂಬುದು ಬಲು ಸುಂದರ, ಜೀವನ ಅಮೂಲ್ಯ, ಪೂರ್ವಜರ ಆದರ್ಶವಿಚಾರಗಳು ದಾರಿದೀಪ. ಹರಿಯುವ ನೀರಿನಲ್ಲಿ, ಬೀಸುವ ಗಾಳಿಯಲ್ಲಿ, ಭೂಮಿಯಲ್ಲಿ, ಬೆಳಗುವ ಸೂರ್ಯನಲ್ಲಿ ಧರ್ಮವಿದೆ... ಆಚಾರ್ಯರು, ಸಂತರು ಮತ್ತು ಮಹಾತ್ಮರು ಮಾನವ ಕಲ್ಯಾಣಕ್ಕಾಗಿ ತಮ್ಮ ಅಮೂಲ್ಯ ಚಿಂತನಗಳನ್ನು ವಚನಗಳ ಮೂಲಕ ಜನ ಸಮುದಾಯಕ್ಕೆ ಅರಿವನ್ನುಂಟು ಮಾಡಿದ್ದಾರೆ. ಶ್ರೀ ವಿಶ್ವಾರಾಧ್ಯರ ತಪೋವನ ಮಠದ ಶ್ರೀ ಸಿದ್ಧರಾಮ ಶಿವಾಚಾರ್ಯರು ಶಕಾಪೂರ ಇವರು ಆಲ್ದಾಳ ಕವಿಗಳ ಮೂಲಕ ವಚನ ವಾಹಿನಿ ಕೃತಿಯನ್ನು ರಚಿಸಿ ಭಕ್ತರ ಕೈಗೆ ಇತ್ತಿದ್ದಾರೆ. ಓದುಗ ಭಕ್ತ ಸಮುದಾಯಕ್ಕೆ ಮಂಗಲವಾಗಲಿ."

# ಶಕಾಪುರ ತಪೋವನ ದರ್ಶನ

**ಮಧ್ಯರಾತ್ರಿಯಲಿ ಎದ್ದು ಹೋದವನೊಬ್ಬ ಬುದ್ಧ ।**
**ಮಧ್ಯಾಹ್ನದ ಉರಿಬಿಸಿಲಿನಲ್ಲಿ ಗಿರಿಯೇರಿದವನೊಬ್ಬ ಸಿದ್ಧ ॥**
**ಒಬ್ಬ ಬೋಧಿ ವೃಕ್ಷದ ಕೆಳಗೆ ಕುಳಿತು ಗೌತಮಬುದ್ಧನಾದ ।**
**ಇನ್ನೊಬ್ಬ ಮುತ್ತಲ ಮರದಡಿಯಲಿ ಕುಳಿತು ವಿಶ್ವರೂಪನಾದ ॥**
**ಒಬ್ಬ ರಾಜ್ಯ ತೊರೆದು ಸನ್ಯಾಸಿಯಾದ ।**
**ಇನೊಬ್ಬ ಮನೆ ತೊರೆದು ಶಿವಾಚಾರ್ಯನಾದ ॥**
**ಇವರೀರ್ವರ ಸ್ವರೂಪ ಬೇರೆ ಬೇರೆ ಯಾದರೂ ।**
**ತತ್ವ ಸಿದ್ಧಾಂತ ಒಂದೇ ಎಂದ ನಮ್ಮ ತಪೋವನ ಮಠಾಧೀಶ ॥**
**(ವಚನ ವಾಹಿನಿ :ಎಲ್.ಬಿ.ಕೆ. ಆಲ್ದಾಳ)**

ಅಂದು ಮಹಾರಾಜಾ ಸಿದ್ಧಾರ್ಥನು ಮಧ್ಯರಾತ್ರಿಯಲ್ಲಿ ಹೆಂಡತಿ ಮಗುವನ್ನು ಬಿಟ್ಟು ಬೋಧಿ ವೃಕ್ಷದ ಕೆಳಗೆ ಕುಳಿತು ಗೌತಮ ಬುದ್ಧನಾಗಿ ಬಂದಿದ್ದ, ಮಧ್ಯಾಹ್ನದ ಉರಿಬಿಸಿಲಿನಲ್ಲಿ ಪಶ್ಚಿಮದ ಗಿರಿಯೇರಿ ವಿಶ್ವಾರಾಧ್ಯರ ತಾಣದಲ್ಲಿ ಕುಳಿತು ಮುತ್ತಲ ಮರದ ಕೆಳಗೆ ವಿಶ್ವರೂಪನಾದ. ಒಬ್ಬ ರಾಜ್ಯ ತೊರೆದು ಸನ್ಯಾಸಿಯಾದ. ಇನೊಬ್ಬ ಮನೆ ತೊರೆದು ಶಿವಾಚಾರ್ಯನಾದ. ಇವರೀರ್ವರ ತೊರೆಯುವಿಕೆ ಬೇರೆಯಾಗಿದ್ದರೂ ತತ್ವ ಸಿದ್ಧಾಂತ ಒಂದೇ ಬಗೆಯಾಗಿತ್ತು.

ತಪೋಭೂಷಣ ಶ್ರೀ.ಷ.ಬ್ರ.ಸಿದ್ಧರಾಮ ಶಿವಾಚಾರ್ಯರು ತಮ್ಮ ೨೫ ವರ್ಷಗಳಲ್ಲಿ ೭೫ ವರ್ಷಗಳ ಸಾಧನೆಯನ್ನು ಮಾಡಿದ ತತ್ಫಲವೇ ಈ 'ತಪೋವನದರ್ಶನ' ಇದ್ದದ್ದು ಇದ್ದಂತೆ ಬರಹದ ಮೂಲಕ ತೋರಿದ್ದೇನೆ, ಇದಕ್ಕೆ ಬಣ್ಣ ಕೊಟ್ಟಿಲ್ಲ, ಶಬ್ಧ ಶೃಂಗಾರವಿಲ್ಲ. ಅವರ ಸತತ (i) ಪರಿಶ್ರಮ (ii)ಪ್ರಯತ್ನ(iii)ತ್ಯಾಗ ಈ ಮೂರು ಯೋಗವಾಗಿ ಪರಿಣಮಿಸಿದ್ದೆ "ತಪೋವನ ದರ್ಶನ"ಕ್ಕೆ ನಾಂದಿ ಎಂದು ಆಲ್ದಾಳರು ಬರೆದುಕೊಂಡಿದ್ದಾರೆ.

ಪರಮಗುರು ವಿಶ್ವರಾಧ್ಯರ ಕಾಯಕಭೂಮಿ, ದಾಸೋಹ ಭೂಮಿ, ತಪೋಭೂಮಿ ಶಕಾಪುರವಾಗಿತ್ತು. ಅವರ ತಂಗಿ ಸಿದ್ಧಮ್ಮ ಗುರುತಾಯಿಯವರ ಮರಿ ಮೊಮ್ಮಗ ಬಾಲ ಸಿದ್ಧರಾಮನಿಗೆ ತನ್ನ ಮದುವೆಗೆ ಒಪ್ಪಿಗೆ ನೀಡದೇ ಸನ್ಯಾಸಿ ಯಾಗಬೇಕೆಂದು ಜಿದ್ದಿನೊಂದಿಗೆ ಶ್ರೀ ವಿಶ್ವಾರಾಧ್ಯರ ತಪೋವನವನ್ನು ಪ್ರವೇಶಿಸಿದರು ಬಾಲ ಶಿವಯೋಗಿ ! ಶ್ರೀ ವೇದ ಮೂರ್ತಿ ಮಲ್ಲಿನಾಥಸ್ವಾಮಿ ಶ್ರೀಮತಿ ಸಾವಿತ್ರಿಯಮ್ಮನವರ ಪುಣ್ಯ ಗರ್ಭದಿಂದ ಹಿರಿಯಮಗನಾಗಿ ಸಿದ್ಧರಾಮ ಜನ್ಮ ತಾಳಿದವರು.

ಚಿಕ್ಕವರಾಗಿರುವಾಗಲೇ ಶ್ರೀವಿಶ್ವರಾಧ್ಯರ ನಾಮಸ್ಮರಣೆ ಮಾಡುತ್ತ,ಭಜನೆಮಾಡುತ್ತ ತಮ್ಮನ್ನು ತಾವೇ ಮರೆಯುತ್ತಿದ್ದರು.ಬಾಲಯೋಗಿ ಸಿದ್ದರಾಮರು ಕಲಿತದ್ದು ಕೇವಲ ಎರಡನೇ ತರಗತಿ. ಆದರೆ ಅವರು ಲೋಕಾನುಭವದ ಪರಿಪಾಕವನ್ನು ಅರಿತವರಾಗಿದ್ದ ಪ್ರಯುಕ್ತ ಯಾವ ಭಯ–

ಭೀತಿ ಅವರ ಹತ್ತಿರ ಸುಳಿಯಲಿಲ್ಲ. ಒಂದು ದಿನ ಮಧ್ಯಾಹ್ನದ ಉರಿಬಿಸಿಲಲ್ಲಿ ಜಾಗಟಿಯೊಂದನ್ನು ಕೈಯಲ್ಲಿಡಿದು ಪಶ್ಚಿಮಗಿರಿ ಏರಿದರು. ಶ್ರೀವಿಶ್ವಾರಾಧ್ಯರ ತಪೋವನದಲ್ಲಿ ತೆರಳಿ ವಾಸ್ತವ್ಯ ಮಾಡಿದರು.ಅವರು ಮರಳಿ ಊರೊಳಗೆ ಹೋಗಲಿಲ್ಲ.

**ಪಶ್ಚಿಮದಗಿರಿಯಲ್ಲಿ ಕುಡಿಯೊಡೆದ**
**ಗಿರಿವನವನ್ನು ಕಂಡರಯ್ಯ!**
**ಹಲವು ಹೂಗಳ ಮೇಲಾಡುವ**
**ಭೃಂಗದ ಗುಂಜಾರವ ಕೇಳಿದರಯ್ಯ!**
**ಸುಸ್ವರ ಆಲಿಸಿದರಯ್ಯ!**
**ಸಿದ್ದರಾಮಶಿವಯೋಗಿಗಳು ಆಲಿಸುತ**
**ವನವ ಹೊಕ್ಕವರು ಮರಳಿ ಬರಲಿಲ್ಲ ನೋಡಾ!**
**ತಪೋವನ ಮಠಾಧೀಶ (ವಚನ ವಾಹಿನಿಯಿಂದ;ಆಲ್ದಾಳ)**

ಬಾಲಶಿವಯೋಗಿಗಳ ಒಂದೊಂದು ಆಶಯಗಳು ಈಡೇರುತ್ತಲಿದ್ದವು. ತಪೋವನದ ಸಿರಿ ಹರವಿ ಕೊಂಡಿತು. ದಿನಾಲು ನೂರಾರು ಭಕ್ತರು ಬಂದು ವಿಶ್ವಾರಾಧ್ಯರ ಗದ್ದುಗೆ ದರ್ಶನ ಭಕ್ತಿಯಿಂದ ಪಡೆಯುತ್ತಿದ್ದರು.

ಬಾಲಶಿವಯೋಗಿಗಳ ತಾತನವರಾದ ಶ್ರೀ ವಿಶ್ವಾರಾಧ್ಯರು ದೈವಿ ಪುರುಷರು ತಮ್ಮ ತಪಃ ಶಕ್ತಿಯಿಂದ ನಾಡನ್ನು, ರಾಷ್ಟ್ರವನ್ನು ಬೆಳಗಿಸಿದವರು. ತಮ್ಮ ಸಾಧನೆಯಿಂದ, ಸಿದ್ಧಿಯಿಂದ ಕಷ್ಟ, ನೋವು, ದುಃಖಗಳಲ್ಲಿ ಬೆಂದವರನ್ನು ಉದ್ದರಿಸಿದರು. ಅವರ ಬದುಕು ದಿವ್ಯ ಸಂಕೇತ.

ಈ ನಾಡಿಗೆ, ಈ ನಿಟ್ಟಿಗೆ ವಿಶಿಷ್ಟ ರೀತಿಯ ಬದುಕನ್ನು ಕೊಟ್ಟವರೇ ಶಕಾಪುರದ ಶ್ರೀವಿಶ್ವಾರಾಧ್ಯರು. ಅವರ ಸತಿಮಣಿ ಬಸಮ್ಮ ಗುರುತಾಯಿಯವರು ಜಂಗಮಕ್ಕೆ ಜಾತಿ ಮತಗಳಿಲ್ಲ ಜಂಗಮಕ್ಕೆ ನಾಮ ಸೀಮೆಗಳಿಲ್ಲ ಜಂಗಮಕ್ಕೆ ತಂದೆ ತಾಯಿಗಳಿಲ್ಲ, ಜಂಗಮಕ್ಕೆ ಬಂದು ಬಳಗವಿಲ್ಲ ಜಂಗಮ ಅದೊಂದು ನಿರಾಕಾರ, ನಿರವಯ, ನಿರಾವಲಂಬಿ, ನಿರ್ಲೇಪ, ನಿಶೂನ್ಯ, ನಿಃಶಬ್ಧ ಜಂಗಮಕ್ಕೆ ಇನ್ನೊಂದು ಅರ್ಥದಲ್ಲಿ ಅದೊಂದು ಎಲ್ಲವನ್ನು ಒಳಗೊಂಡ ಜಂಗಮ ಆಸ್ತಿ ಎಂದು ಕರೆಯುತ್ತಾರೆ. ಒಟ್ಟಾರೆ ಅದೊಂದು ಸಾಂಕೇತಿಕ ಶಬ್ಧ. ಅಂತೆಯೇ ವಿಶ್ವಾರಾಧ್ಯರು ಜಂಗಮದಲ್ಲಿ ಹುಟ್ಟಿ, ಜಂಗಮದಲ್ಲಿ ಬೆಳೆದು, ಜಂಗಮವನ್ನಳಿದು, ಜಗದ ಜಂಗಮತ್ವವನ್ನು ತಮ್ಮ ಇಡಿ ಬದುಕನ್ನೇ ಜಂಗಮವನ್ನಾಗಿಸಿದ್ದರು.

ಹೀಗೆ ನಿರಂತರವಾಗಿ ಈ ಸತಿ–ಪತಿಗಳ ಬದುಕು ಕೊನೆಗೂ ವಿಶ್ವಾರಾಧ್ಯರು ಸಿದ್ಧರಾಮ ದೇವರ ಮದುವೆ ಮಾಡುವಲ್ಲಿ ಯಶಸ್ವಿಯಾದರು. ವಿಶ್ವಾರಾಧ್ಯರು ಸತಿ ಬಸಮ್ಮರನ್ನು ಶಕಾಪೂರಕ್ಕೆ ಕಳುಹಿದ ಕೆಲವೇ ದಿನಗಳಲ್ಲಿ ಲಿಂಗೈಕ್ಯರಾದರು. ಮುಂದೆ ಅಬ್ಬೆತುಮಕೂರಿನಲ್ಲಿ ವಿಶ್ವಾರಾಧ್ಯರು ಲಿಂಗೈಕ್ಯರಾದರು. ಈ ಸತಿ–ಪತಿಗಳ ಜಾತ್ರೆ ವಿಶ್ವಕ್ಕೆ ಮಾದರಿಯಾಗಿದೆ.

**ಅಂಬರವೇ ಹೊದ್ದಾನ । ಅಂಬರವೇ ಹಾಸ್ಯಾನ ।**
**ಅಂಬರವೇ ತಾನಾಗಿ ಚಲಿಸಾನ । ವಿಶ್ವಾರಾಧ್ಯ ।**
**ಅಬ್ಬೆ ತುಮಕೂರದಿ ನೆಲಿಸ್ಯಾನ ।**

" ಅಬ್ಬೆ ತುಮಕೂರಿನ ಶ್ರೀ ವಿಶ್ವಾರಾಧ್ಯರು ಶ್ರೀ ಕಾಶೀಕ್ಷೇತ್ರದ ಮೂಲ ವಿಶ್ವಾರಾಧ್ಯ ಪೀಠದ ಜಂಗಮವಾಡಿ ಮಹಾಮಠದಲ್ಲಿ ವಾಸ್ತವ್ಯಮಾಡಿ ಉನ್ನತ ಸಂಸ್ಕೃತ ಅಧ್ಯಯನ ಗೈದು ವಿದ್ವಾಂಸ ರಾದರಷ್ಟೇ ಅಲ್ಲ, ಮಹಾನ ತಪಸ್ವಿಗಳೂ ಆದರು. ವಿದ್ಯಾ, ತಪಸ್ಸು ಹಾಗೂ ತ್ಯಾಗಗಳು ಅವರಲ್ಲಿ ಮುಪ್ಪುರಿಗೊಂಡು ಅವರೊಬ್ಬ ವಿಶ್ವಚೇತನರಾಗಿ, ವಿಶ್ವಮಾನವ ಕಲ್ಯಾಣವನ್ನು ಬಯಸಿ ತಮ್ಮ ಜೀವಿತಾವಧಿಯಲ್ಲಿ ಭಕ್ತೋದ್ಧಾರ ಮಾಡಿದರಲ್ಲದೇ ಇಂದು ಅವರು ಪಾರ್ಥಿವ ದೇಹವನ್ನು ತ್ಯಾಗ ಮಾಡಿದ್ದರೂ ಅವರ ಅಮರವಾದ ಆತ್ಮ ಇಂದಿಗೂ ಭಕ್ತರ ಮನೋಬಯಕೆಯನ್ನು ಪೂರ್ಣಮಾಡುತ್ತಿರುವುದಕ್ಕೆ ಹಲವು ಕಡೆ ನಿರ್ಮಾಣಗೊಂಡ ಅವರ ಮಂದಿರಗಳೇ ಸಾಕ್ಷಿ. ಕರ್ನಾಟಕ–ಆಂಧ್ರ ಪ್ರದೇಶಗಳಲ್ಲಿ ಶ್ರೀ ವಿಶ್ವಾರಾಧ್ಯರ ಪ್ರೇರಣೆಹೊಂದಿ ಅವರ ಭಕ್ತರು ಒಟ್ಟಾರೆ ೨೦ ಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಮಂದಿರಗಳನ್ನು ನಿರ್ಮಿಸಿದ್ದಾರೆ". [೨೦೭]

ಶ್ರೀ ವಿಶ್ವಾರಾಧ್ಯರ ನಂತರ ಸಿದ್ಧರಾಮ ಶಿವಯೋಗಿಗಳು ಅವರ ಸತಿ ಶರಣಮ್ಮ ಗುರುತಾಯಿ ಅವರು ಅವರ ಪರಂಪರೆಯಲ್ಲಿ ನಡೆದು ಅನಂತ ವಿಶ್ವಬಂಧುಗಳನ್ನು ಶಿಷ್ಯರನ್ನಾಗಿ ಮಾಡಿಕೊಂಡರು

**ಮಲ್ಲೀಗಿ ಹೂ ತಂದು । ಮೆಲ್ಲಗೆ ಏರಿಸುವೆ**
**ಅಲ್ಲಮನವತಾರಿ ನೀನಯ್ಯಾ । ವಿಶ್ವಾರಾಧ್ಯ ।**
**ಸೊಲ್ಲು ಸೊಲ್ಲೀಗಿ ನೆನದೇವ ।**

ಎಂದು ಹೆಜ್ಜೆ ಹೆಜ್ಜೆಗೂ ವಿಶ್ವಾರಾಧ್ಯರ ಸ್ಮರಣೆ ಮಾಡುತ್ತ ಒಕ್ಕಲುತನ ಕಾಯಕ ಮುಂದುವರಿಸಿದ ಸಿದ್ಧರಾಮ ಶಿವಯೋಗಿಗಳು ಅನೇಕ ಸಮಾಜ ಮುಖಿ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡರು. " ಸಮಾಜ ಸೇವೆ ಶಿವಪೂಜೆಗಿಂತಲೂ ಶ್ರೇಷ್ಠವಾದದ್ದು" ಜನರು ಮೋಸ, ಕೊಲೆ, ವಂಚನೆಯಿಂದ ದೂರವಾಗಿದ್ದು ಸತ್ಯಧರ್ಮದ ತಳಹದಿಯ ಮೇಲೆ ನಡೆಯಬೇಕು ಎಂದು ಬೋಧಿಸುತ್ತಿದ್ದರು.

**ಕಾಡು ಕಡಿದು ನಾಡು ಮಾಡಿದನಯ್ಯಾ।**
**ನೀರು ಹೊತ್ತು ತಪೋವನ ಬೆಳೆಸಿದನಯ್ಯಾ।**
**ಕಲ್ಲು ಹೊತ್ತು ವಿಶ್ವಮಂದಿರ ಕಟ್ಟಿಸಿದನಯ್ಯಾ।**
**ಜೋಳಿಗೆಯಿಂದ ದಾಸೋಹ ನಡೆಸಿದನಯ್ಯಾ।**
**ಈ ನಾಡು ಕಂಡ ಶಿವಯೋಗಿ ಸಿದ್ಧರಾಮ**
**ಶಿವಾಚಾರ್ಯರೆಂದಿಸಿದರಯ್ಯಾ ತಪೋವನ ಮಠಾಧೀಶ।**

ಶ್ರೀ.ಷ.ಬ್ರ.ಸಿದ್ಧರಾಮ ಶಿವಾಚಾರ್ಯರು ಭಕ್ತರಿಂದ ಬಂದ ಕಾಣಿಕೆಯಿಂದ ಅಭಿವೃದ್ಧಿಕಾರ್ಯ ಕೈಕೊಂಡರು. ಯಾವುದೇ ವಿಘ್ನಗಳು ಎದುರಾದರೂ ಅವುಗಳನ್ನು ಶಾಂತಿಯಿಂದಲೇ ಬಗೆ ಹರಿಸುತ್ತಿದ್ದರು. "ಎಷ್ಟು ಕಾಡತಿ ಕಾಡವ್ವ ನೀ ಕಾಡಿದಷ್ಟೂ ಎನಗೆ ಪಾಡವ್ವ" ಎಂಬ ತತ್ವಗೀತೆಗೆ ಒಗ್ಗಿಕೊಂಡರು.

ಇವರು ಕೃಷಿ–ಋಷಿ, ಸಂಗೀತ ಶಿವಯೋಗಿ, ಶಿಕ್ಷಣ ಪ್ರೇಮಿ ಯೋಗದೆಡೆಗೆ ಒಲವು, ಜೋಡು ತೇರೆಳಿಸಿದ ಶ್ರೀಗಳು ಹೌದು. ಜಾತ್ರೆ ಶೀವರಾತ್ರಿ ನಂತರ ೯ ನೇ ದಿವಸಕ್ಕೆ ಜರಗುತ್ತದೆ.

**ಜೋಡು ತೇರಿನಕಳಸ। ಮಾಡ್ಯಾರ ಬಲುಸೊಗಸ।**
**ನೋಡುವ ಕಂಗಳಿಗೆ ಹಬ್ಬೂಟ। ಸಿದ್ಧರಾಮ।**
**ಜೋಡು ತೇರಿನ ಮಧ್ಯ ನಿಂತಾರ।**

ಶ್ರೀ.ಷ.ಬ್ರ. ಸಿದ್ಧರಾಮ ಶಿವಯೋಗಿಗಳಿಗೆ ಬೇಸರವೆಂಬುವದೇ ಇಲ್ಲ. ನಿತ್ಯ ತಪೋವನ ದರ್ಶನ, ಪ್ರದಕ್ಷಿಣೆ, ಬೆಳೆದುನಿಂತ ಬೆಳೆಕಂಡು ಆನಂದಿಸುವುದು. ಒಟ್ಟಾರೆ ಬಿಡುವಿಲ್ಲದವರಾಗಿ ಈ ನಾಡಿಗೆ ಕೀರ್ತಿತಂದಿದ್ದಾರೆ. ಗುಲಬರ್ಗಾ ವಿಶ್ವವಿದ್ಯಾಲಯ ಶಿವಯೋಗಿಗಳಿಗೆ "ಗೌರವ ಡಾಕ್ಟರೇಟ" ಪದವಿ ನೀಡಿ ವಿ.ವಿ. ತನ್ನ ಹೆಸರನ್ನು ಉಜ್ವಲ ಗೊಳಿಸಿಕೊಂಡಿದೆ. ಲೇಖಕರಾದ ಆಲ್ದಾಳರು 'ಶಕಾಪೂರದ ತಪೋವನ ದರ್ಶನ'ವಷ್ಟೇ ಮಾಡಿಸದೇ, ಮಾನವ ಮಾನವನಾಗಿ ಸಮಾಜದಲ್ಲಿ ಹೇಗೆ ಬಾಳು ನಡೆಸಬೇಕೆಂಬುದನ್ನು ತೋರಿಸಿಕೊಟ್ಟಿದ್ದಾರೆ.

**'ಸರ್ವೆ ಜನಃ ಸುಖಿನೋ ಭವತು'**

# ಎಲ್.ಬಿ.ಕೆ ಮನದಂಗಳದ ತತ್ವಗೀತೆಗಳು, ತತ್ವಪದಗಳು

ತತ್ವ ಎಂದರೆ ಸಾಮಾನ್ಯ ಅರ್ಥದಲ್ಲಿ ಸಿದ್ಧಾಂತ, ನೀತಿ, ನಿಯಮ ಎಂದಾದರೆ ತತ್ವಪದಕಾರರ ದೃಷ್ಟಿಯಲ್ಲಿ ಬ್ರಹ್ಮಜ್ಞಾನ ಪರಮಾತ್ಮನ ಸ್ವರೂಪವೇ ಆಗಿರುವ ಆತ್ಮನ ಸ್ವರೂಪ. ನಿಜ ಸ್ಥಿತಿಯನ್ನು ಕಂಡುಕೊಳ್ಳಲು ಇರುವ ಸತ್ಯಮಾರ್ಗ. ಪರಮಾತ್ಮನನ್ನು ಸಾಕ್ಷಾತ್ಕರಿಸಲು ಇರುವ ದಾರಿ ಎಂದಾಗುತ್ತದೆ. ದೇವರನ್ನು ಸಾಕ್ಷಾತ್ಕರಿಸಿಕೊಳ್ಳಲು ಇರುವ ಮಾಧ್ಯಮವೇ ತತ್ವಪದ.

ಈ ತತ್ವಪದಗಳಿಗೆ ಅನುಭಾವ ಪದಗಳೆಂದು, ಇವುಗಳನ್ನು ರಚಿಸುವವರಿಗೆ ಅನುಭಾವಿ ಎಂದು ಕರೆಯುತ್ತಾರೆ. ಈ ಅನುಭಾವ ಹಾಡುಗಳು ಎಕ್ತಾರಿಯ ಜೊತೆಗೆ ಏಕಾಂತದಲ್ಲಿ ಕುಳಿತು ಧ್ಯಾನಿಸುವ ಹಾಡುಗಳಾಗಿದ್ದು, ಇವೇ ಹಾಡುಗಳನ್ನು ಸಮೂಹ ಮಧ್ಯದಲ್ಲಿ ಬಂದಾಗ ಭಜನೆಯ ಪದಗಳಾದವು, ಅನುಭವ ಹಾಡುಗಳಾದವು, ಇವುಗಳನ್ನೇ 'ತತ್ವ' ಪದಗಳೆಂದು ಕರೆಯುತ್ತೇವೆ.

ನಿಜಗುಣ ಶಿವಯೋಗಿಗಳ ಕೈವಲ್ಯ ಪದ್ಧತಿ, ಸರ್ಪಭೂಷಣ ಶಿವಯೋಗಿಗಳ ಕೈವಲ್ಯ ಕಲ್ಪವಲ್ಲರಿ, ಚಿದಾನಂದಾವಧೂತರ ಕೈವಲ್ಯ ನವನೀತ, ಮುಪ್ಪಿನ ಷಡಕ್ಷರಿ ಸುಬೋಧಸಾರ, ಕಲಬುರ್ಗಿಯ ಕಡಕೋಳ ಮಡಿವಾಳಪ್ಪನವರ ತತ್ವಪದಗಳು ಅವರ ಶಿಷ್ಯ ಪರಂಪರೆಯ ಹಾಡುಗಳು, ತಳೆವಾಡಿಯ ನಬೀಸಾಬಿಯ ಹಾಡುಗಳು, ಗೋವಿಂದಭಟ್ಟ ಹಾಗೂ ಶಿಶುನಾಳ ಶರೀಫರ ಹಾಡುಗಳು ಇತ್ಯಾದಿ, ಕನ್ನಡ ಜನಸಾಮಾನ್ಯರಲ್ಲಿ 'ತತ್ವಪದಗಳೆಂದೆ ರೂಢಿಗೆ ಬಂದಿವೆ.

೧೮–೧೯ನೇ ಶತಮಾನವನ್ನು ಕನ್ನಡ ತತ್ವಪದ ಸಾಹಿತ್ಯದ 'ಸುವರ್ಣಯುಗ' ಎಂದು ಕರೆಯಲ್ಪಟ್ಟಿದೆ.

# ತತ್ವಪದಗಳು

ತತ್ವಪದಗಳನ್ನು ಜನಪದ ಹಾಡುಗಳೆಂದು ಗುರುತಿಸಿದರೆ, ಅವುಗಳನ್ನು ಶಿಷ್ಟಸಾಹಿತ್ಯ ಪರಂಪರೆಗೂ ಸೇರಿಸಿದವರೂ ಇದ್ದಾರೆ. ಇದೇ ಸಾಹಿತ್ಯ ಪ್ರಕಾರವನ್ನು 'ಕೀರ್ತನೆ' ಎಂಬ ಹೆಸರಿನಲ್ಲೂ ರಚಿಸಿ ಜನಮನಕ್ಕೆ ಮುಟ್ಟಿಸಿದ ಕೀರ್ತಿ ಮುಂದೆ ಬಂದ ಪುರಂದರದಾಸಾದಿ ಕೀರ್ತನಕಾರರಿಗೆ ಸಲ್ಲುತ್ತದೆ. ಶಿವಪರವಾದ ಸ್ತುತಿ ಶರಣರದಾದರೆ, ವಿಷ್ಣು ಪರವಾದ ಸ್ತುತಿ ದಾಸರದಾಗಿದೆ.

"ವಚನದಂತೆ ತತ್ವಪದ ಪ್ರಕಾರಕ್ಕೂ ಶಿವಶರಣರೇ ಮೊದಲಿಗರು. ಈ ಪ್ರಕಾರ ವ್ಯಾಪಕವಾದದ್ದು ಹಾಗೂ ಪರಿಣಾಮಕಾರಿಯಾದದ್ದು ೧೭,೧೮ನೇ ಶತಮಾನಗಳ ಸಂದರ್ಭದಲ್ಲಿ ಶಿವಶರಣರಲ್ಲಿ ಬೀಜಾಂಕುವಾಗಿದ್ದದ್ದು, ನಿಜಗುಣ ಶಿವಯೋಗಿ ಮುಂತಾದವರಲ್ಲಿ ಕುಡಿಯೊಡೆದು. ಕಡಕೋಳ ಮಡಿವಾಳಪ್ಪ, ಶಿಶುನಾಳ ಷರೀಫ್‌ರ ಹೊತ್ತಿಗೆ ದಾಂಗುಡಿಯಿಟ್ಟು ವಸಾಹತುಶಾಹಿ ಕಾಲದಲ್ಲಿ ಭರ್ತಿಸುಗ್ಗಿ ಮಾಡಿದ ಈ ತತ್ವಪದ ಪ್ರಕಾರವು ಕನ್ನಡ ಸಾಹಿತ್ಯ ಚರಿತ್ರೆಕಾರರ ಅವಜ್ಞೆಗೆ ಒಳಗಾದದ್ದು ಇದೆ. ೧೭ರಿಂದ ೨೦ನೇ ಶತಮಾನದ ಅವಧಿಯಲ್ಲಿ ಕನ್ನಡನಾಡು ಮತ್ತು ಗಡಿಭಾಗಗಳುದ್ದಕ್ಕೂ ನೂರಾರು ಪತ್ರಕಾರರು ಸಾವಿರಾರು ಕೃತಿಗಳನ್ನು ರಚಿಸಿ ಹರವಿ ಹೋಗಿದ್ದಾರೆ. ಅನುಭಾವ ಜನ್ಯ ಹೃತ್ಕಾವ್ಯ ಕಾರಂಜಿಯಂತೆ ಪುಟಿದು ಬಂದ ಈ ಪದಗಳು ಜನಪದರ ನಿಧಿಗಳಾಗಿ ಮೌಖಿಕ ಪರಂಪರೆಯಲ್ಲಿಯೇ ದಾಖಲಾಗುತ್ತ ಪಯಣ ಬೆಳೆಸಿದವು".[೨೦೮]

ಕನ್ನಡ ನಾಡಿನ ಉದ್ದಗಲಕ್ಕೂ ಇಂದಿಗೂ ಮನೆ-ಮನೆಯಂಗಳದಲ್ಲಿ ಜೀವಂತವಾಗಿರುವ ಸಾಹಿತ್ಯಿಕ ಮತ್ತು ತಾತ್ವಿಕ ಪರಂಪರೆ ಎಂದರೆ ತತ್ವಪದಗಳೇ. ಉತ್ತರ ಮತ್ತು ದಕ್ಷಿಣ ಕರ್ನಾಟಕದಲ್ಲಿ ಢಾಳಾಗಿಯೂ, ಸಮೃದ್ಧವಾಗಿಯೂ ತತ್ವಪದ ಪರಂಪರೆ ಇದೆ. ಈ ಪರಂಪರೆಗೆ ಜಾತಿ, ಧರ್ಮ, ಭಾಷೆಯ ಗಡಿಗಳೇ ಇಲ್ಲ, ತತ್ವ ಪದಕಾರರು ಮುಕ್ತಿಯ ಬಾಗಿಲನ್ನು ಎಲ್ಲರಿಗೂ ತೆರೆದಿದ್ದಾರೆ. ಜ್ಞಾನ ಮಾರ್ಗದಿಂದ ಮಾತ್ರ ಮುಕ್ತಿ ಸಾಧ್ಯ ಎಂಬುದು ನಂಬಿಗೆ.

ಕಲಬುರ್ಗಿ ಜಿಲ್ಲೆಯ ಜೇವರ್ಗಿ ತಾಲೂಕು ಮತ್ತು ಸುತ್ತ ಮುತ್ತಲೂ ಹಬ್ಬಿಕೊಂಡ ಚಳುವಳಿ ಎಂದರೆ ಕಡಕೋಳ ಮಡಿವಾಳಪ್ಪ ನವರ ನೇತೃತ್ವದಲ್ಲಿ ನಡೆದ ಸಾಮಾಜಿಕ ಸಾಮರಸ್ಯದ ಚಳುವಳಿಯಾಗಿದೆ. ಇದರಲ್ಲಿ ಚನ್ನೂರು ಜಲಾಲಸಾಹೇಬ, ಅಂಬಿಗ ಮತಕ್ಕೆ ಸೇರಿದ ದನಕಾಯುವ ಕಡ್ಲೇವಾಡದ ಸಿದ್ಧಪ್ಪ, ಬ್ರಾಹ್ಮಣ ಸಮೂದಾಯಕ್ಕೆ ಸೇರಿದ ಖೈನೂರ ಕೃಷ್ಣಪ್ಪ, ಹೂಗಾರ ಸಮುದಾಯದ ತೆಲಗಬಾಳ ರೇವಪ್ಪ, ಹೀಗೆ ಹಲವಾರು ಪ್ರತಿಭಾವಂತರು ಸೇರಿ ಸಾಮಾಜಿಕ ಸಾಮರಸ್ಯಕ್ಕಾಗಿ ಹೋರಾಡಿದರು. ಮುಖ್ಯವಾಗಿ ಈ ಚಳುವಳಿಗೆ ಬಳಸಿಕೊಂಡದ್ದು ತತ್ವಪದಗಳನ್ನು. ಈ ಗುಂಪಿನಲ್ಲಿ ಕಾಣಿಸಿಕೊಂಡ ಚೆನ್ನೂರು ಜಲಾಲ ಸಾಹೇಬರು ಇಡೀ ಕರ್ನಾಟಕದಲ್ಲಿಯೇ ಕಾಣಿಸಿಕೊಂಡ ಮೊದಲ ಮುಸ್ಲಿಂ ತತ್ವಪದಕಾರರಾಗಿದ್ದಾರೆ.

ಇದೇ ರೀತಿಯಲ್ಲಿ ಲಾಲ ಮಹ್ಮದ ಬಂದೇನವಾಜ ಖಲೀಫ್ (ಎಲ್.ಬಿ.ಕೆ.ಆಲ್ದಾಳ) ಅವರು ಮುಸ್ಲಿಂಜನಾಂಗಕ್ಕೆ ಸೇರಿದ್ದರೂ ಅವರ ಕನ್ನಡ ಭಾಷೆಯ ಅಭಿಮಾನ ವರ್ಣನೆಗೆ ನಿಲುಕಲಾರದು ನಾಟಕಕಾರರಿದ್ದಂತೆ ಅವರು ತತ್ವ ಪದಕಾರರು ಇದ್ದಾರೆ. ಅವರ ಭಜನಾಹಾಡುಗಳು, ತೀರ್ಥ, ಕ್ಷೇತ್ರಗಳ ಹಾಡುಗಳು, ನಾಮಾವಳಿಗಳು, ಅಷ್ಟೋತ್ತರ ಶತನಾಮಾವಳಿಗಳು, ಭಕ್ತಿಗೀತೆಗಳು, ಸುಪ್ರಭಾತ, ಪೂಜಾವಿಧಾನ ಮಂಗಲ ಹಾಡುಗಳು, ಪುರಾಣಗಳು ಎಲ್ಲವೂ ಪರಿಪಕ್ವವಾದ, ಇಂಪಾದ ಜ್ಞಾನಾಮೃತಗಳು. ಸಾಲು–ಸಾಲು ಪ್ರಜ್ವಲಿಸುವ ದೀಪಗಳಂತೆ ಕಾಣುತ್ತವೆ. ಮನಕ್ಕೆ ಖುಷಿಕೊಡುತ್ತವೆ.

ಆಲ್ದಾಳ ಅವರು ಹಲವಾರು ಪ್ರಸಿದ್ಧ ನಾಟಕಗಳನ್ನು ಬರೆದು ರಂಗಭೂಮಿಯನ್ನು ಶ್ರೀಮಂತ ಗೊಳಿಸಿದಂತೆ "ಕೈವಲ್ಯ ಜ್ಞಾನಾಮೃತ" ಗ್ರಂಥವನ್ನು ರಚಿಸಿ ಮನಮಹಾಂತವಾಗಿಸುವ ಇಂಥ ಭಕ್ತಿ ತತ್ವ ಪ್ರಧಾನ ಗೀತೆಗಳನ್ನು ರಚಿಸಿರುವ ಅವರ ಸಾಹಸ ಮೆಚ್ಚುವಂತಿದೆ.

'ಕೈವಲ್ಯ' ಎಂಬ ಮಾತಿನ ಹಿಂದೆ 'ಕೇವಲ' ಎಂಬುದರ ಧ್ವನಿ ಇದೆ. ಕೇವಲ ಎಂಬುದಕ್ಕೆ 'ವಿಚಿತ್ರ' 'ಅಸಾಮಾನ್ಯ', 'ಏಕಾಂಗಿ' ಈ ಮೊದಲಾದ ಅರ್ಥಗಳ ಜೊತೆಗೆ 'ಪೂರ್ಣ' 'ಶುದ್ಧ', 'ಅಖಂಡ' ಈ ಅರ್ಥಗಳು ಇವೆ. 'ಕೈವಲ್ಯ' ಎಂದರೆ 'ಲೌಕಿಕ ಸಂಗದಿಂದ ದೂರ ನಿಲ್ಲುವ ನಿರ್ಲಿಪ್ತ ಸ್ಥಿತಿ' ಎನ್ನುವುದರಿಂದ ಹಿಡಿದು 'ಆತ್ಮ ಪರಮಾತ್ಮಗಳ ಸಮರಸದಿಂದ ಲಭಿಸುವ 'ನಿರ್ವಿಕಲ್ಪ ಸ್ಥಿತಿ' ಎನ್ನುವವರೆಗೂ ಅರ್ಥಗಳಿವೆ ವೀರಶೈವರು ಕೈವಲ್ಯ ಪದವನ್ನು 'ಲಿಂಗಾಂಗ ಸಾಮರಸ್ಯದಿಂದ ಬರುವ ಅತ್ಯಂತಿಕ ಆನಂದ ಎಂದು ಹೇಳುವರು.

ಆಲ್ದಾಳ ಅವರ ಪ್ರತಿಯೊಂದು ಸ್ತುತಿ, ಸ್ತೋತ್ರ, ಗೀತೆ, ಗಾಯನ, ಪದ್ಯ, ಹಾಡುಗಳಾಗಲಿ ಯಾವುದೇ ಇದ್ದರು ಅವುಗಳು ಮಾನವನಲ್ಲಿರುವ ಕೊಳೆಯನ್ನು ತೊಳೆಯುವಂಥವುಗಳೇ ಆಗಿವೆ. ಮನದುಂಬಿ ಹಾಡುವ ಹಾಡುಗಳ ಗುಚ್ಛವೇ ಕೈವಲ್ಯ ಜ್ಞಾನಾಮೃತದಲ್ಲಿ ಒಳಗೊಂಡಿದ್ದು, ಪ್ರತಿಯೊಂದರಲ್ಲೂ ಜೀವನ ವಿಕಾಸ ಗೊಳಿಸುವ ಸಮೃದ್ಧ ವಿಚಾರಗಳು, ತತ್ವಗಳಿವೆ, ಗಂಗಾದೇವಿ ಸ್ತುತಿಯಲ್ಲಿ 'ನಿನ್ನ ಕರುಣ ತಪ್ಪಿದ ಮೇಲೆ ಮರಣಉಂಟು ತಾಯಮ್ಮ' ಎಂಥ ಅದ್ಭುತ ಮಾತು. ಭೂಮಿಯ ಮೇಲಿರುವ ಎಲ್ಲ ಜೀವಂತ ಪ್ರಾಣಿಗಳು ಪಕ್ಷಿಗಳು, ಮಾನವ ಕುಲಕ್ಕೆ, ಸಸ್ಯ, ಗಿಡಮರಗಳಿಗೆ ನೀರು ಬೇಕೇ ಬೇಕು, ನೀರಿಲ್ಲದಿದ್ದರೆ ಮರಣವೇ ತಂದೀತು ಎನ್ನುವ ಮಾತು ನಿಜವಲ್ಲವೆ? ಆದರೆ ಇಂದು ನೀರು ಅಮೃತವೆಂದು ಭಾವಿಸಿ ಉಳಿಸ ಬೇಕಾಗಿದೆ. ವಿಶ್ವದಲ್ಲಿರುವ ೮೪ ಲಕ್ಷಕೋಟಿ ಜೀವರಾಶಿಗಳಿಗೆ ನೀರು ಬೇಕೆ ಬೇಕು ಎಂಬುದನ್ನು ಮರೆಯಲಾಗದು.

" ಆಶೆ ನಿನಗ್ಯಾಕಲೆ ಮನವೆ । ಹೇಸಿಕೆಯಲಿ ಬೀಳದು ತರವೆ' ಎಂದು ಬುದ್ಧಿಮಾತುಗಳನ್ನು ಹೇಳಿದ ಬೆನ್ನಲ್ಲೇ, 'ಯಾರ ಕರ್ಮ ಯಾರಿಗೆ ಗೊತ್ತು । ಅವರ ಕರ್ಮ ಅವರ ಸುತ್ತು । ನೀ ಮಾಡಿದ ಅಡಗಿಯ ರುಚಿಯು ನಿನಗಲ್ಲದೆ ಯಾರಿಗೆ ಗೊತ್ತು' ಮಾಡಿದ್ದುಣ್ಣೊ ಮಹಾರಾಯ ಎನ್ನುವಸ್ಥಿತಿ ಆಶೆಬುರುಕರಿಗೆ ತಪ್ಪಿದ್ದಲ್ಲ ಎನ್ನುವ ಮಾತುಗಳನ್ನು ಆಶೆ ಹಾಡಿನಲ್ಲಿ ತಿಳಿ ಹೇಳಿದ್ದಲ್ಲದೆ, ತಾಮಾಡಿದ ಕರ್ಮ ತನ್ನಬೆನ್ನ ಹಿಂದೆಯೇ ಬೇತಾಳದಂತೆ ಅಂಟಿಕೊಂಡಿರುತ್ತದೆ ಎನ್ನುವಲ್ಲಿ ಎಚ್ಚರಿಕೆ ಇದೆ.

ಕವಿ ಆಲ್ದಾಳ ಅವರ ಹಾಡುಗಳಲ್ಲಿ ಭಕ್ತಿಯ ಸಾಗರವೇ ರಾರಾಜಿಸುತ್ತಿದೆ. ಓದಿ ಅರ್ಥಮಾಡಿಕೊಂಡು ನಡೆಯುವವರಿಗೆ ಸನ್ಮಾರ್ಗ, ಜ್ಞಾನ ಮಾರ್ಗವೇ ದಕ್ಕುತ್ತದೆ. ಒಂದೊಂದು ಹಾಡಿನಲ್ಲೂ ಅನುಭವದ ಬುತ್ತಿಯೇ ಕೈಗೆಟಕುತ್ತದೆ. ಅವರ ಪದಗಳ, ಹಾಡುಗಳ ಕೆಲವು ಪಂಕ್ತಿಗಳನ್ನು ಇಲ್ಲಿ ಮನನ ಮಾಡಲು ಉದಾಹರಣೆಯಾಗಿ ಕೊಡಲಾಗಿದೆ.

೧) ಗಂಡ ನಿಲ್ಲದ ಹೆಣ್ಣು । ಎಲ್ಲಿತಿರುಗಿದರೇನು । ಹೆಂಡತಿ ಆಗುವಳೆ ॥
ಬಂಡುಂಡು ತಿರುಗುವ । ಹೀನಮನುಜನು । ಉಂಡಾಡಿಗನವನೆ ।

೨) ಬೀಸೂನ ಬಾ ತಂಗಿ । ಹಸನಾದ ಜೋಳ
ಎಷ್ಟು ಬೀಸಿದರದು । ತೀರ್ಲಿಲ್ಲ ಕಾಳ ।
ಆರು ಗುಣಗಳಭಾವ । ನೀ ತಳ್ಳಬೇಕವ್ವಾ ।
ಮರದಿಂದ ವನಿಯುತ । ತೂರನೀ ಗೊಳ್ಳವ್ವ ॥

೩) ಗೇಲಿ ಮಾಡುತ, ಹೊತ್ತುಗಳಿಬ್ಯಾಡ । ಈ ಹೊತ್ತು ಮುತ್ತು ।
ಬೆಲೆಯು ಇಲ್ಲದ ಮಾತು ಆಡ್ಬ್ಯಾಡ ।
ಸಂತಿ ಮಾಡೂನು ಬಾರೆ ತಂಗೆಮ್ಮಾ । ಈ ಭವಕೆ ಬಂದು ।
ಚಿಂತಿಯಾತಕ ಮಾಡಬೇಕಮ್ಮ ॥

೪) ಭ್ರಮೆಗೆ ಎಡಿಯಾಗಿ ತಿರಗಬ್ಯಾಡಮ್ಮಾ । ನೀ ಜಾಣೆಯಾಗಿ ।
ಸಮರ ಸಂಸಾರ ಗೆದಿಯ ಬೇಕಮ್ಮಾ
ನಂದು ನಿಂದು ಅಂತೀದೆಲೆ ಖೋಡೀ । ನೀ ಬುದ್ಧಿಗೇಡಿ ।
ಒಂದು ದೀವ್ಸಹೋಗ್ತಿ ಮಣ್ಣುಗೂಡಿ ।

೫) ಭಾವ ಶುದ್ಧದಿ ನಡೆಯ ಬೇಕಮ್ಮಾ । ನೀ ನಿಷ್ಠೆಯಿಂದ ।
ದೇವರಿದ್ದಾನೆ ತಿಳ್ಕೊತಂಗೆಮ್ಮಾ ।
ಎಕ್ಕಿ, ಕಳ್ಳಿ ಗಿಡಗಳೊಳಗ । ಹಾಲು ತುಂಬಿದವರಾರು ?
ಲಿಂಬಿ, ಹುಣಸಿಕಾಯಿ ಒಳಗ । ಹುಳಿಯು ತುಂಬಿದವರು ಯಾರು ?

೬) ಹುಚ್ಚನಾಗಿ ಯಾಕ ತಿರಗತಿ । ಈ ಭವಕೆ ಬಂದು ।
ವಿಚಾರ ವಿನಿಮಯ ಎಲ್ಲಿ ನೀ ಮರತಿ ॥
ಇಚ್ಛೆಯಂತೆ ನಡೆದುಕೊಂಡಿ
ಬಿಚ್ಚಿಬಿಟ್ಟ ಗೂಳಿಯಂತೆ । ಉಚ್ಚನಾನೆಂದು ಜಗದಿ ಮೆರದಿ ॥

"ಹಿಮಾಲಯದಲ್ಲಿ ಹುಟ್ಟಿದ ಗಂಗೆಗೊಮ್ಮೆ ಬರಗಾಲ ಬಂದರೂ ಬರಬಹುದು.... ಆದರೆ ಭಕ್ತಿ ಜ್ಞಾನ ಗಂಗೆಗೆ ಬರಗಾಲವಿಲ್ಲ ಎಂಬಂತೆ, ಭಕ್ತಿವಂತ ಅಶು ಕವಿ ಗಾಯಕರು ಹೇರಳವಾಗಿ ಭರತ ಖಂಡದಲ್ಲಿ ಪರಿಶೋಭಿಸಿದ್ದಾರೆ. ಈ ದಿಶೆಯಲ್ಲಿ ಕವಿ ಆಲ್ದಾಳರು ಒಬ್ಬರು. ಇವರು ಸಂಗೀತಗಾರರಲ್ಲದಿದ್ದರೂ ಇವರ ಹೃದಯ ನಾದಮಯವಾಗಿ ಗುಂಯ್‌ಗುಟ್ಟಿದೆ, ಕವಿತ್ವ ತಾಳಹಾಕಿದೆ. ಸಂಗೀತ-ಸಾಹಿತ್ಯ ತಾಳಮೇಳ ಗೂಡಿ ಹಲವು ಭಕ್ತಿಗೀತೆಗಳು ಪ್ರಾದುರ್ಭವಿಸಿ ಕೈವಲ್ಯಪಥದಲ್ಲಿ ಜ್ಞಾನವಾಹಿನಿಯಾಗಿ ಹರಿದಿವೆ". [೨೦೮]

ಪವಿತ್ರ ಕ್ಷೇತ್ರ ದರ್ಶನಗಳ ಕುರಿತು ಆಲ್ದಾಳರು ರಚಿಸಿ ಭಕ್ತಿ ಪರ ಹಾಡುಗಳನ್ನು ಓದುವುದೇ ಒಂದು ಪುಣ್ಯ... "ಕೈವಲ್ಯ ಜ್ಞಾನಾಮೃತ" ಕೃತಿಯಿಂದ ಆಯ್ದ ಪದ್ಯಗಳ ಕೆಲ ಪಂಕ್ತಿಗಳು ಹೀಗಿವೆ.

**೧) ಬದರಿನಾಥನ ಕ್ಷೇತ್ರನೋಡಲು । ಮರೆಯದಿರಿ ಮಹಾ ಭಕ್ತರೆ ।**
**ಪುರಾಣ ಬರೆದ ವೇದ ವ್ಯಾಸರ । ಅಷ್ಟಾದಸದಾ ಘನತೆಯು ।**
**ಬದರಿ ಯಾತ್ರೆಯ ಮಾಡಿಬಂದರೆ । ದರಿದ್ರ ದೂರಾಗಿ ಹೋಗ್ವದು ॥**

**೨) ಕೈಮಾಡಿ ಕರೆಯುತಿದೆ ಅದೋ ಅಲ್ಲಿ ಹಿಮಾಲಯ**
**ಅಮರನಾಥ, ಯಮನೋತ್ರಿ, ಗಂಗೋತ್ರಿ, ಕೇದಾರ ।**
**ಬದರಿನಾಥ ಕೈಲಾಸ ಮಾನಸಾ ಸರೋವರ ॥**
**ಯಾತ್ರೆ ಮಾಡಲೀಬೇಕ ಜೀವಿರುವ ಪರ್ಯಂತ ।**
**ಆ ಪುಣ್ಯ ಶಿರೋಮಾನ್ಯ ಹೋಗಿ ಬರುವರೇ ಧನ್ಯ ॥**

**೩) ಗಂಗೋತ್ರಿಯ ಸ್ನಾನ ಮಾಡಣ್ಣಾ ಈ ಭವಕೆ ಬಂದು ॥**
**ಮಂಗ ಗುಣಗಳು ಅಳಿಯ ಬೇಕಣ್ಣ ॥**
**ಭಗೀರಥನ ತಪಕೆ ತಾಮೆಚ್ಚಿ । ಪ್ರತ್ಯಕ್ಷಳಾಗಿ ।**
**ಸ್ವರ್ಗದಿಂದ ಹರಿದು ಬಂದಿಹಳು ॥**

ಕವಿಯ ಪ್ರತಿಭೆ ಪ್ರತಿಯೊಂದು ಚರಣದಲ್ಲಿಯೂ ಮಿಂಚಿದೆ. ಅವರ ಶಾಸ್ತ್ರಾನುಭಾವ, ಸಾಹಿತ್ಯಾಭ್ಯಾಸ ಪದ ವೈಖರಿ ಮತ್ತು ನಿರೂಪಣೆಯ ಬೆಡಗು ಎದ್ದು ಕಾಣುತ್ತದೆ. ಶೈಲಿ ಮಧುರವಾಗಿದೆ. ಓದುಗನನ್ನು ಓದಿಸಿಕೊಂಡು ಮುಂದೆ ಹೋಗುತ್ತದೆ. ಈ ಕೈವಲ್ಯ ಜ್ಞಾನಾಮೃತದ ಪದ್ಯಗಳು ನವನೀತವಿದ್ದಂತೆ, ಹಾಲು-ಜೇನುಸವಿದಂತೆ, ರಾಗಬದ್ಧವಾಗಿ ಹಾಡಿದಾಗ ಶ್ರೋತೃಗಳ ಮನಕ್ಕೆ ಮಹಾದಾನಂದವನ್ನುಂಟು ಮಾಡುತ್ತದೆ.

"ಕನ್ನಡ ಸಾಹಿತ್ಯದ ಅಧ್ಯಯನದಲ್ಲಿ ತತ್ವಪದಸಾಹಿತ್ಯ ಪ್ರಕಾರವು ತನ್ನದೇ ಆದ ವಿಶೇಷತೆಯನ್ನು ಹೊಂದಿದೆ. ಜನಸಾಮಾನ್ಯರು ಜನ ಸಾಮಾನ್ಯರಿಗಾಗಿಯೇ ರಚಿಸಿದ ಸಾಹಿತ್ಯ ಪ್ರಕಾರವಿದು. ಈ ಕಾರಣದಿಂದಾಗಿ ನಿಷ್ಕಲ್ಮಷ, ನಿಷ್ಕಪಟ, ಆಧ್ಯಾತ್ಮ, ತಾತ್ವಿಕತೆಯ ಅಂಶಗಳೇ ತತ್ವ

ಪದಗಳ ಬುನಾದಿಯಾಗಿದ್ದರೂ, ಮಾನವ ಬದುಕಿನ ಔನ್ನತ್ಯವೇ ಇವುಗಳ ಮುಖ್ಯ ಆಶಯ. ವ್ಯಕ್ತಿಯ ದೌರ್ಬಲ್ಯಗಳ ಅನಾವರಣದೊಂದಿಗೆ, ವ್ಯಕ್ತಿತ್ವ ನಿರ್ಮಾಣ ಮಾಡುವಲ್ಲಿ ತತ್ವಪದಕಾರರ ಶ್ರಮ, ಪರಿಶ್ರಮ ಗಮನಿಸಬೇಕಾದ ವಿಷಯ. ಸಮಾಜವನ್ನು ಸರಿದಾರಿಗೆ ತರುವಲ್ಲಿ, ಸಾಮಾಜಿಕ ಸಮಸ್ಯೆಗಳ ಅರಿವು, ವೈಚಾರಿಕ ಜಾಗೃತಿಯನ್ನು ಮೂಡಿಸುವಲ್ಲಿ ತತ್ವಪದ ಸಾಹಿತ್ಯ ಪರಿಣಾಮಕಾರಿ". [೨೦೯]

ಕಲಬುರ್ಗಿ ಜಿಲ್ಲೆ 'ತತ್ವಪದಕಾರರ ತವರು ಮನೆ' ಎನ್ನುವ ಮಟ್ಟಿಗೆ ಇಲ್ಲಿ ತತ್ವಪದಕಾರರಿದ್ದಾರೆ. ಜೇವರ್ಗಿತಾಲೂಕಿನ ಭೀಮಾನದಿಯ ತೀರದ ಬಲದಂಡೆಯ ಮೇಲೆ ಕಂಗೋಳಿಸುವ ಒಂದು ಪುಟ್ಟ ಕುಗ್ರಾಮ 'ರಾಮಪೂರ' , ಈ ಗ್ರಾಮದಲ್ಲಿ ಜರುಗಿದ 'ಪ್ರಥಮ ಕನ್ನಡ ತತ್ವಪದಕಾರರ ಸಾಹಿತ್ಯ ಸಮ್ಮೇಳನ' ಸರಕಾರ ಮತ್ತು ಸಾಹಿತ್ಯ ಪರಿಷತ್‌ಗಳು ಹುಬ್ಬೇರಿಸುವಂತೆ ಆಚರಿಸಲಾಯಿತು.

'ಕಡಕೋಳ ಮಡಿವಾಳಪ್ಪ ಮತ್ತು ಅವರ ಶಿಷ್ಯರ ತತ್ವ ಪದಗಳು' ಎಂಬ ಗೋಷ್ಠಿಯನ್ನು ಪ್ರಾಧ್ಯಾಪಕ ಈಶ್ವರಯ್ಯ ಮಠರ ಅಧ್ಯಕ್ಷತೆಯಲ್ಲಿ ನಡೆಯಿತು. ಉಪನ್ಯಾಸಕಿ ಡಾ.ಮೀನಾಕ್ಷಿ ಬಾಳಿಯವರು ಕಡಕೋಳ ಮಡಿವಾಳಪ್ಪನವರ ಕುರಿತು ಉಪನ್ಯಾಸ ನೀಡಿದರು. 'ಚೆನ್ನೂರು ಜಲಾಲಸಾಹೇಬ ಮತ್ತು ರಸ್ತಾಪೂರ ಭೀಮ ಕವಿಯ ತತ್ವಪದಗಳು' ಗೋಷ್ಠಿಯನ್ನು ಸಾಹಿತಿ, ಹೋರಾಟಗಾರ ಭಾಸ್ಕರರಾವ ಮುಡಬೂಳ ಅವರು ಉದ್ಘಾಟಿಸಿದರು. ಈ ಗೋಷ್ಠಿ ಗೆ ಶಂಕರಗೌಡ ಪೋಲೀಸ ಪಾಟೀಲ ದಾನಿಗಳಾಗಿದ್ದರು.

ಸಮ್ಮೇಳನಾಧ್ಯಕ್ಷ ಶ್ರೀ.ಎಲ್.ಬಿ.ಕೆ.ಆಲ್ದಾಳರು ಮಾತನಾಡುತ್ತ, "ಭಜನೆ ಹಾಡುವವರು ಯಾವುದಾದರು ಊರಲ್ಲಿ ಕಾರ್ಯಕ್ರಮ ನಡೆಸಿಕೊಡುವಾಗ ತತ್ವಪದಗಳ ಅಂಕಿತನಾಮವನ್ನು ಬದಲಿಸಿ ಅದೇ ಊರಿನ ಶರಣರ ಅಥವಾ ದೇವರ ಹೆಸರು ಸೇರಿಸಿ ತಿರುಚುವುದು ಶೋಚನೀಯ ಸಂಗತಿ ಎಂದು ಖೇದ ವ್ಯಕ್ತಪಡಿಸಿದರು. ಅವರು ಮುಂದುವರಿದು ಮಾತನಾಡಿ, "ಈ ಭಾಗದ ಹಿರಿಯ ಅನುಭಾವಿ ತತ್ವಪದಕಾರ ಕಡಕೋಳ ಮಡಿವಾಳಪ್ಪ ಬರೆದ 'ಕೋಡಗನಕೋಳಿನುಂಗಿತ್ತ' ಹಾಡನ್ನು ಶಿಶುನಾಳ ಷರೀಫ್‌ರು ಬರೆದಂತೆ ಗುರುಗೋವಿಂದನ ಅಂಕಿತನಾಮ ಇಟ್ಟಿರುವುದು ದುಃಖ ಸಂಗತಿ. ಈ ರೀತಿ ತತ್ವ ಪದ ಕದಿಯುವ ಚಾಳಿ ಎಲ್ಲ ಕಡೆಗೂ ಹೆಚ್ಚಾಗಿ ನಡೆಯುತ್ತಿದೆ. ಇದನ್ನು ತಡೆಯುವುದು ಸಂಶೋಧಕರು, ತತ್ವಪದಕಾರರು, ಅಭಿಮಾನಿಗಳ ಜವಾಬ್ದಾರಿಯಾಗಿದೆ ಎಂದರು. ಕೃಷ್ಣಾ–ಭೀಮಾ ನದಿ ಮಧ್ಯದಲ್ಲಿರುವ ಸಗರ ನಾಡಿನಲ್ಲಿ ಸಾಕಾದಷ್ಟು ತತ್ವಪದಕಾರರು ಆಗಿ ಹೋಗಿರುವರು. ಇವರು ತಮ್ಮ ತತ್ವಪದಗಳಿಂದ ಜನಮನ ಸ್ಪಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಇವರ ಅನುಭವದ ನುಡಿಗಟ್ಟಿನಲ್ಲಿ ಚಿಗುರೊಡೆದ ತತ್ವಪದಗಳು ಸಮಾಜವನ್ನು ಸನ್ಮಾರ್ಗದ ಕಡೆಗೊಯ್ಯಲು ಸಹಕಾರಿ ಆಗಿವೆ. ಸಮಾಜದ ಓರೆಕೋರೆ, ಅಂಧಶ್ರದ್ಧೆ, ಮೂಢನಂಬಿಕೆ, ಕಂದಾಚಾರವನ್ನು, ಜಾತ್ಯಾಂಧತೆ, ಗೊಡ್ಡು ಸಂಪ್ರದಾಯವನ್ನು ತಳ್ಳಿ ಸಕಲ ಜೀವಿಗಳಲ್ಲಿ ಲೇಸು ಬಯಸಿದ ತತ್ವಪದಕಾರರ ವಾಣಿ ಬದುಕಿಗೆ ದಾರಿದೀಪ ಎಂದು ಗ್ರಾಮೀಣರ ಭಾರೀ ಕರತಾಡನಗಳ ನಡುವೆ ಆಲ್ದಾಳರು ಹೇಳಿದರು. ಇದೊಂದು ಗ್ರಾಮೀಣ ಪ್ರದೇಶದಲ್ಲಿ ಐತಿಹಾಸಿಕವಾಗಿ ಉಳಿಯುವಂಥ ಸಮ್ಮೇಳನವಾಗಿದ್ದರಲ್ಲಿ ಎರಡು ಮಾತಿಲ್ಲ.

## ನಾಮಾವಳಿ, ಭಕ್ತಿಗೀತೆ, ಸುಪ್ರಭಾತ

ಆಲ್ದಾಳ ಅವರ ಬತ್ತಳಿಕೆಯಲ್ಲಿ ಜೇವರ್ಗಿ ತಾಲೂಕಿನ ಕೋಳ್ಕುರು ಗ್ರಾಮದ 'ಸುಕ್ಷೇತ್ರ ಕೋಳ್ಕುರ ಶ್ರೀ ಸಿದ್ಧಬಸವೇಶ್ವರ ೧೦೮ ನಾಮಾವಳಿ ಹಾಗೂ ಸುಪ್ರಭಾತ ಪೂಜಾವಿಧಾನ, ಭಕ್ತಿಗೀತೆಗಳು', "ಸುಕ್ಷೇತ್ರ ಇಟಗಾ ಶ್ರೀ ಶಿವಲಿಂಗೇಶ್ವರರ ಅಷ್ಟೋತ್ತರ ಶತನಾಮಾವಳಿ" ಮತ್ತು "ಸುಕ್ಷೇತ್ರ ಶ್ರೀನಿವಾಸ ಸರಡಗಿಯ ಷ.ಬ್ರ. ಶ್ರೀ ಶ್ರೀ ಶ್ರೀ ಚಿಜ್ಯೋತಿ ಚಿಕ್ಕವೀರೇಶ್ವರ ಅಷ್ಟೋತ್ತರ ನಾಮಾವಳಿಯ ಮಹಿಮೆ" ಎಂಬ ಭಕ್ತಿ ಪುಷ್ಪಾಂಜಲಿಗಳು ಪ್ರಕಟಗೊಂಡಿವೆ. ಈ ನಾಮಾವಳಿಗಳು ಅಂದರೆ ನೂರೆಂಟು ನಾಮಾಮೃತವನ್ನು ಪ್ರತಿನಿತ್ಯ ಪಠಿಸಲ್ಕೆ ಬೇಡಿದಿಷ್ಟಾರ್ಥ ಲಭಿಸುವುದು ಎಂಬುದೇ ಇದರ ತಾತ್ಪರ್ಯವಾಗಿವೆ.

ಸುಕ್ಷೇತ್ರ ಕೋಳ್ಕುರು ಶ್ರೀ ಸೋಪ್ಪಿಸಿದ್ಧ ಬಸವೇಶ್ವರರು ಸ್ಮಾರ್ಥ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿ, ಪ್ರತ್ಯಕ್ಷ ಶಿವನಿಂದಲೇ ಭಸ್ಮಲಿಂಗಗಳನ್ನು ಧರಿಸಿಕೊಂಡು ಜಂಗಮತ್ವವನ್ನು ಸ್ವೀಕರಿಸಿ ಜಗದ ಜಂಗಮನಾಗಿ ಬೆಳಗಿದ ಶಿವಶಿಸು.

**"ಜನನಸ್ಥಾನ। ಕಂಚಿಪುರವು। ಜ್ಞಾನಕಾಶಿ। ಸೊಪ್ಪಿಬಸವ।**
**ಭಾನುಮತಿ। ಶಂಕರರಾಜ। ತನಯನೀನು। ಸೊಪ್ಪಿಬಸವ।"** [೨೧೦]

ಬಾಲ ಬಸವನಿಗೆ ಮುಂಜಿ ಮಾಡುವ ವಿಷಯ ತಿಳಿದು, ತಾನುಟ್ಟ ಬಟ್ಟೆಗಳನ್ನು ಕಳಚಿ ಕಾವಿಲಾಂಛನವ ಧರಿಸಿ, ಒಂದು ಕೈಯಲ್ಲಿ ಜೋಳಿಗೆ, ಮತ್ತೊಂದು ಕೈಯಲ್ಲಿ ಕಮಂಡಲ ಹಿಡಿದು ಭಿಕ್ಷಾಂದೇಹಿ ಎಂದು ಬಂದು ನಿಂತಾಗ ತಾಯಿ ಭಾನುಮತಿ ತಂದೆ ಅರಸು ಶಂಕರರಾಜ ದಿಗ್ಭ್ರಾಂತರಾದರು. ಮಗನ ದೃಢನಿರ್ಧಾರ ತಿಳಿದು ಮಗನೆಂಬ ಪ್ರೀತಿ ಹರಿದೊಗೆದು ಬಾಲಬಸವನಿಗೆ ಪಾದ ಪೂಜೆ ಸಲ್ಲಿಸಿ ಭೀಕ್ಷೆ ನೀಡಿ ಶಿವದಾರಿ ಹಿಡಿಯಲು ಬೀಳ್ಕೊಟ್ಟರು.

**೨೭. "ಹಲವು ಲೀಲೆ। ತೋರಿಸುತ್ತ। ವಲಯಸುತ್ತಿ। ಸೊಪ್ಪಿಬಸವ**
**೨೮. ಲೋಕ ಹಿತದದೃಷ್ಟಿಯಿಂದ ಏಕನಾದಿ। ಸೊಪ್ಪಿಬಸವ।**
**೩೭. ನಡೆದಾಡುವ। ದೇವರಾದಿ। ನಾಕಂಡ। ಸೊಪ್ಪಿಬಸವ।** [೨೧೧]

ಶ್ರೀ ಸಿದ್ಧ ಬಸವೇಶ್ವರರು ನಾಡ ಸಂಚರಿಸಿ ಅನೇಕ ಪವಾಡಗಳನ್ನು ಮೆರೆದು ಲೀಲೆಗಳನ್ನು ತೋರಿ ಕೋಳ್ಕುರು, ರಾಸಣಗಿ, ಮಾಶಾಳ, ಮಂದರವಾಡ ಗಾಣದ ಕಲ್ಲುಗಳನ್ನು ಸುಕ್ಷೇತ್ರಗಳನ್ನಾಗಿಸಿದ ಪುರುಷೋತ್ತಮನು ನಡೆದನೆಲ ಕಾರ್ಯ ಕ್ಷೇತ್ರವಾಯಿತು.

**೬೬. ಸುಳ್ಳುಹೇಳಿ। ಮುಂದೆಹೋಗಿ। ಕುರುಳಾಗಿ। ಸೊಪ್ಪಿಬಸವ।**
**೬೭. ಮುತ್ತುಗಾರ।ರೆಲ್ಲ ಕೂಡಿ। ಸ್ತುತಿಯಮಾಡಿ। ಸೊಪ್ಪಿಬಸವ।**
**೬೮. ಕುರುಳುಹೋಗಿ। ಮುತ್ತಾಗಿ। ಹರುಷದಿಂದ। ಸೊಪ್ಪಿಬಸವ।"** [೨೧೨]

ಜೀವನದ ವಿಕಾಸಕ್ಕೆ ಅಧ್ಯಾತ್ಮಜ್ಞಾನ ಅಗತ್ಯ, ಮನದ ಶಾಂತಿಗೆ ಮತ್ತು ನೆಮ್ಮದಿಯ ಬದುಕಿಗೆ ಧರ್ಮ ದಾರಿ ದೀಪ, ಅರಿವು ಆಚಾರ್ಯವುಳ್ಳ ಮನುಷ್ಯ ಜನ್ಮ ಸಾರ್ಥಕಗೊಳ್ಳಲು ಆಚಾರ್ಯರ ತತ್ವಸಂದೇಶಗಳು, ನಾಮಾವಳಿಗಳು ಉಜ್ವಲ ಭವಿಷ್ಯಕ್ಕೆ ನಾಂದಿ.

**ಶ್ರೀ ಚಿಜ್ಯೋತಿ ಚಿಕ್ಕ ವೀರೇಶ್ವರ ನಾಮಾವಳಿ :-** "ಪಂಚಾಚಾರ್ಯರ ಸತ್ವರಂಪರೆಯ ಉಜ್ಜೈಯಿನಿ ಶಾಖಾನ್ವಿತ ಶ್ರೀನಿವಾಸ ಸರಡಗಿಯವರ ಬ್ರಹನ್ಮಠದ ಲಿಂಗೈಕ್ಯರಾದ ಪೂಜ್ಯ ಶ್ರೀ ಚಿಕ್ಕ ವೀರೇಶ್ವರ ಶಿವಾಚಾರ್ಯರ ನೂರೆಂಟು ನಾಮಾವಳಿಗಳು, ವರ್ತಮಾನ ಕಾಲದ ಮಠಾಧೀಶರಾದ ತಪೋಮೂರ್ತಿ ಶ್ರೀ.ಷ.ಬ್ರ. ರೇವಣಸಿದ್ಧ ಶಿವಾಚಾರ್ಯರ ಕೃಪಾಶೀರ್ವಾದದಿಂದ ಹೊರಬಂದ ಭಕ್ತಿ ಪುಷ್ಪಾಂಜಲಿ ಇದು "ಗುರುಸ್ಮರಣಾಂಜಲಿ"[೨೧೩] ಎಂದು ಎಲ್.ಬಿ.ಕೆ. ಆಲ್ದಾಳ ಅವರೇ ಮನದುಂಬಿ, ಭಕ್ತಿಪೂರ್ವಕವಾಗಿ ಹೇಳಿದ್ದಾರೆ.

**೧೮. "ಜಗದನಂಜು। ನೀನುಂಡು। ಜಗವಗೆದ್ದ। ಚಿಕ್ಕವೀರೇಶ।**
**೧೫. ಚಿನ್ನದ ಕಂತಿ। ಹಿರೇಮಠವು। ಚಿನ್ನವಾಯ್ತು। ಚಿಕ್ಕವೀರೇಶ।"** [೨೧೪]

ಶ್ರೀ ಚಿಜ್ಯೋತಿ ಚಿಕ್ಕ ವೀರೇಶ್ವರ ಶಿವಾಚಾರ್ಯರು ಲೋಕೋಪಕಾರಕ್ಕಾಗಿ ಜನ್ಮತಳೆದು ಬಂದವರು. ಶ್ರೀನಿವಾಸ ಸರಡಗಿಯ ಮಠದ ಮೂಲ ಕರ್ತೃಪುರುಷರಾಗಿದ್ದು ಇಷ್ಟಾರ್ಥ ಸಿದ್ಧಿಯನ್ನು ಪಡೆದವರಾಗಿದ್ದರು. ಬರಗಾಲಪೀಡಿತ ಜನರಿಗೆ ದವಸ ಧಾನ್ಯ ಹಂಚಿದರು. ಹಸಿವು ಎಂದು ಬಂದವರಿಗೆ ಅಂಬಲಿಯನಿತ್ತು ಸಂತೋಷ ಪಡಿಸಿದರು.

ಎಲ್.ಬಿ.ಕೆ.ಆಲ್ದಾಳರ ನಾಮಾವಳಿ ಬಗ್ಗೆ ಬೆಂಗಳೂರಿನ ಶ್ರೀಮತಿ ಮಹಾನಂದಾ ಜಿ.ಶೀಲವಂತ ನರೋಣಾ ಹೀಗೆ ಬರೆಯುತ್ತಾರೆ.

**"ಆಲ್ದಾಳ ರಚಿತ ಅಷ್ಟೋತ್ತರವ**
**ಜಗದಗಲ ಸಾರೋಣಬನ್ನಿ।**
**ಚಿನ್ಮಯ ಚಿಕ್ಕವೀರೇಶ ಚರಿತೆಯ**
**ಮಹಿಮೆಯ ನುಡಿಯೋಣ ಬನ್ನಿ"॥** [೨೧೫]

ಇದೇ ರೀತಿ ಮತ್ತೋರ್ವ ಭಕ್ತ ಗುರುಶಾಂತ ಆರ್ ಬೆಂಗಳೂರು ಇವರು ಹೀಗೆ ಕೇಳಿಕೊಳ್ಳುತ್ತಾರೆ.

**"ಚಿಚ್ಛತಿ ಶಿವಾಚಾರ್ಯರ ಶಿಷ್ಯರೆ ಇದೊ ನಿಮಗೊಂದು।**
**ಚಿಕ್ಕವೀರೇಶ್ವರರ ಅಷ್ಟೋತ್ತರ ಪಠಣ ಫಲದ ಮಹಿಮೆ ಇದು॥**
**ಆತ್ಮ, ಪರಮಾತ್ಮ, ಆಧ್ಯಾತ್ಮ, ಸಂಸ್ಕೃತಿ, ಸದ್ಯೋಜಾತ ಪರಂಪರೆ ಇದು।**
**ಆನಂದ ಪರಮಾನಂದಕ್ಕೆ ಜಪತಪಗಳ ಧ್ಯಾನ ಮುಕುಟ ಇದು"॥** [೨೧೬]

**ಶ್ರೀ ಶಿವಲಿಂಗೇಶ್ವರರ ನಾಮಾವಳಿ :–** ಕಲಬುರ್ಗಿ ತಾಲೂಕಿನ ಸುಕ್ಷೇತ್ರ ಇಟಗಾದ ಶ್ರೀ ಶಿವಲಿಂಗೇಶ್ವರ ಮಹಿಮೆ ಅಪಾರವಾದುದು. ಅನೇಕ ಶ್ರೃದ್ಧಾಳುಗಳು ಶಿವಲಿಂಗೇಶ್ವರರ ದರ್ಶನಾ ಶೀರ್ವಾದ ಪಡೆದು ಪುನೀತರಾಗುತ್ತಾರೆ.

ಎಲ್.ಬಿ.ಕೆ.ಆಲ್ದಾಳ ಅವರು ಸುಕ್ಷೇತ್ರ ಇಟಗಾ ಶ್ರೀ ಶಿವಲಿಂಗೇಶ್ವರ ಅಷ್ಟೋತ್ತರ ನಾಮಾವಳಿಯನ್ನು ಭಕ್ತರ ಇಚ್ಛೆಯ ಮೇರೆಗೆ, ಸರಳ, ಸುಂದರ ಹಾಗೂ ಭಕ್ತಿಯನ್ನೇ ಹೊರಸೂಸುವ ರೂಪದಲ್ಲಿ ಬರೆದು ಜನಾನುರಾಗಿಯಾಗಿದ್ದಾರೆ.

ದೈವ ಭಕ್ತ ಸಿದ್ದಪ್ಪ ಮತ್ತು ಗಿರಿಯಮ್ಮರ ಮಗನಾಗಿ ಯರನಾಳ ಗ್ರಾಮದಲ್ಲಿ ಜನಿಸಿದ ಶಿವಲಿಂಗೇಶನು ಬಾಲ್ಯ ಕಳೆದು ತಂದೆ–ತಾಯಿಯ ಆಶ್ರಯದಲ್ಲಿ ವ್ಯಾಪಾರದಲ್ಲಿ ತೊಡಗಿದನು. ದೊಡ್ಡವನಾದ ಮೇಲೆ ಸತಿ ಸಂಗಮ್ಮನೊಂದಿಗೆ ವಿವಾಹವಾಗಿ ಸಂಸಾರಿ ಆದ. ದುರ್ದೈವವೆಂದರೆ ಹೆಣ್ಣುಮಗುವಿನ ತಂದೆಯಾದ ಖುಷಿಯಲ್ಲಿರುವಾಗಲೇ ಪತ್ನಿ ಸಂಗಮ್ಮ ಕಣ್ಣುಮುಚ್ಚಿ ಇಹಲೋಕ ತೊರೆದಳು. ಜೀವನದಲ್ಲಿ ಜಿಗುಪ್ಸೆಗೊಂಡ ಶಿವಲಿಂಗ ಮನೆ ತೊರೆದು ಲಚ್ಯಾಣ ಮಾರ್ಗಹಿಡಿದು ಅಲ್ಲಿ ದೀಕ್ಷೆಯನ್ನು ಪಡೆದ. ವಿಚಿತ್ರವೆಂದರೆ, ಜೀವನದಲ್ಲಿ ನಡೆಯುವ ಕೆಲವು ಘಟನೆಗಳು ಅಷ್ಟೇ ಅಚ್ಚರಿ ತರುತ್ತವೆ.

೯. **"ತಂದೆ–ತಾಯಿ ಮರು ಮದುವೆಯುಹೂಡಿ**
**ತಂದೆ, ಮಗಳ ಲಗ್ನ ಒಂದೇ ಹಂದರದಿ**
**ಅಂದೇ ಹಂದರದಿಂ ಕಡೆಗಾದ ನಾಡಾಡಿ**
**ಇಟಗಿ ಸಾಧುಶಿವಲಿಂಗೇಶ".**

ಶಿವಲಿಂಗೇಶನು ಹರಿಯುವ ಹಾವುಗಳನ್ನು ಹಿಡಿದುಕೊಂಡು ಅವುಗಳನ್ನು ತನ್ನ ಕೊರಳಲ್ಲಿ ಮಾಲೆಯಂತೆ ಧರಿಸುತ್ತಿದ್ದನು. ಶಿವಯೋಗಿಯಂತೆ ಕಾಣುತ್ತಿರುವುದನ್ನು ಕಂಡವರು ಭಕ್ತಿಯಿಂದ ನಮಿಸುತ್ತಿದ್ದರು. ಅನೇಕ ಪವಾಡಗಳನ್ನು ಮಾಡುತ್ತಿದ್ದ, ತಟ್ಟಲ್ಲಿ ಸುರುಳಿ ಸುತ್ತಿದ್ದ ಕೂಸಿಗೆ ಬದುಕಿಸಿದ ಶಿವಯೋಗಿ ಎನ್ನಿಸಿಕೊಂಡ.

೧೦. **"ನೀರ ದೀಪವ ಉರಿಸುತ ನಡೆದ**
**ನೀರ ಮೇಲೆ ತಾ ಕುಣಿಯುತ ನಿಂತ**
**ನೀರೊಳ ಮುಳುಗಿ ಮೇಲೆದ್ದು ಬಂದ**
**ಇಟಗಿ ಸಾಧುಶಿವಲಿಂಗೇಶ".** [೨೧೮]

ಆಲ್ದಾಳ ವಿರಚಿತ 'ಇಟಗಿ ಸಾಧುಶಿವಲಿಂಗೇಶ ಅಷ್ಟೋತ್ತರ ಶತನಾಮಾವಳಿ' ಉದಯಾಸ್ತ ಕಾಲೇಭಕ್ತಿಯಿಂ ಪಠಿಸಲ್ಕೆ ಸತಿ, ಸುತ ಆರೋಗ್ಯ ಸಂಪದವಕ್ಕು.

**ಸುಪ್ರಭಾತ :–** ಆಧ್ಯಾತ್ಮ ಜೀಜ್ಞಾಸುಗಳಾದ ಎಲ್.ಬಿ.ಕೆ. ಆಲ್ದಾಳರು ಮಠಗಳಲ್ಲಿ ನಡೆಯುವ ಪುರಾಣ, ಭಜನೆ, ಇನ್ನಿತರ ಭಕ್ತಿಗೀತೆಗಳ ಕಾರ್ಯಕ್ರಮದಲ್ಲಿ ಭಾಗವಹಿಸುವುದೆಂದರೆ ಕಲ್ಲು ಸಕ್ಕರೆ ತಿಂದಂತೆ! 'ನಾನು' ಎಂಬ ಅಹಂ ಅವರಲ್ಲಿ ದುರ್ಬಿನು ಹಚ್ಚಿ ದಿಟ್ಟಿಸಿ ನೋಡಿದರು ಎಳ್ಳಷ್ಟು ಸಿಕ್ಕಲಾರದು, ಈ ನಾನು ಎಂಬ ಪರದೆ ಸರಿಸಿ ಸಕಲವೂ ನೀನೆಂದು ತೋರುವ ನಿಜಾನಂದ ಪಡೆಯ ಬೇಕಾದರೆ ಆಧ್ಯಾತ್ಮದ ಏಣಿ ಅಗತ್ಯ. ಆ ಏಣಿಯ ಸಹಾಯದಿಂದ ಆತ್ಮ ಮಹಾಂತನಾಗಬಲ್ಲ, ಪರಮಾತ್ಮನೂ ಆಗಬಲ್ಲ.

ಆಲ್ದಾಳರು ನಾನು ಎಂಬುದನ್ನು ಹತ್ತಿರಕ್ಕೆ ಇರಿಸದೆ ಅದನ್ನು ಬಿಟ್ಟುಕೊಟ್ಟಿರುವುದರಿಂದಲೇ ಸಾಹಿತ್ಯದ ಎಲ್ಲ ಪ್ರಾಕಾರಗಳು ಅವರಲ್ಲಿ ಮೇಳೈಸಿವೆ ಸುಪ್ರಭಾತ, ಪೂಜಾವಿಧಾನ, ಜೋಗುಳಹಾಡು, ಭಕ್ತಿಪದಗಳು, ಮಂಗಲಹಾಡು, ನಾಮಾವಳಿ ಇತ್ಯಾದಿ ಭಕ್ತಿಯ ಸಾಗರವನ್ನೇ ಅಪ್ಪಿಕೊಂಡಿರುವರು.

**"ಏಳು ಏಳಯ್ಯ। ಸಿದ್ಧಬಸವೇಶನೇ ಏಳು।**
**ಪ್ರಣವ ಪಂಚಾಕ್ಷರಿ ಮಹಿಮೆ ಪರಬ್ರಹ್ಮನೆ ಏಳು।**

**ಶರಣ ಧರ್ಮದ ಸಾರ ತಿಳಿಸಿದ ವೀರ।**
**ಅರವತ್ತುಮೂರು ಪುರಾತನರು ಬಂದಿಹರೇಳು।**

**ಮುಗಿದ ಕೈಯ ಬಾಗಿದ ತಲೆಯ ಬಸವರು।**
**ಸಾಗಿ ನಿನ್ನಡೆಗೆ ಬಂದಿಹರು ಏಳು ಏಳಯ್ಯ"** [೨೧೮]

ಕೊಡದಲ್ಲಿಯೇ ಸಾಗರದ ಎಲ್ಲ ನೀರನ್ನು ತುಂಬಲು ಸಾಧ್ಯವೆ? ಆಲ್ದಾಳರ ಯಾವುದೇ ಭಕ್ತಿಗೀತೆ, ಸುಪ್ರಭಾತಗಳನ್ನು ಸ್ವಲ್ಪದರಲ್ಲಿ ಹಿಡಿದಿರಿಸಲು ಸಾಧ್ಯವಿಲ್ಲ ಕೇವಲ ಅದರ ರೀತಿ–ನೀತಿ, ಭಾಷೆಯ ಶೈಲಿ, ಹಾಡುಗಾರಿಕೆ ರಾಗ ಹೇಳಬಹುದು. ಇಡೀ ಸುಪ್ರಭಾತವನ್ನು ಓದಿದಾಗಲೇ ಓದುಗರು ಆನಂದದಲ್ಲಿ ತೇಲುವರು.

**ಭಜನೆಯ ಹಾಡುಗಳು :–** "ಭಜನೆಯ ಹಾಡುಗಳನ್ನು 'ಅನುಭಾವ ಸಾಹಿತ್ಯ'ದ ಒಂದು ಪ್ರಕಾರವಾಗಿ ಪರಿಗಣಿಸಲಾಗುತ್ತದೆ. ಅದಕ್ಕಾಗಿ ಈ ಹಾಡುಗಳನ್ನು "ಅನುಭಾವಗೀತೆ'ಗಳು ಎಂದು ಕರೆಯುವ ರೂಢಿ ಇದೆ. ಭಜನೆಯ ಹಾಡುಗಳಲ್ಲಿ ಸ್ವರ ವಚನಗಳು ಮತ್ತು ತತ್ವ ಪದಗಳು ಎಂಬ ಎರಡು ಒಳ ವಿಧಗಳನ್ನು ಗುರುತಿಸಬಹುದು. 'ದಾಸರ ಹಾಡುಗಳು' ಕೂಡ ಮೂಲತಃ ಪ್ರಾರ್ಥನೆಯಲ್ಲಿ, ಅಂದರೆ ಭಜನೆಯಲ್ಲಿ ಬಳಸುವ ಹಾಡುಗಳೇ ಆಗಿವೆ". [೨೧೯]

ಆಲ್ದಾಳರು ಪರಧರ್ಮಸಹಿಷ್ಣುಗಳೆಂದು ಬೇರೆ ಹೇಳಬೇಕಾಗಿಲ್ಲ. ಅವರ ಭಜನೆಯ ಹಾಡುಗಳನ್ನು ಕೇಳುತ್ತ ಕುಳಿತ ಭಕ್ತಾದಿಗಳಿಗೆ ಹೊತ್ತುಕಳೆದದ್ದೇ ಗೊತ್ತಾಗುವುದಿಲ್ಲ.

**"ಹುಚ್ಚನಾಗಿ ಯಾಕ ತಿರಗತಿ। ಈ ಭವಕೆ ಬಂದು।**
**ವಿಚಾರ ವಿನಿಮಯ ಎಲ್ಲನೀಮರತಿ।**
**ಹುಚ್ಚನಾಗಿ ಭವಕೆ ಬಂದು। ಇಚ್ಚೆಯಂತೆ ನಡೆದುಕೊಂಡಿ।**
**ಬಿಚ್ಚಿಬಿಟ್ಟ ಗೂಳಿಯಂತೆ। ಉಚ್ಚನಾನೆಂದು ಜಗದಿ ಮೆರೆದಿ".** [೨೨೦]

ಕವಿಯಿತ್ರಿ ಪ್ರಮಿಳಾ ಜಾನಪ್ಪಗೌಡ ಚಿಂಚೋಳಿ ಇವರ ಒಂದು ಹೃದಯಸ್ಪರ್ಷಿ ಕವನ "ಮತ್ತೆ ಬರಲಾರೆದೇವಾ"ದ ಪಂಕ್ತಿಗಳನ್ನು ಓದಿ. ಜೀವನ ಎಷ್ಟು ನೋವಿನಿಂದ ತುಂಬಿದೆ ಎಂದು ಹೇಳುತ್ತಾರೆ. ಕವನವು ಆಲ್ದಾಳರ ಜೀವನ ನೀತಿಯಲ್ಲೇ ಸಾಗಿದಂತಿದೆ.

**"ಮತ್ತೆ ಬರಲಾರೆದೇವಾ, ಈ ಜಗಕ್ಕೆ ಮತ್ತೆ ಬರಲಾರೆ**
**ಮಾತಿನಲಿ ಮಾವು, ಒಳಗೆಲ್ಲ ನೋವು, ಹಣವೇ ಹೊಣೆಯಾದ**
**ಈ ಜಗಕೆ? ಮತ್ತೆ ಬರಲಾರೆದೇವಾ".**

ಎಂದು ಕವಿಯ ಮನಸ್ಸು ತಡಬಡಿಸುತ್ತದೆ. ಈ ಜಗತ್ತಿನಲ್ಲಿ ನಲಿವುಗಿಂತ ನೋವೇ ತುಂಬಿದೆ ಸುಖಕ್ಕಿಂತ ದುಃಖವೇ ಹೆಚ್ಚು, ಮೋಸ, ವಂಚನೆ, ಈರ್ಷೆ-ಅಸೂಯೆಗಳಿಂದ ಆವರಿಸಿದ 'ಈ ಜಗಕ್ಕೆ ಮತ್ತೆ ಬರಲಾರೆ' ಎಂದು ಕಳವಳಿಸುತ್ತದೆ. ಜೀವನದಲ್ಲಿ ಹಣವೇ ಮುಖ್ಯವಲ್ಲ. ಜೀವನದ ಮೌಲ್ಯಗಳು ಮುಖ್ಯ, ಮೌಲ್ಯಗಳನ್ನು ಎತ್ತಿಹಿಡಿದು ಬದುಕಿ, ಬದುಕಿಸಿದ ಸತ್ಯವೇ ಸಂಸಾರ. ಈ ಸಂಸಾರ ಸೂತ್ರದ ಎರಡು ಗಾಲಿಗಳು "ಸತಿ-ಪತಿ" ಅಂತೆಯೇ,

**"ಮತ್ತೆ ಭವಕೆ ಯಾಕೆ-ಬಂದೆಣ್ಣಾ। ಬಂದವ ಬಂದಿದಿ।**
**ಮಿಥ್ಯ ಪ್ರಪಂಚವ ನೆಚ್ಚಬೇಡಣ್ಣಾ।**
**ಸತಿ ಸುತರ ಜಾಲದಲ್ಲಿ। ಸತ್ಯಸದಮಲ ಜ್ಞಾನ ಮರತಿ।**
**ಹಿತಕರ ನುಡಿಗಳು ಆಲಿಸುತ್ತ। ಸತ್ತು ಸತ್ತು ಹುಟ್ಟಿ ಬರತಿ।"**

**ಭಕ್ತಿಗೀತೆಗಳು :-** ಪ್ರಶಾಂತ ಮನಸ್ಸು, ಶುದ್ಧವಾದ ಆಚರಣೆ, ಭಗವಂತನ ನಾಮಸ್ಮರಣೆ, ಜೀವನದ ಶ್ರೇಯಸ್ಸಿಗೆ ಹೆದ್ದಾರಿ : ಈ ನಿಟ್ಟಿನಲ್ಲಿ ಎಲ್.ಬಿ.ಕೆ. ಆಲ್ದಾಳರು ಮಹಾತ್ಮಾ ಶ್ರೀ ಸಿದ್ಧಬಸವೇಶ್ವರ ಚರಿತ್ರೆ, ಪೂಜೆ, ನೂರೆಂಟು ನಾಮಾವಳಿ, ಸುಪ್ರಭಾತ, ಭಕ್ತಿಗೀತೆಗಳು ಹಾಗೂ ಮಂಗಲಗೀತೆಗಳನ್ನು ಬರೆದು ನಾಡಿಗರಿಗೆ ಸಮರ್ಪಿಸಿರುವುದು ಅವರ ಆಧ್ಯಾತ್ಮ ಚಿಂತನೆಗೆ ಸಾಕ್ಷಿಯಾಗಿದೆ. ನಾಮಾವಳಿ, ಭಕ್ತಿಗೀತೆಗಳು ಜನಮನದ ಮೇಲೆ ಆದರ್ಶ ಸಂಸ್ಕೃತಿಯನ್ನು ಬಿಂಬಿಸುತ್ತವೆ.

**"ಎನ್ನೆದೆಯ ಗುಡಿಯಲ್ಲಿ। ನೀಬಂದು ನೆಲೆಸಯ್ಯ।**
**ಕೋಳಕೂರ ಬಸವೇಶಅಯ್ಯ।**
**ಸಗರಾದ್ರಿ ಭೂವನದಿ। ನೆಲೆಸಿರುವ ಶಿವಯೋಗಿ।**
**ಅನುಷ್ಠಾನ ನೀಗೈದೆ। ಜಗದ ಶಾಂತಿಯ ಬಯಸಿ।"** [೨೨೧]

ಕವಿ ಆಲ್ದಾಳ ಅವರು ಮೇಲಿನ ಭಕ್ತಿ ಗೀತೆಯಲ್ಲಿ, ಸುಕ್ಷೇತ್ರ ಕೋಳಕೂರದ ಶ್ರೀ ಬಸವೇಶನನ್ನು ಮನದುಂಬಿ ಹೊಗಳುತ್ತ ನನ್ನ ಎದೆಯ ಮಂದಿರದಲ್ಲಿ ನೆಲಸಯ್ಯ ಎಂದು ವಿನಮ್ರವಾಗಿ ಪ್ರಾರ್ಥಿಸುತ್ತಾನೆ.

ಮತ್ತೊಂದು ಭಕ್ತಿಯ ಆಳದಲ್ಲಿ ಮುಳುಗಿರುವ ಆಲ್ದಾಳರ ಕಲ್ಪನೆ ಪರಾಕಾಷ್ಟೆಗೆ ತಲುಪಿದ್ದು ನೋಡಿ.

**"ನಿನ್ನ ಚರಿತೆ–ಬರೆಯಲು ಭೂಮಿಹಾಳಿ ತುಂಬಿತು।**
**ನಿನ್ನ ಚರಿತೆ ಬರೆಯಲು ಗಿಡಮರ ಲೇಖನಿ ಸವೆಯಿತು।**
**ನಿನ್ನ ಚರಿತೆ ಬರೆಯಲು ಸಪ್ತಸಾಗರ ಮಸಿ ಬರಿದಾಯಿತು।**
**ನಿನ್ನ ಚರಿತೆ ಬರೆಯಲು ಕೊನೆಮೊದಲಿಲ್ಲವಾಯಿತು।**
**ಆಲ್ದಾಳ ನೆದೆ ತುಂಬಿತು।"** [೨೨೨]

ಆಲ್ದಾಳ ಅವರು ಅನೇಕ ಭಕ್ತಿಗೀತೆಗಳನ್ನು ಬರೆದು ಭಕ್ತರ ಸಮ್ಮುಖದಲ್ಲಿ ಇರಿಸಿದ್ದಾರೆ. ಮಳೆ ಬೀಳುವುದು ಯಾರ ಒತ್ತಾಯಕ್ಕಾಗಿ ಅಲ್ಲ. ಅದು ಬೀಳುವ ಕ್ರಮವನ್ನು ಯಾರು ನಿರ್ಧರಿಸಲಾಗದು. ಮಳೆ ಸ್ವಚ್ಛಂದವಾಗಿ ಬೀಳುತ್ತದೆ. ಹಾಗೆಯೇ ಆಲ್ದಾಳರ ಲೆಖ್ಖಣಿಕೆಯಿಂದ ಅನೇಕ ಕವನಗಳು, ಭಕ್ತಿಗೀತೆಗಳು ಸ್ವಚ್ಛಂದವಾಗಿ ಮೂಡಿಬಂದಿವೆ. 'ಹೃದಯದ ಸ್ಪಂದನ'ಕ್ಕೆ 'ಅಂತರಂಗದ ಸ್ವರ ಸಮ್ಮೇಳನ' ಜತೆ ಯಾಗಿದೆ. ಮನ ದುಂಬಿ, ಭಾವ ದುಂಬಿ ಮೂಡಿಬಂದ ಗೀತೆಗಳಿವು– ಭಕ್ತಿಯ, ಆನಂದದ ಸಂಪತ್ತು ಈ ಗೀತೆಗಳಲ್ಲಿದೆ.

**"ಜ್ಞಾನನಿಧಿ ಬಸವೇಶ। ಮತ್ತೊಮ್ಮೆಬಾರಯ್ಯ।**
**ನಿನಗಾಗಿ ಕಾದಿಹರು। ಭಕ್ತಸ್ತೋಮವಯ್ಯ।**
**ಹರುಷದ್ವೊನಲು ಹರಿಸಿ। ಮಳೆಬೆಳೆ ನೀಡಯ್ಯ।**
**ಆಲ್ದಾಳ ಶಿಶುವಿನಾ। ಕ್ರಂದನ ನೀಕೇಳಯ್ಯಾ।"** [೨೨೩]

# ಶರಣ ಕಿರಣ

"ಶರಣ ಕಿರಣ" ವಿಶ್ವಾರಾಧ್ಯರ ಭಕ್ತಿಗೀತೆಗಳ ಗುಚ್ಛ. ಪೂಜ್ಯ ಗುರುದೇವರ ಕರುಣೆಯ ಕಾಸಾರದಲ್ಲಿ ಮಿಂದು ಮೈದಾಳಿರುವ ಆಲ್ದಾಳರ ಭಾವನೆಯೇ ಮನತುಂಬಿ ಹಾಡಿರುವ ಈ ಗೀತೆಗಳು ಶ್ರೀ ಗುರುದೇವ ವಿಶ್ವಾರಾಧ್ಯರ ಸ್ತುತಿಯೇ ಇದರ ಜೀವಾಳ, ಭಕ್ತಿ ಭಾವನೆಯೇ ಇವರ ಆಧಾರ. ಈ ಅನುಪಮ ಆನಂದ ಆತ್ಮಾನಂದ ತಮಗೂ ಲಭಿಸಲಿ, ಓದಿ ನೋಡಿ, ಹಾಡಿನಲಿಯಿರಿ.

ವಿಶ್ವಾರಾಧ್ಯರ ಬದುಕನ್ನು ಕುರಿತು ಬರೆಯುವುದು ಕಷ್ಟಸಾಧ್ಯ. ಅವರ ಬದುಕೇ ವಿಚಿತ್ರ. ಬಾಹ್ಯಜಗತ್ತಿನ ಪ್ರಜ್ಞೆಯೇ ಇಲ್ಲದಂತೆ, ತಮ್ಮದೇ ರೀತಿಯಲ್ಲಿ ಇರುತ್ತಿದ್ದರು.

ವಿಶ್ವಾರಾಧ್ಯರ ಬದುಕಿನಲ್ಲಿ ಜರುಗಿದ ಘಟನೆಗಳು, ಪವಾಡಗಳು ಅದ್ಭುತ, ಅಸಾಮಾನ್ಯ, ಅವರ ಬದುಕು ಲೋಕಕಲ್ಯಾಣಕ್ಕಾಗಿ, ಸಮಸ್ತ ಮಾನವ ಕುಲಕ್ಕಾಗಿ ಮೀಸಲಾಗಿತ್ತು.

ವಿಶ್ವಾರಾಧ್ಯ ಸಿದ್ಧ ಸಂಸ್ಥಾನ ಮಠ ಅಬ್ಬೆತುಮಕೂರ ಶ್ರೀಮಠದ ಅನನ್ಯ ಭಕ್ತರಾಗಿರುವ ಕವಿ ಎಲ್.ಬಿ.ಕೆ.ಆಲ್ದಾಳರು ವಿಶ್ವಾರಾಧ್ಯರ ಜೀವನ ಪಾವನಕ್ಕೆ ಮನಸೋತು "ಶರಣ ಕಿರಣ" ಎಂಬ ವಿಶ್ವಾರಾಧ್ಯರ ಭಕ್ತಿಗೀತೆಗಳ ಗ್ರಂಥ ರಚಿಸಿರುವುದು ಸಹಜ ಎನ್ನಬಹುದು. ವಿಶ್ವಾರಾಧ್ಯರ ಬಗ್ಗೆ, ಅವರ ದಿವ್ಯಜೀವನದ ಬಗ್ಗೆ ತಮ್ಮ ರಕ್ತದ ಕಣ-ಕಣಗಳಲ್ಲಿ ಭಕ್ತಿಯನ್ನೇ ತುಂಬಿಕೊಂಡಿದ್ದಾರೆ ಅದೀಗ ಭಕ್ತಿ ಗೀತೆಗಳ ಮುಖಾಂತರ ಹೊರಬಂದು ಇತರರಿಗೂ ಹಂಚುವಲ್ಲಿ ಮುಂದಾಗಿದ್ದಾರೆ.

**" ಈಶಾ ಈಶಾ। ತಿರುಗಿ ಬಂದೆನುದೇಶಾ।**
**ನಿನ್ನ ಹೊರತು ನನಗಾರಿಲ್ಲಾ। ಈಶಾ ನೀ ನನ್ನ ಈಶಾ।...**[೨೨೪]

ನಿನ್ನ ಹೊರತು ನನಗಾರುಂಟು ಎಂದು ಹೇಳುವಲ್ಲಿ ಆಲ್ದಾಳರು ಭಕ್ತಿ ಮೆರೆದಿದ್ದಾರೆ. ಗೀತೆಗಳನ್ನೋದಿದಾಗ ಮನುಷ್ಯನಲ್ಲಿರಬೇಕಾದ ಪ್ರೀತಿ, ವಿಶ್ವಾಸ, ನಂಬಿಕೆ ಗರಿಗೆದರಿ ನಿಲ್ಲುತ್ತವೆ.

ಶರಣ-ಕಿರಣ ಕೃತಿಯಲ್ಲಿ ೪೩ ಭಕ್ತಿಯಗೀತೆಗಳನ್ನು ಭಕ್ತರ ಹೃದಯಕ್ಕೆ ತಟ್ಟಿಕೊಳ್ಳುವಂತೆ ರಾಗಬದ್ಧವಾಗಿ ರಚಿಸಿದ್ದಾರೆ. ಓದುಗರನ್ನು ಭಕ್ತಿರಸದಲ್ಲಿ ಮಿಂದು, ಮೈಯೆಲ್ಲಾ ಪಾವನಗೊಳಿಸುವಂತೆ ಮಾಡುವ ಈ ಗೀತೆಗಳು ನಿತ್ಯ ಹಾಡುವಂತಹವುಗಳೇ ಆಗಿವೆ.

**"ಮನವೆಂಬ ಭೂಮಿಗೆ। ಹಸನಾಗಿ ನೀಮಾಡೋ।**
**ತನುತ್ರಯದಿಂದ ನೀ। ಈಶ ನೋಳೀಡ್ಯಾಡೋ"** [೨೨೫]

**"ದೀಪ ಹಣ್ಣೆಂದೂಹಿಸಿ। ಹುಳು ಸತ್ತು ಹೋದಂತೆ।**
**ರೂಪ ಯೌವ್ವನಶ್ರೀಗೆ। ಹೊರಳಾಡಿ ಮನಸೋತೆ।**
**ತಾಪತ್ರಯ ದೊಳಗ। ಶಿವನಾಮ ನೀಮರತಿ।**
**ಜಪತಪ ಮಾಡಲು। ಹದಗೊಳಿಸು ಮನನಿರತ"** [೨೨೬]

ಮಾನವನ ವಿಚಾರ, ಮನಸ್ಸು ಎತ್ತ ಹರಿದಾಡುತ್ತಿದೆ ಎಂಬುದು ಮೇಲಿನ ಎರಡು ಗೀತೆಗಳ ಸಾಲುಗಳು ಸೂಚಿಸಿದ್ದು, ಅದಕ್ಕಾಗಿ ಎಚ್ಚರವಹಿಸಿ ಶಿವನಾಮವೇ ಗತಿ ಎಂದು ಕವಿಗಳು ಹೇಳಿದ್ದರಲ್ಲಿ ಜೀವನದ ಸಾರ್ಥಕತೆ ಇದೆ.

**"ವ್ಯಸನ ಅಳಿಯಬೇಕ। ಮನವು। ಹಸನಾಗಿರಬೇಕ।**
**ಹಸಿ, ತೃಷೆಗಳಳಿದು। ಈಶನ। ದ್ಯಾಸದೊಳಿರಬೇಕು।**
**ದೇಶಕಧಿಕವಾದ। ಯಡ್ರಾಮಿ। ವಿಶ್ವಾರಾಧ್ಯರಪಾದ।**
**ಈಸುತ ನೀ ಬಂದು। ಗಟ್ಯಾಗಿ ವ್ಯಾಸಪೀಠಕ್ಕೆ ನಮಿಸು।"** [೨೨೭]

ಅಬ್ಬೆತುಮಕೂರು ದಿವ್ಯಕ್ಷೇತ್ರ. ಶ್ರೀ ವಿಶ್ವಾರಾಧ್ಯರ ಗದ್ದುಗೆ ಭಕ್ತರ ಚಿನ್ನದ ಗಣಿಯಾಗಿದೆ. ದರ್ಶನ ಪಡೆದ ಭಕ್ತಾದಿಗಳಿಗೆ ಏನೆಲ್ಲ ಭಾಗ್ಯಲಭಿಸಿದೆ. ಇಂದು ಶ್ರೀ ಸದ್ಗುರು ವಿಶ್ವಾರಾಧ್ಯ ಸಿದ್ಧ ಸಂಸ್ಥಾನ ಮಠದ ಹೊಣೆಯನ್ನು ಹೊತ್ತು ಸಾಗಿರುವ ಪರಮಪೂಜ್ಯ ಷ.ಬ್ರ.ಶ್ರೀ ಗಂಗಾಧರ ಶಿವಾಚಾರ್ಯರು ವಿಶ್ವಾರಾಧ್ಯನ ಅಪರಾವತಾರಿಗಳು ಶ್ರೀಗಳಿಂದ ಕಲ್ಯಾಣ ಕಾರ್ಯಗಳು ಎಡಬಿಡದೆ ನಡೆದಿವೆ. ಶ್ರೀಮಠ ಉಜ್ವಲವಾಗಿ ಬೆಳಗುತ್ತಿದೆ. ಶ್ರೀಗಳ ಕೃಪೆಯಿಂದ, ಧಾರ್ಮಿಕ, ಸಾಹಿತ್ಯಿಕ, ಸಾಂಸ್ಕೃತಿಕ ಕಾರ್ಯಗಳು ಜರಗುತ್ತ ವಿಶ್ವಾರಾಧ್ಯರ ಮಠನಾಡಿನ ವಿಶ್ವಜ್ಯೋತಿಯಾಗಿದೆ.

ಮಾನವನ ಅಭಿಪ್ಸೆ ಮೇಲು, ಮೇಲಕ್ಕೆ ಏರಬೇಕು. ಭಗವಂತನ ಕೃಪೆ ಕೆಳಗೆ ಇಳಿದು ಬರಬೇಕು. ಅವೆರಡು ಸಂಧಿಸುವಾಗ ಮಾನವ ಜೀವನ ಸಫಲವಾಗುತ್ತದೆ. ದೈವೀ ಜೀವನದ ಮಾರ್ಪಾಡು ಈ ಭೂಮಿಯಲ್ಲಿ ಸಾಧ್ಯವಾಗುತ್ತಿದೆ.

ಅಬ್ಬೆ ತುಮಕೂರು ಶ್ರೀ ವಿಶ್ವಾರಾಧ್ಯರಿಂದ, ಶ್ರೀ ಗಂಗಾಧರ ಮಹಾಸ್ವಾಮಿಗಳಿಂದ ಸುಕ್ಷೇತ್ರವಾಗಿ ಬರುವ ಭಕ್ತರ ಪಾಪ ಪರಿಹರಿಸಿ ಇಷ್ಟಾರ್ಥಕೊಡುವ ದೇವ ಮಂದಿರವಾಗಿದೆ; ಮುಕ್ತಿ ಕ್ಷೇತ್ರವಾಗಿದೆ. ಪರಮಪೂಜ್ಯ ವಿಶ್ವಾರಾಧ್ಯರಿಗೂ ಪೂಜ್ಯ.ಷ.ಬ್ರ.ಗಂಗಾಧರ ಸ್ವಾಮಿಗಳಿಗೂ ಕೋಟಿ ನಮನ.

# ಜನಪದ ಜಂಗಮ

(ತ್ರಿಪದಿ)

ಹಾರಕೂಡ ಸಂಸ್ಥಾನ ಹಿರೇಮಠವು ಕಲ್ಯಾಣ ಕರ್ನಾಟಕದ ಒಂದು ಅತ್ಯಂತ ಜಾಗೃತ ಶ್ರೀಮಠವಾಗಿದೆ. ಅದಕ್ಕೆ ಮುಖ್ಯ ಕಾರಣ ಈ ಶ್ರೀ ಮಠದ ಪರಂಪರಾಗತ ಶ್ರೀಗಳ ತಪಃ ಪ್ರಭಾವ ಮತ್ತು ಭಕ್ತೋದ್ಧಾರದ ಕೈಂಕರ್ಯ. ಶ್ರೀ ಮ.ನಿ.ಪ್ರ. ಜಗದೇವ ಮಲ್ಲಬೊಮ್ಮ ಸ್ವಾಮಿಗಳು ಆಲಮೇಲ, ಸಿಂದಗಿ ತಾಲೂಕು. ವಿಜಾಪೂರಜಿಲ್ಲೆ, ಶ್ರೀಗಳು ತಮ್ಮ ಶುಭ ನುಡಿಯಲ್ಲಿ ಹೀಗೆ ಬರೆಯುತ್ತಾರೆ "ಕೆಲವರಿಂದ ಊರು ಹೆಸರು ಪಡೆಯುತ್ತದೆ. ಕೆಲವರು ಊರು ಹೆಸರಿನಿಂದ ಪ್ರಸಿದ್ಧರಾಗುತ್ತಾರೆ. ಬಂಥನಾಳ ಸಂಗನಬಸವ ಶಿವಯೋಗಿಗಳವರಿಂದ, ಹಲಸಂಗಿ ಮಧುರ ಚೆನ್ನರಿಂದ; ಮಕ್ಕಾ ಮಹ್ಮದರಿಂದ; ಸೊನ್ನ; ಶಿವಾನಂದ ಶಿವಯೋಗಿಗಳಿಂದ; ಗಯಾ:ಬುದ್ಧನಿಂದ: ಕಲ್ಯಾಣ:ಬಸವಣ್ಣನಿಂದ, ಹೀಗೆ ಒಂದು ಚಿಕ್ಕ ಗ್ರಾಮವನ್ನು ರಾಷ್ಟ್ರದ ಎತ್ತರಕ್ಕೆ ಹಾರಿಸಿದ ಕೀರ್ತಿ ನೆಲದ ಮೇಲಿನ ನಕ್ಷತ್ರದಂತೆ ಬಾಳಿ ಜನ ಮಾನಸದಲ್ಲಿ ಪಾವನರಾದ ಶಿವಯೋಗಿಗಳಿಂದ, ಶರಣರಿಂದ ಆಗಿದೆ". [೨೨೮]

ಇವರ ಸಾಲಿನಲ್ಲಿ ಹಾರಕೂಡ ಶ್ರೀ ಚೆನ್ನಬಸವ ಶಿವಯೋಗಿಗಳು ಒಂದು ಶತಮಾನ ಕಾಲ ಬಾಳಿ, ಕಲ್ಯಾಣ ಕರ್ನಾಟಕದ ಸುತ್ತಣ ಪ್ರದೇಶದ ಜನರ ಬದುಕನ್ನು ಹಸನುಗೊಳಿಸಿದ ಮಹಾತ್ಮರು. ಇಂದಿಗೂ ಅವರ ಶ್ರೀ ಗದ್ದುಗೆಗೆ ಲಕ್ಷಾಂತರ ಭಕ್ತರು ಭಕ್ತಿಯಿಂದ ನಡೆದು ಕೊಳ್ಳುತ್ತಿದ್ದಾರೆ. ಹಾರಕೂಡ ಪುಣ್ಯಕ್ಷೇತ್ರ ಅಧ್ಯಾತ್ಮಿಕವಾಗಿ, ಸಾಂಸ್ಕೃತಿಕವಾಗಿ ತನ್ನನ್ನು ಗುರುತಿಸಿಕೊಂಡು ಸಾಂಸ್ಕೃತಿಕ ಕ್ಷೇತ್ರ ಇದಾಗಿದೆ. ಇಂತಹ ಪಾವನ ಸ್ಥಾನದಲ್ಲಿ ಕಾಯಕವನ್ನೇ ಜೀವನದ ಉಸಿರಾಗಿಸಿಕೊಂಡು, ದಾಸೋಹವನ್ನೇ ಧ್ಯೇಯ ಸಂಕಲ್ಪವಾಗಿಸಿ ತಮ್ಮ ಬಾಳನ್ನೇ ಸವೆಸಿದ ಮಹಾ ಶಿವಯೋಗಿಗಳು ಇವರಾಗಿದ್ದರು.

ಎಲ್.ಬಿ.ಕೆ.ಆಲ್ದಾಳರು ಈಗಾಗಲೇ "ಹಾರಕೂಡ ಶ್ರೀ ಚೆನ್ನಬಸವ ಶಿವಯೋಗಿ ಮಹಾತ್ಮೆ" ನಾಟಕ ರಚಿಸಿದ್ದು. ಅದು ಅನೇಕ ಯಶಸ್ವಿ ಪ್ರಯೋಗವನ್ನು ರಂಗಭೂಮಿಯಲ್ಲಿ ಪ್ರದರ್ಶನ ಮುಖಾಂತರ ಅನೇಕರನ್ನು ಮುಗ್ಧಗೊಳಿಸಿದೆ. ಆ ನಾಟಕದ ಪಾತ್ರರಚನೆ, ಸಂಭಾಷಣೆ ಬರೆಯುವುದು ಸುಲಭದ ಮಾತಲ್ಲ. ಆದರಲೂ ಎಲ್.ಬಿ.ಕೆ ಅವರು ನಾಟಕದಲ್ಲಿ ತೋರಿದ ಜಾಣ್ಮೆಯಿಂದಾಗಿ ಶ್ರೀ ಚೆನ್ನಬಸವ ಶಿವಯೋಗಿ ನಾಟಕ ಜನಪ್ರಿಯತೆಗಳಿಸಿದ್ದಲ್ಲದೆ ಈಗಿರುವ ಷ.ಬ್ರ.ಚನ್ನವೀರ ಶಿವಾಚಾರ್ಯರು ನಾಟಕ ನೋಡಿ ಆನಂದಿಸಿ, ಎಲ್.ಬಿ.ಕೆ.ಅವರನ್ನು ಪ್ರಶಂಸಿಸಿ ಸನ್ಮಾನಿಸಿದ್ದಾರೆ.

"ಜನಪದ ಜಂಗಮ" ಶ್ರೀ ಚೆನ್ನಬಸವ ಶಿವಯೋಗಿಗಳ ಜೀವನ ಚರಿತ್ರೆಯಾಗಿದ್ದು ಆಲ್ದಾಳರು ಇದನ್ನು ತ್ರಿಪದಿ ರೂಪದಲ್ಲಿ ಮನಸ್ಸಿಗೆ ಮುಟ್ಟುವಂಥ ಶೈಲಿಯಲ್ಲಿ ಶಬ್ಧಾಲಂಕಾರಗಳಲ್ಲಿ ಬರೆದು ಯಶಸ್ವಿಯಾಗಿದ್ದಾರೆ. ಕೃತಿ ಜನಪದದ ಮಹತ್ವ ನೆನಪಿಸಿಕೊಡುತ್ತದೆ. ಕನ್ನಡ ಕಸ್ತೂರಿಯ ಜನಪದ ಸಾಹಿತ್ಯ ಪ್ರಕಾರದ ಬಗ್ಗೆ ಹೇಳುವುದೇನಿದೆ? ಕನ್ನಡ ಸಾಹಿತ್ಯ ಗಂಗೆಯ ಮಾನಸ ಗಂಗೋತ್ರಿಯೇ ಸೈ. ನಾಡವರ ಬಾಯಲ್ಲಿ ಸಹಜ ಸುಂದರವಾಗಿ ಹರಿದಾಡಿದ ಹೆಚ್ಚು ಸಂಖ್ಯೆಯಲ್ಲಿ

ತ್ರಿಪದಿಗಳಲ್ಲಿ ಮನೋಜ್ಞವಾಗಿ ಮೂಡಿಬಂದಿದೆ. ಹಿಡಿಮುಷ್ಠಿಯಲ್ಲಿ ಸಮಗ್ರ ಸಮಷ್ಟಿಯನ್ನೊಳಗೊಂಡು ಓದುಗರನ್ನು ಬೆರಗು ಗೊಳಿಸುತ್ತದೆ.

ಜನಮಾನಸದಿಂದ ನಶಿಸುತ್ತಿರುವ ಜನಪದ ಸಾಹಿತ್ಯ ಪ್ರಕಾರಕ್ಕೆ ಪುಷ್ಟಿ ನೀಡುವ 'ಜನಪದ ಸಂಗಮ' ದಂತಹ ಕೃತಿಗಳ ಸಂಪಾದನೆ ಸಾಹಿತ್ಯ ಸಾಹಸ ಕಾರ್ಯವನ್ನು ಆಲ್ದಾಳರು ಸಲೀಸಾಗಿ ನಿಭಾಯಿಸಿ ಜನಪದ ಸಾಹಿತ್ಯದ ಪ್ರಭಾವಳಿ ಮಾಸದಂತೆ ಉಳಿಸಿ ಬೆಳೆಸಲು ನೆರವಾಗಿದ್ದಾರೆ. ಉತ್ತಮವಾಗಿರುವ ಇಂತಹ ಕೃತಿಗಳು ಲೋಕಾರ್ಪಣೆ ಗೊಂಡಿರುವುದು ಶ್ರೀ ಚನ್ನಬಸವ ಶಿವಯೋಗಿಗಳ ಅಪಾರ ಅಭಿಮಾನಿ ಭಕ್ತರಿಗೆ, ಓದುಗರಿಗೆ ಅಮೃತ ನೀಡಿದಂತಾಗಿದೆ. ಈ ಗ್ರಂಥ ಬರೀ ಲೆಕ್ಕಣಿಕೆಯಿಂದ ಬರೆದುದಲ್ಲ ಅನುಭಾವದ ವಕ್ಕಣಿಕೆಯು ಲೇಖಕರ ಮನದಲ್ಲಡಗಿದೆ. ಮಮತೆಯ ಆ ಮಹಾಶಕ್ತಿ ಅದು ಜಗವ ಬೆಳಗಿಸಲಿದೆ.

**ಕಲ್ಯಾಣನಾಡೆಂದು। ವಲಯದಲಿ ಹೆಸರು।**
**ಕಲ್ಯಾಣದಣ್ಣ ಬಸವಣ್ಣ। ಬರುವಾಗ।**
**ಬಕ ಳ್ಯಾಗ ಹೂವು ಅರಳ್ಯಾವ॥ ॥೧॥**

**ಜಾತಿ ಮತಗಳಮೀರಿ। ನೀತಿನೇಮವಸಾರಿ।**
**ಭಾತೃತ್ವ ಭಾವ ತುಂಬ್ಯಾರ। ಶರಣರು।**
**ಕತ್ತಲಿಗೆ ಬೆಳಕು ನೀಡ್ಯಾರು ॥೩॥**

ಜನಪದ ಸಾಹಿತ್ಯದ ತಲಕಾವೇರಿ ಎಂದೇ ಪ್ರತೀತಿ ಪಡೆದ ತ್ರಿಪದಿಯಲ್ಲಿ ಬಹು ಸರಳ, ಸುಂದರ, ಸುಲಲಿತ, ಪ್ರಾಸ ಬದ್ಧವಾಗಿ "ಜನಪದ ಜಂಗಮ" ರಚಿಸಲಾಗಿದೆ.

**ಜಾತಿ ಜಂಜಡವಳಿದು। ನೀತಿ ನೇಮವ ಹಿಡಿದು।**
**ಪಾತಕದ ಗುಣಗಳು ಬಿಡಿರೆಂದ। ಚನ್ನಬಸವ।**
**ಪ್ರೀತಿಯ ಪರಿಸರ ಬೆಳೆಸಂದ॥ ॥೧೧೪॥**

**ಮರುಳ ಮಾಡೂದುಬ್ಯಾಡ। ಕೊರಳ ಕೊಯುದುಬ್ಯಾಡ।**
**ದುರಳರಸಂಗ ಬಲು ಕೇಡೋ। ಚನ್ನಬಸವ ।**
**ಶರಣರ ಮಾರ್ಗ ಹಿಡಿಯಿರೋ॥ ॥೩೮೮॥**

ಹಾರಕೂಡ ಹಿರೇಮಠದ ಮೇಲೆ ಅಪಾರ ಭಕ್ತಿ ಶ್ರದ್ಧೆಯನ್ನಿಟ್ಟುಕೊಂಡವರು ಎಲ್.ಬಿ.ಕೆ. ಆಲ್ದಾಳ ಅವರು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಗುಬ್ಬಿ ವೀರಣ್ಣ ಪ್ರಶಸ್ತಿಗೆ ಭಾಜನರಾಗಿರುವರಲ್ಲದೆ ಹಾರಕೂಡ ಸಂಸ್ಥಾನ ಹಿರೇಮಠದ ಪ್ರತಿಷ್ಠಿತ "ಶ್ರೀ ಚೆನ್ನರೇಣುಕ ಬಸವ ಪ್ರಶಸ್ತಿ"ಯನ್ನು ಭಕ್ತಿ ಪೂರ್ವಕವಾಗಿ ಸ್ವೀಕರಿಸಿದ್ದಾರೆ ನಮ್ಮ ರಂಗನಾಟಕ ಕಲಾ ಪ್ರವೀಣರು.

**ಬರುವಾಗ ತಂದೇನೊ। ಹೋಗಾಗ ಒಯ್ತೇನೊ।**
**ಎರಡು ದಿನದ ಸಂತಿಮರಿಬ್ಯಾಡೋ। ಚನ್ನಬಸವ।**
**ಅರುವಿನ ಗಂಟು ನೀಕಟ್ಟಿಸ್ಯಾರೊ ॥ ॥೬೨೮॥**

ಬದುಕು ಕ್ಷಣಿಕವಾದುದು, ಸಾಧನೆ ಅಮರ. ಬರುವಾಗ ಬರಿಗೈಲೆ ಬಂದೀದಿ ಹೋಗುವಾಗ ಸಹ ಬರಿಗೈಲಿ ಎಂಬ ಅರಿವು ಇರಬೇಕು. ಸಹಸ್ರದ ಮೇಲೆ ತ್ರಿಪದಿಗಳು ಇದರಲ್ಲಿ ಸೇರಿವೆ. ಪ್ರತಿಯೊಂದು ಹೊಳೆಯುವ ರತ್ನಗಳೆ ಆಗಿವೆ. ನಾನು ನನ್ನದು ಎನ್ನುವ ಅಹಂಕಾರ ಯಾರಲ್ಲೂ ಬಾರದಿರಲಿ. ಇಲ್ಲಿನ ತ್ರಿಪದಿಗಳು ಬೋಧಪ್ರದವೂ ಆಗಿವೆ. ಚೆನ್ನಬಸವ ಶಿವ ಯೋಗಿಗಳ ಬದುಕಿನ ಅಂದವನ್ನು ದರ್ಶನ ಮಾಡುವ ಉದ್ದೇಶಹೊಂದಿ ಈ ಮಹಾಗ್ರಂಥ (ಪುರಾಣ) ರಚಿಸಿ ಎಲ್.ಬಿ.ಕೆ. ಅವರು ಜೀವನ ಸಾರ್ಥಕ ಪಡೆದಿದ್ದಾರೆ.

**ಹರುಷದಿಂದಲಿ ನಾನು। ಹಾರ್ನೂಡ ಶ್ರೀ ಮಠದ।**
**ಚರಿತ್ರೆಯ ತಿಳಿಸಿರುವೆ ಜನಪದದಿ। ಚನ್ನವೀರ।**
**ಚರಣಕ್ಕೆ ಬಾಗಿರುವೆ ಹರಸಯ್ಯಾ॥ ॥೧೧೬೦॥**

**ಜನಪದ ಜಂಗಮ। ತನುತ್ರಯದ ಸಂಗಮ।**
**ಜನಪದ ನುಡಿಯಿಂದ ಪೂಜಿಸುವೆನೆ। ಚನ್ನವೀರ।**
**ಚಿನ್ನ ಆಲ್ದಾಳನಿಗೆ ಶುಭ ಹರಿಸಿ॥ ॥೧೧೬೨॥**

ಎಲ್.ಬಿ.ಕೆ. ಅವರು ಯಾವ ಸದ್ಭಾವದಿಂದ ಶ್ರೀಷ.ಬ್ರ.ಚೆನ್ನಬಸವಯೋಗಿಗಳ ಜೀವನಚರಿತ್ರೆ (ಪುರಾಣ) ತ್ರಿಪದಿಯಲ್ಲಿ 'ಜನಪದ ಜಂಗಮ' ರಚಿಸಿರುವರೋ ಅದೇ ಶಿವಾಭಾವದಿಂದ ವಾಚಕರು ಮನನಿಸಲಿ.

# ಕಾಶಿ ಪ್ರವಾಸ ಕಥನ

"ದಿನ ನಿತ್ಯದ ಜಂಜಡಗಳಿಂದ, ಮನಸ್ಸು ಭಾರವಾದಾಗ, ಬದಲಾವಣೆ ಅಗತ್ಯವೆನ್ನಿಸಿದಾಗ, ಉತ್ಸಾಹ ಕುಗ್ಗಿ ಹೋದಾಗ, ರೋಮಾಂಚನದ ಅಪೇಕ್ಷೆಯಾದಾಗ, ಸೋಲು–ಅವಮಾನಗಳಿಂದ ಮನಸ್ಸು ಜರ್ಝರಿತವಾದಾಗ, ಏಕತಾನತೆಯಿಂದ ವಿರಾಮ ಬೇಕೆನ್ನಿಸಿದಾಗ, ಹಾಗೂ ಓದದೇ ಹೊಸ ವಿಷಯಗಳನ್ನು ತಿಳಿದು ಕೊಳ್ಳಬೇಕೆನ್ನಿಸಿದಾಗ ಇರುವ ಒಂದೇ ಒಂದು ಉತ್ತರ ಪ್ರವಾಸ"[೨೨೮]

**ಮನಸ್ಸು ಮುದುಡಿದೆಯೆ?**
**ಮನಸ್ಸು ಗೊಂದಲದಲ್ಲಿದೆಯೇ?**
**ಮನಸ್ಸು ನೊಂದುಕೊಂಡಿದೆಯೆ?**
**ಜಾತಿ ಜಂಜಾಟದಲ್ಲಿ ಬಿದ್ದು ಬಳಲುತ್ತಿದೆಯೆ?**

ಹಾಗಾದರೆ ಪ್ರವಾಸಮಾಡಿ, ಮನಸಿನ ಬೇಗುದಿ ಕಳೆದುಕೊಳ್ಳಿ ಎಂದು ಶ್ರೇಷ್ಟ ನಾಟಕಕಾರ, ನಾಟಕರತ್ನ ಗುಬ್ಬಿ ವೀರಣ್ಣ ಪ್ರಶಸ್ತಿಗೆ ಭಾಜನರಾದ ಪ್ರವಾಸಪ್ರಿಯ ಶ್ರೀ ಎಲ್.ಬಿ.ಕೆ. ಆಲ್ದಾಳರು ತಮ್ಮ ಅನುಭವದಿಂದ ಹೇಳುತ್ತಿದ್ದಾರೆ. 'ದೇಶ ಸುತ್ತಬೇಕು, ಕೋಶ ಓದಬೇಕು' ಎನ್ನುವ ಗಾದೆ ಮಾತು ಬಳಕೆಯಲ್ಲಿದೆ. ಇದು ಅಪ್ಪಟ ಸತ್ಯ ಜೀವನ ಜಂಜಾಟದಲ್ಲಿ ಪರಿತಪಿಸುವವರು ಓದು ಬಾರದವರು ನಿಸರ್ಗದ ಜತೆಯಾಗಿ ಉಲ್ಲಾಸದ ಕ್ಷಣಗಳನ್ನು ಅನುಭವಿಸಲು ಪ್ರವಾಸಮಾಡಿ ಮನಸ್ಸು ಮುದಗೊಳಿಸಿಕೊಳ್ಳಿ.

ಕೇಳಿ ಸ್ವಾಮಿ, ಪ್ರವಾಸ ಕೈಕೊಂಡವರಲ್ಲಿ 'ರಾಮಾಯಣ'ದ ನಾಯಕ ಶ್ರೀರಾಮಚಂದ್ರ ತಂದೆಯ ವಚನ ಪಾಲಿಸಲು ವನವಾಸ ಮಾಡಲು ಪ್ರವಾಸ ಕೈಕೊಂಡನು, 'ಮಹಾಭಾರತ'ದಲ್ಲಿ ಕೇಳಿ ಬರುವ ಪಾಂಡವರು ಕೂಡಾ ಜೂಜಾಟದಲ್ಲಿ ಸೋತು, ದುರ್ಯೋಧನ ವಿಧಿಸಿದ ೧೪ ವರ್ಷಗಳ ವನವಾಸವನ್ನು ಪ್ರವಾಸದಲ್ಲಿ ಕಳೆದರೆಂಬುದು ವಿಶೇಷ! ನಾಲ್ಕು ಗೋಡೆಗಳ ಮಧ್ಯದಲ್ಲಿ ದಿನ ನಿತ್ಯ ಹೊರಳಾಡುವ ಬದಲು ಕೆಲವು ದಿವಸಗಳನ್ನಾದರು ಪ್ರಕೃತಿಯ ಮಡಿಲಲ್ಲಿ ಕಳೆಯುವುದು ಆರೋಗ್ಯಕ್ಕೂ ಕ್ಷೇಮ–ಮನಸ್ಸಿಗೂ ನೆಮ್ಮದಿ, ಆನಂದ.

ಶಿಸ್ತು, ಸ್ವಚ್ಛತೆ ಪರಿಪಾಲಿಸಲಾಗುತ್ತಿತ್ತು. ಶ್ರೀ ಸಿದ್ಧರಾಮ ಶಿವಾಚಾರ್ಯರು ಸೈ ಎನ್ನುವಂತೆ ಪ್ರವಾಸದಲ್ಲಿ ನಡೆದು ಕೊಂಡರು. ಅಲ್ಲಲ್ಲಿ ಧರ್ಮಸಭೆ ನಡೆಸಲಾಗುತ್ತಿತ್ತು ಯಾತ್ರಿಕರಿಗೆ ತ್ಯಾಗ ಜೀವನದ ಮೂಲ ಅರ್ಥ ತಂದು ಕೊಟ್ಟಿತು. ಅಂತ ದೇಶ ತಿರುಗಿದಾಗಲೇ ವಾಸ್ತವಿಕ ವಿಷಯಗಳು ಅನುಭವಕ್ಕೆ ಬಂದು ಮನಸ್ಸಿಗೆ ಮುದ ನೀಡುವುದು.

ಶ್ರೀಮದ ಕಾಶಿ ೧೦೦೮ ಜಗದ್ಗುರು ಜ್ಞಾನ ಸಿಂಹಾಸನಾಧೀಶ್ವರ ಡಾ.ಚಂದ್ರಶೇಖರ ಶಿವಾಚಾರ್ಯರಿಂದ ಹುಣ್ಣಿಮೆಯ ದಿವಸ ಕಾಶಿಯಲ್ಲಿರಬೇಕೆಂದು ಅಪ್ಪಣೆ ಕೊಟ್ಟಿದ್ದರಿಂದ ಯಾತ್ರಿಕರು ಅಂದು ಅಲ್ಲಿಗೆ ಬಂದಿಳಿದರು. ಸಾಯಂಕಾಲ ಜಂಗಮ ವಾಡಿ ಮಠದಲ್ಲಿ ಕಾರ್ಯಕ್ರಮ

ನಡೆಯಿತು. ಶಾಖಾಪೂರ ಮಠದೊಡೆಯರಾದ ಶ್ರೀ ಷ.ಬ್ರ.ಸಿದ್ಧರಾಮ ಶಿವಾಚಾರ್ಯರು ಪಾಲ್ಗೊಂಡಿದ್ದರು. ನೇತೃತ್ವ ಶ್ರೀ ಮದ್ಭನ ಕಾಶಿಜ್ಞಾನ ಸಿಂಹಾಸನಾಧೀಶ್ವರ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದಂಗಳವರು ವಹಿಸಿದ್ದರು. ಇದೇ ಸಂದರ್ಭದಲ್ಲಿ ಈ ಪ್ರವಾಸ ಕಥನ ಕೃತಿ ರಚಿಸಿದ ಎಲ್.ಬಿಕೆ.ಆಲ್ದಾಳರಿಗೆ "ಸಾಹಿತ್ಯ ಕಲಾಭೂಷಣ" ಎಂಬ ಪ್ರಶಸ್ತಿ ನೀಡಿದರೆ, ಅಮೃತೇಶ ಕಲಶೆಟ್ಟಿಯವರಿಗೆ 'ಪ್ರವಚನ ಕಲಾಭೀಷ್ಮ' ಪ್ರಶಸ್ತಿ ನೀಡಿದರು.

ಶ್ರೀಗಳು ಕುಳಿತ ದೋಣಿಯಲ್ಲಿಯೇ ಕುಳಿತುಕೊಂಡಿದ್ದ ಆಲ್ದಾಳರು, ದೋಣಿ ಸಾಗುತ್ತಿದ್ದಂತೆ ದ.ರಾ.ಬೇಂದ್ರೆಯವರ ಪ್ರಸಿದ್ಧ ಹಾಡಿನ ಸಾಲು ನೆನೆಸಿಕೊಂಡರು "ದೋಣಿಸಾಗಲಿ ಮುಂದೆಹೋಗಲಿ ದೂರ ತೀರವ ಸೇರಲಿ। ಬೀಸು ಗಾಳಿಗೆ ಬೀಳುತೇಳುತ, ತೆರೆಯ ಮೇಗಡೆ ಹಾಯಲಿ।

**"ಕಣ್ಣುಗಳಿದ್ದಾಗ ಕಾಶಿಗೆ ಹೋಗು ಬೇಕಂತೆ**
**ಕಾಲುಗಳಿದ್ದಾಗ ಕೇದಾರಕ್ಕೆ ಹೋಗ ಬೇಕಂತೆ**
**ಮನವಿಮಲ ವಿದ್ದಾಗ ಶ್ರೀ ಶೈಲಕ್ಕೆ ಹೋಗಬೇಕಂತೆ**
**ವಿಜಯೋತ್ಸವವಿದ್ದಾಗ ಉಜ್ಜಯನಿಗೆ ಹೋಗಬೇಕಂತೆ**
**ಸಂಭ್ರಮದಲ್ಲಿದ್ದಾಗ ರಂಭಾಪುರಿಗೆ ಹೋಗಬೇಕಂತೆ"**

ಇದರಂತೆ ನಡೆದು ಕೊಂಡವರು ಭಾಗ್ಯವಂತರು ಅಲ್ಲವೆ? ಇದಕ್ಕೆ ಗುರುವಿನ ಕೃಪೆಯೂ ಬೆನ್ನಿಗಿತ್ತು. " ಕಾಶಿ ಪ್ರವಾಸ ಕಥನದಲ್ಲಿ ೨೨ ಕ್ಷೇತ್ರಗಳ ಪರಿಚಯವನ್ನು ಕೇವಲ ೬೦ ಪುಟಗಳಲ್ಲಿ ದಾಖಲಿಸುವ ಸಾಹಸ ಆಲ್ದಾಳರು ಮಾಡಲು ಸಾಧ್ಯ, ನಿರಂತರವಾಗಿ ಸಾಹಿತ್ಯ ಸೇವೆಯಲ್ಲಿ ತೊಡಗಿರುವ ಆಲ್ದಾಳರ ಈ ಕೃತಿಗೆ ನನ್ನ ಮುನ್ನುಡಿಯ ಆವಶ್ಯಕತೆಯಿಲ್ಲ. ಯಾವ ಧೃಷ್ಟಿಯಿಂದಲೂ ನಾನು ಅವರಿಗೆ ಸರಿಸಾಟಿಯೂ ಅಲ್ಲ, ಇದು ಕೇವಲ ಅವರು ನನ್ನ ಮೇಲಿಟ್ಟ ಪ್ರೀತಿ, ವಿಶ್ವಾಸ, ಅವರ ಆತ್ಮೀಯತೆಗೆ ಔದಾರ್ಯಕ್ಕೆ ನಾನು ಸದಾ ಋಣಿ, ಆಲ್ದಾಳರಿಗೆ ಶುಭವಾಗಲಿ" ಎಂದು ಮನಸಾರೆ ಹೇಳಿದ್ದಾರೆ ರಂಗ ಕಲಾವಿದರಾದ ಪ್ರೊ.ಹೇಮಂತ ಕೊಲ್ಹಾಪೂರೆ ಕಲಬುರಗಿ ಇವರು.

"ಲಾಲ್ ಮಹ್ಮದ ಬಂದೇನವಾಜ್ ಖಲೀಫ್ ಆಲ್ದಾಳ ಒಂದು ಹಳ್ಳಿ (ಮಳ್ಳಿ)ಯ ಬಳ್ಳಿ, ಈ ಬಳ್ಳಿ, ಬಿಟ್ಟ ಮಲ್ಲಿಗೆಯ ಹೂಗಳ ಸುಗಂಧ ಕನ್ನಡ ಸಾರಸ್ವತ ಕಣಕ್ಕೆಲ್ಲ ಹಬ್ಬಿದೆ.

"ಜನಪದಜೇನು" ಅತ್ಯಂತ ಮೌಲಿಕ ಕೃತಿ, ಪುಸ್ತಕದ ಹೆಸರೇ ಹೇಳುವಂತೆ ತ್ರಿಪದಿಯಲ್ಲಿ ಸರಳ ಸುಂದರವಾಗಿ ಗ್ರಾಮೀಣ ಭಾಗದ ಜನರ ಮಾತುಗಳಲ್ಲಿ  ಮೂಡಿಬಂದಿದೆ". [೨೨೯]

ಕನ್ನಡದ 'ಕಣ್ವ' ಖ್ಯಾತಿಯ ಆಚಾರ್ಯ ಬಿ.ಎಂ.ಶ್ರೀಕಂಠಯ್ಯನವರ ಹೇಳಿಕೆಯಂತೆ 'ಜನವಾಣಿಬೇರು, ಕವಿವಾಣಿ ಹೂವು'  ಶಿಷ್ಟಸಾಹಿತ್ಯಕ್ಕೆ ಜನಪದ ಸಾಹಿತ್ಯವೇ ತವರು ಮನೆ. ನಮ್ಮ ಜಾನಪದ ಎಂದರೆ ನಮ್ಮ ವಿಜ್ಞಾನ ಬುದ್ಧಿಯೂ ಅದರೊಳಗೆ ಸೇರಿದೆ. ನಮ್ಮ ಜಾನಪದ ಚಲನೆ ಎಂದರೆ ನಾವು ನಡೆವ, ಇಡುವ ಹೆಜ್ಜೆ. ಆ ಹೆಜ್ಜೆಗಳು ಭದ್ರವಾಗಿರಬೇಕು. ಪ್ರವಾಹ ಹಾಯುವಾಗ

ಹಿರಿಯರು ಹೇಳುತ್ತಾರೆ. "ಹೆಜ್ಜೆ ಭದ್ರವಾಗಿಡು, ಹೆಬ್ಬೆರಳು ಭದ್ರವಾಗಿ ಊರು ಅಂತ", ಜಾನಪದವನ್ನು ಚಲನ ಶೀಲತೆಯ ಹೊರಗಿಟ್ಟು ನೋಡುವುದೆಂದರೆ ನಾವು ಬದುಕಿದ್ದೇವೋ ಇಲ್ಲವೋ ಅಂತ ಅನುಮಾನ ಪಟ್ಟಕೊಂಡಂತೆ, ಭೂತದ ನೆನಪು, ವರ್ತಮಾನದ ನೋವು ನಲಿವು ಮತ್ತು ಭವಿಷ್ಯದ ಆಸೆಯನ್ನು ಇಟ್ಟುಕೊಂಡು ಬದುಕುವುದು ಜನಪದ ಜೀವನದ ವಿಶಿಷ್ಟತೆ". [೨೩೦]

'ತ್ರಿಪದಿ'ಯಲ್ಲಿ ಅಗ್ರಗಣ್ಯರೆಂದರೆ ಆಂಧ್ರದ ವೇಮನರಾಧ್ಯ (ವೇಮನಯೋಗಿ) ಕನ್ನಡ ಸರ್ವಜ್ಞ, ಇತ್ತೀಚೆಗೆ ಎಂದರೆ ವರ್ತಮಾನ ಕಾಲದಲ್ಲಿ ಹುಬ್ಬಳ್ಳಿಯ 'ಮೂಜಗಂ' (ಮೂರು ಸಾವಿರ ಮಠದ ಶ್ರೀಜಗದ್ಗುರು ಗಂಗಾಧರ) ಮಹಾಸ್ವಾಮಿಗಳು ಕೂಡ 'ಪೂರ್ಣಜ್ಞರಾಗಿದ್ದಾರೆ. ಸೊಲಾಪುರದ ಜಯದೇವಿ ತಾಯಿ ಲಿಗಾಡೆಯವರು ತ್ರಿಪದಿಗೆ ಒತ್ತುಕೊಟ್ಟು 'ಸಿದ್ಧರಾಮ ಚರಿತ್ರೆ' ರಚಿಸಿದ್ದಾರೆ.

ಆಲ್ದಾಳರ "ಜನಪದ ಜೇನು' ಕೃತಿಯು ಎಲ್ಲಜನಪರ ಕೃತಿಗಳಿಗಿಂತ ವಿಭಿನ್ನವಾಗಿದೆ. ಕೌಟುಂಬಿಕವಾಗಿ ಕಂಡುಂಡ ಹಲವಾರು ಸಿಹಿ, ಕಹಿಗಳು, ಇಲ್ಲಿ ಹಂಚಿ ಕೊಂಡಿದ್ದಾರೆ.

**ಹಾಲುಂಡ ತವರೀಗಿ ಏನೆಂದು ಹರಿಸಲಿ ।**
**ಹಾಲುಕ್ಕಿ ಹಳ್ಳ ಹರಿಯಲಿ । ನನತವರು ।**
**ಹಾಲು ಬಾನವು ನಿತ್ಯ ಹಂಚಲಿ ।**

**ನುಚ್ಚುಂಡ ತವರೀಗಿ । ಹೆಚ್ಚೀನ ಸಿರಿಬರಲಿ ।**
**ಪಚ್ಚ ಹವಳದ ಗಿರಿಹಂಗ । ನನತವರು ।**
**ಮೆಚ್ಚಿನ ಮಣಿ ಮುಕುಟ ಧರಿಸಲಿ ।**

ಭಾಷೆಗೆ ಸಾಹಿತ್ಯದ ಗುಣ ತಂದವರು ಜನಪದರು ಅವರ ಆಶುಕವಿತ್ವ ದೊಡ್ಡ ಬೆರಗು, ಕೈಗೆ ಕಾಯಕವನ್ನು, ಮನಸ್ಸಿಗೆ ಶಿವಧ್ಯಾನವನ್ನು ಹೃದಯಕ್ಕೆ ಒಲಿದಂತೆ ಹಾಡುವುದನ್ನು ರೂಢಿಸಿದ ಅವರು ಕೇಳುವ ಕಿವಿಯಿದ್ದರೆ ದಿನ ಗಟ್ಟಲೆ ಆಡುವ ಅಪೂರ್ವಿಕರು.

ಜನಪದ ಸಾಹಿತ್ಯ ಸಂಸ್ಕೃತಿ ಭ್ರಷ್ಟಗೊಳ್ಳುವ ಮುನ್ನ ಅದನ್ನು ಶುದ್ಧರೂಪದಲ್ಲಿ ಸಂಗ್ರಹಿಸುವ ಅಗತ್ಯವಿದೆ.

**ಕನ್ನಡದ ನೆಲದಲ್ಲಿ ಕಾವ್ಯವಾಹಿನಿಯಾಗಿ ।**
**ಕನ್ನಡದಾಚೆ ಹರದೈತಿ । ಜನಪದ ।**
**ಜನಮನದಿ ತುಂಬಿ ತುಳಿಕೈತಿ ।**

ಎಲ್‌ಬಿಕೆ ಆಲ್ದಾಳ ಅವರು ಜೇವರಗಿ ತಾಲೂಕಿನ ಸುಕ್ಷೇತ್ರ ಶಕಾಪೂರ ಗ್ರಾಮದ ಶ್ರೀ ಸದ್ಗುರು ವಿಶ್ವಾರಾಧ್ಯ ತಪೋವನ ಮಠ, ತಪೋಭೂಷಣ ಶ್ರೀ ಷ.ಬ್ರ. ಸಿದ್ಧರಾಮ ಶಿವಯೋಗಿ

ಶಿವಾಚಾರ್ಯರ ಪರಮಶಿಷ್ಯರೂ ಆಗಿರುವರು. ಶ್ರೀ ಗುರು ವಿಶ್ವಾರಾಧ್ಯರ ಕೃಷಿ ಕಾಯಕದ ಬದುಕನ್ನು ಈ ರೀತಿ ಬಣ್ಣಿಸುತ್ತಾರೆ.

**ಸೊಲ್ಲಾಪೂರ ಕೊಡುದಿಲ್ಲ । ಬೆಳಗಾಂವ ಬಿಡುದಿಲ್ಲ ।**
**ಬೆಳವಲದ ನಾಡು ಕಾಸರಗೊಡ । ಈ ಮೂರು ।**
**ಚಲುವ ಕರ್ನಾಟಕದ ಮಣಿಮುಕುಟ ॥**

ಕಾಸರಗೊಡ, ಸೊಲ್ಲಾಪೂರ ಕನ್ನಡ ನಾಡಿಗೆ ಧಕ್ಕಿಯಾವೆ? ಆಲ್ದಾಳರ ನುಡಿ ನಿಜವಾದೀತೆ? ನಿಜಕ್ಕೂ ಆಗಲಿ ಎಂಬುದೆ ಎಲ್ಲರ ಹಿರಿಯಾಸೆ.

**ಶಕಾಪೂರ ಗ್ರಾಮಕ್ಕೆ । ವಿಶ್ವಾರಾಧ್ಯಬಂದು ।**
**ಒಕ್ಕಲುತನವ ಮಾಡ್ಯಾರ । ದಾಸೋಹ ।**
**ಚೊಕ್ಕಟವಾಗಿ ನಡೆಸಾರ ।**

**ಜೋಡು ತೇರಿನ ಕಳಸ । ನೋಡುವ ಆ ಸೊಗಸ ।**
**ನೋಡ ಕಂಗಳಿಗೆ ಹಬ್ಬೂಟ । ಸಿದ್ಧರಾಮ ।**
**ಜೋಡ ತೇರಿನ ಮಧ್ಯನಿಂತಾನ ॥**

**ಖುಷಿಯಾದ ಸಿದ್ಧರಾಮ । ಕೃಷಿಗೊತ್ತು ನೀಡ್ಯಾನ ।**
**ಖುಷಿಯಿಂದ ತಪೋವನವು ಬೆಳೆಶ್ಯಾನ । ಶ್ರೀಮಠದ ।**
**ವ್ಯಾಸ ಪೀಠದೊಡೆಯ ನಾಗ್ಯಾನ ।**

ಬದುಕು, ಸಮಾಜದ ಲೋಪ ದೋಷಗಳು, ಪುಣ್ಯಪುರುಷರ ಜೀವನ, ದೇವರು, ಧರ್ಮ, ಮಠ, ಮಂದಿರ, ನಡೆನುಡಿ, ಸ್ತ್ರೀಯರ ಬಗ್ಗೆ ಕಾಳಜಿ, ಪರಂಪರೆ, ವಿದ್ಯೆ, ಭಾಷೆ, ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದ ನೀತಿ-ನಿಯಮ, ಮೌಲ್ಯಗಳು, ಗ್ರಾಮೀಣ ಜೀವನ ಚಿತ್ರಣ, ಇಂದಿನ ರಾಜಕೀಯ, ಭ್ರಷ್ಟಾಚಾರಗಳೆಲ್ಲವು ಈ ತ್ರಿಪದಿಗಳಲ್ಲಿ ಮಾರ್ಮಿಕವಾಗಿ ಅಡಕವಾಗಿವೆ.

**ಲಂಚತಿಂದವರೆಲ್ಲ । ಮಂಚದ ಮ್ಯಾಲೇರಿ ।**
**ವಂಚಿಸಿನಡಿತಾರ ಜಗದಾಗ । ಒಂದಿನ ।**
**ಕುಂಚಿಕೊರವೆರಂಗತಿರಗ್ತಾರ ॥**

**ಕುಡುಕರಮಾತೀಗಿ । ಕಡಿತನಕ ನಂಬಬ್ಯಾಡ ।**
**ಕಡಿಗೀಲಿಲ್ಲದ ಬಂಡಿ ಹೊಡದಂಗ । ನನಗೆಳತಿ ।**
**ಕುಡುಕರ ಗೆಳೆತನ ಮಾಡಬೇಡ ।**

'ಜನಪದ ಜೇನು'ನಲ್ಲಿ ಎಲ್‌ಬಿಕೆ ಅವರು ೪೦೦ ತ್ರಿಪದಿಗಳನ್ನು ಓದುಗರಿಗೆ ನೀಡಿದ್ದಾರೆ. ತ್ರಿಪದಿಗಳು ಛಂದಸ್ಸು, ಅಲಂಕಾರಗಳ ದೃಷ್ಟಿಯಿಂದ ನೋಡಿದರು ಮನಸ್ಸಿಗೆ ಹಿತವಾಗಿವೆ ದ್ವಿತೀಯಾಕ್ಷರ, ಪ್ರಾಸಗಳು ತ್ರಿಪದಿಗಳ ಸೌಂದರ್ಯ ಹಿಮ್ಮಡಿಗೊಳಿಸಿವೆ.

ಡಾ. ಸ್ವಾಮಿರಾವ ಕುಲಕರ್ಣಿಯವರು ತಮ್ಮ ಮುನ್ನುಡಿಯಲ್ಲಿ, 'ವೃತ್ತಿನಾಟಕ' ಕ್ಷೇತ್ರದಲ್ಲಿ ಎಲ್.ಬಿ.ಕೆ.ಆಲ್ದಾಳರ ಸಾಧನೆ ದಾಖಲಿಸುವಂತಹುದು. ಇದೀಗ 'ಜನಪದ ಜೇನು' ತ್ರಿಪದಿಗಳ ಸಂಗ್ರಹದೊಂದಿಗೆ ಜಾನಪದ ಕ್ಷೇತ್ರದಲ್ಲೂ ಅಪಾರ ಪ್ರತಿಭೆ ಹೊಂದಿರುವರೆಂಬುದನ್ನು ಸಾಬೀತು ಪಡಿಸಿದ್ದಾರೆ" ಎಂದು ಹೇಳಿರುವರು.

**ಜನಪದ ನುಡಿಗಳು । ಜಗಕೆ ಜಾಗಟಿ ।**
**ಮನದೊಳಗೆ ನಿತ್ಯ ನುಡಿತಾವ । ನನಗೆಳತಿ ।**
**ಜನಪದವೇ ಜಗದ ಸಂಪತ್ತು ।   –ಎಲ್‌ಬಿಕೆ.**

ಆಲ್ದಾಳರು ಜನಪದ ಸಂಪತ್ತನ್ನು ಹೆಚ್ಚಿಸಿದ್ದಾರೆ, ಹಂಚಿದ್ದಾರೆ, ಆಧುನಿಕ ವಚನಗಳಂತೆ ಆಧುನಿಕ ತ್ರಿಪದಿಗಳಿವು, ಆಲ್ದಾಳರ ಈ ಜನಪದ ಬೆಳೆ–ಬಾಳಿಗೆ ಬೆಳಕು, ಮನಕ್ಕೆ ಮುದ, ಜನಪದಕವಿಗೆ ಶುಭ ಹಾರೈಸಿದ್ದಾರೆ ಖ್ಯಾತಸಾಹಿತಿ, ನಿವೃತ್ತ ಪ್ರಾಚಾರ್ಯ ಡಾ.ಸ್ವಾಮಿರಾವ ಕುಲಕರ್ಣಿ ಅವರು.

ಕನ್ನಡ ಸಾಹಿತ್ಯಪರಿಷತ್ತು ಜೇವರ್ಗಿ ತಾಲೂಕ ಅಧ್ಯಕ್ಷರು, ಕರ್ನಾಟಕ ನಾಟಕ ಅಕಾಡಮಿ ಗೌರವ ಪುರಸ್ಕಾರ ಪಡೆದವರಾದ ಶ್ರೀ ಶಿವಕವಿ ಹಿರೇಮಠ ಜೋಗೂರರು ತಮ್ಮ ಜೆನ್ನುಡಿಯಲ್ಲಿ, 'ಜನಪದಜೇನು' ಕೃತಿಯು ಎಲ್ಲ ಜನಪರ ಕೃತಿಗಳಿಗಿಂತ ವಿಭಿನ್ನವಾಗಿದೆ. ಕೌಟುಂಬಿಕವಾಗಿ ಕಂಡುಂಡ ಹಲವಾರು ಸಿಹಿ, ಕಹಿಗಳು ಇಲ್ಲಿ ಹಂಚಿಕೊಂಡಿರುವ ಎಲ್.ಬಿ.ಕೆ. ಆಲ್ದಾಳರ ಇಂತಹ ಕೃತಿಗಳು ಹೊರ ಬಂದಿರುವುದು ಬಹಳ ವಿರಳ. ಈ 'ಜನಪದಜೇನು' ಕವಿ ಆಲ್ದಾಳರು, ಜೇನುನೊಣವಾಗಿ ಹೂವಿಂದ ಹೂವಿಗೆ ಹಾರಿ ಅಲ್ಲಿಂದ ಮಕರಂದ ಹೀರಿ ಈ ಜನಪದ ಸಾಹಿತ್ಯದ ಜೇನುಕೊಡ ತುಂಬಿಟ್ಟಿದ್ದಾರೆ. ಇದನ್ನು ಕನ್ನಡದ ಹಿತಾಸಕ್ತರು, ಸಾಹಿತ್ಯಾಸಕ್ತರು, ಸಾಹಿತಿಗಳು ಇದನ್ನು ಕೊಂಡು ಓದಿದರೆ ಇದರ ರುಚಿಯು ಗೊತ್ತಾಗುತ್ತದೆ.[೩೮೩]

"ಕೊನೆಯದಾಗಿ ನಮ್ಮ ಜಾನಪದರಂಗ ವೈವಿಧ್ಯಮಯವಾಗಿದೆ, ಸಾಕಷ್ಟು ಸತ್ವಶಾಲಿಯಾಗಿದೆ. ಎಂದೂ ಮಾಸದ ಸೌಂದರ್ಯವನ್ನೊಳಗೊಂಡಿದೆ, ಜಾನಪದ ಸಂಗೀತ ಜಾಣತನದಿಂದ ಬಳಸಿ ಕೊಂಡರೆ ಆಧುನಿಕ ಪರಿಸರದಲ್ಲಿಯೂ ಅದು ಮನರಂಜನೆ ನೀಡ ಬಲ್ಲದು. ಇಂದಿನ ಚಿತ್ರ ಸಂಗೀತಕ್ಕೆ ಹೊಸ ಚೈತನ್ಯ ಒದಗಿಸುತ್ತಿರುವ ಜಾನಪದ ಸಂಗೀತದ ಮಹತ್ವ ಅಗಾಧವಾದುದು. ತುಂಬಾ ಜನಪ್ರಿಯವಾಗಿರುವ ಕಾಡು ಕುದುರೆ ಸಿನೆಮಾದ 'ಇವಯಾವ ಊರಿನ ಮಾವಾ' ಎಂಬ ಹಾಡು ರಾಧಾ ನಾಟಕದ ಧಾಟಿಯ ನಕಲು, ಅಂದರೆ ಪರಿಷ್ಕರಣೆಗೊಂಡ ಜಾನಪದ ರಂಗ ಸಂಗೀತ ಎಂತಹಸೊಬಗು– ಸೌಂದರ್ಯಗಳನ್ನು ನೀಡಬಲ್ಲುದೆಂಬುದು ಅರಿವಿಗೆ ಬರುತ್ತದೆ'.

ಜಾನಪದ ರಂಗದ ಸೊಬಗು ಅನನ್ಯ. ಆಲ್ದಾಳ ಅವರು 'ಜಾನಪದ ಜೇನು' ಕೃತಿಯ ಮೂಲಕ ಓದುಗರನ್ನು ಜೇನಿನ ಸಿಹಿಯಲ್ಲಿ ತೇಲಿಸಿಬಿಟ್ಟಿದ್ದಾರೆ.

## ಆಲ್ದಾಳರಿಂದ ಹಲವು ಅಭಿನಂದನ ಗ್ರಂಥಗಳಿಗೆ ಬರೆದ ಲೇಖನ

ಅಭಿನಂದನ ಗ್ರಂಥ ಬೇಕೆ? ಭವಿಷ್ಯದಲ್ಲಿ ಏನಾಗಬಹುದುದೆಂಬುದನ್ನು ಇತರರ ಜೀವನಾನುಭವದಿಂದ ಮಾನವ ಊಹಿಸಿಕೊಳ್ಳಬಹುದಾದರೂ ಅದರಿಂದ ಪಾಠಕಲಿತು ಕೊಳ್ಳುವುದಿಲ್ಲ. ಸಂಪತ್ತಿನ ಸಂಗ್ರಹಣೆಯನಾಗಾಲೋಟದಲ್ಲಿ ಕೊಚ್ಚಿ ಹೋಗುತ್ತಿದ್ದಾರೆ. ಅಜ್ಞಾತ ಕವಿಯೊಬ್ಬ ರಚಿಸಿದ ಕೆಳಗಿನ ಕವಿತೆ ಸಕಲರೂ ಮೆಲುಕು ಹಾಕುವಂಥದ್ದು......

**"ಧನ-ಕನಕ-ಸಂಪತ್ತಿನಗಳಿಕೆಯ ಸಂಗ್ರಾಮದಲಿ**
**ಹಗಲಿರುಳೆನ್ನದೆ ಚಿಂತಿಸಿ ದುಡಿದು ಕೂಡಿಟ್ಟು**
**ಮೋಜು ಮೇಜುವಾನಿಯ**
**ಮೃಗ ಮರಿಚಿಕೆಯ ನರಸಿ**
**ಕೊಳ್ಳೆ ಹೋಹುದು ಶರೀರದಾರೋಗ್ಯವೆಲ್ಲ !**
**ರೋಗರುಜಿನಗಳಂ ನಲುಗಿ ಹಾಸಿಗೆಯ ಹಿಡಿದಾಗ**
**ಕಣ್ಣ ಪಿಳಿಪಿಳಿ ಬಿಟ್ಟು ಕಳೆದ ಆರೋಗ್ಯಮಂ ನೆನಸಿ**
**ಮಡದಿ ಮಕ್ಕಳ ಮುಖವ ನೋಡಿ ಗೋಳಿಡುತ**
**ಕೊಳ್ಳೆ ಹೋಹುದು ದುಡಿದೆಲ್ಲ ಸಂಪತ್ತು ಆಸ್ಪತ್ರೆಗೆ !**
**ಕೊನೆಗೆ ಸಿಕ್ಕಿದಾದರೂ ಏನು ನಿನಗೆ**
**ನಾಲ್ಕು ಜನರ ಹೆಗಲ ಮೇಲೆ ಪಯಣ**
**ಎಲ್ಲಿಗೆಂದು ತಿಳಿಯದ ಸ್ಮಶಾನ ಮೌನ**
**ಆರಡಿ, ಮೂರಡಿಯ 'ಮಣ್ಣಿನ ಮನೆಯ'ಲ್ಲಿ**
**ಚಿರಂತನ ಶಮನ"**

ನೋಡಿ ಸ್ವಾಮಿ ದೇವರು ಇದ್ದಾರೆ ಎಂಬ ನಂಬಿಕೆ ನಮ್ಮ ಭಾರತೀಯರದ್ದು. ಆತ ಯಾರನ್ನೂ ಮರೆಯುವುದಿಲ್ಲ, ಅವರವರ ಕಾಲಕ್ಕೆ ಸರಿಯಾಗಿ ಅವರನ್ನು ಒಯ್ದೇ ತೀರುತ್ತಾನೆ. ಇದಕ್ಕೆ ಸಂಶಯವೇ ಇಲ್ಲ. ಆದರೂ ಮನುಷ್ಯ ತನ್ನ ಜೀವಿತಾವಧಿಯಲ್ಲಿ ತಾನು ಸಂತೃಪ್ತನಾಗಿರಬೇಕೆಂಬುದೇ ಪ್ರತಿಯೊಬ್ಬರ ಅಪೇಕ್ಷೆ. ಮನುಷ್ಯ ತೃಪ್ತಿಯ ಅನ್ವೇಷಿ ಆದರೆ ತೃಪ್ತಿಯ ನೆಲೆಯಾವುದು ಎಂಬುದು ಯಾರಿಗೂ ಗೊತ್ತಿಲ್ಲ. ಆದ್ದರಿಂದ ಶಾಸ್ತ್ರಗ್ರಂಥಗಳಲ್ಲಿ 'ತೃಷ್ಣಾಂ ಜಿತ್ವಾನ ತಪ್ಯತೇ' ಅಂದರೆ 'ಆಸೆಯನ್ನು ಗೆದ್ದು ತೃಪ್ತಿಯಿಂದ ಬಾಳಲು ಕಲಿತವನಿಗೆ ಕಷ್ಟವಿಲ್ಲ' ಎಂದಿದ್ದಾರೆ. ಕನ್ನಡದ ಕವಿ ಡಿ.ವಿ.ಜಿ. ಅವರು 'ಬೇಕು, ಬೇಕದು ಬೇಕು ಬೇಕಿದೆನಗಿನ್ನೊಂದು, ಬೇಕೆನುತ ಬೊಬ್ಬೆಡುತಲಿಹ ಘಟವನಿದನು॥ ಏಕೆಂದು ರಚಿಸಿದನೋ ಬೊಮ್ಮ ನೀ ಬೇಕು ಜಪ ಸಾಕೆನಿಸುದೆಂದಿಗಲೊ ಮಂಕುತಿಮ್ಮ॥ [೨೩೨] ಎಂದು "ಬೇಕು-ಬೇಕು ಎಂಬ ಜಪವನ್ನು ನಿಲ್ಲಿಸು,

ಸಾಕು-ಸಾಕು ಎಂಬ ತಾರಕ ಮಂತ್ರ ಪಠಿಸುತ್ತಾ ತೃಪ್ತಿಯಿಂದಿರು ಎಂದು ಸಾರಿದ್ದಾರೆ. ಅದಕ್ಕಾಗಿ ಜೀವನ ಸಾರ್ಥಕತೆಗೆ ಸಮಾಜ ಮುಖಿಯಾಗುವುದು. ಅದಕ್ಕಾಗಿ ಚಿಂತಿಸುವುದು ಸಹ ಜೀವನ ಸುಖಕ್ಕೋಸ್ಕರ ಎಂಬುದನ್ನು ಹಿರಿಯರು, ಅನುಭವಿಗಳು ಹೇಳುತ್ತಾರೆ. ತನ್ನ ಸಾಧನೆಯನ್ನು ತಾನೇ ಹೇಳಿಕೊಂಡರೆ ಅದು ಜೀವನ ಚರಿತ್ರೆಯಾಗುತ್ತದೆ. ಅದೇ ಸಾಧನೆಯನ್ನು ಅನ್ಯರು ಗುರುತಿಸಿ, ಅದಕ್ಕೊಂದು ರೂಪಕೊಟ್ಟು ಬರಹಗಳ ಮೂಲಕ ಹೊರತಂದು ಮುದ್ರಿಸಿ ಲೋಕಕ್ಕೆ ನೀಡಿದರೆ ಅದನ್ನೇ ಅಭಿನಂದನ ಗ್ರಂಥ ಎಂದು ಕರೆಯಲ್ಪಡುತ್ತದೆ. ಅಭಿನಂದನ ಗ್ರಂಥ ಎಂದ ಕೂಡಲೇ ಅದೊಂದು ಹೊಗಳಿಕೆಯ, ಆಡಂಭರದ ಬರಹಗಳ ಸಂಕಲನವಲ್ಲ. ಆ ವ್ಯಕ್ತಿ ತನ್ನ ಇಡೀ ಜೀವನದಲ್ಲಿ ಪರೋಪಕಾರಿಯಾಗಿ ನಡೆದುಕೊಂಡಬಂದುದಲ್ಲದೆ, ಸತ್ಯ, ಧರ್ಮ, ಶಾಂತಿ, ಪ್ರೇಮ, ಜಾತ್ಯಾತೀತ ನಿಲುವುಗಳಿಗೆ ಬದ್ಧರು ಎಂಬುದನ್ನು ಮನವರಿಕೆ ಯಾದಾಗ ಮಾತ್ರ ಅಂಥವರ ಬಗ್ಗೆ ಅವರ ಸಾಹಿತಿ ಅಭಿಮಾನಿಗಳು, ಮಿತ್ರರು, ಹಿತೈಷಿಗಳು ಅಭಿನಂದನ ಗ್ರಂಥ ಸಮರ್ಪಿಸಲು ಸ್ವಯಂ ಪ್ರೇರಿತರಾಗಿ ಮುಂದಾಗುತ್ತಾರೆ ಸುಮಾರು ೬೦ ವರ್ಷದಿಂದ ೭೫ ವರ್ಷತುಂಬಿದ ವಯೋಮಾನದವರಿಗೆ ಸಲ್ಲಿಸುವ ಅಭಿನಂದನ ಗ್ರಂಥದ ಅಂತರಾಳದಲ್ಲಿ ಇರುವ ಲೇಖನಗಳ ಮುಖ್ಯತಿರುಳು, ಅಭಿನಂದನೆಗೆ ಅರ್ಹರಾಗಿರುವ ವ್ಯಕ್ತಿಯ ಜೀವನದ ವಿವಿಧ ಮಗ್ಗುಲಗಳೇ ಆಗಿರುತ್ತವೆ. ಇವುಗಳನ್ನು ಓದಿದವರು ತಮ್ಮ ನಡೆಯನ್ನು ನುಡಿಯನ್ನು ಸರಿಪಡಿಸಿಕೊಳ್ಳಲು ಸ್ವಯಂ ಪ್ರೇರಿತರಾಗುತ್ತಾರೆ.

ನಾಟಕಕಾರ ಎಲ್.ಬಿ.ಕೆ ಆಲ್ದಾಳ ಅವರು ಸುಮಾರು ಹತ್ತು ಹನ್ನೆರಡು ಅಭಿನಂದನೆ ಗ್ರಂಥಗಳಿಗೆ ತಮ್ಮ ವಿದ್ವತ್ತ ಪೂರ್ಣ ಲೇಖನಗಳ ಮೂಲಕ ಜನರ ಮನ ಪರಿವರ್ತನೆ ಮಾಡುವ ಸಾಹಸ ಮಾಡಿದ್ದಾರೆ ಎಂದರೆ ತಪ್ಪಾಗದು ಅವರೊಂದಿಗಿರುವ ತಮ್ಮ ನಿಕಟ ಸಂಬಂಧವನ್ನು ಓದುಗರಿಗೆ ಎಳೆ-ಎಳೆಯಾಗಿ ಬಿಡಿಸಿಟ್ಟಿದ್ದಾರೆ.

**'ಧವಳ' – ಡಿ.ಎನ್. ಅಕ್ಕಿ** ಅಭಿನಂದನ ಗ್ರಂಥದಲ್ಲಿ ಆಲ್ದಾಳರ ಲೇಖನ

ತೆಳ್ಳನೆಯ ದೇಹ, ಸೀದಾ-ಸಾದಾ ವಸ್ತ್ರ, ಸದಾನಗುಮುಖ, ಲಗುಬಗೆಯ, ಅವಸರದ ನಡುಗೆ, ಕೊರಳಲ್ಲಿ ಒಂದು ಚೀಲ ಹಾಕಿಕೊಂಡು, ಗ್ರಾಮಾಂತರ ಪ್ರದೇಶದಲ್ಲಿರುವ ಪುರಾತನ ದೇಗುಲಗಳಲ್ಲಿ ಕಂಡು ಬರುವ ಶಾಸನ ಶಿಲ್ಪಗಳ ಮುಂದೆ ನಿಂತು ಫೋಟೊ ತೆಗೆಯುವವರು ಯಾರ್ರಿ ಎಂದು ಶಹಾಪುರ, ಸುರುಪುರ, ಜೇವರ್ಗಿ ತಾಲೂಕಿನ ಜನರಲ್ಲಿ ವಿಚಾರಿಸಿದರೆ, ತಕ್ಷಣಕ್ಕೆ ನಕ್ಕು "ಓಹೋಸರ್ ಅವರು ಡಿ.ಎನ್.ಅಕ್ಕಿ ಸರ್" ಎಂದು ಹೇಳುತ್ತಾರೆ. ಡಿ.ಎನ್.ಅಕ್ಕಿ ಅವರು ವೃತ್ತಿಯಿಂದ ಚಿತ್ರಕಲಾ ಶಿಕ್ಷಕರಾಗಿ ರಾಷ್ಟ್ರಪತಿಗಳಿಂದ ಅತ್ಯುನ್ನತ ಪ್ರಶಸ್ತಿ ಪಡೆದ ಗೌರವಾನ್ವಿತ ವ್ಯಕ್ತಿ, ಇವರು ಪ್ರವೃತ್ತಿಯಿಂದ ಸಂಶೋಧನೆ, ಊರೂರು ಅಲೆದಾಡಿ ದೇವಾಲಯ ಶಿಲ್ಪಿಗಳು, ಶಾಸನಗಳ ಮಾಹಿತಿ ಸಂಗ್ರಹಿಸುವುದು ಇವರ ಹವ್ಯಾಸ, ಇದಕ್ಕಾಗಿ ಯಾರ ಮುಂದೆಯೂ ಅನುದಾನಕ್ಕಾಗಿ ಕೈ ಚಾಚಿದವರಲ್ಲ ಒಂದು ವೇಳೆ ಈಮಾಹಿತಿಗಳೆಲ್ಲ ಬಯಲಿಗೆ ಬಂದಿರದಿದ್ದರೆ ಅವರು ಪಟ್ಟಶ್ರಮ, ವ್ಯರ್ಥವಾಗುತ್ತಿರಲಿಲ್ಲವೆ? ಅಭಿನಂದನ ಗ್ರಂಥ "ಧವಳ" ಬರೀ ಗ್ರಂಥವಾಗಿರದೇ ನಾನಾ ವಿಧದಲ್ಲಿ, ಮಾಹಿತಿ, ನೆರವು ಕಲ್ಪಿಸುವ ಕಲ್ಪವೃಕ್ಷದಂತಿದೆ, ಎಲ್.ಬಿ.ಕೆಆಲ್ದಾಳ ಅವರು 'ಧವಳ' ಅಭಿನಂದನ ಗ್ರಂಥಕ್ಕೆ ಕಳುಹಿಸಿರುವ ಲೇಖನ 'ಎನ್ನೊಲವಿನ ಡಿ.ಎನ್.ಅಕ್ಕಿ' ತಮ್ಮ ಲೇಖನದ ಪ್ರಾರಂಭದಲ್ಲಿಯೇ

‘ವ್ಯಾಸಂಗವೊಂದು ಜ್ಞಾನಾರ್ಜನೆಗೆ ದಾರಿದೀಪ, ಸಂಭಾಷಣೆಯೊಂದು ಬುದ್ಧಿ ವಿಕಾಸಕ್ಕೆ ಮಾರ್ಗದರ್ಶಿ ಲೇಖನವೊಂದು ವಿಶ್ವವಿಸ್ತಾರಕ್ಕೆ ಪೂರಕ ಶಕ್ತಿ. ಪುಸ್ತಕ ಒಂದು ಬದುಕಿಗೆ ಜೀವನ ಸಂಗಾತಿ ಈ ನಾಲ್ಕರ ಮೊತ್ತವೇ ವಿದ್ಯೆ”. [೨೩೩] ಇಡೀ ವಾಕ್ಯವೇ ಗೂಢಾರ್ಥದಿಂದ ಕೂಡಿದೆ. ಅನುಭವವಿರುವಲ್ಲಿ ಅಮೃತವಿರುತ್ತದೆ ಎಂದು ಬಲ್ಲವರು ಹೇಳುವುದು ಸುಳ್ಳಲ್ಲ. ಹೌದು ವಿದ್ಯೆಯೇ ಇಲ್ಲದಿದ್ದರೆ ಅಂತಹ ಬಾಳು ಯಾತರದ್ದು? “ವಿದ್ಯೆ ಇಲ್ಲದವನ ಬಾಳು ಹದ್ದಿಗಿಂತಲೂ ಕೀಳು” ‘ವಿದ್ಯೆಕಲಿ, ಜೀವನವಿಡಿ ನಲಿ’ ಎನ್ನುವ ಮಾತನ್ನು ತಮ್ಮ ಈ ಲೇಖನದ ಮೂಲಕ ಆಲ್ದಾಳ ಅವರು ನೆನಪಿಸಿದ್ದಾರೆ.

ಆಲ್ದಾಳರು ಸ್ವಂತ ರಚಿಸಿದ “ಸಗರನಾಡಿನ ಬೆಳ್ಳಿ ಚಿಕ್ಕಿ–ಡಿ.ಎನ್.ಅಕ್ಕಿ” ಕವನದ ಕೆಲವು ಪಂಕ್ತಿಗಳು ಗೆಳೆತನ’ದ ನೆನಪಿಗಾಗಿ –

**“ಗೊಮ್ಮಟ ಕಮ್ಮಟದ ಖ್ಯಾತಿ**
**………………………………**
**ಸುಪ್ತ ಪ್ರತಿಭೆಯ ಶಕ್ತಿ**
**ಇದಕೆ ಸಾಕ್ಷಿ? ಕಾಯಕ ಸಮ್ಮಾನ ಪ್ರಶಸ್ತಿ**
**ರಾಷ್ಟ್ರ ಪ್ರಶಸ್ತಿ, ಜೊತೆಗೆ**
**ಅಭಿನಂದನ ಗ್ರಂಥ ಸಂಪತ್ತಿ**
**ಸಗರನಾಡಿನ ಬೆಳ್ಳಿಚಿಕ್ಕಿ**
**ಡಿ.ಎನ್.ಅಕ್ಕಿ ಸಾಕು ಸಾಕು**
**ಇನ್ನೇನು ಬೇಕಂತಿ ” [೨೩೮] ಎಲ್.ಬಿ.ಕೆ.ಆಲ್ದಾಳ**

ಕೊನೆಯದಾಗಿ, ಬದುಕೆಂಬ ಚದುರಂಗದಾಟದಲ್ಲಿ ಒಲವಿನ ಗೆಳೆಯರ ಪಾತ್ರ ಅತ್ಯಮೂಲ್ಯವಾದುದು. ಅದು ತನ್ನ ಅಂತರ್ಗತ ಗುಣ ವಿಶೇಷದಿಂದ ಹೊರಹೊಮ್ಮುವ ಚಿಂತನ–ಮಂಥನಗಳು ಸ್ಥಿರತೆ, ಸ್ಥಿಮಿತತೆಯನ್ನು ತಂದು ಕೊಡಬಲ್ಲದು.

## “ಚಂದ್ರ ಗಂಗಾ” ಶ್ರೀ ಚಂದ್ರಕಾಂತ ಭಂಡಾರೆ

### ಅವರ ಅಭಿನಂದನ ಗ್ರಂಥದಲ್ಲಿ ಆಲ್ದಾಳರ ಲೇಖನ

ಕಡಕೋಳ ಮಡಿವಾಳಪ್ಪನವರ ಬದುಕು-ಬರಹ ಎಂಬ ಲೇಖನವನ್ನು ಎಲ್.ಬಿ.ಕೆ ಆಲ್ದಾಳ ಅವರು, ಹಿರಿಯ ನಿವೃತ್ತ ಪೋಲೀಸ ಅಧಿಕಾರಿ ಆಗಿರುವ ಶ್ರೀ ಚಂದ್ರಕಾಂತ ಭಂಡಾರೆ ಅವರಿಗೆ ಸಮರ್ಪಿಸಿರುವ “ಚಂದ್ರಗಂಗಾ” ಅಭಿನಂದನೆ ಗ್ರಂಥದಲ್ಲಿ ಬರೆದಿರುವರು ಎಂಬುದು ವಿಶೇಷ.

ಎಲ್.ಬಿ.ಕೆ ಆಲ್ದಾಳ ಅವರು ಯಾರದೇ ಅಭಿನಂದನೆ ಗ್ರಂಥಗಳಿಗೆ ಲೇಖನ ಬರೆಯುತ್ತಾರೆ ಅಂದರೆ, ಅಲ್ಲಿ ಒಂದು ಮಹತ್ವದ ಮತ್ತು ಮರೆಯಲಾಗದ ಗುರಿ ಇರುತ್ತದೆ. ವ್ಯಕ್ತಿಯ ಗುಣ ನೋಡಿ ಮಣೆಹಾಕುವ ಆಲ್ದಾಳರು, ಚಂದ್ರಕಾಂತ ಭಂಡಾರೆ ಅವರ ನಡೆ-ನುಡಿಗೆ ಮನಸೋತು, ಅವರ ಅಭಿನಂದನ ಗ್ರಂಥಕ್ಕೆ ಲೇಖನ ಕಳುಹಿಸಿದ್ದಾರೆ. ಇದು ಮೆಚ್ಚುವಂಥದ್ದು. ಚಂದ್ರಕಾಂತ ಭಂಡಾರೆಯವರ ಕಾಯಕ ಪೋಲೀಸ ಇಲಾಖೆಯಲ್ಲಿ ಇವರ ಮನೋಧರ್ಮ, ಸ್ನೇಹಶೀಲ, ಜನಪರ ಸಂಸ್ಕೃತಿ ನಿಷ್ಠೆ. ಅವರು ಸೇವೆ ಮಾಡಿರುವ ಪ್ರದೇಶಗಳಲ್ಲೆಲ್ಲ ಸಜ್ಜನಿಕೆಯನ್ನು ನೆನಪಿನ ಗಂಧವಾಗಿ ಬಿಟ್ಟು ಬಂದಿದ್ದಾರೆ ಜನಪರಕಾಳಜಿ ಇಟ್ಟುಕೊಂಡು ಕಾರ್ಯ ನಿರ್ವಹಿಸುವ ಯಾವುದೇ ಅಧಿಕಾರಿ ಜನರಿಗೆ ಪ್ರಿಯವಾಗುತ್ತಾರೆ. ದರ್ಪ ಠೇಂಕಾರಗಳ ಅಧಿಕಾರಯುತ ನಡವಳಿಕೆಗಿಂತ ಪ್ರೀತಿ, ವಿಶ್ವಾಸ ಸಜ್ಜನಿಕೆ, ಸತ್ಯ ನಿಷ್ಠತೆಗಳಿಂದ ಜನಪ್ರಿಯರಾಗುತ್ತಾರೆ, ವೃತ್ತಿಯ ಘನತೆ ಹೆಚ್ಚಿಸುತ್ತಾರೆ. ಅಂಥ ಅಪರೂಪದ ವ್ಯಕ್ತಿತ್ವ ಹೊಂದಿರುವ ಸಜ್ಜನ ಅಧಿಕಾರಿ ಚಂದ್ರಕಾಂತ ಭಂಡಾರಿ, ಇದನ್ನು ಚೆನ್ನಾಗಿ ಬಲ್ಲವರಾಗಿರುವ ಆಲ್ದಾಳರು, ಅವರ ಅಭಿನಂದನ ಗ್ರಂಥಕ್ಕೆ “ಕನ್ನಡನಾಡು ಕಂಡ ಬಹು ದೊಡ್ಡ ಮಹಾನುಭವಿಗಳೂ, ಅಧ್ಯಾತ್ಮ ವಿದ್ಯಾ ಕರಂಡದಲ್ಲಿ ಹೂವಾಗಿ ಸುಮಾರು ೧೮೦ ವರ್ಷಗಳ ಹಿಂದೆ ಅರಳಿದವರೆ ಕಡಕೋಳ ಮಡಿವಾಳೇಶ್ವರರು, ನುಡಿದಂತೆ ನಡೆ, ನಡೆಯಂತೆ ನುಡಿ, ಹಾಗೇ ಬದುಕಿದ ಕಡಕೋಳ ಮಡಿವಾಳಪ್ಪ ನವರು ಇವರು ಬದುಕು”.[೨೩೫] ಭಂಡಾರೆಯವರ ಬದುಕಿನಲ್ಲಿ ನೆರಳಾಗಿ ಬೆನ್ನು ಹತ್ತಿದೆ. ಇದನ್ನು ಆಲ್ದಾಳರು ಅರಿತುಕೊಂಡಿದ್ದಾರೆ. ಅಂದ ಹಾಗೆ ಮಡಿವಾಳೇಶ್ವರರ ಜೀವನ ಪದ್ಧತಿಯನ್ನು ತಮ್ಮಲ್ಲೂ ಅಳವಡಿಸಿಕೊಳ್ಳಲಿ, ಅವರ ತತ್ವಗಳಂತೆ ನಡೆದು ಭಂಡಾರೆ ಅವರು ಕೀರ್ತಿಗೆ ಹೆಚ್ಚು-ಹೆಚ್ಚು ಪಾತ್ರರಾಗಲಿ ಎಂದೇ ಲೇಖನದ ತಾತ್ಪರ್ಯವೂ ಆಗಿದೆ.

# “ಸಮರ್ಪಣ” : ಬಿ.ಮಹಾದೇವಪ್ಪ

ಅವರಿಗೆ ಅರ್ಪಿಸಿದ ಅಭಿನಂದನ ಗ್ರಂಥದಲ್ಲಿ ಆಲ್ದಾಳರ ಲೇಖನ

**ಶಾಲು ಹೊದಿಸುವುದಕ್ಕಿಂತ ಹಾಲುಕುಡಿಸಿರಯ್ಯ**
**ಹಾರ ಹಾಕುವುದಕ್ಕಿಂತ ಆಹಾರ ಕಲ್ಪಿಸಿರಯ್ಯ**
**ಸನ್ಮಾನಿಸುವುದಕ್ಕಿಂತ ಸಮಾನತೆ ತೋರಿರಯ್ಯ**
**ಇಂತೀ ತ್ರಿವಿಧಿವನರಿತು ನಡೆದೊಡೆ**
**ನಿಮಗಿಂತ ನಿಚ್ಚಜ್ಞಾನಿ ಇನ್ನಾರು ಹೇಳೆಂದ**
**ಬಸವ ಬಾಂಧವ ತಪೋವನ ಮಠಾಧೀಶ**

ಖ್ಯಾತ ನಾಟಕಕಾರ ಎಲ್.ಬಿ.ಕೆ.ಆಲ್ದಾಳರ ಶ್ರೇಷ್ಠ ಕೃತಿ ‘ವಚನ ವಾಹಿನಿ’ಯಿಂದ ಪಡೆದುಕೊಂಡಿರುವ ಮೇಲಿನ ಆರು ಪಂಕ್ತಿಗಳು ಸ್ವತಃ ಆಲ್ದಾಳ ಅವರೇ ಉನ್ನತ ವಿಚಾರಗಳ ಸಾಕಾರದಂತಿದ್ದು, ಹಿರಿಯ ಪತ್ರಕರ್ತ ಬಿ.ಮಹಾದೇವಪ್ಪ ಅವರಿಗೆ ಅರ್ಪಿಸಲಾದ “ಸಮರ್ಪಣ” ಅಭಿನಂದನ ಗ್ರಂಥಕ್ಕೆ ತಾವೇ ಬರೆದ “ಮೌನ ಮಾತಿನ ಮಲ್ಲ” ಎಂಬ ಶೀರ್ಷಿಕೆಯ ಲೇಖನದಲ್ಲಿನ ಕೊನೆಯ ಈ ಆರು ಪಂಕ್ತಿಗಳು ಓದುಗರ ಗಮನ ಸೆಳೆಯದೇ ಇರಲಾರವು –

ಆಲ್ದಾಳ ಅವರು ಒಣಡಾಂಭಿಕತನ, ಆಡಂಬರ, ಆರ್ಭಟತನ ಬೇಡ ಎನ್ನುವ ದಾಟಿಯಲ್ಲಿ ಹೇಳಿದ್ದಾರೆ ಹೊರತು ಅಭಿನಂದನ ಗ್ರಂಥಗಳು ಬೇಡ ಎಂದು ಹೇಳಿಲ್ಲ ಅಭಿನಂದನ ಗ್ರಂಥ ಸಮರ್ಪಣೆ ಸೂಕ್ತವಾಗಿರಲಿ, ಮನಮೆಚ್ಚುವ ಹಾಗೆ ಇರಲಿ, ಮುಂದಿನವರಿಗೆ ಆದರ್ಶವಾಗಿರಲಿ ಎಂಬುದೇ ಆಲ್ದಾಳರ ಆಶಯ. ಇಡೀ ರಾಷ್ಟ್ರಮಟ್ಟದಲ್ಲಿಯೇ ಕಲಬುರ್ಗಿ ಜಿಲ್ಲೆಯು ಸಾಹಿತ್ಯಿಕವಾಗಿ, ಸಾಂಸ್ಕೃತಿಕವಾಗಿ, ಸಾಮಾಜಿಕ ಹಿರಿಮೆ ಗರಿಮೆಗಳ ಹೆಗ್ಗಳಿಕೆ ಬಹುಶಃ ಭಾರತದ ಇನ್ನಾವ ಜಿಲ್ಲೆಗಳಿಗೂ ಇರಲಿಕಿಲ್ಲ. ಇಡೀ ಜಗತ್ತಿನ ಸಾಹಿತ್ಯಕ್ಕೆ ಹೊಸ ಆಯಾಮವಿತ್ತ ಸಾಹಿತ್ಯವೆಂದು ಹೇಳಲಾಗುವ ವಚನ ಸಾಹಿತ್ಯದ ಉಗಮವಾದುದ್ದು ಇಲ್ಲಿಂದಲೇ. ಇದಕ್ಕೆ ಸಾಕ್ಷಿಯಾಗಿ ವಚನಸಾಹಿತ್ಯ ನಮ್ಮದೆಂಬುದಕ್ಕೆ ವಚನ ವಸಂತದ ಪ್ರಥಮ ಕೋಗಿಲೆ ಮುದನೂರಿನ ದೇವರ ದಾಸಿಮಯ್ಯ ಎಂಬುದು ಸ್ಮರಣೀಯವಾದುದು. ಎಲ್.ಬಿ.ಕೆ.ಆಲ್ದಾಳರು ಏನೇ ಬರೆಯಲಿ, ಯಾವ ವಿಷಯದ ಮೇಲೂ ಬರೆಯಲಿ ಅಲ್ಲಿ ಅದಕ್ಕೆ ಅದರದ್ದೇ ಆದ ಆಕರ್ಷಣೆ ಇರುತ್ತದೆ. ಓದುಗರನ್ನು ಹಿಡಿದಿಟ್ಟುಕೊಳ್ಳುತ್ತದೆ. ಇದು ಆಲ್ದಾಳರ ಶೈಲಿ ಮನುಷ್ಯನ ವಿಕಾಸಕ್ಕೆ, ಬೆಳವಣಿಗೆಗೆ ಸುತ್ತಲಿನ ವಾತಾವರಣ, ಪರಿಸರ ಸಾಕಷ್ಟು ಪ್ರಭಾವ ಬೀರುತ್ತದೆ ಎಂಬುದನ್ನು ಸ್ವತಃ ಕಂಡುಕಂಡಿರುವ, ಅನುಭವ ಪಡೆದಿರುವ ಆಲ್ದಾಳರು ಬಿ.ಮಹಾದೇವಪ್ಪ ಅವರ ಬಗ್ಗೆ ಬರೆದ ಕಿರು ಲೇಖನ ಅಪಾರವಾದ, ಆಳವಾದ ವಿಚಾರಗಳನ್ನು ಹೊಂದಿದ್ದು ಲೇಖನದಲ್ಲಿ ಕಾಣಿಸಿರುವ ಒಂದೊಂದು ಪ್ಯಾರಾಗಳು ರತ್ನದ ಖಣಿಯಾಗಿವೆ.

ಆಲ್ದಾಳ ಅವರು, ಮಹಾದೇವಪ್ಪನವರನ್ನು ಬಾಲ್ಯದಿಂದಲೂ ಬಲ್ಲವರಾಗಿದ್ದು ತಮ್ಮ ಔಚಿತ್ಯ ಪೂರ್ಣವಾದ ಬರಹದ ಮೂಲಕ ಗೆಳೆಯನಿಗೆ "ಮೌನ ಮಾತಿನ ಮಲ್ಲ" ಎಂಬ ಶೀರ್ಷಿಕೆ ಅಡಿ ಹೊಗಳಿದ್ದಾರೆ. ಊದು ಬತ್ತಿ ತಾನು ಸುಟ್ಟುಕೊಂಡು ಇತರರಿಗೆ ಸುಗಂಧ ಕೊಡುತ್ತದೆ. ದೀಪತಾನು ಉರಿದು ಇನ್ನೊಬ್ಬರಿಗೆ ಬೆಳಕು ನೀಡುತ್ತದೆ. ಅದೇ ರೀತಿ ಬಿ.ಮಹಾದೇವಪ್ಪನವರು ತಮ್ಮ ಲೌಕಿಕ ಆಶೆ–ಆಕಾಂಕ್ಷೆಗಳನ್ನು ಸುಟ್ಟು, ಆದರ್ಶಗಳ ಬೆನ್ನುಹತ್ತಿ, ಸಮಾಜಕ್ಕೆ ಬೆಳಕು ನೀಡಿರುವುದನ್ನು ಆಲ್ದಾಳರು ನೆನಪಿಸಿಕೊಂಡು ತಮ್ಮ 'ಮೌನ ಮಾತಿನ ಮಲ್ಲ'ನ ಬಗ್ಗೆ ಹೊಗಳಿಕೆಯ ಎರಡು ಮಾತುಗಳನ್ನು ಹೇಳಿದ್ದರಲ್ಲಿ ತಪ್ಪೇನು ಇಲ್ಲ. ಅದನ್ನು ಸರ್ವರೂ ಮೆಚ್ಚಲೇ ಬೇಕು.

ಇದನ್ನು ಸಮರ್ಥಿಸುವ ರೀತಿಯಲ್ಲಿ ಹಿರಿಯ ಸಾಹಿತಿ ಡಾ.ಸಾ.ಶಿ.ಮರುಳಯ್ಯ ಅವರ ಮಾತಿನಲ್ಲಿ, "ಮಹಾದೇವಪ್ಪ ಅವರು ಸೌಜನ್ಯದ ವ್ಯಕ್ತಿ, ಮಾತು ಕಡಿಮೆ. ಅಂತರ್ಚಿಂತನೆ ಹೆಚ್ಚು. ಜನಜಂಗುಳಿಯಲ್ಲಿ ಸುತ್ತ–ಮುತ್ತವರನ್ನೆಲ್ಲ ಒತ್ತಿ ಮುನ್ನುಗ್ಗುವ 'ಸಾಹಸಿ'ಯಲ್ಲ. ಜನರ ಮಧ್ಯೆಯೇ ಇದ್ದು ಕಾಲು ತುಳಿಸಿಕೊಂಡು ನೋವಾದರೂ ಮೌನದಿಂದ ಅನುಭವಿಸುವ 'ಸಾಧು ಜೀವಿ' ಲೋಕಗದ್ದಲದ ನಡುವೆಯೂ ಸದ್ದಿಲ್ಲದೆ ಸೇವೆ ಸಲ್ಲಿಸುತ್ತಿರುವ ಶರಣಜೀವಿ".

**ಲೇಸೆನಿಸಿಕೊಂಡು ಐದು ದಿನ ಬದುಕಿದರೇನು**
**ಲೇಸೆನಿಸಿಕೊಂಡು ನಾಲ್ಕು ದಿನ ಬದುಕಿದರೇನು**
**ಲೇಸೆನಿಸಿಕೊಂಡು ಮೂರು ದಿನ ಬದುಕಿದರೇನು**
**ಲೇಸೆನಿಸಿಕೊಂಡು ಎರಡು ದಿನ ಬದುಕಿದರೇನು**
**ಕೂಡಲ ಸಂಗನ ಶರಣರ ವಚನದಲ್ಲಿ**
**ಲೇಸೆನಿಸಿಕೊಂಡು ಒಂದು ದಿನ ಬದುಕಿದರೆ ಸಾಕು.**

ಎಂಬ ಜಗಜ್ಯೋತಿ ಬಸವಣ್ಣನವರ ವಚನದಂತೆ (ವಾಣಿ) ಬದುಕಿ, ಬದುಕನ್ನು ಸಾರ್ಥಕ ಮಾಡಿಕೊಂಡಿರುವವರು ಬಿ.ಮಹಾದೇವಪ್ಪನವರು ಎಂಬುದು ಕೂಡ ಆಲ್ದಾಳರ ಅಭಿಪ್ರಾಯ.

# ಸಿದ್ಧಪ್ರಭೆ

(ಶ್ರೀ ಕೋರಿಸಿದ್ಧೇಶ್ವರರ ಸ್ಮರಣ ಸಂಚಿಕೆಗೆ ಆಲ್ದಾಳರ ಲೇಖನ)

ಯಾದಗೀರ ಜಿಲ್ಲೆಯ ನಾಲವಾರ ಗ್ರಾಮದ ಶ್ರೀಕೋರಿಸಿದ್ಧೇಶ್ವರ ಸಂಸ್ಥಾನ ಮಠದ ಶಿವನ ಅವತಾರಿಯಂತೆ ಬಂದು ಭರತಖಂಡದ ಧಾರ್ಮಿಕ ಇತಿಹಾಸದಲ್ಲಿ ಬೆಳಗಿ ನಾಡಿನ ಧಾರ್ಮಿಕ ಹಾಗೂ ಸಾಂಸ್ಕೃತಿಕ ರಂಗಗಳನ್ನು ಕಳೆಗೊಳಿಸಿದ ನಾಲವಾರ ಸುಕ್ಷೇತ್ರದ ಮಹಾತಪಸ್ವಿ 'ಶ್ರೀ ಕೋರಿಸಿದ್ಧೇಶ್ವರ'ರ ಲಕ್ಷದೀಪೋತ್ಸವದ ಸುಸಂದರ್ಭದಲ್ಲಿ ಹಚ್ಚಿಟ್ಟ 'ಸಿದ್ಧಪ್ರಭೆ'ಯ ಈ ನುಡಿ ಜ್ಯೋತಿ ಸಮಸ್ತ ಭಕ್ತರ ಪರವಾಗಿ ಎತ್ತಿದ ಆರತಿ.

ಸಿದ್ಧಪ್ರಭೆಯ ಈ ನುಡಿ ಜ್ಯೋತಿಗೆ ಸಾಹಿತಿ, ನಾಟಕಕಾರ, ಆಧ್ಯಾತ್ಮಿಕ ಬರಹಗಾರರೂ ಆಗಿರುವ ಎಲ್.ಬಿ.ಕೆ.ಆಲ್ದಾಳರು "ಉಪಾಚಾರ್ಯರತ್ನ ಶ್ರೀ ತೋಟೇಂದ್ರ ಶಿವಾಚಾರ್ಯರು" ಎಂಬ ಶೀರ್ಷಿಕೆಯಡಿ ಭಕ್ತಿ ಪೂರ್ವಕವಾದ ಲೇಖನ ಬರೆದು ಶ್ರೀ ಕೋರಿಸಿದ್ಧೇಶ್ವರರಿಗೆ ತಮ್ಮದು ಒಂದು ಆರತಿಯನ್ನು ಎತ್ತಿ ಬೆಳಗಿಸಿ ಪಾವನರಾಗಿದ್ದಾರೆ.

"ಜಗಕಾವರಿಸಿದ ಅಂಧಕಾರನ್ನು ಹೊಡೆದೋಡಿಸಲು ವರ ಅರುಣನೋಪಾದಿಯಲ್ಲಿ, ಈ ಸಗರನಾಡಿನಲವತರಿಸಿ ಬಂದ ಶರಣ ಚರಿತಾಮೃತದ ಸಲೀಲ, ನಿತ್ಯನಿರಂತರವಾಗಿ ಹರಿದಿದೆ, ಹರಿತಾ ಇದೆ. ಮಾಂದಳಿರ ಸವಿಯುಂಡ ಕೋಗಿಲೆಯು ತನ್ನ ಪಂಚಮದಿಂಚರದಿಂದ ಹಾಡುವತೆರದಿ, ನಮ್ಮ ನಾಡಿನ ಶರಣ ಶ್ರೇಷ್ಠರು ಆಧ್ಯಾತ್ಮದ ಸವಿಯುಂಡು ಅನುಭಾವಿಗಳಾಗಿ ಅನುಭವದ ಗೀತೆಗಳು ಹಾಗೂ ವಚನಗಳನ್ನು ಬರೆದು, ನುಡಿ ಎಡೆಮಾಡಿ ತಾಯಿ ಸರಸ್ವತಿಗೆ ಹಿಡಿದಿದ್ದಾರೆ, ಹಾಡಿದ್ದಾರೆ". [೨೩೬] ಯಾವ ಬರಹಗಳನ್ನು ಯಾವ ಶೈಲಿಯಲ್ಲಿ ವಿದ್ವತ್ತಪೂರ್ಣವಾಗಿ ಬರೆಯಬೇಕು ಎನ್ನುವ ಕಲೆಯನ್ನು ಆಲ್ದಾಳರು ಸಂಪೂರ್ಣವಾಗಿ ಮನಗಂಡಿದ್ದಾರೆ. ಅವರು ತಮ್ಮ ಸರಳ ನುಡಿಗಳಿಂದ ಎಲ್ಲ ರೀತಿಯ ಜನರ ಆಕರ್ಷಣೆಗೆ ಗುರಿಯಾಗುತ್ತಾರೆ. ಪಂಡಿತ್ತೋತ್ತಮರು ಸಹ ಇವರ ಬರಹದಲ್ಲಿ ಅಡಗಿರುವ ವಿಷಯ, ಅದರ ಶೈಲಿ, ಆಕರ್ಷಣೆಗಳನ್ನು ಕಂಡು ತಲೆತೂಗದೇ ಇರರು.

ಆಲ್ದಾಳರು ಯಾವುದೇ ಬಗ್ಗೆ ಲೇಖನ ಬರೆದರೂ ಅದರಲ್ಲಿ ಆಚಾರ–ವಿಚಾರಗಳಂತೂ ಇರಲೇಬೇಕು. ಮುಖ್ಯವಾಗಿ ಸಮಾಜದಲ್ಲಿರುವ ಎಲ್ಲ ಕೋಮಿನವರು ಸೌಹಾರ್ದ ಶಾಂತಿಯಿಂದ ಬಾಳಬೇಕೆಂಬುದೆ ಅವರ ಗುರಿಯಾಗಿದೆ. ಅದಕ್ಕಾಗಿಯೇ ಅಂಥ ಶರಣರನ್ನೇ ತಮ್ಮ ಲೇಖನಿಯಲ್ಲಿಡಿದಿಟ್ಟಿರುತ್ತಾರೆ ಎಂಬುದೇ ವಿಶೇಷ, ಕೆಳಗಿನ ಸಾಲುಗಳಲ್ಲಿ..... "ಶ್ರೀತೋಟೇಂದ್ರ ಶಿವಾಚಾರ್ಯರು ಜೇವರ್ಗಿ ತಾಲೂಕಿನ ವಡಗೇರಿ ಗ್ರಾಮಕ್ಕೆ ಆಮಂತ್ರಣದ ಮೇರೆಗೆ, ಹಜರತ್ ಚಂದಾಹುಸೇನ್ ಸಾಹೇಬರ ಉರುಸಿನ ಕಾರ್ಯಕ್ರಮದಲ್ಲಿ ಭಾಗಿಗಳಾಗಿ, ಹಿಂದು–ಮುಸ್ಲಿಂರ ಐಕ್ಯತೆಯ ಬಗ್ಗೆ ಸುದೀರ್ಘವಾಗಿ ಆಶೀರ್ವಚನ ಮಾಡಿ ಬಂದದ್ದು ಕೋಮುವಾದಿಗಳಿಗೊಂದು ಸವಾಲು ಹಾಕಿದಂತಿದೆ. ಅಂತೆಯೇ ನಮ್ಮ ನಾಡಿನ ಹಿಂದು–ಮುಸ್ಲಿಂ ಬಾಂಧವರೆಲ್ಲರೂ ಶ್ರೀಗಳ ಚರಣಕ್ಕೆ ಮಣಿಯುತ್ತಾರೆ. ಈ ರೀತಿಯ ಭಾವೈಕ್ಯತೆ ಸದಾ ಇರುತ್ತಿರೆ ದೇಶವೇ ಬಂಗಾರದ ಹಕ್ಕಿಯಾಗುತ್ತದೆ.

ಈ ಎಲ್ಲ ನಿಟ್ಟಿನಿಂದ ಆಲ್ದಾಳರ ಲೇಖನಗಳ ಕುರಿತು ಬರೆಯುವುದೆಂದರೆ, ಅದು ಮಾನವೀಯತೆಯನ್ನು ಕುರಿತು ಬರೆದಂತಾಗುತ್ತದೆ. ಅವರು ತಮ್ಮ ಕೃತಿಗಳ ಮೂಲಕ ಬಿತ್ತರಿಸಿದ ಬಾಳ ಬೆಳಕು ಕನ್ನಡ ನಾಡಿನ ದಿವ್ಯ ಸಂಸ್ಕೃತಿಯ ಹಬ್ಬವಾಗಿ ನಮ್ಮ ಕಣ್ಣು ಕುಕ್ಕಿಸುತ್ತದೆ. ಮನಸ್ಸು ಅರಳಿಸುತ್ತದೆ.

**"ಕಣ್ಣು ಇರುವಾಗಲೇ ಕೈಲಾಸನೋಡು**
**ಕಾಲಲ್ಲಿ ಶಕ್ತಿಯಿರುವಾಗಲೇ ಶರಣರದರ್ಶನ ಮಾಡು**
**ನಾಲವಾರ ಸುಕ್ಷೇತ್ರದಲ್ಲಿರುವುದು ಶಿವರೂಪಶರಣ**
**ಆ ತೇಜಃಪುಂಜ ಶರಣರನ್ನು ನೋಡಿ ನೀ ಪಡೆಕರುಣ**
**ಲಕ್ಷದೀಪೋತ್ಸವ ನಡೆಯುವುದು ಕೈಲಾಸದಂತೆ**
**ಅಂದು ಬ್ರಹ್ಮ ವಿಷ್ಣು ಮಹೇಶ್ವರರ ಹೊಳಪುಕಂಡಂತೆ**
**ಬಾನಲ್ಲಿ ನಿಂತು 'ಹೂಮಳೆ' ಸುರಿಸಿ ಹರಸುವರು**
**ಬಂದ ಜನತೆ ನೋಡಿ ಆನಂದ ಸವಿಯುವರು"** [೨೩೭]

**ಶ್ರೀ ಕೋಡ್ಲಿಕಂಟೆಪ್ಪ ಮಾಸ್ತರ : ಅಭಿನಂದನ ಗ್ರಂಥಕ್ಕೆ ಆಲ್ದಾಳರ ಲೇಖನ**

ರಂಗದಿಗ್ಗಜ ಕೋಡ್ಲಿ ಕಂಟೆಪ್ಪ ಮಾಸ್ತರ ಎಂದೇ ಹೆಸರುಪಡೆದ ಇವರು ಹುಟ್ಟಿದ್ದು ಚಿಂಚೋಳಿ ತಾಲೂಕಿನ ಕೋಡ್ಲಿ ಗ್ರಾಮದಲ್ಲಿ. ತಾಯಿ ನೀಲಮ್ಮ ತಂದೆ ವೀರಬಸಪ್ಪ ಯಲಮಡಗಿ.

ಇಂತಹ ಹೆಸರಾಂತ ನಾಟಕಕಾರ ಶ್ರೀ ಕೋಡ್ಲಿಕಂಟೆಪ್ಪ ಮಾಸ್ತರರ ಕುರಿತು ಲೇಖನ ಬರೆಯುತ್ತಿರುವ ಮತ್ತೋರ್ವ ಶ್ರೇಷ್ಠನಾಟಕಕಾರ, ಗುಬ್ಬಿ ವೀರಣ್ಣ ಪ್ರಶಸ್ತಿಗೆ ಭಾಜನರಾಗಿರುವ ಎಲ್.ಬಿ.ಕೆ.ಆಲ್ದಾಳರವರು ಕಂಟೆಪ್ಪ ಮಾಸ್ತರರು ನೇಪಥ್ಯಕ್ಕೆ ಸರೆದಿರುವ ಸಂದರ್ಭದಲ್ಲಿ ನಾಡಿನ ಜನತೆಗೆ ಅವರನ್ನು ಪರಿಚಯಿಸಿಕೊಡುತ್ತಿರುವುದು ಶ್ಲಾಘನೀಯವಾದುದ್ದು.

'ಬಂದಿರುವೆ ಎಲ್ಲಿಂದ ನಿನಗೆ ಗೊತ್ತೆ? ಹೋಗುವದೆಲ್ಲಿಗೆಂಬುದು ಹೇಗೆ ಮರೆತೆ? ಕಂಟೆಪ್ಪ ಮಾಸ್ತರ ಕೋಡ್ಲಿಯವರು ಸಾತ್ವಿಕ ತಾತ್ವಿಕ ಬದುಕನ್ನು ಸಾಗಿಸಿದ ಪುಣ್ಯ ಜೀವಿಗಳು ಯಾವುದೇ ವಿಶ್ವ ವಿದ್ಯಾಲಯದಲ್ಲಿ ಅಭ್ಯಾಸ ಮಾಡದಿದ್ದರೂ ತಮ್ಮ ಪ್ರತಿಭಾಪೂರ್ಣ ವ್ಯಕ್ತಿತ್ವದಿಂದ, ನಾಟಕ ಕಲೆಯಲ್ಲಿ ಪ್ರವೀಣರಾಗಿ, ಸ್ವತಃ ನಾಟಕದಲ್ಲಿ ಅಭಿನಯಿಸಿ, ಅನೇಕ ಸಾಮಾಜಿಕ ಧಾರ್ಮಿಕ, ಪೌರಾಣಿಕ ನಾಟಕಗಳನ್ನು ಬರೆದು ಜನಮಾನಸದಲ್ಲಿ ಚಿರಸ್ಥಾಯಿಯಾಗಿ ನಿಲ್ಲುವಂಥಹ ವ್ಯಕ್ತಿಗಳು'[೨೩೮] ಇಂದು ಕಂಟೆಪ್ಪ ಕೋಡ್ಲಿ ಮಾಸ್ತರರು ಭೌತಿಕವಾಗಿ ಶರೀರದಿಂದ ಅಳಿದು ಹೋದರೂ ನಾಟಕ ಸಾಹಿತ್ಯ ಇರುವವರೆಗೂ ಜನರ ಹಾಗೂ ಓದುಗರ ಮನದಲ್ಲಿ ಸದಾಕಾಲ ಜೀವಂತವಾಗಿರುತ್ತಾರೆ.

ಆಲ್ದಾಳ ಅವರು ತಮ್ಮ ಮತ್ತು ಕೋಡ್ಲಿ ಅವರ ಬಾಂಧವ್ಯ "ಹುರಿಹೊಡೆದು ಹೊಸೆದ ಹಗ್ಗ"ದಂತಿದೆ ಎಂದು ಮನಸಾರೆ ಹೇಳುತ್ತಾರೆ.

"ಕೋಡ್ಲಿ ಅವರ ನಿರ್ದೇಶನದಲ್ಲಿ ಪಳಗಿದವರು, ಇಂದು ನಾವೇನೇ ಆಗಿದ್ದರೂ ಅದು ಕಂಟೆಪ್ಪ ಮಾಸ್ತರರ ದಿವ್ಯ, ಭವ್ಯ ಆಶೀರ್ವಾದವೆಂದು ಹೇಳುತ್ತಾರೆ. ಸಾಕಲ್ಲ? ಇನ್ನೇನುಬೇಕು? ತಾನು ಬಿತ್ತಿದ ಬೀಜ ಸಸಿಹಾಗಿ ಬೆಳೆದು ತೆನೆಹಾಕಿ, ಕಾಳು ಭರಿಸಿ, ರಾಶಿಮಾಡಿದಾಗ ಅದೆಂಥ ಆನಂದ? ಅದೇ ನಿಜಾನಂದ. "ಅಳಿದು ಹೋದರೂ ಉಳಿದು ಹೋಗುವ" ಪ್ರಕ್ರಿಯೆ ಅಲ್ಲವೆ? ಮನುಷ್ಯನಾಗಿ ಹುಟ್ಟಿದ ಮೇಲೆ ಏನಾದರೂ ಒಂದು ಸಾಧಿಸಬೇಕೆನ್ನುವ, ಛಲವಿದ್ದಲ್ಲಿ ಜಯಶೀಲರಾಗುವುದರಲ್ಲಿ ಸಂದೇಹವೇ ಇಲ್ಲ. ಸದಾಪ್ರಯತ್ನ ಶೀಲ ಪ್ರಕಿಯೆ ಹತ್ತಿರ ಸೋಲೆಂಬುದೇ ಸುಳಿಯುವುದಿಲ್ಲವಂತೆ" [೨೩೯] ಆಲ್ದಾಳ ಅವರ ವಿಚಾರ ಅದರ ಹಿಂದಿರುವ ಉದ್ದೇಶ ಅರಿಯಬೇಕು.

# ಕವಿಮನದ ಆಲ್ದಾಳರು

ಕುಗ್ರಾಮದಲ್ಲಿ ಜನಿಸಿ ೬-೭ ತರಗತಿಯನ್ನು ಕಲಿತವನೊಬ್ಬ ಮುಂದೆ ನಾಟಕರತ್ನ ಗುಬ್ಬಿವೀರಣ್ಣ ನವರ ಪ್ರಶಸ್ತಿಗೆ ಭಾಜನರಾಗಿ ರಂಗ ಸಾಮ್ರಾಟನಾಗುತ್ತಾನೆಂದು ಯಾರಿಗೆ ಗೊತ್ತು? ಕೊಂಪೆಯಲ್ಲಿ ಹುಟ್ಟಿದ ಹೈದನೊಬ್ಬ ಬೀದರ ಜಿಲ್ಲೆಯ ಬಸವಕಲ್ಯಾಣ ತಾಲೂಕಿನ ಸುಕ್ಷೇತ್ರವೆಂದೇ ಪ್ರಖ್ಯಾತಗೊಂಡಿರುವ ಹಾರಕೂಡ ಗ್ರಾಮದ ಶ್ರೀ ಚನ್ನಬಸವೇಶ್ವರ ಸಂಸ್ಥಾನದ ಈಗಿನ ಪೀಠಾಧಿಪತಿಗಳಾದ ಶ್ರೀ ಷ ಬ್ರ ಚೆನ್ನವೀರ ಶಿವಾಚಾರ್ಯರ ಕೃಪೆಗೆ ಪಾತ್ರರಾಗಿ ಅವರ ಅಮೃತ ಹಸ್ತದಿಂದ ಮಾನ-ಸನ್ಮಾನದೊಂದಿಗೆ ಧನ-ಕನಕ ಪ್ರಶಸ್ತಿಗಿಟ್ಟಿಸಿ ರಂಗಭೂಮಿಯ ಕೀರ್ತಿಗೆ ಚಿನ್ನದ ಕಳಸ ಇರಿಸುತ್ತಾರೆಂದು ಯಾರಾದರು ಕಣಿ ನುಡಿದಿದ್ದರೆ? ಸರಸ್ವತಿದೇವಿ ಗಂಟು ಹಾಕಿಕೊಂಡಿದ್ದೇ ಆಶ್ಚರ್ಯ. ಅವರು ರಂಗಭೂಮಿಯ ಏಳ್ಗೆಗಾಗಿ ಶ್ರಮಿಸುತ್ತಿರುವುದನ್ನು ಕಂಡುವರು, "ಇವರಂತಹವರ ಸಂಖ್ಯೆ ಬೆಳೆಯಲಿ" ಎಂದು ಹೇಳದೆ ಇರಲಾರರು. ಅವರು ಯಾರು ಎಂಬದು ನೀವು ಯೋಚಿಸುತ್ತಿರುವಿರಿತಾನೆ? ನಿಮ್ಮ ಊಹೆ ನಿಜಕ್ಕೂ ಮೆಚ್ಚಲೇ ಬೇಕು. ಅವರೇ ಎಲ್.ಬಿ.ಕೆ.ಆಲ್ದಾಳರು. ತಿಪ್ಪೆಯಿಂದ ಉಪ್ಪರಿಗೆ ತನಕ ಯಶಸ್ವಿಯಾಗಿ ಪಯಣ ಮಾಡಿದವರು.

ಎಲ್.ಬಿ.ಕೆ ಆಲ್ದಾಳ ಅವರ ಸಾಹಿತ್ಯ ಪ್ರಕಾರಗಳಲ್ಲಿ ಕೆಲವು ಕವಿತೆಗಳು ಸೇರಿಕೊಂಡಿವೆ. ಅವರ ಕವಿತೆಗಳ ಸಂಖ್ಯೆ ಮುಖ್ಯವಲ್ಲ. ಅವುಗಳಲ್ಲಿ ಹುದುಗಿರುವ ಒಳಗೊಂಡಿರುವ ದೃಷ್ಟಿಮುಖ್ಯ ಏಕೆಂದರೆ, "ಈ ದಿನಗಳಲ್ಲಿ ಬರುತ್ತಿರುವ ಕವಿತೆಗಳನ್ನು ನೋಡಿದರೆ ಅದು ವಿಡಂಬನೆ ಮತ್ತು ಕಾಮ. ಈ ಎರಡೇ ವಸ್ತುಗಳ ಸುತ್ತ ಗಾಣತಿರುಗುತ್ತಿದೆ ಎಂದು ಅನ್ನಿಸುತ್ತದೆ ಇದಿಷ್ಟೇ ವಸ್ತುವಿನ ಸುತ್ತ ತಿರುಗಾ-ಮುರುಗಾ ಸುತ್ತುವುದರಲ್ಲೇ ಒಂದು ಬಗೆಯ ರೋಚಕತೆಯನ್ನು ಬೆಳೆಯಿಸಿಕೊಂಡ ಈ ಮನೋಧರ್ಮ ಬದುಕಿನ ಬೇರೆ, ಬೇರೆ ಮುಖಗಳ ಸಾಧ್ಯತೆಯನ್ನು ಸೂರೆಮಾಡುವ ಸಾಹಸದಿಂದ ವಿಮುಖವಾದ ಹಾಗೆ ತೋರುತ್ತದೆ. ಪತ್ರಿಕೆಗಳಿಗೆ ಬರುವ ಕವಿತೆಗಳನ್ನು ನೋಡಿದರೆ ಅವುಗಳ ವಸ್ತು ಗಂಡಿಗೆ ಹೆಣ್ಣಾಗಿ, ಹೆಣ್ಣಿಗೆ ಗಂಡಾಗಿ ಕಾಡುವ ಕಾಮವಷ್ಟೇ ಆಗಿರುವುದು. ಆಶ್ಚರ್ಯವಾಗುತ್ತದೆ" ಎಂದು ಪ್ರೋ.ಜಿ.ಎಸ್ ಶಿವರುದ್ರಪ್ಪ ಅಭಿಪ್ರಾಯ ವ್ಯಕ್ತ ಪಡಿಸಿದ್ದಾರೆ. "ಕಾಮ ಬದುಕಿನ ಅತ್ಯಂತ ಮೂಲಭೂತವಾದ ಸತ್ವ, ಬರೆಯಬೇಕಾದಂತೆ ವಸ್ತು ಅದು ನಿಜ. ಆದರೆ ಬರೆಯ ಬೇಕಾದದ್ದೇ ಅದು-ನವ್ಯವಾಗುವುದಕ್ಕೆ-ಎಂಬಂತೆ ಕಾಣಿಸಿದರೆ ಈ ದೃಷ್ಟಿ ಅದೆಷ್ಟು ಪರಿಮಿತ ಎಂದು ಬೇರೆ ಹೇಳಬೇಕಾಗಿಲ್ಲ. ಬದುಕಿನ ಬೇರೆ ಬೇರೆ ಅನುಭವಗಳ ವಲಯ, ಈ ಕೇಂದ್ರದಾಚೆ ಇಲ್ಲವೆ ಇಲ್ಲವೆಂಬಂತೆ ವರ್ತಿಸಿದರೆ, ನಮ್ಮ ತರುಣರ ದೃಷ್ಟಿ ಒಳಗೊಳ್ಳಬೇಕಾದ ಸಮಗ್ರತೆ ಇನ್ನುಬಾರದಲ್ಲ ಅನ್ನಿಸುತ್ತದೆ". [೨೪೦]

ಎಲ್.ಬಿ.ಕೆ ಆಲ್ದಾಳ ಅವರು ತಮ್ಮ ಅನುಭವದ ಪಾಕವನ್ನು ತಮ್ಮ ಕವಿತೆಯಲ್ಲಿ ಎಳೆ-ಎಳೆಯಾಗಿ ಬಿಡಿಸಿದ್ದಾರೆ. ಅವರ ಇತ್ತೀಚಿನ ಕವಿತೆ "ತೇರೆಳೆದು ತೆರವಾಗು" ಕವನ ಹೀಗಿದೆ.

**ಇರುವ ಭಾಗ್ಯಕೆ ನೆನೆದು**
**ಜನಕಾಗು ಪ್ರೇರಕ!**
**ಇರದ ಭಾಗ್ಯವ ಬಯಸಿ**
**ಬಸಿಯುಸಿರುವ ಯಾತಕ?**
**ಕೊಟ್ಟುಕಳವಳಿಸದಿರು**
**ಇಟ್ಟು ಹಳಹಳಿಸದಿರು**
**ಬೆಂದವರ ಒಡಲಿಗೇ**
**ಬೆಂದಕಾಳು ನೀನಾಗು**
**ಸ್ಪಂದಿಸುತ, ನಂದಿಸುತ**
**ಹೊತ್ತು-ಗೊತ್ತು ನೀನರಿದು**
**ಚಿರವಾಗು, ಚಿರವಾಗು**
**ಬಂದ ಭೂಋಣವ ತೀರಿಸು!!**
**ಹರುಷೋತ್ಸವಕದುವೇ**
**ಸಹನೆ ಶಾಂತಿಯ ತೇರು!**
**ಅನಂತದಾಚೆಗೆಸಾಗಿ**
**ತೇರೆಳೆದು ತೆರವಾಗು!!** ಎಲ್‌ಬಿಕೆ ಆಲ್ದಾಳ

ಈ ಕವಿತೆಯ ಸಾಲುಗಳು ಒಂದು ಬಗೆಯ ಮುಗ್ಧ, ಮೋಹಕ ಶೈಲಿಯಲ್ಲಿ ಸಲೀಸಾಗಿ ಓದುಗರ ಮನಸ್ಸನ್ನು ನುಣ್ಣಗೆ ಜಾರಿಸಿಕೊಂಡು ಹೋಗುತ್ತವೆ.

## ಆ ಹೃದಯ....

**ಕ್ರಿಮಿ ಕೀಟಗಳು**
**ಪಶು ಪಕ್ಷಿಪ್ರಾಣಿಗಳು**
**ಜಲಚರಗಳು**
**ಮತ್ತೊಂದಕ್ಕೇಳಸವು**
**ಇನ್ನೊಂದಕ್ಕೆ ಬಳಸವು**
**ನಾಳಿನಾ ಚಿಂತೆಯಿಲ್ಲ**
**ಇಂದಿನಾ ವ್ಯಸನವಿಲ್ಲ**
**ಜಪವಿಲ್ಲ; ತಪವಿಲ್ಲ**
**ನೇಮ ನಿಯತ್ತುಗಳಿಲ್ಲ**
**ಹಾಯಾದ ಬದುಕು**
**ಸ್ವಚ್ಛಂದ ಜೀವನ**
**ನಿತ್ಯ ನವಚೇತನ**
**ಕಪ್ಪು ಚುಕ್ಕೆ ಇಲ್ಲದ**
**ಅವುಗಳ ಹೃದಯ**
**ಅಪ್ಪಟ ಅಪರಂಜಿ**
**ಸದಾ ಹಚ್ಚ ಹಸಿರು**
**ನಿರಭ್ರ ನೀಲಾಕಾಶ**
**ಶಾಂತ ಸಾಗರ ಆ**
**ಹೃದಯ ನಮಗಿತ್ತು**
**ಕಾಪಾಡು-ತಪೋವನಧೀಶ** – ಎಲ್.ಬಿ.ಕೆ ಆಲ್ದಾಳ

(ವಿಜಯವಾಣಿ ದಿನಪತ್ರಿಕೆಯಲ್ಲಿ ದಿ.೨೮.೦೭.೨೦೧೩ ರಂದು ಪ್ರಕಟಿತ)

ಮಾನವರಿಗೂ ಮತ್ತು ಪಶು-ಪಕ್ಷಿಗಳಿಗು, ಜಲಚರ ಪ್ರಾಣಿಗಳಿಗೂ ಇರುವ ಸ್ವಭಾವದಲ್ಲಿ ಎಷ್ಟೊಂದು ಅಂತರವಿರುವುದನ್ನು ಕವಿವಾಣಿಯ ಎಲ್.ಬಿ.ಕೆ ಆಲ್ದಾಳ ಅವರು ಈ ೨೦ ಪಂಕ್ತಿಯ ಕವನದಲ್ಲಿ ಮನಸ್ಸಿನಲ್ಲಿ ಅಚ್ಚಳಿಯದಂತೆ ಬಿಂಬಿಸಿದ್ದಾರೆ 'ಆ ಹೃದಯ...' ಕುತೂಹಲ ಹುಟ್ಟಿಸುವ ಕವನ, ಕವನ ಸ್ವಲ್ಪವೇ ಸಾಲುಗಳನ್ನು ಹೊಂದಿದ್ದರೂ ಅದರ ಗೂಡಾರ್ಥ ಬಹಳಷ್ಟು ಎತ್ತರದಲ್ಲಿದೆ. ಕವಿ ಎಲ್.ಬಿ.ಕೆ ಆಲ್ದಾಳರು ಹೃದಯ ವೈಶಾಲ್ಯತೆಯನ್ನು ಹೊಂದಿದವರು. ಹೀಗೆ ಬದುಕಿನಲ್ಲಿ ಆನಂದಕ್ಕೆ ತುಡಿಯುವ ಮನಸ್ಸಿಗೆ ಲೋಕದ ಕಷ್ಟದ ಅರಿವಿಲ್ಲ. ಕವಿ ತಮ್ಮ ಬದುಕಿನ ತಾತ್ವಿಕತೆಗೆ ಅವರದ್ದೇ ಆದ ಒಂದು ಮಟ್ಟವನ್ನು ಸ್ವತಃ ಕವಿ ವಿಧಿಸಿಕೊಂಡಿದ್ದಾರೆ. ಆ ಅನುಭವದಿಂದ ಸಮನ್ವಯಕ್ಕೆ ತುಡಿದಾಗ ಆನಂದಮಯಲೋಕದ ಅನುಭವವಾಗುತ್ತದೆ. 'ಕ್ರಿಮಿಕೀಟಗಳು, ಪಶುಪಕ್ಷಿಗಳು, ಪ್ರಾಣಿಗಳು, ಜಲಚರಗಳಿಗಿರುವಷ್ಟು ಮಾನವರಿಗೆಲ್ಲಿದೆ? ಅವುಗಳಿಗೆ ನಾಳಿನ

ಚಿಂತೆಯಿಲ್ಲ, ಗಳಿಕೆಯ, ಕಳೆದುಕೊಳ್ಳುವ ಚಿಂತೆಯಿಲ್ಲ, ಇಂದು ಇಂದಿಗೆ, ನಾಳೆ-ನಾಳೆಗೆ ಎನ್ನುವ ಹೃದಯ ಅವುಗಳದ್ದು ಆದರೆ ಮನುಷ್ಯನಿಗೆ ಪಶು-ಪಕ್ಷಿಗಳಂತೆ ಹೃದಯವಿದೆಯೆ? ಹೃದಯಾಂತರಾಳದಲ್ಲಿ ಕಪಟ, ವಂಚನೆ, ಭ್ರಷ್ಟಾಚಾರ, ಅಕ್ರಮಗಳು, ಅನೀತಿ, ಅನ್ಯಾಯ, ಕೋಪ, ತಾಪಗಳೇ ತುಂಬಿಕೊಂಡಿರುವಾಗ ಎಲ್ಲಿಂದ ಬಂದೀತು ಶಾಂತಿ, ಸುಖ? ಮಾನವ ಕಪಟವೇಷಧಾರಿಯಂತೆ ಜಪತಪಗೈದರೇನು ಬಂದೀತು. ಮೈಯೆಲ್ಲಾ ಕಪ್ಪುಚುಕ್ಕೆ ಅಂಟಿಸಿಕೊಂಡು ಹೃದಯದೊಳಗಡೆ ಗಲೀಜು ತುಂಬಿಕೊಂಡರೆ ಅಪರಂಜಿ ಆಗಲು ಸಾಧ್ಯವೆ? ಹಾಯಾದ ಬದುಕು ದೊರಕುವುದೆ?

"ನಿಸರ್ಗ ಜೀವಿಗಳು ಶಾಂತಿ-ಸಂಯಮ ಆಚರಿಸುತ್ತ ಸರಳ ಹೃದಯಹೊತ್ತು ಸುಖದಿಂದ ಜೀವಿಸುತ್ತಿರುವಾಗ ಮಾನವರಿಗೆ ಬಂದಕೇಡೇನು? ಇಲ್ಲಿ ನಾವು ಮನಸಾರೆ ತಿಳಿದುಕೊಳ್ಳ ಬೇಕಾದದ್ದು ಇಷ್ಟೆ. ಅಮೂಲ್ಯವಾದುದನ್ನು, ಅಪರಿಮಿತವಾದುದನ್ನು, ಅತಿಶಯವಾದುದನ್ನು ಪ್ರಾಪ್ತ ಮಾಡಿಕೊಳ್ಳ ಬೇಕಾದರೆ ತಾಳ್ಮೆ, ತಪಸ್ಸು, ನಿರೀಕ್ಷೆ, ಸಂಯಮನ ಬೇಕೇ ಬೇಕು. ಕೋಗಿಲೆಯ ಧ್ವನಿ ಅಷ್ಟು ಮಧುರವಾಗಿರಬೇಕಾದರೆ ಮಾವಿನ ಚಿಗುರು ಬಿಡುವ ಮಧುಮಾಸದವರೆಗೆ ಅದು ಉಪವಾಸ ಆಚರಿಸುತ್ತದೆ. ಕಾಗೆಯಂತೆ ಅದು ಎಲ್ಲದಕ್ಕೂ ಬಾಯಿತೆರೆದಿದ್ದರೆ ಕೋಗಿಲೆಯ ಕಂಠ ಅಷ್ಟು ಇಂಪಾಗಿರುತ್ತಿತ್ತೆ ? [೪೧೫]

## ಅಡಿ ಟಿಪ್ಪಣಿ

### ಅ) ಭಕ್ತಿ ಪ್ರಧಾನ ನಾಟಕಗಳು

೧) ಶ್ರೀ ಕರಿಘೂಳೇಶ್ವರ ಮಹಾತ್ಮೆ : ಎಲ್.ಬಿ.ಕೆ. ಆಲ್ದಾಳ ಪು.ಸಂಖ್ಯೆ – ೩

೨) ಅದೇ

೩) ಅದೇ ಪು.ಸಂಖ್ಯೆ – ೧೦

೪) ಅದೇ ಪು.ಸಂಖ್ಯೆ – ೨೪

೫) ಅದೇ ಪು.ಸಂಖ್ಯೆ – ೩೬

೬) ಅದೇ ಪು.ಸಂಖ್ಯೆ – ೩೭

೭) ಅದೇ ಪು.ಸಂಖ್ಯೆ – ೫೭

೮) ಅದೇ ಪು.ಸಂಖ್ಯೆ – ೬೮

೯) ಅದೇ ಪು.ಸಂಖ್ಯೆ – ೭೬

೧೦) ಅದೇ ಪು.ಸಂಖ್ಯೆ – ೭೮

೧೧) ಭಾರತೀಯ ಸಂಸ್ಕೃತಿ : ಪ್ರಾಂ.ಸ.ಸಾನೆ ಗುರೂಜಿ ಅನುವಾದ – ಭಾಸ್ಕರ ಗೋಖಲೆ ಪ್ರಕಾಶಕರು –ಸಂಕೇಶ್ವರ ಬಸವಣೆಪ್ಪ

೧೨) ಅದೇ – ಪು.ಸಂಖ್ಯೆ – ೧೩

೧೩) ಅದೇ – ಪು.ಸಂಖ್ಯೆ – ೭೧,೭೨

೧೪) ಸಾಧು ಸಿದ್ದಲಿಂಗೇಶ್ವರ ಮಹಾತ್ಮೆ ಎಲ್.ಬಿ.ಕೆ.ಆಲ್ದಾಳ – ಪು.ಸಂಖ್ಯೆ –೨,೩

೧೫) ಅದೇ – ಪು.ಸಂಖ್ಯೆ – ೧೩

೧೬) ವೀರಶೈವ ಸಂಸ್ಕೃತಿ : ಡಾ.ಎಚ್.ತಿಪ್ಪೇರುದ್ರಸ್ವಾಮಿಗಳು – ಪು.ಸಂಖ್ಯೆ – ೮೧

೧೭) ರಂಗಸಂತ ಜಂಗಮ : ಅಭಿನಂದನ ಗ್ರಂಥ –

ಪ್ರೊ.ಬಿ.ಮಹಾದೇವಪ್ಪರವರ ಲೇಖನದಿಂದ – ಪು.ಸಂಖ್ಯೆ –೧೫೭, ೧೫೮

೧೮) ಸಂದರ್ಶನ : ನಾಟ್ಯಭೂಷಂ ಏಣಗಿ ಬಾಳಪ್ಪ

೧೯) ಸಾಧು ಶಿವಲಿಂಗೇಶ್ವರ ಮಹಾತ್ಮೆ : ಆಲ್ದಾಳ – ಪು.ಸಂಖ್ಯೆ – ೨೧

೨೦) ಅದೇ – ಪು.ಸಂಖ್ಯೆ – ೨೧,೨೨

೨೧) ಹೊಸಗನ್ನಡ ಅರುಣೋದಯ – ಡಾ.ಶ್ರೀನಿವಾಸ ಹಾವನೂರ ಮುನ್ನುಡಿ

೨೨) ಸಾಧು ಶಿವಲಿಂಗೇಶ್ವರ ಮಹಾತ್ಮೆ : ಆಲ್ದಾಳ – ಪು.ಸಂಖ್ಯೆ – ೩೨

೨೩) ಅದೇ – ಪು.ಸಂಖ್ಯೆ – ೪೭

೨೪) ಅದೇ – ಪು.ಸಂಖ್ಯೆ – ೪೮

೨೫) ಶ್ರೀ ಷಣ್ಮುಖ ಶಿವಯೋಗಿ : ಗವೀಶ ಹಿರೇಮಠ ಮುನ್ನುಡಿ – ಪು.ಸಂಖ್ಯೆ – ೪

೨೬) ಅಂತರಂಗ – ನಾಡೋಜ – ಡಾ.ಅನ್ನದಾನೀಶ್ವರ ಮಹಾಶಿವಯೋಗಿಗಳು

ಮುಂಡರಗಿ – ಗದಗ ವಿಜಯವಾಣಿ ದಿನಪತ್ರಿಕೆಯಲ್ಲಿ ಪ್ರಕಟ ದಿ. ೬.೧೨.೨೦೪ ರ ಸಂಚಿಕೆ

೨೭) ಸಾಧು ಶಿವಲಿಂಗೇಶ್ವರ ಮಹಾತ್ಮೆ : ಆಲ್ದಾಳ – ಪು.ಸಂಖ್ಯೆ – ೭೦

೨೮) ಅದೇ – ಪು.ಸಂಖ್ಯೆ – ೯೪

೨೯) ಅದೇ – ಪು.ಸಂಖ್ಯೆ – ೯೫

೩೦) ಅದೇ – ಪು.ಸಂಖ್ಯೆ – ೬೨

೩೧) ಅದೇ – ಪು.ಸಂಖ್ಯೆ – ೭

೩೨) ಅದೇ – ಪು.ಸಂಖ್ಯೆ – ೫

೩೩) ಮಹಾತ್ಮ ಶ್ರೀ ಚರಬಸವೇಶ್ವರ ಮಹಾತ್ಮೆ : ಅನಿಸಿಕೆ – ಶಿವರಂಜನ್ ಸತ್ಯಂಪೇಟೆ

೩೪) ಅದೇ – ಪು.ಸಂಖ್ಯೆ – ೧೩,೧೪

೩೫) ಅದೇ : ಆಲ್ದಾಳರ ನನ್ನ ನುಡಿಯಿಂದ – ಪು.ಸಂಖ್ಯೆ – ೩

೩೬) ಅದೇ – ಪು.ಸಂಖ್ಯೆ – ೫೬

೩೭) ಅದೇ : ಆಲ್ದಾಳರ ನನ್ನ ನುಡಿಯಿಂದ – ಪು.ಸಂಖ್ಯೆ – ೩

೩೮) ಅದೇ – ಪು.ಸಂಖ್ಯೆ – ೧೨

೩೯) ಅದೇ : ಆಲ್ದಾಳ : ಪೂಜ್ಯ ಶ್ರೀ. ವೆ॥ ಬಸ್ಸಯ್ಯಾಸ್ವಾಮಿಗಳು ಶ್ರೀಚರ ಬಸವೇಶ್ವರ ಸಂಸ್ಥಾನ ಗದ್ದುಗೆ ಶಹಾಪೂರ ಇವರ ಮುನ್ನುಡಿಯಿಂದ – ಪು.ಸಂಖ್ಯೆ – ೪

೪೦) ರಂಗ ದುಂದುಭಿ : ಡಾ.ಎಚ್.ಎ.ಪಾರ್ಶ್ವನಾಥ – ಪು.ಸಂಖ್ಯೆ –೨೮೭

೪೧) ಕಲ್ಯಾಣ ನಾಡು : ಪ್ರೋ.ಕಲ್ಯಾಣರಾವ ಜಿ.ಪಾಟೀಲ – ಪು.ಸಂಖ್ಯೆ – ೨೬೨

೪೨) ಜನಪದ ಜಂಗಮ – ಆಲ್ದಾಳ – ಪು.ಸಂಖ್ಯೆ – ೪

೪೩) ಶ್ರೀ ಚನ್ನಬಸವ ಶಿವಯೋಗಿ ಮಹಾತ್ಮೆ : ಆಲ್ದಾಳ – ಪು.ಸಂಖ್ಯೆ –೩,೪

೪೪) ಶ್ರೀ.ಚ.ಬ.ಮಹಾತ್ಮೆ – ಮುನ್ನುಡಿ (ಪು.ಸಂಖ್ಯೆ ) ಡಾ.ಸಂಗಮೇಶ ಸವದತ್ತಿಮಠ

೪೫) ಜನಪದ ಜಂಗಮ : ಆಲ್ದಾಳ – ಪು.ಸಂಖ್ಯೆ – ೩೧

೪೬) ರಂಗಸಂತ ಜಂಗಮ : ನಾಟಕಕಾರ ಬಸವರಾಜ ಪಂಚಗಲ್ಲುರ ಲೇಖನ – ರಂಗಭೂಮಿ ಧ್ವನಿ

೪೭) ಅದೇ – ಪು.ಸಂಖ್ಯೆ – ೧೦

೪೮) ಅದೇ – ಡಾ.ಸಂ.ಸ.ಮಠ ಮುನ್ನುಡಿಯಿಂದ – ಪು.ಸಂಖ್ಯೆ – ೮

೪೯) ಅದೇ – ಪ್ರಕಾಶಕರ ನುಡಿಯಿಂದ ಷ.ಬ್ರ.ಚ.ವೀರ ಶಿವಾಚಾರ್ಯರು ಪು.ಸಂಖ್ಯೆ – ೭

೫೦) ಅದೇ – ಡಾ. ಸಂಗಮೇಶ ಸವದತ್ತಿ ಮಠರ ಮುನ್ನುಡಿಯಿಂದ – ಪು.ಸಖ್ಯೆ – ೮

೫೧) ಅದೇ – ಮುನ್ನುಡಿಯಿಂದ ಡಾ.ಸಂ.ಸ.ಮಠ – ಪು.ಸಂಖ್ಯೆ – ೯

೫೨) ಬಾಹತ್ತರ (ಕವನ ಸಂಕಲನ) ಮುನ್ನುಡಿಯಿಂದ – ಡಾ.ಪ್ರೋ.ಮಾಸಿರ್ಸೆ – ಪು.ಸಂಖ್ಯೆ – ೯

೫೩) ವಿಶ್ವಚೇತನ ಸಂಸ್ಮರಣ ಸಂಚಿಕೆ : ವಿಶ್ವಜ್ಯೋತಿ ವಿಶ್ವಾರಾಧ್ಯರು ಶ್ರೀ ಕೊಟ್ಟೂರೇಶ್ವರ ರಾಮಗಿರಿ ಹಿರೇಮಠ – ಯಾದಗಿರಿ. ೧೯೯೫ – ಪು.ಸಂಖ್ಯೆ – ೪೦

೫೪) ಶ್ರೀ ವಿಶ್ವಾರಾಧ್ಯರ ಮಹಾತ್ಮೆ : ಲಕ್ಷಣರಾವಗೋಗಿ ಅವರ ಮೆಚ್ಚುಗೆಯ ಮಾತು – ಪು.ಸಂಖ್ಯೆ – ೯

೫೫) ಅದೇ – ಪು.ಸಂಖ್ಯೆ – ೫೦

೫೬) ಶ್ರೀ ಸದ್ಗುರು ವಿಶ್ವಾರಾಧ್ಯರ ಮಹಾತ್ಮೆ : ಆಲ್ದಾಳ – ಪು.ಸಂಖ್ಯೆ – ೫೩

೫೭) ಆಧುನಿಕ ಕನ್ನಡ ನಾಟಕ – ಡಾ.ಕೆ.ಮರುಳ ಸಿದ್ದಪ್ಪ – ಪು.ಸಂಖ್ಯೆ – ೭೬

೫೮) ಶ್ರೀ ವಿಶ್ವಾರಾಧ್ಯರ ಮಹಾತ್ಮೆ : ಆಲ್ದಾಳ – ಪು.ಸಂಖ್ಯೆ – ೧೨೭

೫೯) ಅದೇ – ಪು.ಸಂಖ್ಯೆ – ೧೨೮

೬೦)

೬೧) ಸತತ್ಮ ತೀರ್ಥ ಶ್ರೀ ಪಾದರು, ಉತ್ತರಾದಿ ಮಠ ದಾವಣಗೇರಿಯ ಧಾರ್ಮಿಕ ಕಾರ್ಯಕ್ರದಲ್ಲಿ ಮಾತನಾಡಿದ್ದು (ವಿಜಯವಾಣಿ ದಿನಪತ್ರಿಕೆ – ದಿ.೧೭.೧೧.೨೦೧೪ – ಪು.ಸಂಖ್ಯೆ – ೫

೬೨) ಶ್ರೀ ಮೌನೇಶ್ವರ ಮಹಾತ್ಮೆ : ಮುನ್ನುಡಿಯಿಂದ ಪಾ.ವಿ.ಅರಕೇರಿ ನಿವೃತ್ತ ಮುಖ್ಯಗುರುಗಳು ಶಹಾಪೂರ – ಪು.ಸಂಖ್ಯೆ – ೯

೬೩) ಗಿರಿಸಂಪದ (ಸ್ಮರಣಗ್ರಂಥ) ಸಂಪಾದಕರು – ಡಾ.ಈಶ್ವರಯ್ಯ ಮಠ – ಡಾ.ಸುಭಾಶ್ಚಂದ್ರ ಕೌಲಗಿ ಲೇಖನ ನಾಗಲಿಂಗಪ್ಪ ಶಹಾಪುರಕರ್ – ಪು.ಸಂಖ್ಯೆ – ೨೧೨

೬೪) ಶ್ರೀ ಮೌನೇಶ್ವರ ಮಹಾತ್ಮೆ : ಪಾ.ವಿ.ಅರಿಕೇರಿ ಮುನ್ನುಡಿಯಿಂದ – ಪು.ಸಂಖ್ಯೆ – ೭
೬೫) ಅದೇ : ಅಭಿನಪ್ರಾಯಿಂದ ಬರೆದವರು ನರಸಿಂಗರಾವ ಹೇಮನೂರು ಕಲಬುರ್ಗಿ – ಪು.ಸಂಖ್ಯೆ – ೫
೬೬) ಗಿರಿಸಂಪದ : ಸ್ಮರಣ ಗ್ರಂಥ : ತಿಂಥಣಿ ಮೌನೇಶ್ವರ ಲೇಖನ :
ನಾಗಲಿಂಗಪ್ಪ ಶಹಾಪೂರಕರ್ – ಪು.ಸಂಖ್ಯೆ – ೨೧೭
೬೭) ಅದೇ – ಪು.ಸಂಖ್ಯೆ – ೫೭
೬೮) ಅದೇ : ಅಚಿತಿಮ ರವರ ಪುಟದಿಂದ ಮಹಿಪಾಲರೆಡ್ಡಿ ಮುನ್ನೂರ ರವರ ಬರವಣಿಗೆ
೬೯) ಅದೇ : ಶ್ರೀ.ಪಾ.ವೆ. ಅರಕೇರಿ ಶಹಾಪೂರ ಅವರ ಮುನ್ನುಡಿಯಿಂದ – ಪು.ಸಂಖ್ಯೆ – ೯
೭೦) ಸುರಪುರ ತಾಲೂಕಿನ ಶಿವಶರಣರು ಶ್ರೀ ಮಲ್ಲಪ್ಪ ಬಶೆಟ್ಟಿ ಕೃಪೆ ನೆನಹು ತುಂಬಿ
(ಸ್ಮರಣ ಗ್ರಂಥ) ಪು.ಸಂಖ್ಯೆ– ೧೧೬,೧೧೭
೭೧) ಶ್ರೀ ಗುರು ನಂಜೇಶ್ವರ ಮಹಾತ್ಮೆ : ಎಲ್.ಬಿ.ಕೆ.ಆಲ್ದಾಳ – ಪು.ಸಂಖ್ಯೆ – ೫೦
೭೨) ಅದೇ : ಆಶೀರ್ವಚನ, ಮ.ನಿ.ಪ್ರ. ಚಿಕ್ಕಗುರು ನಂಜೇಶ್ವರ – ಪು.ಸಂಖ್ಯೆ – ೩
೭೩) ಶ್ರೀ ಗುರು ನಂಜೇಶ್ವರ ಮಹಾತ್ಮೆ : ಆಲ್ದಾಳ – ಪು.ಸಂಖ್ಯೆ – ೧
೭೪) ಅದೇ – ಪು.ಸಂಖ್ಯೆ – ೫
೭೫) ಅದೇ – ಪು.ಸಂಖ್ಯೆ – ೯ ಮುನ್ನುಡಿಯಿಂದ
೭೬) ಅದೇ – ಪು.ಸಂಖ್ಯೆ – ೧೮
೭೭) ಅದೇ – ಪು.ಸಂಖ್ಯೆ – ೧೯
೭೮) ಅದೇ – ಪು.ಸಂಖ್ಯೆ – ೧೯
೭೯) ಅದೇ – ಪು.ಸಂಖ್ಯೆ – ೨೨
೮೦) ಅದೇ – ಪು.ಸಂಖ್ಯೆ – ೬೧
೮೧) ಆಧುನಿಕ ಕನ್ನಡ ನಾಟಕ – ಕೆ. ಮರುಳ ಸಿದ್ದಪ್ಪ – ಪು.ಸಂಖ್ಯೆ – ೧೪೩
೮೨) ಶ್ರೀ ಗುರು ನಂಜೇಶ್ವರ ಮಹಾತ್ಮೆ : ಶ್ರೀ ಚನ್ನವೀರ ಶಿವಾಚಾರ್ಯರು ಹಾಗೂ
ಅವರ ಆಶೀರ್ವಚನದಿಂದ – ಪು.ಸಂಖ್ಯೆ–೫
೮೩) ಶಿವಶರಣ ಅಯ್ಯಣ್ಣ ಮುತ್ಯಾ ಮಹಾತ್ಮೆ : ಆಲ್ದಾಳ – ಪು.ಸಂಖ್ಯೆ – ೨
೮೪) ರಂಗಸಂತ ಜಂಗಮ : ಅಭಿನಂದನ ಗ್ರಂಥ – ಶ್ರೀ ಕೆ.ಎಂ.ಮಠ
ಜೇವರ್ಗಿ ಅವರ ಲೇಖನ – ಪು.ಸಂಖ್ಯೆ – ೧೨೪
೮೫) ಶಿವಶರಣ ಅಯ್ಯಣ್ಣ ಮುತ್ಯಾ ಮಹಾತ್ಮೆ : ಆಲ್ದಾಳ – ಪು.ಸಂಖ್ಯೆ – ೩
೮೬) ಅದೇ – ಪು.ಸಂಖ್ಯೆ – ೩
೮೭) ಅದೇ – ಪು.ಸಂಖ್ಯೆ – ೪
೮೮) ಅದೇ – ಪು.ಸಂಖ್ಯೆ – ೫
೮೯) ಅದೇ – ಪು.ಸಂಖ್ಯೆ – ೧೧
೯೦) ಅದೇ – ಪು.ಸಂಖ್ಯೆ – ೧೨
೯೧) ಡಾ. ಹಾ.ಮಾ. ನಾಯಕ (ಸಂ) ಡಿ.ವಿ.ಜಿ.ಕೃತಿ ಶ್ರೇಣಿ ಸಂಪುಟ – ೧
ವಿಚಾರ ವಿಮರ್ಶೆ – ಪು.ಸಂಖ್ಯೆ – ೫೪೫
೯೨) ಶಿವಶರಣ ಅಯ್ಯಣ್ಣ ಮುತ್ಯಾ ಮಹಾತ್ಮೆ : ಆಲ್ದಾಳ – ಪು.ಸಂಖ್ಯೆ – ೧೩

೯೩) ಶಿವಶರಣ ಅಯ್ಯಣ್ಣ ಮುತ್ಯಾ ಮಹಾತ್ಮೆ : ಆಲ್ದಾಳ – ಪು.ಸಂಖ್ಯೆ – ೧
೯೪) ಅದೇ ನಾಟಕದ ಮುನ್ನುಡಿಯಿಂದ – ಪು.ಸಂಖ್ಯೆ – ೬
೯೫) ಶಿವಶರಣ ಅಯ್ಯಣ್ಣ ಮುತ್ಯಾ ಮಹಾತ್ಮೆ : ಆಲ್ದಾಳ – ಪು.ಸಂಖ್ಯೆ – ೮೧
೯೬) ಅದೇ
೯೭) ಶ್ರೀ ಷಣ್ಮುಖ ಶಿವಯೋಗಿ : ಗವೀಶ ಹಿರೇಮಠರ ಮುನ್ನುಡಿಯಿಂದ – ೫
೯೮) ಶ್ರೀ ಷಣ್ಮುಖ ಶಿವಯೋಗಿ : ಆಳ್ದಾಳ – ಪು.ಸಂಖ್ಯೆ – ೧
೯೯) ಅದೇ – ಪು.ಸಂಖ್ಯೆ – ೪
೧೦೦) ಅದೇ – ಪು.ಸಂಖ್ಯೆ – ೫
೧೦೧ ಅದೇ – ಪು.ಸಂಖ್ಯೆ – ೬
೧೦೨) ಅದೇ – ಪು.ಸಂಖ್ಯೆ – ೧೧

೧೦೩) ಅದೇ – ಪು.ಸಂಖ್ಯೆ – ೧೨

೧೦೪) ಅದೇ – ಪು.ಸಂಖ್ಯೆ – ೨೦

೧೦೫) ಅದೇ – ಪು.ಸಂಖ್ಯೆ – ೩೬

೧೦೬) ಅಂತರಂಗದ ನುಡಿ : ಶ್ರೀ ಶಿವಾನಂದ ಹತಗುಂದಿ, ವಿಜಯವಾಣಿ,'ಲಲಿತಾ' – ಪು.ಸಂಖ್ಯೆ – ೧೧ ದಿ.೨೫.೧೧.೨೦೧೪

೧೦೭) ಶ್ರೀ ಷಣ್ಮುಖ ಶಿವಯೋಗಿ : ಆಲ್ದಾಳ – ಪು.ಸಂಖ್ಯೆ – ೪೪

೧೦೮) ಗೀತೆಗೊಂದು ಕೈಪಿಡಿ : ಪ್ರೋ.ಎಸ್.ಕೆ.ರಾಮಚಂದ್ರರಾವ : ೪.೩೪ ಸುಭಾಷಿತ

೧೦೯) ಅದೇ : ೪.೩೮ ಸುಭಾಷಿತ

೧೧೦) ಶ್ರೀ ಷಣ್ಮುಖ ಶಿವಯೋಗಿಗಳ ವಚನ–ನಿರ್ವಚನ ಸಂಪುಟ – ೨ ಡಾ.ಎಂ.ಎಸ್.ಹಿರೇಮಠ ಗು.ವಿ.ಗು

೧೧೧) ಶ್ರೀ ಷಣ್ಮುಖ ಶಿವಯೋಗಿ ಆಲ್ದಾಳ : ಪು.ಸಂಖ್ಯೆ – ೧೫

೧೧೨) ಶಾಂತಾಭರಣ (ಅಭಿನಂದನ ಗ್ರಂಥ) ಡಾ.ಪಿ.ಎಂ.ಮಠ ರ ಲೇಖನದಿಂದ – ಪು.ಸಂಖ್ಯೆ – ೨೪೫

೧೧೩) ಬಾದಾಮಿ ಶಾಸನ (ಏಳನೇ ಶತಮಾನ)ದಲ್ಲಿ ತ್ರಿಪದಿಗಳಿವೆ. ಶಾಂತಾಭರಣ – ಪು.ಸಂಖ್ಯೆ – ೨೮೮

೧೧೪) ಶ್ರೀ ಷಣ್ಮುಖ ಶಿವಯೋಗಿ : ಶ್ರೀ ಗವೀಶ ಹಿರೇಮಠರ ಮುನ್ನುಡಿಯಿಂದ – ಪು.ಸಂಖ್ಯೆ – ೫

೧೧೫) ಶ್ರೀ ಅಯ್ಯಪಯ್ಯ ಮಹಾತ್ಮೆ : ಆಶೀರ್ವಚನ : ಶ್ರೀ ಹಂಪಯ್ಯ ಸ್ವಾಮಿಗಳು ಅಳ್ಳೊಳ್ಳಿ . ಜಿ. ಕಲಬುರಗಿ

೧೧೬) ಶ್ರೀ ಅಯ್ಯಪಯ್ಯ ಮಹಾತ್ಮೆ : ಪಾ.ವೆ.ಅರಕೇರಿ ಅವರ ಮುನ್ನುಡಿಯಿಂದ – ಪು.ಸಂಖ್ಯೆ – ೪

೧೧೭) ಶ್ರೀ ಅಯ್ಯಪಯ್ಯ ಮಹಾತ್ಮೆ : ಆಲ್ದಾಳ – ಪು.ಸಂಖ್ಯೆ – ೧

೧೧೮) ಶ್ರೀ ಅಯ್ಯಪಯ್ಯ ಮಹಾತ್ಮೆ : ಆಲ್ದಾಳ – ಪು.ಸಂಖ್ಯೆ – ೩

೧೧೯) ರಂಗಸಂತ ಜಂಗಮ : ಅಭಿನಂದನ ಗ್ರಂಥದಲ್ಲಿನ ಪಾ.ವಿ.ಅರಕೇರಿ ಶಹಾಪೂರ ಇವರ ಲೇಖನ – ಪು.ಸಂಖ್ಯೆ – ೨

೧೨೦) ರಂಗಸಂತ ಸಂಜಮ : ಅಭಿನಂದನ ಗ್ರಂಥ ಅರಕೇರಿ ಶಹಾಪೂರ ಲೇಖನ – ಪು.ಸಂಖ್ಯೆ – ೨೦೩

೧೨೧) ಶ್ರೀ ಅಯ್ಯಪಯ್ಯ ಮಹಾತ್ಮೆ : ಆಲ್ದಾಳ – ಪು.ಸಂಖ್ಯೆ – ೨೫

೧೨೩) ಅದೇ – ಪು.ಸಂಖ್ಯೆ – ೨೪

೧೨೪) ಅದೇ – ಪು.ಸಂಖ್ಯೆ – ೫೬

೧೨೫) ಅದೇ ಶ್ರೀ ಹಂಪಯ್ಯ ಸ್ವಾಮಿಗಳವರ ಆಶೀರ್ವಚನದಿಂದ – ಪು.ಸಂಖ್ಯೆ – ೧೧

೧೨೬) ಅದೇ – ಪಾ.ವಿ.ಅರಕೇರಿ ಶಹಾಪೂರ ಮುನ್ನುಡಿಯಿಂದ – ಪು.ಸಂಖ್ಯೆ – ೫

೧೨೭) ಅದೇ – ಪು. ಸಂಖ್ಯೆ – ೬೨, ೬೩

೧೨೮) ರಂಗಸಂತ ಜಂಗಮ : ಶ್ರೀ ಅರಕೇರಿ ಶಹಾಪೂರ ಅವರ ಲೇಖನದಿಂದ – ಪು.ಸಂಖ್ಯೆ – ೨೦೫

೧೨೯) ಶ್ರೀ ಅಯ್ಯಪಯ್ಯ ಮಹಾತ್ಮೆ : ಆಲ್ದಾಳ – ಪು.ಸಂಖ್ಯೆ – ೪೨,೪೩,೪೪,೫೬

೧೩೦) ರಂಗ ದುಂದುಭಿ : ಡಾ. ಎಚ್. ಎ. ಪಾರ್ಶ್ವನಾಥ – ಪು.ಸಂಖ್ಯೆ– ೧೩೩

೧೩೧) ರಂಗಸಂತ ಜಂಗಮ ಅಭಿನಂದನ ಗ್ರಂಥದ ಅರಕೇರಿ ಶಹಾಪುರ ಲೇಖನ – ಪು.ಸಂಖ್ಯೆ – ೨೦೬

**ಸಾಮಾಜಿಕ ನಾಟಕಗಳು**

೧೩೨) 'ರಂಗಗೀತಾರತ್ನ' ಆರ್. ಪರಮಶಿವನ್ – ಅಭಿನಂದನ ಗ್ರಂಥ ನಾಟಕ – ಒಚಿದು ಪಕ್ಷಿನೋಟ : ಲೇಖನ ರಂಗಧಾಮಯ್ಯ ಮೈಸೂರು – ಪು.ಸಂಖ್ಯೆ – ೨೧೧ – (೨೦೧೨)

೧೩೩) ಕರ್ನಾಟಕ ರಂಗಭೂಮಿ : ಡಾ.ಎಚ್.ಕೆ.ರಂಗನಾಥ – ಪು.ಸಂಖ್ಯೆ – ೨೦೧

೧೩೪) ಅದೇ – ಪು.ಸಂಖ್ಯೆ – ೧೪

೧೩೫) ರಂಗದುಂದುಭಿ : ಡಾ.ಎಚ್.ಎ.ಪಾರ್ಶ್ವನಾಥ – ಪು.ಸಂಖ್ಯೆ – ೧೦ ನಿತೀನ ಪ್ರಕಾಶ ಮೈಸೂರು ಪ್ರಮುದ್ರಣ – ೨೦೧೩

೧೩೬) ಬಾಳಿಗೊಂದು ಬೆಲೆಬೇಕು : ಎಲ್.ಬಿ.ಕೆ.ಆಲ್ದಾಳ – ಅರಿಕೆ ಪು.ಸಂಖ್ಯೆ – ೫

೧೩೭) ಅದೇ – ಪು.ಸಂಖ್ಯೆ – ೨೪

೧೩೮) ಅದೇ – ಪು.ಸಂಖ್ಯೆ – ೩೫

೧೩೯) ನನ್ನ ದೇವರು – ಎಲ್.ಬಿ.ಕೆ.ಆಲ್ದಾಳ – ಪು.ಸಂಖ್ಯೆ – ೨೬

೧೪೦) ಅದೇ – ಪು.ಸಂಖ್ಯೆ – ೧೮

೧೪೧) ಅದೇ
೧೪೨) ಮಹಿಳೆ ಮತ್ತು ಡಾ.ಅಂಬೇಡ್ಕರ್ : ಡಾ.ಟಿ.ಎಂ.ಭಾಸ್ಕರ್ ಮುನ್ನುಡಿಯಿಂದ (ಪ್ರಸಾರಾಂಗ ಗು.ವಿ.ಗು)
೧೪೩) ಕರ್ನಾಟಕ ರಂಗಭೂಮಿ : ಎಚ್.ಕೆ.ರಂಗನಾಥ – ಪು.ಸಂಖ್ಯೆ – ೨೪೮
೧೪೪) ನನ್ನ ದೇವರು : ಎಲ್.ಬಿ.ಕೆ.ಆಲ್ದಾಳ – ಪು.ಸಂಖ್ಯೆ – ೬೦
೧೪೫) ರಂಗದುಂದುಭಿ : ಡಾ.ಎಚ್.ಎ.ಪಾರ್ಶ್ವನಾಥ – ಪು.ಸಂಖ್ಯೆ – ೧೩೬
೧೪೬) ರಂಗ ಕುಸುಮಗಳು : ಗವೀಶ ಹಿರೇಮಠ – ಪು.ಸಂಖ್ಯೆ – ೧೧೩ ಪ್ರಗತಿ ಪ್ರಕಾಶನ ಕಲಬುರಗಿ – ೧೯೯೪
೧೪೭) ಸಿರಿಯೊಡಲು : ಸಂಪಾದಕರು – ದೇ.ಜ.ಗೌ. – ಪು.ಸಂಖ್ಯೆ – ೩೯೬
೧೪೮) ಹದಿಬದೆಯ ಧರ್ಮ : ಸಂಚಿ ಹೊನ್ನಮ್ಮ (೪–೪೭) ಸಿರಿಯೊಡಲು – ಪು.ಸಂಖ್ಯೆ – ೩೯೭
೧೪೯) ಇಕ್ಷು ಸಂಚಯ : ಟಿ.ಎನ್.ನಾಗರತ್ನ – ಪು.ಸಂಖ್ಯೆ – ೧೧೯
೧೫೦) ಕಲಿಯುಗದ ಕನ್ಯೆ : ಎಲ್.ಬಿ.ಕೆ.ಆಲ್ದಾಳ – ಪು.ಸಂಖ್ಯೆ – ೩೦,೩೧
೧೫೧) ಗರತಿ ವಿಶ್ವದ ಜ್ಯೋತಿ : ಆಲ್ದಾಳ ಅವರ ನನ್ನ ನುಡಿಯಿಂದ – ಪು.ಸಂಖ್ಯೆ – ೬
೧೫೨) ಕನ್ನಡ ನಾಟಕಗಳಲ್ಲಿ ಭಾಷೆ : ಸಂ.ಡಾ.ಸಂಗಮೇಶ ಸವದತ್ತಿಮಠ – ೬೧
೧೫೩) ಕಣ್ಣಿಟ್ಟ ಕೈಕೊಟ್ಟ : ಆಲ್ದಾಳ – ಪು.ಸಂಖ್ಯೆ – ೭
೧೫೪) ಅದೇ – ಪು.ಸಂಖ್ಯೆ – ೭
೧೫೫) ನಮಸ್ಕಾರ : ಆಲ್ದಾಳ – ಪು.ಸಂಖ್ಯೆ – ೬
೧೫೬) ಅದೇ – ಪು.ಸಂಖ್ಯೆ – ೩೧
೧೫೭) ಅದೇ – ಪು.ಸಂಖ್ಯೆ – ೯೧
೧೫೮) ಅದೇ – ಪು.ಸಂಖ್ಯೆ – ೧೦೫
೧೫೯) ರಂಗದುಂದುಭಿ : ಡಾ.ಪಾರ್ಶ್ವನಾಥ ಡಿ.ಎನ್,ಅಕ್ಕಿ ಅವರ ನಾಟಕದಿಂದ – ಪು.ಸಂಖ್ಯೆ – ೯೦
೧೬೦) ನಮಸ್ಕಾರ : ಆಲ್ದಾಳ – ಪು.ಸಂಖ್ಯೆ – ೨
೧೬೧) ಅದೇ – ಪು.ಸಂಖ್ಯೆ – ೨
೧೬೨) ಕರ್ನಾಟಕ ರಂಗಭೂಮಿ : ಡಾ.ಎಚ್.ಕೆ.ರಂಗನಾಥ – ಪು.ಸಂಖ್ಯೆ – ೧೯೯
೧೬೩) ಕನ್ನಡ ನಾಟಕ : ತ.ಸು.ಶಾಮರಾಯ – ಪು.ಸಂಖ್ಯೆ – ೩೮೨
೧೬೪) ಹಂಡೆ ಕುಲತಿಲಕ ರಾಜಾ ಬಲದ ಹನುಮಪ್ಪನಾಯಕ – ಆಲ್ದಾಳ – ಮುನ್ನುಡಿಯಿಂದ – ಪು.ಸಂಖ್ಯೆ – ೨
೧೬೫) ಅದೇ – ಪು.ಸಂಖ್ಯೆ – ೪
೧೬೬) ಅದೇ
೧೬೭) ಅದೇ
೧೬೮) ಅದೇ
೧೬೯) ಅದೇ – ಪು.ಸಂಖ್ಯೆ – ೧೦
೧೭೦) ಅದೇ – ಪು.ಸಂಖ್ಯೆ – ೧೧
೧೭೧) ಅದೇ – ಪು.ಸಂಖ್ಯೆ – ೨೮
೧೭೨) ಅದೇ – ಪು.ಸಂಖ್ಯೆ – ೩೫
೧೭೩) ಅದೇ – ಪು.ಸಂಖ್ಯೆ – ೩೬
೧೭೪) ರಾಜಾ ಬಲದ ಹನುಮಪ್ಪ ನಾಯಕ : ಆಲ್ದಾಳ – ಪು.ಸಂಖ್ಯೆ – ೮೦
೧೭೫) ಅದೇ ಮುನ್ನುಡಿಯಿಂದ – ಪು.ಸಂಖ್ಯೆ – ೫
೧೭೬) ಕರ್ನಾಟಕದ ಗಡಿಗೆರೆಗಳು : ಸಂಪಾದಕರು ಪ್ರೊ॥ ಎಸ್.ಸಿ.ಪಾಟೀಲ ಪು.ಸಂಖ್ಯೆ – ೩
೧೭೭) ಶ್ರೀ.ಟಿ.ಹೆಚ್.ಎಂ. ಸದಾಶಿವಯ್ಯವನರ ಕರ್ನಾಟಕದ ಗಡಿಗೆರೆಗಳಿಂದ ಬೆನ್ನುಡಿಯಲ್ಲಿ (ಅಂತಿಮ ರವರ ಪುಟದಲ್ಲಿ)
೧೭೮) ವೀರಶೈವ ಹಂಡೆವಜೀರ ಜನಾಂಗದ ಪರಿಚಯ : ಡಾ.ಎಸ್.ಸಿ.ಪಾಟೀಲ್ ಮುನ್ನುಡಿಯಿಂದ ಪು.ಸಂಖ್ಯೆ – ೮
೧೭೯) ಹಂಡೆ ಪಾಳೆಗಾರರ ಕುರಿತ ಕೈಫಿಯತ್ತುಗಳು : ಸಂಪಾದಕರು : ಮುನ್ನುಡಿಯಿಂದ
೧೮೦) ಅದೇ : (ಪ್ರಕಾಶಕರ ನುಡಿಯಿಂದ)
೧೮೧) ಬುಕ್ಕರಾಯ ಚರಿತ್ರೆ – ಡಾ.ಎಸ್.ಸಿ.ಪಾಟೀಲ ಈ ಗ್ರಂಥದ ಬೆನ್ನುಡಿಯಿಂದ
೧೮೨) ಕಲ್ಯಂಬದ ಕಿರಣ : ಜೇವರ್ಗಿ ಶ್ರೀ ಷಣ್ಮುಕ ಶಿವಯೋಗಿ ಸಂಸ್ಥಾನ ಮಠದ
ಶ್ರೀ ಶಾಮತಲಿಂಗಪ್ಪ ಸ್ವಾಮಿಗಳವರ ಆಶೀರ್ವಚನದಿಂದ.
೧೮೩) ವಿಶ್ವಚೇತನ (ಸಂಸ್ಮರಣ ಸಂಪುಟ) : ಶ್ರೀಮತಿ ದೇವೀರಮ್ಮ ಯಾದಗಿರಿ –ಇವರ ಲೇಖನದಿಂದ ಪು.ಸಂಖ್ಯೆ ೫೦
೧೮೪) ಜೋಗೂರ ಜ್ಯೋತಿ : ಪ್ರಾರ್ಥನೆ – ಎಲ್.ಬಿ.ಕೆ.ಆಲ್ದಾಳ

೧೮೫) ಅದೇ

೧೮೬) ಪರಿಚಯ ಪ್ರಭಾ ಮುನ್ನುಯಿಂದ : ಪೂಜ್ಯ ಶ್ರೀರಾಜ ಗುರು ಗುರುಸ್ವಾಮಿ, ಕಲಕೇರಿ ಗದಗ – ಪು.ಸಂಖ್ಯೆ – ೫

೧೮೭) ಪ್ರೊ. ಚಂದ್ರಶೇಖರ ಪಾಟೀಲ (ಚಂಪಾ) ಅವರು ಮಳಖೇಡದ (ಸೇಡಂ) ಭಾವೈಕ್ಯತೆಯ ಹರಿಕಾರ, ಸ್ಮರಣ ಸಂಚಿಕೆಗೆ ಬರೆದ ಸಂದೇಶದಿಂದ ಪಡೆದದ್ದು.

೧೮೮) ಮಲ್ಲಿಕಾರ್ಜುನ ಶಿವಪ್ಪ ಲಠ್ಠಯವರು 'ಬಡದಾಳ ಭಗವಂತ' ಕೃತಿಗೆ ಬರೆದ ಅಭಿಪ್ರಾಯದಿಂದ – ಪು.ಸಂಖ್ಯೆ – ೮

೧೮೯) ವಿದ್ಯಮಾನ : ಡಾ.ಶಿವಮೂರ್ತಿ ಮುರುಘಾ ಶರಣರು – ಶ್ರೀ ಮುರುಘಾ ಮಠ ಚಿತ್ರದುರ್ಗ, ಇವರ ಲೇಖನದಿಂದ ವಿಜಯವಾಣಿ ದಿನಪತ್ರಿಕೆ ದಿ. ೧೬.೯.೨೦೧೪ – ಪು.ಸಂಖ್ಯೆ – ೮

೧೯೦) ತವನಿಧಿಯಲ್ಲ ಶುಭ ಸಂದೇಶ : ಶ್ರೀ ಚನ್ನಮಲ್ಲೇಶ್ವರ ಸ್ವಾಮೀಜಿ ಕುಕನೂರ, ತಾ; ಜೇವರ್ಗಿ

೧೯೧) ಅದೇ ಶ್ರೀ ರಂಭಾಪುರಿ ಗುರುವರ್ಯರ ಸಂದೇಶದಿಂದ

೧೯೨) ಪ್ರಜಾವಾಣಿ ದಿನಪತ್ರಿಕೆ ದಿ. ೨೩.೦೩.೨೦೧೫ – ಪು.ಸಂಖ್ಯೆ – ೩

೧೯೩) 'ಇಬ್ಬನಿ' ಗಾದೆಗಳ ಸಂಕಲನ : ಪ್ರೊ.ಎಚ್.ಜೆ.ಲಕ್ಕಪ್ಪಗೌಡರ

೧೯೪) ಶ್ರೀ ಮಡಿವಾಳೇಶ್ವರ ಪುರಾಣ : ಆಲ್ದಾಳ (ಮಲ್ಲಿಕಾರ್ಜುನ ಕಡಕೋಳರ ಹಿನ್ನುಡಿಯಿಂದ)

೧೯೫) ಅದೇ (ಡಾ.ಮೀನಾಕ್ಷಿ ಬಾಲಿ ಅವರ ಮುನ್ನುಡಿಯಿಂದ)

೧೯೬) ಶ್ರೀ ಮಡಿವಾಳೇಶ್ವರ ಪುರಾಣ : ಆಲ್ದಾಳರ ನನ್ನೊಳಗಿನ ಮಾತು ಲೇಖನದಿಂದ – ಪು.ಸಂಖ್ಯೆ – ೯

೧೯೭) ಕಡಕೋಳ ಮಡಿವಾಳೇಶ್ವರ ಪುರಾಣ : ಆಲ್ದಾಳ – ಪು.ಸಂಖ್ಯೆ – ೫

೧೯೮) ಕಡಕೋಳ ಮಡಿವಾಳೇಶ್ವರ ಪುರಾಣ : ಆಲ್ದಾಳ – ಪು.ಸಂಖ್ಯೆ – ೧೧

೧೯೯) ಅದೇ – ಪು.ಸಂಖ್ಯೆ – ೧೨

೨೦೦) ಅದೇ – ಪು.ಸಂಖ್ಯೆ – ೧೩

೨೦೧) ಅದೇ – ಪು.ಸಂಖ್ಯೆ – ೩೮

೨೦೨) ಅದೇ – ಪು.ಸಂಖ್ಯೆ – ೮೩

೨೦೩) ಅದೇ ಡಾ.ಮೀನಾಕ್ಷಿ ಬಾಳಿ ಕಲಬುರಗಿ ಇವರ ಮುನ್ನುಡಿಯಿಂದ – ಪು.ಸಂಖ್ಯೆ – ೮

೨೦೪) ಕುಮಾರ ಕಕ್ಕಯ್ಯನ ವಚನಗಳು : ಸಂಕಲನ (೧೯೯೩) ವಿಜಾಪುರ

೨೦೫) ವಿಜಯವಾಣಿ ಕನ್ನಡ ದಿನಪತ್ರಿಕೆ ದಿ.೦೬.೦೮.೨೦೧೪ – ಪು.ಸಂಖ್ಯೆ – ೭

೨೦೬) ವಚನವಾಹಿನಿ : ಡಾ.ಸಂಗಮೇಶ ಸವದತ್ತಿ ಮಠ ಬರೆದ ಮುನ್ನುಡಿಯಿಂದ – ಪು.ಸಂಖ್ಯೆ – ೬

೨೦೭) ರಂಗಸಂತ ಜಂಗಮ : ವಚನ ವಾಹಿನಿಯ ಅಂತರಂಗ ಲೇಖನದಿಂದ ಲೇಖಕರು ಬಿ.ಮಹಾದೇವಪ್ಪ – ಪು.ಸಂಖ್ಯೆ– ೫೮

೨೦೮) ರಂಗಸಂತ ಜಂಗಮ : ವಚನ ವಾಹಿನಿಯಲ್ಲಿಯ ಕೆಲವು ನೋಟಗಳು ಲೇಖಕರು – ಡಾ.ಬಿದರಿ. ಚಂದ್ರಕಲಾ ಸೇಡಂ ಅವರ ಲೇಖನ ಪು.ಸಂಖ್ಯೆ – ೧೭೮

೨೦೯) ವಚನ ವಾಹಿನಿ : ಎಲ್.ಬಿ.ಕೆ.ಆಲ್ದಾಳ ಪುಟ – ೧೧ ರಲ್ಲಿನ 'ನಲುಮೆಯ ನುಡಿ'ಯಿಂದ

೨೧೦) ವಿಶ್ವಚೇತನ (ಸಂಸ್ಮರಣ ಸಂಪುಟ) ಶ್ರೀ ವಿಶ್ವಾರಾಧ್ಯ ಸಿದ್ಧ ಸಂಸ್ಥಾನಮಠ ಅಬ್ಬೆ ತುಮಕೂರು – ೧೯೯೫ ಸಂಪಾದಕರು – ಗವೀಶ ಹಿರೇಮಠ (ಶ್ರೀ ೧೦೦೮ ಜಗದ್ಗುರು, ಜಂಗಮವಾಡ ಮಠ ವಾರಣಾಸಿ)

೨೧೧) ಕೈವಲ್ಯ ಜ್ಞಾನಾಮೃತ : ಪೂಜ್ಯ ಶ್ರೀ ಗುರುಸ್ವಾಮಿ ಕಲಕೇರಿ ಇವರ ಮುನ್ನುಡಿ – ಪು.ಸಂಖ್ಯೆ – ೬

೨೧೨) ಕಲ್ಯಾಣದೀಪ್ತಿ : ಪ್ರ.ಸಂಪಾದಕರು. ನಾಡೋಜ ಡಾ.ಎಂ.ಎಂ.ಕಲಬುರಗಿ, ಡಾ.ಸ್ವಾಮಿರಾವ ಕುಲಕರ್ಣಿ ಕಲಬುರಗಿ ಇವರ ರಾಮಪೂರ ಬಕ್ಕಪ್ಪ ಲೇಖನದಿಂದ – ಪು.ಸಂಖ್ಯೆ – ೧೦೪

೨೧೩) ಶ್ರೀ ಸಿದ್ಧ ಬಸವೇಶ್ವರ ಜೀವನ ಚರಿತ್ರೆ : ಆಲ್ದಾಳ – ಪು.ಸಂಖ್ಯೆ – ೩೨

೨೧೪) ಅದೇ – ಪು.ಸಂಖ್ಯೆ – ೩೪

೨೧೫) ಅದೇ – ಪು.ಸಂಖ್ಯೆ – ೩೬,೩೭,೩೮

೨೧೬) ಚಿಕ್ಕ ವೀರೇಶ್ವರ ನಾಮಾವಳಿ ಆಲ್ದಾಳ ಮುನ್ನುಡಿಯಿಂದ

೨೧೭) ಅದೇ – ಪು.ಸಂಖ್ಯೆ – ೬

೨೧೮) ಅದೇ – ಪು.ಸಂಖ್ಯೆ – ೩೯

೨೧೯) ಅದೇ – ಪು.ಸಂಖ್ಯೆ – ೪೧

೨೨೦) ಅದೇ – ಪು.ಸಂಖ್ಯೆ – ೭

೨೨೧) ಶ್ರೀ ಸಿದ್ಧಬಸವೇಶ್ವರ ಜೀವನ ಚರಿತ್ರೆ : ಆಲ್ದಾಳ – ಪು.ಸಂಖ್ಯೆ – ೪೨,೪೩

೨೨೨) ಅದೇ – ಪು.ಸಂಖ್ಯೆ – ೧೨೮

೨೨೩) ಅದೇ – ಪು.ಸಂಖ್ಯೆ – ೧೩೧
೨೨೪) ಶ್ರೀ ಸಿದ್ದಬಸವೇಶ್ವರ ಜೀವನ ಚರಿತ್ರೆ : ಆಲ್ದಾಳ – ಪು.ಸಂಖ್ಯೆ – ೪೫
೨೨೫) ಅದೇ – ಪು.ಸಂಖ್ಯೆ – ೫೧
೨೨೬) ಅದೇ – ಪು.ಸಂಖ್ಯೆ – ೫೪
೨೨೭) ಶರಣ–ಕಿರಣ : ಆಲ್ದಾಳ – ಪು.ಸಂಖ್ಯೆ – ೭
೨೨೮) ಅದೇ – ಪು.ಸಂಖ್ಯೆ – ೩೮
೨೨೯) ಅದೇ – ಪು.ಸಂಖ್ಯೆ – ೩೯
೨೩೦) ಅದೇ – ಪು.ಸಂಖ್ಯೆ – ೨೫
೨೩೧) ಜನಪದರದಲ್ಲಿ ಶ್ರೀ ಶರಣ ಬಸವೇಶ್ವರರು : ಭೀಮರಾಯಗೌಡ, ಬಲವಂತ್ರಾಯಗೌಡ ಹೀರೆಗೌಡರ ಅರಳ ಗುಂಡಗಿ ತಾ: ಜೇವರ್ಗಿ ಚೆನ್ನುಡಿ ಪು.ಸಂಖ್ಯೆ – ೫ – ೨೦೧೪
೨೩೨) ರಂಗಸಂತ ಜಂಗಮ – ಎಲ್.ಬಿ.ಕೆ ಅವರ ಅಭಿನಂದನ ಗ್ರಂಥದ ಲೇಖನ ಬರೆದವರು – ಗೊ.ರು.ಚೆನ್ನಬಸಪ್ಪ – ಪು.ಸಂಖ್ಯೆ – ೨೨
೨೩೩) ಜಾನಪದ ಅಂತರಂಗ : ಡಾ.ಹಿ.ಶಿ.ರಾಮಚಂದ್ರೇಗೌಡ (೧೯೮೭) ಮಾನವಿ ಪ್ರಕಾಶನ – ಮೈಸೂರು
೨೩೪) 'ಜನಪದ ಜೇನು' – ಎಲ್.ಬಿ.ಕೆ.ಆಲ್ದಾಳ ಪ್ರಕಾಶನ : ಶ್ರೀ ವಿಶ್ವಾರಾಧ್ಯ ತಪೋವನ ಮಠ, ಶಕಾಪೂರ ತಾ.ಜೇವರ್ಗಿ ಜಿ.ಕಲಬುಗಿ
೨೩೫) ಕಾಶಿ ಪ್ರವಾಸ ಕಥನ ಮುನ್ನುಡಿಯಿಂದ : ಪ್ರೊ.ಹೇಮಂತ ಕೊಲ್ಲಾಪುರೆ ಗುಲಬರ್ಗಾ
೨೩೬) ಮಂಕುತಿಮ್ಮನ ಕಗ್ಗ : ಡಿ.ವಿ.ಜಿ.
೨೩೭) 'ಧವಳ' ಅಭಿನಂದನ ಗ್ರಂಥ – ಎನ್ನೊಲವಿನ ಅಕ್ಕಿ : ಆಲ್ದಾಳ – ಪು.ಸಂಖ್ಯೆ – ೯೦
೨೩೮) ಅದೇ – ಪು.ಸಂಖ್ಯೆ – ೯೦
೨೩೯) ಚಂದ್ರಗಂಗಾ ಅಭಿನಂದನ ಗ್ರಂಥ : ಗುರು ಬಸವಯ್ಯ ಅಮ್ಮಾಪುರದ ಮಧುರ ಸಂಸ್ಕೃತಿಯಿಂದ – ಪು.ಸಂಖ್ಯೆ – ೨೩
೨೪೦) ಸಿದ್ದಪ್ರಭೆ : ಪುಚಾರ್ಯ ರತ್ನ – ಶ್ರೀ ತೋಟೇಂದ್ರ – ಶಿವಾಚಾರ್ಯರು ಲೇಖನ (ಆಲ್ದಾಳರಿಂದ) – ಪು.ಸಂಖ್ಯೆ – ೩೫
೨೪೧) ಸಿದ್ದಪ್ರಭೆ : ಮಹಾದೇವಿ : ಬಿ.ಗೌಡರರ ನಾಲವಾರ ಸುಕ್ಷೇತ್ರ ಕವನದಿಂದ – ಪು.ಸಂಖ್ಯೆ – ೨
೨೪೨) ಶ್ರೀ ಕೋಡ್ಲಿ ಕಂಟೆಪ್ಪ ಮಾಸ್ತರ : ಷ.ಬ್ರ.ಚನ್ನವೀರ ಶಿವಾಚಾರ್ಯರು ಸುಕ್ಷೇತ್ರ ಹಾರಕೂಡ ಇವರ ಆಶೀರ್ವಚನದಿಂದ
೨೪೩) ಕೋಡ್ಲಿ ಕಂಟೆಪ್ಪ ಮಾಸ್ತರ : ಆಲ್ದಾಳರ ಲೇಖನದಿಂದ – ಪು.ಸಂಖ್ಯೆ – ೨೮
೨೪೪) ಅದೇ – ಪು.ಸಂಖ್ಯೆ – ೨೯
೨೪೫) ಅದೇ – ಪು.ಸಂಖ್ಯೆ – ೨೯
೨೪೬) ಪ್ರೊ.ಜಿ.ಎಸ್.ಶಿವರುದ್ರಪ್ಪ ಅವರ ವಸಂತಗೀತೆ ಲೇಖನದಿಂದ 'ಹೊನ್ನಾರು' – ಪ್ರೊ.ಎಚ್.ಜೆ.ಲಕ್ಕಪ್ಪಗೌಡರ ಅಭಿನಂದನ ಗ್ರಂಥದಲ್ಲಿ ಪ್ರಕಟ ಪು.ಸಂಖ್ಯೆ – ೧೨೫
೨೪೭) ವಿಶ್ವ ಕಲ್ಯಾಣ ಪತ್ರಿಕೆ : ಬಿ.ಮಹಾದೇವಪ್ಪ (ದಿ.೧೪.೦೫.೧೯೯೪)

# ಅಧ್ಯಾಯ ೫

## ರಂಗಭೂಮಿಗೆ ಆಲ್ದಾಳರ ಕೊಡುಗೆ

ಇರಬೇಕು ಅನ್ನುತ್ತದೆ ರಂಗಭೂಮಿ. ಏಕೆಂದರೆ ಎಲ್‌ಬಿಕೆ ರಂತಹ ಎಲ್ಲವನ್ನು ಅರ್ಪಿಸಿಕೊಳ್ಳುವ ಮನೋಧರ್ಮಉಳ್ಳವರಿಂದ ಉಳಿಯ ಬಲ್ಲುದು ಪ್ರೀತಿಯಿಂದ, ಪುಟ್ಟ ಗ್ರಹಿಕೆಯಿಂದ, ವಿಶಿಷ್ಟ ರೀತಿಯ ಈ ಹಿರಿಯ ಜೀವ ಪ್ರತಿಭೆಯ ಸಂಗಮ, ಅನೇಕರಿಗೆ ಆದರ್ಶ, ನವ್ಯ ಸಂವೇದನೆಯ ಅಂಗವಾಗಿ, ನಮ್ಮ ಕನಸುಗಳಿಗೆ, ಬದುಕಿನ ರೀತಿ ನಿಯಮಗಳಿಗೆ ಒಂದು ಗೆರೆ ಹಾಕಿಕೊಟ್ಟ ಎಲ್.ಬಿ.ಕೆ.ರಂತವರು ರಂಗಭೂಮಿಗೆ ಸಂದ ಒಂದು ಕೊಡುಗೆ.

ಪ್ರೋ. ದೆ.ಜ.ಗೌ ಅವರು ಹೇಳುವಂತೆ, "ಮಾನವ ಏಕಾಂಗಿಯಾಗಿದ್ದಾಗ ಭಾವಗೀತೆ, ಮತ್ತೊಬ್ಬನೊಡನಿದ್ದಾಗ ಕಥೆ, ಮೂವರಿದ್ದಾಗ ನಾಟಕ ಉತ್ಪತ್ತಿಯಾಗುತ್ತದೆ. ಮಾನವ ಮಾತು ಕಲಿತೊಡನೆಯೇ ನಾಟಕ ತಲೆ ಎತ್ತಿರಬೇಕು? ಭಾಷೆ ಅಕ್ಷರ ರೂಪವನ್ನು ಪಡೆದಾಗ ನಾಟಕ ಅಥವಾ ರಂಗಕಲೆ ವ್ಯಾಪಕವಾಗಿ, ವೈವಿಧ್ಯಮಯವಾಗಿ ಸರ್ವಜನ ಪ್ರಿಯವಾಗಿ, ಸಮೃದ್ಧಿಯಾಗಿ ಬೆಳೆದಿರಬೇಕು. ನಿರಕ್ಷರಿಗಳಾದ ಪಾಮರರಿಗೆ ಸಹರ್ಷ–ಸಹರ್ಷ ವರ್ಷಗಳಿಂದ ಅದು ಕಾಮಧೇನು, ಕಲ್ಪವೃಕ್ಷ, ಜೇನು ನಿಧಿಯಾಗಿ ವಿಕಾಸಗೊಂಡಿದೆ" ಎಲ್.ಬಿ.ಕೆ. ಅವರು ಅನೇಕ ಕಷ್ಟಗಳನ್ನು ಎದುರಿಸಿ ಫಿನಿಕ್ಸ್ ಹಕ್ಕಿಯಂತೆ ಬೆಳೆದು ಸಾಹಿತ್ಯ ಸಾಧನೆ ಮಾಡಿದವರು. ಅದರಲ್ಲೂ ರಂಗಭೂಮಿಗಾಗಿ, ನಾಟಕ ರಚನೆಯಲ್ಲಿ ಅನೇಕ ಹೊಸತನವನ್ನು ತಂದರು, ತುಂಬಿದರು, ಸಂಪತಭರಿತವಾಗಿಸಿದರು.

ಪ್ರಖ್ಯಾತ ಸಾಹಿತಿ ದತ್ತಾತ್ರಯ ರಾಮಚಂದ್ರ ಬೇಂದ್ರೆ ಹೇಳುವಂತೆ, "ನಿನ್ನೊಳಗೆ ನೀ ಹೊಕ್ಕು ನಿನ್ನನ್ನೆ ನೀ ಕಂಡು ನೀನೆ ನೀನಾಗು ಗೆಳೆಯ". ವಿಚಾರಯುಕ್ತಿ ಅನುಭವಗಳಿಂದ ನಮ್ಮ ನೈಜ ಸ್ವರೂಪವನ್ನು ತಿಳಿಯಲು ಯತ್ನಿಸಿದಾಗ ನಾವು ನಮ್ಮೊಳಗೆ ಮುಳುಗುತ್ತೇವೆ. ಆಳದಲ್ಲಿ ಅಡಗಿರುವ ಗಂಭೀರ ಜ್ಯೋತಿಯನ್ನು ದರ್ಶಿಸಿ, ಇದು ಕಲ್ಪನೆಯಲ್ಲ. ಪರಮಶ್ರೇಷ್ಠ ಸತ್ಯ ಎಂಬುದನ್ನು ಮನಗಾಣುತ್ತೇವೆ. ಈ ಅರಿವಿನಿಂದ ಆತ್ಮ ವಿಶ್ವಾಸ ವೃದ್ಧಿಸುತ್ತದೆ ಎಂಬುದನ್ನು ಎಲ್‌ಬಿಕೆ ಆಲ್ದಾಳ ಅವರು ತಮ್ಮ ನಾಟಕ ರಚನೆಯಿಂದ ಸಾಬೀತು ಪಡಿಸಿದರು.

ತಮ್ಮ ಇಪ್ಪತ್ತೈದನೆಯ ವಯಸ್ಸಿನಲ್ಲಿ ನಾಟಕ ರಚನೆಗೆ ಅಣಿಯಾದ ಎಲ್‌ಬಿಕೆ ಆಲ್ದಾಳರು ಬರೆದ ಮೊದಲ ನಾಟಕ 'ಪತಿಭಕ್ತಿ'. ೧೯೬೪ರಲ್ಲಿ ಪ್ರಕಟನೆಯಾದ ನಾಟಕವಿದು. ಎಲ್‌ಬಿಕೆ ಅವರ ಸ್ವಂತ ಗ್ರಾಮವಾದ ಆಲ್ದಾಳದಲ್ಲಿ ಪ್ರಥಮ ಬಾರಿಗೆ ೫೦ ಪ್ರಯೋಗ ಕಂಡಾಗ ಎಲ್‌ಬಿಕೆ ಅವರು ತಮ್ಮನ್ನೇ ತಾವು ನಂಬದಾದರು. ನಾಟಕ ಸಭಿಕರಿಗೆ ಇಷ್ಟೊಂದು ಪ್ರೀತಿ ತಂದುದು, ಅದು ಮೊದಲ ನಾಟಕದಿಂದಲೇ ಎಂದಾಗ ಯಾರಿಗೆ ತಾನೆ ಸಂತೋಷ, ಆಶ್ಚರ್ಯವಾಗದಿರದು. ಕೌಟುಂಬಿಕ ಸಮಸ್ಯೆಯಿಂದ ಕೇಂದ್ರಿತವಾದ ನಾದಿನಿ ಶಾಂತಾ ಹಾಗೂ ಅತ್ತೆ ಕಮಲಮ್ಮ ಜೊತೆಗೂಡಿ ಸೊಸೆ ಜಮುನಾಳ ಮೇಲೆ ಗುರುವಿನೊಂದಿಗೆ ಅಕ್ರಮ ಸಂಬಂಧದ ಆರೋಪ ಹೊರೆಸುತ್ತಾರೆ ಇದಾವುದಕ್ಕೆ ಹೆದರದೆ ಸೊಸೆ ತಾನು ಪರಿಶುದ್ಧಳು ಎನ್ನುವುದು, ಸತ್ಯ ಹೊರ

ಬೀಳುತ್ತದೆ. 'ಪತ್ತಿಭಕ್ತಿ' ನಾಟಕ ಇದುವರೆಗೆ ೧೫ ಬಾರಿ ಮುದ್ರಣ ಕಂಡಿದೆ. ಕರ್ನಾಟಕದ ತುಂಬ ಜಯಭೇರಿ ಬಾರಿಸಿದೆ. ಗ್ರಾಮಾಂತರ ಜನರ ಹೃದಯವನ್ನೇಗೆದ್ದಿದೆ. ಪ್ರಪ್ರಥಮ ನಾಟಕ 'ಪತಿಭಕ್ತಿ' ಎಷ್ಟು ಪ್ರಯೋಗಗಳನ್ನು ಕಂಡಿದೆ ಎಂದು ಹೇಳುವುದು ಸ್ವಲ್ಪ ಕಷ್ಟ. ಏಕೆಂದರೆ ಉತ್ತರ ಕರ್ನಾಟಕದ ಪ್ರತಿಯೊಂದು ಹಳ್ಳಿಯಲ್ಲೂ ಕನಿಷ್ಟ ಹತ್ತಾರು ಪ್ರಯೋಗಗಳನ್ನು ಕಂಡಿದೆ. ಯಾವುದೇ ಉನ್ನತ ಪದವಿ ಪಡೆಯದೆ ಮತ್ತು ಸಾಹಿತ್ಯದ ವಿದ್ಯಾರ್ಥಿಯಾಗಿ ಯಾವುದೇ ತರಬೇತಿ ಪಡೆಯದೆ ಸತತ ಅಧ್ಯಯನದಿಂದ ಹಾಗೂ ಜೀವನಾನುಭವದ ಮೇಲಿಂದಲೇ ಸಾಹಿತ್ಯ ರಚಿಸಿದರು. 'ಶ್ರಮದಿಂದಲೇ ಜಯ' ಎನ್ನುವ ಮಾತಿನಲ್ಲಿ ನಂಬಿಕೆ ಇಟ್ಟವರು ಆಲ್ದಾಳರು ! ಅಂತೆಯೇ ಚೊಚ್ಚಲ ಕೃತಿ 'ಪತಿಭಕ್ತಿ' ಮಹಾರಾಷ್ಟ್ರದ ಮುಂಬಯಿಯಲ್ಲೂ ತನ್ನ ಕೀರ್ತಿ ಪತಾಕೆ ಹಾರಿಸಿದೆ. ಕನ್ನಡ ಚಿತ್ರರಂಗ ದಿಗ್ಗಜರಾದ ನಟ ಉದಯಕುಮಾರ, ನಟಿ ಪ್ರಮಿಳಾ ಜೋಷಾಯ, ರಂಗನಟಿ ಸುಭದ್ರಮ್ಮ, ಮನಸೂರ, ಕೆ.ನಾಗರತ್ನ ಮುಂತಾದವರು ಈ ನಾಟಕದಲ್ಲಿ ಅಭಿನಯಿಸಿ ನಾಟಕದ–ನಾಟಕಕಾರನ ಕೀರ್ತಿ ಕಳಸಕ್ಕೇರಿಸಿರುವರು. ಇತರ ನಾಟಕಕಾರರು ಜನಪ್ರಿಯತೆಗೋಸ್ಕರ ಬರೆಯಬಾರದ ಸಂಭಾಷಣೆಯನ್ನು ಬರೆದರು. ಆದರೆ ಎಲ್‌ಬಿಕೆ ಅವರು ಮಾತ್ರ ಮನೆ ಮಂದಿಯೆಲ್ಲ ಒಟ್ಟಾಗಿ ಕುಳಿತು ನೋಡಬಹುದಾದ ಉತ್ತಮ ನಾಟಕ ರಚಿಸಿದ್ದು ಇವರ ಜನಪ್ರಿಯತೆಗೆ ಸಾಕ್ಷಿಯಾಯಿತು.

**ಹುಟ್ಟು ಕಲಾವಿದ :** ಕಲ್ಯಾಣ ಕರ್ನಾಟಕದ ಗ್ರಾಮೀಣ ರಂಗ ಚಟುವಟಿಕೆಗಳ ಆಶಾಕಿರಣರಾಗಿ ಮೂಡಿದ ಎಲ್.ಬಿ.ಕೆ ಅವರು ಓದಿದ್ದು ಕಡಿಮೆ ಇದ್ದರೂ, ಬದುಕಿನಲ್ಲಿ ಕಲಿತೇ ಅಪಾರ ವಿದ್ಯೆಯನ್ನುಗಳಿಸಿದರು. ನೃಪತುಂಗನ ಕಾಲದಿಂದ ಇಂದಿಗೂ ಕಲ್ಯಾಣ ಕರ್ನಾಟಕವು ಇಂತಹ ಅಗಣಿತ ಹುಟ್ಟುಕಲಾವಿದರನ್ನು ಹೊಂದಿದೆ ಎಂಬುದಕ್ಕೆ ಸಾಕ್ಷಿಯಾಗಿದ್ದಾರೆ ಎಲ್‌ಬಿಕೆ.

ಎಲ್‌ಬಿಕೆ ಅವರ ಸೃಜನ ಶೀಲತೆಗೆ ನಾನಾ ಮುಖ, ಬಹುಮುಖಿ ವ್ಯಕ್ತಿತ್ವ ಅವರದಾರೂ ಮೂಲಬದ್ಧತೆ, ಮಾತ್ರ ನಾಟಕ, ನಾಟಕ ರಚನೆ ಹಾಗೂ ಅವರ ವೃತ್ತಿ ಎಂದು, ಅವರ ನಾಟಕಗಳ ಯಶೋಗಾಥೆಯೂ ಅದನ್ನೇ ಹೇಳುತ್ತದೆ. ನಾಟಕಕ್ಕೆ ಸಮರ್ಪಿಸಿಕೊಂಡ ಪುರಾಣ ಪುರಷ ಅವರಾಗಿದ್ದಾರೆ.

ಕವನಗಳನ್ನು ಕಟ್ಟುವುದು ಸುಲಭವಾದೀತು. ಆದರೆ ರಂಗಭೂಮಿ ಕಟ್ಟುವುದು ಮಾತ್ರ ಸುಲಭದ್ದಲ್ಲ. ಸತತ ಅರ್ಧಶತಮಾನದವರೆಗೂ ರಂಗಭೂಮಿಯೂ ತಮ್ಮ ಪ್ರವೃತ್ತಿಯನ್ನೇ ವೃತ್ತಿಯಂತೆ ಮಾಡಿಕೊಂಡು ಸಂಪೂರ್ಣವಾಗಿ ಅದಕ್ಕಾಗಿ ಅರ್ಪಿಸಿಕೊಂಡದ್ದು ಮರೆಯಲಾಗದು. ರಂಗನಾಟಕ, ರಚನೆ, ನಿರ್ದೇಶನ, ತತ್ವಪದ, ಸಾಹಿತ್ಯ, ಭಕ್ತಿ ಗೀತೆರಚನೆ, ಪುರಾಣ ರಚನೆ ಹೀಗೆ ಹಲವು ಕ್ಷೇತ್ರಗಳಲ್ಲಿ ಇವರ ಸೇವೆ ವಿಸ್ತಾರ ಹೊಂದಿದೆ. ನಾಟಕ ಕ್ಷೇತ್ರದ ಘನತೆಯನ್ನು ಹೆಚ್ಚಿಸಿದ್ದಾರೆ.

ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿ ರಂಗಭೂಮಿಗೆ ಜೀವಂತಿಕೆಯನ್ನು ತಂದುಕೊಟ್ಟು ಅದನ್ನು ಸಂಪನ್ನಗೊಳಿಸುವಲ್ಲಿ ಆಲ್ದಾಳರು ಪ್ರಮುಖರು, ಸಗರನಾಡು, ರಾಯಚೂರು, ಕೊಪ್ಪಳ, ಕಲಬುರ್ಗಿ, ಬೀದರ ಜಿಲ್ಲೆಗಳ ಹಳ್ಳಿಗಳನ್ನೇ ಅವರು ತಮ್ಮ ಕಾರ್ಯಕ್ಷೇತ್ರವಾಗಿಸಿಕೊಂಡು ನಾಟಕ ರಚನೆ–ನಿರ್ದೇಶನಕ್ಕೆ ಸಂಪೂರ್ಣ ಅರ್ಪಿಸಿಕೊಂಡಿದ್ದಾರೆ.

**ಬದುಕಿನ ಶಾಲೆ ಕಲಿಸಿದ್ದು ಅಪಾರ :** ಎಲ್‌ಬಿಕೆ ಅವರು ಬದುಕಿನ ಶಾಲೆಯಲ್ಲಿ ಕಲಿತದ್ದು ಅಪಾರವಿದ್ಯೆ. ಶಹಾಪೂರ ತಾಲೂಕಿನ ಆಲ್ದಾಳ ಗ್ರಾಮದಲ್ಲಿ 'ಕನಕಾಂಗಿ' ನಾಟಕದಲ್ಲಿ ಶ್ರೀಕೃಷ್ಣನಪಾತ್ರ ಮಾಡಿದ ನಂತರ ಅವರು ಹಿಂದೆ ನೋಡಲಿಲ್ಲ. ಪ್ರಸಿದ್ಧ ಸಾಹಿತಿ, ಸಗರನಾಡಿನ ಅಪ್ರತಿಮ ವಿದ್ವಾಂಸರೂ ಆಗಿದ್ದ ಸಗರಕೃಷ್ಣಾಚಾರ್ಯರು ಬರೆದ ನಾಟಕ 'ಜೀನನ ಸಂಸಾರ'. ಈ ನಾಟಕದಲ್ಲಿ ಎಲ್‌ಬಿಕೆ ಅವರು ವಹಿಸಿದ ಹೆಂಡತಿ ಪಾತ್ರ ನೋಡಿದವರು, ಇವರು ಎಲ್‌ಬಿಕೆ ಅವರೇನ್ರಿ ಎಂದು ಆಶ್ಚರ್ಯಭರಿತರಾಗಿ ಪ್ರಶ್ನಿಸುತ್ತಿದ್ದರಂತೆ. ಗಂಡನ ಪಾತ್ರಧಾರಿಯಾಗಿ ಮತ್ತೋರ್ವ ಸಾಹಿತಿ, ನಾಟಕಕಾರ ಶ್ರೀಮೋಹನಚಂದ್ರ ಕಿರಣಗಿ ಹಾಗೂ ಹೆಂಡತಿಯ ಪಾತ್ರ ಮಾಡಿರುವ ಎಲ್‌ಬಿಕೆ ಅವರು ನಾಟಕದ ಸ್ಟೇಜಿಗೆ ಬಂದ್ರೇನೆ ನೋಡುಗರು ಬಿದ್ದು-ಬಿದ್ದು ನಗಬೇಕು, ಅಂತಹ ಪಾತ್ರಗಳು ಅವು. ಎಲುವಿನ ಹಂದ್ರದಂತಿದ್ದ ಗಂಡ, ಸದೃಢ ಹಾಗೂ ಭಾರೀ ದಪ್ಪನಾಗಿರುವ ಹೆಂಡತಿ ಪಾತ್ರಗಳು ಪ್ರೇಕ್ಷಕರ ಕಣ್ಣಿಗೆ ತಂಪನ್ನುಂಟು ಮಾಡುತ್ತಿದ್ದವು. ದಢೂತಿ ಹೆಂಡತಿಗೆ ಈಗ ಎದುರಾಗಿರುವುದು ಎಂಟನೆಯ ಹೆರಿಗೆ! ಕೂಸಿನ ತಾಯಿಯಾಗಲಿರುವ ಆಕೆಯ ಬೃಹತ ಹೊಟ್ಟೆಯನ್ನೇ ಕಂಡು ಹೆದರಿ ಓಡುವ ಗಂಡನ ದುಸ್ಥಿತಿ ಜೀನನ ಸಂಸಾರ ನೋಡಿದವರು ಯಾರು ಮರೆಯುವಂತಿಲ್ಲ.

ಎಲ್.ಬಿ.ಕೆ.ಆಲ್ದಾಳ ಅವರು ತಮ್ಮ ನಾಟಕಗಳನ್ನು ಯಾವುದೇ ಕಂಪನಿಯವರು ಪಡೆದರೂ ಆ ಕಂಪನಿಯ ನಟ-ನಟಿಯರನ್ನು ಆ ಕಂಪನಿಗೆ ಸ್ವತಃಭೇಟಿ ನೀಡಿ ಅಲ್ಲಿನ ಪರಿಸ್ಥಿತಿಯನ್ನು ಅವಲೋಕಿಸುತ್ತಿದ್ದರು. ಆ ಅವಲೋಕನದಲ್ಲಿ ನಟ-ನಟಿಯರ ಅಭಿನಯ, ಸಂಭಾಷಣೆಯ ರೀತಿ, ರಂಗ ಸಜ್ಜಿಕೆಯನ್ನು ಮುಖ್ಯವಾಗಿ ಗಮನಿಸುತ್ತಿದ್ದರು. ಯಾವುದೇ ಕಂಪನಿಯಾಗಿದ್ದರೂ ಈ ಬಗ್ಗೆ ವಿಚಲಿತರಾಗುತ್ತಿರಲಿಲ್ಲ. ನಾಟಕ ವೈವಿಧ್ಯಮಯವಾದ ವಸ್ತುವನ್ನು ಹೊಂದಿರಬೇಕಲ್ಲದೆ ಪ್ರೇಕ್ಷಕರನ್ನು ರಂಗಭೂಮಿಯತ್ತ ಸೆಳೆಯುವಂತಿರಬೇಕೆಂಬುದೆ ಎಲ್‌ಬಿಕೆ ಅವರ ಉದ್ದೇಶವಾಗಿತ್ತು. ಅಲ್ಲದೆ ಅವರ ನಾಟಕದಲ್ಲಿನ ಪಾತ್ರಗಳು ಪ್ರೇಕ್ಷಕರ ಮೇಲೆ ಬೀರಬಹುದಾದ ಅಂಶಗಳ ಕಡೆಗೆ ಹೆಚ್ಚಿನ ಒಲವು ತೋರುವಂತಿರುತ್ತಿದ್ದವು. ಇದರಿಂದಾಗಿಯೇ ಇವರ ನಾಟಕಗಳನ್ನು ನೋಡಲು ಪ್ರೇಕ್ಷಕರು ಪೈಪೋಟಿ ತೋರುತ್ತಿದ್ದರು. "ನಾಟಕ ಪ್ರಯೋಗದ ಸಮಯದಲ್ಲಿ ಅಲ್ಪಾಹಾರ ಸೇವಿಸಿ ಕರಗಳಲ್ಲಿ ಕಥೆಹಿಡಿದು ಶಿರವಸ್ತ್ರ ಧರಿಸಿ ವೀಕ್ಷಿಸುತ್ತ ಎಲ್‌ಬಿಕೆ ಅವರು ಕುಳಿತರೆಂದರೆ ಆ ಮೆರಗೇ ಬೇರೆ" ಎಂದು ಚಿತಾಪೂರ ತಾಲೂಕಿನ ನಾಟಕಕಾರ ಬಸವರಾಜ ಎಸ್.ಆವಂಟಿ ಮನದುಂಬಿ ಹೇಳುತ್ತಾರೆ.

೧೯೬೭ರಲ್ಲಿ ಮತ್ತೊಂದು ಕೌಟುಂಬಿಕ ನಾಟಕ "ಕಲಿಯುಗದ ಕನ್ಯೆ" ರಚಿಸಿ ತನ್ನೂರು ಮಳ್ಳಿಯಲ್ಲಿ ಪ್ರಪ್ರಥಮ ಪ್ರಯೋಗ ಕಂಡಿತು, ಕರ್ನಾಟಕದಲ್ಲಿ ನೂರಾರು ಪ್ರಯೋಗಕಂಡು, ನಗರೀಕರಣದ ಪ್ರಭಾವ ಯುವಕರನ್ನು ಎಂಥ ಚಟಕ್ಕೆ ದಾಸರನ್ನಾಗಿಸುತ್ತದೆ. ಹಾಗೂ ಇಲ್ಲಿ ಶೋಭಾ ಎಂಬ ಪಾತ್ರದ ಮೂಲಕ ಆದರ್ಶ ಸಂದೇಶ ನೀಡಿದ್ದಾರೆ ಇವಳೇ ಕಲಿಯುಗದ ಕನ್ಯೆ.

ರಾಜಕೀಯದ ದುರಾಡಳಿತದ ವಿಡಂಬನೆಯನ್ನು ಎಲ್‌ಬಿಕೆ ಅವರ 'ನಮಸ್ಕಾರ' ನಾಟಕ (೧೯೬೮)ದಲ್ಲಿ ನೋಡಬಹುದು. ಈ ನಾಟಕವು ಪ್ರಪ್ರಥಮ ಪ್ರಯೋಗ ಮಳ್ಳಿಗ್ರಾಮದಲ್ಲಿಯೇ ಕಂಡಿತು. ವೃತ್ತಿರಂಗಭೂಮಿಯಲ್ಲಿ ನೂರಾರು ಪ್ರಯೋಗ ಕಂಡ ಈ ನಮಸ್ಕಾರ ನಾಟಕ ಸದ್ಯ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಸ್ನಾತಕೋತ್ತರ ತರಗತಿಗೆ ಪಠ್ಯಪುಸ್ತಕವಾಗಿರುವುದು ಲೇಖಕ, ಸಾಹಿತಿ, ನಾಟಕಕಾರ ಎಲ್.ಬಿ.ಕೆ ಆಲ್ದಾಳ ಅವರ ಪ್ರತಿಭೆ, ಪಾಂಡಿತ್ಯಕ್ಕೆ ಕಳಸ ಏರಿಸಿದಂತಾಗಿದೆ. ಮಾನವ ಅಪಾರ ಬುದ್ಧಿಶಕ್ತಿಯ ಅಕ್ಷಯನಿಧಿ, ದೊಡ್ಡವರು ಪ್ರಾರಂಭಿಸುವಾಗಲೇ ದೊಡ್ಡವರಾಗಿರಲಿಲ್ಲ ಅಥವಾ ಮಹಾಮೇಧಾವಿಗಳು ಆಗಿರುವುದಿಲ್ಲ, ಆದರೆ ಕಲಿಯುತ್ತ, ಕಲಿಯುತ್ತಲೇ ಮೇಧಾವಿತನ ಹೆಚ್ಚಿಸಿಕೊಂಡಿರುವುದು ಗುಲಬರ್ಗಾ ವಿಶ್ವವಿದ್ಯಾಲಯ, ಎಲ್‌ಬಿಕೆ ಅವರ ನಾಟಕವನ್ನು, ನಾಟಕದ ಕೃತಿಗಳನ್ನು ಸ್ನಾತಕೋತ್ತರ ತರಗತಿಗಳಿಗೆ ಪಠ್ಯವಾಗಿಸಿಕೊಂಡು ತಮ್ಮ ಗೌರವ ಹೆಚ್ಚಿಸಿಕೊಂಡಿದೆ. ಹೆಚ್ಚು ಓದಲಾಗದೆ ಕಂಗೆಟ್ಟಿದ ಆಲ್ದಾಳರಿಗೆ ನಾಟಕ ರಚನೆಗೆ ತೊಡಗಿಸಿಕೊಂಡಿದ್ದು ಅವರ ಬದುಕಿನ ದಿಕ್ಕನ್ನೇ ಬದಲಿಸಿತು. ಅವರು ಕ್ರಮೇಣ ಅಸಾಮ್ಯಾನ ಯಶಶ್ವಿ ವ್ಯಕ್ತಿಯಾಗಿ ಬೆಳೆದರು. ನಾಟಕದ ವಸ್ತು ಭ್ರಷ್ಟಾಚಾರ ನಿರ್ಮೂಲನೆ ಮಾಡುವುದಾಗಿದೆ, ಅಸತ್ಯ ಹೊಡೆದೋಡಿಸಿ ಸತ್ಯವನ್ನು ವಿಜೃಂಭಿಸುವುದಾಗಿದೆ. ಹೆಂಡತಿ (ಸತ್ಯ)ಯ ಮುಂದೆ ಗಂಡ(ಅಸತ್ಯ) ಸೋಲುತ್ತಾನೆ.

**"ಬಾಳಿಗೊಂದು ಬೆಲೆಬೇಕು" (೧೯೭೦) :** ನಾಟಕದಲ್ಲಿ ಸಾಮಾಜಿಕ ಮೌಲ್ಯಗಳು ಕಾಣಬಹುದು ಕೃಷಿ ಬಗ್ಗೆಯೂ ಮಾಹಿತಿ ಇದೆ. ಕುಡುಕ ಗೌಡನ ಹೆಂಡತಿ ವೈದ್ಯಳಾಗಿ ಗಂಡಸರ ಅಟ್ಟಹಾಸವನ್ನು ಮೆಟ್ಟಿನಿಂತು ಸ್ತ್ರೀಪರ ಧ್ವನಿ ಎತ್ತುತ್ತಾಳೆ. ಬೆಳ್ಳಿ–ಬೆಳ್ಳೆಪ್ಪ ಮೂಲಕ ಹಾಸ್ಯದ ರಸದೌತಣ ಈ ನಾಟಕ ಪ್ರೇಕ್ಷಕರಿಗೆ ಭರಪೂರ ನೀಡುತ್ತದೆ ಈ ನಾಟಕವು "ನಾರದ ವಿಜಯ" ಸಿನೇಮಾವಾಗಿ ೧೯೭೦ರಲ್ಲಿ ತೆರೆಗೆ ಬಂದಾಗ ಆಲ್ದಾಳರ ಹೆಸರನ್ನೇ ನಿರ್ಮಾಪಕರು ಹೇಳಿಕೊಂಡಿಲ್ಲ.

**'ನನ್ನ ದೇವರು' :** ನಾಟಕದಲ್ಲಿ ಪತಿಯನ್ನೇ ಆರಾಧ್ಯ ದೇವರೆಂದು ಆರಾಧಿಸುವ ಸತಿಶಿರೋಮಣಿಯ ಭಾವನೆಯನ್ನು ಹೃದಯತಟ್ಟುವಂತೆ ಬಿಂಬಿಸಿದ್ದಾರೆ. ದಕ್ಷಿಣ ಕರ್ನಾಟಕದಲ್ಲಿ ಈ ನಾಟಕ ಜಯಭೇರಿ ಬಾರಿಸಿದೆ.

**'ಕಣ್ಣಿಟ್ಟ ಕೈ ಕೊಟ್ಟ' :** ವೃತ್ತಿರಂಗ ಭೂಮಿಗಾಗಿ ೧೯೭೭ರಲ್ಲಿ ಈ ನಾಟಕ ಬರೆಯಲಾಯಿತು. ಇದೊಂದು ಸಾಮಾಜಿಕ ನಾಟಕ. ಜಾತಿವ್ಯವಸ್ಥೆ, ಸ್ತ್ರೀಶೋಷಣೆ, ಮಾನಸಿಕತೊಳಲಾಟ, ಬರಗಾಲ, ಶ್ರೀಮಂತರ ದರ್ಪ ಹೀಗೆ ಹಲವು ಸಮಸ್ಯೆಗಳು ಅವುಗಳ ನಿವಾರಣೆಗೆ ಮದ್ದು ರೂಪಿಸಿ ನಾಟಕಕಾರರು ತಮ್ಮ ಸಾಮಾಜಿಕ ಕಳಕಳಿಯನ್ನು ತೋರಿಸಿದ್ದಾರೆ. ಉತ್ತರ ಕರ್ನಾಟಕದಲ್ಲಿ ಈ ನಾಟಕ ಮನೆ–ಮನೆ ಮಾತಾಗಿದೆ.

**'ಕಡಕೋಳ ಮಡಿವಾಳೇಶ್ವರ ಮಹಾತ್ಮೆ' :** ಜೇವರ್ಗಿ ಯಡ್ರಾಮಿಯಲ್ಲಿ ೧೯೮೩ರಲ್ಲಿ ಪ್ರಪ್ರಥಮ ಪ್ರಯೋಗ ಕಂಡಿತು. ಅನೇಕ ನಾಟಕ ಕಂಪನಿಗಳ ಮಾಲೀಕರು ಪೈಪೋಟಿಯಲ್ಲಿ ಈ ನಾಟಕವನ್ನು ರಂಗಭೂಮಿಯಲ್ಲಿ ಪ್ರಯೋಗಿಸಿದ್ದಾರೆ. ಹವ್ಯಾಸಿ ಕಲಾವಿದರೂ ನಾಟಕ ಪ್ರಯೋಗಿಸಿ ಪ್ರೇಕ್ಷಕರಿಂದ ಗೌರವ ಸ್ವೀಕರಿಸಿದ್ದಾರೆ. ಕಥಾವಸ್ತು ಅತ್ಯಂತರೋಚಕವಾಗಿದೆ. 'ಅರಳ ಗುಂಡಗಿ ಶರಣರ ಸಲಹೆ' 'ಊರು, ನೀರು, ಮೇರು' ಇರುವಲ್ಲಿ ನೆಲೆನಿಲ್ಲುವಂತೆ ಮಡಿವಾಳರಿಗೆ ಸೂಚಿಸುತ್ತಾರೆ. ಕಡಕೋಳ

ಗ್ರಾಮದಲ್ಲಿನ ದಿನ್ನೆಯಲ್ಲಿ ತಳವೂರಿ ಧ್ಯಾನ ಮಾಡುತ್ತ ತತ್ವ ಪದ ಬರೆಯುತ್ತಾರೆ. ಅವರ ಬದುಕು, ಸಾಹಿತ್ಯ ನಾಡಿನ ಅಗಾಧ ತವನಿಧಿ.

**ಮೂರುಮುತ್ತುಗಳು : ೧೯೮೬** ರಲ್ಲಿ ಸೇಡಂ ತಾಲೂಕಿನ ಹಂಗನ ಹಳ್ಳಿ ಗ್ರಾಮದಲ್ಲಿ ಎಲ್.ಬಿ.ಕೆ.ಆಲ್ದಾಳ ಅವರ 'ವಿಶ್ವಾರಾಧ್ಯರ ಮಹಾತ್ಮೆ' ನಾಟಕದ ಯಶಸ್ವಿ ಪ್ರಯೋಗ ನಡೆಯಿತು ಇದರಿಂದಾಗಿ ಗ್ರಾಮದ ಸಾಹಿತಿ ಸೂರ್ಯಕಾಂತ ಹಂಗನಹಳ್ಳಿ ಹಾಗೂ ಹಲವು ಗ್ರಾಮಸ್ಥರ ಒತ್ತಾಯದ ಮೇರೆಗೆ, ಅವರ ಪ್ರೀತಿಗೆ ಪಾತ್ರರಾದ ಎಲ್‌ಬಿಕೆ ಅವರು ಹಂಗನ ಹಳ್ಳಿಯಲ್ಲಿಯೇ ಠಿಕಾಣಿಹೂಡಿ 'ಮೂರುಮುತ್ತುಗಳು' ನಾಟಕವನ್ನು ಬರೆದು ಮುಗಿಸಿದರು. ಆದರೆ ಹಲವಾರು ಸಂಕಟಗಳ ಸುಳುವಿಗೆ ಸಿಕ್ಕು ನಾಟಕ ಪ್ರದರ್ಶನಕ್ಕೆ ಬಾರದೇ ಇದ್ದಾಗ, ಎಲ್‌ಬಿಕೆ ಆಲ್ದಾಳ ಅವರು, ಈ ನಾಟಕ ರಂಗಭೂಮಿಗೆ ತಂದೇ ತೀರಬೇಕೆಂಬ ಛಲ, ಅಚಲವಾಯಿತು, ಅದಕ್ಕಾಗಿ ಅವರು ನೀಡಿದ ಕಾರಣ ತುಂಬಾ ಮೆಚ್ಚಲೇಬೇಕು. 'ಮೂರು ಮುತ್ತುಗಳು' ಇದೊಂದು ಉತ್ತಮ ನಾಟಕ. ಮೂರು ಮುತ್ತುಗಳು ಅರ್ಥಾತ ಕರಿಘೂಳೇಶ್ವರ ಮಹಾತ್ಮೆ. ಇದು ಮೇಲು ನೋಟಕ್ಕೆ ಆಧ್ಯಾತ್ಮ ನಾಟಕವೆನ್ನಿಸಿದರೂ ಇದೊಂದು ಸುಂದರ ಕೌಟುಂಬಿಕ ನಾಟಕ. ಈ ನಾಟಕವು ಸಾಮಾನ್ಯರಲ್ಲಿ ವೈರಾಗ್ಯದ ಖಣಿ, ಅವಧೂತದ ನಿಧಿ, ವರಕವಿಗಳೆಂದು ಜನಜನಿತವಾಗಿ ಭಕ್ತರ ಹೃದಯ ಸಿಂಹಾಸನದಲ್ಲಿ ರಾರಾಜಿಸುತ್ತಿರುವ ಇವರು ಖ್ಯಾತ ರಂಗಭೂಮಿಯ ಕಲಾವಿದರು. ಇಂಥವರ ಜೀವನ ಚರಿತ್ರೆ ನಾಟಕ ರಂಗಕ್ಕೆ ತರಲೇ ಬೇಕು" ಎಂದು ತಮ್ಮ ನಿರ್ಧಾರ ಒತ್ತಿ ಹೇಳಿದರು ನಾಟಕ ಪ್ರದರ್ಶನಕ್ಕೆ ಆರಂಭಿಸಿದಾಗ ಪ್ರೇಕ್ಷಕ ಸಮೂಹ "ವ್ಹಾ,ವ್ಹಾ, ಭೇಷ, ಭೇಷ" ಎಂದು ಹರ್ಷೋದ್ಗಾರ ವ್ಯಕ್ತಪಡಿಸಿತು. ಕರಿಘೂಳೇಶ್ವರ (ವೈರಾಗ್ಯ ಚಕ್ರವರ್ತಿ) ರಾಮಲಿಂಗೇಶ್ವರ (ಅವಧೂತ), ಮುರುಗೇಂದ್ರ ಶಿವಯೋಗಿ (ಸಾಂಸಾರಿಕ, ಸಾಹಿತಿ). ಅವರುಗಳ ಅಪಾರ ಭಕ್ತ ಸಮೂಹ ಪಾದಯಾತ್ರೆಗಳ ಮುಖಾಂತರ ಬಂದು ತಮ್ಮ ಗುರುಗಳ ನಾಟಕವನ್ನು ಕಣ್ಣು ತುಂಬಿಸಿಕೊಂಡರು. ನಾಟಕ ತೆರೆಕಂಡ ನಂತರ ತ್ರಿಮೂರ್ತಿಗಳ ಪಾತ್ರ ವಹಿಸಿದ ನಟರಿಗೆ ಹೂಮಾಲೆ ಅರ್ಪಿಸಿ ಪ್ರೇಕ್ಷಕರು ಸಂತೋಷ ಪಡುತ್ತಿರುವುದನ್ನು ಕಂಡು, ತಮ್ಮ ಛಲ ಇಷ್ಟೊಂದು ಪ್ರಭಾವ ಬೀರಿತೆ ಎಂದು ನಾಟಕಕರ್ತ ಆಲ್ದಾಳರೇ ನಂಬದಾದರು– ಮೂರುದಿನಗಳವರೆಗೆ ರಂಗಭೂಮಿಯ ಮುಂಭಾಗದಲ್ಲಿ ಹೂವಿನ ಅಂಗಡಿಗಳೇ ತಲೆ ಎತ್ತಿ ಉತ್ತಮ ಲಾಭ ಪಡೆದರು. ಭಕ್ತರ ಭಕ್ತಿಯ ಪರಾಕಾಷ್ಠೆ ಸ್ಥಂಭಿಭೂತವನ್ನಾಗಿಸಿತು. ನಾಟಕದ ಸಕಲ ಜವಾಬ್ದಾರಿಯನ್ನು ಹೊತ್ತು ನಿರ್ವಹಿಸಿದ ಆಲ್ದಾಳರ ನಿರ್ಧಾರ, ಸೂಕ್ತ ಸಮಯದ ಧೈರ್ಯ ಮೆಚ್ಚಲೇಬೇಕು ಇದೊಂದು ಅವರ ಜೀವನದ ಹೊಸ ಅನುಭವವೇ ಎಂದರು ಸರಿ.

**ತಿಂಥಣಿ ಮೌನೇಶ್ವರ ಮಹಾತ್ಮೆ:** ಯಾದಗೀರ ಜಿಲ್ಲೆಯ ಸುರಪುರ ತಾಲೂಕಿನಲ್ಲಿ ಬರುವ ತಿಂಥಣಿ ಗ್ರಾಮ ಧಾರ್ಮಿಕರ, ಸಂತರ ನೆಲೆಯಾಗಿದೆ. ಮೋನಪ್ಪಯ್ಯ ಧಾರ್ಮಿಕವಾಗಿ ಸೂಫಿ ಮಾದರಿಯ ಸಂತ. ಸಾಹಿತ್ಯಿಕವಾಗಿ ವಚನಕಾರ. ಸಾಮಾಜಿಕವಾಗಿ ಜನಪರ ವ್ಯಕ್ತಿ, ಈತ ಒಂದೆಡೆ ಕುಳಿತು ಕಾವ್ಯ ಕಟ್ಟಿದವನಲ್ಲ. ಆತ್ಮಕಲ್ಯಾಣಕ್ಕಾಗಿ ದುಡಿಯುವುದು ಮುಖ್ಯವಲ್ಲ, ಲೋಕಕಲ್ಯಾಣಕ್ಕಾಗಿ ಮಿಡಿಯುವುದೂ ಮುಖ್ಯ. ಇಂಥವರಿಗೆ ಮುಖ್ಯವಾದುದು ಚಾರಿತ್ಯವೇ ಹೊರತು ಚರಿತ್ರವಲ್ಲ. ಉತ್ತರ ಕರ್ನಾಟಕದ ಜನ ಸಮೂಹದ ಮನಸ್ಸನ್ನು ಆಳಿದ, ಆಳುತ್ತಲಿರುವ ತಿಂಥಣಿ

ಮೋನಪ್ಪಯ್ಯ ಜನ್ಮತಃ ವಿಶ್ವಕರ್ಮನಾದರೂ ವೀರಶೈವ ಪ್ರಭಾವದಲ್ಲಿ ಬೆಳೆದ ಸಂತ ಶ್ರೇಷ್ಠ, 'ಬಸವಣ್ಣ' ಎಂಬ ಮುದ್ರಿಕೆಯಿಂದ ವಚನ ಬರೆದ ಮಹಾಪುರುಷ, ಹಿಂದು–ಮುಸ್ಲಿಂ ಭಾವೈಕ್ಯತೆಯ ಅವಶ್ಯಕತೆಯನ್ನು ಮನಗಂಡು ಅದನ್ನು ಅನುಷ್ಠಾನಕ್ಕೆ ತಂದ ಮಹಾತ್ಮ. ಮೋನಪ್ಪಯ್ಯನ ಪುಣ್ಯನಾಮವನ್ನು ಹೊತ್ತುನಿಂತ ಮಠ–ಮಂದಿರಗಳು ನಾಡಿನುದ್ದಕ್ಕೂ ಹಬ್ಬಿಕೊಂಡಿವೆ. ಮೋನಪ್ಪಯ್ಯನು ಶಿವಶರಣರ ತತ್ವ ಹಾಗೂ ಸೂಫಿ ಸಂತರ ತತ್ವಗಳನ್ನು ಸಮೀಕರಿಸಿಕೊಂಡು ತನ್ನದೇ ಆದ 'ಸಮನ್ವಯ ಪಂಥ ರೂಪಿಸಿ ಕೊಂಡಿದ್ದಾನೆ.

ನಾಟಕದ ಮೂಲವಸ್ತು ಭಾವೈಕ್ಯದ ಮಂತ್ರ ಹಿಂದು–ಮುಸ್ಲಿಂರ ಮನಸ್ಸುಗಳನ್ನು ಕಟ್ಟುವ ಪ್ರಸಿದ್ಧ ನಾಟಕ ಇದು. ತಿಂಥಣಿ ಮೌನೇಶ್ವರ ಎರಡನೇ ಆದಿಲ ಶಾಹಿಯ ದರಬಾರದಲ್ಲಿ ವಾದ ಮಂಡಿಸಿದಾಗ ಮನಸೋತ ರಾಜ ತಿಂಥಣಿಯಲ್ಲಿ ಭವ್ಯ ಮಂದಿರವನ್ನು ಕಟ್ಟಿಸುತ್ತಾನೆ. ಕಾಲಜ್ಞಾನಿ, ವಚನಕಾರ ಮೋನಪ್ಪಯ್ಯ ಕೊಡೇಕಲ್ ಬಸವಣ್ಣನ ಸಮಕಾಲೀನ ನೂರಾರು ವಚನಗಳನ್ನು ಬರೆದಿದ್ದಾನೆ. ಈ ನಾಟಕದ ಪ್ರಯೋಗ ಮೊಟ್ಟ ಮೊದಲು ಅಳ್ಳಳ್ಳಿಯ ಗದ್ದಗಿ ಮಠದಲ್ಲಿ ಪ್ರಾರಂಭಗೊಂಡು ನೂರಾರು ಪ್ರಯೋಗ ಕಂಡಿತು. ಇದು ಕಾಲಘಟ್ಟದಲ್ಲಿ ಅವಶ್ಯ ಮತ್ತು ಅನಿವಾರ್ಯವಾದ ಕಥಾನಾಯಕನ ಸಿದ್ಧಾಂತವನ್ನು ಹಳ್ಳಿಯ ಮುಗ್ಧ ಜನರಿಗೆ ಮನವರಿಕೆ ಮಾಡಿಕೊಟ್ಟಿತು.

**ಗರತಿ ವಿಶ್ವದ ಜ್ಯೋತಿ : ೧೯೮೭** ರಲ್ಲಿ ರಚಿಸಿದ "ಗರತಿ ವಿಶ್ವದ ಜ್ಯೋತಿ" ಎಂಬ ನಾಟಕವನ್ನು ಎರಡು ಆಧ್ಯಾತ್ಮಿಕ ಜೀವಿಗಳ ಸುತ್ತ ಎಣೆದ ಕಥೆಯಾಗಿದೆ. ಎಲ್.ಬಿ.ಕೆ.ಆಲ್ದಾಳರು ಕೃತಿಯ ಮುನ್ನುಡಿಯಲ್ಲಿ ಬರೆದುಕೊಂಡಂತೆ ಈ ನಾಟಕವು ಕಟ್ಟು ಕಥೆಯಲ್ಲ, ತನ್ನ ನಿತ್ಯ ಜೀವನದಲ್ಲಿ ಆರಂಭದಿಂದಲೂ ಕಹಿ–ಸಿಹಿ ಘಟನೆಗಳನ್ನು ಕಂಡುಂಡ "ಗರತಿ ವಿಶ್ವದ ಜ್ಯೋತಿ"ಯಾಗಿ ಹೊರಬಂದ ಮಹಾತಾಯಿ ಮೊಗಲಾಂಬಿಕ ದೇವಿಯ ಅಪಾರ ತಪಸ್ಸಿನ ಫಲವಾಗಿ ಅವಳ ಗರ್ಭದಲ್ಲಿ ಜನಿಸಿದ ಬಾಲಯೋಗಿ ರಾಜೇಂದ್ರರ ಬದುಕಿನಲ್ಲಿ ಘಟಿಸಿದ ಮಹತ್ವದ ಸಂದರ್ಭವು ನಾಟಕದ ವಿವಿಧ ಸನ್ನಿವೇಶಗಳಾಗಿ ರೂಪಗೊಂಡಿದೆ.

ಕಂಪನಿನಾಟಕಗಳ ಪ್ರಧಾನ ಉದ್ದೇಶ ರಂಗ ಪ್ರಯೋಗ, ಇಲ್ಲಿಯ ಹಾಸ್ಯ ಸನ್ನಿವೇಶಗಳಿಗೆ ಸ್ಥಿತಿ ಸ್ಥಾಪಕತ್ವದ ಗುಣವಿರುತ್ತದೆ. ಭವಿಷ್ಯ ಹೇಳುವ ಶಾಮ, ರಾಮ ಮತ್ತು ಅವನ ಹೆಂಡತಿ ಸೀತಾ ಅವರು ನಾಟಕದ ಪ್ರಾರಂಭದಿಂದ ಕೊನೆಯವರೆಗೂ ಮೊಗಲಾಂಬಿಕ ಹಾಗೂ ರಾಜೆಂದ್ರರಿಗೆ ಸಂಬಂಧಿಸಿದ ಘಟನೆಗಳಿಂದುಂಟಾಗುವ ಗಂಭೀರ ವಾತಾವರಣಕ್ಕೆ ಸ್ವಲ್ಪ ಮಟ್ಟಿಗೆ ವಿಶ್ರಾಂತಿ ಎಂಬಂತೆ ಅವರ ಹಾಸ್ಯದ ದೃಶ್ಯಗಳನ್ನು ಜೊತೆಯಾಗಿ ಎಣೆಯಲಾಗಿದೆ. ಈ ಮೂರು ಪಾತ್ರಗಳು, ಕನ್ನಡ, ಮರಾಠಿ, ತೆಲುಗು ಮಾತನಾಡುವಂತೆ ಮಾಡುವ ಮೂಲಕ ಎಲ್.ಬಿ.ಕೆ.ಆಲ್ದಾಳರು ಬಹು ಭಾಷಿಕ ಪ್ರೇಕ್ಷಕರನ್ನು ತಲುಪುವರಲ್ಲದೆ ನಾಟಕಕ್ಕೆ ಒಂದು ರೀತಿಯ ರೋಚಕತೆ ಸೃಷ್ಟಿಸುತ್ತ ತಮ್ಮ ಬಹುಭಾಷಾ ಪ್ರೌಢಿಮೆಯನ್ನು ಮೆರೆದಿದ್ದಾರೆ.

ಗರತಿ ವಿಶ್ವದ ಜ್ಯೋತಿ ನಾಟಕದಲ್ಲಿ ಜನಪದ ನುಡಿಗಳು, ಗಾದೆಮಾತುಗಳು ಚತುರೋಕ್ತಿಗಳು ತೇಲಿ ಬಂದಿವೆ. ಅಧ್ಯಾತ್ಮಿಕ ವ್ಯಕ್ತಿಗಳ ಜೀವನ ಸಾಧನೆ ಇಲ್ಲಿ ಎದ್ದು ಕಾಣುತ್ತಿದೆ ಇದೊಂದು ಪೌರಾಣಿಕ ನಾಟಕ.

**ಚರಬಸವೇಶ್ವರ ಮಹಾತ್ಮೆ :** ಆಲ್ದಾಳರ ಈ ನಾಟಕ ಸುವರ್ಣ ಮಹೋತ್ಸವ ಕಂಡಿತು. ಸಗರನಾಡಿನಾದ್ಯಂತ ಎಲ್ಲರ ಮನೆಮಾತಾಯಿತು. ಮಹಾತ್ಮ ಚರಬಸವೇಶ್ವರ ಮಹಾತ್ಮೆ ನಾಟಕವು ಅನವಾರ ಮಠದಿಂದ ಆರಂಭಗೊಳ್ಳುತ್ತದೆ. ಚರಬಸವೇಶ್ವರರು ಸಮಾಜಕ್ಕೆ ನೀಡಿದ್ದು ಕಾಯಕ, ದಾಸೋಹ, ಶ್ರಮದಾನ, ದುಡಿಮೆ ತತ್ವಗಳು. ಇವರ ಸದ್ಭಕ್ತಿಗೆ, ಸದ್ವರ್ತನೆಗೆ ಶಹಾಪೂರದ ಸಕಲ ಭಕ್ತರು ಮಹಾತ್ಮಾ ಚರಬಸವೇಶ್ವರರಿಗಾಗಿಯೇ ಪಂಚಕಂತಿ ಮಠವನ್ನು ಸ್ಥಾಪಿಸಿದರು.

ನಾಟಕದಲ್ಲಿನ ಪಾತ್ರಗಳ ಸಂಯೋಜನೆ ಮೆಚ್ಚುವಂತಹದ್ದು. ಶೀಲವಂತಯ್ಯ, ಅವ್ವಮಾಂಬೆ ಚೆನ್ನವೀರ ಶಿವಾಚಾರ್ಯರು, ಸಾಹುಕಾರ, ಊರಗೌಡ, ಸುರಪುರ ದೊರೆ ಇನ್ನಿತರ ಹಾಸ್ಯಪಾತ್ರಗಳು ಸೃಷ್ಟಿಗೊಂಡದ್ದು ನಾಟಕ ಕಲೆಗೆ ಬೆಳಕುತಂದಿವೆ. ಈ ನಾಟಕ ೧೨ನೇ ಶತಮಾನದ ಶರಣರ ಕಾಯಕವೇ ಕೈಲಾಸದ ಸಿದ್ಧಾಂತದ ದರ್ಶನವಾಗಿಸುತ್ತದೆ.

**ಶ್ರೀ ಅಳ್ಳಳ್ಳಿ ಅಯ್ಯಪ್ಪಯ್ಯ ಮಹಾತ್ಮೆ :** ಆಲ್ದಾಳರು ವಿಶ್ವರಾಧ್ಯರ ಮಹಾತ್ಮೆ, ಜೇವರ್ಗಿಜ್ಯೋತಿ ಕಡಕೋಳ ಮಡಿವಾಳೇಶ್ವರರು, ಶ್ರೀ ಅಳ್ಳಳ್ಳಿ ಅಯ್ಯಪ್ಪಯ್ಯ ಮಹಾತ್ಮೆಯಂತಹ ಭಕ್ತಿ ಪ್ರಧಾನ ನಾಟಕ ರಚನೆ ಮುಖಾಂತರ ಕನ್ನಡನಾಡಿಗೆ ಪರಿಚಯಗೊಂಡು ಖ್ಯಾತಿಯ ಶಿಖರಕ್ಕೇರಿದರು.

ಅಳ್ಳಳ್ಳಿ ಅಯ್ಯಪ್ಪನವರು ಮೂಢನಂಬಿಕೆ, ಅತ್ಯಾಚಾರ, ಅನಾಚಾರಗಳನ್ನು ಖಂಡಿಸಿ ಅನುಯಾಯಿಗಳಿಗೆ ಜ್ಯೋತಿಯಾಗಿದ್ದವರು. ಅವರು ಸ್ಥಾಪಿಸಿದ ಮಹಾತ್ಮಾಪೀಠ ಕರ್ನಾಟಕದಲ್ಲಿ ಸುಕ್ಷೇತ್ರವಾಯಿತು. ಈ ನಾಟಕ ಮರ್ತ್ಯ ಅಮರ್ತ್ಯಗಳ ಸಂಘರ್ಷದಲ್ಲಿ ಸಾತ್ವಿಕ ಚೇತನ ತಾಮಸಿ ಪ್ರವೃತ್ತಿಯನ್ನು ಗೆಲ್ಲುತ್ತದೆ. ಇದು ನಾಟಕದ ಪ್ರಮುಖ ಆಶಯವಾಗಿದೆ. ಬಸವರೆಡ್ಡಿ ಆತನ ಧರ್ಮಪತ್ನಿ ವಸುಂಧರಾ, ಅಯಪ್ಪಯ್ಯ ಹಾಗೂ ಅವರ ಪತ್ನಿ ಶೇಷಾಂಬಿಕೆಯರು ನಿಷ್ಠೆಯಿಂದ ಎತ್ತರದ ಸ್ಥಾನದಲ್ಲಿ ನಿಂತರೆ, ಭೀಮರೆಡ್ಡಿಯದು ತದ್ವಿರುದ್ಧಪಾತ್ರ ಅನ್ಯಾಯ ಅಧರ್ಮ, ಶೋಷಣೆಯ ಪ್ರತೀಕವಾಗಿ ನಿಲ್ಲುತ್ತಾನೆ. ಕೊನೆಯಲ್ಲಿ ಅಯ್ಯಪ್ಪಯ್ಯ ಸ್ವಾಮಿಗಳ ಅನುಗ್ರಹದಿಂದ ಭೀಮರೆಡ್ಡಿ ಗೌಡನ ಗೌಡಿಕೆ, ಅಟ್ಟಹಾಸ, ಅಂಧಕಾರ, ಅಜ್ಞಾನ, ಗರ್ವದೂರಾಗಿ ಸಾತ್ವಿಕನಾಗುತ್ತಾನೆ. ಭೀಮರೆಡ್ಡಿ ತಪ್ಪಿನ ಅರಿವು ಆಗಿ ಪ್ರಾಯಶ್ಚಿತದಿಂದ ಗುರುಗಳ ಕಾಲಿಗೆ ಬಿದ್ದು ಪಶ್ಚಾತಾಪ ಪಡುತ್ತಾನೆ.

**ಹಾರಕೂಡ ಚೆನ್ನಬಸವೇಶ್ವರ ಮಹಾತ್ಮೆ :** ಬೀದರ ಜಿಲ್ಲೆಯ ಬಸವಕಲ್ಯಾಣ ತಾಲೂಕಿನ ಸುಕ್ಷೇತ್ರ ಎಂದೇ ಪ್ರಖ್ಯಾತಿ ಪಡೆದಿರುವ ಹಾರಕೂಡ ಗ್ರಾಮದ ಶ್ರೀ ಚೆನ್ನಬಸವೇಶ್ವರ ಸಂಸ್ಥಾನ ಹಿರೇಮಠದ ಈಗಿನ ಪಿಠಾಧಿಪತಿಗಳಾದ ಶ್ರೀ.ಷ.ಬ್ರ.ಚೆನ್ನವೀರ ಶಿವಾಚಾರ್ಯರ ಕೃಪಾಕಟಾಕ್ಷಿ ಹಾಗೂ ಮಾರ್ಗದರ್ಶನ ಮುಖಾಂತರದಿಂದಲೇ ಪ್ರೇರಣೆಹೊಂದಿ ಎಲ್.ಬಿ.ಕೆ. ಆಲ್ದಾಳ ಅವರು, "ಹಾರಕೂಡ ಚೆನ್ನಬಸವೇಶ್ವರ ಮಹಾತ್ಮೆ" ಎಂಬ ಪ್ರಸಿದ್ಧ ಪೌರಾಣಿಕ ನಾಟಕವನ್ನು ಕೃತಿ ರೂಪದಲ್ಲಿ ತಂದು 'ಸೈ' ಎನ್ನಿಸಿಕೊಂಡವರು, ಕಲಬುರ್ಗಿಯಲ್ಲಿ ನಾಟಕ ಪ್ರಾರಂಭೋತ್ಸವಕ್ಕೆ ಸ್ವತಃ ಶ್ರೀ ಚೆನ್ನವೀರ ಶಿವಾಚಾರ್ಯರು ಆಗಮಿಸಿ, ನಾಟಕ ಉದ್ಘಾಟಿಸಿ, ಇಡೀ ನಾಟಕವನ್ನು ಕಣ್ಣಾರೆ ಕಂಡರು. ಇಷ್ಟಕ್ಕೆ ತೃಪ್ತಿಪಡದ ಶ್ರೀಗಳು ಮೂರುದಿವಸಗಳವರೆಗೆ ಸತತ ನಾಟಕ ವೀಕ್ಷಿಸಿದರಲ್ಲದೆ, ಪ್ರೇಕ್ಷಕರ ಅನಿಸಿಕೆಯನ್ನು ಪಡೆದು ಸಂತಸಗೊಂಡರು.

ಹಾರಕೂಡ ಚೆನ್ನಬಸವೇಶ್ವರ ಮಹಾತ್ಮೆಯು ಕೆಲವೇ ವರ್ಷಗಳ ಹಿಂದೆ ಲಿಂಗೈಕ್ಯರಾದ ಶ್ರೀ ಚನ್ನಬಸವಶೀವಯೋಗಿ ಪುಣ್ಯಪುರುಷರ ಕಥೆ. ಇದನ್ನು ನಾಟಕಕ್ಕೆ ಇಳಿಸುವುದು ಸುಲಭದ ಕೆಲಸವಲ್ಲ ಆದರೂ ಆಲ್ದಾಳರ ಕೈಯಲ್ಲಿ ಮೂಡಿಬಂದ ಈ ನಾಟಕವನ್ನು ಕಂಡ ಶ್ರೀಗಳು ಆಲ್ದಾಳರ ಬೆನ್ನುತಟ್ಟಿ ಮೇಲಕ್ಕೆತ್ತುವಲ್ಲಿ ಮಾತೃವಾತ್ಸಲ್ಯ ತೋರಿದ್ದಾರೆ.

**'ಹಂಡೆ ಕುಲತಿಲಕರಾಜಾ ಬಲದ ಹನುಮಪ್ಪ ನಾಯಕ (ಐತಿಹಾಸಿಕ ನಾಟಕ) :** ಆಲ್ದಾಳರು ಈ ವರೆಗೆ ಬರೆದ ನಾಟಕಗಳು ನೂರಾರು ಅವೆಲ್ಲವೂ ಪುರಾಣ, ಸಾಮಾಜಿಕ, ಜನಕಲ್ಯಾಣ ಬಯಸುವಂತವುಗಳು.... ಆದರೆ ಈಗ ೨೦೧೪ ರಲ್ಲಿ 'ಹಂಡೆ ಕುಲತಿಲಕ ರಾಜಾ ಬಲದ ಹನುಮಪ್ಪ ನಾಯಕ' ಎಂಬ ಇತಿಹಾಸದ ವಸ್ತುವನ್ನಾಧರಿಸಿದ ನಾಟಕ ಕೃತಿಯನ್ನು ರಚಿಸಿ ಕನ್ನಡ ಸಾಹಿತ್ಯಕ್ಕೂ, ರಂಗಭೂಮಿಗೂ ಸಮರ್ಪಿಸಿರುವುದು ಮೆಚ್ಚುವಂಥದ್ದು. ಕಾಲಗರ್ಭದಲ್ಲಿ ಹುದುಗಿಕೊಂಡಿರುವ ಹಂಡೆ ಆಳರಸರ ಚರಿತ್ರೆಯನ್ನು ಆಲ್ದಾಳರು ನಾಟಕರೂಪದಲ್ಲಿ ಹೊರತಂದಿದ್ದು ಓದುಗರಿಗೂ, ಪ್ರೇಕ್ಷಕರಿಗೂ ರಸದೌತಣ ನೀಡುವಲ್ಲಿ ಯಶಸ್ವಿಯಾಗಿದ್ದಾರೆ.

**ನಾಟ್ಯಸೇವೆ, ಜನಸೇವೆಯೇ ನನ್ನ ತಪಸ್ಸು :** ನಾಟ್ಯದೇವತೆಯ ಸೇವೆಯನ್ನು ತುಂಬು ಮನದಿಂದ ನಡೆಸಿದ ಎಲ್‌ಬಿಕೆ ಅವರು ಅದನ್ನೊಂದು ತಪಸ್ಸು ಎಂದು ಭಾವಿಸಿದ್ದರು. ನಾಟಕಗಳನ್ನು ಬರೆದು ಕಂಪನಿಗಳಿಗೆ ಕೇವಲ ಹಣಕ್ಕಾಗಿ ಅದನ್ನು ಕೊಟ್ಟು ಬರುವ ಜಾಯಮಾನ ಇಲ್ಲವೆ ಮನೋವೃತ್ತಿ ಅವರದಾಗಿರಲಿಲ್ಲ, ಯಾವುದೇ ಕಂಪನಿಗೆ ಯಾವುದೇ ನಾಟಕಕೊಟ್ಟರೂ ಅಲ್ಲಿಯ ನಟ–ನಟಿಯರಿಗೆ ಸರಿಯಾದ ಶಿಕ್ಷಣ ಅಥವಾ ತರಬೇತಿಯನ್ನು ಕೊಟ್ಟು ನಾಟಕಕ್ಕೆ ತಕ್ಕಹಾಗೆ ರಂಗ ಸಜ್ಜಿಕೆ ಹೊಂದಿಸಿಕೊಂಡು ಹಗಲು–ರಾತ್ರಿ ನಟ–ನಟಿಯರೊಂದಿಗೆ ತಾವು ಶ್ರಮಿಸಿ ನಾಟಕ ಪ್ರಯೋಗಕ್ಕೆ ಮುಂದಾಗುತ್ತಿದ್ದರು. ಈ ರೀತಿಯ ಮುಂಜಾಗ್ರತೆ, ಮುಂದಾಲೋಚನೆಯಿಂದ ಎಲ್.ಬಿ.ಕೆ ಅವರ ನಾಟಕಗಳಿಗೆ ಜನಬೆಂಬಲ ಹೆಚ್ಚಾಗುತ್ತಿತ್ತು. ನಾಟಕಗಳು ಯಶಶ್ವಿಯಾಗಿ ಪ್ರೇಕ್ಷಕ ಸಮೂಹದಲ್ಲಿ ಆನಂದಲೋಲ ಹೆಚ್ಚಾಗುತ್ತಿತ್ತು. ಇದರಿಂದಾಗಿ ನಾಟಕಗಳು ಜನಪ್ರಿಯವಾಗ ತೊಡಗಿದವು, ನಟ–ನಟಿಯರ ಪಾಲಿನ ದೇವರಂತೆ ಎಲ್.ಬಿ.ಕೆ ಅವರು ಕಂಡು ಬರುತ್ತಿದ್ದರು. ಕಾಡುಕಲ್ಲನ್ನು ನಾಡಿನ ಶ್ರೇಷ್ಠಕಲಾವಿದರ ಮಾಲಿಕೆಗೆ ಸೇರಿಸಬಲ್ಲ ವಿಶೇಷ ಕಲಾ ಪ್ರೌಢಿಮೆ ಅವರಲ್ಲಿತ್ತು. ಇದಕ್ಕೆ ಉದಾಹರಣೆ ಎನ್ನುವಂತೆ ಪ್ರಸಿದ್ಧ ನಾಟಕ ಕಲಾವಿದೆ ಮತ್ತು ಆಕಾಶವಾಣಿ ಕಲಾವಿದೆ ಶ್ರೀಮತಿ ಹೆಲನ್ ಮೈಸೂರು ಅವರು ಎಲ್.ಬಿ.ಕೆ ಅವರ "ಅಭಿನಂದನ ಗ್ರಂಥ"ಕ್ಕಾಗಿ ಬರೆದ ಲೇಖನದಲ್ಲಿ ತಮ್ಮ ಅನಸಿಕೆಯನ್ನು ವ್ಯಕ್ತಪಡಿಸಿದ್ದು ಹಿಗೆ.

"ಸಣ್ಣ ಬಾಯಿಯಲ್ಲಿ ದೊಡ್ಡಮಾತು" ಎನ್ನುವ ಗಾದೆಯಂತೆ ನಾಕಂಡ ಕವಿಗಳಲ್ಲಿ ಎಲ್.ಬಿ.ಕೆ ಆಲ್ದಾಳರ ಕುರಿತು ಬರೆಯುವುದು ನನಗೆ ಹೆಮ್ಮೆ ಎನಿಸುತ್ತದೆ..

ಆಲ್ದಾಳರು ನನಗೆ ಇಪ್ಪತ್ತೆಂಟು ವರ್ಷಗಳಿಂದ ಪರಿಚಿತರು, ಅವರು ಅನೇಕ ನಾಟಕಗಳನ್ನು ರಚಿಸಿದ್ದಾರೆ, ಇವುಗಳಲ್ಲಿ 'ಕಲಿಯುಗದ ಕನ್ಯೆ', 'ನಮಸ್ಕಾರ' ಇತ್ಯಾದಿ ನನ್ನ ಮನಸ್ಸನ್ನು ಸೆಳೆದಿವೆ. ಪ್ರತಿಯೊಂದರಲ್ಲಿ ಹೊಸತನ, ಸಹಜ ತಿಳುವಳಿಕೆ ಮೂಡಿಸುವಂತಹ ನಾಟಕಗಳನ್ನು ರಚಿಸಿದ್ದಾರೆ. ವಿಶ್ವಾರಾಧ್ಯ ನಾಟಕದಲ್ಲಿ ಗಂಗಿಯ ಹಾಸ್ಯಪಾತ್ರ ನನಗೆ ತುಂಬಾ ಇಷ್ಟ. ಏಕೆಂದರೆ ಈ ಪಾತ್ರದಿಂದಲೇ ನನಗೆ ಹೆಚ್ಚಿನ ಶ್ರೇಯಸ್ಸು ಬಂದಿದೆ. ಇವರ ಎಲ್ಲಾ ನಾಟಕಗಳಲ್ಲೂ ನಾನು ಅಭಿನಯಿಸಿದ್ದೇನೆ.

**ಭಾರತೀಯ ತತ್ವದ ಪ್ರತಿಪಾದಕ :** ಇದೆಲ್ಲಕ್ಕಿಂತ ಹೆಚ್ಚಾಗಿ ಭಾರತೀಯ ಧರ್ಮದ ಪದ್ಧತಿಯಲ್ಲಿ ಹಾಸು ಹೊಕ್ಕಾಗಿ ಮಾರ್ಗ ಮಾಡಿಕೊಂಡವರು. ಭಕ್ತಿ ಪ್ರಧಾನ ನಾಟಕಗಳನ್ನು ಅದ್ಭುತವಾಗಿ ಪ್ರೇಕ್ಷಕರು ಮೆಚ್ಚುವಂತೆ ರಚಿಸಿದ್ದಾರೆ. ತಿಂಥಣಿಮೌನೇಶ್ವರ, ಗುಡ್ಡಾಪುರದಾನಮ್ಮ, ಶಿರಸಿ ಮಾರಿಕಾಂಬ, ಯಾನಾಗುಂದಿ ಮಾಣಿಕೇಶ್ವರಿ, ಅಯ್ಯಪ್ಪಯ್ಯ, ಸಿದ್ಧರಾಮೇಶ್ವರ, ವಿಶ್ವಾರಾಧ್ಯ ಮಹಾತ್ಮೆ ಮುಂತಾದ ನಾಟಕಗಳನ್ನು ರಚಿಸಿದ್ದು ಇವುಗಳು ಅನೇಕ ಕಂಪನಿಗಳಿಗೆ ಜೀವಾಳವಾಗಿವೆ. ಇವರು ಕವಿಗಳು ಅಲ್ಲದೆ ಉತ್ತಮ ನಾಟಕ ನಿರ್ದೇಶಕರೂ ಹೌದು ಒಂದು ಕಲ್ಲನ್ನು ಸುಂದರ ಮೂರ್ತಿಯನ್ನಾಗಿ ಮಾಡುವಂತ ಸಾಮರ್ಥ್ಯ ಉಳ್ಳವರಾಗಿದ್ದರು. ಹಾಗೆಯೇ ಒಳ್ಳೆಯ ಚಾರಿತ್ರ್ಯ ಉಳ್ಳವರು. ಎಷ್ಟೊ ಹೆಸರಾಂತ ನಾಟಕಕಾರರು ದುಶ್ಚಟಗಳ ದಾಸರಾಗಿ ಹೋದವರೇ ಬಹಳ ಆದರೆ ನಮ್ಮ ಅಪ್ಪಾಜಿ ಎಲ್.ಬಿ.ಕೆ.ಆಲ್ದಾಳರು ಯಾವ ಚಟಕ್ಕೂ ಅಧೀನರಾಗದೆ ತಮ್ಮ ಜೀವನವನ್ನೇ ಕನ್ನಡ ಸಾಹಿತ್ಯಗೋಸ್ಕರ ಮುಡುಪಾಗಿಟ್ಟಿದ್ದಾರೆ. ಇವರು ಆಧ್ಯಾತ್ಮಿಕವೇ ತಮ್ಮ ಉಸಿರು ಎಂದು ತಿಳಿದುಕೊಂಡಿದ್ದಾರೆ. ಎಂಥಹ ಮಾತು!

ಎಲ್.ಬಿ.ಕೆ.ಆಲ್ದಾಳರ ಹತ್ತಿರದ ಒಡನಾಡಿ ಹಾಗೂ ನಾಟಕ ಪ್ರೇಮಿ, ಸಾಹಿತಿಯೂ ಆಗಿರುವ ಎಸ್.ಕೆ.ಬಿರಾದಾರ ಅವರು "ಆಲ್ದಾಳರ ನಾಟಕಗಳೆಂದರೆ ಹಾಗೆ, ಅದೊಂಥರ ಅವ್ಯಕ್ತ ಸೆಳೆತ, ಪಾತ್ರಕ್ಕೆ ಒಗ್ಗಿಕೊಳ್ಳುತ್ತಾ ವಿಭಿನ್ನವಾಗಿ ಅನುಭಾವಿಸುವ ಅದ್ಭುತ ಪ್ರಯತ್ನ. ಟಿ.ವಿ. ಸಿನಿಮಾಗಳಿಗಿಂತಲೂ, ನಾಟಕಗಳ ಮೂಲಕ ಜನತೆಯ ಮನತಟ್ಟಲು ಸಾಧ್ಯವಿದೆ. ನಿಜ ಹೇಳಬೇಕೆಂದರೆ, ನಾಟಕಗಳಿಗೆ ಸಿಗುವ ವೈವಿಧ್ಯಮಯ ಪಾತ್ರಗಳಿಗೆ ಹೋಲಿಸಿದರೆ ಟಿ.ವಿ.ಧಾರಾವಾಯಿಗಳು ಸವಾಲಿನದಾಗಿರುವುದಿಲ್ಲ. ಎಷ್ಟೋ ಬಾರಿ ಎಲ್.ಬಿ.ಕೆ ಅವರ ನಾಟಕಗಳಲ್ಲಿ ಅಭಿನಯಿಸುವ ಅತಿ ಸಾಮಾನ್ಯ ಪಾತ್ರಗಳು ಜನರ ಮನದಲ್ಲಿ ಅಚ್ಚಳಿಯದೇ ಉಳಿದಿರುತ್ತವೆ. ಅಭಿನಯಕ್ಕೆ ಅಂಥದೊಂದು ಶಕ್ತಿ ಅದರಲ್ಲಿದೆ" ಎಂದು ಹೇಳುತ್ತಾರೆ.

**ಕವಿಪುಂಗವರಿಗೆ ಜನ್ಮಕೊಟ್ಟವರೇ ಪುಣ್ಯವಂತರು! :** ಎಲ್.ಬಿ.ಕೆ ಅವರು ಪ್ರತಿಭಾವಂತ ಕಲಾವಿದರಲ್ಲೊಬ್ಬರು ಅವರು ಅಭಿನಯಿಸಿರುವ ಅನೇಕ ನಾಟಕಗಳಲ್ಲಿ ಒಂದಾಗಿರುವ "ಸದ್ಗುರು ಶ್ರೀ ವಿಶ್ವಾರಾಧ್ಯ ಮಹಾತ್ಮೆ" ನಾಟಕದಲ್ಲಿ ಗೊಲ್ಲಾಳಪ್ಪ ಗೌಡನ ಪಾತ್ರ ಕಂಡವರು ಭಲೇ, ಭಲೇ, ಎಂದು ಉದ್ಗರಿಸಿದ್ದಾರೆ. ಎಲ್‌ಬಿಕೆ ಅವರು ಅಭಿನಯಿಸಿರುವ, ನಿರ್ದೇಶಿಸಿರುವ ನಾಟಕಗಳು ಅತ್ಯಂತ ಜನಪ್ರಿಯ ಕಲಾವಿದರೊಡನೆ ಸಹಯೋಗ, ಒಡನಾಟ, ಚರ್ಚೆ, ವಿಚಾರ ವಿನಿಮಯ ಸದಾಕಾಲ, ರಂಗಭೂಮಿಯ ಪ್ರಗತಿಗಾಗಿ ನಿರಂತರ ಹೋರಾಟ ಕಂಡು, ಪಂಚ ಪೀಠಗಳಲ್ಲಿ ಒಂದಾದ ಕಾಶಿಜ್ಞಾನ ಸಿಂಹಾಸನಾಧೀಶ್ವರ ಶ್ರೀ ೧೦೦೮ ಡಾ॥ ಚಂದ್ರಶೇಖರ ಶಿವಾಚಾರ್ಯರ ಭಗವತ್ಪಾದಂಗಳ ಅವರು ದಿ. ೨೬.೧೦.೨೦೦೭ ರಂದು ಆಲ್ದಾಳ ಅವರನ್ನು ತಮ್ಮ ಪೀಠಕ್ಕೆ ಬರಮಾಡಿಕೊಂಡು "ಸಾಹಿತ್ಯ ಕಲಾ ಭೂಷಣ" ಎಂಬ ಪ್ರಶಸ್ತಿ ನೀಡಿದರು. ನಿಜವಾಗಿಯೂ ಇದೆಂತಹ ಆಲ್ದಾಳರ ಪುಣ್ಯ ಎನ್ನಬೇಕು? ಇಂತಹ ಕವಿಪುಂಗವರಿಗೆ ಜನ್ಮನೀಡಿದ ತಂದೆ-ತಾಯಿಗಳು ಎಷ್ಟೊಂದು ಪುಣ್ಯವಂತರಿರಬೇಕು? ಇದು ಎಲ್ಲರಿಗೂ ಸಿಕ್ಕುವುದು ಸುಲಭವಲ್ಲ ಆ ಭಗವಂತನ ಮಹಿಮೆಯೆ ಇದ್ದಿರಬೇಕು!

**ಕಲಾತ್ಮಕತೆ ನಾಟಕದ ಜೀವಾಳ :** ಎಲ್.ಬಿ.ಕೆ.ಆಲ್ದಾಳ ಅವರು ಅಪ್ಪಟ ನಾಟಕಕಾರರು. ವೃತ್ತಿನಾಟಕ ಇಲ್ಲವೆ ಹವ್ಯಾಸಿ ನಾಟಕ ಎಂಬ ವರ್ಗಿಕರಣದ ಮಾತು ಬಂದಾಗಲೆಲ್ಲ ಅದು ವಿಸ್ಮಯವನ್ನುಂಟು

ಮಾಡುತ್ತದೆ. ವೃತ್ತಿ ನಾಟಕವಾಗಲಿ, ಹವ್ಯಾಸ ನಾಟಕವಾಗಲಿ ಅದರಲ್ಲಿ ಕಲಾತ್ಮಕತೆ ನಿಶ್ಚಿತವಾಗಿ ಇರಲೇಬೇಕು. ನಾಟಕದಲ್ಲಿ ನೋಡಬೇಕಾದ್ದು ಇದನ್ನೇ. ಇಲ್ಲೊಂದು ಮಾತು ನನಗೆ ಕಂಡು ಬರುವುದೇನಂದರೆ, ನಾವು ರಾಷ್ಟ್ರಮಟ್ಟದ, ವಿಶ್ವಮಟ್ಟದ ಕ್ರಿಕೇಟ್ ಆಟಗಾರರನ್ನು ನೋಡಿದಾಗ ಅವರದು ವೃತ್ತಿಯೇ ಹವ್ಯಾಸವೆ? ಎಂದು ನಿರ್ದಿಷ್ಟವಾಗಿ ಹೇಳುವುದು ಕಷ್ಟ. ಹವ್ಯಾಸ ಎನ್ನುವುದು ಹಗುರವಾದುದಲ್ಲ, ವೃತ್ತಿ ಎಂಬುದು ಉದ್ಯೋಗವಲ್ಲ. ಸಂಗೀತದಲ್ಲಾಗಲಿ, ಚಿತ್ರಕಲೆಯಲ್ಲಾಗಲಿ ಸಾಹಿತ್ಯದಲ್ಲಾಗಲಿ ಈ ಬಗೆಯ ಭೇದವಿಲ್ಲ. ರಂಗಕಲೆಗೆ ಸಮಗ್ರ ದೃಷ್ಟಿಯನ್ನು ದೊರಕಿಸಿಕೊಟ್ಟಾಗಲೇ ಅದರ ಜೀವಂತ ವಿಕಾಸ ಸಾಧ್ಯ ಎನ್ನುವ ಮಾತನ್ನು ಎಲ್.ಬಿ.ಕೆ ಅವರು ತಮ್ಮ ನಾಟಕದ ಬರಹಗಳ ಮೂಲಕ ರುಜುವಾತು ಪಡೆಸಿದ್ದಾರೆ.

ನಾಟಕಗಳು ಅದರಲ್ಲಿನ ಪಾತ್ರಗಳು ಏಕಾಏಕಿಯಾಗಿ ಹುಟ್ಟಿಕೊಂಡು ನಟಿಸಲ್ಪಡುವುದಿಲ್ಲ, ಅವುಗಳಿಗಾಗಿ ತಪಸ್ಸು ಮಾಡಬೇಕು. ಸುತ್ತಲ ಪರಿಸರದ ಜ್ಞಾನದೊಂದಿಗೆ, ಸಂಬಂಧಗಳ ಅರಿವಿನೊಂದಿಗೆ, ಪಾತ್ರಗಳ ಮೌಲ್ಯದೊಂದಿಗೆ ಕುಸ್ತಿ ಹಿಡಿದು ಬರೆಯಬೇಕು. ಆಗ ನಾಟಕ ತಯಾರಾಗುತ್ತದೆ. ಇದು ನಿಜಕ್ಕೂ ಸುಲಭದ ಕೆಲಸವಲ್ಲ.

**ಒಬ್ಬಂಟಿಗರಲ್ಲ :** ಆಲ್ದಾಳ ಅವರು ಒಬ್ಬಂಟಿಗರಾಗಿಲ್ಲ. ಏಕಂದರೆ ನಾಟಕಕ್ಕೆ ಒಂಟಿತನ ಎಂದೂ ಯಾವತ್ತೂ ಒಗ್ಗುವುದಿಲ್ಲ. ನಾಟಕ ಕಲಾವಿದರ ಚಿಂತನೆಯಲ್ಲಿರುತ್ತದೆ. ನಾಟಕಕ್ಕೆ ಗುಂಪು ಅವಶ್ಯ. ಅದರ ಹಿಂದಿನ ಚಿಂತನೆ ಏಕಾಂತದ್ದು, ಹವ್ಯಾಸಿ ರಂಗಭೂಮಿ ಚಿಂತನೆ ಪರತೆಗೆ, ಏಕಾಂತತೆಗೆ, ಖಾಸಗಿತನಕ್ಕೆ ವಾಲುತ್ತದೆ. ವೃತ್ತಿಪರ ಎಂಬುದು ಒಂದು ಗುಂಪಾಗಿ ಸಮಷ್ಟಿಯನ್ನು ಕೂಡಲು ಎಳಸುತ್ತದೆ. ನಾಟಕ ಲೋಕದಲ್ಲಿ ಈಚೆಗೆ ನಡೆದಿರುವ ಅನೇಕ ಪ್ರಯೋಗಗಳು ವೃಷ್ಟಿಯನ್ನೂ, ಸಮಷ್ಟಿಯನ್ನೂ ಸಮನ್ವಯಗೊಳಿಸಲು ಹವಣಿಸುತ್ತವೆ. ರಂಗಭೂಮಿ ಪ್ರೇಕ್ಷಕರತ್ತ ಸರಿಯುತ್ತದೆ. ಪ್ರೇಕ್ಷಕರು ರಂಗ ಸ್ಥಳದಲ್ಲಿ ಲೀನವಾಗುತ್ತಾರೆ. ಹೀಗೆ ಎರಡು ಬೇಳೆಗಳು ಸೇರಿ ಒಂದಾಗುತ್ತವೆ 'ಇಡಿ' ಎನಿಸುತ್ತವೆ.

## ಸಂಸ್ಕೃತಿ ನಾಟಕದ ಜೀವಾಳ

ಎಲ್.ಬಿ.ಕೆ. ಆಲ್ದಾಳರ ಸಾಹಿತ್ಯದಲ್ಲಿ ಮೂಡಿಬಂದಿರುವ ಸಾಹಿತ್ಯ ಮತ್ತು ಸಾಂಸ್ಕೃತಿಕ ಮಹತ್ವ ಅರಿತುಕೊಳ್ಳುವ ಮುನ್ನ ಕನ್ನಡ ಸಂಸ್ಕೃತಿಯ ಇತಿಹಾಸದ ಬಗ್ಗೆ ಮೆಲುಕು ಹಾಕೋಣ, ಸಂಸ್ಕೃತಿ ಎಂದರೆ ಶುದ್ಧೀಕರಿಸುವಿಕೆ, ಪರೀಕ್ಷಿಸುವಿಕೆ, ಸಂಸ್ಕೃತಿ ತಿದ್ದಿ ತಿಳಿಸು, ಸಾಣೆ ಹಿಡಿ, ಕಾಡುತನವನ್ನು ತೆಗೆದುಹಾಕು ಎಂಬ ವಿಶಾಲವಾದ ಅರ್ಥವನ್ನು ಹೊಂದಿದೆ, ಸಂಸ್ಕಾರದಿಂದ ಸಂಸ್ಕೃತಿ ಬಂದಿದೆ. ತಿದ್ದಿ, ತೀಡಿ, ಸಾಣೆಹಿಡಿದ ಬಳಿಕ ಅದರಿಂದ ಹೊರಡುವ ಬಂಗಾರ ಸಂಸ್ಕೃತಿ, ಸಮಾಜ, ಜೀವನಕ್ಕೆ ಶಕ್ತಿಯನ್ನು ಸ್ಫೂರ್ತಿಯನ್ನು ತಂದುಕೊಡುವುದೇ ಸಂಸ್ಕೃತಿ, ಸಭ್ಯತೆ, ನಾಗರಿಕತೆ, ತ್ಯಾಗಗುಣ, ಸ್ನೇಹ ಪರತೆ ಇತ್ಯಾದಿ ಎಲ್ಲ ಸದ್ಗುಣ ಸಂಪತ್ತಿನ ಸಾರ ಸ್ವರೂಪವೇ ಸಂಸ್ಕೃತಿ.

ಎಲ್.ಬಿ.ಕೆ ಅವರ ನಾಟಕಗಳ ಕೃತಿಗಳ ಅಧ್ಯಯನವೆಂದರೆ ಅದು ಸಂಸ್ಕೃತಿಯ ಅಧ್ಯಯನವೇ ಆಗಿದೆ. ಏಕೆಂದರೆ ಸಂಸ್ಕೃತಿ ಎಂದರೆ ಮಾನವ ಸಮಾಜದ ಉಸಿರು, ಮಾನವನ ಸಮೂಹ ಜೀವನದ ಅಭಿವ್ಯಕ್ತಿ. ಮಾನದಂಡವನ್ನು ಸಮೂಹ ಜೀವಿಯಾಗಿ ಇತರರೊಂದಿಗೆ

ಸಮರಸಗೊಂಡು ಜೀವಿಸುವಂತಹ ಪರಿಸರವನ್ನು ನಿರ್ಮಿಸುವುದು ಸಂಸ್ಕೃತಿ. ಕಾವ್ಯ, ಕತೆ, ಕಾದಂಬರಿಯಂತೆ, ನಾಟಕವು ಸ್ವತಂತ್ರ ಶುದ್ಧ ಸಾಹಿತ್ಯ ಎಂದು ಪರಿಗಣಿತವಾದರೂ, ನಾಟಕ ಪ್ರದರ್ಶನದ ಮೂಲಕ ಜನಸಾಮಾನ್ಯರಲ್ಲಿ ಸ್ಪಂದಿಸುವ ವಿಶೇಷ ಗುಣಪಡೆದಿದೆ. ರಂಗಭೂಮಿಯಲ್ಲಿ ನಟಿಸುವ ನಟ–ನಟಿಯರ ಭಾವಾಭಿನಯ, ಬಣ್ಣ ಬೆಳಕು ರಂಗ ತಂತ್ರಗಳನ್ನು ನೋಡಿ ಪ್ರೇಕ್ಷಕರೆಲ್ಲ ರಸಾನುಭವ ಪಡೆಯುವ ಸೌಭಾಗ್ಯವಿರುವುದರಿಂದಲೇ ನಾಟಕ ಉಳಿದ ಸಾಹಿತ್ಯ ಪ್ರಕಾರಗಳಿಂದ ಭಿನ್ನವಾಗಿ ನಿಲ್ಲುತ್ತದೆ. ಮನುಷ್ಯ ಜೀವನದಲ್ಲಿ ಬದಲಾವಣೆಯ ಗಾಳಿ ತಂಪಾಗಿ ಬೀಸುತ್ತದೆ.

ಮುನಿಗಳೇ ಆಗಲಿ, ಮೌಲ್ವಿಗಳೇ ಆಗಲಿ, ಸಂತರೇ ಆಗಲಿ, ಸಾಹಿತಿಗಳೇ ಆಗಲಿ ಸಮಾಜಕ್ಕೆ ಮಾರ್ಗದರ್ಶನ ನೀಡಬೇಕಾದರೆ ಅದಕ್ಕೆ ಅಗತ್ಯವಾದ ಅರ್ಹತೆಯನ್ನು ಮೊದಲುಗಳಿಸಿಕೊಂಡಿರ ಬೇಕು. ಈ ಅರ್ಹತೆಗಳು ಬರುವುದು ಒಳ್ಳೆಯ ಸಂಸ್ಕೃತಿಯಿಂದ, ಸಂಸ್ಕಾರದಿಂದ, ಬದುಕಿನಲ್ಲಿ ನಂಬಿ ಆಚರಿಸಿದ ಮೌಲ್ಯಗಳಿಂದ ಎಂಬುದನ್ನು ಎಲ್ಬಿಕೆ ಅಲ್ದಾಳ ಅವರು ತಮ್ಮ ನಾಟಕಗಳಲ್ಲಿ ತುಂಬಾ ಮನದಟ್ಟಾಗುವ ರೀತಿಯಲ್ಲಿ ಬಿಂಬಿಸಿದ್ದಾರೆ. ಅವರ ಒಂದೊಂದು ನಾಟಕಗಳು ವೀಕ್ಷಿಸುತ್ತಲಿದ್ದರೆ, ಅವುಗಳು ಸಮಾಜಮುಖಿಯಾಗಿದ್ದು ಜನರ ಸಂಸ್ಕೃತಿಯನ್ನು ಎತ್ತಿ ತೋರಿಸುತ್ತವೆ. ವ್ಯಕ್ತಿ ದೊಡ್ಡವನಾಗುವುದು ಅವನ ಅಧಿಕಾರದಿಂದಲ್ಲ, ಅವನಲ್ಲಿರುವ ಹಣದಿಂದಲೂ ಅಲ್ಲ, ವಿಶಾಲವಾದ ಹೃದಯದಿಂದ ಪ್ರೀತಿ– ವಿಶ್ವಾಸದಿಂದ. ಈ ಸಕಲ ಗುಣಗಳನ್ನು ನಾವುಗಳು ಎಲ್.ಬಿ.ಕೆ ಅವರ ನಾಟಕಗಳನ್ನು ಓದುವುದರ ಮೂಲಕ ಇಲ್ಲವೇ ನೋಡುವುದರ ಮೂಲಕ ಒಳ್ಳೆಯ ನೀತಿಯುತಗಳ ಪಾಠವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬಹುದು.

"ದೈವೀಲೀಲೆ ಅಥವಾ ಶಿವನ ಆಟ ಎನಿಸಿದ ಈ ಜೀವನ ನಾಟಕದಲ್ಲಿ ನಮ್ಮ ಪಾತ್ರದ ಘನತೆ, ಗೌರವ, ಸ್ಥಾನಮಾನ, ರೀತಿ–ನೀತಿ ಏನೆಲ್ಲವನ್ನು ಅತ್ಯಂತ ಹೃದಯಿಸ್ಪರ್ಷಿಯಾಗಿ ತಿಳಿಸಿಕೊಡುವ ಮಾಧ್ಯಮವೇ ರಂಗ ಸಾಹಿತ್ಯ ಅಥವಾ ನಾಟಕ ಸಾಹಿತ್ಯ. ಆ ಮಹಾದೇವನೆ ಮೆಚ್ಚಿ ಹೌದು, ಹೌದು ಅನ್ನುವಂತೆ ಬದುಕುವ ಕಲೆಯನ್ನು ಕಲಿಸಿ ಕೊಡುತ್ತದೆ. ಈ ರಂಗ ಸಾಹಿತ್ಯವು". [೧]

"ರಂಗ ನಾಟಕ ರಚನೆ ಮತ್ತು ನಾಟಕ ನಿರ್ದೇಶನ ಹವ್ಯಾಸಿಯಾಗಿಟ್ಟುಕೊಂಡು ಶ್ರಮಿಸುತ್ತಿರುವ ಎಲ್.ಬಿ.ಕೆ. ಅವರು ವೃತ್ತಿ, ರಂಗ ಕಂಪನಿಗಳಲ್ಲಿ ೧೩ಕ್ಕೂ ಹೆಚ್ಚು ನಾಟಕಗಳಿಗೆ ನಿರ್ದೇಶನ ನೀಡಿದ್ದಾರೆ. ಹವ್ಯಾಸಿ ರಂಗ ಚಟುವಟಿಕೆಗಳಿಗೆ ನಿರಂತರ ಉತ್ತೇಜನ ನೀಡುತ್ತಿದ್ದಾರೆ. ಇಂಥವರ ಸಾಹಿತ್ಯದಲ್ಲಿ ತಾಯಿ, ಅಕ್ಕ, ತಂಗಿ, ಪತ್ನಿಯರ ನಿಚ್ಚಳ ಮನಸ್ಸಿನ ಮಾತೃತ್ವವು ಜೀವರಸವಾಗಿ ನಿರಂತರವಾಗಿ ಹರಿಯುತ್ತಿರುತ್ತದೆ. ತಂದೆ, ಅಣ್ಣ, ತಮ್ಮ, ಗೆಳೆಯರ ನಿಚ್ಚಳ ಮನಸ್ಸಿನ ಅಂತಃ ಕರುಣೆಯ ನಿಷ್ಠೆಗೊಂಡ ಗಟ್ಟಿತನವು ದ್ರವಿಸುತ್ತಿರುತ್ತದೆ. ಈ ಬಗೆಯ ಸಾಮರಸ್ಯದಲ್ಲಿ ಆರೋಗ್ಯ ಬದುಕಿನ ಅರಳು ಘಮಘಮಿಸುತ್ತದೆ. ಈ ಪ್ರಕಾರದ ಸಾಹಿತ್ಯ ರಚನೆಗೆ ಗಡಿ–ಕಾಲಗಳು ಬೇಕಿಲ್ಲ ಅದೊಂದು ಪ್ರಪಂಚಕ್ಕೆ ನೀಡುವ ಸದಾ ಸಂಜೀವನಿ ಶಕ್ತಿಯಾಗಿಯೇ ಚಿಲುಮಿಸುತ್ತಿರುತ್ತದೆ. ಇಂತಹ ಒರೆಗಲ್ಲಿಗೆ ಅಪ್ಪಟ ಪರುಷಶಕ್ತಿಯಾಗಿ ನಿಂತವರಲ್ಲಿ ಎಲ್.ಬಿ.ಕೆ. ಅಲ್ದಾಳರು ಪ್ರಮುಖರಾಗುತ್ತಾರೆ". [೨]

ಹೆಚ್ಚಿನ ವ್ಯಾಸಂಗ, ವಿದ್ಯೆಕಲಿಯದ ವ್ಯಕ್ತಿಯೊಬ್ಬ ನಾಟಕರಂಗದ ಶ್ರೇಷ್ಠ ನಾಟಕಕಾರನಾಗಿ, ನಟನಾಗಿ, ನಿರ್ದೇಶಕನಾಗಿ ರಂಗಭೂಮಿಯ ಅತ್ಯಂತ ಶ್ರೇಷ್ಠ ಗುಬ್ಬಿವೀರಣ್ಣ ಪ್ರಶಸ್ತಿಯನ್ನು ತಮ್ಮ ಮುಡಿಗೇರಿಸಿಕೊಳ್ಳುತ್ತಾರೆಂದು ಯಾರಿಗೆ ಗೊತ್ತು? ಕೊಂಪೆಯಲ್ಲಿ ಹುಟ್ಟಿದ ಹೈದನೊಬ್ಬ ಹಂಪೆಯ ಸಿಂಹಾಸನವನ್ನೇರುತ್ತಾನೆಂದು ಯಾರಾದರು ಕಣಿ ನುಡಿದಿದ್ದರೆ? ಚಹಾಮಾರಾಟ ಮಾಡುವ ವ್ಯಕ್ತಿಯೋರ್ವ ಭರತಖಂಡದ ಪ್ರಧಾನ ಮಂತ್ರಿಯಾಗುತ್ತಾನೆಂದು ಯಾರಾದರು ಊಹಿಸಿದ್ದರೆ ?

ಇದು ಸಾಧ್ಯವಾಗಿರುವುದಕ್ಕೆ ಅವರುಗಳನ್ನು ಅಭಿನಂದಿಸಲೇ ಬೇಕು.

ಆಲ್ದಾಳರ ಬದುಕು ಸಮಾಜಕ್ಕೊಂದು ಮಾದರಿ. ಇದನ್ನೇ ಅವರು ತಮ್ಮ ನಾಟಕಗಳಲ್ಲಿ ಓತಪ್ರೋತವಾಗಿ ಹರಿಯ ಬಿಟ್ಟಿದ್ದಾರೆ. ದೇವರು, ಮತ, ಪಂಥ, ಜಾತಿ, ಸಿದ್ಧಾಂತಗಳ ಇತಿಮಿತಿ, ಗಡಿಯನ್ನು ಮೀರಿ ಇಡೀ ಮಾನವ ಜನಾಂಗವನ್ನು ತಮ್ಮತ ತೆಗೆದುಕೊಂಡ ಅಂಶಗಳ ಕಡೆಗೆ ಗಮನ ಕೊಡುವುದು ಸಮಾಜದ ಹಿತ ದೃಷ್ಟಿಯಿಂದ ಒಳ್ಳೆಯದು ಎಂದು ಅರಿತಿದ್ದರಾದ್ದರಿಂದ ತಮ್ಮ ನಾಟಕಗಳಲ್ಲಿ ಹಾಗೂ ಇನ್ನೀತರ ತಮ್ಮ ಗ್ರಂಥಗಳಲ್ಲಿ ತಿಳಿಸಿ ಹೇಳಿದ್ದಾರೆ. ಆಲ್ದಾಳರ ಸಾಹಿತ್ಯದಲ್ಲಿ ಏನು ಒಳಗೊಂಡಿಲ್ಲ ಎನ್ನುವುದೇ ಕಷ್ಟ. ಎಲ್ಲಿಯೂ ಕಾಣದ್ದನ್ನು ಇಲ್ಲಿ ಸುಲಭವಾಗಿ ಕಾಣಬಹುದು. ಇವರ ನಾಟಕ ಸಾಹಿತ್ಯದಲ್ಲಿ ಶಿಕ್ಷಣ, ವೇಷಭೂಷಣ, ಸಂಗೀತ, ನಟನೆ, ಹಾಡು, ಕುಣಿತ, ಹಾಸ್ಯ, ನವರಸ, ವ್ಯಕ್ತಿತ್ವ, ಜನಪದ, ಮೌಲ್ಯ, ಪರಿಸರ, ಜಾತಿ, ಭಾಷೆ, ಸ್ವಭಾವ, ಸಜ್ಜನರು–ದುರ್ಜನರು, ಸಂಸ್ಕೃತಿ, ಬದುಕಿನರೀತಿ, ನೀತಿ  ಇತ್ಯಾದಿ ಸಾಲು– ಸಾಲಾಗಿ ನೋಡಬಹುದು. ಇದ್ದಕ್ಕಾಗಿ ಅವರು ಪಡುತ್ತಿರುವ ಕಷ್ಟ, ಕೋಟಲೆಗಳನ್ನು ಬಲ್ಲವರಾರು ? ಅದಕ್ಕಾಗಿಯೇ ಪುರಂದರದಾಸರು ಹೇಳಿರುವುದು, 'ಈಸಬೇಕು, ಇದ್ದು ಜಯಿಸಬೇಕು' ಅಕ್ಷರಶಃ ಎಲ್.ಬಿ.ಕೆ. ಆಲ್ದಾಳರು ತಮ್ಮ ಜೀವನದಲ್ಲಿ ಇದನ್ನು ಅಳವಡಿಸಿ ಕೊಂಡಿರುವುದರಲ್ಲಿ ಸಂದೇಹವಿಲ್ಲ.

ಮಾನವನ ಆತ್ಮೋದ್ಧಾರಕ್ಕೆ, ಉನ್ನತಿಗೆ, ಪ್ರಗತಿಗೆ, ಸಂಸ್ಕಾರ ಶುದ್ಧಿಗೆ ವೈರಿಯಾಗಿರುವ ಅರಿಷಡ್ವರ್ಗಗಳಾದ, ಕಾಮ–ಕ್ರೋಧ–ಮದ–ಮತ್ಸರ–ಮೋಹ–ಲೋಭಗಳನ್ನು ದೂರ ಮಾಡಬೇಕು. ಈ ಆರರಲ್ಲಿ ಯಾವುದಾದರೊಂದು ಮನುಷ್ಯನಲ್ಲಿ ಮನೆಮಾಡಿದರೆ ಸಾಕು, ಜೀವನವೇ ಅಲ್ಲೋಲ ಕಲ್ಲೋಲವಾಗುತ್ತದೆ. ಇದನ್ನೇ ಎಲ್.ಬಿ.ಕೆ. ಆಲ್ದಾಳ ಅವರು ತಮ್ಮ ನಾಟಕಗಳಲ್ಲಿ ಎತ್ತಿ ತೋರಿಸಿದ್ದಾರೆ. ಈ ಆರು ಅವಗುಣಗಳನ್ನು ತೊರೆದರೆ ಅವರ ಬಾಳು ಸುಂದರವಾಗಲಿದೆ.

ಎಲ್.ಬಿ.ಕೆ. ಆಲ್ದಾಳರು ತಮ್ಮ ವಚನಗಳ ಮುಖಾಂತರವೂ ಜನರಿಗೆ ಒಳ್ಳೆಯ ತತ್ವಗಳನ್ನು ತಿಳಿಸಿ ಹೇಳಿದ್ದಾರೆ. ಕೃತಿಗಳ ಸಾರ್ಥಕ್ಯ, ಜನರ ನಡೆನುಡಿಗಳನ್ನು ತಿದ್ದಿ ತೀಡುವುದರಲ್ಲಿಯೇ ಅಂತಹ ಕಳಕಳಿಯ ಬೋಧೆಗಳನ್ನು "ವಚನ ವಾಹಿನಿ" ಗ್ರಂಥದಲ್ಲಿ ಅಗಾಧವಾಗಿ ಕಾಣಬಹುದು.

**"ಧೂಮ ಪಾನದಿಂದ ಶ್ವಾಸಕೋಶದ ನಾಶನೋಡಯ್ಯ ।**
**ಮದ್ಯಪಾನದಿಂದ ಆರೋಗ್ಯ ಹಾಳಾಗುವುದಯ್ಯ ।**
**ವೇಶ್ಯೆಯರ ಸಂಗದಿಂದ ಏಡ್ಸ್‌ಗೆ ಬಲಿಯಾಗಬೇಕಾದೀತಯ್ಯ ।**
**ಈ ಮೂರು ಮಾರ್ಗಕ್ಕೆ ಮಾರು ಹೋಗದಿದ್ದಡೆ**
**ನೀನೆ ಕಾಲನ ಕಾಲನಯ್ಯ ತಪೋವನ ಮಠಾಧೀಶ ।** ॥೪೯॥

**ಸಂಸ್ಕೃತಿಯ ಹರಿಕಾರ ಎಲ್.ಬಿ.ಕೆ. ಆಲ್ದಾಳ :**

'ರಂಗ ಸಂತ ಜಂಗಮ' ಆಲ್ದಾಳರ ಅಭಿನಂದನ ಗ್ರಂಥಕ್ಕೆ ಲೇಖನ ಬರೆದಿರುವ ಗುಲಬರ್ಗಾದ ಲೇಖಕ ಶ್ರೀ ವಿಶ್ವನಾಥ ಮಾಸ್ತರ ಬೆಳಗುಂಪಿಯವರು, "ಎಲ್.ಬಿ.ಕೆ. ಆಲ್ದಾಳರು ಕವಿಗಳು, ನಾಟಕಕಾರರು ಅಷ್ಟೇ ಅಲ್ಲ ಕಷ್ಟ–ಸುಖಗಳನ್ನು ಸಮನಾಗಿ ಕಂಡ ಸರಳ–ಸಜ್ಜನಿಕೆಯ ಸಾಕಾರ ಮೂರ್ತಿ, ಕನ್ನಡನಾಡು, ಕೋಗಿಲೆಗಳ ಬೀಡು, ಕವಿಗಳ ಗೂಡು, ಶರಣರ ನಾಡು

ಹೆಗ್ಗಳಿಕೆ ಪಡೆದಿರುವ ಈ ನಾಡಿನಲ್ಲಿ ಮೂಕ ಪ್ರೇಕ್ಷಕರಾಗಿ, ವೀಕ್ಷಕರಾಗಿ, ರಂಗ ಸೃಷ್ಟಿಯನ್ನು ಕಂಡುಂಡು, ಸೂಕ್ಷ್ಮತೆಯ ಸೌಗಂಧದ ತಮ್ಮ ಲೇಖನಿಯಿಂದ ಸಾಮಾಜಿಕ ನಾಟಕಗಳ ಆದಿಯಿಂದ, ಅಧ್ಯಾತ್ಮದ ಅನುಸಂಧಾನದ ಶರಣ ಸಾಹಿತ್ಯ ಸೇವೆಯೇ ಶರಣರ ಸೇವೆ ಎಂದು ಭಾವಿಸಿದ್ದಾರೆ. ಅಂತೆಯೇ ತಮ್ಮ ನಾಟಕ ಜೇವರ್ಗಿಯ ಷಣ್ಮುಖ ಶಿವಯೋಗಿಗಳು, ಹಾರಕೂಡ ಚೆನ್ನಬಸವೇಶ್ವರ ಮಹಾತ್ಮೆ, ಅಬ್ಬೆತುಮಕೂರ ವಿಶ್ವಾರಾಧ್ಯರ ಮಹಾತ್ಮೆ, ಶ್ರೀ ಶ್ರೀ ಶ್ರೀ ಅಳ್ಳೊಳ್ಳಿ ಅಯ್ಯಪ್ಪಯ್ಯ ಮಹಾತ್ಮೆ ಹೀಗೆ ಹಲವಾರು ಮಹಾತ್ಮರ ಶರಣರ ಮತ್ತು ಶಿವಯೋಗಿಗಳ ಚರಿತ್ರೆಗಳಿಗೆ ನಾಟಕರೂಪ ನೀಡುತ್ತ ಸಾಗಿರುವ ಶರಣಸಾಹಿತಿ ಆಲ್ದಾಳರು, 'ಚಕೋರಂಗೆ ಚಂದ್ರಮನ ಬೆಳಗಿನಚಿಂತೆ ಎಂಬ ವಚನದಂತೆ ಅವರಿಗೆ ಶರಣ ಸಾಹಿತ್ಯವನ್ನೇ ಸಮಗ್ರ ಗೊಳಿಸುವ ಚಿಂತೆ. ಇವರ ಆಚಾರ, ವಿಚಾರ, ಬರಹ, ನಾಟಕ ನಡೆನುಡಿಗಳನ್ನು ಗಮನಿಸಿದಾಗ ಅವರೊಬ್ಬ ವಿಶ್ವಮಾನವ ಸಂಸ್ಕೃತಿಯ ಹರಿಕಾರವೆಂಬುದು ಎದ್ದು ಕಾಣುತ್ತದೆ. 'ಆಡಿ ಮಾಡದವ ಅಧಮ' ಆಡಿ ಮಾಡುವವ ಮಧ್ಯಮ, ಆಡದೇ ಮಾಡುವ ಅವರ ವ್ಯಕ್ತಿತ್ವದ ಪ್ರತಿ ಬಿಂಬದಲ್ಲಿ ಕಂಡಿದ್ದೇನೆ. ಹೀಗೆಂದೂ ಯಾರಿಗೂ ಭಾರವಾಗದೇ ಬಾಳುತ್ತಾ ಬಂದವರು, ಬಾಳಲ್ಲಿ ನೊಂದವರಿಗೆ ನೆರವಾಗುತ್ತ ಬಂದವರು ಇವರೊಬ್ಬ ಸಾಧಕ ತಪಸ್ವಿಗಳೆಂದು ಕರೆದರೂ ತಪ್ಪಾಲಿಕ್ಕಿಲ್ಲ". [೩]

ಆಲ್ದಾಳರು ಬಹುಮುಖ ಪ್ರತಿಭೆಯುಳ್ಳವರು, ದೇಶದ ಇಂದಿನ ಧಾರ್ಮಿಕ, ಸಾಮಾಜಿಕ ರಾಷ್ಟ್ರೀಯ ಸಮಸ್ಯೆಗಳ ಬಗ್ಗೆ ಕೂಲಂಕುಷವಾಗಿ ಅಧ್ಯಯನ ಮಾಡಿ ಅವುಗಳ ಬಗ್ಗೆ ತಮ್ಮ ವಿಚಾರವನ್ನು ವ್ಯಕ್ತಪಡಿಸುತ್ತಿದ್ದರು ಎಂಬುದು ಅವರ ನಾಟಕಗಳ ಅಧ್ಯಯನದಿಂದ ಕಾಣಬಹುದು. ದೇಶವನ್ನು ಪೀಡಿಸುತ್ತಿರುವ ಅನೈತಿಕತೆ ಮತ್ತು ಅನೀತಿಯ ಬಗ್ಗೆ ಅವರು ಕಳವಳಿಸುತ್ತಾರೆ. ನೈತಿಕ ಶಿಕ್ಷಣದ ಅಗತ್ಯದೊಂದಿಗೆ ಧಾರ್ಮಿಕ ಶ್ರದ್ಧೆಯನ್ನು ಬಲಗೊಳಿಸಲು ಎಷ್ಟುಸಾಧ್ಯವೋ ಅಷ್ಟು ಕಾರ್ಯನಡೆಸಬೇಕೆಂಬ ಉತ್ಕಟ ಇಚ್ಛೆ ಅವರದ್ದಾಗಿದೆ. ಹಳ್ಳಿ, ಹಳ್ಳಿ, ಸುತ್ತಾಡಿ ಬಂದಿದ್ದಾರೆ. ಅಲ್ಲದೆ ಶರಣ, ಅಧ್ಯಾತ್ಮಿಕ ಬದುಕನ್ನು ತಿಳಿದುಕೊಂಡೇ ಶರಣರನ್ನು ಕುರಿತು, ದೈವಭಕ್ತಿಯ ಮಹಿಮಾಪುರುಷರ ಕುರಿತು ನಾಟಕ ರಚಿಸಿದ್ದಾರೆ. ಅನುಭಾವಿ ತತ್ವಪದಕಾರರಿಂದ ಕಡಕೋಳಮಡಿವಾಳಪ್ಪ, ಮೋಟ್ನಹಳ್ಳಿ ಹಸನಸಾಬ, ಕೋಳೂರು ಕೊಡಗೂಸು ಇವರ ಕುರಿತು ನಾಟಕ ರಚಿಸಿ ಸಾಹಿತ್ಯದ ಮೂಲಕ ಧರ್ಮ ಸಂಸ್ಕೃತಿಗೆ ನೀರೆರೆದು ಹುಲುಸಾಗಿ ಬೆಳೆಸುವಲ್ಲಿ ರಂಗ ನಾಟಕಗಳ ಮೂಲಕ ಪ್ರಯತ್ನಿಸಿದ್ದಾರೆ.

"ಅದರಂತೆ ಪಾರಮಾರ್ಥಿಕವೆಂಬ ಪವಿತ್ರ ನೀರನ್ನು ಕುಡಿದು ಬೆಳೆದ ಹೆಮ್ಮರ ಅದು. ಅಂಥಾ ಒಂದು ಹೆಮ್ಮರ ಸಗರನಾಡಿನಲ್ಲಿ ಜನಿಸಿದ್ದು ಸಾಗರದಷ್ಟೇ ಸಂತೋಷದ ವಿಷಯವೇ ಸರಿ, ಧಾರ್ಮಿಕ ವಿಷಯದ ಬೀಜಗಳು ಧಾರಾಳವಾಗಿ ಜನರ ಮನದಲ್ಲಿ ಬಿತ್ತಲು ಹಸನಾದ ರಂಗಭೂಮಿಯನ್ನು ಕೊಂಡು ಹಸಿರಾದ ಪೈರನ್ನು ಬೆಳೆದರು.

ಕಲಾರಂಗದ ಸಂಪತ್ತಾಗಿರುವ ಆಲ್ದಾಳರು ಪಟ್ಟಶ್ರಮ ಅಪಾರ. "ಇತಿಹಾಸದಲ್ಲಿ ಪರಿಸರವಾದಿಗಳಿಗೆ ಮರಬೆಳೆಸುವ ಚಿಂತೆ, ಸಮಾಜದ ನ್ಯೂನತೆಗಳನ್ನು ಸರಿಪಡಿಸುವುದು ಸುಧಾರಕನಿಗೆ ಚಿಂತೆ, ಕಲಾರಂಗದ ಸಾಹಿತ್ಯ ಬೆಳೆಸುವಚಿಂತೆ ಆಲ್ದಾಳರಿಗೆ. ಸಾಹಿತ್ಯದ ಚಂದ್ರನಾಗಿ, ಕಲಾರಂಗದ ಇಂದ್ರನಾಗಿ ಆಲ್ದಾಳರು ಕರ್ನಾಟ ತುಂಬ ಮೆರೆಯುತ್ತಿರುವ ಕಲಾದಿಗ್ಗಜರಲ್ಲೊಬ್ಬರು. ಅವಗುಣಗಳಿಗೆ ಒಳಗಾಗದೇ ಶರಣ ಸಂಸ್ಕೃತಿಯನ್ನು ಸಾಹಿತ್ಯದಲ್ಲೂ ನಾಡಿನುದ್ದಗಲಕ್ಕೂ ನಾಟಕ ಮೌಲ್ಯವನ್ನು ಬಿತ್ತರಿಸುತ್ತಾ ಸಾಗಿದ ಸಾಧುಜೀವಿ ಮೌಲ್ವಿಯೋ...? ಮಹಾತ್ಮನೋ ? ಶರಣನೇ ಎಂದು ವಿಚಾರಿಸುತ್ತಿದ್ದರೆ ಕೊನೆಗೆ ಪಚನವಾಗುವುದು ಅಲ್ಲಾನ ಅನುಗ್ರಹದಿಂದ ಅವತರಿಸಿದ ಶರಣ ಶಿಶುವೆಂದು.

**ಹಠವಿಲ್ಲದೆ ಮಠ ತಿರುಗಿದ**
**ವರವಿಲ್ಲದೆ ಮರವಾದ**
**ಜಟಿಲ ಸಮಸ್ಯೆಯಲ್ಲೂ ಜಗಜ್ಜಾಹೀರನಾದ**
**ಮಾತೃಸೇವೆಗೈದು ಮಗನಾದ**
**ಎಲ್ಲಾಬಲ್ಲವನಾಗಿ ಅಲ್ಲಾಹನದಯೆ ಎಂದ ಸಾಹಿತ್ಯಸಿಂಧೂ ಸಂತನಲ್ಲವೆ ?**

ಕಲೆಗಾಗಿ ದೇಹದಂಡಿಸಿ ಮನವನ್ನು ಹರಿಗೊಡದೆ ಇಂದ್ರಿಯಗಳ ನಿಗ್ರಹಿಸಿದ ಕಲಾಚಂದ್ರ, ಸಾಹಿತ್ಯದ, ಇಂದ್ರಕಲಾತಪಸ್ವಿಯೆಂದರೆ ತಪ್ಪೆ? ತಪ್ಪಲ್ಲ ಒಪ್ಪುವ ಮಾತು" [೧೮] ವಿಶ್ವದೇವನಿರ್ಮಿತ ಟಂಕಶಾಲೆ, ಇಲ್ಲಿ ನಾವೆಲ್ಲಾ ಚಲಾವಣೆಯಲ್ಲಿರುವ ನಾಣ್ಯಗಳಾಗಬೇಕು, ಖೊಟ್ಟಿನಾಣ್ಯಗಳಾಗಬಾರದು.

ಆಲ್ದಾಳರ ಸಾಹಿತ್ಯದಲ್ಲಿ ಧೈರ್ಯ, ಕ್ಷಮಾಗುಣ, ಸ್ವನಿಯಂತ್ರಣ, ಕದಿಯದಿರುವುದು, ಸ್ವಚ್ಛತೆ, ಇಂದ್ರಿಯನಿಗ್ರಹ, ಬೌದ್ಧಿಕತೆ, ವಿದ್ಯೆ, ಸತ್ಯಸಂಧತೆ ಹಾಗೂ ಕ್ರೋಧನಿಗ್ರಗಳೆಂಬ ಧರ್ಮದ ಹತ್ತು ಲಕ್ಷಣಗಳನ್ನು ಸಮಾಜದಲ್ಲಿ ಮೂಡಿಸಲು ನಾಟಕಗಳ ಮೂಲಕ ಬಿಂಬಿಸಿದ್ದಾರೆ. ಇದು ಸಮಾಜದ ಅಭಿವೃದ್ಧಿಯ ಪ್ರಕ್ರಿಯೆಗೆ ವೇಗೋತ್ಕರ್ಷವನ್ನು ನೀಡುತ್ತಿದೆ. ಹೀಗಾಗಿ ಆಲ್ದಾಳರ ನಾಟಕಗಳು ಬೆಳಗಿವೆ, ಬೆಳಗುತ್ತಲೇ ಇವೆ. ಪ್ರೇಕ್ಷಕರ ಮಹಾಪೂರ ಹರಿದು ಬರುತ್ತಿವೆ. ಇದಕ್ಕೆಲ್ಲ ಮುಖ್ಯಕಾರಣ, ನಮ್ಮ ಸಂಸ್ಕೃತಿ, ಪರಂಪರೆಗಳನ್ನು ಮರೆಯದೆ ಎಚ್ಚರದಿಂದ ಭಾರತಿಯತೆಯನ್ನು ಕಾಯುವಲ್ಲಿ ತೋರುತ್ತಿರುವ ಸಹನಾಭಾವ, ಸಂಯಮಗಳು, ನಾವೀಗ ಯೋಗ್ಯಗುರಿಯೆಡೆಗೆ ಸಾಗಬೇಕಾಗಿದೆ. ಭ್ಯವಿಷ್ಯವಂತೂ ಖಂಡಿತ ಉಜ್ವಲವಾಗಿದೆ. ಅದನ್ನು ನಾವು ಸ್ವಾಗತಿಸಬೇಕು.

ವೃತ್ತಿ ರಂಗಭೂಮಿಯ ನಾಟಕಗಳೇ ಮರೆಯಾಗುತ್ತಿರುವ ಈದಿನಗಳಲ್ಲಿ ಅರ್ಥವತ್ತಾದ ರಂಗಗೀತೆಗಳು, ಜಾನಪದಗೀತೆಗಳು ಮರೆಯಾಗುತ್ತಾ ಅಶ್ಲೀಲ ಸಾಹಿತ್ಯದ ಅಬ್ಬರದ ಹಾಡುಗಳ ಪೈಶಾಚಿಕ ನರ್ತನವೇ ನಾಡಿನ ನಾಲ್ಕೆಡೆಯೂ ಮೆರೆಯುತ್ತಿರುವ ಈ ದುರ್ದಿನಗಳಲ್ಲಿ, ಶಾಸ್ತ್ರೀಯ ಸಂಗೀತ, ರಂಗಗೀತೆಗಳ ಹಾಗೂ ಜಾನಪದ ಗೀತೆಗಳ ಸಂಸ್ಕೃತಿಯನ್ನು ಎಲ್.ಬಿ.ಕೆ ಆಲ್ದಾಳ ಅವರು ತಮ್ಮ ನಾಟಕಗಳಲ್ಲಿ ಹೆಚ್ಚಾಗಿ ಅಳವಡಿಸಿಕೊಂಡಿರುವುದು ಮೆಚ್ಚಲೇಬೇಕು. ಇದನ್ನು ಪ್ರೋತ್ಸಾಹಿಸಬೇಕೆದದ್ದು ಕನ್ನಡಿಗರ ಪ್ರಥಮ ಕರ್ತವ್ಯವಾಗಿದೆ.

"ಸಂಸ್ಕೃತಿ ಸತ್ತರೆ ಕಲೆಯೇ ಸತ್ತಂತೆ ನಾಗರಿಕತೆಯ ವೈಭವದಲ್ಲಿ ಸಂಸ್ಕೃತಿಯನ್ನು, ಶುದ್ಧ ಸಂಗೀತವನ್ನು ನಾಶಗೊಳಿಸುವುದು ಅಕ್ಷಮ್ಯ, ಅಪರಾಧ, ನಾಗರಿಕತೆ ಬಾಹ್ಯ ಸೌಂದರ್ಯವಾದರೆ ಸಂಸ್ಕೃತಿ ಜೀವ ಮತ್ತು ಗರ್ಭಗುಡಿಯೊಳಗಿರುವ ಪೂಜಾರ್ಹದೈವವೇ ಸಂಸ್ಕೃತಿ".

ಕಲೆ ಸಕಲರನ್ನು ಕೈ ಬೀಸಿಕರೆಯುತ್ತದೆ, ಆದರೆ ಕೆಲವರನ್ನು ಮಾತ್ರ ತನ್ನಲ್ಲಿರಿಸಿಕೊಳ್ಳುತ್ತದೆಂಬ ಉಕ್ತಿಗೆ ಎಲ್.ಬಿ.ಕೆ ಸ್ಪಷ್ಟ ನಿದರ್ಶನ ರಂಗಭೂಮಿಯಲ್ಲಿ ಕಲಾವಿದನಾಗಿ ಮತ್ತು ನಾಟಕ ಮಾಸ್ತರನಾಗಿ ಅವರೊಬ್ಬ ಕಲೆಗಾರ, ನಾಟಕಗಳ ಮತ್ತು ಕವಿತೆಗಳ ಬರಹಗಾರರಾಗಿ ಅವರೊಬ್ಬ ಸಾಹಿತಿ, ಕಲಬುರ್ಗಿ ಜಿಲ್ಲೆಯ ನಾಟಕಕ್ಷೇತ್ರ, ರಂಗಭೂಮಿಯನ್ನು ಶ್ರೀಮಂತಗೊಳಿಸಿ ಅದನ್ನು ಉಳಿಸಿ, ಬೆಳೆಸಿಕೊಂಡುಬಂದ ಸಾಂಸ್ಕೃತಿಕ ರಾಯಭಾರಿ ಎಂದರೆ ಆಲ್ದಾಳರು ! ಅವರ ಈ ಕೊಡುಗೆ ನಾಟಕರಂಗಕ್ಕೆ ಅಪೂರ್ವಕಾಣಿಕೆ.

**ಅತಿಥಿದೇವೋಭವ ಎಂದ ಪುಣ್ಯಾತ್ಮ ಎಲ್.ಬಿ.ಕೆ : ಮನೆಯಲ್ಲಿ ಸಂಶೋಧಕಿ**

ಎಲ್.ಬಿ.ಕೆ. ಆಲ್ದಾಳ ಅವರು ಕುರಿತು ಎಷ್ಟು ಬರೆದರೂ, ಹೇಳಿದರೂ ಇನ್ನೂ ಬರೆಯುವುದು, ಹೇಳುವುದೂ ಉಳಿದೇ ಇರುತ್ತದೆ. ಮುಖ್ಯವಾಗಿ ಇವರು ಜನಪದರಿಗಾಗಿ, ಜನಪದರೀತಿಯಲ್ಲಿ ಜನಪದಯೋಗಿಯಾಗಿ ಜ್ಯೋತಿ ರೂಪದಲ್ಲಿ ಮಾರ್ಗದರ್ಶನ ಮಾಡಿದ, ಮಾಡುತ್ತಿರುವ ಮಹಾನುಭಾವರು, ತ್ಯಾಗ ಶೀಲರು ಹಾಗೂ ಅತಿಥಿಗಳನ್ನು ಆಧರಿಸುವವರಲ್ಲಿ ಅಗ್ರಗಣ್ಯರು ಎಂಬುದಕ್ಕೆ ಕೆಳಗೆ ಬರೆದ ಸಾಲುಗಳೇ ಸಾಕ್ಷಿಯಾಗಿ ನಿಲ್ಲುತ್ತವೆ, ಅಲ್ಲದೆ ಆಲ್ದಾಳರ ದಿವ್ಯ ಚೇತನ ಪರರಿಗಾಗಿ ಎಷ್ಟು ಗೌರವದಿಂದ ಕಾಣುತ್ತದೆ ಎನ್ನುವುದಕ್ಕೆ ಈ ಸಂಧರ್ಭ ಸ್ಮರಣೀಯ!

"೨೦೧೪ರ ಕ್ಯಾಲೆಂಡರ ಹೊಸ ವರ್ಷ ಹಾಗೂ ರೈತರ ಹೊಸ ವರ್ಷ ಎಂದೇ ಹೆಸರಾದ ಎಳ್ಳಮವಾಸ್ಯೆ ಎರಡು ಒಂದೇ ದಿನ ಆಕಸ್ಮಿಕ ಎಂಬಂತೆ ಕೂಡಿಬಂದಿರುವುದರಿಂದ ರೈತಸಮೂಹ ಮತ್ತು ಯುವಕ–ಯುವತಿಯರಲ್ಲಿ ಹೊಸ ಉತ್ಸಾಹ ಗರಿಗೆದರಿದೆ. 'ಭೂಮಿ ತಾಯಿಗೆ ವಿಶೇಷ ಪೂಜೆ ಸಲ್ಲಿಸುವ ಸಂಭ್ರಮದ ಎಳ್ಳಮವಾಸ್ಯೆಗೆ ಎಲ್ಲರೀತಿಯ ಸಿದ್ಧತೆಗಳು ಎಲ್ಲರಂತೆ ಎಲ್.ಬಿ.ಕೆ. ಅವರ ಕುಟುಂಬ ವರ್ಗದಲ್ಲೂ ನಡೆದಿತ್ತು. ಗ್ರಾಮೀಣರ ಹಬ್ಬ ಎಂದೇ ಕರೆಯಲ್ಪಡುವ ಎಳ್ಳಮವಾಸ್ಯೆ ಸಿದ್ದತೆ ಭರಪೂರವಾಗಿತ್ತು, ಶೇಂಗಾ, ಎಳ್ಳಿನ–ಹೂರಣ ಹೋಳಿಗೆ, ಸಜ್ಜೆರೊಟ್ಟಿ, ಜೋಳದ ಕಡುಬು, ಶೇಂಗಾ– ಎಳ್ಳಿನ ಚಟ್ನಿ, ಭಜ್ಜಿ, ಬೆಲ್ಲದ ಕರಚಿಕಾಯಿ ಸೇರಿದಂತೆ ನಾನಾ ತರದ ಅಡುಗೆ ತಯಾರಿಯಾಗಿತ್ತು.

ಮಾರ್ಗಶಿರ ಮಾಸದಲ್ಲಿ ಚಳಿ ಎಳ್ಳುಕಾಳಿನಷ್ಟು ತಗ್ಗಿ, ಅಷ್ಟೇ ಪ್ರಮಾಣದಲ್ಲಿ ಬಿಸಿಲು ಹೆಚ್ಚುವದರಿಂದ ಎಳ್ಳುಕಾಳಿನ ಅಮವಾಸ್ಯೆ ಎಂದು ಹೇಳಲಾಗುತ್ತದೆ. ಹೊಲದಲ್ಲೀಗ ನಿಂತಿರುವ ಜೋಳದ ಹಾಲ್ದೆನೆ ಯಾಡುವುದರಿಂದ ಭೂದೇವಿ ಗರ್ಭಿಣಿಯಾಗಿರುವಳು ಎಂದು ಅರ್ಥೈಸಲಾಗುತ್ತದೆ. ಹಸಿರು ಬಳೆ, ಹಸಿರು ಕುಪ್ಪುಸ, ಹಸಿರು ಸೀರೆ ತೊಡೆಸಿ, ಅರಿಸಿಣ, ಕುಂಕುಮ, ಹೂವು ಮುಡಿಸಿ ಪೂಜಿಸುತ್ತಾರೆ. ಪಾಂಡವರಿಗೆ ಮತ್ತು ಲಕ್ಷ್ಮಿಗೆ ನೈವೇದ್ಯ ಅರ್ಪಿಸಿ ರೈತವರ್ಗ ಧನ್ಯರಾಗುತ್ತಾರೆ.

"ಯವ್ವಾ....ಒಕ್ಕಲಿಗ್ಯಾನ ಹೆಂಡತಿನಾ, ಚರಗ ಹೊಡೀ ಬೇಕ ಎಳ್ಳಮಾಸಿದಿನ... " ಎಂದು ಜನ ಪದರ ಹಾಡಿನಂತೆ ರೈತರೆಲ್ಲರೂ ಕುಟುಂಬಸಮೇತ ಪವಿತ್ರ ಮತ್ತು ವಿಶಿಷ್ಟ ಎಳ್ಳಮವಾಸ್ಯೆಯನ್ನು ಹೊಸ ವರ್ಷದಂದು ಆಚರಿಸುವ ಸಂಭ್ರಮ ನೋಡುವಂತಿರುತ್ತದೆ. ಒಳ್ಳೆಯ ಫಸಲು ಕೈಗೆ ಬರಲಿ ಎಂದು ಹೊಲ ಸುತ್ತಾಡಿ ಚರಗ (ದೇವಿನ್ಯೆವೇದ್ಯ) ಸಿಂಪಡಿಸಿ– ಸಿಂಪಡಿಸಿ ಪ್ರಾರ್ಥಿಸುತ್ತಾರೆ ಈ ವೈಭವ ನೋಡಲು ನನಗೆ ಎರಡು ಕಣ್ಣುಗಳು ಸಾಲದಾದವು, ಎಲ್.ಬಿ.ಕೆ ಅವರ ಮಳ್ಳಿಗ್ರಾಮದ ಹತ್ತಿರದ ನಾಗರಾಳದ ಜಮೀನಿನಲ್ಲಿ ನಡೆದ ಸರಳ–ಸುಂದರ ಅಮವಾಸ್ಯೆಯ ಸಂಭ್ರಮಕ್ಕೆ ಸಾಕ್ಷಿಯಾದ ನಾನು ಹಾಗೂ ಎಲ್.ಬಿ.ಕೆ. ಅವರ ಕುಟುಂಬ ವರ್ಗದವರ ಸಂತೋಷಕ್ಕೆ ಮಿತಿಯೇ ಇರಲಿಲ್ಲ. ಇನ್ನೂ ಊಟದ ಬಗ್ಗೆ ಹೇಳುವುದೆಂದರೆ ಗ್ರಾಮೀಣರ ವಿವಿಧ ಪದಾರ್ಥಗಳು ಸಿಹಿ ಹಾಗೂ ಕಾರದ ತಿಂಡಿಗಳು ಸೇವಿಸಿ ಹೊಟ್ಟೆ ಬಿರಿಯುವಂತಾಯಿತು. ಆಲ್ದಾಳರು ನನ್ನ ಸಹಿತ ಬಂದವರೆಲ್ಲರಿಗೂ ಊಟಬಡಿಸುವುದರಲ್ಲೇ ಆನಂದ ಪಡುತ್ತಿದ್ದರು, 'ಸರ್' ನೀವು ನಮ್ಮೊಂದಿಗೆ ಊಟಕ್ಕೆ ಕುಳಿತು ಕೊಳ್ಳಿ, ಹೊಟ್ಟೆ ಹಸಿದಿಲ್ಲವೆ ? ನಿಮಗೆ ಊಟ ಬೇಕಿಲ್ಲವೆ ? ಎಂದು ಪ್ರಶ್ನಿಸಿದಾಗ, ಕೂಡಲೇ ನಗುತ್ತ, ಪುಣ್ಯಪುರುಷ ಸಿದ್ಧರಾಮನ ವಚನದ ಸಾಲುಗಳನ್ನೇ ಮುಂದಿಟ್ಟರು–

**ಮಾಮರದ ಫಲವೆಲ್ಲ ಮರವೇ ತಿನ್ನುವುದೇನು ?**
**ಗೋವು ಕರೆಯುವ ಹಾಲು ಗೋವೆ ಕುಡಿಯುವದೇನು ?**
**ನೀವುಂಡು ನಲಿಯುತಿರೆ ಹೊಟ್ಟೆ ಹಸಿವಿಲ್ಲನಗೆ**
**ನೀವುಣದೆ ದೂರವಿರೆ ಹೊಟ್ಟೆ ನೋಯುವುದೆನಗೆ** [೫]

ಭಲೆ! ಭಲೆ! ಅತಿಥಿಗಳನ್ನು ದೇವರೆಂದು ಕರೆಯುತ್ತಾರೆ ಎಂಬುದು ಮಾತ್ರ ಎಲ್ಲರೂ ಬಲ್ಲರು, ಆದರೆ ಅತಿಥಿಗಳನ್ನು ಪೂಜ್ಯಭಾವನೆಯಿಂದ ನೋಡಿಕೊಂಡ ಎಲ್.ಬಿ.ಕೆ. ಆಲ್ದಾಳ ಬಗ್ಗೆ ಏನು ಹೇಳಬೇಕು ಶಬ್ಧಗಳೇ ಬಾಯಿಗೆ ಬರುತ್ತಿಲ್ಲ, ಆ ಹೆತ್ತ ತಾಯಿ-ತಂದೆ ಪುಣ್ಯವಂತರು ಇದುವೇ ಆಲ್ದಾಳರು ಅನುಸರಿಸಿಕೊಂಡ ಬಂದ ಸುಸಂಸ್ಕೃತಿ, ಇದನ್ನೇ ತಮ್ಮ ಸಾಹಿತ್ಯದಲ್ಲಿ ಅದರಲ್ಲೂ ಅವರ ನಾಟಕ ಕೃತಿಗಳಲ್ಲಿ ಬಳಸಿಕೊಂಡು ಬಂದಿದ್ದಾರೆ.

ರೈತವರ್ಗದ ಹಬ್ಬಗಳು, ಹರಿದಿನಗಳು ಅದರಲ್ಲಿ ಹುದುಗಿರುವ ಸಂಸ್ಕೃತಿಯನ್ನು ನಾವಿಲ್ಲಿ ಪರಿಚಯಿಸಿಕೊಂಡೆವು. ರೈತ ಸಮೂಹದ ಆಚರಣೆಗಳು, ನಂಬಿಕೆಗಳು, ಸಂಪ್ರದಾಯಗಳ ರೀತಿಗಳು ಮೊದಲಾದವುಗಳನ್ನು ವಿವರವಾಗಿ ಇದ್ದಕ್ಕಿದ್ದಂತೆ ಅವರ ಬದುಕಿನಿಂದ ಯತಾವತ್ತಾಗಿ ಎತ್ತಿಡಲಾಗಿದೆ. ೨೦೧೪ ಹೊಸ ವರ್ಷ ಮತ್ತು ಎಳ್ಳಮವಾಸೆಯ ಮಹತ್ವಗಳೆರೆಡನ್ನು ನಾನು ಕಂಡುಂಡು ಎಲ್.ಬಿ.ಕೆ. ಆಲ್ದಾಳ ಹಾಗೂ ಅವರ ಕುಟುಂಬ ವರ್ಗದ ಜೊತೆ ಆಚರಿಸಿದ್ದು ಗ್ರಾಮೀಣರ ಪ್ರೀತಿ- ವಿಶ್ವಾಸಗಳಿಗೆ ಪಾತ್ರವಾದುದು ಜೀವನದಲ್ಲಿ ಅದು ಒಂದು ಮೈಲುಗಲ್ಲಾಗಿ ಶಾಶ್ವತವಾಗಿ ಮನದಂಗಳದಲ್ಲಿ ನೆಲೆಸುವುದಂತು ಗಟ್ಟಿ.

"ನೋಡು ತಂಗಿ, ನನ್ನಾಕೆಗೆ, ನಾನಂದ್ರ ಬಹಳಪ್ರೀತಿ, ಹಗಲು-ರಾತ್ರಿ ನನ್ನದೆ ಚಿಂತೆ ಅವಳಿಗೆ, ಎಲ್ಲಿ ಉಂಡನೊ, ಎಲ್ಲಿ ಉಪವಾಸ ಬಿದ್ದನೊ ಎಂದು ನಿತ್ಯ ಜಪಿಸುತ್ತಾಳರಿ, ನಾನೇನು ಹ್ಯಾಂಗಮಾಡಲಿ, ನನಗೂ ಜನಬೇಕು, ನಾಟಕಬೇಕು, ಸಮಾಜಬೇಕು, ಮಠಗಳು ಬೇಕು, ಮಠದಾಗಿನ ಅಪ್ಪವರು ಬೇಕು. ಅವರಕೃಪೆ ಬೇಕು, ಅವರಲ್ಲಿ ನನಗಾಶ್ರಯ ಬೇಕು ಇದರೊಂದಿಗೆ, ಮನೆ, ಸಂಸಾರ ಹ್ಯಾಗ ಬಿಡುತ್ತೆ ನೀವೇ ಹೇಳಿ ತಂಗಿ" ಎಂದು ಮಾತು ಶುರುಮಾಡಿದ ಎಲ್.ಬಿ.ಕೆ ಆಲ್ದಾಳರು ತಮಗಿರುವ ಸಮಸ್ಯೆ ಬಿಚ್ಚಿಟ್ಟರು. 'ಮನೆಯೊಂದಿಗೆ ಜೋತು ಬಿದ್ದರೆ ನಿತ್ಯ ಜೀವನ, ಹೊಟ್ಟೆ-ಬಟ್ಟೆ ಹ್ಯಾಂಗಮಾಡಬೇಕು', "ಮಳೆ-ಬೆಳೆ ಇದ್ದರೆ ಹಳ್ಳಿ ಚಂದ, ಅದಿಲ್ಲದಿದ್ದರೆ ಗೂಳೆ ಹೋಗುವುದೊಂದೆ ನಮಗೆ ದಾರಿ. ಇದೆಲ್ಲ ಹೆಣಮಕ್ಕಳಿಗೆ ಹ್ಯಾಂಗ ಹೇಳಬೇಕು, ಸಂಸಾರ ಅಂದ ಮೇಲೆ ಸಾವಿರ ಸಂಕಟ ಇರುತ್ತವೆ ತಂಗಿ ನಿನಗಾದರೂ ನಾನು ಹೇಗೆ ತಿಳಿಸಲಿ" ಎಂದು ಅಲ್ಲಿದ್ದವರ ಮಧ್ಯೆ ನನ್ನನ್ನು ಉದ್ದೇಶಿಸಿ ತಮ್ಮ ಸುಖಃ ದುಖ ಬಿಚ್ಚಿಟ್ಟರು.

**ವಿದ್ಯೆವ ಕಲಿಬೇಕ। ಹದ್ದನೊಳಗಿರಬೇಕ।**
**ವಿದ್ಯೆ ವಿನಯದ ಮಣಿ ಮುಕುಟ। ನನತಂಗಿ।**
**ವಿದ್ಯೆಯಿಂದಲೇ ಸಕಲ ಸಂಪದವು।** ಎಲ್.ಬಿ.ಕೆ.ಆಲ್ದಾಳ ಜನಪದಜೇನು [೬]

ಆಲ್ದಾಳ ಅವರು "ತಂಗಿ" ಎಂದು ಬಾಯಿತುಂಬಿ ಸಂಬೋಧಿಸಿದಾಗ ನನಗೆ ಅಪಾರ ಸಂತೋಷವಾಯಿತು. ಅವರ ನಯ-ವಿನಯ, ಮಾತಿನಲ್ಲಿ ತೋರುತ್ತಿರುವ ಜಾಣ್ಮೆಗಳು ಸುಸಂಸ್ಕೃತಿಯ ಹೊನ್ನ ಕಿರಣಗಳಾಗಿದ್ದವು ಎಂದರೆ ಅತಿಶಯೋಕ್ತಿಅಲ್ಲ.

**ಹೆತ್ತವರ ಮನೆಯಿಂದ। ಅತ್ತೆಯ ಮನೆಗ್ಹೋಗು।**
**ಮುತ್ತಿನ ಸೊಸೆಯಾಗಿ ನೀ ಬಾಳು। ನನ ಗೆಳತಿ।**
**ಉತ್ತಮ ಸಂಸ್ಕೃತಿಯು ನೀ ನೀಡು ॥**

ಜನಪದ ಜೇನು ಆಲ್ದಾಳ

ಈ ತ್ರಿಪದಿಯೊಂದಿಗೆ ಮುಂದುವರಿಸಿದ ಮಾತಿನಲ್ಲಿ ಆಲ್ದಾಳರು, "ನಾನೀವತ್ತು ಶುಭದಿನ ಹಾಗೂ ಹೊಸವರ್ಷಗಳೆರಡು ಮೇಳೈಸಿ ಬಂದಿದ್ದ ಸಂದರ್ಭದಲ್ಲಿ ಸಂಶೋಧನೆಗೆ ನೆರವಾಗಲು ನನ್ನ ಜೀವನದ ಕೆಲವು ವಿಚಾರಗಳನ್ನು ಹೇಳ ಬಯಸುತ್ತೇನೆ". ವಿಜಾಪೂರ ಜಿಲ್ಲೆಯ ಸಿಂದಗಿ ತಾಲೂಕಿನ ಬನಹಟ್ಟಿ ಪಿ.ಟಿ.ಯಲ್ಲಿ, ನನ್ನ ತಾಯಿ ಹುಸೇನಬಿ, ತಂದೆ ಬಂದೇನವಾಜರ ಸುಪುತ್ರನಾಗಿ ದಿ.೦೫-೧೧-೧೯೩೮ರಲ್ಲಿ ಜನಿಸಿದೆ. ಹುಟ್ಟಿದ ಮೂರು ತಿಂಗಳಿಗೆ ತಂದೆಯವರು 'ಅಲ್ಲಾ'ನ ಪಾದ ಸೇರಿದರು. ನನ್ನ ತಾಯಿಗೆ ವಿಧವೆ ಪಟ್ಟವಾಯಿತು. ನಮ್ಮ ತಾಯಿಯ ತವರೂರು ಯಾದಗೀರ ಜಿಲ್ಲೆಯ ಸುರಪುರ ತಾಲೂಕಿನ ಆಲ್ದಾಳಗ್ರಾಮ. ಪುಟ್ಟಗ್ರಾಮವಾಗಿದ್ದರೂ ಅಲ್ಲಿ ಶರಣ ಸಂಸ್ಕೃತಿ ಹಾಸು ಹೊಕ್ಕಾಗಿದೆ. ಆಲ್ದಾಳದಲ್ಲಿಯೇ ಪ್ರಾಥಮಿಕ ಶಿಕ್ಷಣ ಪ್ರಾರಂಭವಾಯಿತು, ನನಗೆ ಮೂವರು ಸೋದರ ಮಾವಂದಿರರು ಇವರ ಮನೆತನ ಶರಣ ಸಂಸ್ಕೃತಿಯ ಪಡಿಯಚ್ಚು, ಹಿರಿಯ ಸೋದರ ಮಾವ ಹುಸೇನ ಪಟೇಲ ಕೊಂಕಣಿ ಭಾಷೆಯಲ್ಲಿದ್ದ ಅವ್ಯಕ್ತ ಬೋಧಾಮೃತ' ವನ್ನು ಕನ್ನಡಕ್ಕೆ ಭಾಷಾಂತರಿಸಿದರು. ನಡುವಿನ ಮಾಮ ಲಾಡ್ಲೆ ಪಟೇಲ ಕನ್ನಡ ವಿದ್ವಾಂಸರಾಗಿದ್ದರು, ರಂಗಾಸಕ್ತರು, ಬಯಲಾಟದ ಶ್ರೇಷ್ಠ ಹಾಡುಗಾರರು ಮತ್ತೆ ಮೂರನೇ ಮಾವ ಸುಲ್ತಾನ ಪಟೇಲರು ಒಕ್ಕಲುತನ ಮಾಡುತ್ತಲೆ ನಾಟಕದಲ್ಲಿ ಪಾತ್ರ ಮಾಡುತ್ತ ನೋಡುಗರ ಮನ್ನಣೆ ಗಳಿಸಿದ್ದರು, ಮುಂದುವರಿಸುತ್ತ ಎಲ್.ಬಿ.ಕೆ ಆಲ್ದಾಳರು ಚಿಕ್ಕಂದಿನಲ್ಲಿಯೆ ಏನೊ ಎಂಥೊ ನನಗೂ ನಾಟಕದ ಕಡೆಗೆ ಒಲವು ಮೂಡಿಸಿದವರು ನಮ್ಮ ಮಾವನವರು ಹಾಗೂ ಊರಿನ ಹಿರಿಯರಾದ ದಿಂ. ಕೃಷ್ಣಪ್ಪದೊರೆಯವರ ನೇತೃತ್ವದಲ್ಲಿ ಸಂಜೀವಣ್ಣ ಹೊರಿ ಹಾಲುಗಡ್ಡಿ ಅವರು 'ಕನಕಾಂಗಿ' ಬಯಲಾಟದಲ್ಲಿ ಕೃಷ್ಣನ ಪಾತ್ರ ಯಶಸ್ವಿಯಾಗಿ ನಾನು ನಟಿಸಿದ್ದು, ಪ್ರೇಕ್ಷಕರ ಚಪ್ಪಾಳೆಗಿಟ್ಟಿಸಿದ್ದು, ನನ್ನ ಜೀವನದ 'ಟರ್ನಿಂಗ್ ಪಾಯಿಂಟ್' ಎನ್ನಬಹುದು.

ನಾಟಕದ ಗೀಳು ಹೆಚ್ಚಾಗಲು ನನ್ನ ಮಾವನವರೂ ಕಾರಣರು. ನಮ್ಮ ಮನೆತನದ ಈ ಸಂಸ್ಕೃತಿ ಮುಂದುವರಿಯಿತು. ನಾಟಕ ಬರೆಯಲು ಸಾಹಿತ್ಯದ ಸಸಿ ಅಂಕುರಗೊಂಡಿತು.

ಹಾರ್ಮೋನಿಯಂ ಬಾರಿಸುವುದನ್ನು ಕಲಿತು, ಚಿತ್ರಾಂಗದಾ, ಬಂಧುದ್ರೋಹ, ಹರಿಶ್ಚಂದ್ರ ನಾಟಕಗಳಿಗೆ 'ಪೇಟಿ' ಮಾಸ್ತರನಾದೆ. ಅಲ್ಲಿಂದಲೇ ನನಗೆ ಪೇಟಿ ಮಾಸ್ತರ ಎಂದು ಬಿರುದು ಪುಕ್ಕಟೆಯಾಗಿ ಬಂದಿತು. ನನ್ನ ಚಿಕ್ಕಮ್ಮನ ಊರಾದ ಮಳ್ಳಿ ಗ್ರಾಮಕ್ಕೆ ಬಂದು ನೆಲೆಸಿದೆ, ಇಲ್ಲಿಂದಲೇ ನನ್ನ ಜೀವನ ಹೊಸ ಬೆಳಕುಕಂಡಿತು.

**ಮಳ್ಳಿಯ ಊರಾಗ। ಚಳಿಬಾಳನೋಡವ್ವ।**
**ಹಳ್ಳದ ದಂಡಿಗಿ ಐತೆವ್ವ। ನನಗೆಳದಿ।**
**ಮಲ್ಲಿಗೆ ಹೂವು ಮನಿಮನಿಗಿ॥** ಎಲ್.ಬಿ.ಕೆ.ಆಲ್ದಾಳ ಜನಪದಜೇನು

ಇಲ್ಲಿನ ಪ್ರಕೃತಿ, ಗಾಳಿ-ಗಂಧ, ಹಕ್ಕಿಗಳ ಚಿಲಿಪಿಲಿ ನನ್ನನ್ನು ಕಲ್ಪನೆ ಮೀರಿ ಬೆಳೆಯುವಂತೆ ಮಾಡಿದವು ಇದರಿಂದಾಗಿ ನಾನು ಹುಲ್ಲಾಗದೇ ಮಳ್ಳಿ ಗ್ರಾಮಕ್ಕೆ ಹೂವಾಗಿ ಪರಿಮಳ, ಸುಗಂಧ ಹೊತ್ತು ತಂದೆ, ಇದು ನನಗೆ ಹೆಮ್ಮೆ ಪಡುವಂತಹದು ಹೌದು.

**ಕನ್ನಡವ ಬಿತ್ತೋಣ। ಕನ್ನಡ ಬೆಳೆಯೋಣ।**
**ಕನ್ನಡದ ರಾಶಿಮಾಡೋಣ। ಕನ್ನಡಿಗೆ।**
**ಕನ್ನಡದ ಕಣಜ ತುಂಬೋಣ॥** ಜನಪದ ಜೇನು ಎಲ್.ಬಿ.ಕೆ.ಆಲ್ದಾಳ

ಮಾತೃ ಭಾಷೆ ಉರ್ದು ಆಗಿದ್ದರು ಎಲ್.ಬಿ.ಕೆ ಅವರಿಗೆ ಕನ್ನಡದ ಬಗ್ಗೆ ಅಪಾರ ನಿಷ್ಠೆ

**"ಕನ್ನಡಕ್ಕಾಗಿ ಕೈಯೆತ್ತು, ನಿನ್ನ ಕೈ ಕಲ್ಪವೃಕ್ಷವಾಗುತ್ತದೆ ।**
**ಕನ್ನಡಕ್ಕಾಗಿ ಕೊರಳೆತ್ತು ಅಲ್ಲಿ ಪಾಂಚಜನ್ಯ ಮೂಡುತ್ತದೆ।**
**ಕನ್ನಡಕ್ಕಾಗಿ ಕಿರುಬೆರಳೆತ್ತಿದರೂ ಸಾಕು**
**ಇಂದು ಅದೇ ಗೋವರ್ಧನ ಗಿರಿಧಾರಿಯಾಗುತ್ತದೆ"**

ಎಂಬ ರಾಷ್ಟ್ರಕವಿ ಕುವೆಂಪು ಅವರ ಕವಿ ವಾಣಿಯನ್ನು ಎಲ್.ಬಿ.ಕೆ. ಅವರು ಅಕ್ಷರಶಃ ಪಾಲಿಸಿಕೊಂಡು ಬರುತ್ತಿದ್ದಾರೆ.

ನಮ್ಮ ರಾಜ್ಯ ಕರ್ನಾಟಕ. ಕರ್ನಾಟಕದಲ್ಲಿ ಕನ್ನಡಿಗರೇ ಸಾರ್ವಭೌಮರು, ನಮ್ಮೆಲ್ಲರ ತಾಯಿ ಭಾಷೆ ಕನ್ನಡ. ಜಗತ್ತಿನ ಇನ್ಯಾವುದೇ ಭಾಷೆಗೆ ಇರದಂತಹ ಭಾಷಾ ಸೊಗಡು ಕನ್ನಡಕ್ಕೆ ಇದೆ. ಇಂತಹ ಕಸ್ತೂರಿ ಕನ್ನಡವನ್ನು ದೈನಂದಿನ ವ್ಯವಹಾರದಲ್ಲಿ ಬಳಸೋಣ, ಕಾರಣ ಸರಿ ಸುಮಾರು ಎರಡು ಸಾವಿರ ವರುಷಗಳ ಬಹುದೊಡ್ಡ ಇತಿಹಾಸ ಹೊಂದಿರುವ ಭಾಷೆ ಎಂಬ ಕೀರ್ತಿ ಕನ್ನಡ ಭಾಷೆಗಿದೆ. ಅತ್ಯುತ್ತಮ ಮಟ್ಟದ ಸಾಹಿತ್ಯ ರಾಶಿ ಕನ್ನಡದಲ್ಲಿದೆ. ಆದ್ದರಿಂದಲೇ ಅತಿ ಹೆಚ್ಚು "ಜ್ಞಾನ ಪೀಠ" ಪುರಸ್ಕಾರಕ್ಕೆ ಪಾತ್ರವಾದ ಭಾರತೀಯ ಭಾಷೆಗಳಲ್ಲಿ ಕನ್ನಡಕ್ಕೆ ಮೊದಲನೆಯ ಸ್ಥಾನ. ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಹಲವಾರು ಕ್ಷೇತ್ರದಲ್ಲಿ ಸಾಧನೆ ಮಾಡಿದ ಹೆಮ್ಮೆಯ ಕನ್ನಡಿಗರಿದ್ದಾರೆ. ಇವಿಷ್ಟು ಸಾಲದು ಎಂಬಂತೆ ಜಾಗತಿಕ ಮಟ್ಟದಲ್ಲಿ ಕನ್ನಡಿಗರು ಉದಾರಿಗಳು, ಸೌಜನ್ಯವಂತರು, ಹೃದಯ ಶ್ರೀಮಂತಿಕೆ ಉಳ್ಳವರು ಎಂಬ ಹೆಗ್ಗಳಿಕೆ ಇದೆ. ಇದನ್ನು ನಾವು, ಖಂಡಿತ ಮುಂದುವರಿಸಿಕೊಂಡು ಹೋಗುಬೇಕು ಎನ್ನುವುದರ ಕಡೆಗೆ ಎಲ್.ಬಿ.ಕೆ ಅವರು ಕನ್ನಡಿಗರಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದಾರೆ. ಕನ್ನಡಿಗರು ಕನ್ನಡ ತಾಯಿ ಋಣ ತೀರಿಸಲೇ ಬೇಕೆನ್ನುವುದು ಅವರ ಅಗ್ರಹ. ಇದನ್ನು ವಿರೋಧಿಸುವವರನ್ನು, "ಕನ್ನಡಕೆ ಕನ್ನ ಹಾಕುವರುಕಂಡರೆ। ಕರ್ನಾಟಕ ಬಿಟ್ಟು ಕಳಸಬೇಕ। ಎಂಬ ನಿಷ್ಠುರ ಮಾತನ್ನು ಸಹ ಎಲ್.ಬಿ.ಕೆ ಆಡಿರುವುದು ಅನಿವಾರ್ಯ. ಅನ್ಯಮಾರ್ಗವೆ ಇಲ್ಲ.

ನೋಡಿ, ನಾನು, ನನ್ನದು ಎಂಬುದು ಎಲ್ಲರಿಗೂ ಇರುತ್ತದೆ, 'ಕುಮಾರವ್ಯಾಸನು ಹಾಡಿದನೆಂದರೆ, ಕಲಿಯುಗ ದ್ವಾಪರ ವಾಗುವುದು' ಎನ್ನುವ ಹಾಡಿನಂತೆ, ಕನ್ನಡ ನಾಡಿನಲ್ಲಿ ಕನ್ನಡ ಕೂಗು ಕೇಳಿದರೆ ಕನ್ನಡದಕಂಪು ಹರಡದೆ ಇರದು– ಇದೆಲ್ಲ ನಡು–ನಡುವೆ ಬರುವುದಕ್ಕೆ ನಮ್ಮಲ್ಲಿರುವ ಕನ್ನಡ ಭಾಷೆಯ ಅಭಿಮಾನವೇ ಮುಖ್ಯವಾದುದು ಎಂದರು ಆಲ್ದಾಳರು.

ನನ್ನ ಮಾತು ಬೇರೆಡೆಗೆ ತಿರುಗುತ್ತೆ ಎಂದು ಅಂದು ಕೊಳ್ಳದಿರು. ನನಗೆ ಕನ್ನಡ ಎಂದರೆ ಮನಸ್ಸು ಆನಂದದಿಂದ ಕುಣಿಯುತ್ತದೆ. ಇದು ೬ಕೋಟಿ ಕನ್ನಡಿಗರಲ್ಲೂ ಕನ್ನಡ ಉಳಿಸಿ, ಬೆಳೆಸುವ ಪ್ರೀತಿ, ಪ್ರೇಮ ಅಂಕುರವಾಗಿ, ಮರವಾಗಿ ವಿಶಾಲವಾಗಿ ಹಬ್ಬಲಿ ಎಂಬುದೇ ನನ್ನ ಆಶೆಯಾಗಿದೆ ಇರಲಿ, ಮುಂದೇನಾಯಿತು ಕೇಳಿ. ನನ್ನ ಕಿರಿಯ ಸೋದರ ಮಾವನ ಮಗಳು ಅಮಿನಾಳನ್ನು ಲಗ್ನವಾದೆ ಎಂದು ನನ್ನ ಪಕ್ಕದಲ್ಲಿಯೇ ಕುಳಿತಿದ್ದ ಹೆಂಡತಿಯನ್ನು ನಗು–ನಗುತ್ತ ತೋರಿಸಿದ ಆಲ್ದಾಳರು ತಮಗೆ ಮೂವರು ಮಕ್ಕಳು ಇದ್ದಾರೆ ಅವರಲ್ಲಿ ಒಬ್ಬಳೇ ಮಗಳು ಮುಮ್ತಾಜ ಬೇಗಂ

ಮತ್ತು ಇಬ್ಬರು ಗಂಡು ಮಕ್ಕಳಾದ ಮಹ್ಮದರಫಿ ಮತ್ತು ಮಹ್ಮದ ಶಫಿ ಅವರನ್ನು ಪರಿಚಯಿಸಿದರು. ನನ್ನ ಸಂಸಾರದಲ್ಲಿ ಹುದುಗಿದ್ದ ಕಷ್ಟಗಳು ಹೇಗಿದ್ದವು ಅವುಗಳನ್ನು ನಾನು, ನನ್ನ ಹೆಂಡತಿ ಹೇಗೆ ಎದುರಿಸಿ ಸಂಸಾರ ಸಾಗರದಲ್ಲಿ ಈಜುತ್ತಿದ್ದೇವೆ ಎನ್ನುವದೇ ಆಶ್ಚರ್ಯದ ಸಂಗತಿ. ಒಪ್ಪತ್ತಿನ ಊಟಕ್ಕೂ, ಗಂಜಿ ಕಾಯಿಸಿ ಕುಡಿಯಲಿಕ್ಕೂ ಕಷ್ಟ ಪಡಬೇಕಾಗುತ್ತಿತ್ತು. ನನ್ನ ಸತಿಮಣಿ ಎಲ್ಲವನ್ನು ಮನಸ್ಸಿನಲ್ಲಿಯೇ ಇಟ್ಟುಕೊಂಡು, ಮೌನವಾಗಿಯೇ ದುಃಖ ನುಂಗಿಕೊಳ್ಳುತ್ತಿದ್ದಳು. ನನ್ನ ಅಜ್ಜಿ ತೋಟದ ಮಾಲೀಕರ ಮನೆಯಿಂದ ನವಣಿ ಕುಟ್ಟಿ ಉಳಿದಿದ್ದ ತೌಡು ತಂದು ಅದರಲ್ಲಿ ಗಿದ್ದನ ಜೋಳ ಕಲಿಸಿ, ಬೀಸಿದ ಹಿಟ್ಟಿನಿಂದ ರೊಟ್ಟಿ ಮಾಡಿ ನಾನು ಉಂಡಿದ್ದು, ನನಗೀಗಲೂ ನೆನಪಿಗೆ ಬರುತ್ತಿದೆ ಎಂದು ಹೇಳುತ್ತಿದ್ದಂತೆ ಆಲ್ದಾಳ ಅವರ ಕಣ್ಣುಗಳಲ್ಲಿ ನೀರು ಹನಿ ಉದುರಿತು. ಇಂಥ ಹಲವಾರು ಘಟನೆಗಳಿಗೆ ಅವರು ಎದೆ ತಟ್ಟಿನಿಂತಿದ್ದಾರೆ.

ಊಟವಿಲ್ಲದೆ ಉಪವಾಸ ಮರುಗಿದ್ದು, ದಿನಕ್ಕೆ ೩೦ ಕಿ.ಮಿ. ನಷ್ಟು ಕಲ್ಲು-ಮಳ್ಳುಹಾದಿ ನಡೆದದ್ದು, ಬಸ್ ನಿಲ್ದಾಣ, ರೇಲ್ವೆ ನಿಲ್ದಾಣ, ಗ್ರಾಮಾಂತರ ಪ್ರದೇಶದಲ್ಲಿ ಶಾಲೆಗಳ ಅಂಗಳದಲ್ಲಿ ರಾತ್ರಿ ಮಲಗಿ ಸಂಕಟ ಪಟ್ಟದ್ದು, ಕುಳಿತ ಸ್ಥಳದಿಂದ ಎಬ್ಬಿಸಿ ಆಕಡೆಗೆ ಹೋಗಿ ಎಂದು ಅವಮಾನಿಸಿದ್ದು, ಮಗನ ಮದುವೆಗೆ ಸಹಾಯ ಮಾಡುತ್ತೇವೆ ಎಂದವರು ಸಹಾಯ ಮಾಡದೇ ನಡೆಎಂದದ್ದು ಎಲ್ಲ ಮಾಯೆಯೋ ಎನ್ನುವಂತಾಯಿತು ನನ್ನ ಬದುಕು ನನ್ನನ್ನು ಕಣ್ಣು ರೆಪ್ಪೆಯಂತೆ ಕಾಪಾಡಿಕೊಂಡು ಬರುತ್ತಿರುವ ನನ್ನ ಮಡದಿ ಷಟ್‌ಧರ್ಮಯುಕ್ತಾ ಕುಲ ಧರ್ಮ ಪತ್ನಿ ಎಂಬ ಉಕ್ತಿಗೆ ಉದಾಹರಣೆ ಯಾಗಿದ್ದಾಳೆ. ನಿಜವಾಗಿಯೂ ನನ್ನ ಗೃಹಲಕ್ಷ್ಮಿ, ಈ ಜಯಲಕ್ಷ್ಮಿ.

ನನ್ನ ಹೆತ್ತತಾಯಿ ತೀರಿಕೊಂಡಾಗ, ನಮ್ಮ ಸಮಾಜದವರೇ ಶವಸಂಸ್ಕಾರಕ್ಕಾಗಿ 'ಡೋಲಿ' ಕೊಡುವುದಿಲ್ಲ ಎಂದು ಹೇಳಿದರಲ್ಲದೆ, ನಮ್ಮ ಸಮಾಜಕ್ಕೆ ಪಟ್ಟಿ (ಹಣ) ಕೊಡುವುದಿಲ್ಲ ಸಮಾಜದವರೊಂದಿಗೆ ಬೆರೆಯುತ್ತಿಲ್ಲ ಎಂದು ಅಪಮಾನ ಮಾಡಿದರು. ಆಲ್ದಾಳ ಅವರ ಸ್ವಭಾವ, ಗುಣ, ನಡತೆ, ತಿಳಿದಿದ್ದ ಊರ ಹಿರಿಯರು ಕೂಡಿಕೊಂಡು, ಆಲ್ದಾಳ ಸಾಹೇಬರೆ ನೀವು ಚಿಂತಿಸಬೇಡಿ. ಆ ಕೆಲಸ ನಾವು ಮಡುತ್ತೇವೆ ಎಂದು ತೋಳೇರಿಸಿ ನಿಂತಾಗ ಸಮಾಜದವರ ಕಣ್ಣು ತೆರೆಯಿತು. ಮನುಷ್ಯರಲ್ಲಿ ಎಂತಹ ಗುಣಬೇಕು? ಐದು ಹೊತ್ತು ನಮಾಜು ಮಾಡಿದರೇನು ಬಂತು? ಒಳಗಿನ ಗಲೀಜು ತೊಳೆಯದವರನ್ನು ಕಂಡು ಮರುಗಿದೆ.

ತಂಗಿ ಹೆಚ್ಚು ಸಮಯ ತೆಗೆದು ಕೊಳ್ಳುವುದಿಲ್ಲ. ನನ್ನ ಜೀವನದಲ್ಲಿ ಒಳ್ಳೆ ಹೆಂಡತಿ, ಒಳ್ಳೆ ಮಕ್ಕಳು, ಒಳ್ಳೆಯ ಗೆಳೆಯರು ಸಿಕ್ಕಿದ್ದಾರೆ, ನಿಮ್ಮೆಲ್ಲರ ಪ್ರೀತಿ, ವಿಶ್ವಾಸ ಚಿಲುಮೆಯಾಗಿದೆ ಎಲ್ಲಕ್ಕೂ ಮಿಗಿಲಾಗಿ "ರಂಗ ಸಂತ ಜಂಗಮ" ಎಂಬ ಅಭಿನಂದನ ಗ್ರಂಥ ಹೊರತಂದಿದ್ದಾರೆ. ಇದು ನನ್ನ ಬದುಕಿನ ಇತಿಹಾಸ, ತಂಗಿ ಈ ಗ್ರಂಥ ಓದು ನನ್ನ ಬರಹ- ಬದುಕು ಇಲ್ಲಿದೆ. ಎಂದು ತಮ್ಮ ಕರ ಕಮಲಗಳಿಂದ ನನಗೆ ಅರ್ಪಿಸಿ ತಮ್ಮದೇ ಆದ "ಜನಪದ ಜಂಗಮ" ಗ್ರಂಥದಲ್ಲಿನ ತ್ರಿಪದಿಯನ್ನು ಓದಿ ಆಶೀರ್ವದಿಸಿದರು.

**ಹೆಣ್ಣಾಗಿ ಬೆಳೆಯವ್ವ ಕಣ್ಣಾಗಿ ಬಾಳವ್ವ**
**ಮಣ್ಣಾಗ ಕೈಯ್ಯ ತೊಳೆಯವ್ವ ಚೆನ್ನಬಸವ।**
**ಹೊನ್ನಾಗಿ ನೀನು ನಡೆಯವ್ವ (೬೩)**
**ಮನೆ ಹಸನಗೊಳಿಸವ್ವ ಮನಹಸನಗೊಳಿಸವ್ವ**
**ಮನೆಮನ ಬೆಳಗುವ ದೀಪಾಗು।ತಾಯವ್ವ**
**ಮಾನವ್ಯದ ತೇರು ಎಳೆಯವ್ವ (೬೯)**

ಸಂಶೋಧಕಿಯಾಗಿ ಬಂದು ನಾನು ಭೇಟಿ ಮಾಡುವ ಮುನ್ನ ಎಲ್.ಬಿ.ಕೆ ಆಲ್ದಾಳ ಅವರು ಹೇಗೆ ನನ್ನ ಮಾತಿಗೆ ಪ್ರತಿಕ್ರಿಯಿಸಿ, ನನಗೆ ಪ್ರೋತ್ಸಾಹಿಸುತ್ತಾರೆ ಎಂಬ ಪ್ರಶ್ನೆ ಮನಸ್ಸಿನಲ್ಲಿ ಕಾಡುತ್ತಿತ್ತು. ಅವರನ್ನು ಭೇಟಿ ಮಾಡಿ, ಸಂವಾದ ನಡೆಸಿ, ಭೋಜನ ಸ್ವೀಕರಿಸಿ ಆಶೀರ್ವಾದ ರೂಪದಲ್ಲಿ ಗ್ರಂಥನೀಡಿ ನನಗೆ ಬೀಳ್ಕೊಟ್ಟಾಗ ಭಾರವಾದ ಮನಸ್ಸಿನಿಂದ ಹೆಜ್ಜೆ ಹಾಕಹತ್ತಿದೆ. ಇಂಥ 'ಮಹಾತ್ಮರು ಇದ್ದಾರೆ ಎಂದು ಮನಸ್ಸು ಆನಂದಿಸಿತು.

**ಆಲ್ದಾಳರ ಜೀವನದಲ್ಲಿ ಮರೆಯಲಾಗದ ಘಟನೆ :-**

'ಕುಲಬಳಗಕ್ಕೆ ಒಳ್ಳೆಯದನ್ನು ಬಯಸುವ ಇದ್ದುದರಲ್ಲೇ ಹಂಚಿ ತಿನ್ನುವ ಕಾಗಿ-ಕೋಳಿಗಳ ತ್ಯಾಗ ನಮಗೇಕಿಲ್ಲ ?' ಆದರೆ ಎಲ್.ಬಿ.ಕೆ ಆಲ್ದಾಳ ಅವರು ಇದಕ್ಕೆ ಅನ್ನುಗುಣವಾಗಿ ನಡೆದುಕೊಂಡ ಒಂದು ಘಟನೆ ಇಲ್ಲಿ ಸ್ಮರಣೀಯವಾದುದು, ಭಾವೈಕ್ಯತೆಯ ಬಳ್ಳಿಯನ್ನು ಪೋಷಿಸುತ್ತ ಅದರ ಹಬ್ಬುವಿಕೆಗೆ ನೀರೆರೆದವರು ಆಲ್ದಾಳರು. ಎಲ್ಲರ ಎದೆಯಲ್ಲಿ ನಿಷ್ಕಲ್ಮಷ ಪ್ರೇಮದ ಬೀಜ ಬಿತ್ತುತ್ತ ದಣಿವರಿಯದೇ ದುಡಿದವರು. ತನ್ಮೂಲಕ ಅವರ ಕರುಳ ಕುಡಿಯಲ್ಲದ ಪರರ ಜೀವನವೂ ಹಸನುಗೊಳಿಸಿದವರು.

ನನ್ನ ಜೀವನದಲ್ಲಿ ಒಂದು ಘಟನೆ ಸುಮಾರು ೪೮ ವರ್ಷ(೧೯೬೬)ಗಳ ಹಿಂದೆ ನಡೆದು ಹೋಯಿತು. ಅದನ್ನು ಹೇಳದಿದ್ದರೆ ಆತ್ಮವಂಚನೆ ಮಾಡಿಕೊಂಡಂತಾಗುತ್ತದೆ ಎಂದು ಆಲ್ದಾಳ ಅವರೇ ಕೆಳಗಿನಂತೆ ಬರೆದುಕೊಂಡಿದ್ದಾರೆ.

ಆಂಧ್ರ ಪ್ರದೇಶದ ಹೈದರಾಬಾದದಿಂದ ಮಹಾರಾಷ್ಟ್ರದ ಪಂಢರಪುರಕ್ಕೆ ಪವಿತ್ರ ಕ್ಷೇತ್ರ ದರ್ಶನಕ್ಕೆ ರೈಲಿನಲ್ಲಿ ಪ್ರಯಾಣ ಬೆಳೆಸುತ್ತಿದ್ದ ಅವಿಭಕ್ತ ಕುಟುಂಬವೊಂದು ಅದೇನು ಕಾರಣವೋ ರೈಲು ಅಕ್ಕಲಕೋಟೆ ನಿಲ್ದಾಣದಲ್ಲಿ ನಿಂತಿತು. ಕೆಲವು ಪ್ರಯಾಣಿಕರು ಚಹಾ- ಫಲಹಾರ ಖರೀದಿಸಲು ಎಂದು ರೈಲು ಬೋಗಿಯಿಂದ ಕೆಳಗಿಳಿಯುತ್ತಿದ್ದರು. ಅವರುಗಳಲ್ಲಿ ಅವಿಭಕ್ತ ಕುಟುಂಬದವರು ಸೇರಿದ್ದರು, ರೈಲು ಹೊರಡುವ ಸೂಚನೆ ನೀಡಿತು ಕೆಳಗಿಳಿದವರು ಗಡಿ-ಬಿಡಿಯಿಂದ ರೈಲು ಹತ್ತಿದರು. ದುರ್ದೈವದ ಸಂಗತಿ ಎಂದರೆ ಅವಿಭಕ್ತ ಕುಟುಂಬದ ೨೦ರ ಹರೆಯದ ಹೆಣ್ಣುಮಗಳು ರೈಲು ಹತ್ತುವುದು ಸಾಧ್ಯವಾಗದೇ ನಿಲ್ದಾಣದಲ್ಲಿ ಉಳಿದುಕೊಂಡು ಪರದಾಡಹತ್ತಿದಳು. ಆ ಸ್ಟೇಷನದ ಹೊರ ಭಾಗದಲ್ಲಿ ಬೀಡು ಬಿಟ್ಟಿದ್ದ ಕರಡಿ ಅಡಿಸುವವರು ಆಕೆಯಿಂದ ವಿಷಯ ಪಡೆದರು. ಅವರಿಗೆ ಒಂದು ನಿಧಿಯೇ ಸಿಕ್ಕಂತಾಯಿತು. ಕೂಡಲೇ ಗಂಟು ಮೂಟೆಯೊಂದಿಗೆ ತಮ್ಮ ಸಂಗಡ ಹುಡುಗಿಯನ್ನು ಕರೆದುಕೊಂಡು ಗುಳೆಹೊರಟರು. ಸುಖದ ಸುಪ್ಪತ್ತಿಗೆಯಲ್ಲಿದ್ದವಳಿಗೆ ವಿಧಿಯ ವಿಕೃತ ಅಟ್ಟಹಾಸಕ್ಕೆ ಬಲಿಯಾದಳು. ದಿನಗಳೆದವು, ತಿಂಗಳುಗಳು ಉರುಳಿದವು, ವರುಷಗಳು ಕಳೆದವು ಆಕೆಯ ಜೀವನ ಗಾಳಿಗೆ ಸಿಕ್ಕ ಗಾಳಿಪಟದಂತಾಗಿತ್ತು ಅವಳ ಅಕ್ರಂದನ ಯಾರು ಕೇಳಬೇಕು? ಆಕೆಯ ಹಣೆಯ ಮೇಲಿನ ಹಚ್ಚೆಬೊಟ್ಟು ಸುಟ್ಟಿದ್ದರು. 'ಖಾಜಾಬಿ'ಯೆಂದು ಹೆಸರಿಟ್ಟು ಮದುವೆಯನ್ನು ಮಾಡಿದ್ದರು. ಕೈಯಲ್ಲಿ ಕುಡುಗೋಲು ಬಂತು. ದನಕರುಗಳಿಗೆ ಹುಲ್ಲು ತರುವ ಕೆಲಸ ಇದಾಯಿತು.

ಹೀಗೆ ಹಲವಾರು ಹಳ್ಳಿಗಳನ್ನು ಸುತ್ತುತ್ತ, ಕರಡಿ ಕುಣಿತವಾಡಿಸುತ್ತ ಕವಿಗಳ ಊರಾದ ಆಲ್ದಾಳಕ್ಕೆ ಬಂದು ಬೀಡು ಬಿಟ್ಟರು. ಆಲ್ದಾಳ ಅವರ ಮನೆಗೆ ಹೊಂದಿಕೊಂಡ ಮಸೂದೆಯ ಬಳಿ ಗೋಡೆಗೆ ಒರಗಿಕೊಂಡು ಗೋಳಾಡುತ್ತಿದ್ದ ಮಹಿಳೆಯ ಬಗ್ಗೆ ವಿಚಾರಿಸಿದಾಗ, ಅವಳ ಭೀಕರ ಬವಣೆ ಆಲಿಸಿದ ಗ್ರಾಮಸ್ಥರು ವಿಚಾರಣೆಗೆ ಮುಂದಾದರು. ಸಾಯಂಕಾಲ ಕರಡಿ ಆಟ ಆಡಿಸುವವರು ಬಂದ ನಂತರ ನನ್ನ ಹೆಂಡತಿಯಲ್ಲಿ ಏನೆಂದು ಪ್ರಶ್ನಿಸುತ್ತಿದ್ದವನಿಗೆ ಊರಿನ ಜನ

ಹಿಗ್ಗಾ-ಮುಗ್ಗಾ ತಳಿಸುತ್ತಲೇ ನಿಜವಾಗಿ ನಡೆದ ಘಟನೆ ವಿವರಿಸಿ ತಪ್ಪಾಗಿದೆ ಕ್ಷಮಿಸಿ ಎಂದು ಕೈಕಾಲು ಹಿಡಿದರು.

ಆಲ್ದಾಳ ಅವರು ಊರಿನ ಜನರ ಇಚ್ಛೆಯಂತೆ ಅವಳನ್ನು ಹೈದ್ರಾಬಾದ ರೈಲು ಹತ್ತಿಸಿ ಅವಳ ಪ್ರಯಾಣ ಸುಖಕರವಾಗುವಂತೆ ಮಾಡಿದರಲ್ಲದೇ ಅವಳು ಸುರಕ್ಷಿತವಾಗಿ ತಂದೆ-ತಾಯಿ, ಬಂಧು-ಬಳಗದವರೊಂದಿಗೆ ಸೇರಿಕೊಂಡ ಸಂತಸ ಸುದ್ದಿಯು ಸಹ ಆಲ್ದಾಳರ ವಿಳಾಸಕ್ಕೆ ಪತ್ರ ಬಂದಾಗ ಊರಿನವರೊಂದಿಗೆ ಲೇಖಕರು ಆನಂದ ಪಟ್ಟರು. ಇದು ಮಾನವೀಯತೆಯನ್ನು ಎತ್ತಿ ಹಿಡಿದಿದ್ದರ ಫಲವೇ ತಾಯಿ-ತಂದೆಯರೊಂದಿಗೆ ಮಗಳು ಸೇರುವಂತಾಯಿತು. ಮನಷ್ಯನ ಧ್ಯೇಯ, ಗುರಿ ತಿಳಿದು 'ಬದುಕು, ಉಳಿದು ಅನ್ಯರಿಗೆ ಬಾಳಗೊಡು ಎಂಬುದಾದರೆ ಅಂಥ ಜನ್ಮ ಮಾತ್ರ ಸಾರ್ಥಕ'.

ಅಂದಿನ ಘಟನೆಯನ್ನು ಮೆಲುಕು ಹಾಕಿದ ಎಲ್.ಬಿ.ಕೆ ಅವರು ಆ ಹುಡುಗಿಯ ಹೆಸರು 'ಸರಸ್ವತಿ' ಎಂದು ಗೊತ್ತಾಯಿತು. ನನ್ನ ತಂಗಿಯಂತಿರುವ ಆ ಸರಸ್ವತಿಯೇ ನನ್ನ ಲೆಕ್ಕಣಿಕೆಯಲ್ಲಿ ಸಂಭ್ರಮಿಸಿ, ತಾಯಿ ಸರಸ್ವತಿಯಾಗಿ ಇಷ್ಟೊಂದು ಕೃತಿಗಳನ್ನು ಬರೆಯಲು ಕಾರಣಳಾದಳು ಅಂತ ಹೇಳಿಕೊಳ್ಳಲು ನನಗಾನಂದವಾಗುತ್ತಿದೆ. ಇಂದಿಗೂ ಆ ತಾಯಿಯನ್ನು ಸ್ಮರಿಸುತ್ತೇನೆ ಎಂದು ಹೇಳಿಕೊಳ್ಳುವ ಆಲ್ದಾಳ ಅವರ ಹೃದಯ ಶ್ರೀಮಂತಿಕೆಯನ್ನು ಮೆಚ್ಚಬೇಕು. ಇದು ಉತ್ತಮರ ಸಂಗತಿಯ ಫಲ. ಹೌದು, ಇದು ಹೊಗಳಿಕೆಯ ಮಾತುಗಳಲ್ಲ. ಹಿರಿಯರು, ವಿದ್ವಾಂಸರು ಹೇಳುವಂತೆ- ಸತ್ಸಂಗ ಯೋಗ ಹಾಗೂ ದುಸ್ಸಂಗ ಪರಿತ್ಯಾಗದಿಂದಾಗಿ ಮನುಷ್ಯನು ನೀತಿವಂತನಾಗುತ್ತಾನೆ, ಸುಜ್ಞಾನಿಯಾಗುತ್ತಾನೆ, ನಿರ್ಲೋಭಿಯಾಗುತ್ತಾನೆ, ನಿರ್ದೋಷಿಯಾಗುತ್ತಾನೆ, ನಿಕಟವಾಗುತ್ತಾನೆ, ನಿಕಷ್ಟಕ್ಕೊಳಪಡುತ್ತಾನೆ, ನಿಗರ್ವಿಯಾಗುತ್ತಾನೆ, ನಿಷ್ಣಾತನಾಗುತ್ತಾನೆ, ನಿಚ್ಚಲನಾಗುತ್ತಾನೆ. ನಿರ್ಭೀತನಾಗುತ್ತಾನೆ, ನಿಮಗ್ನನಾಗುತ್ತಾನೆ, ನಿರಂಜನನಾಗುತ್ತಾನೆ, ನಿರವದ್ಯನಾಗುತ್ತಾನೆ, ನಿರಾಕುಲನಾಗುತ್ತಾನೆ, ನಿರ್ಮಲಚಿತ್ತದವನಾಗುತ್ತಾನೆ, ನಿಶಿತಮತಿಯಾಗುತ್ತಾನೆ, ನಿಷ್ಣಾತನಾಗುತ್ತಾನೆ, ನಿಸ್ಪೃಹನಾಗುತ್ತಾನೆ. ಹಾಗೂ ನಿರುಪಮನಾಗುತ್ತಾನೆ. ಈ ಎಲ್ಲವುಗಳ ಸಂಗಮವೇ ಲಾಲಮಹ್ಮದ ಬಂದೇ ನವಾಜ ಖಲೀಫ್ (ಎಲ್.ಬಿ.ಕೆ. ಆಲ್ದಾಳ) ಅವರು ಎಂದರೆ ಅತಿಶಯೋಕ್ತಿ ಅಲ್ಲ. ಜೀವನದಲ್ಲಿನೊಂದು, ಬೆಂದು ದಾರಿಕಾಣದೇ ಚಡಪಡಿಸುತ್ತಿದ್ದ ಯುವಮನಸ್ಸಿಗೆ ಗುರಿಕಲ್ಪಿಸಿ, ಆತ್ಮವಿಶ್ವಾಸ ತುಂಬಿದ ಸಂತಸ ಎಲ್.ಬಿ.ಕೆ ಆಲ್ದಾಳರದ್ದಾಗಿತ್ತು.

## ಅಡಿಟಿಪ್ಪಣಿಗಳು

೧) ಪೂಜ್ಯ ಶ್ರೀ ಸಿದ್ದೇಶ್ವರ ಸ್ವಾಮಿಗಳವರ ಸದಾಶಯ : ನಿರೂಪಣೆ : ಡಾ. ಶ್ರದ್ಧಾನಂದ ಮಹಾಸ್ವಾಮಿಗಳು 'ರಂಗಸಂತ ಜಂಗಮ' ಅಭಿನಂದಾನ ಗ್ರಂಥದ – ಪು.ಸಂಖ್ಯೆ – ೫

೨) ಡಾ. ವಸಂತ ಕುಷ್ಟಗಿ, ಎಸ್.ಕೆ.ಬಿರಾದಾರ, ಶಿವಕವಿ, ಹಿರೇಮಠ ಜೋಗೂರ ರವರ ಸಂಯುಕ್ತ ಸಂಪಾದಕೀಯ ರಂಗಸಂತ ಜಂಗಮ ಅಭಿನಂದನ ಗ್ರಂಥದಲ್ಲಿ ಪ್ರಕಟಣೆಯ ಲೇಖನ

೩) ರಂಗಸಂತ ಜಂಗಮ – ಅಭಿನಂದನ ಗ್ರಂಥದ ಲೇಖನದಿಂದ – ಪು.ಸಂಖ್ಯೆ – ೧೩೫ ಲೇಖಕರು : ವಿಶ್ವನಾಥ ಬೆಳಗುಂಪಿ

೪) ರಂಗಸಂತ ಜಂಗಮ : ಅಭಿನಂದನ ಗ್ರಂಥ – ಪು.ಸಂಖ್ಯೆ –೧೦,೧೧

೫) ಜನಪದ ಜೇನು (ತ್ರಿಪದಿಗಳು) ಎಲ್.ಬಿ.ಕೆ.ಆಲ್ದಾಳ ಪ್ರಕಾಶನ ಶ್ರೀವಿಶ್ವಾರಾಧ್ಯ ತಪೋವನ ಮಠ : ಶಾಖಾಪೂರ , ಜೇವರ್ಗಿ

೧೧) ಜನಪದ ಜೇನು (ತ್ರಿಪದಿಗಳು) : ಎಲ್.ಬಿ.ಕೆ. ಆಲ್ದಾಳ

೧೨) ಜನಪದ ಜಂಗಮ : (ತ್ರಿಪದಿ) : ಎಲ್.ಬಿ.ಕೆ.ಆಲ್ದಾಳ (ಹಾರಕೂಡ ಶಿವಯೋಗಿಗಳ ಜೀವನ ಚರಿತ್ರೆ)

# ಅಧ್ಯಾಯ – ೬

## ಆಲ್ದಾಳರ ಸಾಹಿತ್ಯದ ಭಾಷಾಶೈಲಿ

ಆಲ್ದಾಳರ ಸಾಹಿತ್ಯ ಅಪಾರ. ಅದರಲ್ಲೂ ಅವರ ನಾಟಕಗಳು ಜನಪ್ರಿಯ. ಯಾವುದೇ ನಾಟಕ ಯಶಸ್ವಿಯಾಗಲು ಅದಕ್ಕೆ ಭಾಷೆ, ಸಾಹಿತ್ಯ, ಹಾಸ್ಯ, ಶೈಲಿಗಳು ಮಹತ್ವದ ಪಾತ್ರ ವಹಿಸುತ್ತವೆ ಎಂಬುದು ಗಮನದಲ್ಲಿರಿಸಿಕೊಳ್ಳಬೇಕು. ಎಲ್ಲ ಸಾಹಿತ್ಯಕ್ಕಿಂತಲೂ ನಾಟಕ ಭಿನ್ನವಾಗಿರುತ್ತದೆ. ನಾಟಕ ಕೃತಿಗಳು ಓದುಗರಿಗೂ ಹಾಗೂ ರಂಗಭೂಮಿಯ ಮೇಲೆ ಪ್ರದರ್ಶನಗೊಂಡಾಗ ಅಲ್ಲಿನ ಪ್ರೇಕ್ಷಕರಿಗೂ ಮುದ ನೀಡುತ್ತವೆ. ವಾಚಕರು ಓದುವುದಕ್ಕೂ, ನಾಟಕನೋಡುವ ವೀಕ್ಷಕರುಗಳಲ್ಲಿ ಅಪಾರ ವ್ಯತ್ಯಾಸವುಂಟು. ರಂಗದ ಮೇಲಿನ ನಾಟಕ ಪ್ರೇಕ್ಷಕರ ಮನ ಗೆಲ್ಲುವಲ್ಲಿ ಅಪಾರ ಶ್ರಮ ಅಗತ್ಯವಾಗಿದೆ.

ನಟ–ನಟಿಯರ ನಟನೆ, ಸಂದರ್ಭಕ್ಕೆ ತಕ್ಕಂತೆ ಅವರಾಡುವ ಮಾತುಗಳು, ಹಾವ–ಭಾವ–ಮುಖ್ಯವಾಗಿ ನಾಟಕ ಯಶಸ್ಸಿನ ಆಧಾರ ಸ್ತಂಭವೆಂದರೆ ನಾಟಕದಲ್ಲಿನ ಮಾತಿನಶೈಲಿ, 'ಅತ್ಯುತ್ತಮ ಪದಗಳ ಅತ್ತ್ಯುತ್ತಮ ಜೋಡಣೆಯೇ ಶೈಲಿ' ಎಂದು ನಾಟಕಕಾರರು ಭಾವಿಸುತ್ತಾರೆ.

ನಾಟಕದಲ್ಲಿ ಬರುವ ಮಾತುಗಳು ಸಂವಾದಗಳು ಒಂದು ನಿರ್ದಿಷ್ಟ ವಿಷಯವನ್ನು ಒಳಗೊಂಡಿರಬೇಕು. ನಟನೆಗೆ ಮೆರುಗು ಬರುವಂತೆ, ಪ್ರೇಕ್ಷಕರಿಗೆ ಅರ್ಥವಾಗುವ ಶೈಲಿಯಲ್ಲಿ ಮಾತನಾಡಬೇಕು. ಇದರಿಂದ ಪ್ರೇಕ್ಷಕರಲ್ಲಿ ಭಕ್ತಿ, ಉತ್ಸಾಹ, ಆವೇಶ, ಅನುಕಂಪ, ಕ್ರೋಧ, ಆನಂದ, ಕಣ್ಣೀರು, ಹಾಸ್ಯಗಳು ಇತ್ಯಾದಿ ಆಯಾಯ ದೃಶ್ಯಗಳಿಂದ ಪಡೆಯುತ್ತಾರೆ. ಇದನ್ನು ಶ್ರಮಪಟ್ಟು ನಟಿಸಬೇಕಾಗುತ್ತದೆ. ಆಲ್ದಾಳರ 'ಚರಬಸವೇಶ್ವರ ಮಹಾತ್ಮೆ', 'ಹಾರಕೂಡ ಚನ್ನಬಸವೇಶ್ವರ ಮಹಾತ್ಮೆ', 'ಶ್ರೀ ಅಯ್ಯಪ್ಪಯ್ಯ ಮಹಾತ್ಮೆ ನಾಟಕಗಳು ಈ ಸಾಲಿನಲ್ಲಿವೆ.

ನಾಟಕಕಾರ ಆಲ್ದಾಳರು ತಮ್ಮ ನಾಟಕಗಳಲ್ಲಿ ಆಯಾಯ ಶೈಲಿಗಳಲ್ಲಿ ಮನ ಮಿಡಿಯುವಂತೆ ರೂಪಿಸಿ ಅವುಗಳನ್ನು ರಂಗಭೂಮಿಯ ಮೇಲೆ ಯಶಸ್ವಿಗೊಳಿಸಿದ್ದಾರೆ. ಪ್ರೇಕ್ಷಕರ, ಓದುಗರ, ವಿಮರ್ಶಕರ ಮನಸ್ಸನ್ನು ಸೂರೆ ಗೊಂಡಿದ್ದಾರೆ. ತಮ್ಮ ನಾಟಕದಲ್ಲಿ ಬಳಸಿರುವ ಭಾಷೆ, ವಸ್ತು, ಭಾವ, ವರ್ಣನೆ ಉಚಿತವಾಗಿದೆಯೇ ಎನ್ನುವುದನ್ನು ಆಲ್ದಾಳರು ಕರಗತ ಮಾಡಿಕೊಂಡಿದ್ದಾರೆ. ಅವರ ಲೋಕಾನುಭವ ವಿಜೃಂಭಿಸಿದೆ.

ನಾಟಕದ ಮುಖ್ಯ ಅಂಶ ವಸ್ತು. ವಸ್ತು ಈ ಲೋಕದಿಂದ ಲಭಿಸಿದ್ದು ಅದನ್ನು ವ್ಯಕ್ತಗೊಳಿಸುವ ಭಾಷೆಯೂ ಈ ಸಮಾಜದ ಕೊಡುಗೆಯೇ. ವಸ್ತುವಿಗೆ ತಕ್ಕ ಭಾಷೆ, ಆಲೋಚನೆ ಕಲ್ಪನಾಂಶ ಹಾಗೂ ನಾಟಕ ಪ್ರಕಾರದ ತಿಳುವಳಿಕೆ ಎಂದರೆ ಶೈಲಿ, ಇದಕ್ಕೆ ನಾಟಕಕಾರನ ಪೂರ್ವ ತಯಾರಿ ಅಗತ್ಯ. ನಾಟಕ ಕೇವಲ ನಟನೆ ಇಲ್ಲವೇ ಓದುವುದಕ್ಕೆ ಮಾತ್ರ ಸೀಮಿತವಾಗಿರುವುದಿಲ್ಲ, ಅದರಲ್ಲಿ ನಾಟಕಕಾರನ ಅಭಿವ್ಯಕ್ತಿಯನ್ನು ಕಾಣಬಹುದು. ತಾನು ಕಂಡ ಲೋಕವನ್ನು ಉಂಡನೋವು–ನಲಿವುಗಳನ್ನು ಕಾಣಿಸುತ್ತಾನೆ. ಆದ ಕಾರಣ ನಾಟಕ ಜೀವನದ ಪ್ರತಿಬಿಂಬವೇ ಆಗಿರುತ್ತದೆ. ನಾಟಕದಲ್ಲಿ ಅಡಕವಾಗಿರುವ ಜೀವನದಗತಿ ಬಿಂಬವನ್ನು ಉತ್ತಮ ಶೈಲಿಯ ಮೂಲಕ ಹೊರಹೊಮ್ಮುತ್ತದೆ. ಇದನ್ನರಿತಿರುವ ಆಲ್ದಾಳರು ತಮ್ಮ ನಾಟಕಗಳಲ್ಲಿ ಉತ್ತಮ ಭಾಷೆಯ ಮೂಲಕ ಜನಮಾನಸದ ಮೇಲೆ ಛಾಪು ಹಾಕುವಲ್ಲಿ ಗಂಭೀರ ಹೆಜ್ಜೆ ಇರಿಸಿದ್ದಾರೆ. ಅದನ್ನು ವಿಶಿಷ್ಟ ಶೈಲಿಯಲ್ಲಿ ನಿರೂಪಿಸಿದ್ದು ನಾಟಕಗಳು ಎಲ್ಲವರ್ಗದವರಿಗೆ ಹಿತವಾಗಿವೆ.

ನಾಟಕರಂಗದಲ್ಲಿ ನಟರಾಗಿ, ರಂಗನಿರ್ದೇಶಕರಾಗಿ, ನಾಟಕಕಾರರಾಗಿ ಸೇವೆಯಲ್ಲಿ ತೊಡಗಿಸಿಕೊಂಡಿರುವ ಎಲ್.ಬಿ.ಕೆ.ಆಲ್ದಾಳರು ರಂಗಸಪನ್ನರಾಗಿ, ನಾಟಕ ಕಲೆಯ ಶ್ರೀಮಂತಿಕೆಯನ್ನು ಹೆಚ್ಚಿಸುತ್ತಿರುವ ಕಲಾ ಶ್ರೇಷ್ಠ. ಕನ್ನಡ ರಂಗಭೂಮಿಯ ಬಹುತೇಕ ನಾಟಕಕಾರರು ರಾಮಾಯಣ, ಮಹಾಭಾರತದಂತಹ ಮಹಾನ್ ಗ್ರಂಥಗಳನ್ನು ಆಧರಿಸಿ ನಾಟಕ ರಚಿಸಿದ್ದಾರೆ. ಆದರೆ ಆಲ್ದಾಳರು ಮಾನವನ ಬದುಕೇ ಒಂದು ನಾಟಕ, ಎಂದು ನಿರ್ವಿಕಾರ ಬದುಕನ್ನು ನಿರೂಪಿಸುವ ದಿಟ್ಟ ಹೆಜ್ಜೆಯನ್ನು ಇರಿಸುತ್ತ ಸಾಗಿದ್ದಾರೆ ಈ ರಂಗ ಗಾರುಡಿಗ. ನಾಟಕಗಳ ರಚನೆಯಲ್ಲೂ ಎತ್ತಿದ ಕೈ. ಎಂಥ ಪಾತ್ರವನ್ನು ಸೃಷ್ಟಿಸುವ ಪ್ರತಿಭೆ ಅವರಲ್ಲಿದೆ.

ನಾಟಕ ರಚನೆಗೆ ಮುನ್ನ ತಮ್ಮ ನಾಟಕ ಸಮಾಜದಲ್ಲಿರುವ ಎಲ್ಲ ವರ್ಗ, ಧರ್ಮದವರಿಗೂ ಹಿತಕರವೆನ್ನಿಸುವ ರೀತಿಯಲ್ಲಿ ಹಾಗೂ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವವರಿಗೂ ಮನಕ್ಕೆ ಮುದ ನೀಡುವಂತೆ ಭಾಷೆಯನ್ನು ಬಳಸುತ್ತಿರಬೇಕು. ನಾಟಕರಂಗಭೂಮಿಯ ಮೇಲೆ ಪ್ರದರ್ಶನವಾಗುವ ಮುಂಚೆ, ಆಲ್ದಾಳರು ರಂಗ ಭೂಮಿಯಲ್ಲಿನ ಎಲ್ಲ ವ್ಯವಸ್ಥೆಗಳನ್ನು ಅಮೂಲಾಗ್ರವಾಗಿ ಪರಿಶೀಲಿಸುತ್ತಿದ್ದರು. ಯಾವ ನಟನಿಗೆ-ನಟಿಯರಿಗೆ ಯಾವ ಪಾತ್ರಕೊಟ್ಟರೆ ನಾಟಕ ಯಶಸ್ವಿಯಾಗುತ್ತದೆ. ಎಂಬುದು ಅವರಿಗೆ ಮುಖ್ಯವಾಗಿತ್ತು. ಸಾಮಾನ್ಯರ ಬದುಕಿಗೆ ಹೆಚ್ಚಿನ ಆದ್ಯತೆ ನೀಡಿ, ಅಲ್ಲಿನ ವಸ್ತು, ವಿಷಯ, ಹಾಸ್ಯ, ಶೈಲಿ, ಪಾತ್ರಗಳ ನಡುವಣ ಸಂಭಾಷಣೆಗೆ ತಕ್ಕಹಾಗೆ ನಾಟಕದಲ್ಲಿ ಭಾಷೆಯನ್ನು ಜೋಡಿಸುವಲ್ಲಿ ಗಮನ ಹರಿಸುತ್ತಿದ್ದರು.

'ಶ್ರೀ ಸದ್ಗುರು ವಿಶ್ವರಾಧ್ಯರ ಮಹಾತ್ಮೆ' ಭಕ್ತಿ ಪ್ರಧಾನ ನಾಟಕ. ಸಮಸ್ತ ಜನರ ಹೃನ್ಮನಗಳನ್ನು ಸಂತೃಪ್ತಿಗೊಳಿಸುವಲ್ಲಿ ಅಮೋಘವಾದ ಪಾತ್ರವನ್ನು ವಹಿಸಿಕೊಂಡಿದೆ. ಯಾದಗಿರಿ ಜಿಲ್ಲೆಯ ಅಬ್ಬೆತುಮಕೂರಿನಲ್ಲಿ ಜೀವಂತ ಸಮಾಧಿಯನ್ನು ಪಡೆದು ವಿಶ್ವಜ್ಯೋತಿಯಾಗಿ ಬೆಳಗುತ್ತಿರುವ ಶ್ರೀ ವಿಶ್ವಾರಾಧ್ಯರ ಸಂಪೂರ್ಣ ಜೀವನ ಚರಿತ್ರೆಯನ್ನು ಅವರ ಸಚ್ಚಾರಿತ್ರ್ಯ ಧಕ್ಕೆ ಬಾರದಂತೆ ನಾಟಕರತ್ನ ಎಲ್.ಬಿ.ಕೆ.ಆಲ್ದಾಳರು ಸರಳ ಮತ್ತು ಹೃದಯವನ್ನು ಚಿಮ್ಮಿಸುವ, ಸುಂದರವಾದ ಶೈಲಿಯಲ್ಲಿ ಹಾಸ್ಯ ಮತ್ತು ಭಕ್ತಿ ರಸಪೂರಿತವಾಗಿ ಬರೆದು ಓದುವ ಮತ್ತು ನೋಡುವ ಸಮಸ್ತ ಜನರನ್ನು ಭಕ್ತಿರಸದಲ್ಲಿ ಮಿಂದು ತಣಿಯುವಂತೆ ಮಾಡಿದ್ದಾರೆ. ಜನಮನದ ಅಜ್ಞಾನವನ್ನು ಹೋಗಲಾಡಿಸಿದ್ದಾರೆ.

ಶ್ರೀ ವಿಶ್ವಾರಾಧ್ಯರ ಮಹಾತ್ಮೆ ನಾಟಕದ ಒಂದು ಪ್ರಸಂಗ, ಮಕ್ಕಳಾಗದ ಮಹಿಳೆಯನ್ನು ಹಂಗಿಸಿ, ದುಃಖಕ್ಕೀಡಾಗುವುದನ್ನು ನಾಟಕಕಾರರು ಹೃದಯ ಬಿರಿಯುವಂತೆ ಸಂವಾದ ರೂಪಿಸಿದ್ದಾರೆ. 'ಅಲ್ಲಾತಂಗಿ। ಮದ್ವಿ ಆಗಿ ಹನ್ನೇರಡು ವರ್ಷಾದ್ರು ನೀಲಮ್ಮ ಗುರುತಾಯಿಗೆ ಮಕ್ಕಳಾಗಲಿಲ್ಲ, ಅಂದಾಗ ಮುಂದೇನಾಗ್ತಾವ ತಂಗೀ! [೧].

೧) 'ಅಯ್ಯತಂಗಿ ! ಹುಟ್ಟ ಬಂಜೀಗಿ ಮಕ್ಕಳು ಹ್ಯಾಂಗ್ ಆಗ್ತಾವ (ನಗುವರು)'.
೨) 'ನೀ ಏನ್ ಅನ್ನು ತಂಗೀ ! ಮುಂಜಾನೆಯೆದ್ದ ಕೂಡಲೇ ಹುಟ್ಟು ಬಂಜಿ ಮುಖಾ ನೋಡಬಾರ್ದು ಯವ್ವಾ ನೋಡಬಾರ್ದು' [೨].

**ನೀಲಾಂಬಿಕೆ :** (ಕಥಾನಾಯಕನ ತಾಯಿ) "ನಿಲ್ಲಿಸಿ! ಶಿವಶಿವ! ಕೇಳಲಾರೆ ಈ ಚುಚ್ಚು ಮಾತಿನಕಟು ಟೀಕೆಗಳು..... ತಂದೆ, ದೇವಾ ಬಸವೇಶಾ ನಿನಗೆ ದಯ ಬರಲಿಲ್ಲವೆ? ಹೆಣ್ಣಾಗಲಿ, ಗಂಡಾಗಲಿ,

ಕುರುಡಾಗಲಿ, ಕುಂಟಾಗಲಿ ಒಂದೇ ಒಂದು ಮಗುವನ್ನು ಕೊಟ್ಟು ನನ್ನ ಬಂಜೆತನವನ್ನು ಹೋಗಲಾಡಿಸು". [೩]

ಆಲ್ದಾಳರು ಸ್ತ್ರೀಯರ ಬಗ್ಗೆ ಹೊಂದಿರುವ ಗೌರವ ಶ್ಲಾಘನೀಯವಾದುದು. ಬಂಜೆ ಎಂಬ ಶಬ್ಧ ಹೆಣ್ಣಿಗೆ ಮಾಡುವ ಆಘಾತ ಸರಳಮಾತಿನ ಮೂಲಕ ಹೇಳಲು ಸಾಧ್ಯವಾಗದು. ಮಕ್ಕಳಾಗದ ಹೆಣ್ಣನ್ನು ಸಮಾಜ ಕಾಣುವ ರೀತಿ ಎಷ್ಟೊಂದು ಕಠೋರ! ಬಂಜೆಯಾದವಳು ದೇವರಲ್ಲಿ ಆಲಾಪಿಸುವ ಪರಿ ರೋಮ-ರೋಮಗಳಲ್ಲೂ ನಿನದಿಸುತ್ತದೆ. ಆಲ್ದಾಳರ ಮೇಲಿನ ಸಂವಾದ ಮಹಿಳೆಯಲ್ಲೂ, ಪುರುಷರಲ್ಲೂ ಯೋಚನೆಗೆ ಒಳಪಡಿಸುತ್ತದೆ. ಮಕ್ಕಳಿಲ್ಲದವರು ಎಂತಹ ಆಪಾದನೆಗೆ, ಹಾಸ್ಯಕ್ಕೆ ಗುರಿಯಾಗುತ್ತಾರೆಂಬುದು ಅವರಾಡುವ ಮಾತಿನ ಶೈಲಿಯಿಂದ ತಿಳಿಯಬಹುದು, ಹೊಟ್ಟೆಯಲ್ಲಿ ಕಿಚ್ಚು ಹತ್ತಬಹುದು!.

ಇಲ್ಲಿನ ಆಡು ಮಾತುಗಳಲ್ಲಿ ಅಡಗಿರುವ ಅಣಕ ಮತ್ತು ವಿನಯ ಸ್ಮರಣೀಯ. ಇದುವೇ ಆಲ್ದಾಳರ ಶೈಲಿ.

ಶರಣರು, ಸಾಧು-ಸಂತರು ಎಂದರೆ ನಾಟಕಕಾರ ಆಲ್ದಾಳರಿಗೆ ಜೇನಿನಂತೆ ಸಿಹಿ, ಈ ಬಗ್ಗೆ ಅವರು ಶ್ರೀ ವಿಶ್ವಾರಾಧ್ಯಮಹಾತ್ಮೆ ನಾಟಕದಲ್ಲಿ ಸಾಹುಕಾರ ಸಿದ್ಧರಾಮ ಪಾತ್ರದ ಮೂಲಕ ಹೇಳಿದ್ದು –

**ಸಿದ್ಧರಾಮ :** "ಮೋಡವು ಸಮುದ್ರದ ಉಪ್ಪು ನೀರನ್ನು ಕುಡಿದಿದ್ದರೂ, ತಾನು ಜಗಕ್ಕೆಲ್ಲಾ ಸಿಹಿ ನೀರು ಕುಡಿಸಿದಂತೆ, ಶರಣರು, ಸಾಧು-ಸಂತರು ಅನುಷ್ಠಾನ, ಜಪ-ತಪ ಹೋಮ-ಹವನಾದಿಗಳು ಅಣಿ ಮಾದಿ ಅಷ್ಟಸಿದ್ದಿಗಳನ್ನು ಜಯಿಸಿರುವುದು ಜಗದಶಾಂತಿಗಾಗಿ, ಮಾನವ ಧರ್ಮದ ಏಳಿಗೆಗಾಗಿ, ನನ್ನ ಗುರುಗಳಾದ ಸದ್ಗುರು ವಿಶ್ವಾರಾಧ್ಯರು ನನ್ನನ್ನು ಈ ಶಾಖಾಪುರಕ್ಕೆ ಕರೆಯಿಸಿಕೊಂಡು ತಮ್ಮ ಜಂಗಮ ಜಿಂದಗಿಯನ್ನೇ ನನಗರ್ಪಿಸಿ ಜಗತ್ತಿಗಾವರಿಸಿದ ಅಜ್ಞಾನ ಅಂಧಕಾರವನ್ನು ತಮ್ಮ ಸುಜ್ಞಾನದ ಖಡ್ಗದಿಂದ ತರಿದುಹಾಕಲು ಚೈತ್ರಯಾತ್ರೆ ಕೈಕೊಳ್ಳುವ ಹಂಬಲ ಇಟ್ಟುಕೊಂಡಂತೆ ಕಾಣುತ್ತದೆ". ಈ ಮಾತುಗಳಲ್ಲಿ ಶರಣರು-ಸಾಧು-ಸಂತರುಗಳ ಆಚಾರ-ವಿಚಾರಗಳನ್ನು ಜನಸಾಮಾನ್ಯರಿಗೆ ಮನವರಿಕೆ ಮಾಡಿಕೊಡುವುದಾಗಿದೆ. ಆಲ್ದಾಳರ ನಾಟಕಗಳ ಭಾಷೆ, ತಂತ್ರ, ಶೈಲಿ ವಿದ್ವಾಂಸರಿಗೂ ಸಾಮಾನ್ಯರಿಗೂ ಅರ್ಥವಾಗುವಂತೆ ರೂಪಿತಗೊಂಡಿರುವುದು ಓದುಗರಿಗೂ ನಾಟಕ ವೀಕ್ಷಕರಿಗೂ ಮನದಟ್ಟಾಗುತ್ತದೆ.

ಧಾರ್ಮಿಕ ಭಾವನೆ, ತತ್ವಗಳು, ಉತ್ತಮ ಸಂಸ್ಕೃತಿಗಳನ್ನು ಲೇಖಕರು ತಮ್ಮ ನಾಟಕಗಳಲ್ಲಿ ನಿರೂಪಿಸಿ ಅವುಗಳ ಆಚರಣೆಗೆ, ಅನುಕರುಣೆಗೆ ದಾರಿ ತೋರಿಸಿದ್ದು ಪ್ರತಿಯೊಬ್ಬರ ಜೀವನ ಪಾವನಗೊಂಡು ಉತ್ತಮ ಮಾನವರಾಗಲಿ, ಮಹಾಮಾನವರಾಗಲಿ ಎನ್ನುವ ಉದ್ದೇಶ ಹೊಂದಿದ್ದಾರೆ. ಈ ಎಲ್ಲಾ ರೀತಿಯಲ್ಲೂ ಹೊಸ ಆಯಾಮವನ್ನು ಅಳವಡಿಸುವ, ಅದರಿಂದ ನಾಟಕದ ಪರಿಣಾಮದಲ್ಲೂ ವಿಶೇಷತೆ ತರುವ ಪ್ರಯತ್ನವಾಗಿದೆ. ವಸ್ತುವಿನಂತೆಯೇ ಶೈಲಿಯನ್ನು ರೂಢಿಸುವ ನಿಟ್ಟಿನಲ್ಲಿಯೂ ನಡೆದ ರಂಗಭೂಮಿಯ ಪ್ರಯೋಗಗಳು ಅತ್ಯಂತ ಗಮನಾರ್ಹ.

ಆಲ್ದಾಳ ಅವರು ರಚಿಸಿ ರಂಗಭೂಮಿಗೆ ಕೊಡುಗೆಯಾಗಿ ನೀಡಿರುವ ರಂಗನಾಟಕ 'ಇಟಗಿಯ ಸಾಧು ಶಿವಲಿಂಗೇಶ್ವರ ಮಹಾತ್ಮೆ, ಒಂದು ಹೊಸ ಸೇರ್ಪಡೆ. ಜನಸಾಮಾನ್ಯರಿಗೆ, ಓದುಗರಿಗೂ, ನಾಟಕವನ್ನು ಆರಾಧಿಸುವವರಿಗೆ ಅರ್ಥವಾಗುವ ಹಾಗೆ ಉತ್ತಮ ಸಂಭಾಷಣೆ, ದೃಶ್ಯ ಸಂಯೋಜನೆ, ಮಧುರಹಾಸ್ಯ, ಗಂಭೀರ ಆಧ್ಯಾತ್ಮ, ಒಳ್ಳೆಯರಾಗ ಸಂಯೋಜಿತ

ಹಾಡುಗಳಿಂದ ಕೂಡಿ ರಂಗಭೂಮಿಯ ಮೇಲೆ ಅಭಿನಯಿಸಲು ಈ ನಾಟಕ ಉತ್ತಮ ನಾಟಕ ಎನ್ನಿಸಿದೆ.

ಮಹಾತ್ಮರ ಮಹಾತ್ಮೆ ಕುರಿತು ಬರೆಯಲ್ಪಟ್ಟ ಆಲ್ದಾಳರ ನಾಟಕಗಳಲ್ಲಿ ಮಾನವೀಯತೆ ವಿಜೃಂಭಿಸುತ್ತದೆ. ನಾಟಕಗಳ ಪಾತ್ರಗಳ ಮೂಲಕ ಅಧ್ಯಾತ್ಮದ ಉಪದೇಶಗಳು ಹೊರಹೊಮ್ಮುತ್ತವೆ. ನಾಟಕದಲ್ಲಿನ ಯಾವುದೇ ಸಂಭಾಷಣೆ ಸಕಲರಿಗೂ ಹಿತವಾಗಿಸುತ್ತದೆ 'ಸಾಧು ಶಿವಲಿಂಗೇಶ್ವರ ನಾಟಕದಲ್ಲಿನ ಚನ್ನಬಸಯ್ಯಾ; "ಮನುಷ್ಯನಿಗೆ ಸಂಕಟವನ್ನೆದುರಿಸಲು ಮುಗುಳು ನಗೆಯ ಹೊರತು ಬೇರಾವ ಸಾಧನೆಗಳಿಲ್ಲ ತಾಯಿ, ಬಂದದ್ದು ಭೋಗಿಸಬೇಕು; ತಂದದ್ದು ತೀರಿಸಬೇಕು ಇದು ಸೃಷ್ಠಿಯ ನಿಯಮ, ನಗುವೇ ಈ ಜಗ ಗೆದೆಯುವ ಸಾಧನೆ". [೫]

'ಸಂಕಟ ಎದುರಾದಾಗ ವೆಂಕಟರಮಣನನ್ನು ನೆನೆಯುವಂತೆ' ಆಲ್ದಾಳರು 'ಮುಗುಳು ನಗೆಯನ್ನು ಪ್ರದರ್ಶಿಸಬೇಕು ಎಂದು ಹೇಳುವುದು ಸುಲಭವಾಗಿ ಅನುಸರಿಸುವ ಮಾತು, ಮುಗಳುನಗೆ ಮನುಷ್ಯನ ನೆಮ್ಮದಿ ಕಾಪಾಡುತ್ತದೆ. ಇಲ್ಲಿನ ಉಪಮೆ ಹೇಳುವಶೈಲಿ ಮನಮೋಹಕವಾದುದು, ಇನ್ನೊಂದು ಮಹಾತ್ಮರ ಮಾತಿನಲ್ಲಿರುವ ರಹಸ್ಯ ರೋಮಾಂಚನಕಾರಿಯಾದುದು ಅದನ್ನು ಸಿದ್ದಪ್ಪ ಗೌಡರ ಮಾತಿನಲ್ಲಿ ಆಲ್ದಾಳರು ಹೇಳಿಸಿದ್ದಾರೆ. 'ಅತಿ ಮಾನಸಕ್ಕೇರಿದವರು ಮುಟ್ಟಿದ್ದೆಲ್ಲ ಪರುಷವಾಗುತ್ತದೆ, ಕಂಡದ್ದೆಲ್ಲ ಪಾವನವಾಗುತ್ತದೆ. ಸುಳಿದ ಸುಳೆಲ್ಲಾ ಜಗತ್ಪಾವನವಾಗುತ್ತದೆ. ಮೆಟ್ಟಿದ ಧರೆ ಅವಿಮುಕ್ತ ಕ್ಷೇತ್ರವಾಗುತ್ತದೆ. ಸೋಂಕಿದ ಜಲವೆಲ್ಲ ಪುಣ್ಯತೀರ್ಥವಾಗುತ್ತದೆ.[೬] ಆಲ್ದಾಳರ ನಾಟಕಗಳಲ್ಲಿನ ಪಾತ್ರಗಳು, ಸಂಭಾಷಣೆ, ಅಭಿನಯ, ಭಾಷೆ, ಶೈಲಿ ಎಲ್ಲವೂ ಆಕರ್ಷಕ ಅರ್ಥಗರ್ಭಿತವಾದುದು. ಜೀವನವು ಪಾವನ.

ಸಾಧು ಶಿವಲಿಂಗೇಶ್ವರ ಮಹಾತ್ಮೆ ನಾಟಕದಲ್ಲಿನ ಕೆಳಕಂಡ ಮಾತು ತಿಳಿದುಕೊಂಡಾಗ ಜೀವನವೇ ನಶ್ವರ ಎನ್ನಿಸದಿರಲಾರದು. ಸಿದ್ಧರಾಮನ ಪಾತ್ರದ ಈ ಮಾತುಗಳು ಮುಕ್ತ...ಮುಕ್ತ! "ಯಾವುದು ಸುಖ? ಹಳೆ ತೊಗಲು ಹಸಿ ರಕ್ತದಿಂದೊಡಗೂಡಿದ ಈ ದೇಹದೊಡನೆ ರಾಸಕ್ರೀಡೆಯಾಡುವುದು ಸುಖವೆ? ಉಚ್ಚೆಯಾ ಬಚ್ಚಲದಲ್ಲಿ ಬಿದ್ದು ಒದ್ದಾಡುವುದು ಸುಖವೇ? ಕೀವು ತುಂಬಿ ವಸರುವ ಗಡಿಗೆಯ ಸೌಂದರ್ಯಕ್ಕೆ ಮಾರುಹೋಗಿ ಭವಗೆಟ್ಟು ತಿರುಗುವದು ಸುಖವೆ?[೭] ಆಲ್ದಾಳರು ನಾಟಕ ವೀಕ್ಷಕರಿಗೆ ತಮ್ಮ ಅಂತರಾತ್ಮದ ಮೂಲಕ ಜೀವನ ಅರ್ಥೈಸಿಕೊಳ್ಳುವಂತೆ ಉತ್ತಮ ಭಾಷೆಯ ಮೂಲಕ ಅಷ್ಟೇ ನಿಜಮಾತನ್ನು ಬಹಿರಂಗ ಪಡಿಸಿದ್ದು ಅವರ ಈ ಭಾಷಾಶೈಲಿಗೆ ಭಲೇ ಅನ್ನೋಣ!

'ಭರತನೂರ ಶ್ರೀ ಗುರುನಂಜೇಶ್ವರ ಮಹಾತ್ಮೆ' ನಾಟಕ ಕರ್ನಾಟಕ, ಮಹಾರಾಷ್ಟ್ರ ಮತ್ತು ಪಶ್ಚಿಮ ಬಂಗಾಲ ನಾಲ್ಕು ರಾಜ್ಯಗಳ ಪವಿತ್ರ ಕ್ಷೇತ್ರಗಳಲ್ಲಿ ಕಠಿಣವಾದ ಅನುಷ್ಠಾನ ಕೈಗೊಂಡು, ಆತ್ಮಶಕ್ತಿ ಜಾಗೃತಗೊಳಿಸಿ, ಸಕಲ ಜೀವಾತ್ಮರಿಗೆ ಲೇಸನ್ನೆ ಬಯಸಿದವರೂ, ತ್ರಿಕಾಲಲಿಂಗ ಪೂಜಾ ನಿಷ್ಠರಾಗಿ, ಜ್ಞಾನ ದಾಸೋಹದ ಜೊತೆಗೆ ಅನ್ನದಾಸೋಹ ನಡೆಯಿಸಿಕೊಂಡು ಬಂದಿರುವ ಭರತನೂರಿನ ೯ನೇ ಪೀಠಾಧಿಪತಿಗಳಾದ ಲಿಂ. ಶ್ರೀ ಗುರುನಂಜೇಶ್ವರ ಮಹಾ ಶಿವಯೋಗಿಗಳವರೊಬ್ಬರ ಜೀವನ ಚರಿತ್ರೆಯಾಗಿದೆ.

ಈ ನಾಟಕದಲ್ಲಿ ಬರುವ ಒಂದು ದೃಶ್ಯದಲ್ಲಿ ರಕ್ಕಸಿಯೋರ್ವಳು ಶಿವ ಬಸವಾಂಬೆಯಾಗಿ ಆಶ್ಚರ್ಯವೆನ್ನಿಸಿದರೂ. ಇದು ನಡೆದದ್ದು ಸತ್ಯ! ಇದು ಶ್ರೀ ಗುರುನಂಜೇಶ್ವರ ಪ್ರಭಾವದಿಂದ,

**ಶಿವಬಸವಾಂಬೆ ;** "ದೆವ್ವ ದೇವತೆಯಾಗುವದುಂಟೆ"?

ಗುರುನಂಜೇಶ್ವರ ; “ಯಾಕಾಗಬಾರದು? ಕಳ್ಳ ಕೊಲೆಗಡುಕ ಬೇಡನೊಬ್ಬ ನಾರದರ ಉಪದೇಶದಿಂದ ಪರಿವರ್ತಿಸಿ ವಾಲ್ಮೀಕ ಋಷಿಯಾಗಿ ರಾಮಾಯಣ ಬರೆದು ನಾಡೋಜನಾದ, ಅತಿಕಾಮಿ ವೇಮಣ್ಣ ಅತ್ತಿಗೆ ಹೇಮರೆಡ್ಡಿ ಮಲ್ಲಮ್ಮನ ಮೂಗುತಿಯ ಮಹಿಮೆಯಿಂದ ಪರಿವರ್ತಿಸಿ ವೇಮನಯೋಗಿಯಾದ, ಅನಂತ ವಚನಗಳನ್ನು ಬರೆದು ನಾಡಿಗೆ ಎಡೆಮಾಡಿ ನೀಡಿದ ಅತಿ ಕೃಪಣ ಚಿನಿವಾಲಶೆಟ್ಟಿ ತನ್ನ ಹೆಂಡತಿಯ ನತ್ತಿನ ಮಹಿಮೆಯಿಂದ ಪರಿವರ್ತಿಸಿ ಪುರಂದರದಾಸನಾದ, ಅನಂತ ಭಕ್ತಿ ಗೀತೆಗಳನ್ನು ಬರೆದು ಜಗದ್ವಂದ್ಯನಾದ, ಅದರಂತೆ, ನೀನು ಕೂಡ ಆಶೆ, ಆಮಿಷ, ದ್ವೇಶ, ಮತ್ಸರ, ವಿಕೃತ ಮನೋಭಾವದಿಂದ ರಕ್ಕಸಿ ಗುಣವಳಿದು ಜಂಗಮನ ಹಸ್ತ ಸ್ಪರ್ಷದಿಂದ ಪರಿವರ್ತಿಸಿ ಜಗವಿರುವವರೆಗೂ ಜಗನ್ಮಾತೆಯಾಗಿ ವಿಜೃಂಭಿಸುವಂತೆ” [೮] ಆಲ್ದಾಳರ ನಾಟಕದ ಉದ್ದೇಶ ಪ್ರೇಕ್ಷಕರನ್ನು ಸಕಲ ರಾಗ-ದ್ವೇಷಗಳಿಂದ ದೂರವಿರುವಂತೆ ತಿಳಿಸುವುದಾಗಿದೆ. ಹುಟ್ಟಿನಿಂದ ಯಾರು ಕೆಟ್ಟವರಿರುವುದಿಲ್ಲ. ಹಾಗೆಯೇ ಅವರು ಮುಂದೊಂದು ದಿನ ತಮ್ಮಲ್ಲಿ ಇರುವ ಕೆಟ್ಟ ಗುಣಗಳನ್ನು ಪರಿವರ್ತಿಸಿಕೊಳ್ಳುತ್ತಾರೆ ಎಂಬ ಸೂತ್ರವನ್ನು ಹಲವಾರು ವ್ಯಕ್ತಿಗಳ ಉದಾಹರಣೆಗಳನ್ನು ಓದುಗರಿಗೂ, ರಂಗಭೂಮಿಯ ಪ್ರೇಕ್ಷಕರಿಗೂ ಮನದಟ್ಟಾಗುವಂತೆ ಮಾಡುವ ದಿಶೆಯಲ್ಲಿ, ನಾಟಕದಲ್ಲಿ ಉತ್ತಮ ಶೈಲಿಯಲ್ಲಿ ನಿರೂಪಿಸಿದ್ದಾರೆ. ಇದನ್ನು ಎಂಥವರು ಮೆಚ್ಚಲೇಬೇಕು. ತನ್ನ ಜೊತೆಗೆ ಇನ್ನೊಬ್ಬರನ್ನು ಕರೆದುಕೊಂಡು ಹೋಗುವ ಮನಸ್ಸು ಐತಲ್ಲಾ ಅದೇ ಆಧ್ಯಾತ್ಮ, ಅದೇ ಪರಮಾತ್ಮ, ಪರಮಾತ್ಮ - ಬೇರೆಲ್ಲೂ ಇಲ್ಲ, ನಮ್ಮ-ನಮ್ಮ ಹೃದಯದಲ್ಲೇ ಅದಾನೋ, ನಮ್ಮ ಹೃದಯ ಎಷ್ಟು ವಿಶಾಲ ಆಗ್ತಾದೋ ಅಷ್ಟ ಅವನ ವಿಸ್ತಾರೈತಿ, ಜಗದಗಲ, ಮಿಗೆಯಗಲ, ಮುಗಿಲಗಲ, ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀಪಾದ ಅಂತ ಬಸವಣ್ಣನವರೇ ಹೇಳಿಲ್ಲವೇನು. ಪರಿವರ್ತನೆ ಮಾಡಿಕೊಳ್ಳುವುದು ಅದು ದೊಡ್ಡದು, ಸಮಾಜ ಉದ್ದಾರವಾಗಲಿ ಅದೇ ಅವರ ಗುರಿ.

ಆಲ್ದಾಳರ ಮತ್ತೊಂದು ನಾಟಕ “ಜಮಖಂಡಿ ಶಿವಶರಣ ಅಯ್ಯಣ್ಣ ಮುತ್ಯಾಮಹಾತ್ಮೆ”ಯ ಉದ್ದೇಶ ಸ್ಪಷ್ಟವಾಗಿದೆ. ಕೆಟ್ಟವರು ಒಳ್ಳೆಯವರಾಗಬೇಕಾದರೆ ಸತ್ಸಂಗದಿಂದ, ಶರಣರ ಚರಿತ್ರೆಗಳನ್ನು ಓದುವುದರಿಂದ, ದೃಶ್ಯಕಲೆಗಳಲ್ಲಿ ಭಾಗಿಯಾಗಿರುವುದರಿಂದ ಅನ್ನುವುದಕ್ಕೆ ಜೇವರ್ಗಿ ತಾಲೂಕಿನ ಜಮಖಂಡಿಯ “ಶಿವಶರಣ ಅಯ್ಯಣ್ಣ ಮುತ್ತ್ಯಾ” ಅವರ ನಾಟಕವೇ ಸಾಕ್ಷಿ. ಪರಮಪೂಜ್ಯ, ಪವಾಡ ಪುರುಷ ಶ್ರೀ ಅಯ್ಯಣ್ಣಮುತ್ತ್ಯಾರವರ ಬದುಕಿನಲ್ಲಿ ಮೈಲುಗಲ್ಲಾಗಿ ಬರುವ ಅದೇ ಊರಿನ ಶ್ರೀನಿವಾಸ ಕುಲಕರ್ಣಿ ಅವರು ಮುತ್ತ್ಯಾ ಅವರೊಡನೆ ದ್ವೇಷ-ವೈರತ್ವಗಳನ್ನು ಕಟ್ಟಿಕೊಂಡು ಕೊನೆಯಲ್ಲಿ ತಮ್ಮ ತಪ್ಪಿನ ಅರಿವಾಗಿ ದಾನವೀಯ ಗುಣಗಳಿಂದ ದೂರಾಗಿ ಮಾನವೀಯ ಗುಣಗಳನ್ನು ಅಳವಡಿಸಿಕೊಂಡು ಪರಿವರ್ತನೆಯಾದದ್ದು ಒಂದು ಇತಿಹಾಸ. ಈ ಇತಿಹಾಸವನ್ನು ಬೆಳಕಿಗೆ ತರುವಲ್ಲಿ ಆಲ್ದಾಳರ ನಾಟಕಗಳು ಅಮೋಘ ಪಾತ್ರವಹಿಸುತ್ತಿವೆ. ಜನರ ಮನವನ್ನು ಕಲುಕುತ್ತಿವೆ.

“ಅಯ್ಯಣ್ಣ ಮುತ್ತ್ಯಾಮಹಾತ್ಮೆ” ನಾಟಕದಲ್ಲಿ ಅಯ್ಯಪ್ಪ ಅವರ ಉವಾಚ- “ವಿಭೂತಿಧರಿಸಿದೊಡೆ ಮಲತ್ರಯಂಗಳು ಮಾಯವಾಗುವವು, ರುದ್ರಾಕ್ಷಿ ಧರಿಸಿದೊಡೆ, ತಾಮಸ ವೃತ್ತಿ ಅಳಿಯುವದು, ಬಹಿರಂಗ ಬಲಗೊಳ್ಳುವದು, ಗುರುವಿಗೆ ಪೂಜಿಸಿದರೆ ಭವಪಾಶ ಹರಿದು ಹೋಗುವದು, ಜನನ, ಮರಣ, ದೂರವಾಗುವುದು ಅಲ್ಲವೇ ಗುರುಗಳೇ” [೯]

ಕಲ್ಮೇಶ ಶಿವಾಚಾರ್ಯ, “ಎಂಥ ಅನುಭವದ ಉಕ್ತಿಗಳಿವು, ಹುಟ್ಟಿನಿಂದಲೇ ಬಳುವಳಿಯಾಗಿ ಬಂದ ಅಧ್ಯಾತ್ಮದ ವಿಚಾರಗಳಿಗೆ ಎಂಥವರೂ ತಲೆ ಬಾಗಲೇ ಬೇಕು. ಅಯ್ಯಣ್ಣಾ!

ಭವವೇ ನಿನಗೆ ದಾರಿದೀಪ, ನಿನ್ನಾತ್ಮಶಕ್ತಿಯೇ ನಿನಗೆ ರಕ್ಷಾಕವಚ" [೧೦] ಇಂತಹ ಉಕ್ತಿಗಳ ಪದಬಳಕೆ, ಮಾತಾಡುವ ಶೈಲಿಗೆ ರಂಗಭೂಮಿಯ ವೀಕ್ಷಕರು ತಲೆ ತೂಗುತ್ತಾರೆ.

ಭಕ್ತಿ ಪ್ರಧಾನ ನಾಟಕ "ಶ್ರೀ ಅಯ್ಯಪ್ಪಯ್ಯ ಮಹಾತ್ಮೆ" ವಿಶ್ವಕರ್ಮ ವಂಶದ ಮಹಾಪುರುಷರು, ಅಘಟಿತ, ಘಟನಾ ಚತುರರೂ, ಶತಮಾನದ ಹಿಂದೆಯೇ ಹಿಂದು-ಮುಸ್ಲಿಂ ಭಾವೈಕ್ಯತೆ ಸಾಧಿಸಿದ ಮಹಿಮಾವಂತರಾದ ಅಳ್ಳೊಳ್ಳಿಯ "ಪೂಜ್ಯ ಶ್ರೀ ಶ್ರೀ ಅಯ್ಯಪ್ಪಯ್ಯ ಸ್ವಾಮಿಗಳ" ಚರಿತ್ರೆಯನ್ನು ನಾಟಕರೂಪದಲ್ಲಿ ಅಳವಡಿಸಿ ಆಲ್ದಾಳರು ವಿಶ್ವಕರ್ಮ ಜನಾಂಗಕ್ಕೆ ಹಾಗೂ ರಂಗಭೂಮಿಯ ವೀಕ್ಷಕರಿಗೂ ಉಪಕರಿಸಿದ್ದಾರೆ.

ಆಧ್ಯಾತ್ಮದ ತವರೂರು ಈ ಕರುನಾಡು, ಅದರಲ್ಲಿಯೂ ಈ ಸಗರನಾಡು ಶರಣರ ಬೀಡು. ಮಹಾಮಾನವತಾವಾದಿ ವಿಶ್ವಕರ್ಮ ಜಗದ್ಗುರು ತಿಂಥಣಿಯ ಮೌನೇಶ್ವರರ ವಂಶ ವೃಕ್ಷದಲ್ಲಿ ಪಲ್ಲವಿಸಿ ಅಳ್ಳಳ್ಳಿಯ ಶ್ರೀ ಅಯ್ಯಪ್ಪಯ್ಯ ಮಹಾಸ್ವಾಮಿಗಳು ಕೂಡಾ ತಿಂಥಣಿಯ ಮೌನೇಶ್ವರರ ಮಹಾಮಣಿಹವನ್ನು ಹೊತ್ತು ಭಾರತದ ತುಂಬೆಲ್ಲಾ ಸಂಚರಿಸಿ "ಹಿಂದೂ ಮುಸ್ಲಿಂರಿಗೊಬ್ಬನೇ ಚಂದ್ರ" ಎಂದು ಬೋಧಿಸುತ್ತಾ ಜಾತಿ, ಮತ, ಪಂಥಗಳ ಕೀಳರಿಮೆಯನ್ನು ಕಿತ್ತೊಗೆದು 'ಮಾನವ ಜಾತಿ'ಯನ್ನುವದೊಂದೇ ಎಂದು ಅರುಹುತ್ತಾ, ಮಹಾತ್ಮಾ ಪೀಠವನ್ನು ಸ್ಥಾಪಿಸಿ ಜೀವಂತ ಸಮಾಧಿಯನ್ನು ತೆಗೆದುಕೊಂಡು ಸುಮಾರು ಮುನ್ನೂರು ವರುಷಗಳಾಗಿರಬಹುದು, ಇಂತಹ ಮಹಾತ್ಮರ ಜೀವನ ಚಿತ್ರಣವನ್ನು ಆಲ್ದಾಳರು ವೀಕ್ಷಕರ, ಓದುಗರ ಹೃದಯಮಿಡಿಯುವಂತೆ ರಚಿಸಿದ್ದಾರೆ. ಭಕ್ತಿಯೇ ನಾಟಕದಾದ್ಯಂತ ಶಿಖರವೇರಿದೆ.

"ಅಯ್ಯಪ್ಪಯ್ಯ : ಬಯಕೆಯ ಭ್ರಮೆಯಲ್ಲಿ ಬಿದ್ದು ಬಳಲುವುದಕ್ಕಿಂತ – ಭಗವಂತನ ಪಾದಗಳಿಗೆ ಎರಗು, ಬಾಗು, ಆಗ ನಿನಗೆ ಜ್ಞಾನೋದಯವಾಗುತ್ತದೆ". [೧೧]

"ಅಯ್ಯಪ್ಪಯ್ಯ; ಚಿಪ್ಪಿನಲ್ಲಿದ್ದರೂ ಚೊಕ್ಕಾಗಿರುವ ಮುತ್ತಿನಂತೆ, ಕೆಸರಿನಲ್ಲಿದ್ದರೂ ಹಸನಾಗಿರುವ ಕಮಲದಂತೆ, ಮಣ್ಣಿನಲ್ಲಿದ್ದರೂ ತುಕ್ಕುಹಿಡಿಯದ ಚಿನ್ನದಂತೆ, ಭೋಗದೆಡೆಗೆ ಗಮನವಿತ್ತ ನಿನ್ನ ಮನಸ್ಸಿಗೆ, ಯೋಗದೆಡೆಗೆ ಗಮನ ಹರಿಸು, ಈ ಕಲಿಕಾಲದಲ್ಲಿ ಮಾನವನು ದೇವನಾಗುವ ಕಾಲ ಸನ್ನಿಹಿತವಾಗಿದೆ". [೧೨]

"ಜಗತ್ತು ಇಂದು ಜ್ವಾಲಾಮುಖಿಯಾಗಿದೆ, ಎಲ್ಲಿ ನೋಡಿದರಲ್ಲಿ ಕೋಮುಗಲಭೆ, ಅಸಹಿಷ್ಣುತೆ ಎಲ್ಲಿ ನೋಡಿದರಲ್ಲಿ ಉಗ್ರರ ಉಪಟಳ, ಕೊಲೆ, ಸುಲಿಗೆ, ಹೆಣ್ಣಿನ ಶೀಲ ಹರಣ, ಆಸ್ತಿಗಾಗಿ ಪ್ರಾಣ ಹರಣ, ಮದ್ಯಪಾನ, ದರೋಡೆ, ಜೂಜಾಟಗಳಂತ ಹೀನ ಕೃತ್ಯಗಳಲ್ಲಿ ಸಿಕ್ಕು ದೇಶ, ನಾಡು, ನುಡಿ, ನಲುಗ ತೊಡಗಿದೆ". [೧೩] ಎಂದು ಆಲ್ದಾಳ ಅವರು ತಮ್ಮ ನಾಟಕದಲ್ಲಿ ಸಂವಾದಿಸಿದ್ದು ಅವರ ದೇಶಾಭಿಮಾನಕ್ಕೆ ಮೆಚ್ಚಬೇಕು. ಇದನ್ನೇ ಸಕಲರು ಅನುಸರಿಸಬೇಕೆಂದು ಅವರ ಆಶಯ.

ಆಲ್ದಾಳರು ನಾಟಕ ಬರೆಯುವುದರಲ್ಲಿ ತೋರುವ ನಿಷ್ಠೆ, ಚಾಕಚಕ್ಯತೆ, ಭಾಷಾ ಶೈಲಿಯ ಮುಗ್ಧತೆ ಸಕಲರನ್ನು ಪ್ರಭಾವಿತಗೊಳಿಸುತ್ತದೆ. ಅಧ್ಯಾತ್ಮ, ಭಕ್ತಿಪೂರಿತ ನಾಟಕಗಳು ಸಾಮಾನ್ಯರ ಮನಸ್ಸನ್ನು ಗೆಲ್ಲಿಸುವುದು ಸುಲಭದಮಾತಲ್ಲ. ಆದರೆ ಆಲ್ದಾಳರ ನಾಟಕಗಳು ಎಲ್ಲರ ಮನಸ್ಸನ್ನು ಗೆಲ್ಲಿಸಿ ಅಧ್ಯಾತ್ಮ ಮಾರ್ಗದಲ್ಲಿ ಕ್ರಮಿಸುವಂತೆ ಮಾಡುವಲ್ಲಿ ಯಶಗಳಿಸುತ್ತವೆ. ಇದೇ ಆಲ್ದಾಳರ ನಾಟಕದ ಮರ್ಮ, ಗುಟ್ಟು, ಸಾಹಿತ್ಯ ರಚನೆ, ನಾಟಕರಚನೆ ಮುಖ್ಯವಾಗಿರುವಂತೆ, ಅದರಲ್ಲಿನ ಅಂಶಗಳನ್ನು ರೂಢಿಗೆ ತರುವುದೇ ಅತಿಮುಖ್ಯವಾದುದು.

ಆಲ್ದಾಳರು ರಚಿಸಿದ 'ಕಡಕೋಳ ಮಡಿವಾಳೇಶ್ವರ', 'ಗರತಿ ವಿಶ್ವದ ಜ್ಯೋತಿ' ಕರಿಘೂಳೇಶ್ವರ ಮಹಾತ್ಮೆ, ಚರಬಸವೇಶ್ವರ ಮಹಾತ್ಮೆ ನಾಟಕ ಇದರೊಂದಿಗೆ, ಜೀವನ ಚರಿತ್ರೆಗಳಾದ ಕಲ್ಕಂಬದಕಿರಣ, ಪರಿಚಯಪ್ರಭಾ, ಕಮರಿಮಠದ ಕರ್ಪೂರ, ಜೋಗೂರ ಜ್ಯೋತಿ, ಬಡದಾಳ ಭಗವಂತ ಹಾಗೂ ಕೈವಲ್ಯ ಜ್ಞಾನಾಮೃತ, ಶರಣ ಕಿರಣ, ವಿಶ್ವಜ್ಯೋತಿ ಇವೆಲ್ಲ ಕೃತಿಗಳ ತಿರುಳು, ಭಕ್ತಿ ಮತ್ತು ಅಧ್ಯಾತ್ಮ. ಮಾನವ ದಿನದಿಂದ ದಿನಕ್ಕೆ ಕ್ರೂರಿಯಾಗುವುದನ್ನು ತಪ್ಪಿಸಲು ಲೇಖಕರು ತಮ್ಮ ನಾಟಕ ಮತ್ತು ಇತರ ಸಾಹಿತ್ಯದಲ್ಲಿ ಮನಪರಿವರ್ತನೆ ಮಾಡುವಲ್ಲಿ ಭಾಷೆಯ ಹಿಡಿತ ಅಮೋಘವಾಗಿಸಿದ್ದಾರೆ. ಇದರಿಂದಾಗಿ ನಾಟಕರತ್ನ ಆಲ್ದಾಳ ಅವರ ನಾಟಕಗಳು ರಂಗಭೂಮಿಯ ಮೇಲೆ ವಿಜಯದುಂದುಭಿ ಬಾರಿಸುತ್ತವೆ.

ಜೇವರ್ಗಿ ತಾಲೂಕಿನ ಶಿಕ್ಷಕ ಹಾಗೂ ಕವಿಯೂ ಆಗಿರುವ ಶಿವಾನಂದ ಗುರುಮೂರ್ತಿ ಸ್ಥಾವರ ಮಠ ಅವರ ಕೆಳಕಂಡ ಕವನ ಆಲ್ದಾಳ ಅವರು ತೋರಿದ ಮಾರ್ಗ ಅನುಸರಿಸಿದ್ದು ಸ್ವರಚಿತ, ವಚನಗಳನ್ನು ರಚಿಸಿದ್ದು ತಾಲೂಕಿನ ಸಾಹಿತಿಗಳ ಸ್ಫೂರ್ತಿಯೇ ಕಾರಣವಾಗಿದೆ. ಆಲ್ದಾಳರ ಈ ನೆನಹು ಮರೆಯಲಾಗದು. ಎಂದು ಹೆಮ್ಮೆಪಟ್ಟುಕೊಂಡು ಹೇಳಿದ್ದಾರೆ.

**"ಬಸವಾದಿ ಪ್ರಮಥರಂತಹ ಶಿವಶರಣಂಗಳು**
**ಚೆನ್ನ ಅಲ್ಲಮಸಿದ್ಧರಾಮರ ತೆರದಿ ಮಹಾಜ್ಞಾನಿಗಳು**
**ಅಕ್ಕನೀಲಾಂಬಿಕೆ ನೀಲಮ್ಮ ತೆರದಿ ಪುಣ್ಯತಾಯಂಗಳು**
**ಚೆನ್ನಯ್ಯ ಚೌಡಯ್ಯ, ಮಾರಯ್ಯ, ಹರಳಯ್ಯ**

**ಸತ್ಯಕ್ಕ ಕಾಳವ್ವೆತೆರದಿ, ಕಾಯಕದ ಶರಣ ಗಣಂಗಳು**
**ನಾಗಿದೇವ ಮಾಚಿದೇವ ಅಪ್ಪಣ್ಣ ತೆರದಿ ವೀರಗಣಾಚಾರಿಗಳು**
**ಫಕೀರಪ್ಪ ಮಂಜಪ್ಪ ಚೆನ್ನಪ್ಪತೆರದಿ ನಾಡರತ್ನಂಗಳು**
**ಮತ್ತೆ ತೋರಬಾರದೆ ಭುವನದೋಳು ಶಿವಾನಂದ ಪ್ರಭುವೆ"** [೧೩]

ಮೇಲ್ಕಾಣಿಸಿದ ವಚನಾಮೃತ ನಮ್ಮ ಹಿಂದಿನ ತಲೆಮಾರಿನ ಶರಣ-ಶರಣೆಯರ ನೆನಹು ಆಗಿದೆ. ಅದಕ್ಕಾಗಿ ಸಾಹಿತ್ಯ ಯಾವುದೇ ಪ್ರಾಕಾರವಿರಲಿ ಆ ಸಾಹಿತ್ಯವು ಅಧ್ಯಾತ್ಮಿಕ ಚಿಂತನೆಯಿಂದ ಕೂಡಿದ್ದಾಗಿರಬೇಕು. ಅದಕ್ಕಾಗಿಯೇ ಜೇವರ್ಗಿ ತಾಲೂಕಿನ ಸಾಹಿತ್ಯಪ್ರಿಯರು, ನಾಟಕಪ್ರಿಯರು ಆಲ್ದಾಳರ ಎಲ್ಲ ಸಾಹಿತ್ಯಕ್ಕೆ ಮನ್ನಣೆ ನೀಡುತ್ತಿರುವುದು ಸಂತೋಷದಾಯಕ ಬೆಳವಣಿಗೆ.

**ಆಲ್ದಾಳರ ನಾಟಕದಲ್ಲಿ ಹಾಸ್ಯ** :- ಆಲ್ದಾಳರ ನಾಟಕಗಳು ಆಧ್ಯಾತ್ಮ, ಐತಿಹಾಸಿಕ, ಸಾಮಾಜಿಕ, ಪೌರಾಣಿಕ ಯಾವುದೇ ಇರಲಿ ಆ ನಾಟಕಗಳಲ್ಲಿ ಹಾಸ್ಯರಸ ಗಂಗೆಯ ನೀರಿನಂತೆ ದುಮ್ಮಿಕ್ಕಿ ಹರಿದಿದೆ. ಅದರಲ್ಲಿ ಪ್ರೇಕ್ಷಕರು ಮುಳುಗಿ ನಕ್ಕು-ನಕ್ಕು ಉಸಿರುಗಟ್ಟಿಸುವಂತೆ ಮಾಡುವುದಾಗಿದೆ.

'ಭರತನೂರ ಶ್ರೀಗುರು ನಂಜೇಶ್ವರ ಮಹಾತ್ಮೆ' ನಾಟಕದಲ್ಲಿನ ಈ ದಂಪತಿಗಳ ಗುದ್ದಿನ ಮಾತಾಟ ಬಹುರಂಜನೀಯ ಎನ್ನಿಸದೇ ಇರದು.

**"ಜಕ್ಕಪ್ಪ** : ರೊಕ್ಕಾ ಅಂದ್ರ ಉಕ್ಕಿ ಬರತಾದ ಸಿಟ್ಟು, ಹಣಿಕೊಯ್ದು ಮಿಣಿಮಾಡಿದರೂ ನನ್ನ ಹತ್ತಿರ ಒಂದು ಒಡಕು ಕಾಸಿಲ್ಲ.

**ಜಕ್ಕಮ್ಮ** : ಬಿಡು। ನನ್ನ ತವರ ಮನೀಗಿ ಹೋಗಿ ಇಟಗೊಂಡ ಬರತೀನಿ,

**ಜಕ್ಕಪ್ಪ** : ಹೋಗಲ್ಲ ಯಾರ ಬ್ಯಾಡಂತಾರ। ಹೋಗಕ್ಕಿ ಹೋಗ್ತೀದಿ ನನಗೂ ಒಂದು ಜೋಡ ದೋತ್ರ ತಗೊಂಡಬಾ.

**ಜಕ್ಕವ್ವ** : ಹೆಳ್ಳಿಕ್ಕಿ ನಾಚಿಕಿ ಬರಬೇಕು।

**ಜಕ್ಕಪ್ಪ** : ನಾಚಿಕಿ ಯಾಕಲೇ। ಬೇಡುಂಡ ಬಾಯಿ ನಾಡಕಾಣ್ತಾದಂತ" [೧೪]

ಈ ಮಾತುಗಳು ಸಹಜ ಎನ್ನಿಸಿದರೂ ಅದರ ಒಳಾರ್ಥ ಬಲ್ಲವನೇ ಬಲ್ಲ. ಇದು ಆಲ್ದಾಳರ ಶೈಲಿ, ಮಾತಿನ ಧಾಟಿ ಮುಚ್ಚಿ, ಮುಚ್ಚಿ ಹೊಡೆಯುವುದಾಗಿದೆ.

"ಸುಕ್ಷೇತ್ರ ಅಳ್ಳೊಳ್ಳಿ ಶ್ರೀ ಅಯ್ಯಪ್ಪಯ್ಯ ಮಹಾತ್ಮೆ" ಈ ಸಂವಾದದಲ್ಲಿ ಅಡಕವಾಗಿರುವ ಮಾತಿನ ಅರ್ಥವೇ ದಿಕ್ಕಾಪಾಲಾಗಿ ಅನರ್ಥವಾಗುತ್ತಿದೆ. ಇದು ನಾಟಕಕಾರನ ಭಾಷಾ ಶೈಲಿಗೆ ನೀಡಿರುವ ರೂಪು ಮೆಚ್ಚುವಂಥದ್ದು ಆಗಿದೆ.

"**ಕಾಶಪ್ಪ** : ಸಲಾಂ, ಸಲಾಂ ಎಲ್ಲಾ ಆರಾಮಾ ಎಲ್ಲಿಗೆ ಹೊಂಟಿದಲ್ಲಲೇ ತಮ್ಮಾ?

**ದಾವಲ** : ಹಲಕಟ್ಟಿ, ಹಲಕಟ್ಟಿ ಹಾಂ ಹಲಕಟ್ಟಿ

**ಕಾಶಪ್ಪ** : ಹಾಂ। ಏನಂದೀ.....

**ದಾವಲ್** : (ಜೋರಾಗಿ) ಹ... ಹ... ಹಲಕಟ್ಟಿ

**ಕಾಶಪ್ಪ** : ಯಾರ್ ಹಲ್ಕಟ್ಟಲೇ ಭಾಡ್ಯಾ। ನಿನಗ ಮಾತ ಆಡ್ಸಿದ್ದಾ, ಸುಮಸುಮ್ಮನ ಹಲ್ಕಟ್ ಅಂತಬೈತಿ, ನಿನ್ನ ಎಲುಬು ತೊಗಲೊತ್ತಟ್ಟಗಿ ಮಾಡೇನು? ಎಬಡ ನನ್ಮಗನಾ ಒಯ್ದು.

**ದಾವಲ್** : (ಜೋರಾಗಿ) ಅರೇ ಕಾಶಪ್ಪಂದು – ಹಾಸಪ್ಪಂದು ಅಣ್ಣಾ। ನಿಮ್ದುಗೇ ಬೈದಿಲ್ಲಾ ಐದಿಲ್ಲಾ ಹಲ್ಕಟ್ಟಿ ಗಾಂವಕೋ ಗಾಂವಕೋ" [೧೫]

'ಜಮಖಂಡಿ ಶಿವಶರಣ ಅಯ್ಯಣ್ಣ ಮುತ್ತ್ಯಾಮಹಾತ್ಮೆ' ನಾಟಕದಲ್ಲಿ ಕಂಡು ಬರುವ ಹಾಸ್ಯ ಪ್ರಸಂಗ ಓದುಗರು, ಪ್ರೇಕ್ಷಕರಿಗೆ ನಕ್ಕು ನಲಿಯುವಂತೆ ಮಾಡುತ್ತವೆ.

"ಶುಕ್ರ : ನಮ್ದು ಜಿಲೇಬಿ ಖಾನೇವಾಲೊಂಕಾ ಮೂ ಮೀಠಾ, ದೇಖನೇ ವಾಲೊಂಕಾ ದಿಲ್ ಖಟ್ಟಾ ಕೊಡಂದಿ ಕ್ಯಾ.

**ಯಂಕಿ** : ಮೊದ್ಲ ನನ್ನ ತುಪ್ಪದ ಯಾಪಾರ ಮಾಡ್ರಿ, ಆ ಮೇಲೆ ನಿನ್ನ ಯಾಪಾರ ನಾ ಮಾಡ್ತಿನಿ.

**ಯಂಕ** : ಮೊದ್ಲ ನನ್ನ ಯಾಪಾರ ಮಾಡ್ರಿ ಜಿಲೇಬಿ ತಿಂದ್ರ ಜುಲಾಬ ಆಗ್ತಾದ, ತುಪ್ಪ ತಿಂದ್ರ ಡಗ್ಗ ಹತ್ತತ್ತಾದ ಗಜ್ಜರಿ, ಗೆಣಸ, ಮುಲ್ಲಂಗಿ ತಿಂದ್ರ ದೇಹಕ್ಕಾ ಯೋಗ್ಯವಾಗೈತೆ, ಕೊಡಂದೇನು ಒಂದು ಮುಲ್ಲಂಗಿ" [೧೬]

**ಶುಕ್ರ** : ಕ್ಯಾ ನಮ್ಮದು ಹೊಟ್ಟೆ ಮ್ಯಾಲ ಯಾಕ್ ಮಣ್ ಹಾಕ್ತೀಯೋ ಹೆಣಾ.

**ಯಂಕ** : ಹೆಣಾ ಅಲ್ಲೊ ನಿನ್ನವ್ವ ಎಣ್ಣಾ ಅನ್ನು ನೀ ಎನ ನಮಗ ಕಾಡಮಗೇರಿ ಕ್ವಾಣಾ ಗಂಟ ಬಿದ್ದಾಂಗ ಬಿದ್ದೀದಿ".

ಗ್ರಾಮಾಂತರ ಪ್ರದೇಶದಲ್ಲಿ ಬಳಸುವ ಭಾಷೆಯನ್ನು ನಾಟಕದಲ್ಲಿ ಉಪಯೋಗಿಸಿ ಹಾಸ್ಯಕ್ಕೆ ರಂಗು ತರಲಾಗಿದೆ. ಇದೊಂದು ರೀತಿಯ ವಿಡಂಬನಾ ಶೈಲಿ.

ಆಲ್ದಾಳರು ಕಲಾಪಾರಂಗತರು ನಾಟಕದಲ್ಲಿ ಬಳಸಿರುವ ಒಗಟು ಹಾಸ್ಯದ ರೀತಿ ಮುಜುಗರ ಉಂಟು ಮಾಡಿದರೂ ಗ್ರಾಮೀಣ ಪ್ರದೇಶದಲ್ಲಿ ಈ ಘಟನೆಗಳು ನಿತ್ಯದ ಮಾತುಗಳೇ ಆಗಿರುತ್ತವೆ ಒಗಟು ಓದಿ.

"**ಯಂಕಿ** ; ಏ! ಶುಕ್ರಮಾಮಾನೀ ಒಂದ ಹಾಕ ಒಗಟ.

**ಶುಕ್ರು** : ಸೀರಿ ಬಿಚ್ಚು ಕೈ ಹಚ್ಚು (ಇಬ್ಬರು ಹೊಡೆಯುವರು)

**ಯಂಕಿ** : ಏನಂದ್ಯೋ ಮಗನ ಸೀರೆ ಬಿಚ್ಚು ಕೈ ಹಚ್ಚು

**ಶುಕ್ರು** : ಯಾಕ ಹೋಡೀತೀರಿ ಪರದೇಶಿಗಿ, ಅದು ಒಗಟೈತಿ!
(ಒಗಟಿನ ಅರ್ಥ : ಬಾಳೆಹಣ್ಣು ಅದನ್ನು ಸುಲಿದು ಕೈಯಲ್ಲಿ ಹಿಡಿ)

ಆಲ್ದಾಳ ಅವರು ಮುಸ್ಲಿಂ ಧರ್ಮದವರಾಗಿದ್ದರೂ ಕನ್ನಡ ಭಾಷೆ ಅವರ ಕೈಯಲ್ಲಿ ಕನ್ನಡಿಸುತ್ತಿದೆ. ಅವರ ವಿಚಾರ ಶೀಲತೆ ಸಕಲ ಸಮುದಾಯದವರಿಗೆ ಇಷ್ಟವಾಗುತ್ತದೆ. ಆಲ್ದಾಳರು ಇರುವಲ್ಲಿ ನೂರಾರು ಜ್ಞಾನೋಪಾಸಕ, ರಂಗನಟರು, ಅಭಿಮಾನಿಗಳು ನೆರೆಯುತ್ತಾರೆ. ಇವರು ಕನ್ನಡದ ಆನಂದತೀರ್ಥರೆ ಎಂದರೆ ಸರಿ ಎನ್ನಿಸುತ್ತಿದೆ. ಅವರ ಈ ಕ್ರಿಯಾಶೀಲ ಸಾಧನೆಯ ಹಾದಿ ಇಂದಿನ ಹಾಗೂ ಮುಂದಿನ ಯುವ ಪೀಳಿಗೆಗೆ ಮಾದರಿಯೇ ಸರಿ. ಆಲ್ದಾಳರ ನಾಟಕಗಳಲ್ಲಿ ಕಂಡು ಬರುವ ಭಾಷಾಶೈಲಿ ಅನುಪಮ. ಇಲ್ಲಿ ಭಾಷೆಯ ಆಳ ಮತ್ತು ವಿಸ್ತಾರ ಎರಡಕ್ಕೂ ಆದ್ಯತೆ ನೀಡಲಾಗಿದೆ.

ಆಲ್ದಾಳ ಅವರು ತಮ್ಮ ನಾಟಕಗಳಲ್ಲಿ ಭಾಷಾಶೈಲಿಗೆ ಮಹತ್ವ ನೀಡಿದ್ದರಿಂದಲೇ ಅವರ ನಾಟಕಗಳು ರಂಗಭೂಮಿಯ ಮೇಲೆ ಅಪಾರ ಜನಮನ್ನಣೆಗೊಳ್ಳುತ್ತಿವೆ.

ಆಲ್ದಾಳರ ನಾಟಕಗಳ ಮಂಥನಗೈಯ್ಯಾಗ ಅಲ್ಲಿ ಕಂಡು ಬರುವ ವಿಷಯ ವಸ್ತು, ಉತ್ತಮ ತಂತ್ರ, ಭಾಷಯೆ ಅಚ್ಚುಕಟ್ಟುತನ, ಸರಳವಾದ ಸಂವಾದಗಳು, ಅದರಲ್ಲಿ ಅಡಕವಾಗಿರುವ ಶೈಲಿ, ಅಲ್ಲದೆ ಹಿಂದಿ, ಉರ್ದು, ತೆಲುಗು ಮರಾಠಿ, ಇಂಗ್ಲಿಷ ಭಾಷೆಗಳ ಬಳಕೆ ಕೇಳುಗ ಪ್ರೇಕ್ಷಕರಿಗೆ

ಆನಂದ ಸಾಗರದಲ್ಲಿ ತೇಲಿಸುತ್ತದೆ. ಇದು ಆಲ್ದಾಳರು ಕಂಡು ಕೊಂಡಿರುವ ಒಳಗುಟ್ಟು, ಉದಾಹರಣೆಗೆ.

"ಏಕತರಏಕಕಿ ಮಾಜಾಗೋಷ್ಠಿ (ಮರಾಠಿ), 'ದೇವು ನಿಯಂನುಂಚಿ ಅಂದ್ರ ಕ್ಷೇಮಂಗಾ ಉನ್ನಾರು' (ತೆಲುಗು), 'ಅಯ್ಯಯಮ್ಮ ಎಷ್ಟು ಬಚ್ಚಾವು ತಮ್ಮಾ (ಹಿಂದಿ), ಗುಡ್ ಮಾರ್ನಿಂಗ್ ಮಿಸ್ಟರ್ ಮನೋಹರ ಯಾವಾಗ ಬಂದೆ?" (ಇಂಗ್ಲಿಷ) ಇತ್ಯಾದಿ. ಭಾಷೆಬಳಕೆ ಮಾಡುವುದೇ ಸಾಹಿತ್ಯದ ಶೈಲಿ, ಇದರಲ್ಲಿ ರೋಚಕತೆ ತುಂಬುತ್ತದೆ.

ನಮ್ಮ ಸುತ್ತ-ಮುತ್ತಲ ಸಮಾಜದಲ್ಲಿ ದಿನ ನಿತ್ಯ ನಡೆಯುವ ಘಟನೆಗಳನ್ನೆ ಆಧರಿಸಿ ನಾಟಕ ರಚಿಸಿ, ಪ್ರೇಕ್ಷಕರನ್ನು ಕೇವಲ ರಂಜಿಸುವುದಕ್ಕೆ ಮಾತ್ರ ಸೀಮಿತವಾಗಿಟ್ಟುಕೊಳ್ಳದೆ, ನಾಟಕದಲ್ಲಿ ತೋರುವ ಚಿತ್ರಣ, ಕಥೆ ಅದರಲ್ಲಿರುವ ಮೌಲ್ಯಗಳನ್ನು ಅರ್ಥೈಸಿಕೊಂಡು ಜೀವನ ಫಲಕಾರಿಯಾಗಲು ಶ್ರಮಿಸುವುದಾಗಿದೆ. ಜೀವನ, ಬದುಕು ಎಲ್ಲವೂ ಅಸ್ತಿರ, ಆದರೆ ಬದುಕು ಕಂಡುಕೊಂಡಿದ್ದು, ಅದನ್ನು ಸಮರ್ಪಕವಾಗಿ ಇತರರಿಗೆ ನೆರವಾದದ್ದು ಸ್ಥಿರವಾದದ್ದು. ಆಲ್ದಾಳರು ತಮ್ಮೆಲ್ಲ ನಾಟಕಗಳಲ್ಲಿ ಆಯಾ ಪಾತ್ರಗಳ ಮುಖಾಂತರ ಜೀವನದ ಮೂಲ ಉದ್ದೇಶ, ಆಶಯವನ್ನು ಹೇಳುವ ಪ್ರಯತ್ನ ಮಾಡಿದ್ದಾರೆ.

ಆಲ್ದಾಳರ ನಾಟಕಗಳು ಕೊನೆಯ ದೃಶ್ಯದಲ್ಲಿ ಸುಖಾಂತ್ಯವನ್ನೇ ಸೃಷ್ಟಿಸುತ್ತ ಮಾನವನ ಜೀವನದಲ್ಲಿ ಬಂದು-ಹೋಗುವ ಘಟನೆಗಳನ್ನು ಎಳೆ-ಎಳೆಯಾಗಿ ಬಿಚ್ಚಿಟ್ಟು ಯಾವುದು ಹಿತ-ಅಹಿತ ಎನ್ನುವ ಬೋಧನೆಯನ್ನು ಬೋಧಿಸುವ ಭಾಷಾಶೈಲಿ, ನಟನೆ ಮರೆಯಲಾಗದು ಅವಿಭಕ್ತ ಕುಟುಂಬಗಳು ವಿಭಕ್ತಗೊಳ್ಳುವುದನ್ನು, ಸಾಂಪ್ರದಾಯಿಕ ಜೀವನಶೈಲಿ ಶಿಥಿಲಗೊಳ್ಳುವುದನ್ನು ಇವರ ನಾಟಕಗಳು ಇಷ್ಟಪಡುವುದಿಲ್ಲ, ಕಡಿದುಹೋದ ಕುಟುಂಬ ಸಾಮರಸ್ಯ, ಸಾಮಾಜಿಕ ಸಾಮರಸ್ಯದೆಳೆಗಳನ್ನು ಮತ್ತೆ ಕೂಡಿಸುವ ಮತ್ತು ಸಾಮರಸ್ಯದ ವಾತಾವರಣವನ್ನು ಪುನಃ ಸೃಷ್ಟಿಸುವ ಪಾತ್ರವೊಂದು ಎಲ್ಲ ನಾಟಕಗಳಲ್ಲಿ ಕಾಣುತ್ತೇವೆ. 'ಪತಿಭಕ್ತಿ'ಯಲ್ಲಿ ಜಮುನಾಳ ಬದುಕು ಅಂತ್ಯದಲ್ಲಿ ಸುಖಾಂತ್ಯ ತಲುಪುತ್ತದೆ. ಅದೇ ರೀತಿ 'ಕಲಿಯುಗದ ಕನ್ಯೆ' ನಾಟಕದಲ್ಲೂ ಶೋಭಾಳ ಪಾತ್ರ ಮೆಚ್ಚುವಂಥದ್ದು. ಇಂಥ ಪಾತ್ರಗಳು ನಾಟಕದ ಸೂತ್ರಧಾರಗಳಾಗಿವೆ.

ದುಷ್ಟರು ತಾವು ಮಾಡಿದ ಹೀನ ಕೃತ್ಯಗಳಿಗೆ ಪಶ್ಚಾತಾಪಪಟ್ಟು ಒಳ್ಳೆಯವರಾಗಿ ಪರಿವರ್ತನೆಗೊಳ್ಳುತ್ತಾರೆ. ಆಲ್ದಾಳರ ನಾಟಕದ ಕೊನೆಯಲ್ಲಿ ಓದುಗರಿಗೂ, ಪ್ರೇಕ್ಷಕರಿಗೂ ಸಂದೇಶವಿರುತ್ತದೆ. ನೀತಿ ಹೇಳುವ ರೀತಿ ತಿಳಿದರೆ ಇವರ ಎಲ್ಲಾ ಸಾಹಿತ್ಯ ಕೃತಿಗಳು ಸನಾತನ ಸಂತನಂತೆ ಕಾಣುತ್ತವೆ. ಈ ಕಾರಣದಿಂದಾಗಿ ಆಲ್ದಾಳರ 'ಸ್ಥಾನ', ನಾಟಕ ಸಾಹಿತ್ಯ ಕ್ಷೇತ್ರದಲ್ಲಿ ಬೇರೆಮಾತಿಲ್ಲದೆ ಚಿರಸ್ಥಾಯಿಯಾಗಿ ನೆಲೆ ನಿಲ್ಲುತ್ತದೆ.

ರಂಗ ಪ್ರದರ್ಶನದ ಕೆಲಸ ಸರಳವಾದುದಲ್ಲ, ನಾಟಕದಲ್ಲಿ ಮಾತು ಮತ್ತು ಕ್ರಿಯೆಯ ನಡುವಣ ಸಂಬಂಧ ಇನ್ನೂ ತೊಡಕಾದದ್ದು. ಹರಿಯಲೂ ಆಗದ ಹಿಡಿಯಲೂ ಬಾರದ ವಿಚಿತ್ರ ಸಂಬಂಧ ಇದು, ನಾಟಕಕ್ಕೆ ಭಾಷೆ ಒದಗಿಸಬಲ್ಲ ವೈಚಾರಿಕತೆಯೂ ಬೇಕು. ಲಿಖಿತ ಭಾಷೆಯನ್ನೂ ಮೀರಬಲ್ಲ ನಾಟಕೀಯತೆಯೂ ಬೇಕು, ಮೂರ್ತವಾದ ದೃಶ್ಯವೂ ಬೇಕು, ಅಮೂರ್ತವಾದ ಕಾವ್ಯವೂ ಬೇಕು. [೧೭]

ಒಟ್ಟಿನಲ್ಲಿ ನಾಟಕ, ರಂಗಭೂಮಿ, ಪ್ರೇಕ್ಷಕ ಈ ಮೂರು ತತ್ವಗಳು ಒಂದೆಡೆ ಸೇರ್ಪಡೆಗೊಂಡಾಗ ನಾಟ್ಯಾನುಭವ ಸಿದ್ಧಿಸುತ್ತದೆ.

"ಜೇವರ್ಗಿಜ್ಯೋತಿ ಶ್ರೀಷಣ್ಮುಖ ಶಿವಯೋಗಿ" ನಾಟಕವು ಕಲಬುರುಗಿ ಜಿಲ್ಲೆ ಜೇವರ್ಗಿ ಮಠದ ಶ್ರೀಷಣ್ಮುಖ ಶಿವಯೋಗಿಗಳು ನಾಡು ಕಂಡ ಶ್ರೇಷ್ಠ ವಚನಕಾರರು. ಅವರ ವಚನಗಳಲ್ಲಿ ಲೋಕಾನುಭವವಿದೆ, ತಾತ್ವಿಕ ಹಿನ್ನೆಲೆಯಿದೆ, ವೀರಶೈವ ಸಿದ್ಧಾಂತವಿದೆ. ಬದುಕಿಗೆ ದಾರಿಯಿದೆ ಬೆಳಕಿದೆ. ಈ ಪುಣ್ಯಪುರಷರನ್ನು ಆಲ್ದಾಳರು ತಮ್ಮ ನಾಟಕ ಕೃತಿಯ ಮೂಲಕ ರಂಗಭೂಮಿಗೆ ಕಾಣಿಕೆಯಾಗಿ ಅರ್ಪಿಸಿದ್ದಾರೆ. ಎಲ್ಲವರ್ಗದವರಿಗೆ ನಾಟಕ ಮನಸೂರೆಗೊಳಿಸಿದೆ ಹಾಸ್ಯವಂತೂ ಭರಪೂರ ಕಳೆಕಟ್ಟಿದೆ. ನಗಲಾರದವರೇ ಅಪರೂಪ, ಚನ್ನ-ಗೌರಿ ಪಾತ್ರಗಳು ಹೊಟ್ಟೆಬಿರಿಯುವಷ್ಟು ನಗಿಸಿವೆ. ಇಲ್ಲಿ ಹೇಳುವ ಸಂವಾದ ಶೈಲಿ ಅಮೋಘ, ಆನಂದಮಯ!

"**ಚನ್ನ** : ಅಲ್ಲಾ! ಎಂಥಾ ದಡ್ಡ ಇರಬೇಕು ನಿಮ್ಮಗೌಡರು ಮದುವಿ ಮಾಡಾಕ ತಯ್ಯಾರಾಗ್ಯಾರ ನಾನು ಮೂರು ವರ್ಷದಿಂದ ಮದುವಿ ಮಾಡ್ರ್ಯೊಅಂದ್ರೂ ಒಬ್ಬರೂ ನನ್ನ ದಾದ ಮಾಡೋವಲ್ರು ನೀನರ ತೆರಿಬೆ.

**ಗೌರಿ :** ಏನ್

**ಚನ್ನ :** ಕಣ್ಣು! ನನಗೂ ಈಗ ವಯಸ್ಸು ಬಂದೈತಿ ಮೀಸಿ ಮೂಡಕ ಹತ್ಯಾವು

**ಗೌರಿ :** ನನಗೂ ನಿನಗ ನೋಡಿದ ಕೂಡಲೇ ಒಂದು ನಮೂನೆ ಆಗುತ್ತೆ

**ಚನ್ನ** : ಹೆಂಗ ಆಗುತ್ತ, ಏನಾಗತ್ತ, ಹೇಳ ಮತ್ತ

**ಗೌರಿ** : ತಡ್ಕೋ ಎ ಮಾರಾಯ! ಹೇಳೋಮಟ ಅರೆ ಪುರಸತ್ತ ಇಲ್ಲೇನ ನಿನಗ

**ಚನ್ನ** : ನಮಗ ಈ ಮಾಲ ದಕ್ಕೂತ್ತೋ  ಏನ ಇಲ್ಲೊ

**ಗೌರಿ** : ವಿಚಾರ ಮಾಡಿ ಹೇಳ್ತಿನಿ ಈಗ ನನಗ ಅವಸರ ಐಯ್ತಿ" [೧೮]

ಈ ಸಂವಾದ ಗ್ರಾಮೀಣ ಜನತೆಯ ಭಾಷೆಯಲ್ಲಿದ್ದು, ಇದು ಸಾಮಾನ್ಯ. ಅದಾಗ್ಯೂ ಇಲ್ಲಿನ ಭಾಷೆ ಹಾಗೂ ಮಾತನಾಡುವ ಶೈಲಿ ಕಣ್ಣು ಕುಕ್ಕಿಸಿ ನಗಿಸುತ್ತದೆ. ಆಲ್ದಾಳರ ನಾಟಕ ಸಾಹಿತ್ಯ ಈ ಶತಮಾನದ ಶಿರೋರತ್ನದಂತಿದೆ. ಕೆಳಗಿನ ಸಂವಾದ ಗ್ರಾಮೀಣ ಸೊಗಡು ಬಿಂಬಿಸುತ್ತಿದೆ. ಪ್ರೇಕ್ಷಕರಿಗೆ ಉತ್ಸಾಹ ಮೂಡಿಸುತ್ತಿದೆ. ಕಚಗುಳಿ ಉಂಟು ಮಾಡುತ್ತದೆ.

"**ಚಿದಂಬರ** : ಏನಗೌರಿ ಬಟ್ಟಿ ಒಗಿಯಾಕ ಹೊಂಟಾಂಗಕಾಣ್ಸತ್ತ

**ಗೌರಿ** : ಯಾಕ್ರಿ ಕುಲಕರ್ಣೇರ! ಬಟ್ಟಿ ಒಗಿಯಾಕ ಹೊಂಟಿದ್ದು ನೋಡಿದ ಮ್ಯಾಲ ಕೇಳ್ತಿರಲ್ಲ, ಅಂತೂ ಹೆಣ್ಮಕ್ಕಳೀಗಿ ಮಾತಾಡ್ಸಾಕ ಒಂದ ಹಾದೇನು?

**ಚಿದಂಬರ** : ಹೌದು! ಮಾತಾಡಿಸಿ ನಿನ್ನಂಗ ಸಂಗದ ಸವಿ ಸುಖ ಉಂಡು ಹೋಗಬೇಕಂತ ಬಂದೀನಿ, ಇದ್ಕು ನೀ ಏನಂತಿ?

**ಗೌರಿ** : ಒಟ್ಟ ನೀವು ನಾಯಿ ಕುಲದವರು ಅಂದಂಗಾತು

**ಚಿದಂಬರ** : ನೀನು ನಾಯಿಯರ ಅನ್ನು, ದನಾ ಅರ ಅನ್ನು ಒಟ್ಟ ಊಟ ಮಾಡಿಸಬೇಕು.

**ಗೌರಿ** : ಅಯ್ಯ ಪಾಪ! ಹಸ್ತಬಂದವರ್ಗಿ ಊಟಕ ಬಡಸದಿದ್ದರಾ ಪಾಪ ಬರತದಂತ (ಬಟ್ಟಿಗಂಟ ಹೊಕ್ಕಟ್ಟು ಕುಡಗೋಲು ಹಿಡಿದು) ಬಾರಲಾ ಮೂಳಾ ಅಲಾ ಮೂಳಾ ಊಟ ಮಾಡಸ್ತೀನಿ ನಿನ್ನ ಮೂಗು ಕೊಯ್ದು ಮೂರು ಹಾದಿಕೂಡಿದಲ್ಲಿ ಕುಂದರ್ಸಿ ನಿನಗ ಊಟ ಮಾಡಸಲಿಲ್ಲಾಂದ್ರ ನನ್ನ ಹೆಸರ ಕುಡಗೋಲ ಗೌರಿನ ಅಲ್ಲ.

**ಚಿದಂಬರ** : ಏ ಗೌರಿ! ನಾಲಿಗಿ ಬಿಗಿ ಹಿಡಿದು ಮಾತಾಡು.

**ಗೌರಿ** : ಥೂತ್‌ನಾಯಿ। ನೀ ಹ್ಯಾಂಗ ಹುಟ್ಟೇದಿ ಅಂತೀನಿ, ನಾಲ್ಕು ವೇದಗಳನ್ನು ಅಧ್ಯಯನ ಮಾಡಿದ ಬ್ರಾಹ್ಮಣ್ಣರ ಹೊಟ್ಟ್ಯಾಗ ಶಂಕರಾಚಾರ್ಯರು, ರಾಮಾನುಜಾಚಾರ್ಯರು, ಮಧ್ವಾಚಾರ್ಯರು ಹಾಕಿಕೊಟ್ಟ ಹಾದೀನ ಮರೆತು ಮರುಗೇಡಿ ಆಗೂದಕ್ಕಿಂತ ಮುಂಚೆ ಆ ಮಹಾತ್ಮರ ಧ್ಯಾನ ಮಾಡ್ಕೊಂತ ಕುಂತರ ನಿನ್ನ ಜನ್ಮರ ಪಾವನ ಆದೀತು." [೧೯]

ಮೇಲ್ಕಾಣಿಸಿದ ಸಂವಾದದಲ್ಲಿ ಆಲ್ದಾಳರ ಭಾಷಾಶೈಲಿ ಚಮತ್ಕಾರವನ್ನೇ ಸೃಷ್ಟಿಸಿದೆ. ಕೇವಲ ಹಾಸ್ಯಕ್ಕಾಗಿ ಸಂವಾದವಲ್ಲ. ಅದರಲ್ಲಿರುವ ಮಾನವೀಯತೆ ಮಹಿಳೆಯ ಮುಖದಿಂದ ಹೇಳಿಸಿರುವುದು ಭಲೇ ಎನ್ನುವಂತದು. ಗ್ರಾಮೀಣ ಪ್ರದೇಶದಲ್ಲಿ ಮೇಲಿನಂತೆ ಘಟನೆಗಳು ನಡೆಯುತ್ತಿರುವುದು ನಿಜವಾಗಿದ್ದರೂ ಈಗ ಸ್ತ್ರೀಯರು ಎಚ್ಚೆತ್ತಿದ್ದು ಪ್ರತಿಭಟನೆ ತೋರುತ್ತಿರುವುದು ಸ್ವಾಗತಾರ್ಹ. ಭಾಷೆಯ ಶೈಲಿ ಇಲ್ಲಿ ಹಾಸ್ಯಮಯವಾಗಿದೆ ನಿಜ. ಆದರೆ ಆಲ್ದಾಳರು ನಗುವಿನ ಹಿಂದೆ ಜನತೆಯ ನಗ್ನತೆ ಪರದೆ ಬಿಚ್ಚಿರಿಸಿದ್ದು ಇದೊಂದು ಉತ್ತಮ ಪಾಠ.

ಆಲ್ದಾಳರ ಎಲ್ಲಾರೀತಿಯ ಸಾಹಿತ್ಯ ಓದುವುದು, ನಾಟಕಗಳನ್ನು ರಂಗಭೂಮಿಯ ಮೇಲೆ ವೀಕ್ಷಿಸುವುದು ಕೇವಲ ಮನರಂಜನೆಗಾಗಿ ಎಂದು ಮಾತ್ರ ತಿಳಿಯಬಾರದು. ಅದರಲ್ಲಿ ಅಡಕವಾಗಿರುವ ಜೀವನದ ಮೌಲ್ಯಗಳನ್ನು ಆಯ್ಕೆ ಮಾಡಿಕೊಳ್ಳಬೇಕು. ನಾಟಕ ಮನರಂಜನೆ ನಿಜ. ಅದರ ಜೊತೆಗೆ ಜೀವನಕ್ಕೆ ಪಾಠ, ನೆಲೆಗಟ್ಟು ಕಾಣಬಹುದು.

ಕೆಲವು ಮಾತುಗಳು, ಜೀವನಕ್ಕೆ ಹೇಗೆ ನೆರವಾಗುತ್ತವೆ ತಿಳಿಯೋಣ. (ಕಣ್ಣಿಟ್ಟ ಕೈಕೊಟ್ಟ ನಾಟಕದಿಂದ)

**ಭದ್ರಿ** : "ಯಲಾ ನಿನ್ನ ಉಡದಾರ ಹರಿಲಿ, ಬಾಸಿಂಗ್ ಕತ್ರಸ್ಲಿ, ಯಾವ ಊರವ್ನಲಾ ಮುಲ್ಲಾ ಫಕೀರಾ, ಪಿಂಜಾರಾ, ನಿನ್ನ ಹಲ್ಲಕಿತ್ತಿ ಕೊಲ್ಲೂರ ಜಾತ್ರೆಗೆ ಕಳ್ಸೆನ! [೨೦] (ಗಂಡಸೊಬ್ಬ ಡಿಕ್ಕಿ ಹೊಡೆದಾಗಿನ ಮಾತು)

**ಭಾರತಿ** : "ಛೇ, ಛೇ ಏನಿದು ನಿನ್ನದುರ್ವಾಸನೆ, ಅಚ್ಚಸಂಸ್ಕೃತಿಯ ನೆಲೆಗಟ್ಟಾದ ಸಚ್ಚಾರಿತ್ರೆಯ ಮೇಲೆ ತುಚ್ಛ ಭಾವನೆಯ ತಾಂಡವನೃತ್ಯವೆ? ಮಾರುತಿ ಈ

ದುಶ್ಚಟದಿಂದ ದೂರಾಗು ನೀತಿಯ ನೆಲೆ ಅನುಸರಿಸು ಕ್ಷಣ ಸುಖಕ್ಕಾಗಿ ಮಾನವೀಯತೆಯನ್ನೇ ಮಾರಾಟ ಮಾಡಿಕೊಳ್ಳದಿರು". [೨೧]

(ಗರತಿ ವಿಶ್ವಜ್ಯೋತಿ ನಾಟಕದಿಂದ)

**"ಮಾಶೆಮ್ಮಾ** : (ಸಿಟ್ಟಿನಿಂದ ಬಡಿಯುತ್ತ) ಅಲ್ಲಲಾ ಬಿಕನಾಸಿ, ನಾ ಪ್ರೀತಿಯಿಂದ ಯಾ ಊರವನು ಅಂತ ಕೇಳಿದ್ರ ನನಗ 'ಮಳ್ಳಿ' ಅಂತಿಯಲಾ ನಿನ್ನ ಮೀಸಿ ಕಿತ್ತಿ, ಮುಗದಾಣಿ ಮಾಡೇನು ಅಲ್ಲಾ ಊರಿಗೆ ಊರ ನನ್ನ ನೋಡಿ ತಲೆಬಾಗತಾದ, ಬೇಡಿಕೊಂಡು ತಿನ್ನುವ ನೀ ಮೂಳಾ ನನಗ ಮಳ್ಳೀ ಅಂತಿಯಲಾ (ಹೊಡೆಯುವಳು)".[೨೨] ಊರಿನ ಹೆಸರೇ ಮಳ್ಳಿ, ಜೇವರ್ಗಿ ತಾಲೂಕಿನಲ್ಲಿ ಮಳ್ಳಿ ಎಂಬ ಗ್ರಾಮವಿದ್ದು ನಾಟಕಕಾರ ಅಲ್ಲಾಳರ ಕರ್ಮಭೂಮಿಯೂ ಹೌದು!

(ಬಾಳಿಗೊಂದು ಬೆಲೆಬೇಕು ನಾಟಕದಿಂದ)

**ಬೆಳ್ಳಿ** : ಅದೂ ಖರೇವೈತೇಳ ಹೆಣ್ಣಾಗಿ ಹುಟ್ಟಿಂದ ಕೊಟ್ಟ ಮನಿಗಿ ಹೋಗಿ ಕಲಸಕ್ರಿ ಅಗಿ ಬಾಳ್ಬೇಕೆ ಹೊರ್ತು ಕಲ್ಲಾಗಿ ಬಾಳ್ಬಾರ್ದು ನಮ್ಮವ್ವ" [೨೩]

(ತಿಂಥಣಿ ಮೌನೇಶ್ವರ ಮಹಾತ್ಮೆ ನಾಟಕದಿಂದ)

**ಗುಂಡಮ್ಮ** : ಗಡಿಗಿ, ಗುಳ್ಳಿ ಮುಚ್ಚಳಾ, ಪಣತಿ ಮಾರೊ ಜಾಗದಾಗ ನಿನ್ನ ಗೂಟಾ ಕಾವಿಂದೇನ ಕೆಲಸ, ನಿನ್ನ ಜಾಗದಾಗ ನೀನು ಮಾರಬೇಕು, ನನ್ನ ಜಾಗದಾಗ ನಾನು ಮಾರಬೇಕು. ಅದೆಲ್ಲ ಬಿಟ್ಟು ಮೊನ್ನಿ ದೇವಿಕೇರಿ ಸಂತ್ಯಾಗ ನಮ್ಮಂದ ಬಂದುಕುಂತಿ ಜಗಳಾನು ತೆಗದಿ ಜರಾ ಹೇಳಿದ್ರ ಕೂಡಿದ ಮಂದಿ ನಿನಗ ಮೆತ್ತಗ ಕಣಕ ನಾದಿದಂಗ ನಾದತಿದ್ರು, ನಮ್ಮೂರವ, ಮಗ್ಗಲ ಮನಿಯಾಂವ ಅಂತ ಹೇಳಿ ಸುಮ್ನಬಿಟ್ಟೇನಿ" [೨೪]

(ಸಾಧು ಶಿವಲಿಂಗೇಶ್ವರ ಮಹಾತ್ಮೆ ನಾಟಕದಿಂದ)

**"ಶಾಂತಪ್ಪ** : ಯಾಕ್ಲೆ ಶಾಂತಿ ಎಲ್ಲಿಗೆ ಹೊರಟೇದೆಲ್ಲ.

**ಶಾಂತಿ** : ಯಾಕೆ?

**ಶಾಂತಪ್ಪ** : ಯಾಕಂತ ಏನ್ ಕೇಳ್ತೆಲೆ, ಮನ್ಯಾಗ ಒಂಬತ್ತ ಮಕ್ಕಳು, ಮಗ್ಗಲ್ದಗೊಂದು ಹೆಗಲ ಮ್ಯಾಲ ಒಂದು ಹೊಟ್ಯ್ಯಾಗೊಂದು ಹೀಂಗಾದ್ರ ನನಗ ಎಲ್ಲಿಗಿ ಹಚ್ಚಬೇಕಂತ ಮಾಡಿದಿ.

**ಶಾಂತಿ** : ಹೂ, ಶ್ರೀರಾಮ, ರಾಮ, ಮುಚ್ಚಿಗೊಳ್ಳ ಬಾಯಿ, ಹೇಳಾಕ ನಾಚಿಗಿ ಬರೋದಿಲ್ಲ ನಿನಗ, ಯಾಕರ ಗಂಡಸಾಗಿ ಹುಟ್ಟೇದಿ ನೀ" [೨೫]

ಅಲ್ಲಾಳರು ಹಾಸ್ಯಕ್ಕಾಗಿ ಹಾಸ್ಯ ಬರೆದಿಲ್ಲ ಅದರಲ್ಲಿ ಉತ್ತಮ ಬೋಧನೆ ಇದೆ.

(‘ಪತಿಭಕ್ತಿ’ ನಾಟಕದಿಂದ)

**“ಡಾಕ್ಟರ** : ಹೀಗೆ ಮಲಗಿಕೊಳ್ಳಿ

**ಸಿದ್ದಪ್ಪ** : ನೀವು ರಕ್ತಾ ಪರೀಕ್ಷೆ ಮಾಡ್ತಿರಂದ್ರಲ್ರಿ

**ಡಾಕ್ಟರ** : ಖಾನಿಗೇನೂ ನೋಡ್ತಿನಿ ಸಿದ್ದಪ್ಪ!

**ಸಿದ್ದಪ್ಪ** : ನೋಡ್ರಿ ಅಂದ್ರ, ಸಂದ ಬಿಡಲಾರ್ದಂಗ ನೋಡ್ರಿ? ನಾ ಜರಾ ಹೊರಗೆ ಹೋಗಿ ಎಮ್ಮಿ ಕಟ್ಟಿ ಬರ್ತಿನಿ.

ಸಿದ್ದಿ (ಮೇಲೆದ್ದು) ಹಿಂಗ್ಯಾಕ ಮಾಡ್ತಿ ಹುಚ್ಚನಂಗ

**ಸಿದ್ದಪ್ಪ** : ನೋಡ್ರಿ ನನಗೆ ಹುಚ್ಚು ಅಂತಾಳ

**ಸಿದ್ದಿ** : ಏ। ಸುಮಕಿರಾ ಡಾಗದಾರ ಸಾಬ್ರ ನೋಡ್ರಿ ಗಡಾನ, ಹೀಂಗ ಕೈ ಎತ್ತು, ಅದು ಎತ್ತು ನಾಲಗಿ ತೆಗಿ ಅಂತ ಎಷ್ಟತ್ತಾನ ನೋಡ್ತಿರಿ.

**ಡಾಕ್ಟರ** : ಹಿಂಗ ಗಡಿಬಿಡಿ ಮಾಡಿದರ ಹ್ಯಾಂಗ್ರಿ? ಜಡ್ಡನೋಡಿ ಔಷದ ಕೊಡಬೇಕಾಗತಾದ್ರಿ.

**ಸಿದ್ದಪ್ಪ** : ಡಾಗದರಸಾಬ್ರ? ಅದೇನು ಇಷ್ಟುದ್ದ ಚುಚ್ಚುದು ಇರ್ತದಲ್ಲರಿ ಇದ್ದರೆ ಇಕೀಗೂ ಚುಚ್ಚರಿ.

**ಸಿದ್ದಿ** : ಏ। ಹಲ್ಕಟ। ಏನದು ಚುಚ್ಚುದು

**ಡಾಕ್ಟರ** : ಅದ್ಕ ಇಂಜೆಕ್ಸನ್ ಬೋಲ್ತಾ” [೨೬]

ಹಳ್ಳಿಗಳಿಗೆ ಬಂದು ರೋಗಿಗಳನ್ನು ತಪಾಸಿಸುವ ಪರಿಯನ್ನು ಆಲ್ದಾಳರು ರಸವತ್ತಾಗಿ ಹಾಸ್ಯದ ಶೈಲಿಯಲ್ಲಿ ತೇಲಿಸಿದ್ದಾರೆ.

(ಹಂಡೆ ಕುಲತಿಲಕ ರಾಜಾ ಬಲದ ಹನುಮಪ್ಪ ನಾಯಕ ಐತಿಹಾಸಿಕ ನಾಟಕದಿಂದ)

**“ಗಂಗ** : ಪೊತ್ರಾಜ ಆಗ್ತಿರೀ

**ರಾಮಾಜಿ** : ಲೇ ಗಂಗವ್ವ! ನನ್ನಲ್ಲಿ ಈ ರಾಜಕೀ ಹ್ಯಾಂಗ್

ಉರುಳಿಸಬೇಕು ಹ್ಯಾಂಗ ಕಟ್ಟಬೇಕೆನ್ನುವ ಮುತ್ಸದ್ದಿತನ ಐತ್ಯೋ? ನಮ್ದೆನಪಾ, ಅವರವರಿಗೆ ಜಗಳಾ ಹಚ್ಚಿ ನಮ್ಮಕೆಲ್ಸಾ ಉಡಾಯಿಸಿಕೊಳ್ಳೋದು, ಏನೇ ಆದ್ರು ಊರಸುಟ್ಟ್ರು ಹನಮಪ್ಪ ಹೊರಗಅಂತ

**ಗಂಗ** : ನಿಮ್ಮಂಗ! ವಿಜಯನಗರದ ರಾಜ್ಕಿ ನುಂಗ ಬೇಕಂತ ಮಾಡಿದ ತಿಮ್ಮರಸನ ಗತಿ ಏನಾಯ್ತು? ಕೊನೀಗಿ ಹಿಡಿ ಗ್ವಾಡ್ಯಾಗಿಟ್ಟು ಗಪ್ಪಮಾಡಿದ್ರ, ಹಂಗ ನಿಮ್ಮ ಪರಿಸ್ಥಿತಿ ಬಂದೀತು"[೨೭]

ಇಲ್ಲಿ ಹಾಸ್ಯವಿದ್ದರೂ ಎಚ್ಚರಿಕೆಯ ಗಂಟೆ ಬಾರಿಸುತ್ತಿರುವುದು ತೋರುತ್ತದೆ. ನಗುವಿನಲ್ಲಿ ಗಂಭೀರತೆ ಹುದುಗಿದೆ.

ಈ ರಂಗ ಸಂತ ಜಂಗಮನ ಸಾಧನೆಯ ಮುಖಗಳು ಹಲವು ಹತ್ತು, ಆಧ್ಯಾತ್ಮಿಕ ವಿಷಯಗಳನ್ನು ಸಮಾಜಕ್ಕರ್ಪಿಸುವ ಬರವಣಿಗೆಯ ಶೈಲಿ ವಿಚಾರ ಲಹರಿ ಅದ್ಭುತವಾದುದು. ಛಂದೊಬಂದವಾಗಿ ವ್ಯಾಕರಣಬದ್ಧ ಶೈಲಿಯಲ್ಲಿಯ ವಚನಗಳಲ್ಲಿಯ ಲಕ್ಷೋಪಲಕ್ಷ ಪದಗಳ ಅರ್ಥ ಸಂದೇಶಗಳು ಕಲ್ಯಾಣ ಸಮಾಜದ ಕನಸು ಹೊತ್ತು ನಿಂತಿವೆ.

"ಆಲ್ದಾಳರು ತನ್ನದು ತಾನಾಗಲಿಲ್ಲ, ತನ್ನದೆಲ್ಲವನ್ನು ರಂಗ ಪ್ರೇಕ್ಷಕ ದೈವಕ್ಕರ್ಪಿಸಿದರು. ನಕ್ಕರು, ನಗಿಸಿದರು, ಅತ್ತರು, ಅಳಿಸಿದರು, ತಾನು ಕಹಿಯನ್ನುಂಡು, ಕಸವನ್ನುಂಡು ಅಮೃತ ರಸವನ್ನು ನೀಡಿದ ಕಾಮಧೇನು ಪುಣ್ಯಕೋಟಿ ಆಕಳಂತೆ ಈ ಆಲ್ದಾಳರು. ಈತ ಸಾಹಿತ್ಯಲೋಕದ ನಕ್ಷತ್ರ. ಸಗರನಾಡಿನಲ್ಲಿ ಅನುಭಾವ ಸಾಹಿತ್ಯದ ತೊಟ್ಟಿಲು ತಾ ತೂಗಿದ ಮಹಾತಾಯಿ[೨೮] ಎಂದು ಹೇಳಿರುವುದು ಮೆಚ್ಚಲೇ ಬೇಕು.

ನಿಜಕ್ಕೂ ಬದುಕೆಂದರೆ ಪ್ರೀತಿ, ಬದುಕೆಂದರೆ ನಗು, ಬದುಕೆಂದರೆ ಕುಣಿತ, ಹಾಡು, ನಿಮ್ಮಸುತ್ತ ಮುತ್ತಲ ಜಗತ್ತನ್ನು ಒಂದು ಸಲ ನೋಡಿ ಎಲ್ಲ ಸಂಗತಿಗಳನ್ನು ಹಾಸ್ಯ ಪ್ರಜ್ಞೆಯ ಕೋನದಲ್ಲಿ ಗಮನಿಸಿ ಪ್ರತಿಯೊಂದಕ್ಕೂ ನಗೆಯ ಆಯಾಮ ಇದ್ದೇ ಇರುತ್ತದೆ. ಇದು ಸಾಧ್ಯವಾಗಲು ನಿಮ್ಮಲ್ಲಿ ಹಾಸ್ಯ ಪ್ರಜ್ಞೆ ಬೆಳೆಸಿಕೊಳ್ಳಲು ಆಲ್ದಾಳ ಅವರ ನಾಟಕದಲ್ಲಿ ವಿಜೃಂಭಿಸಿರುವ ಹಾಸ್ಯ ನಟ–ನಟಿಯರ ಪಾತ್ರಗಳು ತುಂಬಾ ಸಹಕಾರಿ.

ನಗುವಿಗಾಗಿ ಅನ್ವೇಷಣೆ ಬೇಕಿಲ್ಲ, ಅದನ್ನು ನೋಡಲು ಪ್ರಯತ್ನಿಸಿ, ಅದು ಎಲ್ಲೆಡೆ ಸರ್ವಾಂತರ್ಯಾಮಿ. ಎಲ್ಲಿ ಹಾಸ್ಯ ಮತ್ತು ನಗುವಿಗೆ ಅವಕಾಶ ಇರುತ್ತದೆಯೋ, ಆ ಎಲ್ಲ ಸಂದರ್ಭಗಳನ್ನು ತಪ್ಪದೆ ಬಳಸಿಕೊಳ್ಳುವಂತಾಗಲಿ ಎನ್ನುವುದೇ ನಾಟಕಕಾರ ಆಲ್ದಾಳರ ಆಶಯ. ಅದಕ್ಕೋಸ್ಕರ ಪ್ರೇಕ್ಷಕರು ಆಲ್ದಾಳರ ನಾಟಕ ಶೈಲಿಯನ್ನು ಮೆಚ್ಚುತ್ತಾರೆ. ಮನುಷ್ಯನ ಸಹಜಗುಣವಾದ ನಗುವನ್ನು ಹಾಳುಗೆಡವಲು ಅಥವಾ ಹತೋಟಿಯಲ್ಲಿಡಲು ಯತ್ನಿಸಬೇಡಿ. ಈ ಸಂದರ್ಭದಲ್ಲಿ ಒಂದು ನಿರ್ಣಯ ಕೈಕೊಳ್ಳಿರಿ. ಹಿಂದಿಗಿಂತ ಹೆಚ್ಚು ನಗೋಣ. ಖುಷಿಯಾಗಿರೋಣ. ಈ ಜಗತ್ತಿನಲ್ಲಿ ಉಚಿತವಾದದ್ದು ಏನಾದರೂ ಇದ್ದರೆ ಅದು ನಗು ಮಾತ್ರ. ನಿಮ್ಮ ಬದುಕಿನಲ್ಲಿ ನಗೆ ಸದಾ ತುಂಬಿರಲಿ.

ನವರಸ ಭರಿತ ನಾಟಕಗಳನ್ನು ಬರೆಯುವುದು ಸಾಮಾನ್ಯವಲ್ಲ ವ್ಯಕ್ತಿ, ಕುಟುಂಬ, ಸಮಾಜ, ಧರ್ಮ, ರಾಜಕೀಯ, ಎಲ್ಲದರ ಬಗ್ಗೆ ವಿಷಯ ಸಂಗ್ರಹವು ಪೂರ್ವಭಾವಿಯಾಗಿ ತಲೆಯೆಂಬ ಬಿಂದಿಗೆಯಲ್ಲಿ ಒಂದೂ ಬಿಡದೆ ತುಂಬಿಕೊಂಡು ಹೊರಗೆ ಹರಿಸುತ್ತಿರಬೇಕು. ಆಗ

ಓತಪ್ರೋತವಾಗಿ ಕೈಗೆ ಬಿಡುವಿಲ್ಲದೆ ಬರೆಯುವ ಅಪಾರ ಶಕ್ತಿ ಪ್ರಾಪ್ತವಾಗುತ್ತದೆ ಹೀಗೆ ಬರೆಯುವ ಮಹಾ ಮಾಂತ್ರಿಕ ಎಲ್.ಬಿ.ಕೆ. ಆಲ್ದಾಳ ಕವಿಗಳು.

ಆಲ್ದಾಳರು ಬರೆದಿರುವ ಯಾವುದೇ ಪುಸ್ತಕ ತೆಗೆದುಕೊಂಡು ಓದಿದಷ್ಟು ಇನ್ನೂ ಓದಬೇಕೆಂಬ ಆಸೆ. ಇವರು ಬರೆದಿರುವ ನಾಟಕಗಳನ್ನು ನೋಡಿದಷ್ಟು ಇನ್ನೂ ನೋಡಬೇಕೆಂಬ ಕಾತುರ ಇವರು ಬರೆದಿರುವ ಅನೇಕ ಪ್ರಕಾರದ ಗೀತೆಗಳು, ವಚನಗಳು ಯಾವುದನ್ನೇ ಕೇಳಲಿ ಮತ್ತೆ ಮತ್ತೆ ಕೇಳಬೇಕೆಂಬ ಹಂಬಲ– ಇವರ ಜಾನಪದ ಹಾಡುಗಳನ್ನು ಹಾಡಿದಷ್ಟು ಇನ್ನೂ ಇನ್ನೂ ಹಾಡಿ ಹಾಡಿ ಹೃದಯ ಹಿಗ್ಗಿಸ ಬೇಕೆಂಬ ಹಿರಿಯ ಆಸೆ.

ತಮ್ಮ ಕೃತಿಗಳಲ್ಲಿ ಜೀವನದ ವಿವಿಧ ಮುಖಗಳನ್ನು ಆಲ್ದಾಳರು ಸಮರ್ಪಕವಾಗಿ ಚ್ಯುತಿ ಬಾರದಂತೆ ಆಡು ಭಾಷೆಯಲ್ಲಿ ಚಿತ್ರಿಸಿದ್ದಾರೆ. ಇವರು ಬಳಸಿದ ಭಾಷೆ ಜನಪದ. ಆದರೆ ಜಾನಪದ ಕಸುವಿಗೆ ಶಿಷ್ಟಭಾಷೆಯ ಕ್ಲಿಷ್ಟತೆಯನ್ನು ತೊಡಿಸಲು ಹವಣಿಸಿದ ಪ್ರಯತ್ನ ಅಲ್ಲಲ್ಲಿ ಎದ್ದು ಕಾಣುತ್ತದೆ. ಅಲ್ಲಲ್ಲಿ ಬರುವ ಗ್ರಂಥಸ್ಥ ಶೈಲಿಯನ್ನು ಹೊರತು ಪಡಿಸಿ ನೋಡಿದಾಗ ಲೇಖಕರ ಶೈಲಿ ಹೃದ್ಯವೆನಿಸುತ್ತದೆ. ನಾಣ್ನುಡಿಗಳನ್ನು ಔಚಿತ್ಯ ಪೂರ್ಣವಾಗಿ ಬಳಸಲ್ಪಟ್ಟಿದ್ದು ವಿಷಯದ ಸ್ಪಷ್ಟತೆಯನ್ನು ಹೆಚ್ಚಿಸಿವೆ. ಅನೇಕ ದೇಸೀಯ ಪದಗಳು ಹೊಸ ಅಚ್ಚನ್ನು ಪಡೆದು ತಮ್ಮ ಮೌಲ್ಯವನ್ನು ಹೆಚ್ಚಿಸಿಕೊಂಡಿವೆ. ಭಾಷೆಯ ಸಂಗ್ರಹ ಶಕ್ತಿ, ಸರಳತೆ ಮೆಚ್ಚುವಂಥದ್ದು.

ಆಲ್ದಾಳರ ನಾಟಕಗಳ ಹೆಸರು ಕೇಳಿಯೇ ನಾಟಕ ನೋಡಬೇಕೆಂಬ ಕುತೂಹಲ ಪ್ರೇಕ್ಷಕರಲ್ಲಿ ಉಂಟಾಗಬೇಕು 'ಕಲಿಯುಗದ ಕನ್ಯೆ', 'ಬಾಳಿಗೊಂದು ಬೆಲೆಬೇಕು', 'ಕಣ್ಣಿಟ್ಟ ಕೈಕೊಟ್ಟ', 'ಪತಿಭಕ್ತಿ', 'ವಿಶ್ವಾರಾಧ್ಯ ಮಹಾತ್ಮೆ', 'ಗರತಿ ವಿಶ್ವದ ಜ್ಯೋತಿ' ಮುಂತಾದವು ಪಾತ್ರಗಳ ಮಾತುಗಾರಿಕೆಯಲ್ಲಿ ಮಡಿವಂತಿಕೆ ಇಲ್ಲ. ಧಾಟಿ (ಶೈಲಿ) ಮಾತ್ರ ಆಡು ಮಾತಿನದು ಹಳ್ಳಿಯಲ್ಲಿ ಹುಟ್ಟಿ, ನಗರದಲ್ಲಿ ಒಂದಿಷ್ಟು ಆಡುವ ಮಾತಿನ ಶೈಲಿ ಇವರದು, ಅದು ಆಡಲು ಸುಲಭ, ಕೇಳಲು ಹಿತವಾಗಿರುತ್ತದೆ. ಇವರ ಸಂವಾದದ ಸಾಹಿತ್ಯದ ಶೈಲಿಗೆ ಪ್ರೇಕ್ಷಕರು ಮರುಳಾಗುತ್ತಾರೆ. 'ಒನ್ಸಮೋರ' ಎಂದು ಕುಣಿಯುತ್ತಾರೆ.

ನಾಟಕಗಳು ಯಾವುದೇ ಇರಲಿ ಅಂದರೆ ಸಾಮಾಜಿಕ, ಧಾರ್ಮಿಕ, ಪೌರಾಣಿಕ, ಐತಿಹಾಸಿಕ ಇತ್ಯಾದಿ, ಅವುಗಳಲ್ಲಿನ ಬರಹ–ಭಾಷೆ–ಶೈಲಿ ಸಕಲರಿಗೂ ಮೆಚ್ಚುಗೆ ಆಗುವಂತಿರಬೇಕು. ಐತಿಹಾಸಿಕದಲ್ಲಿ ವೀರರಸ, ಧಾರ್ಮಿಕ ಮತ್ತು ಪೌರಾಣಿಕ ನಾಟಕಗಳಲ್ಲಿ ದೇವರಲ್ಲಿ ನಂಬಿಕೆ, ಭಕ್ತಿ, ತ್ಯಾಗ ಗುಣಗಳೇ ಹೆಚ್ಚಾಗಿರುತ್ತವೆ. ಸಾಮಾಜಿಕ ನಾಟಕಗಳು ಸಮಾಜೋದ್ಧಾರ, ನೀತಿ ರೂಪಿಸುವಂತೆ, 'ಸರ್ವಜನಾ ಸುಖಿನೋಭವತು' ಎಂದು ಬಿಂಬಿಸುತ್ತವೆ. ಅದಕ್ಕಾಗಿಯೇ ಪ್ರೇಕ್ಷಕರು ನಾಟಕಗಳಲ್ಲಿನ ಸಂವಾದದ ಕಡೆಗೆ, ಹಳ್ಳಿಗಾಡಿನ ಮಾತಿನ ಧಾಟಿಯನ್ನು ಹೆಚ್ಚು ಪ್ರೀತಿಸುತ್ತಾರೆಂಬುದರಲ್ಲಿ ಸಂದೇಹವಿಲ್ಲ, ನಾಟಕಗಳಲ್ಲಿ ಹಾಸ್ಯವೂ ಪ್ರಮುಖ ಆಕರ್ಷಕ ಕೇಂದ್ರಬಿಂದು ಎನ್ನಿಸುತ್ತದೆ. ಇಲ್ಲಿ ಶೈಲಿ ರಾರಾಜಿಸುತ್ತದೆ.

ಹಾಸ್ಯಕ್ಕೆ ಇಷ್ಟೊಂದು ಪ್ರಾಧ್ಯಾನ್ಯತೆ ಯಾಕೆ? ಈ ಕುರಿತು ರಂಗಭೂಮಿಯ ಹಿರಿಕರು ಹಾಗೂ 'ಬಸ್‌ಕಂಡಕ್ಟರ್' ನಾಟಕ ರಚನಾಕರ್ತರೂ ಆಗಿರುವ ಭೀಮಪ್ಪ ರಂಗಪ್ಪ ಅರಿಷಿಣಗೋಡಿ ಅವರ ಮಾತಿನಲ್ಲಿಯೇ ತಿಳಿದುಕೊಳ್ಳಿ, "ಬದುಕು ತೇಕೋದರೊಳಗೆ ಸಾಕಷ್ಟು ಸುಸ್ತಾಗಿರ್ತಿವಿ. ನಾಟಕ ನೋಡಿ ಅದನ್ನೆಲ್ಲ ಮರೆಯಬೇಕು ಅಂತ ಥೇಟರಿಗೆ ಬಂದರೆ ಅಲ್ಲಿಯೂ ಅಂಥದ್ದೇ ಬದುಕಿನ ಚಿತ್ರ, ಇದರಿಂದ ಯಾರಿಗೆ ತಾನೆ ಬೇಸರವಾಗಲ್ಲ. ೨೯

ಪ್ರೇಕ್ಷಕರ ಬಯಕೆಯೂ ಇದೆ ಆಗಿರುತ್ತದೆ 'ನಗಿಸಿ ಮನಸ್ಸು ಹಗುರು ಮಾಡೋ ನಾಟಕಗಳು ಬೇಕು ಅಂತ ಆಗ್ರಹಿಸುತ್ತಾರೆ. ಹಾಸ್ಯದಲ್ಲೂ ಭಾಷೆಯ ಶೈಲಿ ಹದವಾಗಿರಬೇಕು, ಮನಸ್ಸಿಗೆ ಮುದನೀಡುವಂತಿರಬೇಕೆಂದೆ ಆಲ್ದಾಳರು ಮೆಚ್ಚುವುದರಲ್ಲಿ ಆತುರರಾಗಿರುತ್ತಾರೆ. ಆಲ್ದಾಳ ಅವರಿಗೆ ಇವತ್ತಿಗೂ ನಾಟಕ, ರಂಗಭೂಮಿ ಪವಿತ್ರವಾದ ಯಜ್ಞಭೂಮಿಯಾಗಿದೆ. ನಿಜಕ್ಕೂ ವೃತ್ತಿ ರಂಗಭೂಮಿಗೆ ಅವರದು ಮರೆಯಲಾರದಂತ ಮಾದರಿ ಬದುಕು.

ಆಲ್ದಾಳರು ಆಧ್ಯಾತ್ಮಿಕ, ಪೌರಾಣಿಕ ವ್ಯಕ್ತಿಗಳನ್ನು ಆಧಾರವಾಗಿಟ್ಟುಕೊಂಡು ನಾಟಕ ಸಾಹಿತ್ಯವನ್ನು ಪುನರಸೃಷ್ಟಿಸಿದ್ದಾರೆ. 'ಜೇವರ್ಗಿಜ್ಯೋತಿ ಶ್ರೀ ಷಣ್ಮುಖ ಶಿವಯೋಗಿ', 'ಕಡಕೋಳ ಮಡಿವಾಳೇಶ್ವರ ಮಹಾತ್ಮೆ', ವಿಶ್ವಾರಾಧ್ಯಮಹಾತ್ಮೆ, 'ಭರತನೂರಿನ ಗುರುನಂಜೇಶ್ವರ ಮಹಾತ್ಮೆ', 'ಹಾರಕೂಡದ ಚನ್ನಬಸವ ಶಿವಯೋಗಿಗಳು' ಇವೆಲ್ಲವುಗಳಲ್ಲಿ ವ್ಯಕ್ತಿಗಳಲ್ಲಿನ ಗುಣಾವಗುಣಗಳು ಚಿತ್ರಿಸುತ್ತವೆ. ಇಲ್ಲಿ ಮಾನವೀಯ ಅಂತಃಕರಣದ ಮಿಡಿತ ಕಾಣುತ್ತೇವೆ. ಹೊಸ ಅರ್ಥವನ್ನು ಮೌಲ್ಯಗಳಲ್ಲಿ ಶೋಧಿಸುವಂಥ ಪ್ರಯತ್ನವನ್ನು ಗುರುತಿಸುತ್ತೇವೆ. ನಾಟಕದ ರೂಪ ಮಾಮೂಲು ವಿಧಾನಗಳಿಗಿಂತ ಬೇರೆಯಾಗಿದೆ. ಇವರ ನಾಟಕಗಳಲ್ಲಿ ವಸ್ತುವಿನ ವೈಭವೀಕರಣವಿಲ್ಲ, ವಿಜೃಂಭಣೆ ಇಲ್ಲ, ಅಧ್ಯಾತ್ಮಿಕ ವಸ್ತುವಿನ ಮಹತ್ವದ ಒತ್ತಾಸೆಯಿಂದ ರಚಿಸಿದವುಗಳಾಗಿವೆ. ಆಧ್ಯಾತ್ಮಿಕ ಮಹಾಚೇತನಗಳ ವಿಕಾಶವನ್ನು ವೈಚಾರಿಕವಾಗಿ ಅನುಭಾವಿಕ ಹಿನ್ನಲೆಯಲ್ಲಿ ಚಿತ್ರಿಸಿರುವ ಪ್ರಯತ್ನವಿದೆ. ಇವರೆಲ್ಲ ಐತಿಹಾಸಿಕ ವ್ಯಕ್ತಿಗಳಾದರೂ ವರ್ತಮಾನದ ಜೀವಂತ ವ್ಯಕ್ತಿಗಳಾಗಿ ನಮ್ಮ ಮುಂದೆ ನಿಂತಿದ್ದಾರೆ. ಆಲ್ದಾಳರ ನಾಟಕಗಳ ಅಧ್ಯಯನದಿಂದ ನಾಟಕಕಾರರಾಗಿ ಅವರ ಬೆಳವಣಿಗೆ, ಸಿದ್ಧಿ-ಸಫಲತೆಗಳು ಅವರನ್ನು ಉನ್ನತ ಸ್ಥಾನದಲ್ಲಿ ಖಂಡಿತವಾಗಿ ನಿಲ್ಲಿಸುತ್ತವೆ.

## ಎಲ್.ಬಿ.ಕೆ. ಆಲ್ದಾಳ ನಾಟಕೋತ್ಸವ

**ಆಲ್ದಾಳರು ಶರಣ ಸಂಸ್ಕೃತಿಯ ಪ್ರತೀಕ ;** "ನಾಡಿನ ಹಿರಿಯ ನಾಟಕಕಾರ ಎಲ್.ಬಿ.ಕೆ. ಆಲ್ದಾಳ ಅವರು ಶರಣ ಸಂಸ್ಕೃತಿಯ ಪ್ರತೀಕ ಎಂದು ಪ್ರಸಿದ್ದ ನಾಟಕಕಾರ ಮಹಾಂತೇಶನ ವಲಕಲ್ ಅಭಿಪ್ರಾಯ ಪಟ್ಟಿದ್ದಾರೆ. ರಂಗಸಂಗಮ ಕಲಾವೇದಿಕೆ ಕಲಬುರ್ಗಿಯ ಕನ್ನಡ ಭವನದಲ್ಲಿ ಹಮ್ಮಿಕೊಂಡಿದ್ದ ನಾಟಕಕಾರ ಆಲ್ದಾಳ ನಾಟಕೋತ್ಸವ ರಂಗ ಶ್ರಾವಣದ ಕಾರ್ಯಕ್ರಮದಲ್ಲಿ ಆಲ್ದಾಳರ ರಂಗ ಬದುಕು ಕುರಿತು ಮಾತನಾಡುತ್ತ, ಸುಸಂಸ್ಕೃತ ಮನೆತನದಲ್ಲಿ ಜನಿಸಿದ ಆಲ್ದಾಳ ಅವರು ಕಳೆದ ಐದು ದಶಕಗಳಿಂದಲೂ ರಂಗಭೂಮಿಗೆ  ಸಲ್ಲಿಸಿದ ಸೇವೆ ಅನುಪಮ. ಮುಸ್ಲಿಂ ಸಮುದಾಯದವರಾದರೂ ಇಡೀ ಬದುಕೇ ಶರಣ, ಸಂತರ ಮತ್ತು ಸೂಫಿಗಳ ಆದರ್ಶಗಳ ನಡುವೆ ಕಳೆದಿದ್ದಾರೆ. ಈ ಪರಿಣಾಮವೇ ಅವರು ನಾಡಿನ ಬಹುತೇಕ ಶರಣರ ಮತ್ತು ಪವಾಡ ಪುರುಷರ ಕುರಿತು ನಾಟಕಗಳನ್ನು ಬರೆದು ಅವರ ಗುರು ತತ್ವ ಜೀವಂತವಾಗಿಸಿದ್ದಾರೆ. ನಾಡಿನಲ್ಲಿಯೇ ವಿಶಿಷ್ಟ ಮತ್ತು ವಿಶೇಷ ವ್ಯಕ್ತಿತ್ವದ ಆಲ್ದಾಳ ಅವರು ನಮ್ಮ ನಡುವೆ ಇದ್ದು ಅವರ ಬರವಣಿಗೆ ಓದುವ ಅವಕಾಶ ಪಡೆದ ನಾವೆಲ್ಲರೂ ಪುಣ್ಯವಂತರು ಎಂದು ಹೇಳಿದರು".

"ಕ್ಷೀಣಿಸುತ್ತಿರುವ ರಂಗಭೂಮಿಯ ಪುನಶ್ಚೇತನಕ್ಕೆ ಸರ್ಕಾರ ಸಹಾಯಧನ ನೀಡುವುದು ಅಗತ್ಯ" ಎಂದು ಹಿರಿಯ ರಂಗಕರ್ಮಿ ಜಗದೀಶ ಹಿರೇಮಠ ಅಭಿಪ್ರಾಯಪಟ್ಟರು. ಕಲಬುರ್ಗಿಯಲ್ಲಿನ ಕನ್ನಡ ಭವನದ ಬಾಪುಗೌಡ ದರ್ಶನಾಪೂರ ರಂಗ ಮಂದಿರದಲ್ಲಿ ರಂಗ ಸಂಗಮ ಕಲಾವೇದಿಕೆ ಏರ್ಪಡಿಸಿದ್ದ ನಾಟಕೋತ್ಸವ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆವಹಿಸಿ ಮಾತನಾಡಿದ ಗವೀಶ ಹಿರೇಮಠರು, ಚಲನ ಚಿತ್ರಗಳಿಗೆ ಲಕ್ಷಾಂತರ ರೂಪಾಯಿಗಳ ಸಹಾಯಧನ ನೀಡಲಾಗುತ್ತಿದೆ, ಹವ್ಯಾಸ ಇರಲಿ, ವೃತ್ತಿಯೇ ಇರಲಿ ಸಕ್ರೀಯವಾಗಿ ರಂಗಚಟುವಟಿಕೆ ನಡೆಸುವ ಪ್ರತಿಯೊಂದು ತಂಡಕ್ಕೂ ಕನಿಷ್ಠ ೫ ಲಕ್ಷ ರೂ ಸಹಾಯಧನ ನೀಡಬೇಕು ಎಂದು ಒತ್ತಾಯಿಸಿದರು. ಚಲನ ಚಿತ್ರನಟಿಯರಿಗೆ ಪ್ರಶಸ್ತಿ ನೀಡುವ  ಮಾದರಿಯಲ್ಲಿ ರಂಗಭೂಮಿ ನಟನಟಿಯರಿಗೂ, ರಂಗಸಂಗೀತ ಕಲಾವಿದರಿಗೂ ಪ್ರಶಸ್ತಿ ನೀಡುವ ಪರಿಪಾಠವನ್ನು ಸರ್ಕಾರ ಹಮ್ಮಿಕೊಳ್ಳಬೇಕು. ಇದರಿಂದಾಗಿ ರಂಗಭೂಮಿ ಕಡೆಗೆ ಕಲಾವಿದರನ್ನು ಸೆಳೆಯ ಬಹುದು. ಪ್ರತಿಜಿಲ್ಲೆಯಲ್ಲಿ ವೃತ್ತಿನಾಟಕ ಉತ್ಸವ ನಡೆಸುವವರಿಗೆ ಕಡಿಮೆ ವೆಚ್ಚದ ರಂಗಭೂಮಿ, ರಂಗಮಂದಿರ ನಿರ್ಮಿಸಬೇಕು, ರಂಗಕಲಾವಿದರಿಗೆ ಸೂಕ್ತ ತರಬೇತಿ ನೀಡಬೇಕು. ಹೀಗಾದಾಗ ಮಾತ್ರ ಹಿಂದಿನ ರಂಗ ವೈಭವ ಮತ್ತೆ ಮರುಕಳಿಸುತ್ತದೆ .ಎಂದು ಗವೀಶ ಹಿರೇಮಠ ಈ ಕುರಿತು ಸರ್ಕಾರಕ್ಕೆ ಕೇಳಿಕೊಂಡರು.

ಹಿರಿಯ ರಂಗಕರ್ಮಿ ಪ್ರೊ. ಪ್ರಭಾಕರ ಸಾತಖೇಡ ಎಲ್,ಬಿ,ಕೆ ಆಲ್ದಾಳ ನಾಟಕೋತ್ಸವ ರಂಗ ಶ್ರಾವಣ ಉದ್ಘಾಟಿಸಿದರು. ಕರ್ನಾಟಕ ನಾಟಕ ಅಕಾಡೆಮಿ ಸದಸ್ಯೆ ಕೆ.ನೀಲಾ, ರಂಗ ಸಂಗಮ ವೇದಿಕೆಯ ಲಾಂಛನ ಬಿಡುಗಡೆ ಮಾಡಿದರು. ಗುಬ್ಬಿ ವೀರಣ್ಣ ಪ್ರಶಸ್ತಿ ವಿಜೇತ ನಾಟಕಕಾರ ಎಲ್.ಬಿ.ಕೆ ಉಪಸ್ಥಿತರಿದ್ದರು. ಜಿಲ್ಲಾ ಕಸಾಪ ಅಧ್ಯಕ್ಷ ಮಹಿಪಾಲ ರೆಡ್ಡಿ ಮುನ್ನೂರ ಆಶಯ ನುಡಿಗಳನ್ನು ಆಡಿದರು. ವೇದಿಕೆ ಕಾರ್ಯದರ್ಶಿ ಡಾ. ಸುಜಾತಾ ಜಂಗಮ ಶೆಟ್ಟಿ ಸ್ವಾಗತಿಸಿದರು.

ರಂಗ ಸಂಗಮ ಕಲಾ ವೇದಿಕೆ ಹಮ್ಮಿಕೊಂಡಿದ್ದ ಮೂರು ದಿನಗಳ ಎಲ್.ಬಿ,ಕೆ ಅಲ್ದಾಳ ನಾಟಕೋತ್ಸವ ರಂಗ ಶ್ರಾವಣದ ಸಮಾರೋಪ ಸಮಾರಂಭದ ದಿನದಂದು ರಂಗ ಚಿಂತಕಿ ಹಾಗೂ ಉಪನ್ಯಾಸಕಿ ಡಾ. ಅಮೃತಾ ಕಟಿಕೆ ಅವರು ಮಾತನಾಡುತ್ತ, "ರಂಗ ಭೂಮಿ ಅಳಿವಿನ ಅಂಚಿನಲಿ ಇದೆ ಎನ್ನುವುದು ಮೇಲ್ನೋಟಕ್ಕೆ ಎನಿಸಿದರೂ ಅಂತರ್ಯದಲ್ಲಿ ರಂಗಭೂಮಿಗೆ

ಸರ್ಕಾರದ ನೆರವು ಸಿಗುತ್ತಿದೆ. ಆದರೆ, ನೋಡುವ ಮತ್ತು ಮಾಡುವ ಮನಸ್ಸುಗಳ ಕೊರತೆ ಇದೆ" ಎಂದು ನುಡಿದರು ಹೈದ್ರಾಬಾದ ಕರ್ನಾಟಕದಲ್ಲಿ ಮಹಿಳೆ ಮನೆಯಿಂದ ಹೊರ ಬರಲು ಹೆದರುತ್ತಿದ್ದ ಕಾಲದಲ್ಲಿಯೇ ನಾಟಕದಲ್ಲಿ ಅಭಿನಯಿಸಲು, ಮುಖಕ್ಕೆ ಬಣ್ಣ ಹಚ್ಚಿದ ಮೊದಲ ಸಾಲಿನ ಹೆಣ್ಣುಮಗಳಲ್ಲಿ ಫರಹತಾ ಬಾದ ಗ್ರಾಮದ ಮಹಾದೇವಿ ಸಜ್ಜನ ಕೂಡಾ ಒಬ್ಬರು. ಅಂತಹ ಕಲಾವಿದರ ನಾಡಿನಲ್ಲಿ ಈಗ ಮಹಿಳೆಯರೇ ರಂಗ ಸಂಗಮ ಕಟ್ಟಿಕೊಂಡು ಹೋರಾಟ ಮಾಡುತ್ತ ರಂಗಭೂಮಿ ಉಳಿವಿಗೆ ಶ್ರಮಿಸುತ್ತಿಲ್ಲವೆ ? ಆದ್ದರಿಂದ ರಂಗಭೂಮಿ ಅಳಿವಿನ ಅಂಚಿನಲ್ಲಿ ಇಲ್ಲ ಇದಕ್ಕೆ ಈಗಿನ ಸರ್ಕಾರ ಬೆಂಬಲಕೊಡುತ್ತಿದೆ. ಆದರೆ, ಈ ಬೆಂಬಲವನ್ನು ಬಳಕೆ ಮಾಡಿಕೊಂಡು ನಾಟಕ ಮಾಡುವ ಮತ್ತು ನೋಡುವ ಮನಸ್ಸುಗಳನ್ನು ನಾವು ಹೆಚ್ಚು ಮಾಡಬೇಕಿದೆ, ಇದರಿಂದ ಮಾತ್ರವೇ ರಂಗಭೂಮಿ ಉಳಿಯುತ್ತದೆ. ಆದರೂ ಆಧುನಿಕ ಯುಗದಲ್ಲಿ ತಂತ್ರಜ್ಞಾನ, ಸಿನಿಮಾಗಳಿಂದಾಗಿ, ಧಾರಾವಾಯಿಗಳಿಂದಾಗಿ ಸ್ವಲ್ಪ ಹಿನ್ನಡೆ ಆಗಿರುವುದು ನಿಜ ಆದರೆ ಅಳಿಯುತ್ತಿಲ್ಲ. ಈ ಮನೋಭಾವದಿಂದ ಹೊರಬಂದು ನಾಟಕ-ಭೂಮಿಯನ್ನು ಉಳಿಸ ಬೇಕಿದೆ ಎಂದು ಹೇಳಿದರು.

ಕಲೆ, ಸಂಸ್ಕೃತಿ ರಕ್ಷಣೆಗೆ ಸರ್ಕಾರಗಳು ದೇಣಿಗೆ ಕೊಡುವುದು ದೊಡ್ಡತನವೇನಲ್ಲ. ಅದು ಸರ್ಕಾರದ ಕರ್ತವ್ಯ, ರಂಗಭೂಮಿ ಮಾತನಾಡುವ ಧೈರ್ಯ ಬೆಳೆಸುತ್ತದೆ. ಪ್ರಶ್ನೆ ಕೇಳುವುದನ್ನು ಕಲಿಸುತ್ತದೆ. ಹೀಗಾಗಿ ಶಿಕ್ಷಣದಲ್ಲೂ ರಂಗಭೂಮಿ ಪರಿಚಯಿಸುವ ಕೆಲಸವಾಗಬೇಕು.

ಎಲ್.ಬಿ.ಕೆ. ಆಲ್ದಾಳ ನಾಟಕೋತ್ಸವ ರಂಗ ಶ್ರಾವಣದ ರೂವಾರಿ ಡಾ.ಸುಜಾತಾ ಜಂಗಮ ಶೆಟ್ಟಿ ಅವರು ಕಾರ್ಯಕ್ರಮ ಯಶಶ್ವಿಗೆ ಸಹಕರಿಸಿದ್ದಕ್ಕೆ ಮಾತನಾಡುತ್ತ, "ಪುಸ್ತಕಗಳು ಜಗತ್ತನು ಆಳಬಲ್ಲವು ಎಂಬ ಮಾತಿನಂತೆ ನಾಟಕಗಳು ಬದುಕನ್ನು ಮುನ್ನಡೆಸಲು ಸಹಕಾರಿಯಾಗಿವೆ. ಇಂತಹ ರಂಗ ಶಿಕ್ಷಣ ನಮ್ಮ ಯುವ ಸಮಾಜಕ್ಕೆ ತಲುಪಿಸುವ ಮುಖ್ಯ ಉದ್ದೇಶದಿಂದ ಆಯೋಜಿಸಿದ್ದ ರಂಗಶ್ರಾವಣ ಕಾರ್ಯಕ್ರಮಕ್ಕೆ ಪ್ರೇಕ್ಷಕರೇ ಜೀವಾಳವಾಗಿದ್ದರು. ನಮ್ಮ ಈ ಪ್ರಯತ್ನಕ್ಕೆ ಮೆಚ್ಚುಗೆ ವ್ಯಕ್ತ ಪಡಿಸಿದ ಎಲ್ಲರಿಗೆ ಅನಂತ ಕೃತಜ್ಞತೆಗಳು".

## ರಂಗಭೂಮಿ ಬದುಕುಳಿಯಲಿ

ನಾಟಕಗಳ ಬಗ್ಗೆ ಜನರಲ್ಲಿ ಆಸಕ್ತಿ ಕುಂದುತ್ತಿದೆ. ಮನೆಯಲ್ಲಿಯೇ ಸಿಗುವ ಟಿ.ವಿ.ಮನೊರಂಜನೆ ಪ್ರೇಕ್ಷಕರನ್ನು ಕಟ್ಟಿಹಾಕಿತ್ತು. ಇದರಿಂದಾಗಿ ನಾಟಕ ಕಂಪನಿಯ ಮಾಲೀಕರು ಪ್ರತಿಕೂಲ ಪರಿಸ್ಥಿತಿಯ ವಿರುದ್ಧ ಎಷ್ಟೊಂದು ಈಜವುದು? ಹಣಕ್ಕಾಗಿ ಏನು ಮಾಡುವುದು ಕೆಲವರಂತು ಕಂಪನಿ ಮುಚ್ಚಿ ಮನೆಗೆ ಮರ್ಯಾದೆಯಿಂದ ಹೋಗುವುದೇ ಲೇಸು ಎಂದು ನಿರ್ಣಯಿಸಿದ ಪ್ರಸಂಗಗಳಿಗೇನು ಕೊರತೆ ಇಲ್ಲ.

ರಂಗಭೂಮಿ ಬದುಕುಳಿಯ ಬೇಕಾದರೆ ಯಾವ ಮಾರ್ಗರೂಪಿಸ ಬೇಕೆಂಬ ಚಿಂತನೆ ಹಿಂದಿಗಿಂತಲೂ ಇಂದು ಹೆಚ್ಚಿನ ಅಗತ್ಯವಾಗಿ ಕಂಡು ಬರುತ್ತಿದೆ.

ರಂಗಮಾಧ್ಯಮ ಒಂದು ಜನತಾಮಾಧ್ಯಮ. ಹೊಸ-ಹೊಸ ಪ್ರೇಕ್ಷಕರನ್ನು ತನ್ನತ್ತ ಸೆಳೆಯುವ ಪ್ರಯತ್ನಗಳು ರಂಗಭೂಮಿಯಲ್ಲಾಗಬೇಕು.

ಪ್ರೇಕ್ಷಕರು ಹಣಕೊಟ್ಟು, ಮುಗಿಬಿದ್ದು ನಾಟಕ ಪ್ರದರ್ಶನಗಳನ್ನು ಆಸಕ್ತಿಯಿಂದ ನೋಡುವಂತಾಗಬೇಕು.

ಆರ್ಥಿಕ ನೆರವಿಗಾಗಿ ಸದಾಸರ್ಕಾರಿ, ಅರೆಸರ್ಕಾರಿ, ಸಂಘ ಸಂಸ್ಥೆಗಳ ಕೃಪಾಶ್ರಯಕ್ಕೆ ಕೈಚಾಚಿ ಸದಾ ಅವಲಂಬಿಸದೆ, ಆದಷ್ಟು ಆ ಮಟ್ಟಿಗೆ ಸ್ವಾವಲಂಬಿಯಾಗಬೇಕು.
(ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರಂಗಭೂಮಿಗೆ ನೀಡುತ್ತಿರುವ ನೆರವಿನಿಂದ ಏನೆಲ್ಲ ಆಗದು)

ಆರೋಗ್ಯಕರ ರಂಗನಿರ್ಮಾಣದಲ್ಲಿ ಸಮಯ ಹಣ ಮತ್ತು ಶಕ್ತಿ ಸಾಮರ್ಥ್ಯ ಈ ಮೂರು ಅಂಶಗಳನ್ನು ಅಲಕ್ಷಿಸಬಾರದು.

ಜನಪ್ರಿಯತೆ ಯಾವುದೇ ಪ್ರದರ್ಶನ ಕಲೆ ಹಾಗೂ ಮಾಧ್ಯಮದ ಹರಿಗೋಲು.

ಶಾಲಾ–ಕಾಲೇಜುಗಳಲ್ಲಿ ರಂಗ–ತರಬೇತಿ ವ್ಯವಸ್ಥೆ ಮಾಡಿಸಬೇಕು. ಇಂಥ ರಂಗತರಬೇತಿ ಸಂಸ್ಥೆಗಳು ಉತ್ತರ ಕರ್ನಾಟಕದಲ್ಲಿ ತೀರ್ವ ಕಾರ್ಯಾಚರಣೆಯಾಗಬೇಕು.

ಹೊಸದಾಗಿ ರಂಗ ಪ್ರವೇಸಿಸುವವರು ಆತುರಾತುರ ಮಾಡದೇ ಉತ್ತಮ ರಂಗ ತರಬೇತಿ ಪಡೆಯಲು ನಿಷ್ಠೆ ಹಾಗೂ ಕಾಳಜಿಯಿಂದ ಶ್ರಮಿಸಬೇಕು.

ಗ್ರಾಮಿಣ ಭಾಗದ ಯುವಕರಿಗೆ ರಂಗಭೂಮಿಯತ್ತ ಒಲವು ತೋರಿಸುವಂತೆ ಕ್ರಮಕ್ಕೆ ಆದ್ಯತೆ ನೀಡಬೇಕು.

ತಾಲೂಕು ಕೇಂದ್ರಗಳಲ್ಲಿ ಚಿಕ್ಕದಾಗಿ, ಅಚ್ಚುಕಟ್ಟಾದ ರಂಗಮಂದಿರ ನಿರ್ಮಾಣ ಅತ್ಯಂತ ಅಗತ್ಯವಾದುದು. ರಂಗಭೂಮಿಗೆ ಹೊಂದಿಕೊಂಡಂತೆ ಇತರ ಮೂಲಭೂತ ಸೌಕರ್ಯ, ಯೋಜನೆ ರೂಪಿಸಿದರೆ, ನೀನಾಸಂ, ರಂಗಾಯಣ, ಅಭಿನಯ ತರಂಗ, ಶಿವಸಂಚಾರದಿಂದ ಹೊರಬಂದವರು ಸುಮ್ಮನೆ ಕುಳಿತು ಕೊಳ್ಳದೆ ರಂಗಭೂಮಿಯನ್ನು ಬೆಳೆಸುತ್ತಾರೆ. ನಟ–ನಟಿಯರನ್ನು ಬೆಳೆಸುತ್ತಾರೆ. ಇಲ್ಲಿ ನಾಟಕಕಾರ ಪ್ರಸನ್ನರ ಮಾತೊಂದು ನೆನಪಿಗೆ ಬರುತ್ತದೆ. 'ಇಲಿಗಳು ತಮ್ಮ ಉಗುರುಗಳನ್ನು ಮೊನಚು ಮಾಡಿಕೊಳ್ಳಲು ಅವುಗಳು ನೆಲಕೆರೆಯುತ್ತಲೆ ಇರುತ್ತವೆ?'.

ಯಾವುದೇ ರಂಗವಿರಲಿ ಸಮಸ್ಯೆಗಳು ಎದುರಾಗುವುದು ಸಹಜ. ಅದನ್ನು ಸಂಯಮದಿಂದ ಎದುರಿಸುತ್ತ ಪರಿಹಾರ ಕಂಡುಕೊಳ್ಳಬೇಕು. ರಂಗಭೂಮಿಯೂ ಯಾವತ್ತೂ ಬದಲಾವಣೆ ಮತ್ತು ವೈವಿಧ್ಯತೆಯನ್ನು ಬಯಸುತ್ತದೆ ಇದು ಸಹಜ.

ಕೊನೆಯಲ್ಲಿ ಕಲಬುರ್ಗಿ ಜಿಲ್ಲೆಯು ರಂಗಭೂಮಿ ಕ್ಷೇತ್ರದಲ್ಲಿ ತನ್ನದೇ ಆದ ಖ್ಯಾತಿಯನ್ನು ಪಡೆದಿದೆ. ಕಳೆದ ೧೩ ವರ್ಷಗಳಿಂದ ಶ್ರೀ ಗುರು ಕುಮಾರೇಶ್ವರ ನಾಟ್ಯಸಂಘ ಹಾನಗಲ್ ಕಂಪನಿ

ಜಯಭೇರಿ ಹೊಡೆಯುತ್ತಿದೆ. ಕನ್ನಡ ರಂಗಭೂಮಿಯ ಇತಿಹಾಸದಲ್ಲಿ ಇದೊಂದು ಹೊಸ ದಾಖಲೆ. ಈ ಹೆಗ್ಗಳಿಕೆ ಮುಂದುವರಿಯಲು ನಾಟಕಕಾರ ಎಲ್.ಬಿ.ಕೆ.ಆಲ್ದಾಳರ ಮಾರ್ಗದರ್ಶನವಿದೆ. ಅವರ ನಾಟಕಗಳು ಇಲ್ಲಿನ ರಂಗ ಭೂಮಿಯ ಮೇಲೆ ಪ್ರದರ್ಶನಗೊಂಡು ರಂಗ ವೀಕ್ಷಕರನ್ನು ರಂಜಿಸಿವೆ. ಅದಕ್ಕಾಗಿ ನಾಟಕ ಕಂಪನಿಗಳು ಚಿರಾಯುವಾಗಲಿ.

## ಅಡಿ ಟಿಪ್ಪಣಿ

೧) ವಿಶ್ವಾರಾಧ್ಯ ಮಹಾತ್ಮೆ : ಆಲ್ದಾಳ – ಪು.ಸಂಖ್ಯೆ – ೩
೨) ಅದೇ – ಪು.ಸಂಖ್ಯೆ – ೩
೩) ಅದೇ – ಪು.ಸಂಖ್ಯೆ – ೩
೪) ಅದೇ – ಪು.ಸಂಖ್ಯೆ – ೩
೫) ಇಟಗಿಯ ಸಾಧು ಶಿವಲಿಂಗೇಶ್ವರ ಮಹಾತ್ಮೆ : ಆಲ್ದಾಳ : ಪು.ಸಂಖ್ಯೆ – ೫೪
೬) ಅದೇ – ಪು.ಸಂಖ್ಯೆ – ೫೯
೭) ಅದೇ – ಪು.ಸಂಖ್ಯೆ – ೪೫
೮) ಭರತನೂರ ಶ್ರೀ ಗುರು ನಂಜೇಶ್ವರ ಮಹಾತ್ಮೆ – ಆಲ್ದಾಳ ಪು.ಸಂಖ್ಯೆ – ೭
೯) ಜಮಖಂಡಿ ಶಿವಶರಣ ಅಯ್ಯಪ್ಪ ಮುತ್ತ್ಯಾ ಮಹಾತ್ಮೆ : ಆಲ್ದಾಳ ಪು.ಸಂಖ್ಯೆ – ೧೨
೧೦) ಅದೇ – ಪು.ಸಂಖ್ಯೆ – ೧೯
೧೧) ಸುಕ್ಷೇತ್ರ ಅಳ್ಳೊಳ್ಳಿ ಶ್ರೀ ಅಯ್ಯಪಯ್ಯ ಮಹಾತ್ಮೆ : ಆಲ್ದಾಳ – ಪು.ಸಂಖ್ಯೆ – ೯೦
೧೨) ಅದೇ – ಪು.ಸಂಖ್ಯೆ – ೯೦
೧೩) ಅಂತ : ಸಾಕ್ಷಿ : ಸ್ವರಚಿತ ವಚನಗಳು : ಶಿವಾನಂದ ಸ್ಥಾವರಮಠ – ಪು.ಸಂಖ್ಯೆ – ೪
೧೪) ಭರತನೂರು ಶ್ರೀ ಗುರು ನಂಜೇಶ್ವರ ಮಹಾತ್ಮೆ : ಆಲ್ದಾಳ – ಪು.ಸಂಖ್ಯೆ – ೨೨, ೨೩
೧೫) ಶ್ರೀ ಅಯ್ಯಪಯ್ಯ ಮಹಾತ್ಮೆ : ಆಲ್ದಾಳ – ಪು.ಸಂಖ್ಯೆ – ೫
೧೬) ಜಮಖಂಡಿ ಶಿವಶರಣ ಅಯ್ಯಪ್ಪ ಮುತ್ತ್ಯಾ ಮಹಾತ್ಮೆ : ಆಲ್ದಾಳ ಪು.ಸಂಖ್ಯೆ – ೧೪, ೧೬
೧೭) ರಂಗಕೃತಿ : ನಾಟಕ ಪ್ರಸನ್ನರ ಕೃತಿಯಿಂದ ಲೇಖನ ಬರೆದವರು – ಎಸ್.ಆರ್.ವಿಜಯಶಂಕರ
ವಿಜಯವಾಣಿ ದಿನಪತ್ರಿಕೆ ಪ್ರಕಟ : ೨೦.೧೨.೨೦೧೫ – ಪು.ಸಂಖ್ಯೆ – ೯
೧೮) ಶ್ರೀ ಷಣ್ಮುಖ ಶಿವಯೋಗಿ – ಆಲ್ದಾಳ ಪು.ಸಂಖ್ಯೆ – ೩೨
೧೯) ಜೇವರ್ಗಿ ಜ್ಯೋತಿ ಷಣ್ಮುಖ ಶಿವಯೋಗಿ : ಆಲ್ದಾಳ – ಪು.ಸಂಖ್ಯೆ– ೯೯, ೭೦
೨೦) ಕಣ್ಣಿಟ್ಟ ಕೈಕೊಟ್ಟ ಕ್ರಾಂತಿಕಾರಿ ನಾಟಕ : ಆಲ್ದಾಳ – ಪು.ಸಂಖ್ಯೆ – ೬೦
೨೧) ಅದೇ – ಪು.ಸಂಖ್ಯೆ –೪೦
೨೨) ಗರತಿ ವಿಶ್ವದ ಜ್ಯೋತಿ : ಆಲ್ದಾಳ – ಪು.ಸಂಖ್ಯೆ – ೨೯
೨೩) ಬಾಳಿಗೊಂದು ಬೆಲೆ ಬೇಕು : ಆಲ್ದಾಳ – ಪು.ಸಂಖ್ಯೆ – ೩
೨೪) ಜಗದ್ಗುರು ತಿಂಥಣಿ ಶ್ರೀ ಮೌನೇಶ್ವರ ಮಹಾತ್ಮೆ : ಆಲ್ದಾಳ – ಪು.ಸಂಖ್ಯೆ – ೧೮
೨೫) ಸಾಧು ಶಿವಲಿಂಗೇಶ್ವರ ಮಹಾತ್ಮೆ : ಆಲ್ದಾಳ – ಪು.ಸಂಖ್ಯೆ – ೪
೨೬) ಪತಿಭಕ್ತಿ ನಾಟಕ : ಆಲ್ದಾಳ – ಪು.ಸಂಖ್ಯೆ – ೬೬
೨೭) ಹಂಡೆ ಕುಲತಿಲಕ ರಾಜಾಬಲದ ಹನುಮಪ್ಪನಾಯಕ (ಐತಿಹಾಸಿಕ ನಾಟಕ) : ಆಲ್ದಾಳ –ಪು.ಸಂಖ್ಯೆ –೬೨
೨೮) ರಂಗ ಸಾಮ್ರಾಟ : ಹುಸೇನ ಭಾಷಾ ಮುರಗಾನೂರ – ಪು.ಸಂಖ್ಯೆ – ೩೪
೨೯) ಬಿ.ಆರ್.ಅರಷಿಣಗೋಡಿ : ಡಾ.ರಾಮಕೃಷ್ಣ ಮರಾಠೆ – ಪು.ಸಂಖ್ಯೆ – ೫೮
ಕರ್ನಾಟಕ ನಾಟಕ ಅಕಾಡೆಮಿ – ೨೦೧೫

# ಸಮಾರೋಪ

**ಮಾನವನ ಜನ್ಮ ಬಹು ದೊಡ್ಡದು, ಪವಿತ್ರವಾದುದು**
**ಇದು ಹಸನಾಗಿ ಹಸಿರಾಗಿರಬೇಕಾದರೆ ಅಥವಾ**
**ಸಾರ್ಥಕಗೊಳ್ಳಬೇಕಾದರೆ ಜ್ಞಾನ ಅತ್ಯಾವಶ್ಯಕ**
**ಗೀತೆ ಹೇಳುವಂತೆ ನಹಿಂಜ್ಞಾನೇಶದೃಶಂ**
**ಅಂದರೆ ಜ್ಞಾನಕ್ಕಿಂತ ಮಿಗಿಲಾದುದು ಈ ಜಗತ್ತಿನಲ್ಲಿ**
**ಯಾವುದು ಇಲ್ಲ ಇದನ್ನು ಶ್ರದ್ದೆ ಮತ್ತು ಪರಿಶ್ರಮದ ಮೂಲಕ**
**ಸಂಪಾದಿಸಬೇಕು. ಇದರಿಂದ ಸಮಾಜಕ್ಕೆ ದೇಶಕ್ಕೇ**
**ಒಳಿತಾಗುತ್ತದೆ. ಅಷ್ಟೆಯಲ್ಲದೆ ಪ್ರತಿಯೊಬ್ಬ ವ್ಯಕ್ತಿಯ**
**ಮನದ, ಮನೆಯ ದಿವಟಿಗೆಯನ್ನು ಹಚ್ಚಿ ಪ್ರಜ್ವಲಗೊಳಿಸುತ್ತದೆ,**
**"ಜ್ಞಾನ ಇರುವ ಕಡೆ ಆನಂದವಿರುತ್ತದೆ, ಇದೇ ಸಚ್ಚಿದಾನಂದ".**

ಕನ್ನಡ ರಂಗಭೂಮಿಯ ಚರಿತ್ರೆಯಲ್ಲಿ ವಿಶೇಷವಾಗಿ ಕಲಬುರಗಿ ಜಿಲ್ಲೆ ಸೇರಿದಂತೆ ಹೈದ್ರಾಬಾದ ಕರ್ನಾಟಕ ಪ್ರದೇಶದ ಹೆಸರನ್ನು ಚಿರಸ್ಥಾಯಿಸಿದವರು ರಂಗಸಂತಜಂಗಮ, ಅನುಭವ ಕವಿ, ನಾಟಕ ಸಾಹಿತ್ಯಿ ಶಿರೋಮಣಿ, ಗುಬ್ಬಿ ವೀರಣ್ಣ ಪ್ರಶಸ್ತಿ ವಿಜೇತ ಸಾಹಿತ್ಯಿ ಶ್ರೀ ಲಾಲ ಮಹ್ಮದ ಬಂದೇನವಾಜ ಖಲೀಫ(ಎಲ್.ಬಿ.ಕೆ.) ಆಲ್ದಾಳರು. ಬಹುಮುಖ ಸಾಹಿತ್ಯ ಶ್ರೀಮಂತಿಕೆ ಹೊಂದಿರುವ ಅವರು ನಾಟಕಕಾರರಾಗಿಯೇ ಪ್ರಸಿದ್ಧರಾದವರು. ನಾಟಕಕಾರ ಎಲ್. ಬಿ.ಕೆ.ಆಲ್ದಾಳರ ಬದುಕು ಬರಹ ಪ್ರಬಂಧದ ಅಧ್ಯಯನದ ಉದ್ದೇಶ–ಸ್ವರೂಪ–ವ್ಯಾಪ್ತಿ, ಕನ್ನಡ ರಂಗಭೂಮಿಯ ಹಿನ್ನೆಲೆ, ಆಲ್ದಾಳರ ಬದುಕು ಅವರ ನಾಟಕ ಮತ್ತು ನಾಟಕೇತರ ಕೃತಿಗಳು, ಕನ್ನಡ ರಂಗಭೂಮಿಗೆ ಅಧ್ಯಾತ್ಮಿಕ, ಜಾನಪದ, ಪ್ರಬಂಧಗಳು, ವಚನಗಳು, ತ್ರಿಪದಿಗಳು, ಚರಿತ್ರೆಗಳು, ರಂಗಗೀತೆ, ತತ್ವಗೀತೆಗಳು, ಪುರಾಣಗಳು, ತತ್ವಪದಗಳು ಆಲ್ದಾಳರ ವಿಶಿಷ್ಟ ಕೊಡುಗೆಗಳ ಬಗ್ಗೆ ಇಲ್ಲಿ ಚರ್ಚಿಸಲಾಗಿದೆ ಮುಖ್ಯವಾಗಿ ಅವರಿಗೆ ಧಕ್ಕಿದ ಕಲಬುರ್ಗಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷಸ್ಥಾನ ಅವರು ಅದನ್ನು ನಿರ್ವಹಿಸಿದಪಾತ್ರ, ಕನ್ನಡ ಭಾಷೆಯ ಅಭಿವೃದ್ಧಿಗೋಸ್ಕರ ಅವರು ತೋರಿದ ಕಳಕಳಿಯನ್ನು ಇಲ್ಲಿ ಸೇರ್ಪಡೆಗೊಳಿಸಲಾಗಿದೆ.

ಕನ್ನಡ ರಂಗಭೂಮಿಗೆ ಅಮೋಘ ಸೇವೆಯನ್ನು ಈ ಇಳಿವಯಸ್ಸಿನಲ್ಲಿಯೂ ಸಲ್ಲಿಸುತ್ತಿರುವುದು ಕಂಡರೆ ಯುವಕರು ತಮ್ಮ ಕೈ ಬೆರಳುಗಳನ್ನು ಮೂಗಿನ ಮೇಲಿಟ್ಟು ಕಣ್ಣುತೆರೆದು ರೆಪ್ಪೆ ಬಡಿಯದಂತೆ ನಿಂತುಕೊಳ್ಳಬೇಕಾಗುತ್ತದೆ. ಆಲ್ದಾಳರ ಜೀವನ ಸಾಧನೆಕಂಡು ಅವರ ಸಾಹಿತಿಗೆಳೆಯರು, ಮಿತ್ರರು, ಮಠಾಧೀಶರುಗಳು, ನಾಡಿನ ಜನತೆ, ಗುರು–ಹಿರಿಯರುಗಳು ಒಟ್ಟಾಗಿ ಸೇರಿಕೊಂಡು ಅವರ ಎಪ್ಪತ್ತನೇ ವರ್ಷ ತುಂಬಿದ ಸಂದರ್ಭದಲ್ಲಿ ಆಲ್ದಾಳರಿಗೆ 'ರಂಗ ಸಂತ ಜಂಗಮ' ಅಭಿನಂದನ ಗ್ರಂಥ ನೀಡಿ ಸನ್ಮಾನ ತೋರಿಸಿದ್ದು ಅದನ್ನವರು ಜೀವಮಾನದಲ್ಲಿ ಮರೆಯಲಾರರು.

ಇಂತಹ ಪ್ರತಿಭಾವಂತ, ಮೇಧಾವಿ ಸಾಹಿತಿಗಳನ್ನು, ಶ್ರೇಷ್ಠ ವಿದ್ವಾಂಸರನ್ನು, ಸೃಜನಶೀಲ, ಅನುಪಮ ವಾಕ್ಕೋವಿದರನ್ನು ಅಭಿನಂದಿಸುತ್ತಿರುವ ಸಹೃದಯ ಸಜ್ಜನರು ಅಭಿನಂದನೀಯರು. ವಜ್ರ–ವೈಢೂರ್ಯ ಮುಕುಟಗಳಿಗಿಂತ ಮಿಗಿಲಾಗಿ ಅಭಿನಂದನ ಗ್ರಂಥ ಸಮರ್ಪಣೆಯ ಮೂಲಕ–ನಾಡು–ನುಡಿಗಳಿಗೆ, ಸೇವೆ ಸಲ್ಲಿಸಿದ ಗಣ್ಯರನ್ನು ಗೌರವಿಸುವ ಸಂಪ್ರದಾಯ ಕರ್ನಾಟಕದಲ್ಲಿ ಅಭಿನಂದನಗ್ರಂಥ 'ಸಂಭಾವನೆ'ಯಿಂದ ಪ್ರಾರಂಭವಾಗಿ ಇಂದಿಗೂ ಮುಂದುವರಿದಿದೆ. ಇದು ಕನ್ನಡ ಸಂಸ್ಕೃತಿಯ ವೈಭವದ ದ್ಯೋತಕ. ವಜ್ರ, ವೈಢೂರ್ಯಗಳಿಗೆ ಬೆಲೆಕಟ್ಟಬಹುದು. ಅಭಿನಂದನೆ

ಲೇಖನಗಳನ್ನು ಯಾವ ಮಾನದಂಡದಿಂದಲೂ ಅಳೆಯಲಾಗದು. ಒಂದೊಂದು ಲೇಖನವೂ ಲೇಖಕರ ಗೌರವ, ಭಕ್ತಿ, ಉತ್ಸಾಹ, ಪ್ರೀತಿ, ಶುಭಾಷಯ, ಆತ್ಮೈಕ್ಯವನ್ನೊಳಗೊಂಡಿದೆಂದು ಹೇಳಬಹುದು. ಸುಲಭವಾಗಿ 'ಹೊನ್ನು'ಗಳಿಸಬಹುದು, ಅಭಿನಂದನ ಗ್ರಂಥಗಳಿಗೆ ಲೇಖನಗಳ ಸಂಪಾದನೆ ಕರಕಷ್ಟ, ಮಹತ್ತು–ಬೃಹತ್ತುಗಳು ಎದ್ದು ಕಾಣುವ ಈ ಬೃಹದ್ ಗ್ರಂಥಗಳಿಗೆ ಲೇಖನ ಸಂಪಾದಿಸುವಲ್ಲಿ, ಓರಣಿಸುವಲ್ಲಿ ಸಂಪಾದಕರ ತಲೆ–ಮೈಗಳಿಂದ ಬ್ಯಾರಲ್‌ನಷ್ಟು ಬೆವರಿಳಿದಿರಬೇಕೆಂದು ಅನ್ನಿಸಿದರೆ ಅದು ತಪ್ಪಲ್ಲ. ಅವರು ಪಡುತ್ತಿರುವ ಶ್ರಮ ಆವರ್ಣನೀಯ ಇದನ್ನು ಸಹ ಈ ಸಂಶೋಧನೆಯ ಮಹಾ ಪ್ರಬಂಧದಲ್ಲಿ ಚರ್ಚಿಸಿದೆ.

ಎಲ್.ಬಿ.ಕೆ. ಆಲ್ದಾಳರು ತಮ್ಮ ನಾಟಕಕ್ಕೆ ಶ್ರೀಕಾರ ಹಾಕಿದ್ದು ೧೯೬೪ರಲ್ಲಿ "ಪತಿಭಕ್ತಿ"ಯೊಂದಿಗೆ, ಅಂದು ಪ್ರಾರಂಭವಾದ ಇವರ ಬರವಣಿಗೆ ಇಲ್ಲಿಯವರೆಗೆ ನಿರಂತರ ಪ್ರವಾಹವಾಗಿ ಹರಿಯುತ್ತಲೇ ಇರುವುದು ಅಗಾಧವಾದ ಇವರ ಪಾಂಡಿತ್ಯಕ್ಕೆ ಸಾಕ್ಷಿಯಾಗಿದೆ. ಸುಮಾರು ೧೧ ನಾಟಕ ಕಂಪನಿಗಳಲ್ಲಿ ನಿರ್ದೇಶನಮಾಡಿ 'ಸೈ' ಎನ್ನಿಸಿಕೊಂಡಿದ್ದಾರೆ. ಇವರ ಲೇಖನಿಗೆ ಬಿಡುವಿಲ್ಲ. ಇವರ ಸಾಧನೆ ಕಂಡಾಗ ಆಡು ಮುಟ್ಟದ ತಪ್ಪಲಿಲ್ಲ ಎನ್ನುವ ಮಾತು ನೆನಪಿಗೆ ಬರುತ್ತದೆ. ಅದಕ್ಕೂ ಹೆಗ್ಗಳಿಕೆ ಎಂದರೆ ೪೦ಕ್ಕೂ ಹೆಚ್ಚು ಸ್ಥಳೀಯ ಪುರಾಣಗಳನ್ನು ಆಧರಿಸಿ ಪವಾಡ ಪುರುಷರ ಕುರಿತು ನಾಟಕಗಳನ್ನು ರಚಿಸಿದ್ದಾರೆ. ಅವರು ನಿರಂತರ ಇದೇ ಕಾಯಕವನ್ನು ಮಾಡಿಕೊಂಡು ಬಂದಿದ್ದಾರೆ. ನಾಟಕವೇ ಆಲ್ದಾಳರ ಜೀವನ ಎಂಬತ್ತಿತ್ತು ಅವರೇ ಹೇಳುವಂತೆ ಕೆಳಗಿನ ತ್ರಿಪದಿಗಳಲ್ಲಿ ಒಡಮೂಡಿರುವ ನಾಟಕದ ವಿಶೇಷತೆ:

**ನಾಟಕ ಆಡಬೇಕ । ನಾಟಕನೋಡಬೇಕ ।**
**ನಾಟಕದತಿರಳು ತಿಳಿಬೇಕ । ನನಗೆಳತಿ ।**
**ನಾಟಕದ ಬದುಕು ಮರಿಬ್ಯಾಡ । (೧)**

**ನಾಟಕದ ಮಾತಿಗಿ । ನಟನೆ ಮಾಡೂದಬ್ಯಾಡ ।**
**ನಾಟಿರಲಿ ನಿನ್ನ ಎದಿಯಾಗ । ನನಗೆಳದಿ ।**
**ನಾಟಕವೇ ನಮ್ಮಜೀವನವು । (೨)**

**ನಾಟಕದವರೆಂದು । ಕೆಟ್ಟದೃಷ್ಟಿಯಬ್ಯಾಡ ।**
**ನೀಟಾಗಿ ಹೋಗೂದುಕಲಿಬೇಕ । ನನಗೆಳದಿ ।**
**ನಾಟಕನೋಡಿ ನಲೀಬೇಕ । (೩)**

ಮೇಲ್ಕಾಣಿಸಿದ ತ್ರಿಪದಿಗಳು ಆಲ್ದಾಳರು ನಾಟಕದ ಬಗ್ಗೆ ರಂಗಭೂಮಿಯ ಮೇಲೆ ಅವರು ತೋರುತ್ತಿರುವ ಅಭಿಮಾನ, ಗೌರವ, ಪ್ರೀತಿ, ವಾತ್ಸಲ್ಯ ಅಜರಾಮರ, ವ್ಯಕ್ತಿ ಗಮನಾರ್ಹ ಎತ್ತರಕ್ಕೆ ಬೆಳೆದಾಗ ಆತನ ಸಾಧನೆಯೊಂದಿಗೆ ಜೀವನವನ್ನು ಗಮನಿಸುವುದು ವಾಡಿಕೆ. ಎಲ್.ಬಿ.ಕೆ ಆಲ್ದಾಳರಿಗೆ ವೈಯಕ್ತಿಕ ಜೀವನ ಎಂಬುದೇ ಇಲ್ಲ. ಕುಟುಂಬವನ್ನು ಕುಟುಂಬಕ್ಕೆ ಬಿಟ್ಟು ಸಮಾಜ–ಸಾಹಿತ್ಯ, ಸಂಸ್ಕೃತಿ ಎಂದು ಹೊರಟವರು ಅವರು. ಅವರೊಂದಿಗೆ ವ್ಯಾವಹಾರಿಕ ಬದುಕಿನ ಸಂವಾದ ಸಾಧ್ಯವೇ ಇಲ್ಲ. 'ಹಾಲಳಿದು ನೀರಲ್ಲಿ ತೇಲುವ ಬೆಣ್ಣೆಯ ಹಾಗೆ' ನಿರ್ಲೇಪರೆನಿಸಿ, ಕುಟುಂಬ ಹಿಡಿದಿದ್ದರೂ ಸ್ಥಾವರವಾಗದೆ, ಸಮಾಜ ಹಿಡಿದು ಜಂಗಮವಾಗಿದ್ದಾರೆ. ಎಚ್ಚರ–ನಿದ್ರೆ ಎರಡರಲ್ಲೂ ಅವರಿಗೆ ರಂಗಭೂಮಿಯೇ ಜ್ವರ ಮತ್ತು ಕನಸು.

ಎಲ್.ಬಿ.ಕೆ ಅವರ ನಾಟಕಗಳು, ಇನ್ನಿತರ ಸಾಹಿತ್ಯ ಗ್ರಂಥಗಳು, ಅಧ್ಯಯನಯೋಗ್ಯವಾದ ಗ್ರಂಥಗಳು. ಇಂಥ ಗ್ರಂಥಗಳನ್ನು ರಚಿಸಿರುವ ಹಿರಿಯ ನಾಟಕಬರಹಗಾರನ ಕುರಿತ ಹಲವು ಲೇಖನಗಳು ಬಂದಿದ್ದರೂ ಒಬ್ಬರೇ ಲೇಖಕರಿಂದ ಗ್ರಂಥರೂಪದ ವಿವರವಾದ, ವಿಮರ್ಶಾತ್ಮಕ ಅಧ್ಯಯನ ನಡೆದದ್ದೂ ಇಲ್ಲವೆ ಇಲ್ಲ ಎನ್ನಬಹುದು. ಇಂಥ ಪ್ರೌಢ ಅಧ್ಯಯನವೊಂದರ ಅಗತ್ಯ ಇದ್ದೇ ಇತ್ತು. ಈ ಮಹಾಪ್ರಬಂಧ ಆ ಅಗತ್ಯವನ್ನು ಪೂರೈಸುವ ದಿಕ್ಕಿನಲ್ಲಿ ನಡೆದ ಬಂದು ಗಮನಾರ್ಹ ಪ್ರಯತ್ನ ಎನ್ನಬಹುದು.

'ಹಲಸಿನ ಹಣ್ಣಿನಲ್ಲಿ ಸೋಲೆ, ನಾರು, ದಿಂಡು ಮತ್ತು ಅಂಟು ಇವೆಲ್ಲ ಇವೆಯೆಂದು ಗಮಗಮಿಸುವ ಹಲಸಿನ ತೊಳೆಯನ್ನು ನಾವು ಕಡೆಗಣಿಸಬಹುದೆ, ಎಲ್‌ಬಿಕೆ ಅವರ ಪುರಾಣಗಳು, ತ್ರಿಪದಿಗಳು, ವಚನವಾಹಿನಿ, ಜನಪದಜೇನು ಜನಪದ ಜಂಗಮ ಕನ್ನಡ ಕಾವ್ಯದ ನಂದನದಲ್ಲಿ ಬಿಟ್ಟಿರುವ ಒಂದು ಹಲಸಿನ 'ಹಣ್ಣು' ಯಾವುದೇ ಶ್ರೇಷ್ಠ ಹಣ್ಣಿನ ಗಿಡವಾಗಲಿ, ಹೂವಿನಗಿಡವಾಗಿರಲಿ, ಗಿಡದಪೂರ್ತಿ, ಹಣ್ಣುಗಳಾಗಲಿ, ಹೂಗಳಾಗಲಿ ಇರುವುದಿಲ್ಲ. ಯಾವುದಾದರೂ ಹೆಚ್ಚು-ಕಡಿಮೆ ಇರಬಹುದು ಅಂದಾಗ ಹಣ್ಣುಗಳನ್ನು ತಿಂದು ಸುಮ್ಮನಿರಲು ಸಾಧ್ಯವೆ? ಮನಸ್ಸಿನ ನೆಮ್ಮದಿಗೆ, ಕಣ್ಣುಗಳ ದೃಷ್ಟಿಗೆ ಹೂಗಳು ಬೇಕಲ್ಲವೆ? ಎಲ್.ಬಿ.ಕೆ. ಅವರು ಕೇವಲ ನಾಟಕ ರಚನೆಗೆ ಸೀಮಿತವಾಗದೆ ಇತರ ಪ್ರಕಾರಗಳನ್ನು ಅರಗಿಸಿಕೊಂಡು ಯಶಸ್ವಿಯಾಗಿಸಿದ್ದಾರೆ. ಅಲ್ಲದೆ ತಾನು ಮುಟ್ಟಿದುದೆಲ್ಲವನ್ನೂ ಚಿನ್ನವನ್ನಾಗಿ ಮಾಡಿರುವರು ಎನ್ನಬಹುದು.

'ಶ್ರೀ ತಪೋವನ ವಚನವಾಹಿನಿ' ಎಂಬ ವಚನಗ್ರಂಥ ಎಲ್.ಬಿ.ಕೆ ಆಲ್ದಾಳರ ಹೆಮ್ಮೆಯ ಕೃತಿ ವಚನಗಳಲ್ಲಿ ಉಪಮೆ, ಅಲಂಕಾರ ನಿರಾಡಂಬರ, ಶ್ರೀ ಸದ್ಗುರು ವಿಶ್ವಾರಾಧ್ಯ ಮಹಾತ್ಮರ ಸಮಗ್ರ ಜೀವನದ ಸಿದ್ಧಾಂತ ಇತಿಹಾಸ ಇದರ ಒಡಲೊಳಗಿದೆ. ಪ್ರತಿಯೊಬ್ಬರು ಭಕ್ತಿಯಿಂದ ಓದಿ ನಿತ್ಯಜೀವನದಲ್ಲಿ ಅಳವಡಿಸಿಕೊಳ್ಳಬಹುದಾದಂತಹ ನುಡಿಮುತ್ತುಗಳು ಇವಾಗಿವೆ.

'ಜನಪದ ಜೇನು' ಎಂಬುದು ಎಲ್‌ಬಿಕೆ ಅವರ ಜೀವನ ಶ್ರೇಷ್ಠಗ್ರಂಥ. ಇದೊಂದು ೪೦೦ ತ್ರಿಪದಿಗಳಿಂದ ತುಂಬಿ-ತುಳುಕುತ್ತಿರುವ ಅದ್ಭುತ ಗ್ರಂಥ. ಕೃತಿ ರಚನೆಯ ಮೂಲಕ ಜನಪದ ಸಾಹಿತ್ಯಕ್ಕೆ ಕಾಯಕಲ್ಪತರಲು ಪ್ರಯತ್ನಿಸಿದ್ದಾರೆ. ಓದುತ್ತ ಹೋದಂತೆ ಜೇನು ಸವಿದಂತ ರುಚಿ ಮನಕ್ಕೆಹಿತ, ಇನ್ನುಬೇಕು....ಬೇಕು ಅಂತ ಬಾಯಿ ಚಪ್ಪರಿಸಿದಂತೆ, ಜೀವನದಲ್ಲಿ ತೇಲಿ ಬರುವ ದುಃಖ-ದುಮ್ಮಾನ, ನಗು-ಅಳು, ಸುಖ-ಸಂತೋಷ ಅನುಭವದ ತತ್ವಗಳಸಾರ ಸಂಗ್ರಹ ಇಲ್ಲಿ ಭರಪೂರವಿದೆ. ಈ ಕೃತಿಸಾಹಿತ್ಯದ ಸಂಜೀವಿನಿಯಾಗಿದೆ.

**ಜನಪದ ನುಡಿಗಳು । ಜಗಕೆ ಜಾಗಟಿಗಂಟೆ ।**
**ಮನದೊಳಗೆ ನಿತ್ಯ ನುಡಿತಾವ ನನಗೆಳತಿ ।**
**ಜನಪದವೇ ಜಗದ ಸಂಪತ್ತು । (ಎಲ್.ಬಿ.ಕೆ)**

'ಶರಣಕಿರಣ' ಶ್ರೀ ಸದ್ಗುರು ವಿಶ್ವಾರಾಧ್ಯ ಮಹಾತ್ಮರ ಕುರಿತು ಬರೆದ ಭಕ್ತಿಗೀತೆಗಳ ಸಂಕಲನವಾಗಿದ್ದು, ಇದರಲ್ಲಿ ೪೩ ಭಕ್ತಿ ಗೀತೆಗಳು ರಾರಾಜಿಸುತ್ತಿವೆ. ಈ ಸಂಕಲನವನ್ನು ಷಡಕ್ಷರಿ ಬ್ರಹ್ಮಸ್ವರೂಪಿ ಶ್ರೀ ಗಂಗಾಧರ ಸ್ವಾಮಿಗಳು, ವಿಶ್ವಾರಾಧ್ಯಸಿದ್ಧ ಸಂಸ್ಥಾನ ಮಠ ಅಬ್ಬೇತುಮಕೂರು ಇವರಿಗೆ ಅರ್ಪಿಸಲಾಗಿದೆ. ದೇವರ ಪ್ರಾರ್ಥನೆಗಾಗಿ ಬರೆದಿರುವ ಈ ಹಾಡುಗಳಲ್ಲಿ ದೇವರ ಕುರಿತ ಶೃದ್ಧೆ ಅಚಲವಾಗಿರುವುದನ್ನು ಗಮನಿಸಬಹುದು. ಇಲ್ಲಿ ಎಲ್.ಬಿ.ಕೆ.ಅವರು ತಮ್ಮ ಕವಿತ್ವದ ಲೋಕಾನುಭವ ಅಧ್ಯಾತ್ಮ ಎರಡು ವ್ಯಕ್ತಪಡಿಸಿದ್ದಾರೆ.

'ಶರಣಚಿಂತನ' ಕಿರು ಹೊತ್ತಿಗೆಯಲ್ಲಿ, ಸೇಡಂ ಪಟ್ಟಣದ ನೀಲಕಂಠ ಪುಸ್ತಕ ಅಂಗಡಿಯ ಮಾಲೀಕರಾದ ಶ್ರೀ ಸಿದ್ರಾಮಪ್ಪ ತಳ್ಳಳ್ಳಿಯವರ ಸಂಪರ್ಕ ಬಂದಾಗಿನಿಂದ ಎಲ್‌ಬಿಕೆ ಆಲ್ದಾಳ ಅವರು ಅವರೊಟ್ಟಿಗೆ ಅನ್ಯೋನತೆಯನ್ನು ಬೆಳೆಸಿಕೊಂಡು ಬಂದುದುದಲ್ಲದೇ ಅವರ ಜೀವನ ಪರಿಚಯ ಕಿರುಹೊತ್ತಿಗೆಯೂ ರೂಪುಗೊಂಡಿತು. ಶರಣ–ಚಿಂತನದಲ್ಲಿ ೩೧ ತಲೆಬರಹಗಳಿವೆ. ಪುಸ್ತಕದ ಹೆಸರು ಅವರ ಜೀವನ ಸಾಧನೆಗೆ ಒಪ್ಪುವಂತಹದ್ದಾಗಿದ್ದು ಮುಖಪುಟದಲ್ಲಿ ಆಲ್ದಾಳರ ಭಾವ ಚಿತ್ರ ಹಾಗೂ ಅವರ ಕಿರು ಪರಿಚಯ ಇರುವುದು 'ಶರಣ–ಚಿಂತನ' ಕೃತಿಗೆ ಹೆಚ್ಚಿನ ಕಳೆತಂದಿದೆ.

ರಂಗಕಲೆಗೆ ಸಮಗ್ರ ದೃಷ್ಟಿಯನ್ನು ದೊರಕಿಸಿಕೊಟ್ಟಾಗಲೇ ಅದರ ಜೀವಂತ ವಿಕಾಸ ಸಾಧ್ಯವೆಂದು ಹೇಳುವುದು ತಪ್ಪಾಗದು. ರಂಗಭೂಮಿ ಒಂದು ಸಂಕೀರ್ಣ ಕ್ಷೇತ್ರ ಎಂಬುದಕ್ಕೆ ಯಾವ ಉತ್ಪ್ರೇಕ್ಷೆಯೂ ಇಲ್ಲ. ಇದೊಂದು ಜೀವಂತ ಕ್ಷೇತ್ರ. ಇದು ಜೀವನದ ವಿದ್ಯಮಾನಗಳಿಗೆ ಕನ್ನಡಿ ಹಿಡಿದು ಸಂವೇದನಾಶೀಲರಿಗೆ ಜೀವನದ ಅಂಕುಡೊಂಕುಗಳನ್ನು ಮನದಟ್ಟು ಮಾಡಿಸಿ, ಸದ್ದಿಲ್ಲದ ಕ್ರಾಂತಿಯುಂಟು ಮಾಡಿ ಸಾಮಾಜಿಕ ಬದುಕಿಗೆ ಅರ್ಥಪೂರ್ಣ ಜಾಡನ್ನು ಒದಗಿಸಬಲ್ಲುದು ಎಂಬುದಕ್ಕೆ ಎಲ್‌ಬಿಕೆ ಅವರ ನಾಟಕಗಳೇ ಸಾಕ್ಷಿಯಾಗಿ ನಿಂತಿವೆ.

ಎಲ್‌ಬಿಕೆ ಆಲ್ದಾಳ ಅವರದ್ದು ಸೌಹಾರ್ದ, ಗೃಹ ಬಾಂಧವ್ಯ, ಸರಳ ಮತ್ತು ಉತ್ತಮ ಜೀವನ ಸಂಸ್ಕೃತಿ ಇವರ ನಾಟಕಗಳ ಮೂಲದ್ರವ್ಯ, ಶರಣಸಾಹಿತ್ಯ ಇವರ ಮನಸ್ಸಿನ ಮೇಲೆ ಗಾಢ ಪರಿಣಾಮ ಉಂಟು ಮಾಡಿದೆ. ಕೊನೆಯ ವಚನಕಾರರು ಎಂದು ಕರೆಯಲಾಗುವ ಜೇವರ್ಗಿ ಷಣ್ಮುಖ ಶಿವಯೋಗಿಗಳ ನಾಟಕವಂತೂ ಅಪೂರ್ವವಾಗಿದೆ. ಹೈದ್ರಾಬಾದ ಕರ್ನಾಟಕದಾದ್ಯಂತ ತಮ್ಮ ಬೆಳಕಿನ ಹೆಜ್ಜೆಗಳನ್ನಿಟ್ಟು ಬದುಕಿ ಬಾಳಿದ ಅಬ್ಬೆತುಮಕೂರಿನ 'ವಿಶ್ವಾರಾಧ್ಯ ಕುರಿತ' ನಾಟಕವಂತೂ ಅತ್ಯಂತ ಚೇತೋಹಾರಿಯಾಗಿದೆ. ರಂಗ ಪ್ರಯೋಗ ನಾಟಕ 'ಅಂಬಿಗರ ಚೌಡಯ್ಯ ಎಂಬ ನಾಟಕ, ಶರಣರ ಕ್ರಾಂತಿಯ ಸಂದೇಶ ಬೀರಿದೆ. ಎರಡುನೂರು ವರ್ಷಗಳ ಹಿಂದೆ ಬಾಳಿಹೋದ ಕಡಕೋಳ ಮಡಿವಾಳಪ್ಪನವರ ನಾಟಕವಂತು ಜನರ ಮನಸ್ಸಿನಲ್ಲಿ ಬಂಡಾಯ ಸ್ಪೋಟವನ್ನೇಗೈದಿದೆ. ಇದರ ಜೊತೆಗೆ ಕಲ್ಕಂಬದಕಿರಣ, ಕಮರಿ ಮಠದ ಕರ್ಪೂರ, ಜೋಗೂರ ಜ್ಯೋತಿ, ಯನಗುಂಟಿ ಬೆಂಕಿತಾತ, ಬಡದಾಳ ಭಗವಂತ, ಪುಣ್ಯಪುರುಷ ಮುಂತಾದ ಮಹಾನ್ ಶರಣರ ಚರಿತ್ರೆ ರಚಿಸಿದ್ದಾರೆ. ಇವೆಲ್ಲ ನಾಟಕಗಳನ್ನು ನೋಡಿದಾಗ ಅಥವಾ ಓದಿದಾಗ ಎಲ್.ಬಿ.ಕೆ ಅವರನ್ನು ಕಂಡಾಗ ಅವರ ಸಾತ್ವಿಕ ವ್ಯಕ್ತಿತ್ವವನ್ನು ನೋಡಿದಾಗ, ಹಳೆಯಕಾಲದ ಋಷಿ–ಮುನಿಗಳನ್ನು ನೋಡಿದಂತಾಗುತ್ತದೆ. ತಮ್ಮ ಕಾರ್ಯದಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡ ಕರ್ಮಯೋಗಿಯೊಬ್ಬರ ದರ್ಶನವಾದಂತಾಗುತ್ತದೆ. ಇಂದಿನ ತಾಂತ್ರಿಕ ಯುಗದಲ್ಲಿ ಗಡಿಬಿಡಿ, ಗಲಿಬಿಲಿಯ ಸಂದರ್ಭದಲ್ಲಿ ಶುದ್ಧವಾದ, ಪರಿಶುದ್ದವಾದ ವ್ಯಕ್ತಿತ್ವವೊಂದನ್ನು ಎಲ್.ಬಿ.ಕೆ ಅವರು ತಮ್ಮ ನಡೆ–ನುಡಿಯ ಮೂಲಕ ಬರಹಗಳಲ್ಲೂ ಉಳಿಸಿಕೊಂಡಿರುವುದು ರಂಗಭೂಮಿಗೆ ಶೋಭೆತರಿಸುವಂತದ್ದಾಗಿದೆ.

ಆಧುನಿಕ ಕಾಲದಲ್ಲಿಯೂ ನಮ್ಮ ಕನ್ನಡ ನಾಡಿನಲ್ಲಿ ಅನೇಕ ನಾಟಕಕಾರರು ಅಂದರೆ ಕಂದಗಲ್ ಹಣಮಂತರಾಯರು, ಎನ್.ಎಸ್.ಜೋಶಿ, ಎಚ್.ಎನ್.ಹೂಗಾರ, ಕೆ.ಎನ್.ಸಾಳೊಂಕೆ, ಬಿ.ವಿ.ಈಶ, ಬಿ.ಆರ್.ಅರಸಿಣಗೋಡಿ, ಗುಡಗೇರಿ ಬಸವರಾಜ, ಎಚ್.ಎಸ್.ತಾರನಾಳ, ಎಸ್.ಎಂ.ಖೇಡಗಿ, ಮಾರುತೇಶ ಮಾಂಡ್ರೆ, ಪಿ.ಬಿ.ಧುತ್ತರಗಿ ಇವರೆಲ್ಲರೊಂದಿಗೆ ಕಲಬುರ್ಗಿ ಜಿಲ್ಲೆಯ ರಂಗಪುಂಗವರು ಸೇರ್ಪಡೆಗೊಂಡಿದ್ದಾರೆ. ಅವರಲ್ಲಿ ಆಲ್ದಾಳರು ಕೇವಲ ನಾಟಕಗಳಿಗೆ ಸೀಮಿತವಾಗದೆ, ಸಾಹಿತ್ಯದ ಹಲವು ಪ್ರಾಕಾರಗಳನ್ನು "ಕೃಷಿಮಾಡಿದ ಋಷಿ". ಈಗ ಎಪ್ಪತ್ತಾರರ

ಹರೆಯದಲ್ಲಿ ತನ್ನ ಪರಿಪಕ್ವವಾದ ಅನುಭವದ ನಾಟಕ ಸಾಹಿತ್ಯದೊಂದಿಗೆ ಜನಪದ, ಚರಿತ್ರೆ, ಪೌರಾಣಿಕ, ಸಾಮಾಜಿಕ, ಐತಿಹಾಸಿಕ, ಧಾರ್ಮಿಕವಾಗಿ ಮುಂದುವರೆದು ಕಾವ್ಯಗಳನ್ನುಕೂಡ ರಚಿಸಿದ್ದಾರೆ. ತತ್ವಗೀತೆಗಳ ಸಂಕಲನ ಹೊರತಂದಿದ್ದಾರೆ. ನಾಮಾವಳಿಗಳನ್ನು ಬರೆದಿದ್ದಾರೆ. ಭಕ್ತಿಗೀತೆಗಳ ಧ್ವನಿ ಸುರುಳಿಗೆ ಸಾಹಿತ್ಯ ಒದಗಿಸಿದ್ದಾರೆ. ಪ್ರಕಟಿತ–ಅಪ್ರಕಟಿತ ಎಲ್ಲ ಸೇರಿ ಅವರು ರಚಿಸಿದ ಒಟ್ಟು ಗ್ರಂಥಗಳ ಸಂಖ್ಯೆ ಶತಕ ದಾಟುತ್ತದೆ. ಭಾಮಿನಿ ಷಟ್ಪದಿಯಲ್ಲಿ ನಾಲ್ಕು ಪುರಾಣಗಳನ್ನು ರಚಿಸಿ ಪುರಾಣ ಪುರುಷರೇ ಆಗಿದ್ದಾರೆ. ಇವುಗಳು ಯಾವ ವಿದ್ವಾಂಸರಿಗಿಂತ ಕಡಿಮೆಯಾಗಿಲ್ಲ, ಇಷ್ಟೆಲ್ಲ ಇದ್ದರೂ ಪ್ರಚಾರದಿಂದ ಬಹುದೂರವಿದ್ದು ಕೇವಲ ಆಚಾರವನ್ನೇ ತಮ್ಮ ವಿಚಾರಧಾರೆಯನ್ನಾಗಿಸಿಕೊಂಡವರು. ಯಾರುತಾನೆ ಗೊತ್ತೆ? ಅವರೆ ಎಲ್.ಬಿ.ಕೆ.ಆಲ್ದಾಳರು. ಇವರದು ಶ್ರೀಮಂತಸಾಹಿತ್ಯ, ಶ್ರೀಮಂತ ಹೃದಯ ಎಲ್‌ಬಿಕೆ ಆಲ್ದಾಳ ಅವರ ಬದುಕು ಮಾತ್ರ ಬಡತನದಲ್ಲಿ ಸಾಗಿದೆ ಎಂಬುದು ಸತ್ಯ. ಇವರ ನಾಟಕಗಳು ರಂಗಭೂಮಿಯಲ್ಲಿ ಪ್ರದರ್ಶನಗೊಂಡು ಮಾಲೀಕರಿಗೆ ಭಾರಿ ಮೊತ್ತದ ಹಣ ಸಂಗ್ರಹವಾಗುತ್ತಿದ್ದರೂ ಎಲ್.ಬಿ.ಕೆ. ಅವರಿಗೆ ಮಾತ್ರ ಯಾವ ಶ್ರೀಮಂತಿಕೆ ತರುವಂತಾಗಲಿಲ್ಲ. ಬದಲಿಗೆ ಒಂದು ಶಾಲು, ಒಂದು ಹಾರ ಕೊರಳಿಗೆ, ಎಲ್ಲಕ್ಕೂ ಮೇಲಾಗಿ ಮುತ್ತಿನಂತಹ ಹೊಗಳಿಕೆಯ ಮಾತುಗಳು ಇವರಿಗೆ ಸಂದಿದ್ದು, ಇದೇ ವೈಭವದಲ್ಲಿಯೇ ಜೀವನದ ಜೋಕಾಲಿಯಲ್ಲಿ ಸಂಸಾರ ಮುನ್ನಡೆಸುತ್ತಿದ್ದಾರೆ. ಇದನ್ನು ಕಣ್ಣಾರೆಕಂಡ ಸಾಹಿತಿ ಹಾಗೂ ಒಡನಾಡಿ ಎ.ಕೃಷ್ಣ ಸುರಪುರ, "ನನ್ನ ಸಗರನಾಡಿನ ಈ ಸಾತ್ವಿಕ ಜೀವಿಗೆ ಉಳ್ಳವರು ಚಿನ್ನಕೊಡುವುದು ಬೇಡ, ಆ ಕುಟುಂಬ ವರ್ಗಕ್ಕೆ ಸ್ಥಾಯಿಯಾಗಿ ಅನ್ನಕೊಡುವುದರ ಬಗ್ಗೆ ಚಿಂತಿಸಲು ಅತ್ಯಂತ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ"(೧) ಎಂಬ ಮಾತು ಗಮನಾರ್ಹವಾದುದು.

ಅಲ್ಲದೆ ಎಲ್‌ಬಿಕೆ ಅವರು ಹಣಕ್ಕಾಗಿಯೇ ಎಂದು ಕಲಾರಾಧನೆ ಮಾಡುವುದಕ್ಕೆ ಬಂದವರಲ್ಲ, ಕಲೆಯನ್ನೆ ಆರಾಧಿಸುವ ಸಲುವಾಗಿ ಈ ರಂಗಭೂಮಿಗೆ ಕಾಲಿಟ್ಟವರು. "ರೊಕ್ಕ, ಹಣ, ಕಾಸು, ದುಡ್ಡು ಮುಂತಾದ ಪದಗಳ ಅರ್ಥ ಕೇಳುವುದಕ್ಕೆ ಸುಂದರ. ಹಣವೆಂದರೆ ಹೆಣವೂ ಬಾಯಿ ತೆರೆಯುವುದಂತೆ, ಪುರಂದರದಾಸರ ಈ ಪದ್ಯದ ಮಹತ್ವ ಎಲ್ಲ ಕಾಲಕ್ಕೂ ಅನ್ವಯಿಸುತ್ತದೆ.

**"ಮಕ್ಕಳ ಮರಿಗಳ ಮಾಡೋದುರೊಕ್ಕ ।**
**ಸಕ್ಕರೆ ತುಪ್ಪವ ಸವಿಸೋದುರೊಕ್ಕ ।**
**ಕಕ್ಕುಲತೆಯನ್ನು ಬಿಡಿಸೋದು ರೊಕ್ಕ ।**
**ಕಂಟಕಗಳ ಪರಿಹರಿಸೋದು ರೊಕ್ಕ ।**
**ಬಂಟರೆಲ್ಲರ ಬರಿಸೋದು ರೊಕ್ಕ ।**
**ನೆಂಟರ ಇಷ್ಟರ ಮರೆಸೋದುರೊಕ್ಕ ।**
**ಇಲ್ಲದ ಗುಣಗಳ ತರೆಸೋದುರೊಕ್ಕ ।**
**ಉತ್ತಮ ಗುಣಗಳ ಮರೆಸೋದುರೊಕ್ಕ ।**
**ಬಂಟರೆಲ್ಲರ ಬರಿಸೋದುರೊಕ್ಕ ।**
**ಕಂಠಿಸರಿಗೆಯನು ಗಳಿಸೋದುರೊಕ್ಕ ।**

'ರೊಕ್ಕ'ಕ್ಕೆ ಮಹತ್ವ ನೀಡದೇ ಪುರಂದರ ದಾಸರ ಇನ್ನೊಂದು ಮಗ್ಗುಲವನ್ನು ಆಲ್ದಾಳರು ಮೈಗೂಡಿಸಿಕೊಂಡಿದ್ದಾರೆ. 'ಏತರಕಟಿಪಿಟಿ ಒಂದಿನ ಹೋಗ್ತಿದಿ ಲಟಪಿಟಿ'.

ಜೀವನ ನಶ್ವರವೆಂದು ತಿಳಿದು ತಾನು ಚಿರಂಜೀವಿ ಎಂದು ಭಾವಿಸಿ ನಡೆವುದೇ ಮನುಷ್ಯನ ಮಹಾದಾಶ್ಚರ್ಯಗಳಲ್ಲಿ ಒಂದು. ಅತಿ ವ್ಯಾಮೋಹ, ದುಡ್ಡುಗಳಿಕೆ, ಮದುವೆ, ಮಕ್ಕಳು, ಸಂಸಾರ ಕೂಡಿಡುವಿಕೆ, ಇತ್ಯಾದಿ ಕೊನೆಯುಸಿರಿರುವವರೆಗೆ ಅವ್ಯಾಹತವಾಗಿ ನಡೆದೆ ಇರುತ್ತವೆ. ಈ ವಿಸ್ಮಯವನ್ನು ಕಂಡ ಪುರಂದರದಾಸರು 'ಏತರಕಟಿಪಿಟಿ....' ಎಂದಿದ್ದಾರೆ.

ಕನ್ನಡ ರಂಗಭೂಮಿಯ ಕೈಂಕರ್ಯದಲ್ಲಿ ಸುಮಾರು ಐದು ದಶಕಗಳಿಂದಲೂ ನಿತ್ಯ ನಿರಂತರವಾಗಿ ತಮ್ಮನ್ನು ತೊಡಗಿಸಿಕೊಂಡು ಅದರ ವಿಸ್ತ್ರತ ಏಳ್ಗೆಗೆ ವಿಶಿಷ್ಟ ಕೊಡುಗೆಯನ್ನು ನೀಡುತ್ತ ಬಂದಿರುವ ಎಲ್‌ಬಿಕೆ ಆಲ್ದಾಳರು ನಾಡಿನಾದ್ಯಂತ ರಂಗ ಪ್ರೇಮಿಗಳೆಲ್ಲರಿಗೂ ಚಿರಪರಿಚಿತರು. ರಂಗ ಸಂಘಟನೆ ಅವರ ಅಚ್ಚು ಮೆಚ್ಚಿನ ಕಾಯಕ. ಅದರೊಂದಿಗೆ ನಟನೆ, ನಿರ್ದೇಶನ, ಬರವಣಿಗೆ ಮುಂತಾದ ಯಾವುದೇ ರಂಗಸಂಬಂಧಿ ಕೆಲಸ ಕಾರ್ಯಗಳಲ್ಲಿ ಸದಾ ಮುಂದು. ತಮ್ಮ ಬದುಕಿನುದ್ದಕ್ಕೂ ಬಣ್ಣದ ಚರ್ಯೆಯನ್ನು ಅಂಟಿಸಿಕೊಂಡು ಕಲಾರಾಧನೆ ಗೈಯ್ಯುತ್ತಿರುವ ಸಂತೃಪ್ತ ಜೀವಿ. ಕರ್ನಾಟಕ ನಾಟಕ ಅಕಾಡೆಮಿ ಸದಸ್ಯರಾಗಿದ್ದ ಅವಧಿಯಲ್ಲಿ ಹೆಚ್ಚು ಕ್ರಿಯಾಶೀಲರಾಗಿ ಕಾರ್ಯಯೋಜನೆಗಳನ್ನು ಹಮ್ಮಿಕೊಂಡು ಯಶಸ್ವಿಯಾಗಿ ನಿರ್ವಹಿಸಿದರಲ್ಲದೆ ಅಕಾಡೆಮಿ ಅಧ್ಯಕ್ಷರು ಎಲ್‌ಬಿಕೆ ಅವರ ಪ್ರತಿಭೆಕಂಡು ಬೆರಗಾದದ್ದುಂಟು.

ಮಠಾಧೀಶರ ಸಂಗ ಹೆಜ್ಜೇನಿನ ಸವಿ. ಅವರ ನುಡಿ ಅದರಕ್ಕೂ ಸಿಹಿ, ಉದರಕ್ಕೂ ಸಿಹಿ । ಅವರನಡೆ ಸನ್ಯಾಸಿಗಳಿಗೂ ಆದರ್ಶ, ಸಂಸಾರಿಗಳಿಗೂ ಆದರ್ಶ, ಅವರ ಒಡನಾಟವೆಂದರೆ ಅದೊಂದು ಆವರ್ಣನೀಯ ಅನುಭಾವದೂಟ, ಅವರಕೂಟವೇ ಅನುಭವ ಮಂಟಪ; ಎಂದು ಎಲ್‌ಬಿಕೆ ಅವರು ಮಠಾಧೀಶರ ಬಗ್ಗೆ ಅಪಾರವಾದ ಭಾವನೆಯ್ನ್ನು ಹೊಂದಿದ್ದರು. ಇದು ಅವರ ಮನಸಾಕ್ಷಿ, ಗಾಢನಂಬಿಗೆ, ಉಗ್ರನಿಷ್ಠೆ!

"ಎಲ್‌ಬಿಕೆ ಆಲ್ದಾಳರನ್ನು ಇವರ ಹೆಸರಿನ ಮೂಲಕವಾಗಲೀ ಅಥವಾ ಮಾತುಕತೆ, ವೇಷ ಭೂಷಣಗಳಿಂದಾಗಲೀ ಇವರೊಬ್ಬ ಮುಸಲ್ಮಾನರು ಎಂದು ಪತ್ತೆ ಮಾಡುವುದು ಯಾರಿಗಾಗಲಿ ಸುಲಭದ ಮಾತಲ್ಲ. ಇವರು ಸಹಜೀವತ್ವ ತನ್ನ ಕೋಮಿನ ಜನರೊಂದಿಗೆ ಎಷ್ಟೊಂದು ಸೊಬಗತೆಯಿಂದ ಕೂಡಿದೆಯೋ ಅದಕ್ಕಿಂತಲೂ ಮಿಗಿಲಾಗಿ ಹಿಂದು ಬಾಂಧವರೊಂದಿಗೆ ಸಂಲಗ್ನಗೊಂಡಿದೆ". ಧರ್ಮ ಮತ್ತು ಸಂಸ್ಕೃತಿ ಬಾಳಿನ ಭಾಗ್ಯೋದಯಕ್ಕೆ ದಾರಿದೀಪ. ಧರ್ಮ ಗಲವಾದರೂ ಆಚರಣೆ ಬೇರೆಯಾದರೂ ಎಲ್ಲರ ಗುರಿ ಒಂದೇ. ಎಲ್ಲೆಡೆಯಲ್ಲಿ ಸಮೃದ್ಧಿ, ಸಂಸ್ಕೃತಿ ಬೆಳೆದು ಬಂದಾಗ ಆರೋಗ್ಯಪೂರ್ಣ ಸಮಾಜ ನಿರ್ಮಾಣಗೊಳ್ಳಲು ಸಾಧ್ಯವಾಗುವುದೆಂದು ಬಾಳೆಹೊನ್ನೂರಿನ ಪೂಜ್ಯ ರಂಭಾಪುರಿ ಜಗದ್ಗುರು ಪ್ರಸನ್ನ ರೇಣುಕ ಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು ಹೇಳಿರುವುದು ಸಕಾಲಿಕ.

**ನಿಜವಾದ ಜಾತ್ಯಸ್ಥನಾರು? ಎಂದರೆ**
**ಆತ್ಮ ಒಪ್ಪುವ ತೆರದಿ ನಡೆಯುವ**
**ನಾತ ಉತ್ತಮ ಜಾತಿವಂತನು**
**ನೀತಿ ಪುರುಷನು ಲೋಕದೊಳಗೇ**
**ನಾತ ಮಾನವ ಶ್ರೇಷ್ಠನು.**

ಲೋಕವಿದೆಷ್ಟು ವೈವಿಧ್ಯಮಯ; ಬಗೆಬಗೆಯ ಮನುಷ್ಯರು, ಬಗೆಬಗೆಯ ಜೀವನ ವಿಧಾನಗಳು । ಬಗೆ ಬಗೆಯ ಭಾವಜಾಲಗಳು । ಬಗೆಬಗೆಯ ವಾಂಛಿತಗಳು । ಅಂತೆಯೇ

ಬಗೆಬಗೆಯ ಹುಚ್ಚುಗಳು ಕೆಲವರಿಗೆ ಧನ ಸಂಪಾದನೆಯ ಹುಚ್ಚು, ಕೆಲವರಿಗೆ ಯಶೋ ಸಂಪಾದನೆಯ ಹುಚ್ಚು, ಹಲವರಿಗೆ ಮೃಗ ತೃಷೆಯ ಬೆನ್ನುಹಿಡಿದು ಬಂಗಾರದ ಜಿಂಕೆಯ ಸಂಪಾದನೆಯ ಹುಚ್ಚು, ಆದರೆ ಎಲ್‌ಬಿಕೆ ಆಲ್ದಾಳರಿಗೆ ಅವರ ಜ್ಞಾನದಾಹ ತಣಿಯದಂತಹದು, ಬರವಣಿಗೆ ಬಯಕೆ ತೀರದಂತಹದು. ಒಂದೊಂದು ಮೆಟ್ಟಿಲನ್ನು ನಿಷ್ಠೆಯಿಂದ ಏರಿ, ಅವರಿಂದೂ ಸಿದ್ಧಿಯ ಶಿಖರವನ್ನೇರಿದ್ದಾರೆ !

"ಭಾಷೆ ಬಲ್ಲವನ್ನು ಬ್ರಹ್ಮ, ವೇಷ ಬಲ್ಲವನು ವಿಷ್ಣು" ಎಂಬ ಮಾತಿನಂತೆ ಎಲ್‌ಬಿಕೆ ಆಲ್ದಾಳರು ಭಾಷೆ–ವೇಷಗಳೆರಡನ್ನು ಬಲ್ಲವರಾಗಿದ್ದಾರೆ. ರಂಗಭೂಮಿಯ ಬಗ್ಗೆ ಅವರ ಮಾನ ಪ್ರಶ್ನಾತೀತ, "ಹಿರಿಯರಂಗ ಚೇತನ, ಗುಡಿಸಲಲ್ಲಿ ಅರಳಿದ ಪ್ರತಿಭೆ, ಸೌಲಭ್ಯ, ಶಿಕ್ಷಣ, ತರಬೇತಿ ಇಲ್ಲದ ಕಾಲದಲ್ಲಿ ಗ್ರಾಮೀಣ ಪ್ರದೇಶದ ಒಬ್ಬ ಅತಿ ಕಡು ಬಡಬಾಲಕ ಕನ್ನಡರಂಗಭೂಮಿಯಲ್ಲಿ ಅಪಾರ ಹೆಸರು ಮಾಡಿದ್ದಕ್ಕೆ ಸಾಕ್ಷಿಯಾಗಿರುವವರು ಎಲ್‌ಬಿಕೆ ಆಲ್ದಾಳರು ಭವಿಷ್ಯದರಂಗಭೂಮಿಯ ಕನಸುಗಳನ್ನು ಸಾಕಾರಗೊಳಿಸಲು ಶ್ರಮಿಸಿದ ಧೀಮಂತ ನಟ, ನಿರ್ದೇಶಕ, ನಾಟಕಕರ್ತ ಒದಿದ್ದು ಕಡಿಮೆ, ಆದರೆ ರಂಗಭೂಮಿಯಲ್ಲಿ ನಾಲ್ಕೈದು ದಶಕಗಳ ಗೆಲುವು–ಸೋಲುಗಳ ಪಾತ, ದಕ್ಷಿಣ ಕರ್ನಾಟಕದಲ್ಲಿ ಹೆಸರಾಂತ ಗುಬ್ಬಿವೀರಣ್ಣ, ಮಧ್ಯಕರ್ನಾಟಕದಲ್ಲಿ ಚಿಂದೋಡಿ ವೀರಪ್ಪ ರಂಗಭೂಮಿಯಲ್ಲಿ ವೇಷಧರಿಸಿ ಪ್ರಸಿದ್ಧಿ ಪಡೆದಂತೆ ಉತ್ತರ ಕರ್ನಾಟಕದಲ್ಲಿ ಎಲ್ಬಿಕೆ ಅವರು ಜಯಭೇರಿ ಬಾರಿಸಿದ್ದು ಮರೆಯುವಂತಿಲ್ಲ.

ಈ ಮಹಾಪ್ರಬಂಧದಲ್ಲಿ ರಂಗಭೂಮಿಯ ಬಗ್ಗೆ ಅದರಲ್ಲೂ ವೃತ್ತಿರಂಗ ಭೂಮಿಯ ಹುಟ್ಟು ಬೆಳವಣಿಗೆ, ಮತ್ತು ಮಹತ್ವ ಅದು ನಡೆದು ಬಂದ ದಾರಿ ಮಾಹಿತಿಸಲಾಗಿದೆ. ವೃತ್ತಿರಂಗಭೂಮಿ ಪಟ್ಟಣ ಹಾಗೂ ನಗರ ಪ್ರದೇಶಗಳಿಗಿಂತ ಗ್ರಾಮೀಣ ಪ್ರದೇಶದಲ್ಲಿ ಇನ್ನೂ ಜೀವಂತವಾಗಿದೆ. ಉತ್ತರ ಕರ್ನಾಟಕದಲ್ಲಿ ಇಂದಿಗೂ ಜಾತ್ರೆ, ಉತ್ಸವ, ಉರುಸು, ಹಬ್ಬಗಳಲ್ಲಿ ಯುವಕರು ಉತ್ಸಾಹದಿಂದ ಹಳ್ಳಿಗಳಲ್ಲಿ ವೃತ್ತಿ ನಾಟಕಗಳನ್ನಾಡುತ್ತಾರೆ. ಹೇಮರೆಡ್ಡಿ ಮಲ್ಲಮ್ಮ, ಕುರುಕ್ಷೇತ್ರ, ರಕ್ತರಾತ್ರಿ, ಶರಣಬಸವೇಶ್ವರ ನಾಟಕ, ಗವಿಸಿದ್ದೇಶ್ವರ ಮಹಾತ್ಮೆ ಇನ್ನು ಹಲವಾರು ಭಕ್ತಿಪರ ನಾಟಕಗಳು ಪ್ರತಿವರ್ಷವೂ ಅಭಿನಯಿಸಲ್ಪಡುವವು. ವೃತ್ತಿರಂಗಭೂಮಿಯ ನಟ–ನಟಿಯರನ್ನು ಆಹ್ವಾನಿಸಿ ಸ್ಥಳೀಯ ಕಲಾವಿದರು ಮುಖ್ಯಪಾತ್ರಗಳಲ್ಲಿ, ಇಲ್ಲವೆ ಇನ್ನೂ ಹಲವಾರು ಪಾತ್ರಗಳಲ್ಲಿ ಅಭಿನಯಿಸುವುದೊಂದು ಹವ್ಯಾಸವಾಗುತ್ತಿದೆ. ಇದು ವೃತ್ತಿರಂಗ ಭೂಮಿ ಜೀವಂತವಾಗಿ ಉಳಿಯಲು ಸಹಾಯವಾಗುತ್ತಿದೆ. ವೃತ್ತಿರಂಭೂಮಿಯ ತವರು ಮನೆ. ಉತ್ತರ ಕರ್ನಾಟಕವಾಗಿದೆ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ.

ಎಲ್‌ಬಿಕೆ ಅವರು ತಮ್ಮ ಬರಹಗಳನ್ನೂ ಶುದ್ಧವಾಗಿರಿಸಿಕೊಂಡವರು, ಅಶ್ಲೀಲ, ದ್ವಂದಾರ್ಥಗಳ ಸಂಭಾಷಣೆಗಳಿಗೆ ಅವರಲ್ಲಿ ಅವಕಾಶವೇ ಇರುತ್ತಿರಲಿಲ್ಲ. ಕುಟುಂಬಸಮೇತ ಮನೆ ಮಂದಿ ಎಲ್ಲರೂ ಒಂದೆಡೆ ಸೇರಿ ಅವರ ನಾಟಕಗಳು ನೋಡುವಂತಹ ವಾತಾವರಣವನ್ನು ಸೃಷ್ಟಿಸುತ್ತಿದ್ದರು. ಇವುಗಳು ಸಮಾಜಕ್ಕೆ ಉತ್ತಮ ಸಂದೇಶ ನೀಡುವಂತಿರುತ್ತವೆ. ಸ್ವತಃ, ಎಲ್‌ಬಿಕೆ ಅವರು ತಮ್ಮ ಜೀವನದಲ್ಲಿ;

**ನಡೆಶುದ್ಧ, ನುಡಿಶುದ್ಧ, ತನುಶುದ್ಧ, ಮನಶುದ್ಧ**
**ಭಾವಶುದ್ಧವಾದವರನು ಎನಗೊಮ್ಮೆತೋರಾ**
**ನಡೆಯೆಲ್ಲ ಸದಾಚಾರ, ನುಡಿಎಲ್ಲ ಶಿವಾಗಮ**
**ಒಳ–ಹೊರಗೊಂದಾಗಿ ನಿಂದ ಶರಣರನು**
**ಎನಗೊಮ್ಮೆತೋರಾ ಚೆನ್ನಮಲ್ಲಿಕಾರ್ಜುನ**

ಎಂಬ ಅಕ್ಕಮಹಾದೇವಿಯವರ ವಚನವನ್ನು ಚಾಚುತಪ್ಪದೆ ಪಾಲಿಸುತ್ತಿದ್ದು ಇಹ ಲೋಕದಲ್ಲಿಯೇ ಸ್ವರ್ಗಸುಖವನ್ನು ಕಂಡವರು.

ರಂಗಭೂಮಿಯಲ್ಲಿ ವಿಶಿಷ್ಟವಾದ ಸಾಧನೆಮಾಡಿದ ಎಲ್‌ಬಿಕೆ ಆಲ್ದಾಳರ ಜೀವನ ಕನ್ನಡ ವೃತ್ತಿರಂಗಭೂಮಿಯ ಇತಿಹಾಸದಲ್ಲಿ ಸದಾ ಮೇಲ್ಪಂಕ್ತಿಯಲ್ಲಿ ರಾರಾಜಿಸುತ್ತದೆ, ಅಲ್ಲದೆ ಸುವರ್ಣಾಕ್ಷರಗಳಿಂದ ಬರೆಲ್ಪಡುವಂತಾಗಿದೆ. ಎಂದರೆ ಅತಿಶಯೋಕ್ತಿಯಾಗದು.

ಬದುಕಿನ ಬವಣೆಯ ಗಾಣಕ್ಕೆ ಸಿಲುಕಿ ರಸ ಹೀರಿದ ಕಬ್ಬಿನ ಸಿಪ್ಪಿಯಾಗಿದ್ದರೂ ಎಲ್‌ಬಿಕೆ ಅವರ ಸಾಹಿತ್ಯಾಶಕ್ತಿ ಕುಗ್ಗಿಲ್ಲ. ಬರವಣಿಗೆ ನಿಂತಿಲ್ಲ ಶರೀರಕ್ಕೆ ಮುಪ್ಪು ಬರುವುದು ಸಹಜ, ನಾಟಕದ ಹುಚ್ಚು ಹೋಗಿಲ್ಲ ಜ್ಞಾನಪೀಠ ಪ್ರಶಸ್ತಿ ವಿಜೇತ ಡಾ.ದ.ರಾ.ಬೇಂದ್ರೆ ಅವರು ತಮ್ಮ 'ಹೊಸ-ಸಂಸಾರ' ಕೃತಿಯಲ್ಲಿ ಬರೆಯುತ್ತಾರೆ, 'ಜೀವನ ಹಣ್ಣಾತು ಅಂದ್ರ ನಾಟಕ-ಆಗತಾವ' ಇದು ಎಲ್.ಬಿ.ಕೆ ಅವರಿಗೆ ಸಮ್ಮತವಾಗುವ ಸಂಗತಿಯಾಗಿದೆ. ಅವರ ಬದುಕಿನಲ್ಲಿ ಜ್ಞಾನೋಪಾಸನೆ ಮತ್ತು ಜ್ಞಾನ ಪ್ರಸಾರ ಬದುಕಿನ ಕೊನೆಯ ಕ್ಷಣದವರೆಗೂ ನಿಲ್ಲುವುದೂ ಇಲ್ಲ !.

**ಏನು ಬೇಡಲಿನಿನ್ನ, ಎಲ್ಲವನುಕೊಟ್ಟಿರುವೆ**
**ಶುದ್ಧಸಾಧನೆಯೆ ಮಾರ್ಗದಲ್ಲಿ ಸಾಗುವಾ**
**ಮತಿಯಿತ್ತು, ಸಲಹೆನ್ನ, ಓ ದೇವಿ, ಸರಸ್ವತಿಯೆ.....**

**ಕೊನೆಯ ಮಾತು :**

ಶ್ರೀ ಎಲ್‌ಬಿಕೆ ಆಲ್ದಾಳ ಅವರ ಸೇವಾ ಸೌರಭದ ನಂದಾದೀಪ ಕಲಬುರ್ಗಿಗಷ್ಟೆ ಅಲ್ಲದೇ ಕನ್ನಡ ನಾಡಿನಲ್ಲಿ, ಭಾರತದಲ್ಲಿ ಪರಂಜ್ಯೋತಿಯಾಗಿ ಪ್ರಕಾಶಿಸುತ್ತಿರಲಿ. ರಂಗ ಪ್ರೇಮಿಯಾಗಿ, ನಾಟಕಕಾರರಾಗಿ ದುಡಿದಿರುವ ಇವರ ದುಡಿಮೆ ನಮ್ಮ ಹೃನ್ಮನಗಳಲ್ಲಿ ಸದಾ ಹಸಿರಾಗಿರುವಂತಹದ್ದು, ಗೌರವದಿಂದ ತಲೆಬಾಗುವಂತದ್ದು ಇವರ ಬಾಳು ಬಂಗಾರ, ಇಂದಿನ ಯುವ ಪೀಳಿಗೆಗೆ ಜ್ಞಾನ ವೃದ್ಧ ಹಿರಿಯಚೇತನದ ಬದುಕು ಮತ್ತು ನಡೆದು ಬಂದದಾರಿ ಸದಾ ಮಾರ್ಗದರ್ಶಿಯಾಗಲಿ ಎಂದು ನಾನು ಆಶಿಸುತ್ತೇನೆ ಹಾಗೂ ಅವರು ಶತಾಯುಷಿಗಳಾಗಿ ತುಂಬು ಜೀವನ ಬಾಳಲಿ ಎಂಬುದೇ ನನ್ನ ಪ್ರಾಂಜಲ ಪ್ರಾರ್ಥನೆ.

## ಎಲ್.ಬಿ.ಕೆ. ಆಲ್ದಾಳರ ಹೆಜ್ಜೆ ಗುರುತುಗಳು

| | | |
|---|---|---|
| ಜನನ ದಿನಾಂಕ | : | ೦೫.೧೧.೧೯೩೮ |
| ತಂದೆಯ ಹೆಸರು | : | ಬಂದೇನವಾಜ ಖಲೀಫ್ |
| ತಾಯಿಯ ಹೆಸರು | : | ಶ್ರೀಮತಿ ಹುಷೆನಬಿ |
| ಜನ್ಮ ಸ್ಥಳ | : | ಬನಹಟ್ಟಿ (ಪಿ.ಟಿ) ತಾಲೂಕು ಸಿಂದಗಿ, ಜಿಲ್ಲೆ : ವಿಜಯಪುರ |
| ನೆಲೆಸಿದ ಊರು | : | ಲಾಲಮಹ್ಮದ ಬಂದೇನವಾಜ ಖಲೀಫ್ ಸಾ.ಮಳ್ಳಿ |
| ಶಿಕ್ಷಣ | : | ಎಳನೇ ತರಗತಿ |
| ಪತ್ನಿ | : | ಅಮೀನಾ |
| ಮಕ್ಕಳು | : | ಮಹ್ಮದಶಮೀರ, ಮಹ್ಮದಶರೀಫ್ |
| ಸೊಸೆ | : | ಬೀಬಿ ಫಾತಿಮಾ |
| ಅಳಿಯ | : | ನಬಿಸಾಬ ಹೆಡಗಿನಾಳ |
| ಆಲ್ದಾಳರ ಉದ್ಯೋಗ | : | ನಾಟಕಕಾರ, ರಂಗನಿರ್ದೇಶನ, ರಂಗರಚನೆ |
| ನಾಟಕ ರಚನೆ | : | ೧೯೬೭ |

### ಸೇವೆಸಲ್ಲಿಕೆ

೧. ಕರ್ನಾಟಕ ನಾಟಕ ಅಕಾಡೆಮಿ ಸದಸ್ಯರು ಬೆಂಗಳೂರು
೨. ಕಲಬುರ್ಗಿ ಆಕಾಶವಾಣಿ ಧ್ವನಿ ಪರೀಕ್ಷೆ ಸದಸ್ಯರು ಕಲಬುರಗಿ
೩. ಗೌರವಾಧ್ಯಕ್ಷರು : ಸಂಗೀತ ಕಲಾವಿದರ ಸಂಘ ಜೇವರಗಿ

### ಸರಕಾರದ ಪ್ರಶಸ್ತಿಗಳು

| | | |
|---|---|---|
| ೧. ರಾಜ್ಯೋತ್ಸೋವ ಪ್ರಶಸ್ತಿ ಪುರಸ್ಕಾರ | : | ೨೦೦೧ |
| ೨. ಕರ್ನಾಟಕ ನಾಟಕ ಅಕಾಡೆಮಿ ಪುರಸ್ಕಾರ | : | ೨೦೧೨ |
| ೩. ಗುಬ್ಬಿವೀರಣ್ಣ ಪ್ರಶಸ್ತಿ | : | ೨೦೧೩ |

### ಅಧ್ಯಕ್ಷತೆ

೧. ತತ್ವ ಪದಕಾರರ ಸಾಹಿತ್ಯ ಸಮ್ಮೇಳನ ರಾಂಪೂರ, ತಾ.ಜೇವರಗಿ ಜಿ.ಕಲಬುರ್ಗಿ – ದಿ. ೦೨.೦೨.೨೦೦೨
೨. ಜೇವರಗಿ ತಾಲೂಕಿನ ಎರಡನೇ ಸಾಹಿತ್ಯ ಸಮ್ಮೇಳನ – ೩೧.೧೨.೨೦೧೧
೩. ಕಲಬುರ್ಗಿ ಜಿಲ್ಲಾ ೧೩ನೇ ಕನ್ನಡ ಸಾಹಿತ್ಯ ಸಮ್ಮೇಳನ ಜೂನ ೧೫,೧೬, ೨೦೧೩

## ಎಲ್.ಬಿ.ಕೆ ಅವರ ಪ್ರಕಟಿತ ನಾಟಕಗಳು

| | | |
|---|---|---|
| ಪತಿಭಕ್ತಿ | – ಶರಣ ಪ್ರಕಾಶನ ಕಲಬುರಗಿ | – ೧೯೬೪ |
| ಕಲಿಯುಗದ ಕನ್ಯೆ | – ಎಂ.ಎಂ.ಕರಡಿ ಹುಬ್ಬಳ್ಳಿ | – ೧೯೬೭ |
| ನಮಸ್ಕಾರ | – ಎಂ.ವಿ.ಅರಳಿ ಗದಗ | – ೧೯೬೮ |
| ಬಾಳಿಗೊಂದು ಬೆಲೆಬೇಕು | – ಶರಣ ಪ್ರಕಾಶನ ಕಲಬುರ್ಗಿ | – ೧೯೭೦ |
| ನನ್ನ ದೇವರು | – ಎಂ.ವಿ.ಅರಳಿ ಗದಗ | – ೧೯೭೦ |
| ಕಣ್ಣಿಟ್ಟ ಕೈಕೊಟ್ಟ | – ಕಾರ್ತಿಕೇಯ ಪ್ರಕಾಶನ ಕಲಬುರ್ಗಿ | – ೧೯೭೨ |
| ಕಡಕೋಳ ಮಡಿವಾಳೇಶ್ವರರು | – ಕಾರ್ತಿಕೇಯ ಪ್ರಕಾಶನ ಕಲಬುರ್ಗಿ | – ೧೯೭೨ |
| ಶ್ರೀ ವಿಶ್ವಾರಾಧ್ಯ ಮಹಾತ್ಮೆ | – ಅಬ್ಬೆತುಮಕೂರ ಪ್ರಕಾಶನ | – ೧೯೮೪ |
| ಗರತಿ ವಿಶ್ವಜ್ಯೋತಿ | – ಪರಾಶಕ್ತಿ ಅಶ್ರಯ ಸೈದಾಪೂರ | – ೧೯೮೭ |
| ಶಹಪೂ ಮಹಾತ್ಮಾ ಚರಬಸವೇಶ್ವರ ಮಹಾತ್ಮೆ | – ಚರಬಸವೇಶ್ವರ ಪ್ರಕಾಶನ | – ೨೦೦೧ |
| ಜೇವರ್ಗಿ ಜ್ಯೋತಿ ಷಣ್ಮುಖ ಶಿವಯೋಗಿಗಳು | – ಜೇವರ್ಗಿ ಪ್ರಕಾಶನ | – ೨೦೦೧ |
| ಅಳ್ಳಳ್ಳಿ ಅಯ್ಯಪ್ಪಯ್ಯ ಮಹಾತ್ಮೆ | – ಅಳ್ಳಳ್ಳಿ ಪ್ರಕಾಶನ ತಾ.ಚಿತಾಪೂರ | – ೨೦೦೮ |
| ಶ್ರೀ ಹಾರಕೂಡ ಚೆನ್ನಬಸವ ಶಿವಯೋಗಿಗಳು | – ಹಾರಕೂಡ ಪ್ರಕಾಶನ | – ೨೦೦೯ |
| ಶ್ರೀ ತಿಂಥಣಿ ಮೌನೇಶ್ವರ ಮಹಾತ್ಮೆ | – ಮಹಾತ್ಮಪೀಠ ಅಯ್ಯಪಯ್ಯ ಅಳ್ಳಳ್ಳಿ | – ೨೦೧೪ |
| ಶ್ರೀ ಇಟಗಿ ಸಾಧುಶಿವಲಿಂಗೇಶ್ವರ ಮಹಾತ್ಮೆ | – ಶ್ರೀ ಚನ್ನಬಸವೇಶ್ವರ ಸಂಸ್ಥಾನ, ಹಾರಕೂಡ | – ೨೦೧೩ |
| ಜಮಖಂಡಿಯ ಅಯ್ಯಣ್ಣ ಮುತ್ಯಾ | – ಶಾಂತರೆಡ್ಡಿ ಕೋಡಮನಳ್ಳಿ ಬೀಳವಾ,ತಾ.ಜೇವರ್ಗಿ | –೨೦೧೩ |
| ಭರತನೂರಿನ ಗುರುನಂಜೇಶ್ವರ ಮಹಾತ್ಮೆ | – ಶ್ರೀ ಗುರುನಂಜೇಶ್ವರ ಪ್ರಕಾಶನ ಭರತನೂರ | – ೨೦೧೩ |
| ರಾಜಾಬಲದ ಹನುಮಪ್ಪ ನಾಯಕ | – ಚಾಲುಕ್ಯ ಸಂಸ್ಕೃತಿ ಅಧ್ಯಯನ ಪೀಠ ಕಲಬುರ್ಗಿ | –೨೦೧೪ |

**ವಚನ ಗ್ರಂಥ**

ವಚನ ವಾಹಿನಿ : ತಪೋವನ ಮಠ ಪ್ರಕಾಶನ ೨೦೦೮

**ಜನಪದ**

ಜನಪದ ಜೇನು : ತಪೋವನ ಮಠ ಪ್ರಕಾಶನ ೨೦೦೯

**ಪ್ರವಾಸ ಲೇಖನ**

ಕಾಶಿ ಪ್ರವಾಸ : ತಪೋವನ ಮಠ ಪ್ರಕಾಶನ ೨೦೦೯

**ಪ್ರಕಟಿತ ಚರಿತ್ರೆಗಳು**

| | | | |
|---|---|---|---|
| → ಕಲ್ಕಂಬದ ಕಿರಣ | : | ಕರಿಘೋಳೇಶ್ವರ ಪ್ರಕಾಶನ ಕಲ್ಕಂಬ | ೧೯೮೯ |
| → ಕಮರಿ ಮಠದ ಕರ್ಪೂರ | : | ಕಮರಿ ಮಠ ಪ್ರಕಾಶನ ಕಲಬುರಗಿ | ೨೦೦೦ |
| → ಜೋಗೂರ ಜ್ಯೋತಿ | : | ಗಂಗಾ ಪ್ರಕಾಶನ ಜೋಗುರ | ೧೯೯೮ |
| → ಪರಿಚಯ ಪ್ರಭಾ | : | ಪರಾಶಕ್ತಿ ಆಶ್ರಮ ಸೈದಾಪೂರ | ೧೯೮೫ |
| → ಶರಣ ಸಿಂಚನ | : | ನೀಲಕಂಠೇಶ್ವರ ಪ್ರಕಾಶನ ಸೇಡಂ | ೧೯೮೫ |
| → ಬಡದಾಳ ಭಗವಂತ | : | ಚನ್ನಮಲ್ಲೇಶ್ವರ ಪ್ರಕಾಶನ ಬಡದಾಳ | ೨೦೦೨ |
| → ಹೊನ್ನಳ್ಳಿ ಹೊಂಗಿರಣ | : | ಹೊನ್ನಳ್ಳಿ ಪ್ರಕಾಶನ | ೨೦೦೫ |

| | | | |
|---|---|---|---|
| → ತವನಿಧಿ | : | ಮಳಖೇಡ ಪ್ರಕಾಶನ | ೨೦೦೭ |
| → ಕೋಳಕೂರ ಸಿದ್ಧಬಸವೇಶ್ವರರ ಚರಿತ್ರೆ | : | ಅಣಿಗಿರಿ ಪ್ರಕಾಶನ | ೨೦೦೭ |
| → ಧರೆಯಿಂದ ಗಿರಿಗೆ | : | ಹೊನ್ನಳ್ಳಿ ಪ್ರಕಾಶನ ಬಿಜಾಪೂರ | ೨೦೧೦ |
| → ತಪೋವನಮಠ ದರ್ಶನ | : | ತಪೋವನಮಠ ಪ್ರಕಾಶನ | ೨೦೧೦ |

**ಪ್ರಕಟಿತ ತತ್ವಗೀತೆಗಳ ಸಂಕಲನ**

| | | | |
|---|---|---|---|
| ▪ ಕೈವಲ್ಯ ಜ್ಞಾನಮೃತ | : | ಪರಾಶಕ್ತಿ ಆಶ್ರಮ ಸೈದಾಪೂರ | ೧೯೮೬ |
| ▪ ಶರಣ ಕಿರಣ | : | ವಿಶ್ವಾರಾಧ್ಯ ಆಶ್ರಮ ಯಡ್ರಾಮಿ | ೧೯೮೮ |
| ▪ ವಿಶ್ವಜ್ಯೋತಿ | : | ಸೋಮ ಸಾಕ್ಷಾತ್ಕಾರ ಪ್ರಕಾಶನ ಶಹಾಬಾದ | ೧೯೮೫ |

**ಪ್ರಕಟಿತ ನಾಮಾವಳಿಗಳು**

| | |
|---|---|
| ○ ಶ್ರೀನಿವಾಸ ಸರಡಗಿ ಚಿಕ್ಕ ವೀರೇಶ್ವರ ಅಷ್ಟೋತ್ತರ ಶತನಾಮಾವಳಿ | ೨೦೦೬ |
| ○ ಇಟಗಿ(ಕೆ) ಸಾಧು ಶಿವಲಿಂಗೇಶ್ವರ ಅಷ್ಟೋತ್ತರ ಶತನಾಮಾವಳಿ | ೨೦೦೬ |
| ○ ಕೋಳಕೂರ ಶ್ರೀ ಸಿದ್ದಬಸವೇಶ್ವರ ಅಷ್ಟೋತ್ತರ ಶತನಾಮಾವಳಿ | ೨೦೦೬ |
| ○ ಅಳ್ಳಳ್ಳಿ ಅಯ್ಯಪ್ಪಯ್ಯ ಅಷ್ಟೋತ್ತರ ಶತನಾಮಾವಳಿ | ೨೦೦೮ |

**ಪ್ರಕಟಿತ ಪುರಾಣ ಗ್ರಂಥ**

| | |
|---|---|
| ✓ ಅನುಭವಿ ಕವಿ ಕಡಕೋಳ ಮಡಿವಾಳೇಶ್ವರ | ೨೦೦೯ |
| ✓ ಸುಕ್ಷೇತ್ರ ಪಾಳಾ ಶ್ರೀ ಮಳೇಂದ್ರ ಶಿವಾಚಾರ್ಯರ ಲೀಲಾ ವಿಳಾಸ | ೨೦೦೮ |

**ಪ್ರಕಟಿತ ಭಕ್ತಿಯ ಧ್ವನಿ ಸುರಳಿ**

| | |
|---|---|
| ❖ ವಿಶ್ವ ಚೇತನ ವಿಶ್ವಾರಾಧ್ಯ | ೧೯೯೧ |
| ❖ ಹಯ್ಯಾಳಲಿಂಗೇಶ್ವರ | ೧೯೯೨ |
| ❖ ಬೆಟ್ಟದ ಪರಮಾನಂದೇಶ್ವರ | ೧೯೯೮ |
| ❖ ವಿಶ್ವರೂಪ ವಿಶ್ವಾರಾಧ್ಯ | ೧೯೯೮ |
| ❖ ಕಮರಿ ಮಠದ ಸಿದ್ದಮ್ಮ ತಾಯಿ | ೧೯೯೮ |
| ❖ ಭಾವೈಕ್ಯದ ಬೆಳಗು | ೧೯೯೮ |
| ❖ ಅಳ್ಳಳ್ಳಿ ಅಯ್ಯಪ್ಪಯ್ಯ ನಾಟಕದ ಗೀತೆಗಳು | ೧೯೯೮ |
| ❖ ಇಟಗಿ ಸಾಧು ಶಿವಲಿಂಗೇಶ್ವರ | ೨೦೦೨ |
| ❖ ತ್ರಿಮೂರ್ತಿಗಳ ತತ್ವ ದರ್ಶನ | ೨೦೦೧ |

**ಅಪ್ರಕಟಿನ ನಾಟಕಗಳು**

- ಮುಗಳಖೋಡ ಮುತ್ತು
- ನಮ್ಮೂರ ಹಿಂಗ್ರಾಕಾಯ್ತು
- ಮುದನೂರ ದೇವರ ದಾಸಿಮಯ್ಯ
- ಮಾನವಂತರ ಮಕ್ಕಳು
- ಶಾಕಾಪೂರ ಸಿದ್ಧರಾಮ ಶಿವಯೋಗಿ
- ಕೋಳೂರು ಕೊಡಗೂಸು
- ಹಂಗನಳ್ಳಿ ಗುರುಲಿಂಗಪ್ಪ ಶರಣರು
- ಬೀಳೂರ ಗುರುಬಸವ ದೇವರು
- ನಿಜ ಶರಣ ಅಂಬಿಗರ ಚೌಡಯ್ಯ
- ಯಾನಾಗುಂದಿ ಮಾತಾ ಮಾಣಿಕೇಶ್ವರಿ
- ಹುಲಿಜಂತಿ ಮಾಳಿಂಗರಾಯ ಮಹಾತ್ಮೆ
- ಗಾಜರ್ ಕೋಟ ಚನ್ನಪ್ಪಯ್ಯ ಶರಣರು
- ಗುಡ್ಡಾಪೂರ ದಾನಮ್ಮದೇವಿ ಮಹಾತ್ಮೆ
- ಭಾವೈಕ್ಯದ ಹರಿಕಾರ ಮೋಟನಳ್ಳಿ ಹಸನ್‌ಸಾಬ
- ಶಿರಶಿ ಮಾರಿಕಾಂಬೆ ಮಹಾತ್ಮೆ
- ರಸ್ತಾಪೂರ ಶರಭಲಿಂಗೇಶ್ವರ ಮಹಾತ್ಮೆ
- ಅಳ್ಳಳ್ಳಿ ಭಾಗಮ್ಮಾಯಿ ಮಹಾತ್ಮೆ
- ತುಳಜಾಪೂರ ಅಂಬಾ ಭವಾನಿ ಮಹಾತ್ಮೆ
- ಯಾರದೋ ದುಡ್ಡು ಯಲ್ಲಮ್ಮನ ಜಾತ್ರೆ
- ನಾಲವಾರ ಕೋರಿಸಿದ್ಧೇಶ್ವರ ಮಹಾತ್ಮೆ
- ಹೆಡಗಿಮುದ್ರಿ ಶಾಂತಲಿಂಗೇಶ್ವರ ಮಹಾತ್ಮೆ
- ಯನಗುಂಟಿ ಬೆಂಕಿ ತಾತಾ
- ವರಹಳ್ಳೇರಾಯ ವಡಗೇರಿಗೆ ಬಂದಾ
- ಕೋಳಕೂರ ಸಿದ್ಧಬಸವೇಶ್ವರ ನಾಟಕ
- ಋಣ ಮುಟ್ಟಿತು ಛಳ ತೀರಿತು
- ಭರತನೂರ ಗುರುನಂಜೇಶ್ವರ ಮಹಾತ್ಮೆ
- ಚಿಕೇನ ಕೊಪ್ಪದ ಚನ್ನವೀರ ಶರಣರು

**ಅಪ್ರಕಟಿತ ಪುರಾಣಗಳು**

- ಸುಕ್ಷೇತ್ರ ಕುಮಸಗಿ ಶ್ರೀ ವೆಂಕಟೇಶ್ವರ ಲೀಲಾ ವಿಲಾಸ
- ಸುಕ್ಷೇತ್ರ ಮಳಲಿ ಶ್ರೀ ಸಿದ್ಧಲಿಂಗೇಶ್ವರ ವಿಜಯ
- ಸುಕ್ಷೇತ್ರ ಪಾಳಾ ಶ್ರೀ ಮಳೇಂದ್ರ ಶಿವಾಚಾರ್ಯರ ಲೀಲಾ ವಿಲಾಸ
- ಅವಧೂತ ಕಲ್ಲಾಲಿಂಗೇಶ್ವರ ಮಹಿಮೆ ಸುಕ್ಷೇತ್ರ ಗೌರ

**ಅಪ್ರಕಟಿತ ಚರಿತ್ರೆಗಳು**

– ಹಂಗಿಲ್ಲದ ಜಂಗಮ
– ಕಾಯಕದಿಂದೇನು ಫಲ?
– ಮಳ್ಳಿಯ ಮಲ್ಲಿಗೆ
– ಕಮರಿ ಮಠದ ಕರ್ಪೂರ
– ಜನಪದ ಜಂಗಮ

**ಅಭಿನಂದನ ಗ್ರಂಥಗಳಲ್ಲಿ ಲೇಖನಗಳು**

| | |
|---|---|
| → ಜ್ಞಾನದೇಗುಲ | ಪುಟ್ಟರಾಜ ಗವಾಯಿಗಳು ಗದ್ |
| → ಸಿದ್ಧಪ್ರಭೆ | ನಾಲವಾರ |
| → ವಿಶ್ವಚೇತನ | ಅಬ್ಬೇ ತುಮಕೂರ |
| → ಗಂಗಾಧರ ಉಪ್ಪಿನ | ಆಲಮೇಲ |
| → ಸಾಹಿತ್ಯ ಸಂಪದ | ಕಲಬುರಗಿ |
| → ನುಡಿದಾವ ಗೆಜ್ಜೆಗಳು | ಜೇವರಗಿ |
| → ರಂಗಾಂತರಂಗ | ಕಲಬುರಗಿ |
| → ಕನ್ನಡ ದಿಪ್ತಿ | ಶ್ರೀನಿವಾಸ ಸರಡಗಿ |
| → ವಿಶ್ವನಾಥ ರೆಡ್ಡಿ ಮುದ್ನಾಳ | ಯಾದಗಿರಿ |
| → ಬಿ.ಮಹಾದೇವಪ್ಪ | ಕಲಬುರಗಿ |
| → ಧವಳ | ಗೋಗಿ |
| → ಚಂದ್ರಗಂಗಾ | ರುಕ್ಮಾಪೂರ |

**ವೃತ್ತಿರಂಗ ಕಂಪನಿಗಳಲ್ಲಿ ನಿರ್ದೇಶನ**

| | |
|---|---|
| ➢ ರಾಘವೇಂದ್ರ ನಾಟ್ಯ ಸಂಘ | ಚಿಕ್ಕೊಪ್ಪಾ (ಬೈಲಹೊಂಗಲ) |
| ➢ ಬಸವೇಶ್ವರ ನಾಟ್ಯ ಸಂಘ | ಬೆನಕಟ್ಟಿ |
| ➢ ರಾಘವೇಂದ್ರ ನಾಟ್ಯ ಸಂಘ | ಶಿರಸಿ |
| ➢ ಶ್ರೀ ಶೈಲ ಮಲ್ಲಿಕಾರ್ಜುನ ನಾಟ್ಯ ಸಂಘ | ಸುಳ್ಯ |
| ➢ ಕರ್ನಾಟಕ ಕಲಾ ನಾಟ್ಯ ಸಂಘ | ಯಂಕಂಚಿ |
| ➢ ಸ್ವಯಂ ಜ್ಯೋತಿ ನಾಟ್ಯ ಸಂಘ | ಜೇವರಗಿ |
| ➢ ೧೦೦೮ ರೇಣುಕಾಚಾರ್ಯ ನಾಟ್ಯ ಸಂಘ | ಮ್ಯೆಂದರಗಿ |
| ➢ ಚರಬಸವೇಶ್ವರ ನಾಟ್ಯ ಸಂಘ | ಶಹಾಪೂರ |
| ➢ ನಾಗೇಂದ್ರ ನಾಟ್ಯ ಸಂಘ | ಅಳ್ಳಳ್ಳಿ |
| ➢ ಶ್ರೀದೇವಿ ನಾಟ್ಯ ಸಂಘ | ಚಿತ್ರದುರ್ಗ |
| ➢ ಶ್ರೀ ವಿಶ್ವಾರಾಧ್ಯ ನಾಟ್ಯ ಸಂಘ | ಜೇವರಗಿ |
| ➢ ಶ್ರೀ ಗುರು ಕುಮಾರೇಶ್ವರ ನಾಟ್ಯ ಸಂಘ | ಹಾನಗಲ್ |

**ರಂಗ ಸಂತ ಜಂಗಮ**

**ಕೈವಲ್ಯಜ್ಞಾನಾಮೃತ** : ಜೇವರಗಿಯ ಸಾಹಿತ್ಯಾಭಿಮಾನಗಳಿಂದ ಅಭಿನಂದನಾ ಗ್ರಂಥ ಸಮರ್ಪಣೆ ೨೦೧೧

**ಪತಿಭಕ್ತಿ** : ಕಲಬುರಗಿ ಜಿಲ್ಲೆಯ ತತ್ವ ಪದಕಾರರ ಸ್ಮಾರಕಗಳಲ್ಲಿ ಸೇರ್ಪಡೆ

**ಎಂ.ಫಿಲ್** : ಅಫಜಲಪೂರ ತಾಲೂಕಿನ ಸಿದ್ದಣ್ಣ ಚಿಂಚೋಳಿ,ಸುರಪುರ ತಾಲೂಕಿನ ದೇವಿಂದ್ರಪ್ಪ

**ನಮಸ್ಕಾರ** : ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಎಂ.ಎ. ಪದವಿಗೆ ನಾಟಕ ಪಠ್ಯ ಪುಸ್ತಕವಾಗಿದೆ

**ಬೆಳಗು ಕಾರ್ಯಕ್ರಮ** : ದೂರದರ್ಶನ ಬೆಂಗಳೂರು ಚಂದನದಲ್ಲಿ ನೇರ ಪ್ರಸಾರ

**ನಮ್ಮವರು** : ದೂರದರ್ಶನ ಕಲಬುರಗಿ ಕಾರ್ಯಕ್ರಮದಲ್ಲಿ ಪ್ರಸಾರ

**ಅವ್ಯಕ್ತ ಬೋಧಾಮೃತ ಗ್ರಂಥ** : ಸಂಪಾದನೆ

**ಹವ್ಯಾಸಿ ನಾಟಕಗಳಲ್ಲಿ ಪಾತ್ರ ವಹಿಸಿದ್ದು**

→ ಕನಕಾಂಗಿ (ಬೈಲಾಟ) : ಶ್ರೀ ಕೃಷ್ಣ
→ ಜೀವನ ಸಂಸಾರ : ಜೀವನ ಹೆಂಡತಿ
→ ಸತ್ಯ ಹರಿಶ್ಚಂದ್ರ : ತಾರಾಮತಿ
→ ಬಾಲಚಂದ್ರ : ರಾಣಿ
→ ಬಂಧು ದ್ರೋಹ : ಮೋಹನ
→ ಚಿತ್ರಂಗದ : ಉಲುಪಿ
→ ಮಾತಂಗ ಕನ್ಯ : ಧ್ಯಮನಾ
→ ಶರಣಬಸವೇಶ್ವರ : ಶಿವ–ಶಿವಯ್ಯ

**ವೃತ್ತಿ ನಾಟಕ ಸಂಘಗಳಲ್ಲಿ ಪಾತ್ರ ಹಾಗೂ ನಿರ್ದೇಶನ**

- **ವಿಜಯ ಮಹಾಂತೇಶ್ವರ ನಾಟ್ಯ ಸಂಘ, ಇಲಕಲ್ :** ಕೊಂಡು ತಂದ ಗಂಡ ನಾಟಕದಲ್ಲಿ ಲಕ್ಷ್ಮಯ್ಯನ ಪಾತ್ರ
- **ಶ್ರೀಶೈಲ ಮಲ್ಲಿಕಾರ್ಜುನ ನಾಟ್ಯ ಸಂಘ, ಸುಳ್ಯ :** ಶರಣಬಸವೇಶ್ವರ ನಾಟಕದಲ್ಲಿ ದೊಡ್ಡಪ್ಪ ಗೌಡನ ಪಾತ್ರ
- **ಶ್ರೀ ವಿಶ್ವಾರಾಧ್ಯ ನಾಟ್ಯ ಸಂಘ, ಜೇವರ್ಗಿ :** ಕುರುಡು, ಸಕ್ರೆಪ್ಪಗೌಡ, ಗೊಲ್ಲಾಳಪ್ಪಗೌಡ, ಕುಲಕರ್ಣಿ ಅಡವಿತಾತ, ದಿವಾನ ರಾಮಪ್ಪ
- **ಸಯಂ ಜ್ಯೋತಿ ನಾಟ್ಯ ಸಂಘ, ಜೇವರ್ಗಿ :** ಷಣ್ಮುಖ ಶಿವಯೋಗಿ ನಾಟಕದಲ್ಲಿ ಮಲ್ಲಶೆಟ್ಟಿ ಗೌಡನ ಪಾತ್ರ
- **ಬಸವೇಶ್ವರ ನಾಟ್ಯ ಸಂಘ, ಬೆನಕಟ್ಟಿ :** ಸಿಂಧೂರ ಲಕ್ಷ್ಮಣ ನಾಟಕದಲ್ಲಿ ಪೋಲಿಸ್ ಪಾತ್ರ, ಸಂಗಯ್ಯ ಕಡಕೋಳ ಮಡಿವಾಳೇಶ್ವರ ನಾಟಕದಲ್ಲಿ ವಿರುಪಾಕ್ಷ ಪಾತ್ರ
- **ಕರ್ನಾಟಕ ಕಲಾ ಸಂಘ, ಯಂಕಂಚಿ :** ಕಡಕೋಳ ಮಡಿವಾಳೇಶ್ವರ ನಾಟಕದಲ್ಲಿ ಸಂಗಯ್ಯ ವಿರುಪಾಕ್ಷಯ್ಯ, ಶರಣಬಸವನ ಪಾತ್ರ ಸಿಂಧೂರ ಲಕ್ಷ್ಮಣ ನಾಟಕದಲ್ಲಿ ವೆಂಕಟಪಟಪ ನಾಯಕ
- **ರಾಘವೇಂದ್ರ ನಾಟ್ಯ ಸಂಘ, ಚಿಕ್ಕೊಪ್ಪ ಬೈಲಹೊಂಗಲ :** ಸಿಂದೂರ ಲಕ್ಷ್ಮಣ ನಾಟಕದಲ್ಲಿ ವೆಂಕಟಪ್ಪ ಪಾತ್ರ, ಕಡಕೋಳ ಮಡಿವಾಳೇಶ್ವರ ನಾಟಕದಲ್ಲಿ ಮಲ್ಲಪ್ಪಗೌಡನ ಪಾತ್ರ
- **ರಾಘವೇಂದ್ರ ನಾಟ್ಯ ಸಂಘ, ಶಿರಸಿ :** ಕಡಕೋಳ ಮಡಿವಾಳೇಶ್ವರ ನಾಟಕದಲ್ಲಿ ಮಲ್ಲಪ್ಪಗೌಡನ ಪಾತ್ರ
- **೧೦೦೮ ರೇಣುಕಾಚಾರ್ಯ ನಾಟ್ಯ ಸಂಘ, ಮೈಂದರಗಿ :** ಕಡಕೋಳ ಮಡಿವಾಳೇಶ್ವರ ನಾಟಕದಲ್ಲಿ ಮಲ್ಲಪ್ಪಗೌಡನ ಪಾತ್ರ ಹಾಗೂ ವಿವಿಧ ಪಾತ್ರಗಳು
- **ನಾಗೇಂದ್ರ ನಾಟ್ಯ ಸಂಘ, ಅಳ್ಳೊಳ್ಳಿ :** ಅಯ್ಯಪ್ಪಯ್ಯ ನಾಟಕದಲ್ಲಿ ಪ್ರವಚನಕಾರ, ವಿಶ್ವಬ್ರಾಹ್ಮಣ ಹಾಗೂ ಹಲಕರಟಿಯ ವಿಶ್ವಕರ್ಮ ಪಾತ್ರಗಳು.

# ಗ್ರಂಥಸೂಚಿ


- ಕನ್ನಡ ರಂಗಭೂಮಿಯ ಪುರೋಭಿವೃದ್ಧಿ – ಆದ್ಯರಂಗಾಚಾರ್ಯ,
  ಕರ್ನಾಟಕ ವಿ.ವಿ.ಧಾರವಾಡ – ೧೯೬೮
- ನಾಟಕಕಲೆ – ಆತ್ಮಾರಾಮಾಶಾಸ್ತ್ರಿ – ೧೯೨೪
- ಕನ್ನಡ ನಾಟಕದ ಹಳಮೆ – ಎಂ.ಗೋವಿಂದಪೈ ಕನ್ನಡ ಸಾಹಿತ್ಯ ಪರಿಷತ್ತು ಪತ್ರಿಕೆ ಬೆಂಗಳೂರು
- ಕನ್ನಡ ಸಾಹಿತ್ಯ ಇತಿಹಾಸ
- ಕನ್ನಡ ನಾಟಕ ಪ್ರಪಂಚ. ವಿವಿಧ ಲೇಖಕರು
- ಜ್ಞಾನಗಂಗೋತ್ರಿ – ಸಂಪುಟ – ೧ ಕರ್ನಾಟಕ ಸಹಕಾರ ಮಂದಿರ ಬೆಂಗಳೂರು – ೧೯೭೦
- ಆಧುನಿಕ ಕನ್ನಡ ನಾಟಕ – ಕೆ.ಮರುಳಸಿದ್ದಪ್ಪ, ಪ್ರಿಟರ್ಸ್ ಪ್ರಕಾಶನ,
  ಎಂ.ಜಿ.ರಸ್ತೆ ಬೆಂಗಳೂರು – ೧೯೮೩
- ಆಧುನಿಕ ಕನ್ನಡ ರಂಗಭೂಮಿ – ಕೆ.ಮರುಳಸಿದ್ದಪ್ಪ, ಪ್ರಿಟರ್ಸ್ ಪ್ರಕಾಶನ,
  ಎಂ.ಜಿ.ರಸ್ತೆ ಬೆಂಗಳೂರು – ೧೯೮೨
- ಕರ್ನಾಟಕ ರಂಗಭೂಮಿ ವಿಕಾಸ ಡಾ.ಎಚ್.ಕೆ.ರಂಗನಾಥ, ಅಭಿನಯ ಪ್ರಕಾಶನ,
  ಕುವೆಂಪು ನಗರ ಮೈಸೂರು – ೧೯೭೬
- ಕನ್ನಡ ಸಾಹಿತ್ಯದರ್ಶನ ಸಂಪುಟ–೪ ಪ್ರೊ । ಸುಧಾಕರ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಕರ್ನಾಟಕ ಸರ್ಕಾರ – ೧೯೯೯
- ಉತ್ತರ ಕರ್ನಾಟಕದ ವೃತ್ತಿರಂಗಭುಮಿ – ಡಾ.ರಾಮಕೃಷ್ಣ ಮರಾಠೆ, ಇಳಾಪ್ರಕಾಶನ
  ಬೆಂಗಳೂರು – ೧೯೯೪
- ಭಾರತೀಯ ಕಲಾದರ್ಶನ – ಸಂ, ಅ.ನ.ಕೃಷ್ಣರಾಯ, ಸಂಗೀತ ನಾಟಕ ಅಕಾಡೆಮಿ
  ಬೆಂಗಳೂರು – ೧೯೬೪
- ಮರಾಠಿ ರಂಗಭೂಮಿ ಇತಿಹಾಸ ; ನಾ.ಕಡಪಟ್ಟಿ, ವೀನಸ ಪ್ರಕಾಶನ ಪುಣೆ – ೧೯೫೭
- ಹೊಸಗನ್ನಡ ಸಾಹಿತ್ಯದ ಉದಯಕಾಲ – ರಾ.ಯ.ಧಾರಾವಾಡಕರ್
- ಕರ್ನಾಟಕ ಕಲಾವೈಭವ ನಾಟ್ಯಸಂಘಬೆಳಗಾವ – ಡಾ.ಎಸ್.ಎಫ್.ಜಕಬಾಳ
- ಕನ್ನಡ ರಂಗಭೂಮಿಯ ಶತಮಾನೋತ್ಸವ ಸ್ಮಾರಕಗ್ರಂಥ – ಮುದವೀಡು ಕೃಷ್ಣರಾಯರು.
- ಬಣ್ಣ ಬೆಳಕು – ಎಚ್.ಕೆ.ರಂಗನಾಥ, ಬೆಂಗಳೂರು ವಿ.ವಿ.ಬೆಂಗಳೂರು – ೧೯೭೪

- ಗರೂಡ ಸದಾಶಿವರಾಯರು – ನಾಟಕ ಸಾಹಿತ್ಯ ಹಾಗೂ ವೃತ್ತಿರಂಗಭೂಮಿಯ ಅಧ್ಯಯನ–ಡಾ.ಬಸವರಾಜ ಜಗಜಂಪಿ, ತೋಂಟದಾರ್ಯಸಂಸ್ಥಾನ ಮಠ ಗದಗ – ೧೯೯೩
- ವೃತ್ತಿರಂಗಭೂಮಿಯ ಪರಂಪರೆ – ಡಾ.ಎಸ್.ಎಸ್.ಕೋತಿನ, ಕ.ವಿ.ವಿ.ಧಾರವಾಡ
- ಕಲೆಯೇ ಕಾಯಕ – ಜಿಎಚ್.ವೀರಣ್ಣ, ಸುರುಚಿ ಪ್ರಕಾಶನ ಸರಸ್ವತಿ ಪುರಂ ಮೈಸೂರು – ೧೯೮೦
- ಕಬ್ಬಿನ ಹಾಲು – ಕೆ.ವಿ.ಶಂಕರೇಗೌಡರ ಅಭಿನಂದನ ಗ್ರಂಥ
- ಕನ್ನಡರಂಗ ಭೂಮಿಯ ವಿಕಾಸ – ಡಾ.ಎಚ್.ಕೆ.ರಾಮನಾಥ, ಅಭಿನಯ ಪ್ರಕಾಶನ ಮೈಸೂರು – ೧೯೯೦
- ಕನ್ನಡ ರಂಗಭೂಮಿ, ಅಂದು–ಇಂದು–ಕ.ವಿ.ವಿ.ಧಾರವಾಡ (ಪ್ರಸಾರಾಂಗ) – ೧೯೮೪
- ಕನ್ನಡರಂಗಭೂಮಿ – ಬಿ.ವಿ.ವೈಕುಂಠರಾಜು – ಪ್ರಸಾರಾಂಗ ಕನ್ನಡ ವಿ.ವಿ.ಹಂಪಿ – ೧೯೯೮
- ನಾಟಕಕಾರ ಚಿಕ್ಕೋಡಿ ಶಿವಲಿಂಗ ಶಾಸ್ತ್ರಿಗಳು – ಡಾ.ಎಸ್.ಎಂ.ಅಂಬಲಿಯವರ ಮಹಾಪ್ರಬಂಧಕ್ಕೆ ಬೆನ್ನುಡಿ ಲೇಖನ ಡಾ.ಎಸ್.ಎಫ್.ಜಕ–ಬಾಳ ಪೃಥಿ ಪ್ರಕಾಶನ ಗದಗ – ೨೦೦೯
- ಬೀದರ ಜಿಲ್ಲೆಯ ರಂಗಭೂಮಿ – ಚಂದ್ರಗುಪ್ತ ಶಿ.ಚಾಂದಕವಠೆ ಪ್ರಚಾರೋಪನ್ಯಾಸ ಮಾಲೆ

  ಗುಲಬರ್ಗಾ ವಿ.ವಿ.ಕಲಬುರ್ಗಿ – ೨೦೦೫
- ಕರ್ನಾಟಕದ ರಂಗ ಕಲಾವಿದರು – ಹ.ವೆಂ.ಸೀತಾರಾಮಯ್ಯ ವಿದ್ಯಾ ಪ್ರಕಟಣೆ ಬೆಂಗಳೂರು – ೧೯೬೫
- ಹಿರಿಯರ ಹಾದಿ ಎಂ.ಎಸ್.ಸುಂದರರಾಜ. ದಿ.೧೦.೧೨.೨೦೧೪ರ ‘ಕನ್ನಡಪ್ರಭ’ ದಿನ ಪತ್ರಿಕೆಯಲ್ಲಿ ಪುಟ ೪ರಲ್ಲಿ ಪ್ರಕಟವಾದ ಲೇಖನದಿಂದ
- ರಂಗಗೀತಾರತ್ನ – ಆರ್.ಪರಮಶಿವನ್, ಅಭಿನಂದನ ಗ್ರಂಥ ನಾಟಕ – ಒಚಿದು ಪಕ್ಷಿನೋಟ, ಲೇಕನ ಶ್ರೀರಂಗಧಾಮಯ್ಯ ಮೈಸೂರ – ೨೦೧೨
- ರಂಗದುಂದುಭಿ – ಡಾ.ಎಚ್.ಎ.ಪಾರ್ಶ್ವನಾಥ, ನಿತೀನ ಪ್ರಕಾಶನ ಮೈಸೂರ – ೨೦೧೩
- ಗಾಂಧಿವಿಚಾರಧಾರೆ – ಡಾ.ಎಂ.ಪಿ.ಭವನೇಶ್ವರ ಪ್ರಸಾದ, ಪ್ರಾಧ್ಯಾಪಕರು ವಿವೇಕಾನಂದ ಪದವಿ ಕಾಲೇಜು ರಾಜಾಜಿ ನಗರ ಬೆಂಗಳೂರು
- ರಂಗ ಕುಸುಮಗಳು – ಗವೀಶ ಹಿರೇಮಠ, ಪ್ರಗತಿ ಪ್ರಕಾಶನ ಕಲಬುರುಗಿ – ೧೯೯೪
- ನಾಟ್ಯಭೂಷಣ – ಎಂ.ಎಂ.ಕಲಬುರ್ಗಿ, ಕರ್ನಾಟಕ ರಂಗಭೂಮಿ ಉತ್ತೇಜನ ಸಂಘ

ಬೆಳಗಾವ – ೧೯೯೮

- ಕನ್ನಡ ನಾಟಕ –ತ.ಸು.ಶಾಮರಾಯ, ಗೀತಾಬುಕ್‌ಹೌಸ ಮೈಸೂರ – ೧೯೬೨
- 'ಸುಗಂಧ' ಅಭಿನಂದನ ಗ್ರಂಥ ಪ್ರೊ . ಸೂಗಯ್ಯ ಹಿರೇಮಠರಿಗೆ ಸಮರ್ಪಣೆ.
- ರಂಗಸಂತ ಜಂಗಮ – ಅಭಿನಂದನಗ್ರಂಥ ಎಲ್.ಬಿ.ಕೆ.ಆಲ್ದಾಳರಿಗೆ ಸಮರ್ಪಣೆ ಚೆನ್ನಬಸವೇಶ್ವರ ಸಂಸ್ಥಾನ ಹೀರೆಮಠ ಹಾರಕೂಡ – ೨೦೧೦
- ವಚನ ವಾಹಿನಿ – ಸುರಪುರ ತಾಲೂಕಿನ ಕ.ಸಾ.ಪ. ೭ನೇ ಸಮ್ಮೇಳನದ ವಿಶೇಷ ಸಂಚಿಕೆ – ೨೦೦೪ (ಸಂ.ಡಾ.ಈಶ್ವರಯ್ಯ ಮಠ)

- ಸಿರಿಯೊಡಲು – ಸಂ.ಡಾ.ದೆ.ಜ.ಗೌ.೬೩ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನ ಮಂಡ್ಯ (ವಿಶೇಷ ಸಂಚಿಕೆಯಿಂದ) ೧೯೯೪
- ಶಾಂತಾಭರಣ – ವೀರಣ್ಣ ಪಡಶೆಟ್ಟಿ ಅಭಿನಂದನ ಗ್ರಂಥ, ಕಲಬುರ್ಗಿ, ಸಂ. ಎ.ಕೆ.ರಾಮೇಶ್ವರ ೨೦೧೧
- ರಂಭಾಪುರಿ ಬೆಳಗು – ಶ್ರೀ ರಂಭಾಪುರಿ ಸಂದೇಶ ಏಪ್ರಿಲ್ – ೨೦೧೪
- ವಿಜಯವಾಣಿ ದಿನಪತ್ರಿಕೆ ೨೨.೧೨.೨೦೧೪ ಶ್ರೀ ತರಳಬಾಳು ಜಗದ್ಗುರುಗಳ ಲೇಖನದಿಂದ
- ಸಗರನಾಡಿನ ಶರಣರು – ಕ.ವಿ.ವಿ.ಧಾರವಾಡ ಪ್ರಚಾರೋಪನ್ಯಾಸ ಮಾಲೆ – ಡಾ.ವಿ.ಶಿವಾನಂದ
- 'ತುಷಾರ' ಮಾಸಪತ್ರಿಕೆ ೧೯೯೩ ವಿಜಯೇಂದ್ರ ಕುಲಕರ್ಣಿ ಮಳ್ಳಿ ಲೇಖನದಿಂದ
- 'ತುಷಾರ' ಮಾಸಪತ್ರಿಕೆ ೧೯೯೩ ಸೋಮಶೇಖರ ನಂದರಗಿಯ ಕವನದಿಂದ
- 'ಅನುಭವಿ' ಸ್ಮರಣಸಂಚಿಕೆ ಡಾ.ಪೂಜ್ಯ ಶರಣಬಸಪ್ಪ ಅಪ್ಪ ಅವರ ಲೇಖನದಿಂದ ೨೦೧೪
- ವಿಜಯಕರ್ನಾಟಕ ದಿನಪತ್ರಿಕೆ ದಿ.೨೨.೮.೨೦೧೪ ಶ್ರೀ ಮಹಾಂತೇಶ ನವಲಕಲರ ಭಾಷಣದಿಂದ
- ರಂಗಸಿರಿ : ಡಾ.ಗವಿಸಿದ್ದಪ್ಪ ಪಾಟೀಲ, ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ ಕಲಬುರ್ಗಿ – ೨೦೦೬
- 'ಅಗ್ನಿ' ವಾರಪತ್ರಿಕೆ – ಹತಗುಂದಿ ಉಪಸಂಪಾದಕರ ಲೇಖನದಿಂದ ಪುಟ–೧೭. ದಿ.೧೪.೦೬.೨೦೧೨
- ರಂಗ ಸಂಘಟಕರು – ಸಿ.ಜಿ.ಕೃಷ್ಣಸ್ವಾಮಿ – ಕರ್ನಾಟಕ ನಾಟಕ ಅಕಾಡೆಮಿ ಬೆಂಗಳೂರು
- ಸಮರ್ಪಣ – ಬಿ.ಮಹಾದೇವಪ್ಪ ಅವರ ಸಂಭಾವನ ಗ್ರಂಥ ಸನ್ಮಾನ ಸಮೀತಿ ಪ್ರಕಾಶನ ಯಾದಗೀರ – ೨೦೦೫
- ಬೀದರ ಜಿಲ್ಲೆಯ ವೀರಶೈವ ಮಠಗಳು – ನಾರಾಯಣಪುರ ಚಂದ್ರಶೇಖರ – ೨೦೧೪

- ರಂಗಸಾಮ್ರಟ – ಹುಷೇನ್ ಭಾಷಾ ಮುರಗಾನೂರ ಜೇವರ್ಗಿ – ೨೦೧೩
- ಆಲ್ದಾಳರ ಸಂದರ್ಶನ – 'ಮಯೂರ' ಮಾಸ ಪತ್ರಿಕೆಯಲ್ಲಿನ ಲೇಖನದಿಂದ (ಸೆಪ್ಟಂಬರ – ೨೦೧೨)
- ಯಲಗೂಡ 'ಶ್ರೀ ಗುರು ಪರಮಾನಂದೇಶ್ವರ ಲೀಲೆ' – ನಾಟಕ ಲೇಖಕರು ಹಣಮಂತಾಚಾರ್ಯ ಕುಲಕರ್ಣಿಮಲ್ಲಾಬಾದಿ – ೨೦೦೬
- ವೀರಶೈವ ಸಂಸ್ಕೃತಿ – ಡಾ.ಎಚ್.ತಿಪ್ಪೇರುದ್ರಸ್ವಾಮಿಗಳು – ಮೂರುಸಾವಿರ ಮಠ ಹುಬ್ಬಳ್ಳಿ
- ಹೊಸಗನ್ನಡ ಅರುಣೋದಯ – ಡಾ. ಶ್ರೀನಿವಾಸ ಹಾವನೂರ ಮುನ್ನುಡಿ – ೧೯೯೪
- 'ಅಂತರಂಗ' – ನಾಡೋಜ ಡಾ. ಅನ್ನದಾನೀಶ್ವರ ಮಹಾಶಿವಯೋಗಿಗಳು ಮುಂಡರಗಿ (ವಿಜಯವಾಣಿ ೬.೧೨.೨೦೧೪)
- ನಲವಡಿ ಶ್ರೀಕಂಠಶಾಸ್ತ್ರಿಗಳ ಜೀವನ ಮತ್ತು ಕೃತಿಗಳು – ಡಾ.ಮೃತ್ಯುಂಜಯ ಹೊರಕೇರಿ.
- ಕಲ್ಯಾಣ ನಾಡು–ಪ್ರೊ ॥ ಕಲ್ಯಾಣರಾವ ಜಿ.ಪಾಟೀಲ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಘಟಕ ಕಲ್ಬುರ್ಗಿ–೨೦೧೪
- ಬಾಹತ್ತರ – ಕವನಸಂಕಲನ, ಸಂಪಾದಕರು, ಡಾ.ಜಗನ್ನಾಥ ಹೆಬ್ಬಾಳೆ ಬೀದರ, ಆಫ್‌ಸೆಟ್ ಪ್ರಿಂಟರ್ಸ್ ಗದಗ – ೨೦೦೬
- ವಿಶ್ವಚೇತನ – ಸಂಸ್ಮರಣ ಸಂಚಿಕೆ ಶ್ರೀ ವಿಶ್ವಾರಾಧ್ಯ ಸಂಸ್ಥಾನಮಠ ಅಬ್ಬೇತುಮಕೂರ ಯಾದಗೀರ – ೧೯೯೫
- ಗಿರಿಸಂಪದ – ಸ್ಮರಣಸಂಚಿಕೆ ಜಿಲ್ಲಾ ಕ.ಸಾ.ಪ.ಯಾದಗಿರಿ, ಸಂ.ಡಾ.ಈಶ್ವರಯ್ಯ ಮಠ – ೨೦೧೩
- ಸುರಪುರ ತಾಲೂಕಿನ ಶಿವಶರಣರು – ಮಲ್ಲಪ್ಪಬಶೇಟ್ಟಿ (ಕೃಪೆ ನೆನವುತುಂಬಿ ಸ್ಮರಣ ಗ್ರಂಥ)
- ಡಾ.ಹಾ.ಮಾ.ನಾಯಕ (ಸಂ) ಡಿವಿಜಿ ಕೃತಿ ಶ್ರೇಣಿ ಸಂಪುಟ – ೧
- ಶಿವಚಿಂತನ – ಅಭಿನಂದನೆ ಗ್ರಂಥ ಡಾ.ಎಚ್.ತಿಪ್ಪೇರುದ್ರಸ್ವಾಮಿ
- ಅಂತರಂಗನುಡಿ – ಶ್ರೀ ಶಿವಾನಂದ ಹತಗುಂದಿ ವಿಜಯವಾಣಿ ೨೫.೧೧.೨೦೧೪
- ಗೀತೆಗೊಂದು ಕೈಪಿಡಿ – ಪ್ರೊ . ಎಸ್.ಕೆ.ರಾಮಚಂದ್ರರಾವ
- ಶ್ರೀ ಷಣ್ಮುಖ ಶಿವಯೋಗಿಗಳ ವಚನ – ಗಿರ್ವಚನ ಸಂಪುಟ – ಡಾ.ಎಂ.ಎಸ್.ಹಿರೇಮಠ ಗು.ವಿ.ಗು
- ಮಹಿಳೆ – ಶೋಷಣೆಯ ನೆಲೆಗಳು – ಶ್ರೀಮತಿ ಕೆ.ನೀಲಾ. ಪ್ರಚಾರೋಪನ್ಯಾಸಮಾಲೆ ಗು.ವಿ.ಗು – ೨೦೦೫
- ಮಹಿಳೆ ಮತ್ತು ಡಾ.ಅಂಬೇಡ್ಕರ – ಡಾ.ಟಿ.ಎಂ. ಭಾಸ್ಕರ್ ಪ್ರಸಾರಾಂಗ ಗು.ವಿ.ಗು – ೨೦೦೫

- ಚಂದಿಮರಸನ ವಚನಗಳ ಭಾವಾನುವಾದ – ಎಂ.ಎಸ್.ಚಾಧರಿ, ಪ್ರೊ ॥ ಎಸ್.ಸಿ.ಪಾಟೀಲ ಚಾಲುಕ್ಯ ಸಂಸ್ಕೃತಿ ಅಧ್ಯಯನ ಪೀಠ ಕಲಬುರ್ಗಿ – ೨೦೧೪
- ಕರ್ನಾಟಕದ ಗಡಿ ರೇಖೆಗಳು – ಸಂ. ಪ್ರೊ.ಎಸ್.ಸಿ.ಪಾಟೀಲ ಕಲಬುರ್ಗಿ – ೨೦೧೪
- ಹಂಡೆಪಾಳೆಗಾರರ ಕುರಿತ ಕೈಫಿಯತ್ತುಗಳು – ಸಂ.ಎಸ್.ಸಿ.ಪಾಟೀಲ ಕಲಬುರ್ಗಿ – ೨೦೧೪
- ವೀರಶೈವ ಹಂಡೆ ವಜೀರ ಜನಾಂಗದ ಪರಿಚಯ – ಡಾ.ಎಸ್.ಸಿ.ಪಾಟೀಲ ಕಲಬುರ್ಗಿ – ೨೦೧೪
- ಬುಕ್ಕರಾಯ ಚರಿತ್ರೆ – ಡಾ.ಎಸ್.ಸಿ.ಪಾಟೀಲ (ಸಂ) ಸಿದ್ಧರಾಮೇಶ್ವರ ಪ್ರಕಾಶನ ವಿಜಯಪುರ – ೨೦೦೨
- ವಿದ್ಯಮಾನ – ಡಾ.ಶಿವಮೂರ್ತಿ ಮುರಘಾಮಠ ಇವರ ಲೇಖನದಿಂದ (ವಿಜಯವಾಣಿ ೧೬.೯.೨೦೧೪)
- ತವನಿಧಿ – ಡಾ.ರಾಜೇಂದ್ರ ಯರನಾಳೆ ಅವರ ಮುನ್ನುಡಿಯಿಂದ
- ಇಬ್ಬನಿ – ಗಾದೆಗಳ ಸಂಕಲನ – ಪ್ರೊ .ಎಚ್.ಜೆ.ಲಕ್ಕಪ್ಪಗೌಡರ
- ಚಂದ್ರಗಂಗಾ – ಅಭಿನಂದನ ಗ್ರಂಥ ಸಂ.ವಸಂತ ಕುಷ್ಟಗಿ, ರುಕ್ಮಾಪೂರ ಗ್ರಾಮಸ್ಥರಿಂದ ಪ್ರಕಾಶನ ಬೆಂಗಳೂರ – ೨೦೦೯
- ಕುಮಾರ ಕಕ್ಕಯ್ಯನ ವಚನಗಳು – ಸಂಕಲನ, ವಿಜಾಪೂರ ೧೯೯೩
- ಕಲ್ಯಾಣದೀಪ್ತಿ – ಪ್ರ.ಸಂಪಾದಕರು, ನಾಡೋಜ ಎಂ.ಎಂ.ಕಲಬುರ್ಗಿ, ಹಿರೇ ಮಠಸಂಸ್ಥಾನ ಭಾಲ್ಕಿ – ೨೦೧೪
- ಜನಪದದಲ್ಲಿ ಶ್ರೀ ಶರಣಬಸವೇಶ್ವರರು – ಭೀಮರಾಯಗೌಡ ಹಿರೇಗೌಡರ ಅರಳ ಗುಂಡಗಿ ತಾ.ಜೇವರ್ಗಿ
- ಜಯದೇವಿತಾಯಿ ಲಿಗಾಡೆ – ಡಾ. ರಾಮಕೃಷ್ಣಮರಾಠೆ, ಈ ಗ್ರಂಥಕ್ಕೆ ಮುನ್ನುಡಿ ಬರೆದ ಖ್ಯಾತಪತ್ರಕರ್ತ ಡಾ.ಸರಜೂಕಾಟ್ಕರ್ (ಲೋಹಿಯಾ ಪ್ರಕಾಶನ ಬಳ್ಳಾರಿ)
- ಜಾನಪದ ಅಂತರಂಗ – ಡಾ.ಹಿ.ಶಿ.ರಾಮಚಂದ್ರೇಗೌಡ ಮಾನವಿ ಪ್ರಕಾಶನ ಮೈಸೂರ – ೧೯೮೭
- ಬೋಧಿವೃಕ್ಷ – ವಾರಪತ್ರಿಕೆ ದಿ. ೨೮.೧೨.೨೦೧೩ ಬೆಂಗಳೂರು.
- ಧವಳ : ಅಕ್ಕಿ ಅವರ ಅಭಿನಂದನ ಗ್ರಂಥ, ಸಂ, ಡಾ.ಅಬ್ದುಲ ಕರಿಂ, ಡಾ.ಎಸ್.ಕೆ.ಅರುಣಿ ಅಭಿನಂದನಾ ಸಮಿತಿ ೨೦೧೧
- ಚಿಂತನ ಚೈತ್ರ ; ದೊಡ್ಡ ಬಸಪ್ಪ ಬಳೂರಗಿ ಪ್ರಭು ಪ್ರಕಾಶನ ಶಹಾಪೂರ – ೨೦೧೧
- ಶ್ರೀ ಕೋಡ್ಲಿ ಕಂಟೆಪ್ಪ ಮಾಸ್ತರ ದಂಡಿನಕುಮಾರ, ಕುಮಾರ ಪ್ರಕಾಶನ ಚಿಂಚೋಳಿ – ೨೦೧೦

- ಪ್ರೊ.ಜಿ.ಎಸ್.ಶಿವರುದ್ರಪ್ಪ ಅಭಿನಂದನ ಗ್ರಂಥ, ಪ್ರ.ಸಂಪಾದಕ. ಅಪ್ಪಾರಾವ ಅಕ್ಕೋಣಿ
- ಹೊನ್ನಾರು – ಪ್ರೊ.ಎಚ್.ಜೆ.ಲಕ್ಕಪ್ಪ ಗೌಡರ ಅಭಿನಂದನ ಗ್ರಂಥ, ಪ್ರತೀಕ ಪ್ರಕಾಶನ ಕಲ್ಬುರ್ಗಿ – ೨೦೧೩
- ವಿಶ್ವಕಲ್ಯಾಣ ಪತ್ರಿಕೆ , ಬಿ.ಮಹಾದೇವಪ್ಪ (ದಿ.೧೪.೦೫.೧೯೯೪)
- ಕನ್ನಡ ಸಾಹಿತ್ಯ ಸಂಸ್ಕೃತಿಕೋಶ – ಸಂ.ಡಾ.ಚಿ.ಸಿ.ಲಿಂಗಣ್ಣ, ಸಿದ್ಧಲಿಂಗೇಶ್ವರ ಪ್ರಕಾಶನ, ಕಲಬುರ್ಗಿ
- ಅಕ್ಕನ ವಚನಗಳು – ಸಂ. ಡಾ.ಎಲ್.ಬಸವರಾಜು, ಗೀತಾಬುಕ್‌ಹೌಸ ಮೈಸೂರು – ೧೯೯೫
- ಬಸವಣ್ಣನವರ ವಚನ ಸಂಪುಟ–೧ ಡಾ.ಎಂ.ಎಂ.ಕಲಬುರ್ಗಿ,
  ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರ
- ಅಂತಃಸಾಕ್ಷಿ : ಸ್ವರಚಿತ ವಚನಗಳು – ಶಿವಾನಂದಸ್ಥಾವರಮಠ
- ರಂಗಕೃತಿ : ಎಸ್.ಆರ್.ವಿಜಶಂಕರ ಲೇಖನ ವಿಜಯವಾಣಿ ದಿ.೨೦.೧೨.೨೦೧೫
- ಬಿ.ಆರ್.ಅರಕ್ಷಿಣಗೋಡಿ : ಡಾ.ರಾಮಕೃಷ್ಣ ಮರಾಠೆ, ಕರ್ನಾಟಕ ನಾಟಕ ಅಕಾಡೆಮಿ – ೨೦೧೫
- ಅವ್ವ ಕಾಡಾದಿ ಗೌರವ್ವ ಹಾಡಿದ ಹಾಡು – ಡಾ.ನೀಲಾಂಬಿಕಾ ಪೋಲೀಸ ಪಾಟೀಲ, ಶ್ರೀಮತಿ ಮಲ್ಲಿಕಾರ್ಜುನ ಕಾಡಾದಿ ಕಲಬುರ್ಗಿ ಪ್ರಕಾಶನ – ೨೦೦೭